

ಲೇಖಕರನ್ನು ಕುರಿತು.....

"ದಿಗ್ರೇಟ ಡಿಪ್ರೆಶನ್ ಆಫ್ – 1990" ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತಿ ಹೆಚ್ಚು ಮಾರಾಟವಾದ ಪ್ರಥಮ ಶ್ರೇಣಿಯ ಗ್ರಂಥ. ಅದರ ಲೇಖಕ ಡಾ. ರವಿ ಬತ್ರಾ ವಿಶ್ವದ ಉಚ್ಚ ಶ್ರೇಣಿಯ ಸಿದ್ಧಾಂತಕಾರರಲ್ಲೊಬ್ಬರು. ಅವರು ಅಮೇರಿಕೆಯ ಟೆಕ್ಸಾಸ ಪ್ರಾಂತದ ಡಲ್ಲಾಸ ನಗರದ 'ಸದರ್ನ ಮೆಥಾಡಿಸ್ಟ' ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರಾಧ್ಯಾಪಕರು. ಮೂವತ್ತರ ತಾರುಣ್ಯದಲ್ಲಿಯೇ ಅವರು ಪೂರ್ಣ ಪ್ರಮಾಣದ ಪ್ರಾಧ್ಯಾಪಕರೆಂದು ನೇಮಕ ಗೊಂಡರು. ಇದಲ್ಲದೆ 1977 ರಿಂದ 1980 ರ ವರೆಗೆ ಅರ್ಥಶಾಸ್ತ್ರದ ವಿಭಾಗದ ಚೇರಮನ್‌ರೂ ಆಗಿದ್ದರು.

ಪ್ರಬುದ್ಧ ಪತ್ರಿಕೆಯಾದ 'ಇಕಾನಾಮಿಕ್ ಇನ್‌ಕ್ವಾಯರಿ" (ಅಕ್ಟೋಬರ 1978) ಅಮೇರಿಕೆ ಮತ್ತು ಕೆನಡಾ ವಿಶ್ವವಿದ್ಯಾನಿಲಯಗಳ ಎಲ್ಲ ಅರ್ಥಶಾಸ್ತ್ರಜ್ಞರಿಂದ 46 ಜನ 'ಸೂಪರ ಸ್ಟಾರ್'ರನ್ನು ಆಯ್ಕೆ ಮಾಡಿತು. ಅವರಲ್ಲಿ ಡಾ. ರವಿ ಬತ್ರಾರ ಸ್ಥಾನ ತೃತೀಯವಾಗಿತ್ತು. ಡಾ. ಬತ್ರಾ "ಸ್ಟಡೀಜ ಇನ್ ದಿ ಪ್ಯೂರ ಇಂಟರ ನ್ಯಾಶನಲ್ ಟ್ರೇಡ ಅಂಡರ ಅನ್‌ಸಾರ್ಟಂಟಿ", 'ಡೌನಫಾಲ್ ಆಫ್ ಕೆಪಿಟ್ಯಾಲಿಸಂ ಆ್ಯಂಡ್ ಕಮ್ಯುನಿಸಂ : ಎ ನ್ಯೂ ಸ್ಟಡಿ ಆಫ್ ಹಿಸ್ಟರಿ" ಮುಂತಾದ ಗ್ರಂಥಗಳ ಲೇಖಕರೂ ಹೌದು.

ಪ್ರಗತ ಅರ್ಥ ವ್ಯವಸ್ಥೆ ಮತ್ತು ಭಾರತದ ಉಜ್ವಲ ಭವಿಷ್ಯ
ಡಾ. ರವಿ ಬತ್ರಾ

ಪ್ರಗತ ಅರ್ಥ ವ್ಯವಸ್ಥೆ
ಮತ್ತು
ಭಾರತದ ಉಜ್ವಲ ಭವಿಷ್ಯ

ಲೇಖಕ : ಡಾ. ರವಿ ಬತ್ರಾ

ಕನ್ನಡಾನುವಾದ : ಎಸ್. ಆರ್. ಪಾಟೀಲ ಬಿ.ಈ.



ವೀನಸ್ ಪಬ್ಲಿಕೇಶನ್
ಡಲ್ಲಾಸ, ಯು.ಎಸ್.ಏ.

ಪ್ರಉತ ಅರ್ಥ ವ್ಯವಸ್ಥೆ

ಮತ್ತು

ಭಾರತದ ಉಜ್ವಲ ಭವಿಷ್ಯ

ಲೇಖಕ : ಡಾ. ರವಿ ಬತ್ರಾ

ಕನ್ನಡಾನುವಾದ : ಎಸ್. ಆರ್. ಪಾಟೀಲ ಬಿ.ಈ.

ವೀನಸ್ ಪಬ್ಲಿಕೇಶನ್
ಡಲ್ಲಾಸ, ಯುಎಸ್.ಏ.

© ರವಿ ಬತ್ರಾ : "ಪ್ರಉತ ಅರ್ಥವ್ಯವಸ್ಥೆ ಮತ್ತು ಭಾರತದ ಉಜ್ವಲ ಭವಿಷ್ಯ"
ಈ ಪುಸ್ತಕದ ಸರ್ವ ಹಕ್ಕುಗಳೂ ಲೇಖಕರಿಗೆ ಸೇರಿವೆ. ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಪುನರ್ಮುದ್ರಿಸಕೂಡದು ಮತ್ತು ಅನುವಾದಿಸಕೂಡದು.

ಕನ್ನಡಾನುವಾದದ ಪ್ರಥಮ ಮುದ್ರಣ : 1992

ಪ್ರಕಾಶಕರು :
ವೀನಸ್ ಪಬ್ಲಿಕೇಶನ್
ಡಲಾಸ, (ಯು.ಎಸ್.ಎ)

Rs. 70/-

Type Setting : Vikram Computers, Gadag - 582 101.
Offset Printing: Veman Printers, Hulkoti - 582 205.

ಅರ್ಪಣ

'ನನ್ನನ್ನು ಅರ್ಥಶಾಸ್ತ್ರದತ್ತ
ಸೆಳೆದ ನನ್ನ ಪೂಜ್ಯ ತಂದೆಗೆ'

ಸಂದಿಗ್ಧತೆಯಿಂದ ಸ್ಪಷ್ಟತೆ ಬಪ್ಪುದು;
ಸೋಲಿನಿಂದ ಗೆಲುವು ಬಪ್ಪುದು;
ಹೋರಾಟದಿಂದ ಪ್ರಗತಿ ಬಪ್ಪುದು

ಶ್ರೀ ರವಿ ಬತ್ರಾರ ಇತರ ಗ್ರಂಥಗಳು

1. ಸ್ಟಡೀಜ ಇನ್ ದಿ ಫ್ಯುರ್ ಥಿಯರಿ ಆಫ್ ಇಂಟರ್ ನ್ಯಾಶನಲ್ ಟ್ರೇಡ್.
2. ದಿ ಫ್ಯುರ್ ಥಿಯರಿ ಆಫ್ ಇಂಟರ ನ್ಯಾಶನಲ್ ಟ್ರೇಡ್ ಅಂಡರ ಅನ್‌ಸರ್ಟಂಟಿ.
3. ದಿ ಡೌನಫಾಲ್ ಆಫ್ ಕ್ಯಾಪಿಟ್ಯಾಲಿಜಂ ಆ್ಯಂಡ ಕಮ್ಯುನಿಜಂ : **ಎ ನ್ಯೂ ಸ್ಟಡಿ ಆಫ್ ಹಿಸ್ಟರಿ.**
4. ದಿ ಗ್ರೇಟ್ ಡಿಪ್ರೆಶನ್ ಆಫ್ 1990.
5. ಸರ್ವೈವಿಂಗ್ ದಿ ಗ್ರೇಟ್ ಡಿಪ್ರೆಶನ್ ಆಫ್ 1990.

ಮುನ್ನುಡಿ

ಭಾರತವು ಸ್ವತಂತ್ರವಾದ ಲಾಗಾಯ್ತು ತನ್ನ ಚರಿತ್ರೆಯಲ್ಲಿಯೇ ಅಪೂರ್ವವೆನಿಸುವ ಅತಿ ಶೀಘ್ರ ಆರ್ಥಿಕ ಅಭಿವೃದ್ಧಿ ಸಾಧನೆಯ ಒಂದು ಪ್ರಯೋಗದಲ್ಲಿ ತೊಡಗಿದೆ. ಕೇಂದ್ರೀಯ ಆರ್ಥಿಕ ಯೋಜನೆ ಮತ್ತು ಖಾಸಗಿ ಉದ್ಯಮಗಳ ಮಿಶ್ರ ಪದ್ಧತಿಯ ಮೂಲಕ ದೊಡ್ಡ ಪ್ರಮಾಣದ ಬೆಳವಣಿಗೆ ಹಾಗೂ ಯಾಂತ್ರೀಕರಣಗಳ ಹಾದಿ ಹಿಡಿದಿದೆ. ನಾಲ್ಕು ದಶಕಗಳ ಯೋಜನಾವಧಿಯಲ್ಲಿ ಭಾರತೀಯ ಆರ್ಥಿಕ ಸಂರಚನೆಯು ಮೌಲಿಕ ಪರಿವರ್ತನೆ ಹೊಂದಿದೆ. ಆದರ ಉದ್ದಿಮೆಗಳು ಮೂಲತಃ ರೂಪಾಂತರಗೊಂಡಿವೆ. ಅದರ ಕೃಷಿಯು ಕೆಲಮಟ್ಟಿಗೆ ಯಾಂತ್ರೀಕೃತವಾಗಿದೆ. ಅದರ ಕುಶಲ ಕರ್ಮಿಗಳೂ ಸಹ ಗಣನೀಯವಾಗಿ ವೃದ್ಧಿಸಿದ್ದಾರೆ. ಸುಮಾರು ನಲವತ್ತು ವರುಷಗಳ ಯೋಜನಾಬದ್ಧ ರೂಪಾಂತರವು ಎಲ್ಲೆಡೆ ಕಾಣಬರುತ್ತದೆ. ಉಕ್ಕು ತಯಾರಿಕಾ ಯಂತ್ರಗಳು, ಭಾರಿ ಉದ್ದಿಮೆಗಳ ಸಮುಚ್ಚಯ, ಯಂತ್ರೋಪಕರಣಗಳ ಉದ್ದಿಮೆಗಳಷ್ಟೇ ಅಲ್ಲದೆ, ಇನ್ನಿತರ ಅಸಂಖ್ಯ ಸಾಹಸೀ ಕೃತ್ಯಗಳು, ಒಂದೊಮ್ಮೆ ಬಹುತೇಕ ಕೃಷಿಮಯವಾದ ಭಾರತದ ನಕ್ಷೆಯನ್ನು ತುಂಬಿಕೊಂಡಿವೆ. ಹೆಚ್ಚು ಹೇಳುವುದೇಕೆ? ಸ್ವತಂತ್ರ್ಯಾನಂತರಭ್ಯ ಭಾರತೀಯ ಅರ್ಥ ವ್ಯವಸ್ಥೆಯು ಮಹಾನ್ ಪ್ರಗತಿ ಸಾಧಿಸಿದೆಯೆಂದು ಅರ್ಥಶಾಸ್ತ್ರಜ್ಞರು ಹೇಳಬಹುದಾಗಿದೆ.

ಆದರೇನು ? ಬಡತನವು ಹಿಂದಿನಂತೆಯೇ ಮೈ ಚಾಚಿದೆ. ನಿರುದ್ಯೋಗವು ಮುಗಿಲು ಮುಟ್ಟಿದೆ. ಹಿಂದೆಂದಿಗಿಂತಲೂ ಲಕ್ಷಾಧೀಶರ ಸಂಖ್ಯೆ ಹೆಚ್ಚಾಗಿರಬಹುದು. ಆದರೂ ಸಹ, ಶ್ರಮಜೀವಿಗಳ ಅಶಾಂತಿ ಹಾಗೂ ಸಾಮಾನ್ಯ ತಳಮಳದ ಭಾವನೆಯು ಹೆಚ್ಚಾಗಿರುವುದು ವಿರಳ. ಸಿರಿವಂತರ ಕೊಬ್ಬು ಹೆಚ್ಚುತ್ತಲೇ ಇದೆ. ಬಡವರ ತುತ್ತಿನ ಚೀಲವು ಬರಿದಾಗಿಯೇ ಉಳಿದಿದೆ.

ಏನೋ ಹಾದಿಬಿಟ್ಟಿದೆ. ಆಶ್ವಾಸನೆ ಮತ್ತು ಅನುಷ್ಠಾನಗಳಲ್ಲಿ ಅಂತರ ನಿರ್ಮಿಸುವಂಥದು ಏನೋ ಘಟಿಸಿದೆ. ಮುಂಬರುವ ಆರ್ಥಿಕ, ಸಾಮಾಜಿಕ ದುರಂತವನ್ನು ಎದುರಿಸಲು ಹೊಸ ಹೊಸ ವಿಚಾರಗಳೂ ಬೇಕು, ಹೊಸ ಚಿಂತನವೂ ಬೇಕು. ಇದಕ್ಕಾಗಿಯೇ ಈ ಪುಸ್ತಕ. ತಾನು ಉದಿಸಿದ ನೆಲದಲ್ಲಿಯೇ ಹೆಚ್ಚಾಗಿ ನಿರ್ಲಕ್ಷಿಸಲ್ಪಟ್ಟ, ಆದರೆ ಆಧುನಿಕ ಸಾಮಾಜಿಕ ಆರ್ಥಿಕ ಚಿಂತನಕ್ಕೆ ಭಾರತೀಯ ಕೊಡುಗೆಯನ್ನು ಪರಾಮರ್ಶಿಸುವುದೇ ಈ ಪುಸ್ತಕದ ಉದ್ದೇಶ.

ಪ್ರಗತಿಶೀಲ ಉಪಯೋಗ ತತ್ತ್ವ, ಅರ್ಥಾತ್ ಅದರ ವಿವಾದಾತ್ಮಕ ಕರ್ತೃ ಶ್ರೀ ಪಿ. ಆರ್. ಸರಕಾರರು ಕರೆಯುವಂತೆ ಪ್ರಯುತ, ಸಿದ್ಧಾಂತದ ವಿಶ್ಲೇಷಣೆಯನ್ನು ಇಲ್ಲಿ ನೀಡಲಾಗಿದೆ. ಈ ಪುಸ್ತಕವು ಪ್ರಾಮಾಣಿಕ ಅಭ್ಯಾಸ ಹಾಗೂ ಚರ್ಚೆಗೆ ಸೂಕ್ತವಾಗಿದೆ. ವಸ್ತುನಿಷ್ಠವಾಗಿ ಪರಿಭಾಷಿಸಿದರೆ, ಅದರಲ್ಲಿ ಭಾರತದ ಸಕಲ ಆರ್ಥಿಕ ಹಾಗೂ ಸಾಮಾಜಿಕ ದುರಂತಗಳಿಗೆ ಉತ್ತರ ಸಿಗಬಹುದು; ಅಷ್ಟೇಕೆ, ಅದರಲ್ಲಿ ಮಾತ್ರ ಕತ್ತಲಲ್ಲಿ ತಡಕಾಡುವ ಭಾರತೀಯ ಸಮಾಜವು ಕೇವಲ ಆರ್ಥಿಕ ಅಭಿವೃದ್ಧಿಯಷ್ಟೇ ಏಕೆ, ಸಾಮಾಜಿಕ ಸಮನ್ವಯ ಹಾಗೂ

ಅಂತಾರಾಷ್ಟ್ರೀಯ ಮನ್ನಣೆಯ ಹಾದಿಯನ್ನೂ ಕಂಡುಕೊಳ್ಳಬಹುದು. ಏಕೆಂದರೆ ಪ್ರಉತದ ಸಂದೇಶವು ವಿಶ್ವಾತ್ಮಕ. ಶ್ರೀ ಸರಕಾರರ ಚಿಂತನಧಾರೆಯಿಂದ ಉದಿಸುವ ಸಾಮಾಜಿಕ ಆರ್ಥಿಕ ಸುಧಾರಣೆಗಳಿಂದ ಲಾಭ ಪಡೆಯುವಲ್ಲಿ ಭಾರತವು, ಒಂದು ವೇಳೆ ಮುಂದಾದರೆ, ಸಾದೃಶ ತೊಂದರೆಗಳನ್ನೆದುರಿಸುತ್ತಿರುವ ಇತರ ಅಭಿವೃದ್ಧಿಶೀಲ ದೇಶಗಳೂ ಸಹ ಆ ಬಳಿಕ ಅದೇ ಹಾದಿ ತುಳಿಯಬಹುದಾಗಿದೆ.

ಪ್ರಥಮತಃ ಶ್ರೀ ಸರಕಾರ ಅವರು ನೀಡಿದ ಮೂಲಭೂತ ತತ್ತ್ವಗಳನ್ನು ಆಧರಿಸಿ ಪ್ರಸ್ತುತ ಗ್ರಂಥದಲ್ಲಿ ವಿಷಯ ನಿರೂಪಿಸಲಾಗಿದೆ. ಆ ಬಳಿಕ ಸಾಮಾಜಿಕ ಆರ್ಥಿಕ ಸುಧಾರಣೆಗಾಗಿ ವಿಷಯ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಆರ್ಥಿಕ ಚಿಂತನ ಹಾಗೂ ಸಮಾಜ ಸಂರಚನೆಗಳಲ್ಲಿ ಮೂಲಭೂತ ಬದಲಾವಣೆ ಬೇಕೆಂಬ ಶಿಫಾರಸ್ಸು ಇದರಲ್ಲಿದೆ. ಆದರೆ, ಭಾರತೀಯರಿಗೆ ಎದುರಾಗಿರುವ ದೈತ್ಯಪ್ರಾಯ ಸಮಸ್ಯೆಗಳನ್ನು ಪರಿಹರಿಸಲು ಕಠಿಣ ಶಸ್ತ್ರಕ್ರಿಯೆಯ ಹೊರತು ಬೇರಾವ ಕ್ರಮದಿಂದಲೂ ಇದು ಸಾಧ್ಯವಾಗದು.

ಎಂದಿನಂತೆ, ಈ ಗ್ರಂಥರಚನೆಗಾಗಿ ನಾನು ಪಿ.ಆರ್. ಸರಕಾರ ಅವರಿಗೆ ಬೌದ್ಧಿಕವಾಗಿ ಋಣಿ. ಅವರ ಮಹಾನ್ ಸಂಸ್ಮರಣೀಯ ಕೃತಿಗಳು ನನ್ನ ಪರಿಶೋಧನೆಯ ಜೀವಾಳವಾಗಿವೆ. ಆವಶ್ಯಕ ವಿಷಯ ಸಂಚಯದಲ್ಲಿ ನೆರವು ನೀಡಿದ ನನ್ನ ಸಹಾಯಕ ಸಂಶೋಧಕ ಶ್ರೀ ಸಂಜಯ ಉನ್ನ ಹಾಗೂ ಶ್ರೀ ಸೂಸನ್ ಆ್ಯಂಡ್ರೂಜ್ ಅವರಿಗೆ ನನ್ನ ಕೃತಜ್ಞತೆಗಳು. ಆನಂದ ನಗರ ಕುರಿತ ಅಧ್ಯಾಯವಂತೂ ಶ್ರೀ ಸುಸನ್ ಅವರು ಸಿದ್ಧಪಡಿಸಿದ ಪುಸ್ತಿಕೆಯ ಶಬ್ದಶಃ ಉದ್ಧರಣೆ ಮಾತ್ರ. ವಿಷಯ ಚರ್ಚೆ ಇಲ್ಲವೆ ಕರಡು ಪ್ರತಿಯ ವಾಚನ ಮೂಲಕ ನನ್ನೀ ಕೃತಿ ರಚನೆಗೆ ನೆರವು ನೀಡಿದವರಲ್ಲಿ ಶ್ರೀ ಜೋಶೆಫ್ ಹದರ, ದಾದಾ ಅಭಯ, ಪ್ರಶಾಂತ ಪಟನಾಯಕ, ಥಾಮಸ್ ಫಾಂಬಿ, ಅರವಿಂದ ಚೌಧರಿ, ಅಮರ ಪರಾಯಿ ಹಾಗೂ ಮತಿಉರ್ ರೆಹಮಾನ್ ಮುಂತಾದವರು ಸೇರಿದ್ದಾರೆ. ಇದರಲ್ಲಿಯ ದೋಷಗಳಿಗೆ ಮಾತ್ರ ನಾನೇ ಹೊಣೆ ಎಂಬುದನ್ನು ಹೇಳಬೇಕೆಲ್ಲ ತಾನೇ?

ಈ ಗ್ರಂಥ ರಚನೆಯಲ್ಲಿ 'ದಿ ಡೌನಫಾಲ್ ಆಫ್ ಕ್ಯಾಪಿಟಾಲಿಜಂ ಆ್ಯಂಡ ಕಮ್ಯುನಿಜಂ : ಎ ನ್ಯೂ ಸ್ಟಡಿ ಆಫ್ ಹಿಸ್ಟರಿ' (ಬಂಡವಾಳಶಾಹಿತ್ವ ಹಾಗೂ ಸಮತಾವಾದಿತ್ವಗಳ ಪತನ : ಇತಿಹಾಸದ ಒಂದು ಹೊಸ ಸಮೀಕ್ಷೆ) ಎಂಬ ನನ್ನ ಪುಸ್ತಕದಲ್ಲಿಯ ವಿಷಯಗಳನ್ನು ಹಾಗೂ 'ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ಹಾಗೂ 'ಸಂಡೇ' ವಾರಪತ್ರಿಕೆಗಳಲ್ಲಿ ಪ್ರಕಟಗೊಂಡ ನನ್ನ ಲೇಖನಗಳಲ್ಲಿಯ ವಿಷಯಗಳನ್ನೂ ಬಳಸಿಕೊಂಡಿದ್ದೇನೆ. ನನ್ನ ವಿಚಾರ ಪ್ರಕಟಣೆಗೆ ಇಂಬುಕೊಟ್ಟ ಈ ಪತ್ರಿಕೆಗಳಿಗೆ ನಾನು ಋಂಬಾ ಆಭಾರಿ.

ಕೊನೆಯದಾಗಿ– ಆದರೆ ಕಡಿಮೆಯೆಂದೇನಲ್ಲ – ಈ ಪುಸ್ತಕವನ್ನು ಹೆಚ್ಚಿನ ಲಕ್ಷ್ಯ ವಹಿಸಿ ಸಂಪಾದಿಸಿದ ನನ್ನ ನೆಚ್ಚಿನ ಮಡದಿ ಸುನೀತಾಳಿಗೂ ನಾನು ಋಣಿಯಾಗಿದ್ದೇನೆ.

ಡಲ್ಲಾಸ್, ಟೆಕ್ಸಾಸ್ ರವಿ ಬತ್ರಾ
ಆಗಷ್ಟ 1988,

ಪರಿವಿಡಿ

ಮುನ್ನುಡಿ

1. ಕಪ್ಪು ಹಣ : ತೃತೀಯ ಜಗತ್ತಿನ ಶಾಪ. – – 1
   * ಬಾಯಾ ಅರ್ಥವ್ಯವಸ್ಥೆ.
   * ಭ್ರಷ್ಟ ಅರ್ಥವ್ಯವಸ್ಥೆಯ ಅಂದಾಜು.
   * ಕಪ್ಪು ಹಣದ ವಿಹಂಗಮ ನೋಟ.
   * ಸಮಾನಾಂತರ ಅರ್ಥವ್ಯವಸ್ಥೆಯ ಅಸ್ತಿತ್ವದ ಹಿಂದಿರುವ ಕಾರಣಗಳು.
   * ಪ್ರಯತ್ನಿಸಿದ ಪರಿಹಾರೋಪಾಯಗಳು.
   * ಭಾವೀ ಕಾರ್ಯನೀತಿ.
2. ಭಾರತದ ಅಪಾರ ಆಧ್ಯಾತ್ಮಿಕ ಬಳುವಳಿ. – – 20
3. ಪ್ರಉತದ ಮೂಲಭೂತ ತತ್ವಗಳು – – 47
   ಪ್ರಗತಿಯ ಗ್ರಹಿಕೆ.
   ಸಾಧನ ಸಂಪತ್ತಿನ ಗ್ರಹಿಕೆ.
   ಪ್ರಗತಿಶೀಲ ಉಪಯೋಗ ತತ್ತ್ವ.
4. 'ಪ್ರಉತ'ದ ಅರ್ಥ ವ್ಯವಸ್ಥೆ. – – 65
   ಆದಾಯ ವಿತರಣೆ
   ಕನಿಷ್ಠ ಹಾಗೂ ಗರಿಷ್ಠ ವೇತನ.
   ಸಂಪತ್ತಿನ ಮೇಲಿನ ಮಿತಿ.
   ಔದ್ಯೋಗಿಕ ಧೋರಣೆ.
   ಗೋಪುರೀಯ ಪದ್ಧತಿ.
   ಸಾರ್ವಜನಿಕ ರಂಗ.
   ಸಾಂಸ್ಥಿಕ ರಂಗ.
   ಚಿಕ್ಕ ಪ್ರಮಾಣದ ಉದ್ದಿಮೆ ರಂಗ.
   ಕೃಷಿ.
   ಆರೋಗ್ಯ ಮತ್ತು ಶಿಕ್ಷಣ.
   ಸಂಪನ್ಮೂಲಗಳ ವಿಭಜನೆ
   ಪರಿಸರ ಗುಣಮಟ್ಟ
   ಪ್ರಉತ ಹಾಗೂ ಪರಿಸರ.
   ಆರ್ಥಿಕ ಅಭಿವೃದ್ಧಿ

5. ಪ್ರಉತ ಪದ್ಧತಿಯ ಯೋಜನೆ — — 129

ವೀಕೇಂದ್ರೀಕೃತ ಯೋಜನೆ.
ಭಾರತಕ್ಕೆ ಸೂಕ್ತವಾದ ಸಾಮಾಜಿಕ ಆರ್ಥಿಕ ಘಟಕಗಳು.
ದೀರ್ಘಕಾಲಿಕ ಯೋಜನೆ.

6. ಆನಂದನಗರ: ಪ್ರಉತೀಯ ಯೋಜನೆಯ ಒಂದುಮಾದರಿ ಮಾನವ ಸಂಪನ್ಮೂಲ — — 143

* ಕೃಷಿ.
* ಕೃಷಿ ಹಾಗೂ ಕೃಷಿಯಾಧಾರಿತ ಉದ್ದಿಮೆಗಳು.
* ಪರ್ಯಾಯ ಶಕ್ತಿ – ಜೈವಿಕ ಅಣು ಹಾಗೂ ಸೌರಶಕ್ತಿ ಪರಿಸರ ಕೆಡಿಸದಂತೆ ಅಭಿವೃದ್ಧಿ.
* ತೃತೀಯ ಜಗತ್ತಿಗಾಗಿ ಮೂಲಪ್ರತಿ.

7. ತೃತೀಯ ಜಗತ್ತಿನ ಸಾಲ — — 152

ಸಾಲ ದುರಂತದ ವಿಕಾಸ.
ದುರಂತದ ಬೆಳವಣಿಗೆ
ಸಾಲ ಪರಿಹಾರ ಯೋಜನೆಗಳು.
ಭಾರತದ ನಿತ್ಯ ಸಾಲ
ಪ್ರಉತದ ಪರಿಹಾರ
ನಿಮ್ನ ಅಭಿವೃದ್ಧಿಶೀಲ ದೇಶಗಳ ಒಕ್ಕೂಟ
ಸಾಲಗಾರರಿಗಾಗಿ ವ್ಯಾಪಾರಿ ಪ್ರತಿನಿಧಿತ್ವ

8. ಐತಿಹಾಸಿಕ ದರ್ಶನ — — 173

ಮಾನವ ಮನದ ಗುಣಶೀಲ.
ಸಮಾಜ ಮನದ ಗುಣಶೀಲ.
ಸಮಾಜ ಚಕ್ರ ಸಿದ್ಧಾಂತ
ಭಾರತೀಯ ; ಆರ್ಯ ಹಾಗೂ ಪಾಶ್ಚಾತ್ಯ
ನಾಗರಿಕತೆಗಳ ಉದಾಹರಣೆಗಳು
ಮಾನವ ಶೋಷಣೆ.

9. ಭಾರತದ ಭಾವೀ ವೈಭವ — — 188

ಮಹಾ ಕುಸಿತ
ಭಾರತದಲ್ಲಿ ಆರ್ಥಿಕ ಮುಗ್ಗಟ್ಟು
ಪ್ರಉತ ಮುಖಾಂತರ ಪ್ರಗತಿಯ ಸ್ಫೋಟ
ಸಹಕಾರ ತತ್ತ್ವಾಧಾರಿತ ವಿಕೇಂದ್ರೀಕೃತ
ಅರ್ಥ ವ್ಯವಸ್ಥೆ
ಅಗತ್ಯವೆನಿಸಿರುವ ಆಧ್ಯಾತ್ಮಿಕ ಬಳುವಳಿ.

ಅಧ್ಯಾಯ – 1

ಕಪ್ಪು ಹಣ : ತೃತೀಯ ಜಗತ್ತಿನ ಶಾಪ

ದ್ವಿತೀಯ ಜಾಗತಿಕ ಯುದ್ಧ ಲಾಗಾಯ್ತು ನಮ್ಮೀ ಉಪಗ್ರಹದಲ್ಲೆಲ್ಲ ತಾತ್ವಿಕ ಹಾಗೂ ನೈತಿಕ ಮೌಲ್ಯಗಳ ಪತನವು ಎದ್ದು ಕಾಣುತ್ತಿದೆ. ಈ ಪತನವು ಆಧುನಿಕ ಸಂಪರ್ಕ ಸಾಧನಗಳೊಂದಿಗೆ ಹೆಚ್ಚು ಹೆಚ್ಚಾಗಿ ತಳಕು ಬಳಕಾಗಿದೆ. ಅದರ ಪರಿಣಾಮವೇ ಅಪರಾಧಗಳ ಹೆಚ್ಚಳ, ಅಪ್ರಾಮಾಣಿಕತೆ, ಮಾದಕ ವಸ್ತುಸೇವನೆ ಹಾಗೂ ಭ್ರಷ್ಟತೆಗಳು. ಈ ಕೇಡುಗಳು ಇಡೀ ಬೂಖಂಡದಲ್ಲಿ ಕ್ಷೋಭೆಯುಂಟು ಮಾಡಿವೆಯಾದರೂ ವಿಶೇಷತಃ ತೃತೀಯ ಜಗತ್ತಿನಲ್ಲಂತೂ ಘನಘೋರವಾಗಿವೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅವುಗಳ ಆರ್ಥಿಕ ಪರಿಣಾಮಗಳು ವಿಶೇಷವಾಗಿ ಮಾರಕಪ್ರಾಯವಾಗಿವೆ. ಏಕೆಂದರೆ ಆ ರಾಷ್ಟ್ರಗಳು ತಮ್ಮ ತೀರ ಬಡತನದಿಂದಾಗಿ ಈ ಪರಿಣಾಮಗಳನ್ನು ಸಹಿಸಕೊಳ್ಳಲಾರವು.

ಅಭಿವೃದ್ಧ ಜಗತ್ತು ಭ್ರಷ್ಟಾಚಾರದಿಂದ ಕೆಲಮಟ್ಟಿಗೆ ಬಾಧಿತವಾಗಿರುವುದೇನೋ ನಿಜ. ಆದರೆ ಅನಭಿವೃದ್ಧಿ ಜಗತ್ತಿನಲ್ಲಿ ಈ ಬಾಧೆಯ ತೀವ್ರತೆಯು ಬಣ್ಣಿಸಲಸದಳ. ಈ ಭ್ರಷ್ಟಾಚಾರದ ಅಳತೆಗೋಲುಗಳಲ್ಲಿ ಕಪ್ಪು ಹಣವೂ ಒಂದು. ಹಾಗೆ ನೋಡಿದರೆ ಈ ಹೆಸರೇ ತಪ್ಪು. ಏಕೆಂದರೆ ಸಂಪಾದಿಸಿದ ಹಣ ಕಪ್ಪೂ ಇರದು; ಬಿಳಿಪೂ ಇರದು. ಅದನ್ನು ಪ್ರಾಮಾಣಿಕವಾಗಿ ಸಂಪಾದಿಸಿರಬಹುದು; ಇಲ್ಲವೆ ಅಪ್ರಾಮಾಣಿಕವಾಗಿ ಸಂಪಾದಿಸಿರಬಹುದು; ಅಷ್ಟೇ. ಅಪ್ರಾಮಾಣಿಕ ಆದಾಯ ಅರ್ಥಾತ್ ಸಂಪತ್ತನ್ನೇ ಸಾಮಾನ್ಯವಾಗಿ ಕಪ್ಪುಹಣ ಎಂದು ಜನ ಕರೆಯುತ್ತಾರೆ. ವಾಸ್ತವವಾಗಿ ಅದು ಭ್ರಷ್ಟ ಹಣವಾಗಿದೆ.

ಕಪ್ಪು ಹಣದ ಘಟನೆಯು ತೃತೀಯ ಜಗತ್ತಿನ ಮೇಲಿನ ಒಂದು ಶಾಪ. ಬಡತನ ನಿರ್ಮೂಲನೆಯ ದಿಶೆಯಲ್ಲಿ ಮಾಡುವ ಪ್ರಯತ್ನಗಳನ್ನೂ ಹಾಗೂ ಹೂಡುವ ಹಂಚಿಕೆಗಳನ್ನೂ ಅದು ತಡೆದು ನಿಲ್ಲಿಸುತ್ತಿದೆ. ಇದು ಹೇಗೆಂಬುದನ್ನು ಒಂದು ಸರಳ ಉದಾಹರಣೆಯಿಂದ ತಿಳಿಸಬಹುದು.

1950 ರ ದಶಕದಿಂದೀಚೆಗೆ ತೃತೀಯ ಜಗತ್ತಿನ ದೇಶಗಳು ಅಭಿವೃದ್ಧ ಜಗತ್ತಿನಿಂದ ಬಿಲ್ಲಿಯನ್ನುಗಟ್ಟಳೆ ಡಾಲರ ಸಾಲವನ್ನೂ, ಸಹಾಯ ಧನವನ್ನೂ ಪಡೆದಿವೆ. ಈ ಹಣವನ್ನು ಸರಿಯಾಗಿ ಬಳಸಿದ್ದರೆ, ಇಷ್ಟರಲ್ಲಿ ಪ್ರಪಂಚದ ಬಡತನದ ಬಹ್ವಂಶವು ಮಾಯವಾಗುತ್ತಿತ್ತು. ಪ್ರತಿಯಾಗಿ ಈ ಹಣದ ಬಹ್ವಂಶವು ತೃತೀಯ ಜಗತ್ತಿನ ಅಧಿಕಾರಿಗಳ ಜೇಬು ಸೇರಿದೆ. ಅವರು ಸ್ವಿಸ್ ಬ್ಯಾಂಕುಗಳಲ್ಲಿ ಖಾತೆ ತೆಗೆಯುವಷ್ಟು ಧನಿಕರಾದರು. ಇತ್ತ ಅನಭಿವೃದ್ಧ ಜಗತ್ತು ಟ್ರಿಲಿಯನ್‌ಗಟ್ಟಳೆ ಸಾಲದ ಭಾರದಡಿ ನರಳುತ್ತಿದೆ. ಅದರ ನಾಗರಿಕರಿಗೆ ನಿರಾಶಾದಾಯಕವಾದ ಆಸಡ್ಡಾಳ ಭವಿಷ್ಯ ಕಾಯ್ದಿದೆ. ಭ್ರಷ್ಟ ಹಣದ ಒಟ್ಟು ಪ್ರವಾಹದ ಕೊಳ್ಳ – ಲೂಟಿಗಳು ಈ ಬಗೆಯಾಗಿವೆ.

ಭ್ರಷ್ಟ ಹಣದ ಪ್ರಸಂಗವನ್ನು ಭಾರತೀಯ ಅರ್ಥಶಾಸ್ತ್ರಜ್ಞರು ಆಗಿಂದಾಗ್ಗೆ ತುಚ್ಛೀಕರಿಸುತ್ತಲೇ ಬಂದಿದ್ದಾರೆ. ಏಕೆಂದರೆ ಈ ಸಮಸ್ಯೆಯು ಭಾರತದಲ್ಲಿ ತೀರ ಉಲ್ಬಣಿಸಿದೆ. ಮೇಲಾಗಿ ಹೆಚ್ಚು ಹೆಚ್ಚು ಉಲ್ಬಣಿಸುತ್ತ ಸಾಗಿದೆ. ಆದರೆ ಕಪ್ಪು ಹಣವು ಇಡೀ ಪೃಥೀಯು ಜಗತ್ತನ್ನೇ ಪೀಡಿಸುತ್ತಿದೆ. ಇನ್ನು ಅಭಿವೃದ್ಧ ಜಗತ್ತನ್ನು ಸಹ ಸ್ವಲ್ಪು ಮಟ್ಟಿಗೆ ಪೀಡಿಸುತ್ತಿದೆ.

ಛಾಯಾ ಅರ್ಥ ವ್ಯವಸ್ಥೆ :

ಭ್ರಷ್ಟ ಹಣದ ಸೃಷ್ಟಿಯು ತಥಾಕಥಿತ ಛಾಯಾ ಅರ್ಥವ್ಯವಸ್ಥೆ ಅರ್ಥಾತ್ ಸಮಾನಾಂತರ ಅರ್ಥವ್ಯವಸ್ಥೆಯಲ್ಲಿ ಆಗುತ್ತದೆ. ಈ ಅರ್ಥವ್ಯವಸ್ಥೆಯನ್ನು ಉದ್ದೇಶಪೂರ್ವಕ ದಾಖಲಿಸದೇ ಬಿಟ್ಟವ್ಯವಹಾರಗಳೆಂದು ವ್ಯಾಖ್ಯಾನಿಸಬಹುದು, ರೂಢಿಯ ಕ್ರಮದಲ್ಲಿ ಸಾವಿರಾರು ವ್ಯವಹಾರಗಳು ವರದಿಯಾಗದೆ ಹೋಗುವುದು ಸಹಜ; ಆದ್ದರಿಂದ ಇಲ್ಲಿ ಉದ್ದೇಶಪೂರ್ವಕ ಎನ್ನುವುದು ತುಂಬಾ ಮಹತ್ವಪೂರ್ಣ. ಆದ್ದರಿಂದ ಕರ ತಪ್ಪಿಸಲಿಕ್ಕಾಗಿ ಇಲ್ಲವೆ ಆದಾಯ ಮತ್ತು ಸಂಪತ್ತಿನ ಮೂಲವನ್ನು ಬಚ್ಚೆಡಲಿಕ್ಕಾಗಿ ಮುದ್ದಾಂ ವರದಿಸದ ವ್ಯವಹಾರಗಳು ಮಾತ್ರ ಛಾಯಾ ಅರ್ಥ ವ್ಯವಸ್ಥೆ ಎನಿಸುತ್ತವೆ.

ಛಾಯಾ ಎಂದೊಡನೆ, ಈ ಪರ್ಯಾಯ ಅರ್ಥವ್ಯವಸ್ಥೆಯು ಅದರ ಕ್ರಮಬದ್ಧ ಪ್ರತಿ ರೂಪ ಬಿಟ್ಟು ಸ್ವತಂತ್ರವಾಗಿ ಕಾರ್ಯಾನ್ವಯಿಸುತ್ತದೆ ಎಂದೇನೂ ಅಲ್ಲ. ಪ್ರತಿಯಾಗಿ ಉಭಯತಾಪಿ ಒಂದರೊಳಗೊಂದು ಹಣೆದುಕೊಂಡಿವೆ. ಹಣವು ಒಂದರ ಎಲ್ಲೆ ದಾಟಿ ಇನ್ನೊಂದರೊಳಗೆ ಸಲೀಸಾಗಿ ಹರಿದಾಡುತ್ತಿದೆ. ಸಾಲ ನೀಡುವವರು ಕಾಯದೆಬದ್ಧವಾಗಿ ಅರ್ಜಿಸಿದ, ಸರಿಯಾಗಿ ದಾಖಲಿಸಿದ ಹಣವನ್ನು ವಿನಿಯೋಗಿಸಿದರೂ ಸಹ ತೆಗೆದುಕೊಳ್ಳುವವರು ಅದನ್ನಾವುದೇ ವ್ಯವಹಾರ ಪತ್ರಗಳಲ್ಲಿ ದಾಖಲಿಸದಿದ್ದರೆ, ಆ ಮಟ್ಟಿಗೆ ಛಾಯಾ ಅರ್ಥವ್ಯವಸ್ಥೆಯು ಉಬ್ಬುತ್ತದೆ. ಇನ್ನು ಇದರ ವಿರುದ್ಧದ ಪರಿಸ್ಥಿತಿಯಲ್ಲಿ ಛಾಯಾ ಅರ್ಥವ್ಯವಸ್ಥೆಯು ಆ ಪ್ರಮಾಣದಲ್ಲಿ ಕುಗ್ಗುತ್ತದೆ. ಆನುಷಂಗಿಕವಾಗಿ ಹೇಳುವುದಾದರೆ, ರಾಷ್ಟ್ರೀಯ ಲೆಕ್ಕಾಚಾರದಲ್ಲಿ ಪೆಚ್ಚ ಹಾಗೂ ಆದಾಯಗಳ ಅಂಕಿ ಸಂಖ್ಯೆಗಳ ಅಂತರದಲ್ಲಿಯ ವ್ಯತ್ಯಾಸವನ್ನು ಪರಿಗಣಿಸಿ ಸಮಾನಾಂತರ ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಅಂದಾಜಿಸ ಬಹುದಾಗಿದೆ. ಅಂದಾಜಿಸುವ ತಂತ್ರ ಕುರಿತು ಚರ್ಚಿಸುವ ಕಾಲಕ್ಕೆ ಈ ಅಂದಾಜಿಸುವ ಸಾಧ್ಯತೆಯನ್ನು ವಿಶ್ಲೇಷಿಸಬಹುದಾಗಿದೆ.

ಛಾಯಾ ಅರ್ಥವ್ಯವಸ್ಥೆ ಹಾಗೂ ಕ್ರಮಬದ್ಧ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಸಂಪತ್ತು ಎಂದರೇನು ? ಆದಾಯ ಎಂದರೇನು ? ಎಂಬುದನ್ನು ವಿಂಗಡಿಸಿ ತಿಳಿಯುವುದು ತುಂಬಾ ಪ್ರಸ್ತುತವಾಗಿದೆ. ಎಳ್ಳಷ್ಟೂ ದಾಖಲಿಸದ ವ್ಯವಹಾರಗಳ ಮೂಲಕ ಸೃಷ್ಟಿಯಾದ ಆದಾಯವನ್ನು, 'ಭ್ರಷ್ಟ'ವೆಂದು ಪರಿಗಣಿಸುವುದು, ಸರಿಯಷ್ಟೇ. ಉದಾಹರಣೆಯೆಂದರೆ, ವೈದ್ಯನೋರ್ವನು ತಾನು ರೋಗಿಯಿಂದ ಸ್ವೀಕರಿಸಿದ ಶುಲ್ಕದ ಪೂರ್ಣ ಹಣವನ್ನು ದಾಖಲಿಸದಿದ್ದರೆ ಅವನ ಆದಾಯವು ಬಚ್ಚೆಡುವ ಲೆಕ್ಕದ ಮಟ್ಟಿಗೆ ಕಪ್ಪು ಆದಾಯವೆನಿಸುತ್ತದೆ. ಅದೇ ಮೇರೆಗೆ ಕಪ್ಪು ಸಂಪತ್ತು ಸಹ ಕ್ರಮಬದ್ಧ ಸಂಪತ್ತಿನಂತೆಯೇ ಇದೆ. ಅಂತರವಿರುವುದು ಬಹಿರಂಗ ಪಡಿಸುವುದರಲ್ಲಿ ಮಾತ್ರ.

ಭ್ರಷ್ಟ ಅರ್ಥವ್ಯವಸ್ಥೆಯ ಅಂದಾಜು :

ಮೊತ್ತ ಮೊದಲು ನಮ್ಮ ಲಕ್ಷ್ಯವು ಕಪ್ಪು ಅರ್ಥವ್ಯವಸ್ಥೆಯ ಗಾತ್ರ ಕುರಿತು ಇರುವುದರಿಂದ ಯಾವುದೊಂದು ಕಾಲಕ್ಕೆ ಉಳಿದಿರಬಹುದಾದ ಭ್ರಷ್ಟ ಸಂಪತ್ತಿನ ಮೊತ್ತವನ್ನು ಅಂದಾಜಿಸುವುದು ಸೂಕ್ತವಷ್ಟೇ. ಆದರೂ ಸಹ, ಇಷ್ಟು ಹೊತ್ತಿಗೆ ಅರ್ಥಶಾಸ್ತ್ರಜ್ಞರು ಚೆನ್ನಾಗಿ ಅರಿತಿರುವಂತೆ, ಸುಗಮವಾಗಿ ವ್ಯಾಖ್ಯಾನಿಸಬಹುದಾದರೂ, ಸಂಪತ್ತಿನ ಗ್ರಹಿಕೆಯನ್ನು ಅಳೆಯುವುದು ಮಾತ್ರ ತುಂಬಾ ಕಷ್ಟಸಾಧ್ಯ. ಆದ್ದರಿಂದ, ಛಾಯಾ ಅರ್ಥವ್ಯವಸ್ಥೆಯ ಎಲ್ಲ ಅಂದಾಜುಗಳು ಕಪ್ಪು ಆದಾಯದ ಮೇಲೆ ಕಣ್ಣು ಹಾಯಿಸುತ್ತವೆ. ಈ ಮಟ್ಟಿಗೆ, ಅವು ಯಾವುದೇ ಕಾಲದ ಛಾಯಾ ಅರ್ಥವ್ಯವಸ್ಥೆಯ ನಿಕ್ಕಿ ಗಾತ್ರಕ್ಕಿಂತ ಅದರ ಬೆಳವಣಿಗೆಯ ಅಳತೆ ಗೋಲಾಗಿದೆ.

ಈ ವಿನಮ್ರ ಪ್ರಯತ್ನವೂ ಸಹ ಆರಂಭದಿಂದಲೂ ಹೀಗಳೆಯಲ್ಪಡುತ್ತಿರುವುದು ಸೋಜಿಗ. ವ್ಯಾಖ್ಯೆಯಲ್ಲಿ ತಿಳಿಸಿದಂತೆ ಛಾಯಾ ಅರ್ಥವ್ಯವಸ್ಥೆಯು ಪೂರ್ಣವಾಗಿ ದಾಖಲಿಸದ ಗುಪ್ತರಂಗವಾಗಿದೆ. ಈ ಸಮಸ್ಯೆಯ ನೇರ ಮತ್ತು ನಿಖರ ಅಳತೆಯಂತೂ ಸ್ಪಷ್ಟವಾಗಿ ಅಸಾಧ್ಯ. ಅಧೀರರಾಗದ ಅರ್ಥಶಾಸ್ತ್ರಜ್ಞರು ಅಂದಾಜೀಕರಣಕ್ಕೆ ಮೊರೆ ಹೋಗುತ್ತಾರೆ. ಈ ಎಲ್ಲ ಪ್ರಕರಣಗಳಲ್ಲಿ ಇರುವ ಸಾಮಾನ್ಯ ಲಕ್ಷಣವೆಂದರೆ, ಲೆಕ್ಕಾಚಾರದ ಒಂದು ಹಂತದಲ್ಲಿ, ಬಿಟ್ಟು ಹೋಗಿರಬಹುದಾದ ಮಾಹಿತಿಯನ್ನು ಊಹೆಯಿಂದ ತುಂಬುವುದುಂಟು. ಸ್ಪಷ್ಟವಾಗಿ ಹೇಳುವುದಾದರೆ, ಈ ಊಹೆಗಳ ತಥ್ಯಾಂಶದ ಮೇಲೆಯೇ ಈ ಅಂದಾಜುಗಳ ಗುಣಮಟ್ಟವು ನಿಂತಿದೆ.

1954 ರಲ್ಲಿ ನಿಕೋಲಾಸ ಕೆಲ್ಡಾರ ಅವರು ಭಾರತೀಯ ಕರ ಸುಧಾರಣೆಯ ವರದಿ ಸಲ್ಲಿಸಿದರು. ಅದರಲ್ಲಿ, ಸ್ವತಂತ್ರ ಭಾರತದಲ್ಲಿಯ ಛಾಯಾ ಅರ್ಥವ್ಯವಸ್ಥೆಯ ಪ್ರಪ್ರಥಮ ಅಂದಾಜು ಸಿಗಬಹುದು. ಕರ ತಪ್ಪಿಸುವ ಉದ್ದೇಶದಿಂದಾಗಿಯೇ ವ್ಯವಹಾರ ಲೆಕ್ಕವನ್ನು ಅದುಮುವರೆಂಬ ಗ್ರಹಿಕೆ ಆಧರಿಸಿ, ಕೆಲ್ಡಾರ ತನ್ನ ಅಂದಾಜು ಮುಂದಿಟ್ಟನು. ಇದರಿಂದ ತಿಳಿದುಬರುವುದೇನೆಂದರೆ. ಬಹುತೇಕ ಗಳಿಕೆಗಳು ಭ್ರಷ್ಟ ಹಣದಲ್ಲಿ ಅಂದರೆ ಲಾಭ, ಬಡ್ಡಿ, ಬಾಡಿಗೆ ಮತ್ತು ಸ್ವಯಂ ಉದ್ಯೋಗ ನಿರತರ ಸಂಬಳವಲ್ಲದ ಆದಾಯ ಇತ್ಯಾದಿಗಳಲ್ಲಿ ಪರಿವರ್ತಿತವಾಗುತ್ತದೆ. ಏಕೆಂದರೆ, ಸಂಬಳದ ಆದಾಯದ ಮೇಲೆ ಮೂಲದಲ್ಲಿಯೇ ಕರ ಹೇರಿರಬಹುದು. ಲೆಕ್ಕಾಚಾರ ಪ್ರಕ್ರಿಯೆಯ ಈ ಹಂತದಲ್ಲಿ ಕೆಲ್ಡಾರ, ತನ್ನ ಊಹೆಯನ್ನೂ ತುಂಬುತ್ತಾನೆ. ಅರ್ಥಶಾಸ್ತ್ರದ ಪ್ರತಿಯೊಂದು ಪ್ರಕಾರದಲ್ಲಿ, ಕರ ವಿನಾಯತಿಯ ಮಿತಿಯನ್ನು ಮೀರಿದ, ಸಂಬಳವಲ್ಲದ ಆದಾಯದ ಪ್ರಮಾಣ ಕುರಿತು ತನ್ನ ಗ್ರಹಿಕೆಗಳನ್ನು ಅವನು ರೂಢಿಸಿದನು. ಈ ಗ್ರಹಿಕೆಗಳನ್ನು ಬಳಸಿ, ಕರಾಕರಣೆ ಮಾಡಬಹುದಾದ ಸಂಬಳೇತರ ಆದಾಯವನ್ನು ಅವನು ಅಂದಾಜಿಸಿದನು. ಅನಂತರ, ಅವನು ವಾಸ್ತವವಾಗಿ ಕರಾಕರಿಸಿದ, ಸಂಬಳೇತರ ಆದಾಯದೊಂದಿಗೆ ಈ ರೀತಿ ಅಂದಾಜಿಸಿದುದನ್ನು ಹೋಲಿಸುತ್ತಾನೆ. ಇವುಗಳ ನಡುವಿನ ಅಂತರವೇ ಅವನ ಪ್ರಕಾರ ಆ ವರುಷ ಭ್ರಷ್ಟ ಆದಾಯದ ಪ್ರಮಾಣವಾಗಿದೆ. 1953–54 ರಲ್ಲಿ ಕೆಲ್ಡಾರ ಅಂದಾಜಿಸಿದ ಭ್ರಷ್ಟ ಹಣವು 600 ಕೋಟಿ ರೂಪಾಯಿ.

ಕೆಲ್ಕಾರ ಪದ್ಧತಿಯು, ಮೇಲೆಯೇ ತೋರುವಂತೆ, ಇತರರ ಮೇಲೆ ತನ್ನ ಪ್ರಭಾವೀ ಮುದ್ರೆಯೊತ್ತಿತು. ಏಕೆಂದರೆ, ನೇರ ಕರಾಕರಣೆ ವಿಚಾರಣಾ ಸಮಿತಿಗೆ (ವಾಂಚೂ ಸಮಿತಿಯೆಂದು ಜನಜನಿತವಾದ ಸಮಿತಿ) ಸಮಾನಾಂತರ ಅರ್ಥವ್ಯವಸ್ಥೆಯ ಅಂದಾಜನ್ನು ಪ್ರಚಲಿತ ದಿನದ ವರೆಗೆ ಮಾಡುವ ಹೊಣೆ ಹೊರಿಸಿದಾಗ, 1954 ರಿಂದಲೂ ದೇಶದಲ್ಲಿ ಘಟಿಸಿದ ಹಲವು ಸಂರಚನಾತ್ಮಕ ಬದಲಾವಣೆಗಳನ್ನು ಪ್ರತಿಬಿಂಬಿಸಲೋಸುಗ, ಕೆಲ್ಕಾರ ಪದ್ಧತಿಯನ್ನೇ ಆದು ಅಳವಡಿಸಿಕೊಂಡಿದೆ. ವಾಂಚೂ ಸಮಿತಿಯು 1961–62, 1965–66 ಮತ್ತು 1968–69 ರ ವರ್ಷಗಳ ಟಾಯಾ ಆದಾಯವನ್ನು ಲೆಕ್ಕ ಹಾಕಿದೆ. ಮುಂದೆ ಓ. ಪಿ. ಚೋಪ್ರಾ ಅವರು ಇತ್ತೀಚೆಗೆ 1961–62, 1977–78 ರ ಮಧ್ಯಾವಧಿಯ ವಾರ್ಷಿಕ ಕಪ್ಪು ಆದಾಯಗಳ ಪೂರ್ಣ ಕ್ರಮಾವಳಿಯನ್ನು ರೂಪಿಸಲು, ವಾಂಚೂ ಪದ್ಧತಿಯನ್ನೇ ಬಳಸಿದ್ದಾರೆ. ಚೋಪ್ರಾ ಅವರು ಪ್ರಪ್ರಥಮವಾಗಿ ಸಮಸ್ಯೆಯ ಪರಿಪೂರ್ಣ ಚಿತ್ರವನ್ನು ನೀಡಿರುತ್ತಾರೆ. ಅನಿರೀಕ್ಷಿತವಾಗಿ ಪರಿಣಾಮಗಳೇನೋ ಸುಖದಾಯಕವಾದವು. ಪ್ರಚಲಿತ ದರಗಳನ್ವಯ, ಕಪ್ಪು ಆದಾಯವು ಕಳೆದ 18 ವರ್ಷಾವಧಿಯಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ (ಗ್ರಾಸ ನ್ಯಾಶನಲ್ ಪ್ರಾಡಕ್ಟ್) ಕೇವಲ ಪ್ರತಿಶತ 4.4 ರಷ್ಟು ಹೆಚ್ಚಾಗಿದೆ. ಅಂದರೆ, 1961–62 ರಲ್ಲಿ ಶೇಕಡಾ 6% ಇತ್ತು. 1977–78 ರಲ್ಲಿ ಶೇಕಡಾ 10.5 ಆಯಿತು. ವಾರ್ಷಿಕ ಕಪ್ಪು ಆದಾಯವೆಂದರೆ, ಕಪ್ಪು ಅರ್ಥವ್ಯವಸ್ಥೆಯು ಆಯಾ ವಿಶೇಷ ವರ್ಷದಲ್ಲಿ ಎಷ್ಟು ಬೆಳವಣಿಗೆಯಾಗಿದೆ ಎಂಬುದರ ಮಾಪನವೆಂಬುದನ್ನು ಸ್ಮರಿಸಿಕೊಳ್ಳಿರಿ. ನಾವು ಮೇಲೆ ಉದ್ಧರಿಸಿದ ಪ್ರತಿಶತ ಅಂಕಿಗಳು ಆಯಾ ವರ್ಷಗಳಲ್ಲಾದ ಕಪ್ಪು ಹಣದ ಬೆಳವಣಿಗೆಯ ಪ್ರತಿಶತ ದರಗಳೂ ಆಗಿವೆ.

ಉಪರ್ಯುಕ್ತ ಅಂದಾಜುಗಳಿಗೆ ಸಾಮಾನ್ಯ ಬೆಂಬಲವಿಲ್ಲ. ತಥ್ಯಾಂಶವೆಂದರೆ, ಸಮಿತಿಯ ಕಾರ್ಯಪದ್ಧತಿ ಕುರಿತು ಪ್ರಥಮ ಸಾರ್ವಜನಿಕ ಭಿನ್ನಮತವು ಸಮಿತಿಯೊಳಗಿನಿಂದಲೇ ಬಂದಿತು. ಶ್ರೀ ಡಿ. ಕ. ರಾಂಗ್ನೇಕರ ಅವರು ತಮ್ಮ ಭಿನ್ನಮತದ ಟಿಪ್ಪಣಿಯಲ್ಲಿ "ಸಮಿತಿಯು ಮಾಡಿದ ಸಂರಚನಾತ್ಮಕ ಹೊಂದಾಣಿಕೆಗಳು ಕಪ್ಪು ಆದಾಯದ ಅಪ ಅಂದಾಜೀಕರಣಕ್ಕೆ ದಾರಿ ಮಾಡಿವೆ" ಎಂದು ಬರೆದಿದ್ದಾರಲ್ಲದೆ ಪರ್ಯಾಯ ಅಂದಾಜನ್ನೂ ನೀಡಿದ್ದಾರೆ. ಈ ಅಂದಾಜು, ಸಮಿತಿಯ ಅಂದಾಜಿಗಿಂತ ಪ್ರತಿಶತ 3 ರಷ್ಟು ಹೆಚ್ಚಿದೆ.

ಈ ಎಲ್ಲ ಅಂದಾಜುಗಳಿಗೆ ಮೂಲಾಧಾರವಾಗಿರುವ ಕೆಲ್ಕಾರ ಪದ್ಧತಿಯೇ ಪೂರಾ ಸರಿಯಾಗಿಲ್ಲ. ಯಾವುದೊಂದು ರಂಗದಲ್ಲಿ ಉತ್ಪಾದನಾ ಸಾಮರ್ಥ್ಯ ಕುರಿತು ಲಭ್ಯವಿರುವ ಮಾಹಿತಿ ಮೇಲಿಂದ ಕರಾಕರಿಸಬಲ್ಲ ಸಂಬಳೇತರ ಆದಾಯವು ಎಷ್ಟಿರಬೇಕೆಂಬ ಬಗೆಗೆ ಊಹೆ ಮಾಡವುದಂತೂ ಕೆಲ್ಕಾರ ಪದ್ಧತಿಯಲ್ಲಿ ಅಡಕವಾಗಿಯೇ ಇದೆ. ಈ ಪದ್ಧತಿಯಿಂದ ಮಾಡಿದ ಅಂದಾಜುಗಳಲ್ಲಿ ಎದ್ದು ಕಾಣುವ ವ್ಯತ್ಯಾಸಗಳನ್ನು ಸ್ಪಷ್ಟೀಕರಿಸುವ ವಿಶ್ಲೇಷಣಕಾರನಿಗೂ ಹಾಗೂ ಈ ಊಹಾತ್ಮಕ ಅಂದಾಜಿಗೂ ಮಧ್ಯೆ ಕಲ್ಪನೆಯ ದೊಡ್ಡ ಕಂದಕವೇ ಇದೆ.

1979 ರಲ್ಲಿ ಫೇಜ್‌ನು ಒಂದು ಪರ್ಯಾಯ ಅಂದಾಜು ತಂತ್ರವನ್ನು ಸೂಚಿಸಿದನು. ಇದು ಕೆಲ್ಕಾರ ಪದ್ಧತಿಗಿಂತ ಸೈದ್ಧಾಂತಿಕವಾಗಿ ಅತಿ ಹೆಚ್ಚು ಮೇಲ್ಮಟ್ಟದ್ದಾಗಿತ್ತಲ್ಲದೆ, ವಿಶ್ಲೇಷಕನ ಊಹೆಯನ್ನು ಅವಲಂಬಿಸಿರಲಿಲ್ಲ. ಫೇಜ್ ತಂತ್ರವು ಎರಡು ಸಂಬಂಧಗಳನ್ನು

ಅವಲಂಬಿಸಿತ್ತು. ಮೊದಲನೆಯದೆಂದರೆ ವ್ಯಕ್ತಿತ್ವ. ಇನ್ನು ಎರಡನೆಯದೆಂದರೆ, ಬಹು ದಿನಗಳಿಂದ ಹಣಕಾಸಿನ ಸಿದ್ಧಾಂತಗಳಿಗೆ ಸಮ್ಮತವಾದ ನಡೆವಳಿ.

ಮೊದಲು ಐರ್ವಿಂಗ ಫಿಶರರಿಗೆ ಆರೋಪಿಸಿದ ವ್ಯಕ್ತಿತ್ವ ಕುರಿತು ವಿಚಾರಿಸುವಾ : ರೋಖ ಇಲ್ಲದ ಚೆಕ್ (ಸಾಮೂಹಿಕವಾಗಿ ಎಂ.ಐ. ಎನ್ನುತ್ತಾರೆ) ಮೂಲಕ ಪಾವತಿಸಿದ ಎಲ್ಲ ವ್ಯವಹಾರಗಳನ್ನು ಕೂಡಿಸಿದರೆ, ಅವುಗಳ ಒಟ್ಟು ಮೊತ್ತವು ಕಾಯದೆಬದ್ಧ ಅಥವಾ ಕಾಯಿದೆ ಬಾಹಿರ ಒಟ್ಟು ಆರ್ಥಿಕ ಕ್ರಿಯೆಯ ನಾಮಮಾತ್ರ ಮೌಲ್ಯಕ್ಕೆ ಸಮನಾಗಬೇಕು. ಯಾವುದೊಂದು ಕಾಲದಲ್ಲಿ ವ್ಯವಹಾರದಲ್ಲಿ ಹಣದ ಸುತ್ತುವರಿಕೆಯು ಬದಲಾಗದೆಂದು ಕಲ್ಪಿಸಿದರೆ (ಹಣಕಾಸಿನ ಸಿದ್ಧಾಂತದಲ್ಲಿ ಇದೊಂದು ತೀರ ಸಾಮಾನ್ಯ ಗ್ರಹಿಕೆ) ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ (ಜಿ.ಎನ್.ಪಿ.) ಹಾಗೂ ಒಟ್ಟು ವ್ಯವಹಾರಗಳ ಪ್ರಮಾಣವು ಹೆಚ್ಚು ಕಡಿಮೆ ಸ್ಥಿರವಾಗಿರುತ್ತದೆ. ಆದ್ದರಿಂದ, ಯಾವುದೊಂದು ಕಾಲದಲ್ಲಿ, ವರದಿತ ಜಿ.ಎನ್.ಪಿ. ಗೆ ಹೋಲಿಸಿದರೆ ಎಂ.ಐ. ಅದರ ಎಷ್ಟನೆಯ ಪಾಲು ಎಂಬುದು ತಿಳಿಯುತ್ತದೆ. ಈ ಪ್ರಮಾಣದಲ್ಲಿ, ಕಾಣಬರುವ ಹೆಚ್ಚಳವಾದರೆ, ವರದಿತ ಜಿ.ಎನ್.ಪಿ. ಯು ವಾಸ್ತವ ಜಿ.ಎನ್.ಪಿ. ಗಿಂತ ಕೆಳಗೆ ಬಿದ್ದಿದೆಯೆಂದು ಅರ್ಥ. ಅರ್ಥಾತ್, ಕಪ್ಪು ಹಣವು ವಿಸ್ತರಿಸುತ್ತಿದೆ.

ಈ ತಂತ್ರದ ಕಾರ್ಯಾನ್ವಯಕ್ಕೆ ಎರಡು ಮಾಹಿತಿಗಳ ಅಗತ್ಯವಿದೆ. ಮೊದಲನೆಯದಾಗಿ, ನಾವು ಅಭ್ಯಾಸ ಮಾಡಬೇಕಾಗಿರುವ ವರ್ಷಗಳ ವ್ಯವಹಾರಗಳ ಒಟ್ಟು ಗಾತ್ರ ಕುರಿತು ತಥ್ಯಾಂಶಗಳು ತೀರ ಅಗತ್ಯ. ವಿಭಿನ್ನ ಪ್ರಕಾರಗಳಲ್ಲಿ ಉಳಿದಿರುವ ನಾಣ್ಯಗಳ ಹಾಗೂ ನೋಟುಗಳ ವಹಿವಾಟಿನ ಪ್ರಮಾಣ ಸಂಬಂಧ ಭಾರತೀಯ ರಿಜರ್ವ ಬ್ಯಾಂಕಿನ ಅಂಕಿ ಸಂಖ್ಯೆ ಹಾಗೂ ಆ ನಾಣ್ಯಗಳ ದರ ಇವುಗಳಿಂದ ಈ ತಥ್ಯಾಂಶಗಳನ್ನು ಪಡೆಯಬಹುದಾಗಿದೆ. ಎರಡನೆಯದಾಗಿ, ವಾಸ್ತವ ಸ್ಥೂಲ ರಾಷ್ಟ್ರೀಯ ಉತ್ಪನ್ನದ (ಜಿ.ಎನ್.ಪಿ.) ಎಷ್ಟು ಪಾಲು ಹಣಕಾಸಿನ ಪೂರ್ಕಕೆ ಇದೆಯೆಂಬ ವಾಸ್ತವ ಪ್ರಮಾಣದ ಒಂದು ಅಂದಾಜು ಬೇಕು. (ಸಂಕ್ಷೇಪಿಸುವುದಾದರೆ, ಎಂ.ಐ. ಜಿ.ಎನ್.ಪಿ. ಪ್ರಮಾಣ) ಇನ್ನು ವಿಶ್ಲೇಷಕನ ಊಹೆಯ ಸ್ಥಾನ ಇಲ್ಲಿದೆ. ಕಪ್ಪು ಚಟುವಟಿಕೆಗಳು ಕನಿಷ್ಠ ಮಟ್ಟದಲ್ಲಿ ಇರಬಹುದಾದ ವರ್ಷವನ್ನು ಅವರು ಕಂಡು ಹಿಡಿಯಬೇಕು. ಅರ್ಥಾತ್ ವರದಿತ ಜಿ.ಎನ್.ಪಿ. ವಾಸ್ತವ ಜಿ.ಎನ್.ಪಿ.ಯ ಪ್ರತಿರೂಪವಾಗಿರಬೇಕು. ಇಂಥ ವರ್ಷದ ಪ್ರಮಾಣವನ್ನು ಮಾಪದಂಡವಾಗಿ ಬಳಸಿ ಅದಕ್ಕೆ ಪ್ರತಿಯಾಗಿ ಮುಂದಿನ ಪ್ರಮಾಣಗಳನ್ನು ಅಳೆಯಬಹುದಾಗಿದೆ.

ಈಗ ಸುವಿಖ್ಯಾತವಾಗಿರುವ, ಪೂನಮ್ ಹಾಗೂ ಸಂಜೀವ ಗುಪ್ತಾ, 1982 ರಲ್ಲಿ ನಡೆಸಿದ, ಅಭ್ಯಾಸದಲ್ಲಿ ಈ ತಂತ್ರವನ್ನು ಮೊತ್ತಮೊದಲು ಭಾರತೀಯ ತಥ್ಯಾಂಶಗಳಿಗೆ ಅನ್ವಯಿಸಲಾಯಿತು. ತಮಗೊಂದು ಆಧಾರ ಪ್ರಮಾಣ ದೊರಕಿಸಿಕೊಳ್ಳಲು ಅವರು 1949–50, 1950–51 ಮತ್ತು 1951–52 ವರ್ಷಗಳನ್ನು ಆಯ್ದುಕೊಂಡರು. ಏಕೆಂದರೆ ಈ ವರ್ಷಗಳಲ್ಲಿ ಅಂದರೆ ಎರಡನೇ ಜಾಗತಿಕ ಯುದ್ಧಾನಂತರ ಹಾಗೂ 1952 ರ ಯೋಜನಾ ಕಾಲದ ಪೂರ್ವಾವಧಿಯಲ್ಲಿ – ಕಪ್ಪು ಅರ್ಥವ್ಯವಸ್ಥೆಯು ಅತ್ಯಂತ ದುರ್ಬಲವಿದ್ದಿತೆಂದು ಅವರು ಊಹಿಸಿದರು. ಈ ಮೂರು ವರ್ಷಗಳ ಸರಾಸರಿ ಪ್ರಮಾಣವನ್ನು ಬಳಸಿ, ಅವರು 1967–68

ರಿಂದ 1978–79 ರ ವರೆಗಿನ ಅವಧಿಯ ಕಪ್ಪು ಆದಾಯ ಲೆಕ್ಕ ಹಾಕಲು ಮುಂದಾದರು. ಆದರೆ ಪರಿಣಾಮಗಳು ಭೀಕರವಿದ್ದವು. ಅವರ ಲೆಕ್ಕಾಚಾರದ ಮೇರೆಗೆ ಈ ಅವಧಿಯಲ್ಲಿ ಕೇವಲ ಜಿ.ಎನ್.ಪಿ. ಯ ಶೇಕಡಾ 9.5 ರಷ್ಟಿದ್ದ ಕಪ್ಪು ಹಣವು ಆಶ್ಚರ್ಯಕರವಾಗಿ ಜಿಎನ್‌ಪಿಯ ಶೇಕಡಾ 48.8 ಕ್ಕೆ ಏರಿತು. ಇದೇ ಅವಧಿಗೆ ಸಂಬಂಧಿಸಿದಂತೆ ವಾಂಚೂ ಸಮಿತಿಯ ಪದ್ಧತಿಯನ್ನು ಆಧರಿಸಿದ ಚೋಪ್ರಾರ ಅಂದಾಜಿನ ಮೇರೆಗೆ ಈ ಹೆಚ್ಚಳವು ಶೇಕಡಾ 5.7 ರಿಂದ ಕೇವಲ ಶೇಕಡಾ 10.5 ಕ್ಕೆ ಏರಿತು.

ಭಾರತದಲ್ಲಿಯ ಕಪ್ಪು ಅರ್ಥವ್ಯವಸ್ಥೆಯ ತೀರ ಇತ್ತೀಚಿನ ಅಭ್ಯಾಸವನ್ನು ರಾಷ್ಟ್ರೀಯ ಸಂಸ್ಥೆ : ಸಾರ್ವಜನಿಕ ಹಣಕಾಸು ಧೋರಣೆ (ಎನ್.ಐ.ಪಿ.ಎಫ್.ಪಿ) ಇವರು ಒದಗಿಸಿದ್ದಾರೆ. ತಥ್ಯಾಂಶಗಳ ಅಪರ್ಯಾಪ್ತಿಯನ್ನು ಗುರುತಿಸಿ, ಈ ಅಭ್ಯಾಸದಲ್ಲಿ ಕಪ್ಪು ಹಣದ ನಿಶ್ಚಿತ ಅಂದಾಜೀಕರಣದ ಪ್ರಯತ್ನವನ್ನು ಕೈಬಿಡಲಾಯಿತು. ಪ್ರತಿಯಾಗಿ, ಇಂಥ ಆದಾಯಗಳ ಕೆಳ ಸೀಮಾರೇಖೆಯ ಅಂದಾಜೀಕರಣದ ವಿನಮ್ರ ಉದ್ದೇಶದತ್ತ ಲಕ್ಷ್ಯ ಕೇಂದ್ರೀಕರಿಸಲಾಯಿತು. ವಿಶೇಷವಾಗಿ, ಅದು ಕಳ್ಳ ಸಾಗಾಣಿಕೆ ಮತ್ತು ಲಂಚಬಡಕತನಗಳಂಥ ಕಾಯದೆಬಾಹಿರ ಚಟುವಟಿಕೆಗಳಿಂದ ಹುಟ್ಟುವ ಆದಾಯಗಳನ್ನು ಅವುಗಳ ಪ್ರಭಾವವು ಸುಸ್ಪಷ್ಟವಾಗಿದ್ದರೂ ಸಹ ಉಪೇಕ್ಷಿಸಿತು. ಏಕೆಂದರೆ ಅವುಗಳ ಮಾಪನವು ಕಷ್ಟಸಾಧ್ಯ. ಈ ಅಭ್ಯಾಸದಲ್ಲಿ ಸುಪರಿಚಿತ ಹಾಗೂ ಸುಲಭವಾಗಿ ನಿಗದಿಗೊಳಿಸುವ ಕಪ್ಪುಹಣದ ಆರು ಮೂಲಗಳನ್ನು ಪರಿಗಣಿಸಲಾಗಿದೆ. ಅವುಗಳೆಂದರೆ : ಸರಕು ಹಾಗೂ ಸೇವೆಗಳ ಉತ್ಪಾದನೆ, ಆಸ್ತಿಯ ಮಾರಾಟದಿಂದ ಬರುವ ಗಳಿಕೆ, ಆಮದು– ರಫ್ತು ಚಟುವಟಿಕೆ, ಮತ್ತು ಸಾರ್ವಜನಿಕ ರಂಗದಲ್ಲಿನ ಸ್ಥಿರ ಬಂಡವಾಳ ನಿರ್ಮಾಣ ಇತ್ಯಾದಿ. ಈ ಅಭ್ಯಾಸದಲ್ಲಿ ಕಪ್ಪು ಹಣದ ಪ್ರಮಾಣವು 1975–76 ರಲ್ಲಿ ಜಿ.ಎನ್.ಪಿ.ಯ ಪ್ರತಿಶತ 15 ರಿಂದ 18 ಹಾಗೂ 1980–81 ರಲ್ಲಿ ಹಾಗೂ 1983–84 ರಲ್ಲಿ ಪ್ರತಿಶತ 18 ರಿಂದ 21 ಎಂದು ನಿರ್ಣಯಿಸಲಾಗಿದೆ. ಇಲ್ಲಿ ತುಂಬಾ ಕುತೂಹಲಕರ ಸಂಗತಿಯೆಂದರೆ, ಈ 'ತೀರ ಕನಿಷ್ಠ' ಅಂದಾಜು ಸಹ, ವಾಂಚೂ ಸಮಿತಿಯ ಪದ್ಧತಿಗನುಸರಿಸಿ 1975–76 ನೇ ವರ್ಷಕ್ಕೆ ಸಂಬಂಧಿಸಿದಂತೆ ಮಾಡಿದ ಅಂದಾಜಿ (ಜಿ.ಎನ್.ಪಿ.ಯ ಪ್ರತಿಶತ 10) ಗಿಂತ ದೆಬ್ಬಾಗಿದೆ.

ಕಪ್ಪು ಹಣದ ವಿಹಂಗಮ ನೋಟ :

ಇಲ್ಲಿ ಪ್ರಸ್ತುತಪಡಿಸಿರುವ ಅಂದಾಜುಗಳು ನಮ್ಮನ್ನು ಪ್ರಸನ್ನಗೊಳಿಸಬಹುದು. ಇಲ್ಲವೆ ಮಾಯಾಮುದ್ದಗೊಳಿಸಬಹುದು. ಇಂಥ ವೈವಿಧ್ಯಪೂರ್ಣ ಮಾಪನಗಳೆದುರು ಸತ್ಯವು ಎಲ್ಲಿದೆ ಎಂದು ಬೆರಗಾಗುವುದು ತೀರ ಸಹಜ ತಾನೇ ?

ಈ ಯಾವ ಅಂದಾಜುಗಳೂ ಖಂಡನಾತೀತವೇನಲ್ಲ. ಈ ಅಳತೆಗೋಲಿನ ಕೆಳ ತುದಿಯಲ್ಲಿರುವ – ವಾಂಚೂ ಸಮಿತಿಯ ಅಂಕಿ–ಸಂಖ್ಯೆ ಹಾಗೂ ಚೋಪ್ರಾರ ಅಂಕಿ ಸಂಖ್ಯೆಗಳು ಜಿ.ಎನ್.ಪಿ. ಯನ್ನು ಆಧರಿಸಿದ ಇತರ ಯಾವುದೇ ಅಂದಾಜಿನಂತೆ ಇಳಿಮುಖ ಒಲವು ಹೊಂದಿವೆ. ಅದೇ ಕಾಲಕ್ಕೆ ಈ ಅಂದಾಜುಗಳಲ್ಲಿಯೇ ಅತ್ಯಂತ ದೊಡ್ಡದಾದ ಗುಪ್ತಾ ಅವರ ಅಂದಾಜು ಏರುಮುಖ ಒಲವು ಹೊಂದಿದೆ. ಆದ್ದರಿಂದ ಸುರಕ್ಷಿತವಾದ ಒಂದೇ

ಊಹೆಯೆಂದರೆ, ಜಿ.ಎನ್.ಪಿ. ಯ ಅಂಶದಂತೆ ಕಪ್ಪು ಆದಾಯವು ಎನ್.ಐ.ಪಿ.ಎಫ್.ಪಿ. ಯವರು ಸೂಚಿಸಿದ ಶೇಕಡಾ 20 ಮತ್ತು ಗುಪ್ತಾರ ವಿಶ್ಲೇಷಣಾನುಸಾರ ಶೇಕಡಾ 50 ಇವುಗಳ ಮಧ್ಯೆ ಎಲ್ಲಿಯೋ ಇರಬೇಕು. ಈ ಸೀಮೆಗಳು ಸಾಕಷ್ಟು ದೂರವಿದ್ದು, ಊಹೆಯ ಮೂಲಕ ಅಡ್ಡತಿಡ್ಡ ಸರಿದಾಡಬಹುದು. ಡಾ. ಮಾಲ್ಕಮ್ ಆದಿಶೇಷಯ್ಯನವರು ಊರ್ಧ್ವ ಶ್ರೇಣಿಗಳಿಗೆ (ಶೇಕಡಾ 40) ಪ್ರಾಶಸ್ತ್ಯ ನೀಡಿದರೆ, ಊಹೆಯಲ್ಲಿ ಸಾಹಸಿಗರಾದ ಇತರರು ಶೇಕಡಾ 25–30 ಶ್ರೇಣಿಗೇ ಜೋತು ಬಿದ್ದಿದ್ದಾರೆ.

ಈ ಅಂದಾಜುಗಳು ಕಪ್ಪು ಆದಾಯಗಳ ನಿಕ್ಕಿ ಗಾತ್ರ ಕುರಿತು ಸಹಮತಿಸದಿದ್ದರೂ ಸಹ, ಆದಾಯಗಳು ಏರುತ್ತಿರುವ ವಿಕ್ಷೋಭಕಾರಕ ತಥ್ಯದ ಬಗ್ಗೆ ಸರ್ವರೂ ಸಹಮತಿಸಿದ್ದಾರೆ. ಗುಪ್ತಾ ಅವರು ಪುನಃ ನಾಟಕೀಯ ಅಂಕಿ ಸಂಖ್ಯೆ ನೀಡುತ್ತಾರೆ. ಅಂದರೆ, 1967–68 ಮತ್ತು 1976–77 ರ ಮಧ್ಯೆ ಕಪ್ಪು ಆದಾಯದ ಬೆಳವಣಿಗೆಯು ಪ್ರತಿಶತ 400. ಇತ್ತ ಚೋಪ್ರಾರ ಲೆಕ್ಕಾಚಾರಗಳು ಅದೇ ಕಾಲಕ್ಕೆ ಸಂಬಂಧಿಸಿದಂತೆ ಬೆಳವಣಿಗೆ ಪ್ರತಿಶತ 184 ಎಂದು ಸೂಚಿಸುತ್ತವೆ. ಈ ಬೆಳವಣಿಗೆಯ ಗಾತ್ರೀಯ ಸ್ವರೂಪದ ಪರಿಣಾಮಗಳು ಸ್ಪಷ್ಟವಿಲ್ಲದಿದ್ದರೂ ಸಹ, ಅದರ ಗುಣಾತ್ಮಕ ಪರಿಣಾಮಗಳ ವಿಷಯದಲ್ಲಿ ಹಾಗೇನಿಲ್ಲ. ಸಮಾನಾಂತರ ಅರ್ಥವ್ಯವಸ್ಥೆಯು ಸಾಕಷ್ಟು ಉಬ್ಬುತ್ತ ನಡೆದಿರುವ ಸತ್ಯವೇ ಅಸಂತೋಷವನ್ನು ಹೊರತಂದಿದೆ.

ಸಮಾನಾಂತರ ಅರ್ಥವ್ಯವಸ್ಥೆಯ ಅಸ್ತಿತ್ವದ ಹಿಂದಿರುವ ಕಾರಣಗಳು :

ಭಾರತವು ಸ್ವಾತಂತ್ರ್ಯ ಯುಗದಲ್ಲಿ ಪ್ರವೇಶಿಸಿದಾಗಿನ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯಗಳಲ್ಲಿ ಇಂದಿನ ಸಮಾನಾಂತರ ಅರ್ಥವ್ಯವಸ್ಥೆಯ ಬೇರುಗಳನ್ನು ಕೆದಕಬಹುದು. ಬ್ರಿಟಿಶರ ಆಳ್ವಿಕೆಯಲ್ಲಿ ಕೆಲವು ಕಬ್ಬಿಣ ಮತ್ತು ಉಕ್ಕು, ಜವಳಿ ಉದ್ದಿಮೆಗಳು ಸಾಕಷ್ಟು ಬೆಳೆದಿದ್ದರೂ ಸಹ, ಅರ್ಥವ್ಯವಸ್ಥೆಗೆ ವಿಸ್ತಾರ ಹಾಗೂ ಭದ್ರತೆಗಳನ್ನೊದಗಿಸುವ, ಚಿಕ್ಕ ಪ್ರಮಾಣದ ಉದ್ದಿಮೆಗಳ ವಿಸ್ತೃತ ಜಾಲವನ್ನು ವ್ಯವಸ್ಥಿತವಾಗಿ ಹಾಳುಗೆಡವಿದ್ದರು. ಅವು ವಸಾಹತುಗಳ ಶೋಷಣೆಯ ಬ್ರಿಟನ್ನಿನ ಧೋರಣೆಗೆ ಬಲಿಯಾಗಿದ್ದವು. ಅದೇ ಕಾಲಕ್ಕೆ ಭಾರತೀಯ ಸಮಾಜವು ಸಂಪತ್ತು ಮತ್ತು ಅವಕಾಶಗಳ ತೀವ್ರ ವಿಷಮತೆಯಲ್ಲಿ ಆಳವಾಗಿ ಸೀಳಿ ಹೋಗಿತ್ತು. ಹೀಗಾಗಿ, ನೆಹರೂ ಸರಕಾರವು ಬಹುಮುಖೀ ಉದ್ದಿಮೆಯನ್ನು ಹುಟ್ಟುಹಾಕುವ ಹಾಗೂ ಸರ್ವ ನಾಗರಿಕರಿಗೆ ಜೀವನದ ಅತ್ಯಗತ್ಯಗಳನ್ನು ಒದಗಿಸುವ ಉಭಯ ಆಹ್ವಾನವನ್ನೆದುರಿಸಿತ್ತು.

ಸಕಾಲದಲ್ಲಿ ಈ ಧ್ಯೇಯ ಸಾಧನೆಯನ್ನು ಕೃತಕೃತ್ಯಗೊಳಿಸಲು ಪೇಟೆ – ಕಾರ್ಯ ವಿಧಾನವು ಸಮರ್ಥವಿಲ್ಲವೆಂದು ಮನಗಂಡು, ನೆಹರು ಸಮಾಜವಾದಿ ಕಾರ್ಯಕ್ರಮದತ್ತ ತಿರುಗಿದರು. ಇದರ ಮೇರೆಗೆ, ಕಲ್ಯಾಣಮಯೀ ಸರಕಾರವು ಅರ್ಥವ್ಯವಸ್ಥೆಯ ಕ್ರಿಯಾ ಕಲಾಪದಲ್ಲಿ ಪ್ರವೇಶಿಸಬಹುದಾಗಿದೆ. ಆದಾಯದ ವಿಷಮತೆಗಳನ್ನು ತಗ್ಗಿಸಲು ಸ್ಫುಟವಾದ, ಪ್ರಗತಿಪರ ಕರಾಕರಣೆ ಸಂರಚನೆಯನ್ನು ಜಾರಿಗೊಳಿಸಲಾಯಿತು. ಇನ್ನು ಬಡಜನತೆ ಕೂಡಲೇ ಜೀವನಾವಶ್ಯಕ ವಸ್ತುಗಳನ್ನು ಪಡೆಯುವುದನ್ನು ಖಚಿತಪಡಿಸಲು ದರ ನಿಯಂತ್ರಣ ಹಾಗೂ ಪಡಿತರ ವಿತರಣೆಗಳನ್ನು ಆರಂಭಿಸಿದರು. ನಿಯಂತ್ರಿತ ಬೆಲೆಗಳನ್ನು ಕಾಪಾಡಲು ಆಧಾರ

ಭೂತವಾದ ಸಾಕಷ್ಟು ಸಂಗ್ರಹವನ್ನು, ಆಂತರಿಕವಾಗಿ ನಿಯಂತ್ರಿತ ಸರಕುಗಳನ್ನು ಖರೀದಿಸುವ ಮೂಲಕ ಮತ್ತು ಅಗತ್ಯ ಬಿದ್ದರೆ ಆಮದು ಮಾಡಿಕೊಳ್ಳುವ ಮೂಲಕ, ಮಾಡಲಾಯಿತು. ಇನ್ನು ಕೊನೆಯದಾಗಿ, ಉತ್ಪಾದಕ ಸಂಪನ್ಮೂಲಗಳನ್ನು ತೊಡಗಿಸುವ ಸಲುವಾಗಿ ವಿವಿಧ ರಂಗಗಳಲ್ಲಿ ತೊಡಗಿಸುವ ಹಣದ ಮೊತ್ತದ ಮೇಲಿನ ಮಿತಿ ವಿಧಿಸುವುದೂ ಸಹ ಸೇರಿದಂತೆ ಹಲವಾರು ಕ್ರಮಗಳನ್ನು ಕೈಕೊಳ್ಳಲಾಯಿತು. ಈ ಧೋರಣೆಗಳು ಸ್ವಲ್ಪ ಯಶಸ್ಸನ್ನು ಪಡೆದವು. ಆದರೆ, ಅವು ಸಮಾನಾಂತರ ಅರ್ಥ ವ್ಯವಸ್ಥೆಯೆಂಬ ನೂತನ ಹಾಗೂ ಹೆಚ್ಚು ವಿಸ್ತೃತ ದುರಂತವನ್ನು ಹಬ್ಬಿಸಿದವು.

1. ಬೆಲೆ ಹಾಗೂ ಪರಿಮಾಣ ನಿಯಂತ್ರಣ :

ಬೆಲೆ (ಮತ್ತು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಪರಿಮಾಣ) ನಿಯಂತ್ರಣಗಳು ವ್ಯಾಪಕವಾಗಿ ಜನಜನಿತವಾದ ಕಾಯದೆ ವಿರೋಧಿ ಚಟುವಟಿಕೆಯ ಮೂಲಗಳಾಗಿವೆ. ತಥ್ಯಾಂಶವೆಂದರೆ, 'ಕಪ್ಪು' ಪದವು ನಿಯಂತ್ರಿತ ಪೇಟೆಯಲ್ಲಿಯ ಕಾನೂನುಬಾಹಿರ ಚಟುವಟಿಕೆಗೆ ಸಂಬಂಧಿಸಿದಂತೆ ಮೂಡಿಬಂದಿದೆ. ನಿಯಂತ್ರಣಗಳ ಹಾಗೂ ಬಚ್ಚಿಟ್ಟ ವ್ಯವಹಾರಗಳ ಕೊಂಡಿಯು ಎಲ್ಲರಿಗೂ ತಿಳಿದಿದ್ದು ಹೆಚ್ಚಿನ ವಿವರಣೆ ಬೇಕಿಲ್ಲ. ತೀರ ಸರಳವಾಗಿ ಹೇಳುವುದಾದರೆ, ನಿಯಂತ್ರಿತ ದರವು ಪೇಟೆಯ ನಿಗದಿತ ದರಕ್ಕಿಂತ ಕಡಿಮೆ ಇರುವಾಗ, ಮಾರಾಟಗಾರನು ಸರಕಿನ ಕೃತ್ರಿಮ ಅಭಾವ ಹುಟ್ಟಿಸುವ ಪ್ರಚೋದನೆ ಪಡೆಯುತ್ತಾನೆ. ಹೆಚ್ಚಿನ ದರ ನೀಡುವಂತೆ ಅವನು ಗ್ರಾಹಕನನ್ನು ವಿವಶಗೊಳಿಸಿ ಶೋಷಿಸಬಯಸುತ್ತಾನೆ. ಒಂದು ವೇಳೆ ಗ್ರಾಹಕರು ತಾಳ್ಮೆಗೆಟ್ಟಿದ್ದರೆ, ನಿಯಂತ್ರಿತ ಬೆಲೆಗೇ ಕೊಳ್ಳುವ ತಮ್ಮ ಕಾಯಿದೆಬದ್ಧ ಹಕ್ಕನ್ನು ಬದಿಗಿಡುತ್ತಾರೆ. ಮತ್ತು ಪೇಟೆಯ ಖರಿಸಿದ ಧಾರಣೆಯಲ್ಲಿ ಕೊಳ್ಳುವ ಹಿಂಬಾಗಿಲಿನ ವ್ಯವಹಾರಕ್ಕೆ ಸಮ್ಮತಿಸುತ್ತಾರೆ.

ಇಂದು ಭಾರತದಲ್ಲಿ ರಾಷ್ಟ್ರಾದ್ಯಂತ ಪ್ರಚಲಿತವಿರುವ ಆವಶ್ಯಕ ಸರಕುಗಳ ಪಡಿತರ ವಸ್ತು ವಿತರಣೆಯ ಬೆಲೆ ಹಾಗೂ ಪರಿಮಾಣ ನಿಯಂತ್ರಣಗಳು ಕಪ್ಪು ವ್ಯವಹಾರ ಹುಟ್ಟುಹಾಕುವುದಕ್ಕೆ ತಕ್ಕ ನಿದರ್ಶನವಾಗಿವೆ. ಈ ಕಾರ್ಯಕ್ರಮದಡಿ ಪ್ರತಿಯೊಂದು ಕುಟುಂಬವು ಪೇಟೆ ದರಗಳಿಗಿಂತ ಕಡಿಮೆ ದರದಂತೆ, ಕೆಲವು ಪೂರ್ವನಿಗದಿತ ಪರಿಮಾಣದ ಸರಕನ್ನು ಪಡೆದುಕೊಳ್ಳಲು ಅರ್ಹವಾಗಿದೆ. ಸರಕಾರವು ಈ ಸರಕುಗಳನ್ನು ಸಂಗ್ರಹಿಸುತ್ತದೆ. ಮತ್ತು ಲೈಸನ್ಸ ಪಡೆದ ವ್ಯಾಪಾರಿಗಳ ಮೂಲಕ ವಿತರಿಸುತ್ತದೆ. ಇವರು ಇತ್ತ ಬಹುತೇಕ ಪೇಟೆ ದರಗಳಂತೆ ಅವೇ ಸರಕುಗಳಲ್ಲಿ ವ್ಯವಹರಿಸುತ್ತಾರೆ. ಪ್ರತಿ ತಿಂಗಳ ಆರಂಭದಲ್ಲಿ, ಈ ವ್ಯಾಪಾರಿಗಳು ಸರಕಾರದಿಂದ ನಿಯಂತ್ರಿತ ಬೆಲೆಯಲ್ಲಿ ಸರಕು ಕೊಳ್ಳುತ್ತಾರೆ. ಆನಂತರ ಇವುಗಳನ್ನು ನಿಯಂತ್ರಿತ ಬೆಲೆಗೆ ಪಡಿತರ ಕಾರ್ಡಧಾರಿಗಳಿಗೆ ವಿತರಿಸಬೇಕೆಂದು ಗ್ರಹಿಸಲಾಗಿದೆ. ಆದರೆ ವಾಸ್ತವವಾಗಿ ನಡೆಯುವುದು ಇದಕ್ಕೆ ತೀರ ಭಿನ್ನ. ಮಾರಾಟಗಾರರು ಸರಕಾರಿ ಪೂರ್ಕೆಗಳ ಮೊತ್ತವನ್ನು ಹತ್ತಿಕ್ಕುತ್ತಾರೆ. ಕಾರ್ಡುಧಾರರಿಗೆ, "ಸರಕು ಇನ್ನೂ ಬಂದೇ ಇಲ್ಲ" ಎಂದು ಹೇಳಿ ಅವರನ್ನು ಮರಳಿ ಕಳಿಸುತ್ತಾರೆ. ಸಾಮಾನ್ಯವಾಗಿ ಈ ಸರಕುಗಳು ಅಕ್ಕಿ, ಗೋದಿ ಮತ್ತು ಸಕ್ಕರೆಗಳಂಥ ಅವಶ್ಯಕ ಸರಕುಗಳಾಗಿರುವುದರಿಂದ ಗ್ರಾಹಕರು ಸಹಿಸುವುದು ತೀರ ಕಡಿಮೆ.

ಅನುಕೂಲವಿದ್ದವರು ಅವುಗಳನ್ನು ಅನೇಕ ಬಾರಿ ಅದೇ ವ್ಯಾಪಾರಿಗಳಿಂದ ಯಾವುದೇ ಮಾರಾಟ ಪಾವತಿ ಇಲ್ಲದೆ, ಪೇಟೆ ದರದಲ್ಲಿ ಖರೀದಿಸುತ್ತಾರೆ. ರಶೀದಿ ಕೇಳುವುದೆಂದರೆ ವ್ಯಾಪಾರಿಯ ಕಡುಕೋಪಕ್ಕೆ ಔತಣ ನೀಡಿದಂತೆ; ಎಂಬುದನ್ನು ನಗರವಾಸಿಗಳು ಚೆನ್ನಾಗಿ ಅರಿತಿದ್ದಾರೆ. ಆನಂತರ ವ್ಯಾಪಾರಿಯು ಆ ವ್ಯವಹಾರಗಳನ್ನು ನಿಯಂತ್ರಿತ ಬೆಲೆಯಲ್ಲಿಯೇ ಮಾರಾಟ ದಸ್ತಾವೈಜಿನಲ್ಲಿ ದಾಖಲಿಸುತ್ತಾನೆ. ಈ ಲೆಕ್ಕ ಹಾಗೂ ಪೇಟೆ ಧಾರಣೆಯ ಪ್ರಕಾರದ ಲೆಕ್ಕಗಳ ಅಂತರವು ಅವನ ಕಪ್ಪು ಆದಾಯವೆನಿಸುತ್ತದೆ. ಪೇಟೆ ಧಾರಣೆ ಕೊಡಲಾರದ ಗ್ರಾಹಕನ ಗತಿಯೇನು? ಅವನ ಮಟ್ಟಿಗೆ ಪಡಿತರ ವ್ಯವಸ್ಥೆಯು ಇದ್ದೂ ಇಲ್ಲದಂತೆಯೇ ಸರಿ.

ವಿತರಣೆಯ ಅಂಗಡಿಯು ಇದಕ್ಕಾಗಿಯೇ ಮೀಸಲಾದ ಸರಕಾರಿ ಅಂಗಡಿಯಾಗಿದ್ದರೂ ಸಹ, ಸ್ಥಳೀಯ ವ್ಯಾಪಾರಿಗಳು ಇಂಥ ಅಂಗಡಿಗಳ ವ್ಯವಸ್ಥಾಪಕರನ್ನು ಕೃತ್ರಿಮ ಅಭಾವ ಹುಟ್ಟಿಸುವಂತೆ ಕೈ ಬೆಚ್ಚಗೆ ಮಾಡುತ್ತಾರೆ. ಆದಕ್ಕಾಗಿ ಆಕರ್ಷಕ ಬಹುಮಾನದ ಬಲೆ ಬೀಸುತ್ತಾರೆ. ವ್ಯವಸ್ಥಾಪಕರು ಪುನಃ ಪುನಃ ಬಲೆಯಲ್ಲಿ ಬೀಳುತ್ತಾರೆ. ಸಾಮಾನ್ಯವಾಗಿ ನಿಯಂತ್ರಣದ ಬೆನ್ನಟ್ಟಿ ಬರುವ ನೌಕರಶಾಹೀ ಭ್ರಷ್ಟಾಚಾರದ ವಿಸ್ತೃತ ಸಮಸ್ಯೆಯ ಕೇವಲ ಒಂದು ಅಂಶವಾಗಿದೆ; ಈ ನೀತಿ ಪತನ.

ಭಾರತದಲ್ಲಿ ಪ್ರಚಲಿತವಿರುವ ವಿಸ್ತೃತ ಪೇಟೆ ನಿಯಂತ್ರಣಗಳ ಕೇವಲ ಒಂದು ಉದಾಹರಣೆಯೇ ಈ ಪಡಿತರ ವ್ಯವಸ್ಥೆ. ಅನ್ವಯಿತ ಅರ್ಥಶಾಸ್ತ್ರೀಯ ಸಂಶೋಧನದ ರಾಷ್ಟ್ರೀಯ ಮಂಡಳಿಯು ಇತ್ತೀಚೆಗೆ ಅಂದಾಜಿಸಿದ ಮೇರೆಗೆ, ಯುರಿಯಾ, ಸಿಮೆಂಟು, ಕಾಗದ, ಉಕ್ಕು ಹಾಗೂ ವಾಹನಗಳ ಟೈರುಗಳು ಹಾಗೂ ಖಾದ್ಯತೈಲ ಎಂಬ ಆರು ಸರಕುಗಳ ಬೆಲೆ ನಿಯಂತ್ರಣದಿಂದ ಉಂಟಾದ ಕಪ್ಪು ಹಣದ ಮೊತ್ತವು 1965 ರಿಂದ 1976 ರ ಅವಧಿಯಲ್ಲಿ ಸುಮಾರು 840 ಕೋಟಿ ರೂಪಾಯಿಗಳಷ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಜಾರಿಗೊಳಿಸಿದ ಸಿಮೆಂಟ ನಿಯಂತ್ರಣದ ಇತಿಹಾಸವಂತೂ ಸಮಾನಾಂತರ ಅರ್ಥವ್ಯವಸ್ಥೆಯ ಇನ್ನೊಂದು ನಿದರ್ಶನವಾಗಿದೆ. ಮತ್ತು ಅದೇ ಕಾಲಕ್ಕೆ ಈ ಅರ್ಥವ್ಯವಸ್ಥೆಯನ್ನು ಹೇಗೆ ಕಡಿತ ಮಾಡಬೇಕೆಂಬ ಸಲಹೆಯನ್ನೂ ಅದು ಒದಗಿಸುತ್ತದೆ. ಮುಕ್ತ ಪೇಟೆಯ ದರವು ನಾಲ್ಕು ಪಟ್ಟು ಹೆಚ್ಚಾಗಿದ್ದರೂ ಸಹ 1982 ರ ವರೆಗೆ ಸಿಮೆಂಟಿನ ಪೇಟೆ ದರವನ್ನು 28 ರೂಪಾಯಿಗೆ ನಿಯಂತ್ರಿಸಲಾಗಿತ್ತು. ಆದರೇನು? ನಿಯಂತ್ರಿತ ಬೆಲೆಯಲ್ಲಿ ಸಿಮೆಂಟ ಪಡೆಯಲು ಕಟ್ಟಡ ನಿರ್ಮಾಪಕರು ತಿಂಗಳುಗಟ್ಟಲೆ ಕಾಯಬೇಕಾಗುತ್ತಿತ್ತು. ಮನೆಗಳಿಗಾಗಿ ಪಾವತಿಸುವ ಮುಂಗಡ ಹಣವನ್ನು ಕಪ್ಪು ಹಣದ ರೂಪದಲ್ಲಿ ನೀಡಲು ಅವರು ಒತ್ತಾಯಿಸುತ್ತಿದ್ದರು. ಈ ಹಣವನ್ನವರು ಕಪ್ಪು ಪೇಟೆಯಲ್ಲಿ ಸಿಮೆಂಟ ಖರೀದಿಗಾಗಿ ಬಳಸುತ್ತಿದ್ದರು. ಹೀಗೆ ಮಾಡುವುದರಿಂದ ಸರಕು ತತ್ಕ್ಷಣವೇ ಸಿಗುತ್ತಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಹೀಗಾಗಿ ದೇಶದಲ್ಲಿ ಕಪ್ಪು ಹಣದ ಪ್ರವಾಹಕ್ಕೆ ಕಟ್ಟಡಗಳು ಮುಖ್ಯ ವಾಹಕಗಳಾಗಿದ್ದವು. 1982 ರಲ್ಲಿ ನಿಯಂತ್ರಿತ ಬೆಲೆಯ ಅಸಡ್ಡಾಳತೆಯನ್ನು ಗುರುತಿಸಿದ ಸರಕಾರ, ದರ ನಿರ್ಧಾರದ ದ್ವಿಮುಖ ನೀತಿ ಅನುಸರಿಸಿತು. ಇದರ ಪರಿಣಾಮವಾಗಿ ಔಪಚಾರಿಕ ಅಂದಾಜು ಮಾಡಿರದಿದ್ದರೂ ಸಹ ಸಿಮೆಂಟಿನ ಕಪ್ಪು ವ್ಯವಹಾರಗಳು ಏರಿದವೆಂದೇ ಸಾಮಾನ್ಯವಾಗಿ ನಂಬಲಾಗಿದೆ.

2. ಕರಗಳು :

ಸಮಾನಾಂತರ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಹೊಣೆಯಾದುದೆಂದು ವ್ಯಾಪಕವಾಗಿ ಉಲ್ಲೇಖಿತವಾದ ಇನ್ನೊಂದು ಅಂಶವೆಂದರೆ, ತೀವ್ರ ಪ್ರಗತಿಪರ ಕರ ಸಂರಚನೆ. ಇದರನ್ವಯ 1972 ರ ವರೆಗಿನ ಹೆಚ್ಚಿನ ಮಿತಿಯ ಕರಾಕರಣೆಯ ಕೊನೆಯ ಹಂತದ ದರವು ಶೇಕಡಾ 97.75 ರಷ್ಟು ಎತ್ತರದ ಮಟ್ಟದಲ್ಲಿತ್ತು. ಈಗಲೂ ಸಹ, ಅದು ಸುಮಾರು ಶೇಕಡಾ 65 ರಷ್ಟಿದೆ. ಕೆಲವು ವಿಶ್ಲೇಷಣಕಾರರು, ಕಪ್ಪು ಹಣದ ಮೂಲವೆಂದು ಈ ಅಂಶದ ಮೇಲೆ ಬಹಳಷ್ಟು ಒತ್ತು ಕೊಡುತ್ತಾರೆ. ಸಮಾನಾಂತರ ಅರ್ಥವ್ಯವಸ್ಥೆಯನ್ನವರು ಕರ ತಪ್ಪಿಸುವಿಕೆಯ ಪ್ರಮಾಣವೆಂದೇ ವ್ಯಾಖ್ಯಾನಿಸುತ್ತಾರೆ. ಕರ ತಪ್ಪಿಸುವಿಕೆ ಹಾಗೂ ಸಮಾನಾಂತರ ಅರ್ಥವ್ಯವಸ್ಥೆಯ ಸಂಬಂಧವು ಸುಸ್ಪಷ್ಟವಾಗಿದೆ. ಮೇಲ್ವರ್ಗದ ಜನರನ್ನೇ ತೆಗೆದುಕೊಳ್ಳಿರಿ. ಶೇಕಡಾ 65 ಹೆಚ್ಚಿನ ಕರಾಕರಣೆಯ ದರದ ಮೇಲಿಂದ, ಮುಚ್ಚಿಟ್ಟ ಆದಾಯವು ಪ್ರಾಮಾಣಿಕವಾಗಿ ದಾಖಲಿಸಿದ ಕರಾಕರಣ ನಂತರದ ಆದಾಯದ ಅಜಮಾಸು ಮೂರು ಪಟ್ಟು ಆಗುತ್ತದೆ. ಇನ್ನು 1972 ರ ಪೂರ್ವದಲ್ಲಿ ಪ್ರಚಲಿತವಿದ್ದ ಶೇಕಡಾ 97.75 ಕರಾಕರಣೆಯ ದರದ ಮೇಲಿಂದ ಮುಚ್ಚಿಟ್ಟ ಆದಾಯವು ಪ್ರಾಮಾಣಿಕವಾಗಿ ದಾಖಲಿಸಿದ ಆದಾಯದ 40 ಪಟ್ಟು ಆಗುತ್ತದೆ. ಮುಚ್ಚಿಡಲು ಪ್ರಚೋದಕವಾದ ಅಂಶ ತುಂಬಾ ಪ್ರಬಲವಾಗಿದೆ. ಹೆಚ್ಚು ಹೆಚ್ಚು ಕರ ಹೇರಿದಂತೆ ಕರ ತಪ್ಪಿಸುವಿಕೆಯ ಚೋದನೆಯೂ ಉಂಟಾಗುತ್ತದೆ. ಅರ್ಥಾತ್ ರಸೀದಿ ನೀಡದೆ ವಹಿವಾಟು ನಡೆಯುತ್ತದೆ. ಹೀಗಾಗಿ ಪ್ರತಿಯೊಂದು ಮುಚ್ಚುಮರೆಯ ಹಣ ಸ್ವೀಕೃತಿಯು ಪರ್ಯಾಯ ಅರ್ಥವ್ಯವಸ್ಥೆಯ ಗಾತ್ರವನ್ನು ಹಿಗ್ಗಿಸುತ್ತದೆ.

ಸರಕಾರಿ ಹಾಗೂ ವ್ಯಾಪಾರೋದ್ದಿಮಗಳ ಸಂಬಳ ಪಡೆಯುವ ಸ್ಥಾನಗಳನ್ನು ಹೊರತು ಪಡಿಸಿ – ಏಕೆಂದರೆ, ಇವುಗಳ ವಿಷಯದಲ್ಲಿ ಕರವನ್ನು ಮೂಲದಲ್ಲಿಯೇ ಮುರಿದು ಕೊಳ್ಳುತ್ತಾರೆ. – ಇನ್ನಿತರ ಆದಾಯಜನಕ ಚಟುವಟಿಕೆಗಳೆಲ್ಲವುಗಳಲ್ಲಿ ಕರ – ತಪ್ಪಿಸುವಿಕೆಗೆ ಅವಕಾಶವಿದೆ. ಉದಾಹರಣೆಗೆ ಹೊಲಗದ್ದೆಗಳ ಹುಟ್ಟುವಳಿಯ ಮೌಲ್ಯನಿರ್ಧಾರದಲ್ಲಿರುವ ಅಸಂಖ್ಯಾತ ತೊಂದರೆಗಳಿಂದಾಗಿ ಕಳೆದ ನಲವತ್ತು ವರ್ಷಗಳಿಂದ ಬೇಸಾಯ ರಂಗವು ಕರಾಕರಣೆಯಿಂದ ಹೊರಗುಳಿದಿದೆ. ಅದೇ ರೀತಿ, ವಕೀಲರು ಹಾಗೂ ವೈದ್ಯರಂಥ ವೃತ್ತಿಪರರು, ತಮ್ಮ ಸೇವೆಗೆ ರೋಖು ಹಣ ನೀಡುವಂತೆ ಒತ್ತಾಯಿಸಿ ತಮ್ಮ ಆದಾಯವನ್ನು ಬಚ್ಚಿಡುತ್ತಾರೆ. ಅವರು ಮಾಡುತ್ತಿರುವ ಖರ್ಚು ವೆಚ್ಚಗಳನ್ನು ಕಾಳಜಿಪೂರ್ವಕ ಪರಿಶೋಧಿಸಿದರೆ, ಅವರ ವೆಚ್ಚ ಹಾಗೂ ಸಾರುವ ಆದಾಯಗಳಲ್ಲಿಯ ಅಸ್ತವ್ಯಸ್ತತೆಯನ್ನು ಹೊರಗೆಡವಬಹುದು. ಆದರೆ ಎಲ್ಲ ವೃತ್ತಿಪರರ ವಿಷಯದಲ್ಲಿ ಈ ರೀತಿ ನಿಯಮಿತ ಪರಿಶೋಧನೆ ಕೈಕೊಳ್ಳುವುದು ಅಧಿಕಾರಿಗಳಿಗೆ ಕಾರ್ಯಸಾಧ್ಯವಾಗದ ಮಾತೆಂಬುದು ಸುಸ್ಪಷ್ಟ.

ವಾಣಿಜ್ಯ ಸಂಸ್ಥೆಗಳಲ್ಲಾಗಲಿ ಇಲ್ಲವೆ ಚಿಕ್ಕ ವ್ಯವಹಾರಸ್ಥರಲ್ಲಾಗಲಿ ಇರುವ ಪರಿಸ್ಥಿತಿಯಲ್ಲಿ ವಿಶೇಷ ಅಂತರವೇನಿಲ್ಲ. ಭಾರತದಲ್ಲಿಯ ಬಹುತೇಕ ಅಂಗಡಿಕಾರರು ಹಾಗೂ ವ್ಯವಹಾರಸ್ಥರು ಸಿಂಗಲ ಎಂಟ್ರಿ ಲೆಕ್ಕ ಪದ್ಧತಿಯನ್ನೇ ಇನ್ನೂ ಅನುಸರಿಸುತ್ತಾರೆ. ಈ ಪದ್ಧತಿಯಲ್ಲಿರುವ ಸೂಕ್ಷ್ಮಗಳನ್ನವರು ಡಬಲ್ ಎಂಟ್ರಿ ವ್ಯವಸ್ಥೆಯಲ್ಲಿ ತರಬೇತಿ ಪಡೆದಿರುವ,

ನಿಮ್ನ ಶ್ರೇಣಿಯ ಪರಿವೀಕ್ಷಕರಿಗಿಂತ ಬಹಳ ಚೆನ್ನಾಗಿ ತಿಳಿದಿರುತ್ತಾರೆ. ಇದರಿಂದ, ಪತ್ತೆಯಾಗದಂತೆ, ರಸೀದಿಗಳನ್ನು ಬಚ್ಚಿಡುವ ಅವರ ಸಾಮರ್ಥ್ಯವು ವರ್ಧಿಸುತ್ತದೆ. ಅಶ್ಯಂತ ಮಹತ್ವದ ಸಂಗತಿಯೆಂದರೆ, ಉಭಯ ಪಕ್ಷದವರು, ವ್ಯವಹಾರವನ್ನು ತಮ್ಮ ಲೆಕ್ಕದ ಪುಸ್ತಕಗಳಿಂದ ಅದುಮಿ ಬಿಟ್ಟರೆ, ಅವುಗಳ ಅಸ್ತಿತ್ವವನ್ನು ಕಂಡು ಹಿಡಿಯುವುದು ಕರಾಕರಣೆ ಅಧಿಕಾರಿಗಳಿಗೆ ಬಹುಶಃ ಅಸಾಧ್ಯವೇ ಸರಿ.

ನಾವೀಗ ಆದಾಯಕರಗಳನ್ನು ಕುರಿತು ಚರ್ಚಿಸುತ್ತಿದ್ದರೂ ಸಹ, ಇದೇ ವಾದ ಸರಣಿಯನ್ನು ಆಸ್ತಿಕರ ಹಾಗೂ ಒಳ ದೇಶದ ಸುಂಕಗಳಿಗೂ ಸುಲಭವಾಗಿ ಅನ್ವಯಿಸಬಹುದು. ಆಮದು ಕರ ಹಾಗೂ ಸುಂಕದ ಪಟ್ಟಿಗಳು ಇವುಗಳಿಗಿಂತ ಭಿನ್ನ. ಏಕೆಂದರೆ ಅವು ಕೇವಲ ಆದಾಯ ಬಚ್ಚಿಡುವುದನ್ನಷ್ಟೇ ಅಲ್ಲದೇ ಅಂತರಿಕವಾಗಿಯೇ ಕಾಯದೆ ವಿರುದ್ಧವಾದ ಚಟುವಟಿಕೆಯನ್ನು ಹುಟ್ಟು ಹಾಕುತ್ತವೆ. ಕೆಲವೊಮ್ಮೆ ಸುಂಕದ ದರಗಳು ಆಮದು ದರಗಳ ಶೇಕಡಾ 320 ರಷ್ಟು ಹೆಚ್ಚಾಗಿರುವುದರಿಂದ ಸುಂಕ ಪಟ್ಟಿಯು ಸಂರಕ್ಷಿತ ವಲಯಗಳನ್ನು ವಾಸ್ತವದಲ್ಲಿ ಘಾಸಿಗೊಳಿಸುತ್ತದೆ. ಅವು ದೇಶೀಯ ಉದ್ದಿಮೆಗಳನ್ನು ಬಲಪಡಿಸದೇ, ಕೇವಲ ಸಡಿಲುತನಕ್ಕೆ ಇಂಬುಗೊಡುತ್ತವೆ. ನಿಷ್ಠುರ ಅಂತರ್ರಾಷ್ಟ್ರೀಯ ಸ್ಪರ್ಧೆಯ ಒತ್ತಡದಿಂದ ಮುಕ್ತವಾದ ದೇಶೀಯ ಉತ್ಪಾದಕರು ಸುರಕ್ಷಿತವಾದ ಮಧ್ಯಮ ಮಟ್ಟದಲ್ಲಿ ನೆಲೆಗೊಂಡಿದ್ದಾರೆ. ಇತ್ತ ಗ್ರಾಹಕರು ಉನ್ನತ ಮಟ್ಟದ ಸ್ಥಳೀಯ ಸರಕಿಗಾಗಿ ಪರದಾಡಿ ಹೈರಾಣಾಗಿದ್ದಾರೆ. ಆದರಿಂದ ವಿದೇಶಿ ವಸ್ತುಗಳಿಗಾಗಿ ತಡಕಾಡುತ್ತಿದ್ದಾರೆ. ವಿದೇಶಿ ವಸ್ತುಗಳ ಅವ್ಯಕ್ತ ಬೇಡಿಕೆಯ ಪ್ರಾಬಲ್ಯದ ಹೆಬ್ಬುವಿಕೆ ಒಂದೆಡೆ ಹಾಗೂ ಕಾಯಿದೆಬದ್ಧ ಪೇಟೆಯಲ್ಲಿ ಅವುಗಳು ಗಿಟ್ಟಿಸುವ ದರಗಳು ಇನ್ನೊಂದೆಡೆ ಸೇರಿ ಕಳ್ಳ ಸಾಗಾಣಿಕೆದಾರರನ್ನು, ಸುಂಕ ಪ್ರಕ್ರಿಯೆಯನ್ನು ಬದಿಗೆ ತಳ್ಳಿ, ಈ ಸರಕುಗಳನ್ನು ಕಾಯಿದೆ ವಿರೋಧವಾಗಿ ತರುವ ಸಾಹಸಕ್ಕೆಳಿಸುತ್ತವೆ. ಆದಾಯ ದರ ತಪ್ಪಿಸುವಲ್ಲಿಯಂತೆಯೇ ಸುಂಕದ ದರ ತಪ್ಪಿಸುವದಕ್ಕೂ ಸಹ ಸಾಕಷ್ಟು ಅವಕಾಶವಿದೆ. ಏಕೆಂದರೆ, ಭಾರತವು ಮೂರು ದಿಕ್ಕಿನಲ್ಲಿ ಜಲಾವೃತವಾದ ದ್ವೀಪಕಲ್ಪವಾಗಿದ್ದು, ವಿಶಾಲವಾದ ಸಮುದ್ರ ದಂಡೆ ಹೊಂದಿದೆ. ಮೇಲಾಗಿ ಕಳ್ಳಸಾಗಾಣಿಕೆದಾರರು ಸರಕು ಇಳಿಸಿಕೊಳ್ಳುವ ಎಲ್ಲ ಜಾಗೆಗಳಲ್ಲಿಯೂ ಪರಿಣಾಮಕಾರಿಯಾಗಿ ಗಸ್ತಿ ತಿರುಗುವುದು ಕಾರ್ಯಸಾಧ್ಯವಾಗದು. ಗಡಿ ಸೀಮೆಯಲ್ಲಿ ಗಸ್ತಿ ತಿರುಗುವುದನ್ನು ಹೆಚ್ಚು ಮಾಡಿದ್ದರೂ ಸಹ ಕಳ್ಳಸಾಗಾಣಿಕೆಯು ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಸಮಾರೋಪಿಸಿ ಹೇಳುವುದಾದರೆ, ಕಳೆದ ನಲವತ್ತು ವರ್ಷಗಳಲ್ಲಿ ಕರಾಕರಣೆ ಮತ್ತು ಸುಂಕಗಳ ಸರಕಾರಿ ಧೋರಣೆಗಳು ಹುಟ್ಟು ಹಾಕಿದ ಪರಿಸ್ಥಿತಿಯಲ್ಲಿ, ಅನೇಕ ವ್ಯವಹಾರಗಳನ್ನು ಕಾಯದೆಬದ್ಧ ರಂಗದಿಂದ ಸಮಾನಾಂತರ ಅರ್ಥವ್ಯವಸ್ಥೆಗೆ ತಳ್ಳುವಂಥ ಪ್ರಚೋದನೆಗಳೂ ಇವೆ; ಜೊತೆಗೆ ಅವಕಾಶಗಳೂ ಒದಗಿಬರುತ್ತಿವೆ.

3. ಭ್ರಷ್ಟಾಚಾರ ಮತ್ತು, ನೈತಿಕ ಮೌಲ್ಯಗಳ ಅಧಃಪತನ

ಪ್ರಾಮಾಣಿಕತೆ ಹಾಗೂ ನಾಗರಿಕ ಹೊಣೆಗಾರಿಕೆಗಳಿಗಿಂತ, ಸ್ವಂತದ ಬೇಳೆ ಬೇಯಿಸಿಕೊಳ್ಳುವುದನ್ನೇ ಮೇಲಿರಿಸುವ ಪ್ರವೃತ್ತಿಯು ಬಹುಶಃ ಜಗತ್ತಿನ ಮಾನವನ

ದುರ್ಬಲತೆಯಾಗಿದೆ. ಅದೇನೋ ಭಾರತದ ನೀತಿ ನಿರೂಪಕರ ಕೈವಾಡವೇನಲ್ಲ. ಆದರೂ ಸಹ, ಈ ಪ್ರವೃತ್ತಿಯು ಉತ್ಕರ್ಷಿಸಿ ಈಗ ಭಾರತೀಯ ಸಮಾಜದ ಪ್ರತಿಯೊಂದು ಜನಶ್ರೇಣಿಯನ್ನು ಒಳಸೇರುವ ಮಟ್ಟ ತಲುಪಿರುವಂಥ ವಾತಾವರಣ ನಿರ್ಮಾಣಕ್ಕೆ ಅವರು ಹೊಣೆಗಾರರಾಗಿದ್ದಾರೆ. ಅಧಿಕಾರ – ಸತ್ತೆಯು ಈಗ ಪವಿತ್ರ ವಿಶ್ವಸ್ಥ ಮಂಡಳಿಯಾಗಿ ಉಳಿದಿಲ್ಲ. ಪ್ರತಿಯಾಗಿ ಕೊಡುಕೊಳ್ಳಬಹುದಾದ ಪೇಟೆಯ ಸರಕಿನಂತಾಗಿದೆ. ಈ ಪರಿವರ್ತನೆಯು ಏಕೆ ಆಯಿತಂಬುದನ್ನು ತಿಳಿಯಬೇಕಾದರೆ, ಈ 'ಸರಕನ್ನು' ಎತ್ತಿ ಹಿಡಿದಿರುವುದೇನು? ಎಂಬುದನ್ನು ತಿಳಿಯಬೇಕಾಗುತ್ತದೆ.

ಸರಕಾರವು ಆರ್ಥಿಕ ಚಟುವಟಿಕೆಗಳನ್ನು ಅಸಾಮಾನ್ಯ ಮಟ್ಟದಲ್ಲಿ ನಿಯಂತ್ರಿಸುವಲ್ಲಿ ಹಾಗೂ ನಿಯಮಬದ್ಧಗೊಳಿಸುವಲ್ಲಿ ಈ 'ಸರಕಿನ' ಬೇಡಿಕೆಯು ಮೊಳಕೆಯೊಡೆಯುತ್ತದೆ. ದರ ಮತ್ತು ಪರಿಮಾಣಗಳ ನಿಯಂತ್ರಣಗಳ ವ್ಯಾಪ್ತಿ ಕುರಿತು ನಾವೀಗಾಗಲೇ ಚರ್ಚಿಸಿದ್ದೇವೆ. ಇದಲ್ಲದೆ, ಸರಕಾರವು ಒಳ್ಳೇ ಬಿಗುವಿನಿಂದ, ತೊಡಗಿಸಬಹುದಾದ ಸಂಪನ್ಮೂಲಗಳ ಹಂಚಿಕೆಯನ್ನೂ ಸಹ ನಿಯಮನಗೊಳಿಸುತ್ತದೆ. ಅಸಂಖ್ಯಾತ ಕಾಯದೆ ಕಾನೂನುಗಳು ಬಂದು ನೌಕರಶಾಹಿ ಯಂತ್ರದ ಅಗತ್ಯವನ್ನುಂಟು ಮಾಡುತ್ತವೆ. ಏಕೆಂದರೆ, ಈ ಕಾಯ್ದೆ ಕಾನೂನುಗಳನ್ನು ಜಾರಿಗೊಳಿಸಬೇಕಾಗ ್ತದೆ ಮತ್ತು ರಕ್ಷಿಸಬೇಕಾಗುತ್ತದೆ. ನಿಯಂತ್ರಿತ ಪೇಟೆಯಲ್ಲಿ ಮಾರುವವರು, ನಿಮ್ನ ಪ್ರಾಶಸ್ ್ಯ ರಂಗಗಳಲ್ಲಿ ಸಂಭಾವ್ಯ ಹಣ ತೊಡಗಿಸಬಲ್ಲವರು; ಮತ್ತು ಸಾಧಾರಣವಾಗಿ ಸಕಲ ವ್ಯಾಪಾರಿ ಪ್ರತಿನಿಧಿಗಳು ಈ ಕಟ್ಟಳೆಗಳನ್ನು ಮೀರಿ ನಿಂತು, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಲಾಭ ಗಿಟ್ಟಿಸುತ್ತಾರೆ. ಉದಾಹರಣೆಯಂದರೆ, ಉದ್ದಿಮೆಯ ಲೈಸನ್ಸ್ ವಿಷಯದಲ್ಲಿ ಹಣ ತೊಡಗಿಸುವವನು, ತನಗೇ ಲೈಸೆನ್ಸ ನೀಡಬೇಕು; ತನ್ನ ಪ್ರತಿಸ್ಪರ್ಧಿಗೆ ನೀಡಕೂಡದು, ಎಂದು ಅಧಿಕಾರಶಾಹಿಯನ್ನು ಪುಸಲಾಯಿಸಲು, ಮೇಜಿನ ಕೆಳಗೆ ಕೈ ಚಾಚಿ ಗಿಂಬಳ ಮುಟ್ಟಿಸುತ್ತಾನೆ. ಕಳ್ಳಪೇಟೆ ವ್ಯವಹಾರಸ್ಥನು, ತನ್ನ ಲಾಭಗಳಿಕೆಯತ್ತ ಕಣ್ಣು ಹಾಯಿಸಬಾರದೆಂಬ ಕರಾರಿನ ಮೇಲೆ, ವಿಚಕ್ಷಕ ಅಧಿಕಾರಿಗೆ ಲಂಚ ಕೊಡುತ್ತಾನೆ. ತಥ್ಯವೆಂದರೆ, ವ್ಯವಹಾರಸ್ಥರ ಹಾಗೂ ಈ ಪರಿವೀಕ್ಷಕರ ಪರಸ್ಪರ ಲಾಭದಾಯಕ ಸಂಬಂಧವಿಲ್ಲದೆ ಕಳ್ಳ ಪೇಟೆಗೆ ದೀರ್ಘಕಾಲ ಉಳಿಗಾಲವಿರದು.

ಅಧಿಕಾರಶಾಹಿಯು ನೀಡುವ ಕಾಯಿದೆಬಾಹಿರ ಅನುಗ್ರಹಗಳನ್ನು ಅಷ್ಟೊಂದು ಸುಲಭವಾಗಿ ವಿವರಿಸುವುದು ಕಷ್ಟ ಸರಕಾರಿ ಹಣ ದೋಚುವಿಕೆ ಹಾಗೂ ಕಾರಕೂನರ ಮಟ್ಟದ ಚಿಕ್ಕಪುಟ್ಟ ಲಂಚದ ಘಟನೆಗಳು ಯಾವಾಗಲೂ ಇದ್ದೇ ಇದ್ದವು. ಇನ್ನು ಮುಂದೆ ಸಹ ಇರುತ್ತವೆ. ಆದರೆ ಹೆಚ್ಚಾಗಿ ಸಮುದಾಯದ ಆಧಾರಸ್ತಂಭಗಳಂತಿರುವ ಹಿರಿಯ ಸರಕಾರಿ ಅಧಿಕಾರಿಗಳೇಕೆ ಸಾರ್ವಜನಿಕ ವಿಶ್ವಾಸವನ್ನು ವಂಚಿಸುತ್ತಾರೆ?

ಸಾರ್ವಜನಿಕ ಮೌಲ್ಯಗಳ ಕ್ರಮೇಣ ಕೊರತೆವು ಆರ್ಥಿಕ, ಆಧ್ಯಾತ್ಮಿಕ ಮತ್ತು ನೈತಿಕ ಪ್ರಕ್ರಿಯೆಗಳ ಕ್ಲಿಷ್ಟ ಬೆರಕೆಯಾಗಿದೆ. ಅಧಿಕಾರಶಾಹಿಯ ನಿಮ್ನತರ ಮತ್ತು ಮಧ್ಯಮ ಮಟ್ಟದಲ್ಲಿಯ ಭ್ರಷ್ಟಾಚಾರವು ಆರ್ಥಿಕ ಅಗತ್ಯವೇ ಆಗುತ್ತದೆ. ಕರಗಳಿಂದ ಹಾಗೂ ಏರುತ್ತಿರುವ ದರಗಳಿಂದ ಸರಕಾರಿ ಸಂಬಳದ ಸಿಬ್ಬಂದಿಯ ಖರೀದಿ ಶಕ್ತಿಯು ಕೊಚ್ಚಿ ಹೋಗುತ್ತದೆ. ಅವರಲ್ಲಿ ಅತಿ

ಮೌಲ್ಯವಾನ್ 'ಆಸ್ತಿ' ಇದೆ ಎಂಬುದೇನೂ ಆಚ್ಚರಿಯ ಮಾತಲ್ಲ. ಅವರ ಹುದ್ದೆಯ ಅಧಿಕಾರವೇ ಈ 'ಆಸ್ತಿ'. ಈ ಆಸ್ತಿಯನ್ನು ಗುಟ್ಟಿನಿಂದ ಮಾರಿ ಅವರು ಲಾಭ ಗಿಟ್ಟಿಸುತ್ತಾರೆ. ಉನ್ನತ ಮಟ್ಟದ ಸರಕಾರಿ ಅಧಿಕಾರಿಗಳಿಗೆ ಭ್ರಷ್ಟಾಚಾರವು, ಬಹುತೇಕ ಪ್ರಸಂಗಗಳಲ್ಲಿ ಸಾಮಾಜಿಕ ಅಗತ್ಯವಾಗಿದೆಯೇ ಹೊರತು ಆರ್ಥಿಕ ಅಗತ್ಯವೇನಲ್ಲ. ಹಿರಿಯ ಸರಕಾರಿ ಅಧಿಕಾರಿಗಳು ತಮ್ಮ ಹುದ್ದೆಯ ಅಧಿಕಾರ ಬಲದಿಂದ, ತಾವು ಮೇಲ್ವಿಚಾರಣೆ ಮಾಡಬೇಕಾಗಿರುವ ವೃತ್ತಿಪರರಿಂದ ಹಾಗೂ ಉದ್ಯಮಿಗಳಿಂದ ಪುಸಲಾಯಿಸಲ್ಪಡುತ್ತಾರೆ. ಅವರು ಈ ಸಮಾಜದ ಆಳಕ್ಕೆ ಪ್ರವೇಶಿಸಿದಂತೆಲ್ಲ, ಅವರು ಮತ್ತು ಅವರ ಕುಟುಂಬವು ತಮ್ಮ ಸಮಾನಸ್ಕಂಧರೊಡನೆ ಬಾಳುವುದರ ಅಗತ್ಯವನ್ನು ಕಂಡುಕೊಳ್ಳುತ್ತಾರೆ. ಈ ಹೊರೆಯು ಅವರ ಕಾಯದೆಬದ್ಧ ಆದಾಯ ಮೀರಿರುತ್ತದೆ. ಅಂತಿಮ ಪರಿಣಾಮವೆಂದರೆ, ಮೋಸ ಮತ್ತು ಹಣ ದೋಚುವಿಕೆಗಳೇ ಸರಿ.

ಅಧಿಕಾರಶಾಹಿಯಲ್ಲಿಯ ಭ್ರಷ್ಟಾಚಾರವು ಹೆಚ್ಚೆಚ್ಚು ಸ್ವೀಕೃತವಾಗುತ್ತಿರುವುದನ್ನು ಕೇವಲ ಅರ್ಥನೀತಿಯಿಂದೇ ವಿವರಿಸಲಾರದು. ನೈತಿಕ ಅಧಃಪತನವೂ ಸಹ ಎದ್ದು ಕಾಣುವ ಪಾತ್ರವಾಡಿದೆ. ಯಾವುದು ಸರಿ; ಯಾವುದು ತಪ್ಪು ಎನ್ನುವ ವಿವೇಕವನ್ನು ಧರ್ಮವು ಯಾವಾಗಲೂ ಭಾರತೀಯ ಸಮಾಜಕ್ಕೆ ಒದಗಿಸಿದೆ. ಒಂದಾದ ಮೇಲೊಂದು ಜನಾಂಗಗಳು ತಮ್ಮ ಅಧ್ಯಾತ್ಮಿಕ ಬಳುವಳಿಯಿಂದ ದೂರ ಸರಿಯುತ್ತಿರುವಂತೆ ಅವು ತಮ್ಮ ಸ್ವಂತ ಕಾರ್ಯಗಳ ನ್ಯಾಯ ನಿರ್ಣಯ ಮಾಡುವ ನೈತಿಕ ಮಾನದಂಡಗಳನ್ನೇ ಕಳೆದುಕೊಂಡಿವೆ. ನೈತಿಕ ಗೊಂದಲದ ಈ ಸ್ಥಿತಿಯಲ್ಲಿ ಭ್ರಷ್ಟಾಚಾರವು ಸಾಮಾಜಿಕ ಸಮ್ಮತಿಯ ಹಂತ ತಲುಪಿದೆ. ಅದು ಅನುಮೋದನೆಯ ಅಂಚಿನಲ್ಲಿಯೇ ಇದೆ.

ಹೀಗೆ, ಪೇಟೆಯ ಪ್ರೇರಕ ತತ್ವಗಳನ್ನು ಕಠೋರ ನಿಯಮ ಹೇರಿ ಹತ್ತಿಕ್ಕುವ ಕಾರಣ ಅಧಿಕಾರಶಾಹಿಯ ಅನುಗ್ರಹವನ್ನು ಬೇಡಬೇಕಾಗುತ್ತದೆ. ಇತ್ತ ಹೆಚ್ಚುತ್ತಿರುವ ನೈತಿಕ ಸಡಿಲುತನದೊಂದಿಗೆ ಕುರಿತಗೊಳ್ಳುತ್ತಿರುವ ನೈಜ ಉತ್ಪನ್ನಗಳು ಇಂಥ ಅನುಗ್ರಹಗಳ ಪೂರ್ಣಕೆಯನ್ನು ಖಚಿತಪಡಿಸುತ್ತವೆ. ಇದರ ಪರಿಣಾಮವೆಂದರೆ, ಈ ಸೇವೆಗಳ ಉತ್ಕರ್ಷಮಾನ ಪೇಟೆ. ಈ ಎಲ್ಲ ವ್ಯವಹಾರಗಳು ದಾಖಲಿಸದವುಗಳೆಂದೂ ಮತ್ತು ಅವು ಸಮಾನಾಂತರ ಅರ್ಥ ವ್ಯವಸ್ಥೆಯಲ್ಲಿ ಬರುವವೆಂದೂ ಬೇರೆ ಹೇಳಬೇಕಾಗಿಲ್ಲ.

, ರಾಜಕೀಯ ಭ್ರಷ್ಟಾಚಾರವು ಸಮಾಜದಲ್ಲಿ ಕಪ್ಪು ಹಣದ ಇನ್ನೊಂದು ಮೂಲವಾಗಿದೆ. ಸರಕಾರದ ಪ್ರತಿಯೊಂದು ಹಂತದಲ್ಲಿ ರಾಜಕೀಯ ಶಕ್ತಿಯ ವಿಸ್ತೃತ ದುರುಪಯೋಗವು ಭಾರತದ ನೈತಿಕ ಸಡಿಲುತನದ ಇನ್ನೂ ಅಧಿಕತರ ನಿಸ್ಸೀಮ ಉದಾಹರಣೆಯಾಗಿದೆ. ಏಕೆಂದರೆ, ಈ ಲಾಭಬಡಕರಿಗೆ ಮತ ನೀಡಿ ಆಯ್ಕೆ ಮಾಡುವ ಮತದಾರರು ಒಳಗೊಳಗೆ ಸರಕಾರಿ ಹಣ ದೋಚುವಿಕೆಯನ್ನು ಉಪೇಕ್ಷಿಸುವ ಮೂಲಕ ಮನ್ನಿಸುತ್ತಾರೆ. ಹೊಲಸು ರಾಜಕೀಯವನ್ನು ಈ ರೀತಿ ಸಹಿಸುವುದು ಕೆಲವು ಮಟ್ಟಿಗೆ ದೇಶದ ಸಾಂಪ್ರದಾಯಿಕ ಅದೃಷ್ಟವಾದದ ಅಭಿವ್ಯಕ್ತಿಯಾಗಿದೆ. ಆ ಮೇರೆಗೆ, ಸಾರ್ವಜನಿಕ ಆಯ್ಕೆಯು ಓರ್ವ ಕುಹಕ ರಾಜಕೀಯ ವ್ಯಕ್ತಿ ಹಾಗೂ ಓರ್ವ ಪ್ರಾಮಾಣಿಕ ವ್ಯಕ್ತಿಯ ಮಧ್ಯೆ ಇರದೇ, ಒಬ್ಬ ಕುಹಕನ ಹಾಗೂ ಇನ್ನೊಬ್ಬ ಕುಹಕನ ಮಧ್ಯೆ ಇರುತ್ತದೆ. ಕಪ್ಪು ಹಣವೇ ಪ್ರಮುಖ ಪಕ್ಷಗಳ ರಾಜಕೀಯ

ಚಟುವಟಿಕೆಗಳಿಗೆ ಧನ ಸಹಾಯ ಒದಗಿಸುತ್ತದೆ ಎಂಬುದನ್ನು ಸಮಾನಾಂತರ ಅರ್ಥ ವ್ಯವಸ್ಥೆಯ ಇತ್ತೀಚಿನ ಚರ್ಚೆಯು ಒತ್ತಿ ಹೇಳಿದೆ. ವಿಶೇಷವಾಗಿ, ಚುನಾವಣೆ ಪ್ರಚಾರಕ್ಕಾಗಿ ಕಾಯದೆ–ಬಾಹಿರ ಹಣವನ್ನೇ ಬಳಸಲಾಗುತ್ತಿದೆ. ಸಂಸತ್ ಚುನಾವಣೆಗೆ ತೀವ್ರ ಸೆಣಸಾಡುವ ಅಭ್ಯರ್ಥಿಯು ಕನಿಷ್ಠ ಪ್ರತಿ ಮತದಾರನಿಗಾಗಿ ಒಂದು ರೂಪಾಯಿ ವೆಚ್ಚ ಮಾಡುವನೆಂದು ಕಂಡುಕೊಳ್ಳಲಾಗಿದ. ಇದರ ಇಂಗಿತವೆಂದರೆ 5 ಲಕ್ಷ ಜನ ಮತದಾರರಿರುವ ಒಂದು ಸಾಧಾರಣ ಲೋಕಸಭೆಯ ಮತ ಕ್ಷೇತ್ರದಲ್ಲಿ ಕನಿಷ್ಠ ಹಾಗೂ ಸರಿಯಾದ ಪ್ರಚಾರಕ್ಕಾಗಿ ಮಾಡುವ ವೆಚ್ಚವು 5 ಲಕ್ಷ ರೂಪಾಯಿಯಾಗುವುದು. ಇಂಥ ದೊಡ್ಡ ಪ್ರಮಾಣದ ಹಣವನ್ನು ಕಪ್ಪು ಆದಾಯದ ಮೂಲಕ ಒದಗಿಸಬೇಕಾಗಿದೆ.

ಕಪ್ಪು ಹಣದ ಚೀಲಗಳ ತುರ್ತು ಅಗತ್ಯವು ರಾಜಕೀಯ ಪಕ್ಷಗಳೊಳಗೆ ಹೊಸ ಅಧಿಕಾರ ಸಂರಚನೆಯ ಉದಯಕ್ಕೆ ಕಾರಣವಾಗಿದೆ. ಇಂದು ರಾಜಕೀಯ ಮೇಲ್ಮೈಯನ್ನು ಮುತ್ಸದ್ದಿತನದ ಮೇಲಿಂದ ನಿರ್ಣಯಿಸದೆ, ಕಪ್ಪು ರಸೀದಿಗಳ ಮೇಲಿಂದ ನಿರ್ಣಯಿಸಲಾಗುತ್ತಿದೆ. ಅಧಿಕಾರ ಹಿಡಿದುಕೊಂಡ ಮಂತ್ರಿಮಹೋದಯರು ಮತ್ತಿತರರು ಪಕ್ಷದ ಹಣ ಎತ್ತುವ ಖಜಾಂಚಿಗಳಾಗಲು ಏರಾಟ ಹೂಡುತ್ತಾರೆ. ಮತ್ತು ತಮ್ಮ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಲು ತಮ್ಮೆಲ್ಲ ಸಂಕೋಚವನ್ನು ಬೆಲ್ಲಿ ಹಣಕ್ಕಾಗಿ ಅನುಗ್ರಹವನ್ನು ಬೇಕಾಬಿಟ್ಟಿಯಾಗಿ ಮಾರಾಟ ಮಾಡುತ್ತಾರೆ. ಹೊಸ ಹೊಸ ರಾಜಕೀಯ ಭ್ರಷ್ಟಾಚಾರದ ಹೊಸ ರೂಪಾಭಿವ್ಯಕ್ತಿಯು ಸಾರ್ವಜನಿಕರಲ್ಲಿ ಗುಸು ಗುಸು ಹುಟ್ಟಿಸುವಲ್ಲಿ ಅಯಶಸ್ವಿಯಾಗಿರುವುದನ್ನು ಗಮನಿಸಿದರೆ, ಇಂದು ಸಮಾಜವು ಯಾವ ಸಾಮಾಜಿಕ ಗೀಳಿಗೆ ಇಳಿದಿದೆಯೆಂಬುದು ವೇದ್ಯವಾಗುತ್ತದೆ.

ರಾಜಕೀಯ ಭ್ರಷ್ಟಾಚಾರದ ಬಹು ದೊಡ್ಡ ಪಾಲು ಪಕ್ಷಗಳಿಗೋಸುಗ ಹಣ ಕೂಡಿಸುವತ್ತ ನಿರ್ದೇಶಿತವಾಗಿದ್ದರೂ ಸಹ, ಇಂಥ ಚಟುವಟಿಕೆಗಳ ಹಿಂದಿನ ಕೇವಲ ವೈಯಕ್ತಿಕ ಹೇತುಗಳನ್ನು ಅಲಕ್ಷಿಸುವಂತಿಲ್ಲ. ಕೇಂದ್ರ ಸರಕಾರದ ರಾಜ್ಯ ಸಚಿವರು ಒಂದೇ ಅವಧಿಯಲ್ಲಿ ಅನೇಕ ಗೃಹ ಸಮುಚ್ಚಯಗಳನ್ನು ಖರೀದಿಸಿರುವುದು ತಿಳಿದು ಬಂದಿದೆ. ಪಕ್ಷ ನಿರ್ದೇಶಿತ ಕಪ್ಪು ವ್ಯವಹಾರಗಳು ವಾಸ್ತವವಾಗಿ ಮಂತ್ರಿಗಳನ್ನು ಶ್ರೀಮಂತಗೊಳಿಸಲು ಹಣ ಒದಗಿಸುತ್ತವೆ.

ಪ್ರಯತ್ನಿಸಿದ ಪರಿಹಾರೋಪಾಯಗಳು :

ಭಾರತದಲ್ಲಿ ಕಪ್ಪು ಹಣದ ಈ ಸಾಮಾನ್ಯ ರೋಗದ ಮೂಲ ಕಾರಣಗಳೆಂದರೆ ತಥಾಕಥಿತ ಪೇಟೆ ನಿಯಂತ್ರಣದ ಸಾಮಾಜಿಕ ಧೋರಣೆಗಳು, ನಿರ್ದೇಶಿತ ಯೋಜನಾ ನಿರೂಪಣೆ ಮತ್ತು ಕಠೋರ ಮರುಹಂಚಿಕೆಯ ಕರಗಳೇ ಆಗಿವೆ. ಈ ಹಂತದಲ್ಲಿ ಒಂದು ಮಹತ್ವದ ಪ್ರಶ್ನೆ ಏಳುತ್ತದೆ. ಕಾಯದಬಾಹಿರ ಹಣದ ಪೀಡೆಯು ಭದ್ರವಾದ ಕಾರ್ಯಸೂಚಿಯ ತಪ್ಪು ಕಾರ್ಯಾಚರಣೆಯಿಂದ ಉದಿಸಿದೆಯೋ ಇಲ್ಲವೆ ಕಾರ್ಯಸೂಚಿಯಲ್ಲಿಯ ಆಂತರಿಕ ದೋಷಗಳಿಂದ ಉಂಟಾಗಿದೆಯೋ ? ಸಮಾಜವಾದದ ಗ್ರಹಿಕೆಯೇ ತಪ್ಪಾಗಿದೆಯೇ ಇಲ್ಲವೆ ಅದನ್ನು ಸಾಧಿಸಲು ಆಳವಡಿಸಿದ ಧೋರಣೆಗಳು ದೋಷಪೂರಿತವಾಗಿದೆಯೇ? ಸಮಾಜವಾದವು ಗೌರವಾರ್ಹ ಗುರಿಗಳನ್ನು ಹೊಂದಿದೆಯೆಂದು ನಾನು ನಂಬಿದ್ದೇನೆ. ಆದರೆ ಈ ಗ್ರಹಿಕೆಯನ್ನು

ತೃತೀಯ ಜಗತ್ತಿನಾದ್ಯಂತ ಕೇವಲ ಒಂದು ಘೋಷಣೆಯಾಗಿ ಬಳಸಲಾಗಿದೆ. ಸಮಾಜವಾದದ ಸಾಧನೆಗಾಗಿ ಅನುಸರಿಸಬೇಕಾದ ಸರಿಯಾದ ಧೋರಣೆಗಳನ್ನು ಎಂದೆಂದೂ ಅನುಸರಿಸಿಲ್ಲ. ಅತಿ ಮೆಚ್ಚಿನ, ಸಮಾಜವಾದಿ ಸ್ವರೂಪದ ಸಮಾಜವನ್ನು ಪೇಟೆ ನಿಯಂತ್ರಣವು ಎಂದೂ ಸಾಧಿಸುವುದಿಲ್ಲ. ಪ್ರತಿಯಾಗಿ, ಅದು ಕಪ್ಪು ಹಣ, ಏಕಸ್ವಾಮ್ಯ ಹಾಗೂ ಭ್ರಷ್ಟಾಚಾರಗಳನ್ನೇ ಹುಟ್ಟಿಸುತ್ತದೆ.

ಸಮಾನಾಂತರ ಅರ್ಥವ್ಯವಸ್ಥೆಯನ್ನು ನಿರ್ಮೂಲಗೊಳಿಸುವ ಸರಕಾರದ ಪ್ರಯತ್ನಗಳು ದ್ವಿಮುಖವಾಗಿವೆ. ಮೊದಲನೆಯ ಮುಖವೆಂದರೆ, ಕಪ್ಪು ಹಣದ ವ್ಯವಹಾರಗಳನ್ನು ಪತ್ತೆ ಹಚ್ಚುವತ್ತ ಗುರಿಯುಳ್ಳ ಉಪಾಯಗಳು. ಇನ್ನು ಎರಡನೆಯದೆಂದರೆ, ಈಗಾಗಲೇ ಹುಟ್ಟಿಕೊಂಡ ಕಪ್ಪು ಹಣವನ್ನು ಮರಳಿ ಪಡೆಯಲು ಆಮಿಷ ತೋರಿಸುವ ಯೋಜನಾವಳಿ.

ಅ) ಕರ ತಪ್ಪಿಸುವಿಕೆಯನ್ನು ತಡೆಯುವ ಪ್ರಯತ್ನಗಳು :

ಕರ ತಪ್ಪಿಸುವಿಕೆಯ ಉಬ್ಬರವನ್ನು ತಡೆಯುವ ಸರಕಾರಿ ಪ್ರಯತ್ನಗಳು, ಮೊಟ್ಟ ಮೊದಲು, ಪ್ರಚಲಿತ ಕರಾಕರಣ ನಿಯಮಗಳನ್ನು ರಕ್ಷಿಸುವ ಕುರಿತು ಕೈಕೊಳ್ಳುವ ಸುಧಾರಣೆಗಳ ಮೇಲೆ ಕೇಂದ್ರಿತವಾಗಿವೆಯೇ ಹೊರತು, ತಪ್ಪಿಸುವಿಕೆಯ ಪ್ರೇರಕಗಳಿಗೆ ಪುಷ್ಟಿಕೊಡುವ ನಿಯಮಗಳ ಆ ಸ್ವರೂಪವನ್ನು ಬದಲಿಸುವುದರತ್ತ ಅಲ್ಲ. ಉದಾಹರಣಾರ್ಥ : ಬಹುತೇಕ ಪ್ರಮುಖ ಪಟ್ಟಣಗಳಲ್ಲಿಯ ಆದಾಯಕರ ಇಲಾಖೆಗಳು ಕರ ತಪ್ಪಿಸುವ ಸಂಭಾವ್ಯತೆ ಹೊಂದಿದವರನ್ನು ಗುರುತಿಸುವ ಮತ್ತು ಏಕಾಏಕಿ ಅವರ ಅಂಗಡಿ ಮೇಲೆ ದಾಳಿ ಮಾಡುವ ಏಕಮೇವ ಕಾರ್ಯನಿರತ ವಿಶೇಷ ಘಟಕಗಳನ್ನು ಹೊಂದಿವೆ. ಕಳೆದ 15 ವರ್ಷಗಳಲ್ಲಿ ಈ ದಾಳಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ಬಚ್ಚಿಟ್ಟ ಕರ ರೂಪದ ಆದಾಯವನ್ನು ಸರಕಾರಕ್ಕಾಗಿ ಹೊರತೆಗೆಯುವಲ್ಲಿ ಅವುಗಳಿಗೆ ಅಲ್ಪ ಮಟ್ಟಿಗೆ ಯಶಸ್ಸೂ ಲಭಿಸಿದೆ.

ಆದರೂ ಸಹ, ಈ ಕ್ರಮಗಳ ಪರಿಣಾಮತ್ವವನ್ನು ಕೇವಲ ಅವು ಕಂಡು ಹಿಡಿಯುವ ಮರೆಮಾಚಿದ ಕರಗಳಿಂದ ಮಾತ್ರ ನಿರ್ಣಯಿಸಲಾಗದು. ಏಕೆಂದರೆ ಆದಾಯ ಸೃಷ್ಟಿಯಷ್ಟೇ ಅವುಗಳ ಗುರಿಯಲ್ಲ, ಪತ್ತೆ ಹಚ್ಚಬಹುದೆಂಬ ಪೇಚಿನ ದೃಶ್ಯವನ್ನು ಬಿಂಬಿಸಿ, ಕರಗಳ್ಳತನದ ಚಟುವಟಿಕೆಯಿಂದ ಜನರನ್ನು ಚದುರಿಸುವುದೇ ಇವುಗಳ ಹೆಚ್ಚು ಮಹತ್ತರ ಧ್ಯೇಯವಾಗಿದೆ. ಈ ಹೆಣಗಾಟದಲ್ಲಿ, ಈ ದಾಳಿಗಳು ಎಷ್ಟುಮಟ್ಟಿಗೆ ಯಶಸ್ವಿಯಾಗಿವೆಯೆಂಬುದನ್ನು ನಿಖರವಾಗಿ ಹೇಳಲು ಬಾರದು. ಆದರೆ ಉತ್ಪನ್ನ ಕರದ ಆದಾಯದಲ್ಲಿ ಆದ ಅಲ್ಪ ಹೆಚ್ಚಳದ ಮೇಲಿಂದ ಹೇಳುವುದಾದರೆ, ಏನಾದರೂ ಕೊಂಚ ಯಶಸ್ಸು ಇದ್ದಿರಬಹುದಾದರೂ ಅದು ಕಡಿಮೆಯೆಂದೇ ಹೇಳಬೇಕು. ಈ ಸಂಗತಿಯು ಅಚ್ಚರಿ ಹುಟ್ಟಿಸಬೇಕಾಗಿಲ್ಲ. ಅಂತೂ ಪ್ರಚಲಿತ ಕರಾಕರಣೆಯ ಸಂರಚನೆಯಿಂದ ಹುಟ್ಟಿದ ಕರ ತಪ್ಪಿಸುವಿಕೆಯ ಚೋದನೆಗಳು ಅತ್ಯಂತ ಪ್ರಬಲವಾಗಿವೆ, ಪತ್ತೆ ಹಚ್ಚುವ ಸಪ್ಪೆ ಪ್ರಯೋಗಗಳಿಂದ ಆ ಚೋದನೆಗಳನ್ನು ಸರಿಸುವುದು ಕಷ್ಟಸಾಧ್ಯ.

ಬ) ಕಳ್ಳಸಾಗಾಣಿಕೆ ತಡೆಯುವ ಪ್ರಯತ್ನಗಳು :

ಕರ – ಸಂಬಂಧಿ ದಾಳಿಗಳಿಗಿಂತಲೂ ಸರಕಾರದ ಕಳ್ಳಸಾಗಾಣಿಕೆ ವಿರೋಧಿ ಚಟುವಟಿಕೆಗಳು ಹೆಚ್ಚು ಪ್ರಖರವಾಗಿವೆ. 1974ರಲ್ಲಿ ಸುಂಕದ ಇಲಾಖೆಯು, ಸಂಯೋಜನಾತ್ಮಕ, ರಾಷ್ಟ್ರವ್ಯಾಪ್ತಿಯ ಕಳ್ಳಸಾಗಾಣಿಕೆ ವಿರೋಧಿ ಚಟುವಟಿಕೆಯನ್ನು ಆರಂಭಿಸಿತು. ಅದಕ್ಕಾಗಿ ತನ್ನ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಿಕೊಂಡಿತು. ಪ್ರಶೋಧಕ ಯಂತ್ರೋಪಕರಣಗಳೊಂದಿಗೆ ಸುಸಜ್ಜಿತವಾಯಿತು. ಮುಂದಿನ ಎರಡು ವರ್ಷಗಳಲ್ಲಿ ಸಂಶಯಗ್ರಸ್ತ ವಠಾರಗಳ ಮೇಲಿನ ದಾಳಿಯು ನಾಲ್ಕು ಪಟ್ಟು ಹೆಚ್ಚಾಯಿತು. ಈ ಹೆಚ್ಚಿನ ಪ್ರಯತ್ನವು ಉತ್ತಮ ಫಲ ನೀಡಿತು. ಮೂರು ಸಾವಿರಕ್ಕಿಂತ ಅಧಿಕ ಪರಿಶೋಧನಾದೇಶಗಳನ್ನು ಹೊರಡಿಸಲಾಯಿತು. ಮತ್ತು ಇದರಿಂದ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ವಸೂಲಾಯಿತು.

ಆದರೂ ಸಹ, ಇಂಥ ಉಪಾಯಗಳ ಪರಿಣಾಮತ್ವವು ಸೀಮಿತವಾಗಿದೆ ಯೆಂಬುದನ್ನು ನಾವು ಇನ್ನೊಮ್ಮೆ ಗುರುತಿಸಬೇಕು. ಕಳ್ಳ ಸಾಗಾಣಿಕೆಗೆ ಪೇಟೆಯ ಪ್ರಚೋದಕಗಳು ಹೆಚ್ಚಾಗಿರುವ ತನಕ ಕಾವಲು ಕ್ರಮ ಮತ್ತು ದಾಳಿಗಳು, ತಮ್ಮಷ್ಟಕ್ಕೆ ತಾವೇ, ಈ ಕಳ್ಳಸಾಗಾಣಿಕೆಯನ್ನು ನಿರ್ಮೂಲಗೊಳಿಸಲಾರವು ಅಥವಾ ಅದನ್ನು ವಿವೇಚನಾಪೂರ್ವಕ ಹದ್ದುಬಸ್ತಿಯಲ್ಲಿ ಸಹ ಇರಿಸಲಾರವು. ಇದಲ್ಲದೆ, ಉಭಯ ಕಾರ್ಯಕ್ರಮಗಳ ಆಡಳಿತಗಾರರು ಲಂಚಖೋರರಾಗಿರುವ ವರೆಗೆ ಕಳ್ಳಸಾಗಾಣಿಕೆದಾರರು ಮತ್ತು ಲಾಭ ಬಡಕರು ಯಾವಾಗಲೂ ಲಂಚ ನೀಡಿ ತಮ್ಮ ಹೆಚ್ಚಿನ ಭದ್ರತೆಯನ್ನು ಖರೀದಿಸುತ್ತಾರೆ ಮತ್ತು ಈ ರೀತಿಯ ಕಾರ್ಯಕ್ರಮಗಳನ್ನು ಎಂದೆಂದಿಗೂ ಕುಗ್ಗಿಸುತ್ತಾರೆ.

ಕ) ನಾಣ್ಯ ರದ್ದತಿ ಯೋಜನೆಗಳು :

ನಾಣ್ಯ ರದ್ದತಿ ಎಂದರೆ ದೊಡ್ಡ ಮೌಲ್ಯದ ನೋಟುಗಳನ್ನು ಕಡಿಮೆ ಮೌಲ್ಯದ, ಸಮಪ್ರಮಾಣದ ನೋಟುಗಳಿಂದ ಬದಲಿಸುವುದು, ಉದಾಹರಣೆಯೆಂದರೆ ಸರಕಾರವು ಯಾವುದೊಂದು ಮುಖಬೆಲೆಯ ನೋಟುಗಳನ್ನು ಮತ್ತು ಅವುಗಳಿಗಿಂತ ಹೆಚ್ಚು ಮುಖ ಬೆಲೆಯ ನೋಟುಗಳನ್ನು ರದ್ದು ಪಡಿಸುವುದಾಗಿ ಸಾರುತ್ತದೆ. ಈ ನೋಟುಗಳ ಧಾರಕರು ತಮ್ಮಲ್ಲಿರುವ ನೋಟುಗಳನ್ನು, ಅವುಗಳಿಗೆ ಸಮ ಮೌಲ್ಯದ ಕಡಿಮೆ ಬೆಲೆಯ ನೋಟುಗಳಿಗಾಗಿ ಬದಲಿಸಿಕೊಳ್ಳಬೇಕಾಗುತ್ತದೆ. ಈ ಯೋಜನೆಯ ಹಿಂದಿನ ಉದ್ದೇಶವಿಷ್ಟೇ : ಈ ನೋಟುಗಳಲ್ಲಿ ಕೂಡಿಬಿದ್ದ ಕಪ್ಪು ಹಣವನ್ನು ಅದು ಕೊಚ್ಚಿ ಹಾಕುತ್ತದೆ. ಏಕೆಂದರೆ, ಅವುಗಳ ಧಾರಕರು ಈ ನೋಟುಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಮತ್ತು ಅವುಗಳ ಅಸ್ತಿತ್ವವನ್ನು ಲೆಕ್ಕ ಪತ್ರದಲ್ಲಿ ದಾಖಲಿಸಿಕೊಳ್ಳಬೇಕು. ಇಲ್ಲವೆ ಸಾರಾಸಗಟಾಗಿ ಅವುಗಳನ್ನು ಬಿಟ್ಟುಕೊಡಬೇಕು.

ನಾಣ್ಯ ರದ್ದತಿಯ ತೀರ ಇತ್ತೀಚಿನ ಪ್ರಯೋಗವನ್ನು 1978 ರಲ್ಲಿ ಮಾಡಲಾಯಿತು. ಆಗ ಸರಕಾರವು 100 ರೂಪಾಯಿ ನೋಟುಗಳನ್ನು ರದ್ದು ಪಡಿಸಲು ನಿರ್ಧರಿಸಿತು. ಈ ನೋಟುಗಳ ರೂಪದಲ್ಲಿದ್ದ ಅಂದಾಜು 145 ಕೋಟಿ ರೂಪಾಯಿಗಳಲ್ಲಿ 116 ಕೋಟಿ

ರೂಪಾಯಿ ಮೌಲ್ಯದವುಗಳನ್ನು ಹಿಂತಿರುಗಿಸಿ ಬದಲಿಸಲಾಯಿತು. ಕಪ್ಪು ಹಣ ಧಾರಕರು ನಾಣ್ಯ ರದ್ದತಿಯ ಬೆದರಿಕೆಯ ಬಗೆಗೆ ಎಚ್ಚತ್ತು, ಈ ನಾಣ್ಯಗಳನ್ನು ಚಿಲ್ಲರೆ ನಾಣ್ಯಗಳಲ್ಲಿ ಇಟ್ಟುಕೊಳ್ಳುತ್ತಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮೇಲಾಗಿ, ಇನ್ನು ಮುಂದೆ ನಾಣ್ಯ ರದ್ದತಿಯ ಅವಕಾಶಗಳು ಸೀಮಿತವಾಗಿವೆ.

ಡ) ಐಚ್ಛಿಕ ಪ್ರಕಟಣೆಯ ಯೋಜನೆಗಳು :

ಐಚ್ಛಿಕ ಪ್ರಕಟಣೆಯ ಯೋಜನೆಯೆಂದರೆ, ಸ್ವಲ್ಪ ದಂಡ ನೀಡಿ, ತಮ್ಮ ಕಪ್ಪು ಆದಾಯವನ್ನು ಸಕ್ರಮಗೊಳಿಸಿಕೊಳ್ಳುವಂತೆ, ಜನರಿಗೆ ನೀಡುವ ತೀರ ಸರಳ ಆಹ್ವಾನವೇ ಆಗಿದೆ. ಈ ಮುನ್ನ 1951, 1965 ಹಾಗೂ 1975 ಹೀಗೆ ಮೂರು ಸಲ ಇಂಥ ಪ್ರಯತ್ನ ಮಾಡಲಾಗಿದೆ. ನಾಣ್ಯಗಳ ವಿನಿಮಯದಲ್ಲಿ ಅದೆಷ್ಟೇ ಔದಾರ್ಯ ತೋರಿದ್ದರೂ ಈ ಯೋಜನೆಗಳಿಂದ ಷ್ಟೇನೂ ಹೆಚ್ಚಿನ ಪ್ರಗತಿಯಾಗಿಲ್ಲ. ಈ ಯೋಜನೆಯಿಂದ ತನ್ನ ಹೆಸರು ಬಯಲಾಗಬಹುದೆಂಬ ಭೀತಿ ಕಪ್ಪು ಹಣ ಧಾರಕನಲ್ಲಿರುವುದೇ ಇದರ ಕುದಾಗಿದೆ. ಒಂದು ವೇಳೆ, ಅವನು ಇದೇ ರೀತಿ ಮುಂದುವರಿಯಬಯಸಿದರೆ, ಈ ಯೋಜನೆಯಿಂದ ಶತಪ್ರಯತ್ನ ಮಾಡಿ ತಪ್ಪಿಸಿಕೊಳ್ಳುತ್ತಾನೆ. ಈ ಯೋಜನೆಯಿಂದ ತನ್ನಲ್ಲಿರುವ ಕಪ್ಪು ಹಣವನ್ನು ನೀಗಿಕೊಳ್ಳಬಹುದಾಗಿದ್ದರೂ ಸಹ, ತನ್ನ ಮಿತ್ರರು ಹಾಗೂ ಬಂಧುಬಳಗದವರು, ತಾನೊಬ್ಬ ಕಾಯದೆಬಾಹಿರ ಸಂಪತ್ತು ಹೊಂದಿದವನೆಂಬ ಸಂಗತಿ ಬಹಿರಂಗವಾಗುವ ಭೀತಿಯು, ಅವನನ್ನು ಹಿಂದೆ ಸರಿಸುತ್ತದೆ.

ಇ) ವಿಶೇಷ 'ಬೇರರ ಬಾಂಡ' ಯೋಜನೆ :

ಐಚ್ಛಿಕ ಪ್ರಕಟಣೆಗಾಗಿ ಒತ್ತಾಯಿಸುವ ನವನವೀನ ಪದ್ಧತಿಗಳ ತನ್ನ ಶೋಧದಲ್ಲಿ ಸರಕಾರವು ಕಪ್ಪು ಹಣ ಧಾರಕರಿಂದ ಸ್ಪರ್ಧಾತ್ಮಕ ದರಗಳಲ್ಲಿ ಹಣ ಪಡೆಯಲು ಪ್ರಯತ್ನಿಸಿತು. ಈ ಕಾಲಕ್ಕೆ ಹಣಮೂಲ ಕುರಿತು ಚಕಾರವೆತ್ತಲಿಲ್ಲ. ಹೀಗೆ 1981 ರಲ್ಲಿ ಈ ಉದ್ದೇಶಕ್ಕಾಗಿ ಸರಕಾರವು ವಿಶೇಷ 'ಬೇರರ ಬಾಂಡ್' ಗಳನ್ನು ಹೊರಡಿಸಿತು.

ಕಪ್ಪು ಹಣ ಧಾರಕನ ದೃಷ್ಟಿಯಿಂದ 'ಬೇರರ ಬಾಂಡ' ಯೋಜನೆಯು ಇದುವರೆಗೆ ನೀಡಿದ ಐಚ್ಛಿಕ ಪ್ರಕಟಣೆಯ ಯೋಜನೆಗಳಲ್ಲಿಯೇ ಅತ್ಯಂತ ಆಕರ್ಷಕವಾದುದಾಗಿದೆ. ಪ್ರಾರಂಭದ ದಿನಗಳಲ್ಲಿ ಕಪ್ಪು ಹಣದ ಕ್ರಮಬದ್ಧತೆಯ ಬಗೆಗೆ ಪ್ರಶ್ನಾವಳಿಗಳ ಹಾಗೂ ಅದರ ಕಾನೂನು ಕಲಮುಗಳ ಸಂದಿಗ್ಧತೆಯ ಪೀಡೆಗೊಳಗಾಗಿದ್ದರೂ ಸಹ, 'ಬಾಂಡ ಜಾರಿಯು' ಸರಕಾರಕ್ಕೆ 875 ಕೋಟಿ ರೂಪಾಯಿಗಳನ್ನು ನೀಡಿತು. ಇಂಥ ಯೋಜನೆಗಳು ಸಾಕಷ್ಟು ಮೊತ್ತದಲ್ಲಿ ಕಪ್ಪು ಹಣವನ್ನು ಹೊರತೆಗೆಯುವುದೇನೋ ನಿಜ. ಆದರೆ, ಅವುಗಳ ನೀತಿಮತ್ತೆ ಕುರಿತು, ಅವು ಕಪ್ಪು ಹಣಧಾರಕನಿಗೆ ನೀಡುವ ಸೂಚನೆ ಕುರಿತು, ಬಹುಶ್ರುತ ಸಂದೇಹಗಳಿವೆ. ಈ ಬಾಂಡುಗಳು ವಂಚಕರ ಬೆನ್ನು ತಟ್ಟುವವೇ ಹೊರತು ಅವರನ್ನು ಶಿಕ್ಷಿಸುವುದಿಲ್ಲ.

ಭಾವೀ ಕಾರ್ಯ ನೀತಿ :

ಕಪ್ಪು ಹಣವನ್ನು ಬೇರುಸಹಿತ ನಿರ್ಮೂಲಗೊಳಿಸುವ ಸರಕಾರದ ಪ್ರಯತ್ನಗಳು ಬಹುತೇಕ ನಿಷ್ಫಲವಾಗುತ್ತಿವೆಯೆಂಬುದು ಈ ಹೊತ್ತಿಗೆ ಸುಸ್ಪಷ್ಟವಾಯ್ತು ತಾನೇ? ಈಗಿರುವ ಸಮಸ್ಯೆಯೆಂದರೆ, ಉದ್ದೇಶದಲ್ಲ, ಆದರೆ ಅವುಗಳನ್ನು ಕಾರ್ಯಗತಗೊಳಿಸುವುದು. ಸಮಾಜವಾದಿ ಸ್ವರೂಪವು ಯೋಗ್ಯ ಗುರಿಯೇನೋ ಸರಿ. ಆದರೆ ಅದನ್ನು ಅಸಂಖ್ಯಾತ ನಿಯಂತ್ರಣ ನಿಯಮಗಳ ಮೂಲಕ ಎಂದೂ ಸಾಧಿಸಲಾರವು. ಅವುಗಳಿಂದ ಆಗುವುದಿಷ್ಟೇ. ಉಬ್ಬಿದ ಅಧಿಕಾರಿಶಾಹಿಯು ಪರಪುಟ್ಟ ಏಕಸ್ವಾಮ್ಯದ ತಲೆಯೇರಿ ಕುಳಿತುಕೊಳ್ಳುತ್ತದೆ. ಅವು ಬಡತನ ಹಾಗೂ ಭ್ರಷ್ಟಾಚಾರಗಳನ್ನು ಹೆಚ್ಚಿಸುತ್ತವೆಯೇ ಹೊರತು ನಿವಾರಿಸಲಾರವು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭಾರತೀಯ ಅರ್ಥವ್ಯವಸ್ಥೆಯನ್ನು ಪೀಡಿಸುವ ಅಸಂಖ್ಯಾತ ನಿಯಮ ನಿಬಂಧನೆಗಳು ದೂರವಾಗಬೇಕು. ಪಂಚವಾರ್ಷಿಕ ಯೋಜನೆಗಳ ಮೂಲಕ ನಮ್ಮ ದೇಶವು ಅಳವಡಿಸಿಕೊಂಡ ಕೇಂದ್ರೀಕೃತ ಯೋಜನಾಪದ್ಧತಿಯೂ ತೊಲಗಬೇಕು. ಈಗ ಅಸ್ತಿತ್ವದಲ್ಲಿರುವ ಪದ್ಧತಿಯ ಬದಲಾಗಿ ಹೊಸ ಆರ್ಥಿಕ ನೀತಿಗಳು, ಹೊಸ ಪ್ರಾಶಸ್ತ್ಯ ಹಾಗೂ ಹಣ ತೊಡಗಿಸುವ ಪ್ರಕಾರಗಳೊಂದಿಗೆ ಅಸ್ತಿತ್ವದಲ್ಲಿ ಬರಬೇಕು. ಪ್ರಚಲಿತ ವ್ಯವಸ್ಥೆಯು ದಾರುಣ ಸೋಲು ಅನುಭವಿಸಿದೆ. ಹೆಚ್ಚುತ್ತಿರುವ ಜನಸಂಖ್ಯೆಯ ನೆಪವೊಡ್ಡಿ, ಭಾರತೀಯ ಜನಕೋಟಿಯ ಕಡು ಬಡತನವನ್ನು ಹೀಗಳೆಯಕೂಡದು. ಏಕೆಂದರೆ, ಇಷ್ಟೇ ಜನಸಾಂದ್ರತೆ ಹೊಂದಿದ ಇಂಗ್ಲಂಡ, ಜರ್ಮನಿ, ಫ್ರಾನ್ಸ, ಹಾಲಂಡ, ಜಪಾನ, ದಕ್ಷಿಣ ಕೋರಿಯಾ, ತೈವಾನ ಮತ್ತು ಹಾಂಗಕಾಂಗ ದೇಶಗಳು ಭಾರತಕ್ಕಿಂತ ಅತ್ಯಧಿಕ ಶ್ರೀಮಂತವಾಗಿವೆ. ಈ ಸಮೃದ್ಧ ರಾಷ್ಟ್ರಗಳು ದ್ವಿತೀಯ ಜಾಗತೀಕ ಮಹಾಯುದ್ಧದಲ್ಲಿ ಮಣ್ಣು ಪಾಲಾಗಿದ್ದವು. ಭಾರತಕ್ಕೆ ಅದರ ಯಾವ ಸೋಂಕೂ ತಗುಲಿರಲಿಲ್ಲ ತಾನೇ! ಆ ದೇಶಗಳ ಜನತೆ ಐಷಾರಾಮಿ ಜೀವನ ಸಾಗಿಸಿದ್ದಾರೆ. ಅದೇ ಭಾರತದಲ್ಲಿ ಮಿಲಿಯನಗಟ್ಟಳೆ ಜನರನ್ನು ಬಡತನದ ಪೆಡಂಭೂತವು ಬೆನ್ನಟ್ಟಿದೆ. ಭಾರತವನ್ನು ಕಪ್ಪು ಹಣದ ಶಾಪದಿಂದ ಮುಕ್ತ ಮಾಡಲೇಬೇಕು.

ಕೊನೆಯದಾಗಿ, ಕೇವಲ ಸರಕಾರಿ ನಿಯಂತ್ರಣಕ್ಕೊಳಪಡದ ಒಂದು ಅಂಶವೂ ಇದೆ. ಅದೆಂದರೆ ನೈತಿಕ ಬಲ ಹಾಗೂ ಮೌಲ್ಯಗಳ ಪುನಶ್ಚೇತನ. ಈ ಗುರಿ, ತಲುಪಲು ದೂರವಿದ್ದರೂ ಸಹ, ಈ ಅಂಶದ ಮಹತ್ವವನ್ನು ಹೆಚ್ಚು ಹೇಳದಿರಲಾರವು. ಜನತೆ ಆತ್ಮಿಕ ಉನ್ನತ ಅಭೀಪ್ಸೆಯತ್ತ ತಿರುಗುವವರೆಗೆ ಘನತೆ ಹಾಗೂ ವಿಶ್ವಾಸಗಳ ಮಾರಾಟವನ್ನು ಮನ್ನಿಸುವ ಸಾಂಸ್ಕೃತಿಕ ನೀತಿಯ ಗೀಳನ್ನು ಗುರುತಿಸುವ ವರೆಗೆ ಅಕ್ರಮ ಸಂಪತ್ತಿನ ಲಾಲಸೆಯು ಅವನ ಮನದ ಚೆಲ್ಲಾಟದಲ್ಲಿ ಮುಂದುವರಿಯುತ್ತದೆ. ಈ ನೈತಿಕ ರೂಪಾಂತರದಲ್ಲಿ ಸರಕಾರವೂ ಸಹ ಗಣನೀಯ ಪಾತ್ರವಾಡಬಲ್ಲದು. ರಾಜಕೀಯ ಹಾಗೂ ಅಧಿಕಾರ ಶಕ್ತಿ – ಸಂಪನ್ನರ ಹೇಸಿ ಆಸೆಯಿಂದ, ಅದೃಷ್ಟವಾದ ಹಾಗೂ ನೀತಿಮತ್ತೆಯ ಭ್ರಮನಿರಸನಗಳು ಪ್ರೇರಿತವಾಗುತ್ತವೆಯಾದ್ದರಿಂದ, ಅಧಿಕಾರಿಗಳ ಹೊಸ ಪ್ರಾಮಾಣಿಕತೆಯ ಮಟ್ಟವು ಹೊಸ ನೈತಿಕತೆಗೆ ದಾರಿ ಮಾಡಬೇಕು. ಅಪ್ರಾಮಾಣಿಕರಾಗಲು ಇರುವ ಅವಕಾಶಗಳ ಇಳಿತರದಿಂದ ರೂಪಾಂತರವು ಬೆಮ್ಮಬೇಕಿಲ್ಲ. ಆದರೆ ಪ್ರಾಮಾಣಿಕರಾಗಬೇಕೆಂಬ ಕಳಕಳಿಯ ಇಚ್ಛೆಯಿಂದ ಅದು ಬರಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ರೂಪಾಂತರವು ಅಧ್ಯಾತ್ಮಿಕವಾಗಿರಬೇಕು.

ಆಧಾರ ಗ್ರಂಥಗಳು

1. ಫೈಜ್ ಈ. ಎಲ್. – "ಹೌ ಬಿಗ್ ಈಜ ದಿ ಇರ್ರೆಗ್ಯುಲರ ಇಕಾನಮಿ" ಬಾಲೆಂಜ, ಸಂಪುಟ 22, ಪುಟ 5 – 13, 1979

2. ಗುಪ್ತಾ ಪಿ ಮತ್ತು ಗುಪ್ತಾ ಎಸ್ – "ಬ್ಲ್ಯಾಕ ಇಕಾನಮಿ" ಏ ರಿವ್ಯೂ ಆಫ್ ಮೆಥಾಡಾಲಜೀಸ್ ಇನ್, ಮೊಗಾ ಆ್ಯಂಡ ಸ್ಯಾಂಕ್ಷಿಸ್ ಸಂ. "ದಿ ಅನ್ ಸ್ಯಾಂಕ್ಷನ್ಡ್ ಇಕಾನಮಿ ಇನ್ ಇಂಡಿಯಾ" ಹಿಮಾಲಯಾ ಪಬ್ಲಿಶಿಂಗ್ ಹೌಸ್ 1984 ಪು 181 – 195.

3. ಎನ್.ಐ.ಪಿ.ಎಫ್.ಪಿ– 'ಆಸ್ಪೆಕ್ಟ್ಸ ಆಫ್ ಬ್ಲ್ಯಾಕ್ ಇಕಾನಮಿ ಇನ್ ಇಂಡಿಯಾ' ಮಾರ್ಚ 1985.

4. ಚೋಪ್ರಾ ಓ. ಪಿ– 'ಅನಅಕೌಂಟೆಡ್ ಇನ್ಕಮ್ : ಸಮ್ ಎಸ್ಟಿಮೇಟ್ಸ" ಇಕಾನಾಮಿಕ ಆ್ಯಂಡ್ ಪೊಲಿಟಿಕಲ್ ವೀಕ್ಲಿ– ಸಂಪುಟ 17, ಸಂ. 17 ಮತ್ತು 18, 1985.

5. ರಾಂಗ್ನೇಕರ ಡಿ. ಕೆ. "ಮಿನಿಟ ಆಫ್ ಡಿಸ್ಸೆಂಟ ಇನ್ ಡೈರೆಕ್ಟ ಟಾಕ್ಸಿಸ್ ಇನ್ಕ್ವಾಯರಿ ಕಮೀಟಿ" ಅಂತಿಮ ವರದಿ ಪು : 249.

6. ಗುಪ್ತಾ ಪಿ ಮತ್ತು ಎಸ್. ಗುಪ್ತಾ ; "ಎಸ್ಟಿಮೇಟ್ಸ ಇನ್ ದಿ ಅನ್‌ರಿಪೋರ್ಟೆಡ್ ಇಕಾನಮಿ ಇನ್ ಇಂಡಿಯಾ" ಇಕಾನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ. ಜನೇವರಿ 16 – 1982 ಪು : 69, 75.

ಅಧ್ಯಾಯ – 2

ಭಾರತದ ಅಪಾರ ಆಧ್ಯಾತ್ಮಿಕ ಬಳುವಳಿ

ಭಾರತವು ಇಡೀ ಜಗತ್ತಿನ ಗಮನ ಸೆಳೆದ ಕಾಲವೊಂದಿತ್ತು. ನಮ್ಮ ದೇಶವನ್ನು ಬಂಗಾರದ ಹಕ್ಕಿ ಎಂದು ಕರೆದರು. ಹಾಲು–ಜೇನು ಹರಿಯುವ, ಆನಂದ – ಆಧ್ಯಾತ್ಮಿಕತೆಗಳು ತುಂಬಿ ತುಳುಕುವ ನಾಡಾಗಿತ್ತು. ಅಂದು ಕೋಲಂಬಸನು ಇನ್ನೂ ಗುರುತಿಸದ ಹಾದಿಯಿರದ ಸಾಗರದಲ್ಲಿ ನಾವೆ ಏರಿದಾಗ, ಭಾರತಕ್ಕೆ ಹೋಗುವ ಪರ್ಯಾಯ ಪಥ ಕಂಡು ಹಿಡಿಯುವುದೇ ಅವನ ಗುರಿಯಾಗಿತ್ತು. ಬೇರಾವ ದೇಶಕ್ಕಾಗಿಯೂ ಅವನು ತನ್ನ ಜೀವನವನ್ನು ಹೀಗೆ ಸಂಕಟಕ್ಕೀಡು ಮಾಡಲು ಉದ್ಯುಕ್ತನಾಗುತ್ತಿರಲಿಲ್ಲ. ಹೊರನಾಡ ಜನರ ಹೃದಯದಲ್ಲಿ ಭಾರತವು ಅಂಥ ಅಚ್ಚರಿಯನ್ನು ಪ್ರಚೋದಿಸಿತ್ತು. ತಾನು ಶೋಧಿಸಿದ ನಾಡಿಗೆ ಕೋಲಂಬಸನು 'ವೆಸ್ಟ ಇಂಡೀಜ್' ಎಂದು ಕರೆದನು. ಮತ್ತು ಅಲ್ಲಿಯ ನಿವಾಸಿಗಳನ್ನು 'ಇಂಡಿಯನ್' ರೆಂದು ಕರೆದನು. ಈ ಶೋಧವು ಕೋಲಂಬಸನ ಜೀವನ ಗುರಿಯ ಕೊನೆಯಾಯಿತು. ಇಂದಿಗೂ ಸಹ, ಅಮೇರಿಕೆಯಲ್ಲಿ ಆದಿವಾಸಿಗಳನ್ನು ಇಂಡಿಯನ್ ಎಂದೇ ಕರೆಯುವುದುಂಟು.

ಭಾರತವು ಸಾವಿರಾರು ವರ್ಷ ಪರ್ಯಂತ ಅರಬರ, ಮೊಘಲರ, ಆಂಗ್ಲರ ಆಳ್ವಿಕೆಗೆ ಒಳಗಾಗಿದ್ದರೂ ಸಹ, ಭಾರತೀಯ ಧರ್ಮ ಮತ್ತು ಸಂಸ್ಕೃತಿಯನ್ನು ಹಾಳು ಮಾಡಲು ಶಕ್ಯವಾಗಲಿಲ್ಲ. ಇಜಿಪ್ತ, ಮೆಸೊಪೊಟೇಮಿಯಾ, ಗ್ರೀಕ್ ಮತ್ತು ಪರ್ಶಿಯನ್ ಮುಂತಾದ ಅನೇಕ ಪ್ರಾಚೀನ ನಾಗರಿಕತೆಗಳು ಶಕ್ರು ದಾಳಿಯಿಂದ ನಶಿಸಿ ಹೋಗಿವೆ. ಆದರೆ ಭಾರತವು ಹಾಗಾಗಿಲ್ಲ. ಈ ಉಳಿವಿನ ಕೀರ್ತಿಯು ಭಾರತೀಯ ಆಧ್ಯಾತ್ಮಿಕ ಬಳುವಳಿಗೇ ಸಲ್ಲುತ್ತದೆ. ಈ ಬಳುವಳಿಯು ವಿಶಾಲ ಮನೋಭಾವ ಹಾಗೂ ನಿಃಸ್ವಾರ್ಥ, ಚೈತನ್ಯಪೂರ್ಣ ದತ್ತಿಯೇ ಸರಿ. ಅದುವೇ ಭಾರತಜ್ಯೋತಿಯನ್ನು ಇಂದಿನ ತನಕ ಉರಿಸುತ್ತಿದೆ.

ಭಾರತದ ಭೂತಕಾಲವು ಇಷ್ಟೊಂದು ಉಜ್ವಲವಾಗಿರುವಾಗ ಅದರ ವರ್ತಮಾನ ವೇಕೆ ಈ ಪರಿ ಜನಿಸಿದ ಪ್ರತಿಯೋರ್ವನಿಂದ ಮಾಲಿನ್ಯ, ಹೊಲಸು, ಭ್ರಷ್ಟತೆ, ಸ್ವಾರ್ಥಪರತೆ, ದಾರಿದ್ರ್ಯ ಹಾಗೂ ಲೋಭಿತನಗಳೇಕೆ ಉಗ್ಗುತ್ತಿವೆ ? ನನ್ನ ಪ್ರಿಯ ಬಂಧು ಭಗಿನಿಯರೇ ! ಈ ಹಿಂದೆ ಭಾರತವನ್ನು ಮಹಾನ್ ಆಗಿಸಿದ ಕಾರಣವನ್ನು ನೀವು ಮರೆತಿರಬಹುದು. ಈ ರಾಷ್ಟ್ರವು ತನ್ನೆಲ್ಲ ಸಮಸ್ಯೆಗಳನ್ನು ಸದಾ ಅನುಷ್ಠಾನೀಯ ಆಧ್ಯಾತ್ಮದ ನೆರವಿನಿಂದ ಪರಿಹರಿಸಿಕೊಂಡಿದೆ ಯೆಂಬುದನ್ನೂ ನೀವು ಮರೆತಿರಬಹುದು. ಅದೇಕೆ ? ಇತ್ತೀಚಿನ ನಾಲ್ಕು ದಶಕಗಳ ಹಿಂದೆ, ಅಂದರೆ 1947 ರಲ್ಲಿ, ಭಾರತವು ಆಂಗ್ಲರ ಉರುಲಿನಿಂದ ಸ್ವಾತಂತ್ರ್ಯ ಪಡೆಯಿತಷ್ಟೇ ? ಅದು ಹೇಗೆ ? ಬಂದೂಕು ಖಡ್ಗಗಳಿಂದಲ್ಲ; ಅದರ ಆಧ್ಯಾತ್ಮಿಕ ಆಯುಧಗಳಿಂದ. ಪರಕೀಯರ ನೀಚ ಆಳ್ವಿಕೆಗೆ ಗಾಂಧೀಜಿಯ ಸತ್ಯಾಗ್ರಹ ಅರ್ಥಾತ್ ಅಹಿಂಸಾತ್ಮಕ ಅಸಹಕಾರವು ಉಜ್ವಲ ಉತ್ತರ ನೀಡಿತು. ಅತಿ ಕಡಿಮೆ ರಕ್ತಪಾತ ಹಾಗೂ ಹಿಂಸೆಯ ಮೂಲಕ ಬ್ರಿಟಿಶರು ಭಾರತದಿಂದ

ತೊಲಗಿದರು. ಆತ್ಮವಂಚನೆಯ ಮೇಲೆ ನಿಃಸ್ವಾರ್ಥತೆಯ ವಿಜಯಕ್ಕೆ ಇದು ಇನ್ನೊಂದು ದೃಷ್ಟಾಂತ. ಮಹಾಶಕ್ತಿಶಾಲಿ ಹಿಟ್ಲರನನ್ನೇ ಸದೆಬಡಿದ ಬ್ರಿಟಿಶರು ಗಾಂಧೀಜಿಯ ವಿಶ್ವಾಭಿರಾಮ ಸಂದೇಶದೆದುರು ತಲೆ ತಗ್ಗಿಸಬೇಕಾಯಿತು.

ಈ ಪ್ರಪಂಚದಲ್ಲಿ ತ್ರಿವಿಧ ಶಕ್ತಿಗಳಿವೆ. ಅವುಗಳೆಂದರೆ – ಭೌತಿಕ, ಬೌದ್ಧಿಕ ಹಾಗೂ ಅಧ್ಯಾತ್ಮಿಕ. ಇನ್ನು ಈ ಮೂರರಲ್ಲಿ ಅಧ್ಯಾತ್ಮಿಕ ಶಕ್ತಿಯೇ ಅತ್ಯಂತ ಪ್ರಬಲ. ಭೌತಿಕ ಮತ್ತು ಬೌದ್ಧಿಕ ಸಾಧನೆಗಳನ್ನು ಆಧರಿಸಿ ನಾಗರಿಕತೆಗಳು ಬಾಹ್ಯ ಶತ್ರುಗಳಿಂದ ಧ್ವಂಸವಾಗ ಬಹುದು. ಆದರೆ ಅಧ್ಯಾತ್ಮಿಕತೆಯಿಂದ ಪರಿಪೋಷಿತ ನಾಗರಿಕತೆಗಳು ಹಾಗಾಗವು. ಈ ಕಾರಣದಿಂದಾಗಿಯೇ ಹಿಂದಿನ ಇನ್ನಿತರ ಅಸಂಖ್ಯ ಸಮಾಜಗಳು ಕಾಲನ ಹೊಡೆತಕ್ಕೆ ಬಲಿಯಾಗಿ ದ್ದರೂ ಸಹ, ಭಾರತದ ಪ್ರಾಚೀನ ಸಂಸ್ಕೃತಿಯು ಇನ್ನೂ ಸ್ಪಂದನಶೀಲವಾಗಿಯೇ ಉಳಿದಿದೆ.

ಅನುಷ್ಠಾನಸಾಧ್ಯ ಅಧ್ಯಾತ್ಮಿಕತೆಯ ಬಲದಿಂದ ಮಾತ್ರ ಭಾರತದ ಇಂದಿನ ಸಮಸ್ಯೆಗಳಿಗೆ ಉತ್ತರ ದೊರೆಯಬಹುದು. ಈ ಅನುಷ್ಠಾನಸಾಧ್ಯ ಅಧ್ಯಾತ್ಮಿಕತೆ ಮತಧರ್ಮ ಮತ್ತು ಸೈದ್ಧಾಂತಿಕ ಆಧ್ಯಾತ್ಮಿಕತೆಗಳಿಂದ ತೀರ ಭಿನ್ನವಾಗಿದೆ. ಮತ ಧರ್ಮವು ಕೇವಲ ಭಾವಜಡತೆ, ವ್ರತನೇಮ, ಹಾಗೂ ಸಂಕುಚಿತ ವಿಚಾರಗಳಿಂದ ಕೂಡಿದೆ. ಆದರೆ ಅನುಷ್ಠಾನಸಾಧ್ಯ ಅಧ್ಯಾತ್ಮಿಕತೆಯು ವಿಶ್ವಾತ್ಮಕ ತತ್ತ್ವಶಾಸ್ತ್ರ, ನಿಃಸ್ವಾರ್ಥತೆ ಹಾಗೂ ಜೀವನದ ಗತಿಶೀಲ ವಿಧಾನವನ್ನು ಒಳಗೊಂಡಿದೆ. ಸೈದ್ಧಾಂತಿಕ ಆಧ್ಯಾತ್ಮಿಕತೆಯನ್ನು ಅಪ್ಪಿಕೊಂಡವನು ಅಗತ್ಯವಾಗಿ ನೀತಿವಂತನೂ, ವಿನಯಶಾಲಿಯೂ ಹಾಗೂ ಸುಸ್ವಭಾವಿಯೂ ಆಗಿರಬೇಕು. ಮೇಲಾಗಿ, ಗೃಹದಲ್ಲಿಯಾಗಲಿ ಇಲ್ಲವೆ ಗುಹೆಯಲ್ಲಿಯಾಗಲಿ, ಧ್ಯಾನಮಗ್ನನಾಗಿ ಮತ್ತು ತನ್ನ ಸ್ವಂತ ಮೋಕ್ಷಕ್ಕಾಗಿ ದುಡಿಯುತ್ತ ಕುಳಿತಿರುತ್ತಾನೆ. ಅವನಿಗೆ ಸಾಮಾಜಿಕ ಜೀವನದ ಚಿಂತೆ ಇಲ್ಲ. ತಾನು ಚೆನ್ನಾಗಿದ್ದರೆ ಸಾಕು ಎನ್ನುವ ವಿಚಾರದಲ್ಲಿ ಮುಳುಗಿರುತ್ತಾನೆ. ಅವನಿಂದ ಜನರಿಗಾವ ಕೇಡೂ ಇಲ್ಲ, ಸರಿ. ಆದರೆ ಅವರಿಗೆ ಯಾವುದೇ ಸಹಾಯವೂ ಇರದು. ಇದಕ್ಕೆ ವಿರುದ್ಧವಾಗಿ, ಅನುಷ್ಠಾನಪರ ಆಧ್ಯಾತ್ಮಿಕತೆಯು ಸ್ವಂತದ ಹಿತದೊಂದಿಗೆ ಸಾಮಾಜಿಕ ಹಿತವನ್ನೂ ತನ್ನ ಗುರಿಯಾಗಿಸಿಕೊಂಡಿದೆ. ಇದನ್ನೇ ಶ್ರೀಕೃಷ್ಣ ಪರಮಾತ್ಮನು ಭಕ್ತಿಪೂರ್ಣ ಕರ್ಮಯೋಗವೆಂದು ಕರೆದಿದ್ದಾನೆ. ಅನುಷ್ಠಾನಪರ ಅಧ್ಯಾತ್ಮಕತೆಯು ಐದು ಮೌಲಿಕ ತತ್ತ್ವ ಗಳನ್ನು ಆಧರಿಸಿದೆ. ಅದರ ಅಭ್ಯಾಸೆಯು ಹೀಗೆ ಹೇಳುತ್ತಾನೆ.

1. ನಾನು ಪ್ರಾಣ ತೆತ್ತೇನೇ ಹೊರತು ನನ್ನ ಸ್ವಾರ್ಥರಹಿತ ತತ್ತ್ವಗಳಿಂದ ದೂರ ಸರಿಯಲಾರೆನು.
2. ನಾನು ಅಂತರ್ಯದಲ್ಲಾಗಲಿ ಇಲ್ಲವೆ ಬಾಹ್ಯದಲ್ಲಿಯಾಗಲಿ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡುವೆ.
3. ನನ್ನೊಂದಿಗೆ ಅನ್ಯರು ಹೇಗೆ ನಡೆದುಕೊಳ್ಳಬೇಕೆಂದು ನಾನು ಇಚ್ಛಿಸುವೆನೋ, ಅದೇ ರೀತಿ, ನಾನು ಅನ್ಯರೊಂದಿಗೆ ನಡೆದುಕೊಳ್ಳುತ್ತೇನೆ.
4. ಅಡ್ಡಿ ಆತಂಕಗಳೇ ಎದುರಾಗಲಿ ಇಲ್ಲವೆ ಅಪಜಯವೇ ಬರಲಿ ನಾನಂತೂ ಸಾಮಾಜಿಕ ಪಿಡುಗಿನ ಪರಿಹಾರವಾಗುವ ವರೆಗೆ ವಿರಮಿಸೆನು.

5. ನಾನು ನನ್ನ ಸೃಷ್ಟಿಕರ್ತನ ಧ್ಯಾನವನ್ನು ನಿತ್ಯ ಮಾಡುವೆ ಮತ್ತು ಅವನು, ಎಲ್ಲಿಯೋ ಮುಗಿಲು ಮರೆಯಲ್ಲಿ ಅಡಗಿ ಕುಳಿತಿರುವನೆಂದು ಬಗೆಯದೆ ನನ್ನ ಸ್ವಂತ ತಂದೆಯೇ ಎಂದು ಬಗೆಯುವೆ. ಏನನ್ನೂ ಸ್ವಂತ ಲಾಭಕ್ಕಾಗಿ ನಾನು ಪ್ರಾರ್ಥಿಸುವುದಿಲ್ಲ; ಏಕೆಂದರೆ, ನನ್ನ ಅಗತ್ಯಗಳೇನೆಂಬುದನ್ನು ಅವನು ನನಗಿಂತ ಚೆನ್ನಾಗಿ ಬಲ್ಲನು.

ಇವು ಅನುಷ್ಠಾನ – ಪರ ಅಧ್ಯಾತ್ಮಿಕತೆಯ ಮೂಲಭೂತ ತತ್ತ್ವಗಳು, ಇದರಲ್ಲಿ ಯಾವ ಭಾವಜಡತೆಗೂ ಇಂಬಿಲ್ಲ. ಕಂದಾಚಾರ, ಆಲಸ್ಯ ಇಲ್ಲವೆ ಬಲಹೀನತೆಗೂ ಅವಕಾಶವಿಲ್ಲ. ಇದು ಧೀರರ, ಶಕ್ತಿವಂತರ ಹಾದಿ. ಇಂದಿನ ವಿಷಯಭೋಗದ ಅವನತ ಜಗತ್ತಿನಲ್ಲಿ ಅಧ್ಯಾತ್ಮಿಕತೆಯು ಕಂತೆಯ ಪುರಾಣವೆಂದು ನೀವು ಹೇಳಬಹುದು; ಭೌತಿಕ ಮತ್ತು ಬೌದ್ಧಿಕ ಶಕ್ತಿಗಳು ಅಧ್ಯಾತ್ಮವಾದಿಯನ್ನು ಹಿಮ್ಮೆಟ್ಟಿಸಬಹುದೆಂದೂ ನೀವು ತಿಳಿದಿರಬಹುದು. ಇರಲಿ; ಮರುವಿಚಾರ ಮಾಡಿರಿ. ನಾನು ನನ್ನ ವೈಯಕ್ತಿಕ ಅನುಭವದ ಮೇಲೆ ಹೇಳುತ್ತೇನೆ. ಅನುಷ್ಠಾನಪರ ಅಧ್ಯಾತ್ಮಿಕತೆಯಲ್ಲಿ ಅಮಿತ ಶಕ್ತಿ ತುಂಬಿದೆ. ಅದರ ನೆರವಿನಿಂದ ನೀವು ಸಕಲ ವಿಘ್ನಗಳನ್ನು ತುಳಿದು ಮೇಲೇರಬಲ್ಲಿರಿ.

ಭಾರತದ ಪಂಜಾಬ ಪ್ರಾಂತದಲ್ಲಿ 1943 ರಲ್ಲಿ ನಿಮ್ನ ಮಧ್ಯಮ ವರ್ಗದ ಕುಟುಂಬದಲ್ಲಿ ನನ್ನ ಜನನವಾಯಿತು. ಬಾಲ್ಯಾರಭ್ಯ ನನ್ನ ತಾಯ್ತಂದೆ ನನಗೆ ಶ್ರುತಿಗಳ – ಅದರಲ್ಲೂ ಭಗವದ್ಗೀತೆಯ – ಮಹಿಮೆಯನ್ನು ಬೋಧಿಸಿದರು. ನಿಜ ಹೇಳುವುದಾದರೆ, ನನ್ನ ತಂದೆಯ ಅನುಜ್ಞೆಯ ಮೇರೆಗೆ, ನನಗೆ ಅಷ್ಟೊಂದು ಇಷ್ಟವಿಲ್ಲದಿದ್ದರೂ, ಗೀತೆಯ ಅನೇಕ ಶ್ಲೋಕಗಳನ್ನು ಕಂಠಪಾಠ ಮಾಡಿದೆ. ಅಧ್ಯಾತ್ಮಿಕತೆಯೊಂದಿಗೆ ಅದುವೇ ನನ್ನ ಪ್ರಥಮ ಸಂಪರ್ಕ. ಆದರೆ ಅದು ಕೇವಲ ಆಕಸ್ಮಿಕ ಸಂಪರ್ಕ ಮಾತ್ರ. ಏಕೆಂದರೆ, ಆಗ ನನ್ನ ಹೃದಯ ಇನ್ನೂ ಅದನ್ನು ಒಪ್ಪಿರಲಿಲ್ಲ.

ಮುಂದೆ 1964 ರಲ್ಲಿ ದೈವತ್ವದಲ್ಲಿ ನನಗೆ ತೀವ್ರ ಆಭೀಪ್ಸೆ ಉಂಟಾಯಿತು. ನಾನು ಆನಂದಮಾರ್ಗ ಸಂಸ್ಥಾಪಕರಾದ ಶ್ರೀ ಪಿ.ಆರ್. ಸರಕಾರರಲ್ಲಿ ಅಧ್ಯಾತ್ಮಿಕ ವಿಜ್ಞಾನ ಕಲಿಯಲು ಹೋದೆ. ಸೃಷ್ಟಿಕರ್ತನನ್ನು ನನ್ನ ಸ್ವಂತ ತಂದೆ ಎಂದು ಧ್ಯಾನಿಸುವ ಬಗೆಯನ್ನು ಶ್ರೀ ಸರಕಾರರು – ಅವರನ್ನು ಬಾಬಾ ಎಂದೂ ಕರೆಯುತ್ತಾರೆ– ನನಗೆ ಬೋಧಿಸಿದರು. ಏಕಾಂತದಲ್ಲಿ ಹೇಗೆ ಧ್ಯಾನ ಮಾಡಬೇಕೆಂಬುದನ್ನು ನಾನು ಕಲಿತೆ. ಆಗಲೇ ನಾನು, ಪಾಪದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕಿಂತ ಸಾವನ್ನಪ್ಪುವುದೇ ಮೇಲು ಎಂದು ಪ್ರತಿಜ್ಞೆ ಮಾಡಿದೆ. ಆನಂತರ, ನನ್ನ ಜೀವನದಲ್ಲಿ ಸಾವಿರಾರು ಬಾರಿ ಎದುರಾದ ಪರಿಸ್ಥಿತಿಗಳಲ್ಲಿ ನನ್ನೀ ನಿರ್ಧಾರವು ಪರೀಕ್ಷೆಗೊಳಗಾಗಿ ಹೊರಬಂದಿದೆ. ನೂರಾರು ಎಳೆತ ಸೆಳೆತಗಳು ನನ್ನ ಹಾದಿಯಲ್ಲಿ ಬಂದವು. ಆದರೆ ದಿವ್ಯ ತಂದೆಯ ನೆರವಿನಿಂದ ನಾನು ಅಂಥ ಪ್ರತಿಯೊಂದನ್ನೂ ತಡೆಯಬಲ್ಲವನಾದ. ನಾನು ಕುಶಲತೆಯಿಂದ ಪ್ರಾಮಾಣಿಕನಾಗಿ ಮತ್ತು ಅಹಿಂಸಾಪರನಾಗಿ ಬಾಳಿದೆ. ಇನ್ನೇನು ಹೇಳಲಿ; ಇರುವೆ, ಗುಂಗಾಡುಗಳ ವಿಷಯದಲ್ಲಿಯೂ ಸಹ ನಾನು ತುಂಬಾ ಮೃದುವಾಗಿರುವೆ. ಒಂದು ವೇಳೆ ನನ್ನ ಮನೆಯಲ್ಲಿ ಅವುಗಳನ್ನು ಕಂಡರೆ, ನಯವಾಗಿ ಅವುಗಳನ್ನೆತ್ತಿ ಹೊರಗೆ ಇರಿಸುತ್ತೇನೆ. 1965 ರಲ್ಲಿ ನಾನು ದಿಲ್ಲಿಯ ಸ್ಕೂಲ ಆಫ್ ಇಕಾನಾಮಿಕ್ಸ್‌ದಲ್ಲಿ ನನ್ನ ಎಂ.ಎ. ಮುಗಿಸಿದೆ.

ಮುಂದೆ ಹಿಂದೂ ಕಾಲೇಜಿನಲ್ಲಿ ಅಧ್ಯಾಪಕನಾದೆ. ಒಂದು ವರುಷದ ನಂತರ ಶಿಷ್ಯವೇತನ ಲಭಿಸಿತು. ಆನಂತರ, ಸದರ್ನ ಇಲಿನಾಯಿಸ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪಡೆಯಲು ಅಮೇರಿಕೆಗೆ ಹೋದೆ. ಇದುವರೆಗೆ ನಾನು ದಿನಾಲೂ ಮೂರು ಘಂಟೆ ಧ್ಯಾನ ಮಾಡುತ್ತಿದ್ದೆ.

ನಾನು ನ್ಯೂಯಾರ್ಕಿನ ಕಡಲದಂಡೆ ತಲುಪುವುದೇ ತಡ, ಭಯಂಕರ ಸಾಂಸ್ಕೃತಿಕ ಆಘಾತಕ್ಕೀಡಾದೆ. ಹುಡುಗರು ಹಾಗೂ ಹುಡುಗಿಯರು ಅತಿಶಯವಾಗಿ ಬೆರೆಯದ ಸಮಾಜದಲ್ಲಿ ಬೆಳೆದವ ನಾನು. ಅಲ್ಲಿ ಲೈಂಗಿಕ ನಿಗ್ರಹವನ್ನು ಸದ್ಗುಣವೆಂದು ಮನ್ನಿಸುತ್ತಾರೆ. ಮತ್ತು ಧ್ಯಾನದ ಪ್ರಗತಿಗೆ ಅನಿವಾರ್ಯವೆಂದೂ ತಿಳಿಯಲಾಗಿದೆ. ಆದರೆ ಅಮೇರಿಕೆಯಲ್ಲಿ ಎಲ್ಲವೂ ತಿರುವು–ಮುರುವು. ಆಗ ಆ ನಾಡು ತಥಾಕಥಿತ ಲೈಂಗಿಕ ಕ್ರಾಂತಿಯ ಹಾದಿಯಲ್ಲಿತ್ತು. ಅಲ್ಲಿಯ ಕಿರಿಯರು ಹಿಂದಿನ ವಿಧಿನಿಷೇಧಗಳನ್ನೆಲ್ಲ ಅಲುಗಾಡಿಸಲು ಅಣಿಯಾಗಿದ್ದರು.

ಸರಿಯೋ ತಪ್ಪೋ ಕಾಣೆ; ಅಮೇರಿಕೆಯಲ್ಲಿಯ ಲೈಂಗಿಕ ಅತಿರೇಕಗಳು ನನ್ನ ಮನದಲ್ಲಿ ಆಘಾತಕರ ಅಲೆಗಳನ್ನೆಬ್ಬಿಸಿದವು. ತೌಲನಿಕವಾಗಿ ನೋಡಿದರೆ ನಾನು ಬೆಳೆದದ್ದು ಸಾಂಪ್ರದಾಯಿಕ ಸಮಾಜದಲ್ಲಿ. ಇಲ್ಲಿಯಾದರೋ ಎಲ್ಲವೂ ಮುಚ್ಚು ಮರೆಯಿಲ್ಲದ ಬಟ್ಟ ಬಯಲು. ಅದರ ಸೆಳೆತ ನನ್ನನ್ನು ಬೋಧಿಸದಿರಲಿಲ್ಲ. ದಿನಗಳೆಯುವ ಪಾರ್ಟಿಗಳಿಗಾಗಿ, ಪಿಕ್‌ನಿಕ್ಕಿಗೆ ಹೋಗುವದಕ್ಕಾಗಿ ಹುಡುಗಿಯರು ಸಿಗುತ್ತಿದ್ದರು. ಅವರ ಮೇಲೆ ಕಣ್ಣಿಡಲು ಅವರ ತಾಯ್ತಂದೆ, ಬಂಧು–ಬಳಗದವರು ಇರುತ್ತಿರಲಿಲ್ಲ. ಆದರೂ ಸಹ, ನಾನಿನ್ನೂ ವಿವಾಹಕ್ಕೆ ಸಿದ್ಧನಾಗಿಲ್ಲದ ಕಾರಣ ಹಾಡುಗಿಯರೊಂದಿಗೆ 'ಪಾರ್ಟಿ' ನಿಶ್ಚಯಿಸುವದು ಬರೀ ಕಾಲಹರಣ ಎಂದು ಭಾವಿಸಿದೆ.

ಹೀಗೆ ನನ್ನ ಸುತ್ತಲೂ ಧಳಕು ಬೆಳಕಿನ ಸಾಗರವೇ ಪಸರಿಸಿದ್ದರೂ ಸಹ, ನಾನು 1964 ರಲ್ಲಿ ಭಾರತದಲ್ಲಿ ಆರಂಭಿಸಿದ ನನ್ನ ಶಿಸ್ತುಬದ್ಧ ಜೀವನವನ್ನೇ ಸಾಗಿಸಲು ನಿರ್ಧರಿಸಿದೆ. ಆದರೆ, ಸೆಳೆತಗಳನ್ನು ತಡೆಯಲು ನಾನು ಧ್ಯಾನದ ಅವಧಿಯನ್ನು ಒಮ್ಮೆಲೇ ಹೆಚ್ಚಿಸಿದೆ. ರೂಢಿಯ ಮೂರು ಘಂಟೆಗಳ ಬದಲಾಗಿ ಎಂಟು ಘಂಟೆ ಕಾಲ ದೈವೀ ಚಿಂತನಕ್ಕಾಗಿ ಮೀಸಲಿರಿಸಿದೆ. ಕೆಲವೊಮ್ಮೆಯಂತೂ ನಾನು ನನ್ನ ಮನದ ಆಳ ಸ್ತರಗಳಲ್ಲಿ ಎಷ್ಟೊಂದು ಮಗ್ನನಾಗಿರುತ್ತಿದ್ದನೆಂದರೆ, ವರ್ಗಕ್ಕೆ ಹೋಗುವುದೂ ತಪ್ಪುತ್ತಿತ್ತು; ಪಾಠ ಕೇಳುವುದೂ ತಪ್ಪುತ್ತಿತ್ತು. ಅಭ್ಯಾಸದತ್ತ ಕೇಂದ್ರೀಕರಿಸುವುದು ಬರಬರುತ್ತ ಕಷ್ಟಕರವಾಯಿತು. ಮೇಲಾಗಿ ನಾನು ಕಲಿಯುತ್ತಿರುವದು ತತ್ತ್ವಜ್ಞಾನವಂತೂ ಅಲ್ಲವಲ್ಲ; ನನ್ನ ವಿಷಯವಾದರೋ ಅರ್ಥಶಾಸ್ತ್ರ. ಅದು ಇನ್ನಿತರ ವಿಷಯಗಳೊಂದಿಗೆ, ಹೇಗೆ ಹಣ ಮಾಡಬೇಕೆಂಬುದನ್ನು ಇಲ್ಲವೆ ಹೇಗೆ ವ್ಯವಹರಿಸಬೇಕೆಂಬುದನ್ನು ಕಲಿಸುತ್ತಿದೆಯಷ್ಟೇ.

ಆ ದಿನಗಳಲ್ಲಿ ನನ್ನ ಮನಸ್ಸು ಆಧ್ಯಾತ್ಮಿಕ ಪ್ರಪಂಚದಲ್ಲಿ ಓಲಾಡುತ್ತಿತ್ತು. ಸ್ಥೂಲ ವೈಷಯಿಕ ಪ್ರಪಂಚದಿಂದ ದೂರ ಹೋಗಿ ರೂಢಿಯ ಜೀವನದ ಸದ್ದು ಗದ್ದಲದಿಂದ ಹಾಗೂ ನಾಗರಿಕ ಪ್ರಪಂಚದಿಂದ ದೂರವಿರುವ ನಿರ್ಜನವಾದ, ಯಾವುದೋ ಒಂದು ಏಕಾಂತ ಸ್ಥಾನದಲ್ಲಿ ಆತ್ಮಮಗ್ನನಾಗಿ ಕುಳಿತುಕೊಳ್ಳಬೇಕೆಂದಿದ್ದೆ. ಆದರೇನು ಮಾಡುವುದು? ಅರ್ಥಶಾಸ್ತ್ರದಲ್ಲಿ

ಪಿಎಚ್.ಡಿ. ಮಾಡಲು ಶಿಷ್ಯವೇತನ ಪಡೆದು ನಾನು ಅಮೇರಿಕೆಗೆ ಬಂದಿದ್ದೆ. ನಾನು ಹಾಳೆಗಳ ಹೊರೆಯನ್ನು ಬರೆದು ತುಂಬಬೇಕಿತ್ತು. ಪ್ರಶ್ನೆಗಳಿಗೆ ಉತ್ತರಿಸಬೇಕಿತ್ತು. ವಿಚಾರ ಸಂಕಿರಣಗಳಿಗೆ ಹಾಜರಾಗಬೇಕಿತ್ತು. ಇಷ್ಟೇ ಏಕೆ ? ಸುದೀರ್ಘ ಪರೀಕ್ಷೆಗಳನ್ನು ಪಾಸಾಗಬೇಕಿತ್ತು. ಅದು ತುಂಬಾ ಕಷ್ಟಕರವಿತ್ತು. ನನ್ನ ಜೀವನವು ಬರೀ ದುಗುಡದುಮ್ಮಾನಗಳ ಒಂದು ವ್ಯಾಯಾಮವಾಗಿತ್ತು.

ನನಗೆ ಅತ್ಯಂತ ಮೆಚ್ಚಿನ ಸಂಗತಿಯೆಂದರೆ ನನ್ನ ದಿವ್ಯ ತಂದೆಯ ಮಧುರ ದರ್ಶನ. ನಾನವನನ್ನು ಮುಖಾಮುಖಿ ಭೆಟ್ಟಿಯಾಗಿ, ಭೂಮಿಯನ್ನು ಆವರಿಸಿದ ಬಡತನವನ್ನು ನಿವಾರಿಸುವಲ್ಲಿ ಅವನ ನೆರವನ್ನು ಕೋರಲು ಬಯಸಿದೆ. ಬಡತನ ಮತ್ತು ಶೋಷಣೆಗಳಿಂದ ಮುಕ್ತವಾದ ಜಗತ್ತನ್ನು ನಿರ್ಮಿಸುವಲ್ಲಿ ನಾನು ಶಕ್ತನಾಗದಿದ್ದರೆ ನನ್ನ ಬಾಳಿಗಾವ ಬೆಲೆ ಬಂದೀತು? ಎಂದು ನಾನು ಭಾವಿಸಿದೆ. ಆದರೆ ನನ್ನ ತಂದೆಯ ದರ್ಶನವು ನನ್ನ ಆಳವಿನಲ್ಲಿ ಬಾರದಾಯಿತು. ನಾನು ಧ್ಯಾನ ಮಾಡಿಯೇ ಮಾಡಿದೆ. ಸಕಲ ಯೋಗಾಭ್ಯಾಸಗಳನ್ನೂ ನಡೆಸಿದೆ. ಆದರೂ ಸಹ ನನ್ನ ತಂದೆ ಮುಂಚಿನಂತೆಯೇ ದೂರವಿದ್ದನು. ನನ್ನ ಹೃದಯದ ದುಗುಡವು ದ್ವಿಗುಣಿಸಿತು. ಒಂದೆಡೆ ತಪ್ಪಿಸಲಾಗದ, ಅರ್ಥಶಾಸ್ತ್ರದ ಅಧ್ಯಯನದ ಹೊರೆ; ಇನ್ನೊಂದೆಡೆ ದಿವ್ಯತೆಯ ವಿರಹದಿಂದ ಉದ್ಭೂತವಾದ ಡವ ಡವ. ದಿನಾಲೂ ಕಣ್ಣೀರಿನ ಕೋಡಿ ಹರಿಯಿತು. ಘಂಟೆಗಟ್ಟಲೆ ಸಾಕಷ್ಟು ಆಕ್ರಂದಿಸಿದೆ. ನನ್ನ ತಂದೆ ಇರುವುದಾದರೂ ಎಲ್ಲಿ ? ನಾನೇಕೆ ಅವನ ದರ್ಶನಾಶೀರ್ವಾದ ಪಡೆಯುತ್ತಿಲ್ಲ? ಎಂಬ ದುಗುಡವೇ ನನ್ನ ಅಳಲಿಗೆ ಕಾರಣವಾಗಿತ್ತು.

ನನ್ನ ತಂದೆ ನನ್ನೊಂದಿಗೇ ಇದ್ದ. ಆ ಕಾಲಕ್ಕೆ ಅವನನ್ನು ಕಾಣುವ 'ಕಣ್ಣು' ನನಗಿರಲಿಲ್ಲವಷ್ಟೇ. ನಾನು ಅಧ್ಯಯನಕ್ಕಾಗಿ ಕೇವಲ ಎರಡು ಇಲ್ಲವೆ ಮೂರು ಘಂಟೆಗಳನ್ನು ಮಾತ್ರ ಮೀಸಲಾಗಿರಿಸಿದ್ದೆ. ಆದರೂ ಸಹ, ಅದು ಹೇಗೋ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿ ಪಡೆಯುತ್ತಿದ್ದೆ. ಅಷ್ಟೊಂದು ಪಾಠ ತಪ್ಪಿಸಿದರೂ ಕೂಡ ನಾನು 'ಎ' ಶ್ರೇಣಿ ಪಡೆಯುತ್ತಿದ್ದ ಬಗ್ಗೆ ನನ್ನ ಪ್ರಾಧ್ಯಾಪಕರಿಗೂ ಅಚ್ಚರಿ ! ನಾನೊಬ್ಬ ಅಸಾಮಾನ್ಯ ಪ್ರತಿಭಾವಂತನೇ ಇರಬೇಕೆಂದು ಅವರು ಭಾವಿಸಿದರು. ಆದರೆ ಅದೃಷ್ಟ ಮೂಲದಿಂದ ನೆರವು ಬರುತ್ತಿತ್ತೆಂದು ನನಗೆ ವೇದ್ಯವಾಗಿತ್ತು.

ಅಮೇರಿಕೆಗೆ ಬಂದ ಮೊದಲ ವರ್ಷ – ಅಂದರೆ ಆಗಸ್ಟ 1966 ರಿಂದ ಆಗಸ್ಟ 1967 – ನಾನು ಅರ್ಥಶಾಸ್ತ್ರದಲ್ಲಿಯ ಸ್ನಾತಕೋತ್ತರ ಅಭ್ಯಾಸದ ಮರು ಅಧ್ಯಯನ ಮಾಡಿದೆ. ಆ ಹೊತ್ತಿಗೆ ನನ್ನ ಅಧ್ಯಯನ ಕುರಿತು ನನಗೆ ಬೇಜಾರಾಗಿತ್ತು. ಧ್ಯಾನ ಮಾಡಲು ನನಗೆ ಬಿಡುವು ಬೇಕಿತ್ತೇ ಹೊರತು, ಬೇರಾವ ಕೆಲಸಕ್ಕೂ ಇಷ್ಟವಿರಲಿಲ್ಲ. 1967 ರ ಸಪ್ಟೆಂಬರ ತಿಂಗಳ ಆರಂಭಕ್ಕೆ ನಾನು ನನ್ನ ಮಾರ್ಗದರ್ಶಕರಾಗಿದ್ದ ಡಾ. ಅಲ್ಬರ್ಟ ಬಾಡ್ರೆ ಅವರನ್ನು ಭೆಟ್ಟಿಯಾಗಿ ಆ ತಿಂಗಳಿನಲ್ಲಿಯೇ ಎಲ್ಲ ಏಳೂ ಪೂರ್ವಪರೀಕ್ಷೆಗಳನ್ನು ತೆಗೆದುಕೊಳ್ಳಲು ಕೇಳಿದೆ. ಅವರು ಅದಕ್ಕಾಗಿ ನನ್ನತ್ತ ನೋಡಿದರು. ಏಕೆಂದರೆ, ಪೂರ್ವಪರೀಕ್ಷೆಯ ಅವಶ್ಯಕ ಸಿದ್ಧತೆಗಾಗಿ ನಾನಿನ್ನೂ ಪೂರ್ಣ ಎರಡು ವರುಷದ ಪಾಠಕ್ರಮವನ್ನು ಮುಗಿಸಬೇಕಿತ್ತು. "ನಿನ್ನ ತಲೆ ಕೆಟ್ಟಿದೆಯೋ ಇಲ್ಲವೆ ನನ್ನೊಂದಿಗೆ ಹುಡುಗಾಟ ನಡೆಸಿರುವೆಯೇ?" ಎಂದರು ಡಾ. ಬಾಡ್ರೆ. "ನೀನೊಂದು ವೇಳೆ ನಾಪಾಸಾದರೆ ಶಿಷ್ಯವೇತನ ಕಳೆದುಕೊಂಡು ಭಾರತಕ್ಕೆ ಮರಳಬೇಕಾಗುತ್ತದೆ" ಎಂದರವರು.

ಬೇಗ ಪರೀಕ್ಷೆ ತೆಗೆದುಕೊಳ್ಳುವುದರಲ್ಲಿಯ ಅಪಾಯ ಕುರಿತು ನನಗೂ ಅರಿವಿತ್ತು. ಆದರೂ ಸಹ ಅರ್ಥಶಾಸ್ತ್ರ ಕುರಿತು ನನಗೆ ಎಷ್ಟೊಂದು ಅಸಡ್ಡೆ ಉಂಟಾಗಿದ್ದಿತೆಂದರೆ, ಆ ಕಾಲಕ್ಕೆ ನನಗಾಗುವ ಯಾವುದೇ ಪ್ರಾಪಂಚಿಕ ಹಾನಿಯನ್ನು ಎಣಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ, ನನ್ನ ಪೂರ್ವ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕೆಂದೇ ನಾನು ಒತ್ತಾಯಿಸಿದೆ. ಅವುಗಳಿಗೆ ಸಿದ್ಧತೆ ಮಾಡಿಕೊಳ್ಳಲು ಒಂದು ತಿಂಗಳು ಕಾಲಾವಧಿ ಕೋರಿದೆ.

ಹೀಗೆ ನಾನು ಪ್ರತಿದಿನ ಧ್ಯಾನದ ಅವಧಿಯನ್ನು ಎರಡು ಘಂಟೆಗಳಿಗೆ ಮೊಟಕುಗೊಳಿಸಿದೆ. ಪ್ರತಿಯಾಗಿ ನಾನು ದ್ವೇಷಿಸಿದ ವಿಷಯವನ್ನೇ ಜೋರಾಗಿ ಅಭ್ಯಸಿಸತೊಡಗಿದೆ. ಒಟ್ಟು ಏಳು ವಿವಿಧ ರಂಗಗಳಲ್ಲಿ ವಿಷಯವನ್ನು ಜೀರ್ಣಿಸಿಕೊಳ್ಳಬೇಕಿತ್ತು. ಅವುಗಳೆಂದರೆ, ಮೈಕ್ರೋ ಅರ್ಥಶಾಸ್ತ್ರ, ಮ್ಯಾಕ್ರೋ ಅರ್ಥಶಾಸ್ತ್ರ, ಅಂತಾರಾಷ್ಟ್ರೀಯ ಅರ್ಥಶಾಸ್ತ್ರ, ಆರ್ಥಿಕ ಅಭಿವೃದ್ಧಿ, ಗಣಿತ – ಅರ್ಥಶಾಸ್ತ್ರ, ಅಮೇರಿಕೆಯ ಆರ್ಥಿಕ ಚರಿತ್ರೆ ಹಾಗೂ ಅಮೇರಿಕೆಯ ಕೂಲಿಕಾರರ ಚರಿತ್ರೆ. ಮೊದಲಿನ ನಾಲ್ಕಂತೂ ನನಗೆ ಗೊತ್ತು ಇದ್ದವು. ಆದರೆ ಕೊನೆಯ ಮೂರಕ್ಕೆ ನಾನು ಅಪರಿಚಿತ. ನನಗುಳಿದ ಅಲ್ಪ ಕಾಲವನ್ನು ನಾನು ಆಯಾ ವಿಷಯಗಳ ಸಂಕ್ಷಿಪ್ತ ವಿವರಗಳನ್ನು ಪ್ರಸ್ತುತ ಪಡಿಸುವ ಸಮೀಕ್ಷಾ ಲೇಖನಗಳತ್ತ ಲಕ್ಷ್ಯಹರಿಸಿದೆ.

ನನ್ನ ಪ್ರೀತಿಯ ಅಧ್ಯಯನದ ವಿಷಯವೆಂದರೆ ಅಂತಾರಾಷ್ಟ್ರೀಯ ಅರ್ಥಶಾಸ್ತ್ರ. ಅದನ್ನು ನಾನು ದಿಲ್ಲಿ ಸ್ಕೂಲ್ ಆಫ್ ಇಕಾನಾಮಿಕ್ಸ್‌ದಲ್ಲಿ ಅಧ್ಯಯನ ಮಾಡಿದ್ದೆ. ಆಗ ಜಗದೀಶ ಭಗವತಿಯವರು ನನ್ನ ಪ್ರಾಧ್ಯಾಪಕರಾಗಿದ್ದರು. ಆ ವಿಷಯದಲ್ಲಿ ಅವರೊಬ್ಬ ಜಾಗತಿಕ ಖ್ಯಾತಿಯ ಅಧಿಕಾರಸಂಪನ್ನರಾಗಿದ್ದರು. ಪೂರ್ವ ಪರೀಕ್ಷೆಗಾಗಿ ನಡೆಸಿದ ಆವೇಶಪೂರ್ಣ ಕ್ರಮದಲ್ಲಿ ನನಗೊಂದು ಆಲೋಚನೆಯು ಹೊಳೆಯಿತು. ಅದೆಂದರೆ ನನ್ನೊಲುಮೆಯ ವಿಷಯಾಭ್ಯಾಸದ ಹಾದಿಯ ಆ ಕ್ಷೇತ್ರದಲ್ಲಿ ಏನಾದರೂ ಮೌಲಿಕವಾದುದನ್ನು ಬರೆಯುವುದು. ಆ ನಂತರದ ಹದಿನೈದು ದಿನಗಳಲ್ಲಿ ನಾನು "ಇಂಟರನ್ಯಾಶನಲ್ ಟ್ರೇಡ್, ಇಕಾನೊಮಿಕ್ ಗ್ರೋಥ್ ಆ್ಯಂಡ ದಿ ಟರ್ಮ್ಸ ಆಫ್ ಟ್ರೇಡ್" (ಅಂತಾರಾಷ್ಟ್ರೀಯ ವಾಣಿಜ್ಯ, ಆರ್ಥಿಕ ಬೆಳವಣಿಗೆ ಹಾಗೂ ವಾಣಿಜ್ಯ ಕರಾರುಗಳು) ಎಂಬ ನೂರು ಪುಟಗಳ ಸಿದ್ಧಾಂತ ಬರೆಯುವುದರಲ್ಲಿ ಕಳೆದೆ. ಆ ವಿಷಯ ಕುರಿತು ಆ ಕಾಲಕ್ಕೆ ಬಿಸಿ ಬಿಸಿ ಚರ್ಚೆ ನಡೆದಿತ್ತು. ಈ ರೀತಿ ನನ್ನ ಪ್ರಬಂಧವು ಸಿದ್ಧವಾಯಿತು. ಅದನ್ನು ನಾನು ನನ್ನ ಮಾರ್ಗದರ್ಶಿಗೆ ತೋರಿಸಿದೆ. ನನ್ನ ಧಾರ್ಷ್ಟ್ಯ ಕಂಡು ಅವರ ಮಾತೇ ನಿಂತಿತು.

ಸ್ವಸ್ಥ ಮನಸ್ಸುಳ್ಳ ಯಾವನೂ ಪೂರ್ವ ಪರೀಕ್ಷೆಗಳಲ್ಲಿ ಪಾಸಾಗದೆ ತನ್ನ ಸಿದ್ಧಾಂತವನ್ನು ಬರೆಯಲಾರನು. ಆ ಹಂತ ದಾಟಿದ ಮೇಲೂ ಸಹ, ವಿದ್ಯಾರ್ಥಿಯು ಅನುಸರಿಸಬೇಕಾದ ಸಾಮಾನ್ಯ ಕ್ರಮವೆಂದರೆ, ಪ್ರಬಂಧದ ಪರಿಚಯ ಪಟ್ಟಿಯನ್ನು ಬರೆದು ಅರ್ಥಶಾಸ್ತ್ರ ವ್ಯಾಸಂಗದ ಸದಸ್ಯರನ್ನೊಳಗೊಂಡ ಸಮಿತಿಯಿಂದ ಅನುಮೋದನೆ ಪಡೆಯುವುದಾಗಿದೆ. ಪರಿಚಯ ಪಟ್ಟಿಯ ಹಂತದ ನಂತರ ತನ್ನ ಸಂಶೋಧನೆ ನಡೆಸಲು ಮತ್ತು ತನ್ನ ಪ್ರಬಂಧವನ್ನು ಪೂರ್ತಿಗೊಳಿಸಲು ಒಂದೆರಡು ವರ್ಷ ತೆಗೆದುಕೊಳ್ಳುತ್ತಾನೆ. ನಾನು ಈ ಎಲ್ಲ ಹಂತಗಳನ್ನು ಬದಿಗೆ ತಳ್ಳಿದ್ದಲ್ಲದೆ, ಡಾ.ಬಾಡ್ರೆಯವರಿಗಾಗಲಿ ಇಲ್ಲವೆ ಇನ್ನಾವ ಸದಸ್ಯರಿಗಾಗಲಿ ತಿಳಿಸದೆಯೇ

ನನ್ನ ಸಿದ್ಧಾಂತವನ್ನು ಬರೆದಿದ್ದೇನೆಂದು ಹೇಳುವ ಧಾರ್ಷ್ಟ್ಯ ತೋರಿದ್ದೆ. ನನ್ನ ಮಾರ್ಗದರ್ಶಿಯು ಸಿದ್ಧಾಂತವನ್ನು ಅವಲೋಕಿಸಿ, ನನ್ನನ್ನು ಕುರಿತು "ಮಿ. ಬತ್ರಾ ಬೇರೆ ಯಾರಾದರೂ ತನ್ನ ಪ್ರಬಂಧವನ್ನು ತನ್ನ ಪದವಿಯ ಇಷ್ಟೊಂದು ಪ್ರಾರಂಭ ಕಾಲದಲ್ಲಿ ತಂದಿದ್ದರೆ, ಅವನು ನನ್ನ ಕಾಲು ಹಿಡಿದೆಳೆಯುತ್ತಾನೆಂದೇ ಭಾವಿಸುತ್ತಿದ್ದೆ. ಆದರೆ ನಿನ್ನ ವಿಷಯದಲ್ಲಾದರೋ ನಾನು ಗಂಭೀರನಾಗಿರಬೇಕಾಗಿದೆ" ಎಂದರು.

ನಾನು ನನ್ನ ಪ್ರಬಂಧ ಬರೆದು ಮುಗಿಸಿದ ಬಳಿಕ ಪೂರ್ವ ಪರೀಕ್ಷೆಗೆ ಸಿದ್ಧನಾದೆನು. ನಾನು ಅಧೀರನಾದೆ. ಮನಸ್ಸು ಹೊಯ್ದಾಡತೊಡಗಿತು. ಅದರಲ್ಲೂ ವಿಶೇಷವಾಗಿ ಅಮೇರಿಕೆಯ ಅರ್ಥಶಾಸ್ತ್ರ ಹಾಗೂ ಶ್ರಮ ಸಂಪತ್ತಿನ ಇತಿಹಾಸದ ವಿಷಯದಲ್ಲಂತೂ ಹಾಗಾಯಿತು. ಏಕೆಂದರೆ ನಾನೆಂದೂ ಮೊದಲು ಅವುಗಳ ಅಧ್ಯಯನ ಮಾಡಿರಲಿಲ್ಲ. ಆದರೆ ನಾನು ಉಚ್ಚ ಶ್ರೇಣಿಯಲ್ಲಿ ಪಾಸಾದ ಏಳು ಪೂರ್ವ ಪರೀಕ್ಷೆಗಳಲ್ಲಿ ಐದರಲ್ಲಿ ಸಾಕಷ್ಟು ಚೆನ್ನಾಗಿಯೇ ಯಶಸ್ವಿಯಾಗಿದ್ದೆ. ನನ್ನ ಪ್ರಾಧ್ಯಾಪಕರು ಇನ್ನೊಮ್ಮೆ ದಂಗಾದರು. ಆದರೆ ನನ್ನ ಮಾರ್ಗದರ್ಶಿಗೆ ಮಾತ್ರ ಅದು ಹಾಗೆಯೇ ಆಗುವುದು ಶತಃಸಿದ್ಧವೆನಿಸಿತ್ತು. ಅಸಹನೆ ಅಥವಾ ಔದ್ಧತ್ಯದ ಮೂಲಕ ನಾನು ಗೆಯ್ದ ಕೆಲವು ಸಂಗತಿಗಳು ಹೆಚ್ಚುಹೆಚ್ಚಾಗಿ ಅವರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದವು.

ಘಟನಾವಳಿಗಳ ತಿರುವುಗಳನ್ನು ಕಂಡು ನಾನು ಸ್ವತಃ ಮೂಕವಿಸ್ಮಿತನಾದೆ. ನಾನು ನನ್ನ ತಂದೆಯಲ್ಲಿರಿಸಿದ ಅಂಧ ಶ್ರದ್ಧೆಯಿಂದಾಗಿ ನಂಬಲಾರದ ಪೇಚನ್ನು ಬರಮಾಡಿಕೊಂಡಿದ್ದೆ. ಆದರೆ ಅಧ್ಯಯನದಲ್ಲಿಯ ಅಡ್ಡಿ ಆತಂಕಗಳನ್ನು ಇಷ್ಟೊಂದು ಅನಾಯಾಸವಾಗಿ ಮತ್ತು ತೀವ್ರಗತಿಯಲ್ಲಿ ವಾಸ್ತವವಾಗಿ ದಾಟುತ್ತೇನೆಂದು ನಾನೆಂದೂ ಎಣಿಸಿರಲಿಲ್ಲ. ಮೂರು ವರ್ಷಗಳ ಪರಿಶ್ರಮಪೂರ್ಣ ಕಷ್ಟಕರ ಕಾರ್ಯವು ಕೇವಲ ಎರಡು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಕೈಗೂಡಿತ್ತು.

ನನ್ನ ಹಲವಾರು ಸಹಪಾಠಿಗಳು ಭಾರತ ದೇಶದಿಂದ ಬಂದಿದ್ದರು. ಅವರೆಲ್ಲ ಚಕಿತರಾದರು. ಈಗ ಮೈಸೂರು ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಇಲಾಖೆಯ ವರಿಷ್ಠ ರಾಗಿರುವ ಮದ್ದಪ್ಪ ಮದ್ದಯ್ಯ ಅವರು ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ.ಗಾಗಿ ಓದುತ್ತಿದ್ದ ಇನ್ನೋರ್ವ ಭಾರತೀಯ. ಇದಲ್ಲದೆ ನನ್ನೊಂದಿಗೆ ' 'ಸದರ್ನ ಇಲ್ಲಿನೋಯಿಸ್ ವಿಶ್ವವಿದ್ಯಾಲಯದಲ್ಲಿ ಇತರ ವಿಷಯ ತೆಗೆದುಕೊಂಡು ಓದುತ್ತಿದ್ದ ಇನ್ನಿತರ ಗೆಳೆಯರಿದ್ದರು. ಅವರಲ್ಲಿ ದಿಲೀಪ, ಪ್ರತಿಮಾ ದೇಸಾಯಿ, ವಿಪಿನ್ ದೇಸಾಯಿ, ಸತ್ಯೇಂದ್ರ ವರ್ಮಾನಿ, ಓಂಕಾರ ದೇವಗಣ ಮುಂತಾದವರು ಇದ್ದರು.

ಅವರೆಲ್ಲರಿಗೂ 'ಶಾಕ್' ಆಯಿತು. ಧ್ಯಾನದಲ್ಲಿಯೇ ಮುಳುಗಿರುವ ನನ್ನ ವೈಪರೀತ್ಯ ಅವರಿಗೆ ಗೊತ್ತು. ಮತ್ತು ನಾನು ಅಧ್ಯಯನಕ್ಕಾಗಿ ಮೀಸಲಿರಿಸಿದ ಸಮಯ ಎಷ್ಟೊಂದು ಅಲ್ಪ ಎಂಬುದನ್ನೂ ಅವರು ಬಲ್ಲರು. ಆದರೂ ಸಹ, ನಾನು ಕೇವಲ ಎರಡೇ ತಿಂಗಳಲ್ಲಿ ಎಸ್.ಐ.ಯು. ದಲ್ಲಿ ನನ್ನ ಮಾಸ್ಟರ ಪದವಿ ಪಡೆದು ನಂತರ ಪಿಎಚ್.ಡಿ. ಪದವಿಯನ್ನು ಪಡೆಯುವದರಲ್ಲಿದ್ದೆ.

ಆದರೆ, ನಾನಿನ್ನೂ ನನ್ನ ಪದವಿಯನ್ನು ವಾಸ್ತವವಾಗಿ ಪಡೆಯಲು ಸಿದ್ಧನಿರಲಿಲ್ಲ. ನನ್ನ ಶಿಷ್ಯವೇತನದ ಅವಧಿಯು ಇನ್ನೂ ಎರಡು ವರ್ಷ ಬಾಕಿ ಉಳಿದಿತ್ತು. ಕೇವಲ ಧ್ಯಾನ ಮಾಡಲು ಇದೊಂದು ಒಳ್ಳೆ ಅವಕಾಶವಾಗಿತ್ತು. ನನ್ನ ಕಳಕಳಿಯ ಪ್ರಾರ್ಥನೆಯನ್ನು ನನ್ನ ತಂದೆ ಮನ್ನಿಸಿದನೆಂದು ನನಗನಿಸಿತು. "ನನ್ನ ಸಿದ್ಧಾಂತವನ್ನು ಓದಿಕೊಳ್ಳಲು ನೀವು ಬೇಕಾದಷ್ಟು ಕಾಲ ತೆಗೆದುಕೊಳ್ಳಬಹುದೆಂದು ನಾನು ತಿಳಿಸಿದಾಗ ಡಾ.ಬಾಡ್ರ್ಗ ತುಂಬಾ ಅಚ್ಚರಿ; ನನಗೇನೂ ಗಡಿಬಿಡಿ ಇರಲಿಲ್ಲ. ಆದರೆ ನಾನೇಕೆ ಮೊದಲು ಇಷ್ಟೊಂದು ಧಾವಿಸಿದೆನೆಂಬ ಬಗೆಗೆ ಅವರಿಗೆ ಆಶ್ಚರ್ಯವೆನಿಸಿತು. ನಾನು ಪದವಿ ಪಡೆದು ಪ್ರಾಧ್ಯಾಪಕ ಹುದ್ದೆ ಹಿಡಿಯಬಹುದೆಂದು ಅವರ ಸಲಹೆ. ಅದರಿಂದ ನನ್ನ ಆದಾಯ ಶಿಷ್ಯವೇತನದ ನಾಲ್ಕು ಪಟ್ಟು ಆಗುತ್ತಿತ್ತು. ನನಗೆ ಹಣ ಗಳಿಕೆಯಲ್ಲಿ ಅಭಿರುಚಿ ಇಲ್ಲವೆಂದು ಅವರಿಗೆ ಹೇಳಿಬಿಟ್ಟೆ. "ಏನಪ್ಪಾ ಪೌರ್ವಾತ್ಯ ತತ್ತ್ವಜ್ಞಾನೀ! ನನಗೆ ನೀನೊಂದು ಒಗಟಾಗಿರುವ ನಿನ್ನನ್ನು ತಿಳಿಯುವುದು ಕಷ್ಟಸಾಧ್ಯ" ಎಂದು ಗುನುಗುನಿಸಿದರು ಡಾ. ಬಾಡ್ರ್. ಅವರಷ್ಟೇ ಏಕೆ ? ನನ್ನ ತಾಯ್ತಂದೆ ಸೇರಿದಂತೆ ಇತರರೂ ಆ ಗುಟ್ಟು ತಿಳಿಯರು. ಬೇಗನೆ ಪದವಿ ಪಡೆದು ಭಾರತಕ್ಕೆ ಮರಳಲಿ ಎಂಬುದು ನನ್ನ ತಾಯ್ತಂದೆಯಂದಿರ ಇಚ್ಛೆ.

ನನ್ನ ಹಂಚಿಕೆಗಳೇ ಬೇರೆ. ಶಿಕ್ಷಣಾಭ್ಯಾಸದ ಆತಂಕ ದೂರಾದ ಮೇಲೆ ನಾನು ಅಹೋರಾತ್ರಿ ಹಿಂದೆಂದೂ ಮಾಡದಷ್ಟು ಧ್ಯಾನವನ್ನು ಮಾಡಿದೆ. ನಾನು ಶ್ರೀ ದಿಲೀಪ ದೇಸಾಯಿಯವರ ನೆರೆಹೊರೆಯವನಾಗಿದ್ದೆ. ಶ್ರೀ ದೇಸಾಯಿ ಒಬ್ಬ ಜಾಣ ಪ್ರಾಮಾಣಿಕ ತತ್ತ್ವನಿಷ್ಠ ಜೀವಿ. ಅವನಿಗೆ ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಶ್ರದ್ಧೆ. ಅವರೀಗ ಬಡೋದೆಯಲ್ಲಿ ಎಲ್ಲಿಯೋ ಇರಬೇಕು. ಅಲ್ಲಿ ಅವನ ಪತ್ನಿ ಶ್ರೀಮತಿ ಪ್ರತಿಮಾ ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ನಿಬಂಧಕಳಾಗಿದ್ದಾಳೆ.

ನನಗೂ ದಿಲೀಪನಿಗೂ ಬಹಳಷ್ಟು ಸಾಮ್ಯತೆ ಇತ್ತು. ಅವನು ಕಾಲ ಕಾಲಕ್ಕೆ ನಾನಿರುವೆಡೆ ಬರುತ್ತಿದ್ದ, ಮತ್ತು ನಾನು ಆತ್ಮಮಗ್ನನಾಗಿರುವುದನ್ನು ಕಂಡುಕೊಳ್ಳುತ್ತಿದ್ದ. ನನ್ನ ತಂದೆಯ ವಿರಹದಿಂದ ನನಗಾದ ದುಗುಡವನ್ನೂ, ತಳಮಳವನ್ನೂ ನಿಜವಾಗಿ ಅರಿಯಬಲ್ಲ ಬೇರೊಬ್ಬ ಮಿತ್ರನಿರಲಿಲ್ಲ. ನಾನು ನನ್ನ ತಂದೆಯ ದರ್ಶನಕ್ಕಾಗಿ ಎಷ್ಟು ಚಡಪಡಿಸುತ್ತಿದ್ದೆ? ದೈವೀ ಸಂಪರ್ಕವಿಲ್ಲದೆ ನಾನೆಷ್ಟು ದುಃಖಿತನಾಗಿದ್ದೆ? ಎಂಬುದನ್ನು ದೇಸಾಯಿಯಲ್ಲಿ ತೋಡಿಕೊಳ್ಳುತ್ತಿದ್ದೆ. ದಿಲೀಪನೆದುರು ನಾನು ಹಲವಾರು ಬಾರಿ ಜೋರಾಗಿ ಅತ್ತಿತ್ತು ಚೇರಿದ್ದೆ. ನನ್ನ ಉಬ್ಬಿದ ಕಣ್ಣಿನಿಂದ ನೀರು ಸುರಿಯುತ್ತಿದ್ದಾಗಲೆಲ್ಲ ಅವನು ನನಗೆ ಸಾಂತ್ವನ ನೀಡುವ ಪ್ರಯತ್ನ ಮಾಡುತ್ತಿದ್ದ.

1968 ರ ಜೂನ ತಿಂಗಳಲ್ಲಿ ಭಾರತಕ್ಕೆ ಬರಲು ಹಾಗೂ ತಮ್ಮನ್ನು ಕಾಣಲು ನನ್ನ ಯೋಗ ಶಿಕ್ಷಕ ಶ್ರೀ ಪ್ರಭಾಕರಂಜನ ಸರಕಾರರು ನನಗೆ ಸಂದೇಶ ಕಳಿಸಿದರು. ಕೆಲ ದಿನಗಳಲ್ಲಿಯೇ ನಾನು ಏರ ಇಂಡಿಯಾ ಜೆಟ್ ವಿಮಾನ ಏರಿದೆ. ಮುಂಬಯಿಗೆ ಹೊರಟೆ. ಅಲ್ಲಿಂದ ಮುಂದೆ ಬಾಬಾರನ್ನು ಭೆಟ್ಟಿಯಾಗಲು ಪಾಟ್ನಾಕ್ಕೆ ತೆರಳಿದೆ.

ನನ್ನನ್ನು ಕಂಡು ಬಾಬಾ ತುಂಬಾ ಸಂತಸಪಟ್ಟರು. ಆದರೆ ಅವರನ್ನು ಕಂಡಾಗ ನನಗಾದ ಸಂತಸಕ್ಕೆ ಸಾಟಿಯೇ ಇಲ್ಲ. ನನ್ನ ಮುಖವು ಭಕ್ತನ ಮುಗ್ಧತೆಯ ಕಾಂತಿಯಿಂದ ಮತ್ತು ತತ್ತ್ವನಿಷ್ಠ ವ್ಯಕ್ತಿಯ ಕಿಚ್ಚಿನಿಂದ ಹೊಳೆಯುತ್ತಿದೆ ಎಂದರವರು. ಅವರೆದುರು ನಾನು ಅಳಹತ್ತಿದೆ. ಏಕೆಂದರೆ ನಾನೆಷ್ಟೇ ನಿರಂತರ ಧ್ಯಾನ ಮಾಡಿದರೂ ನನ್ನ ತಂದೆಯ ದರ್ಶನಾಶೀರ್ವಾದದಿಂದ ವಂಚಿತನಾಗಿದ್ದೆ.

ತಮ್ಮ ಸನ್ನಿಧಿಯಲ್ಲಿಯೇ ಧ್ಯಾನ ಮಾಡಲು ಬಾಬಾ ತಿಳಿಸಿದರು ಮತ್ತು ನನ್ನ ಮನವನ್ನು ಶಿರದ ಊರ್ಧ್ವಕ್ಕೆ ಎತ್ತರಿಸಲು ತಿಳಿಸಿದರು. ನಾನು ಹಾಗೆಯೇ ಮಾಡಿದೆ. ಆನಂತರ ನನ್ನ ಹೃದಯದ ಬಲಗಡೆ ಅಂತರ್ಮುಖಿಯಾಗಿ ದೃಷ್ಟಿ ಹೊರಳಿಸಲು ಕೇಳಿದರು. ನಾನು ಕಣ್ಣುಮುಚ್ಚಿ ಅದೇ ರೀತಿ ಮಾಡಿದೆ. ಅಬ್ಬಾ! ಆನಂದದ ಅಲೆಗಳು ನನ್ನ ಹೃದಯದಾಳದಲ್ಲಿ ಉಕ್ಕಿಬಂದವು. ನಾನಲ್ಲಿ ನಿಶ್ಚಲನಾಗಿ ಕುಳಿತೆ. ನನ್ನ ಮನದ ಆಳಗುಹೆಯಲ್ಲಿ ಮೈಮರೆತೆ. ಒಂದು ಘಂಟೆ ಕಳೆದ ಬಳಿಕ ಕಣ್ತೆರೆದೆ. "ನನ್ನ ಕಂದಾ : ನೀನು ಇದೀಗ ಪರಮ ದಿವ್ಯಾನಂದವನ್ನು ಅನುಭವಿಸಿದ್ದೀ. ನಿನ್ನಂತರಾಳದ ಕೋರಿಕೆಯು ಅಂಶತಃ ಆಗಲೇ ಪೂರೈಸಿದೆ" ಎಂದರು ಬಾಬಾ. ಅಮೇರಿಕೆಗೆ ಮರಳಿ, ಅರ್ಥಶಾಸ್ತ್ರಜ್ಞನೆಂದು ಪ್ರತಿಷ್ಠಿತನಾಗಿ, ಆ ಬಳಿಕ ಪ್ರಪಂಚದ ಬಡತನವನ್ನು ತೊಡೆಯುವ ಕಾರ್ಯದಲ್ಲಿ ತೊಡಗು ಎಂದು ಅವರು ಉಪದೇಶಿಸಿದರು. 'ನಿನ್ನ' ತಂದೆ ಸದಾ ನಿನ್ನೊಂದಿಗೇ ಇದ್ದಾನೆ. ನಿನ್ನ ಮಹಾಸಾಹಸದಲ್ಲಿ ಅವನು ನಿನಗೆ ಮಾರ್ಗ ತೋರುತ್ತಾನೆ" ಎಂದು ನೂಡಿದರು ಬಾಬಾ.

ನಾನು ಅಮೇರಿಕೆಗೆ ಬರುತ್ತಿದ್ದಂತೆಯೇ ಅರ್ಥಶಾಸ್ತ್ರದ ವೃತ್ತಿಯಲ್ಲಿ ಹೇಗ ಪ್ರತಿಷ್ಠಿತನಾಗಬೇಕೆಂಬ ಬಗ್ಗೆ ಅಚ್ಚರಿಪಟ್ಟೆ. ನಾನು ಅಧ್ಯಯನ ಮಾಡುತ್ತಿದ್ದ ವಿಶ್ವವಿದ್ಯಾಲಯದ ಹೆಸರನ್ನು ಯಾರೂ ಕೇಳರಿಯರು. ಅದು ಹಾರ್ವರ್ಡ ಆಗಲಿ, ಸ್ಟ್ಯಾನಫೋರ್ಡ ಇಲ್ಲವೆ ಎಂ.ಐ.ಟಿ. ಆಗುವುದಂತೂ ದೂರವೇ ಉಳಿಯಿತು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಐವತ್ತು ಮೇಲ್ಮಟ್ಟದ ವಿಶ್ವವಿದ್ಯಾಲಯಗಳ ಸಾಲಿಗೂ ಅದು ಸೇರಿರಲಿಲ್ಲ. ಅಂದ ಮೇಲೆ ನಾನು ಪ್ರತಿಷ್ಠಿತನಾಗುವುದೆಂತು ?

1966 ರಲ್ಲಿ ಅಮೇರಿಕೆಗೆ ಮರಳಿದ ಬಳಿಕ ನಾನು ಬೇರೊಂದು ಖ್ಯಾತಿವೆತ್ತ ವಿಶ್ವ ವಿದ್ಯಾಲಯಕ್ಕೆ ಹೋಗಬಹುದಿತ್ತು. ಆದರೆ, ಒಂದು ರೀತಿಯ ಕೃತಜ್ಞತಾಭಾವದಿಂದ ಮತ್ತು ನನ್ನ ಪ್ರಾಧ್ಯಾಪಕರನ್ನು ಕುರಿತು ನನಗಿರುವ ನಿಷ್ಠೆಯಿಂದ ನಾನು ಸದರ್ನ ಇಲ್ಲಿಯೋನೀಸ್ ವಿಶ್ವ ವಿದ್ಯಾಲಯದಲ್ಲಿಯೇ ಉಳಿದೆ. ಮೇಲಾಗಿ, ನನ್ನ ವೃತ್ತಿಯ ಬಗೆಗಿದ್ದ ಕಾಳಜಿಯೂ ಸಹಅಷ್ಟಕ್ಕಷ್ಟೇ.

ಬಾಬಾರ ಉಪದೇಶವು ಅನುಷ್ಠಾನ ಸಾಧ್ಯವಿದ್ದರೂ ಸಹ ನನ್ನ ಸ್ವಂತ ಚಿಂತನಕ್ಕೆ ವಿರೋಧವಾಗಿತ್ತು. ನಾನು ನನ್ನ ವೃತ್ತಿಯ ಬಗೆಗೆ ನಿಸ್ಸೀಮನಾಗಿರಬೇಕು. ಅತ್ಯಲ್ಪ ಅಭಿರುಚಿ ಇದ್ದ ವಿಷಯಗಳಿಗಾಗಿ ನನ್ನ ಹೆಚ್ಚು ಹೆಚ್ಚು ಘಂಟೆಗಳನ್ನು ಮೀಸಲಿರಿಸಬೇಕೆಂದು ಅವರ ಇಚ್ಛೆ. ಧ್ಯಾನವೊಂದೇ ಪ್ರಪಂಚದ ಬಡವನ ನೆರವಿಗೆ ಬಾರದು. ಆದರೆ ಯಾರೇ ಆಗಲಿ ನನ್ನ ಆಲೋಚನೆಗೆ ಬೆಲೆ ಕೊಡಬೇಕಾದರೆ, ನನಗೆ ಕೀರ್ತಿವಾರ್ತೆಗಳ ಅಗತ್ಯವಿತ್ತು.

ಅರ್ಥಶಾಸ್ತ್ರಜ್ಞನೆಂದು ಒಬ್ಬನು ಪ್ರತಿಷ್ಠಿತನಾಗಬೇಕಾದರೆ, ಮೇಲ್ಮಟ್ಟದ ಅರ್ಥ ಶಾಸ್ತ್ರೀಯ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಬೇಕು ಇಲ್ಲವೆ ಪ್ರತಿಯೋರ್ವನ ಲಕ್ಷ್ಯ ಸೆಳೆಯುವ ಮೌಲಿಕ ಗ್ರಂಥ ರಚಿಸಬೇಕಷ್ಟೇ. ಉಭಯತಾಪಿ ನನ್ನ ಆಳವಿಗೆ ಮೀರಿದವು ಗಳಾಗಿದ್ದವು. ನಾನಾದರೋ ಯಾರೂ ಅರಿಯದ ವಿಶ್ವವಿದ್ಯಾಲಯವೊಂದರ ವಿದ್ಯಾರ್ಥಿ ಮಾತ್ರ. ಅಷ್ಟೇ ಏಕೆ, ಮೇಲ್ಮಟ್ಟದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಸಹ, ಇಂಥ ಮಹತ್ಕಾಂಕ್ಷೆಯನ್ನು ಕನವರಿಸುವ ಮೂರ್ಖತನ ತೋರರು.

ಮೇಲ್ಮಟ್ಟದ ವಿಶ್ವವಿದ್ಯಾಲಯಗಳಿಂದ ಪದವಿ ಗಳಿಸಿದರೆ ಪ್ರತಿಷ್ಠಿತನಾಗಲು ತೊಂದರೆ ಕಡಿಮೆ ಏಕೆಂದರೆ, ಮೇಲು ಸ್ತರದಲ್ಲಿಂದಲೇ ಆರಂಭಿಸಬಹುದು. ಹಲವು ಸುವಿಖ್ಯಾತ ವಿದ್ಯಾಲಯಗಳ ಪ್ರಾಧ್ಯಾಪಕರು ಪ್ರಸಿದ್ಧ ಪತ್ರಿಕೆಗಳ ಸಂಪಾದಕರಾಗಿದ್ದಾರೆ. ಹಾರ್ವರ್ಡ ಮತ್ತು ಚಿಕ್ಯಾಗೋ ವಿಶ್ವವಿದ್ಯಾಲಯಗಳು ಉಚ್ಚ ಮಟ್ಟದ ಪತ್ರಿಕೆಗಳನ್ನು ಹೊರಡಿಸುತ್ತಿವೆ. ಅವುಗಳಲ್ಲಿ ತಮ್ಮ ಸ್ವಂತ ವಿದ್ಯಾರ್ಥಿಗಳಿಗೆ ಅಧಿಕ ಪ್ರಾಶಸ್ತ್ಯ ನೀಡುತ್ತಾರೆ. ಅಮೇರಿಕೆಯಲ್ಲಿಯ ಹಾರ್ವರ್ಡ, ಯೇಲ, ಎಂ.ಐ.ಟಿ., ಪ್ರಿನ್ಸಟನ್, ಬ್ರೌನ್, ಕೊಲಂಬಿಯಾ, ಚಿಕ್ಯಾಗೋ, ಸ್ಟ್ಯಾನಫೋರ್ಡ, ವ್ಹಾರ್ಟನ್ ಸ್ಕೂಲ ಹಾಗೂ ಬರ್ಕ್ಲೇ ಎಂಬ ಮೇಲು ಮಟ್ಟದ ಹತ್ತು ವಿಶ್ವವಿದ್ಯಾಲಯಗಳಿಂದ ಪದವಿ ಪಡೆಯುವವನಿಗೆ ಇತರರಿಗಿಲ್ಲದ ಹೆಚ್ಚಿನ ಆಂತರಿಕ ಪ್ರೋತ್ಸಾಹ ಲಭಿಸುತ್ತದೆ. ಅದರಿಂದ ಅವನು ಅರ್ಥಶಾಸ್ತ್ರಜ್ಞರ ಆಂತರಿಕ ವೃತ್ತದೊಳಗಿನವನಾಗುತ್ತಾನೆ. ಇಲ್ಲವಾದರೆ ಅವನು ಹೊರಗಿನವನೆನಿಸುತ್ತಾನೆ. ನಾನಂತೂ ಈ ವ್ಯವಸ್ಥೆಯ ತೀರ ಆಚೆಯವನಾಗಿದ್ದೆ. ನನ್ನೆಲ್ಲ ಸೊತ್ತೆಂದರೆ, ಸೋಲಿಗೆ ಬೆದರಿ ಬಾಗದ ಚೇತನ, ನನ್ನ ತಂದೆ ಕುರಿತು ಕ್ಷಯಿಸದ ಪ್ರೇಮ ಮತ್ತು ಫಲಾಪೇಕ್ಷೆ ತೊರೆದು ನಿರಂತರ ಕರ್ಮನಿರತನಾಗಿರಲು ಬೋಧಿಸುವ ಗೀತೆಯ ಜ್ಞಾನಗಳಷ್ಟೇ. ಇದುವೇ ಕರ್ಮಯೋಗ; ಕರ್ಮಫಲವನ್ನು ಪ್ರೇಮ – ಭಕ್ತಿಗಳ ಮೂಲಕ ನಿನ್ನ ತಂದೆಗೆ ಒಪ್ಪಿಸಿ ಫಲಾಸಕ್ತಿ ತೊರೆದು ಕರ್ಮದಲ್ಲಿ ಕಠೋರನಾಗಿ ತೊಡಗು. ನಿನ್ನ ತಂದೆಯೇ ನಿನಗೆ ಆಂತರಿಕ ಶಾಂತಿಯ ಬಹುಮಾನ ನೀಡುತ್ತಾನೆ. ನನ್ನ ಜೀವನದಲ್ಲಿ ಬಾರಿಬಾರಿಗೆ ಈ ತತ್ತ್ವಜ್ಞಾನದ ಸಾಂತ್ವನ ಹಾಗೂ ಆಶ್ವಾಸನೆಗಳ ಆಗತ್ಯವು ನನಗಾಗಿದೆ.

ನಾನು ಅಮೇರಿಕೆಗೆ ಮರಳಿದ ಬಳಿಕ ಅಲ್ಲಿಯ ಶ್ರೇಷ್ಠ ಪತ್ರಿಕೆಗಳಲ್ಲಿ ನನ್ನ ಲೇಖನ ಪ್ರಕಟಿಸುವ ಕಳಕಳಿ ನನ್ನಲ್ಲಿ ಉಂಟಾಯಿತು. ನಾನು ಹೆಸರುವಾಸಿಯಾಗಿರಲಿಲ್ಲ. ಆದ್ದರಿಂದ ನನ್ನ ಲೇಖನಗಳು , ಸಂಪಾದಕರಿಂದ ತಿರಸ್ಕೃತವಾದಾಗ ಆಗುವ ಮುಜುಗರ ನನ್ನನ್ನು ಬಾಧಿಸಲಿಲ್ಲ.

ಯಾರದೇ ಸಲಹೆ ಪಡೆಯದೆ ನಾನು ಬರೆಯಲು ಆರಂಭಿಸಿದೆ. ಆಂತಾರಾಷ್ಟ್ರೀಯ ಅರ್ಥಶಾಸ್ತ್ರವು ನನ್ನ ವಿಶೇಷತೆಯ ಕ್ಷೇತ್ರವಾಗಿತ್ತು. ಮತ್ತು ನಾನು ಸಹ ಅದನ್ನೇ ಬೆಂಬತ್ತಿದೆ. ನಾನು ಕಠಿಣ ಪರಿಶ್ರಮ ಮಾಡಿದೆ. ಹೊಸ ಸಂಗತಿಗಳನ್ನು ಓದಿ ತಿಳಿದೆ. ದೀರ್ಘ ಸಮಯ ಸಂಶೋಧನೆ ಮಾಡಿದೆ. ನವೀನ ಸಿದ್ಧಾಂತಗಳನ್ನು ಮಂಡಿಸಿದೆ. ಪ್ರಚಲಿತ ಸಿದ್ಧಾಂತಗಳನ್ನು ಖಂಡಿಸಿದೆ ಇಲ್ಲವೆ ಅವುಗಳನ್ನು ಹೊಸ ದಿಗಂತ ತಲುಪಿಸಿದೆ. ದಿನನಿತ್ಯದ ಧ್ಯಾನಾವಧಿಯು ಈ ಕಾಲಕ್ಕೆ ನಾಲ್ಕೈದು ಘಂಟೆಗಳಿಗಿಳಿದಿತ್ತು.

1986 ರಲ್ಲಿ ನಾನೊಂದು ಲೇಖನ ಬರೆದು ''ಅಮೇರಿಕನ್ ಇಕಾನಿಮಿಕ್ ರಿವ್ಯೂ'' ಪತ್ರಿಕೆಗೆ ಕಳಿಸಿದೆ. ಅದು ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಅರ್ಥಶಾಸ್ತ್ರೀಯ ಪತ್ರಿಕೆಯೆನಿಸಿತ್ತು. ಲೇಖನ ತಿರಸ್ಕೃತವಾಗುವುದಕ್ಕೆ ತಡವಾಗಲಿಲ್ಲ. ಹಾಗಾಗಿ ನಾನು ಇನ್ನೊಂದು ಲೇಖನ ಬರೆದೆ. ಅದರ ವಿಷಯವು ಬೇರೊಂದಾಗಿತ್ತು. ಅದನ್ನು ಚಿಕ್ಯಾಗೋ ವಿಶ್ವವಿದ್ಯಾಲಯವು ಪ್ರಸಿದ್ಧಿಸುತ್ತಿದ್ದ 'ಜರ್ನಲ್ ಆಫ್ ಪ್ರಾಕ್ಟಿಕಲ್ ಇಕಾನಮಿ' ಪತ್ರಿಕೆಗೆ ಕಳಿಸಿದೆ. ಇನ್ನೊಮ್ಮೆ ತಿರಸ್ಕಾರ ಬಂದಿತು. ಕರ್ಮಫಲದಿಂದ ನಿರಾಸಕ್ತನಾಗಿರಲು ನಾನು ಶತಪ್ರಯತ್ನ ನಡೆಸಿದ್ದರೂ ಸಹ ಪ್ರತಿ ಬಾರಿಯ ತಿರಸ್ಕಾರದಿಂದ ಅತಿಶಯ ತಳಮಳವಾಗುತ್ತಿತ್ತು. ನಾನು ಘಂಟೆಗಟ್ಟಳೆ, ಅಷ್ಟೇ ಏಕೆ ದಿನಗಟ್ಟಳೆ, ಅಧೀರನಾಗುತ್ತಿದ್ದೆ. ಪ್ರತಿಯೊಂದು ತಿರಸ್ಕಾರದ ಬಳಿಕ ಅನಿವಾರ್ಯವಾಗಿ ಮಾನಸಿಕ ಕುಸಿತಕ್ಕೊಳಗಾಗುತ್ತಿದ್ದೆ. ಧ್ಯಾನದಿಂದ ನನ್ನ ನಿಶ್ಚಯವು ಪುನಶ್ಚೇತನ ಪಡೆಯುತ್ತಿತ್ತಲ್ಲದೆ ಪ್ರಬಲವಾಗುತ್ತಿತ್ತು.

ಈ ಬಾರಿ ತಿರಸ್ಕಾರದ ಪತ್ರಗಳಿಗಾಗಿ ಕಾಯದೆ ಬರೆಯುತ್ತ ಸಾಗಬೇಕೆಂದು ನಾನು ನಿರ್ಣಯಿಸಿದೆ. ಈ ಸಮಯಕ್ಕೆ ಅಮೇರಿಕೆಯಲ್ಲಿ ಒಟ್ಟಾರೆ ನಾಲ್ಕು ಉಚ್ಚ ಪತ್ರಿಕೆಗಳಿದ್ದವು. ಇನ್ನು, ಇಂಗ್ಲಂಡಿನ ಪತ್ರಿಕೆಗಳ ಸಂಖ್ಯೆ ನಾಲ್ಕು.

ಹಾರ್ವರ್ಡ ಮತ್ತು ಎಂ.ಐ.ಟಿ. ಗಳಿಂದ ಸಹ ಶೀಘ್ರದಲ್ಲಿ ತಿರಸ್ಕಾರಗಳು ಬಂದವು. ನನ್ನ ಎದೆ ಮತ್ತೊಮ್ಮೆ ಒಡೆಯಿತು. ಇಷ್ಟರಲ್ಲಿ, ನನ್ನ ತಳಮಳವು ಶಿಖರ ಮುಟ್ಟಿತು. ಮತ್ತೆ ಮತ್ತೆ ನನ್ನನ್ನೇ ನಾನು ಸಂತೈಸಿಕೊಂಡೆ. 'ನೀನು ನಿನ್ನ ಕಾರ್ಯ ಮಾಡಿದೆ. ಅದನ್ನು ನಿನ್ನ ತಂದೆಗೆ ಅರ್ಪಿಸಿದೆ. ಅವನು ಸಂತುಷ್ಟನಾದ ಮೇಲೆ ನಿನಗೆ ಮತ್ತೇನು ಬೇಕು ?'' ನನ್ನ ಮನವನ್ನು ಶಾಂತಗೊಳಿಸಲು ಭಾರಿ ಪ್ರಯತ್ನ ಬೇಕಾಗಿತ್ತು.

ಕೊನೆಗೊಮ್ಮೆ ಹಾದಿ ಕಾಣಿಸಿತು. 'ಆಕ್ಸಫರ್ಡ ಇಕಾನಿಮಿಕ್ ಪೇಪರ್ಸ' ತನ್ನ 1968 ರ ನವ್ಹೆಂಬರ ತಿಂಗಳ ಸಂಚಿಕೆಗಾಗಿ ನನ್ನ ಲೇಖನವನ್ನು ಸ್ವೀಕರಿಸಿತು. ಅರಳುತ್ತಿದ್ದ ನನ್ನ ವೃತ್ತಿಯಲ್ಲಿ ಇದೊಂದು ಮುನ್ನಡೆಯ ಹೆಜ್ಜೆಯಾಗಿತ್ತು. ನಾನೀಗ ಹಿರಿಹಿರಿ ಹಿಗ್ಗಿದ್ದೆ. ಅನಾಸಕ್ತಿಯೋಗದ ದೃಷ್ಟಿಯಿಂದ ನಾನು ನನ್ನ ಸಂತೋಷ ನಿಯಂತ್ರಿಸಬೇಕಿತ್ತು. ಆದರೆ ನನ್ನಿಂದ ನಿಯಂತ್ರಿಸಲಾಗಲಿಲ್ಲ.

ನನ್ನ ಮಿತ್ರರಿಗೆ ನನ್ನ ದಿಟ್ಟತನ ಹಾಗೂ ಸಾಧನೆಗಳು ಆಶ್ಚರ್ಯಚಕಿತವಾಗಿದ್ದವು. ಸದರ್ನ ಇಲ್ಲಿನೋಯಿಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯೋರ್ವನಿಂದ ಘಟಿಸಿದ ಈ ಸಾಧನೆಯು ಪ್ರಪ್ರಥಮ ಮಹತ್ವದ ಸುದ್ದಿಯೇ ಸರಿ. ನನ್ನ ಅರ್ಥಶಾಸ್ತ್ರ ವಿಭಾಗದ ವ್ಯಾಸಂಗ ಸದಸ್ಯರಿಗೂ ಸಹ ಅಷ್ಟೇ ಅಚ್ಚರಿ. ಕಲ್ಪನೆಗೆ ನಿಲುಕಲಾರದುದು ಘಟಿಸಿತ್ತು. ನಾನು ವಾಸಿಸುತ್ತಿದ್ದ ಚಿಕ್ಕ ನಗರದಲ್ಲಿ ಇದು ಸುದ್ದಿಯಾಯಿತು. ಆ ವಸತಿಯ ವರ್ತಮಾನಪತ್ರಿಕೆಯೊಂದು ಆ ಸುದ್ದಿಯನ್ನು ಪ್ರಕಟಿಸಿತು. ನಾನಾದರೋ, ಈ ಸಾಧನೆಯಲ್ಲಿ ನನ್ನ ಪಾತ್ರವೇನೂ ಇಲ್ಲ ಎಂದು ಒತ್ತು ನೀಡಿ ಹೇಳುತ್ತಿದ್ದುದು ಸರ್ವರನ್ನೂ ಸಂದಿಗ್ಧತೆಯಲ್ಲಿ ಮುಳುಗಿಸಿತು. ಹೀಗಾಗಿ ಇವನೊಬ್ಬ ಹುಚ್ಚ; ಒಡೆಯದ ಒಗಟು ಎಂಬ ಕೀರ್ತಿ ಸಂಪಾದನೆ ಮಾತ್ರ ನನ್ನದಾಯಿತು.

'ನಾನು ಏನೂ ಅಲ್ಲ; ನನ್ನ ತಂದೆಯೇ ಎಲ್ಲ' ಅವನು ನನ್ನ ಹೃದಯವಾಸಿ. ಅವನೇ ಲೇಖಕ; ನಾನೊಬ್ಬ ಪ್ರೇಕ್ಷಕನಷ್ಟೇ' ಎಂದು ಮತ್ತೆ ಮತ್ತೆ ಹೇಳಿದೆ.

ಮೊದಲ ಆಘಾತವು ದುಸ್ಸಾಧ್ಯವಿತ್ತು. ಅನಂತರದ್ದು ಹಾಗೂ ಹೀಗೂ ಸಂಭಾಳಿಸುವಂಥದು. ನಾನು ಸದರ್ನ ಇಲ್ಲಿನೋಯಿಸ್ ವಿಶ್ವವಿದ್ಯಾಲಯದಿಂದ ಜೂನ 1969 ರಲ್ಲಿ ಸ್ನಾತಕ ಪದವೀಧರನಾದೆ. ಅಷ್ಟರಲ್ಲಿ ನನ್ನ ಮೂರು ಲೇಖನಗಳು ಖ್ಯಾತ ಪತ್ರಿಕೆಗಳಿಂದ ಸ್ವೀಕೃತವಾಗಿದ್ದವು. ಅವುಗಳಲ್ಲಿ ಒಂದನ್ನು 'ಜರ್ನಲ್ ಆಫ್ ಪೊಲಿಟಿಕಲ್ ಇಕಾನಮಿ'' ಪತ್ರಿಕೆಯೂ ಮತ್ತೊಂದನ್ನು 'ಇಕಾನೊಮೆಟ್ರಿಕಾ' ಪತ್ರಿಕೆಯೂ ಸ್ವೀಕರಿಸಿದ್ದವು. ನನ್ನ ಪರಿಶ್ರಮಕ್ಕೆ ಫಲ ದೊರಕಿತ್ತು.

1969 ರಲ್ಲಿ ಉನ್ನತ ಶ್ರೇಣಿಯಲ್ಲಿ ಸ್ನಾತಕ ಪದವೀಧರರಾದವರಲ್ಲಿ ನಾನೂ ಒಬ್ಬ. ಕೆಲ ವಿದ್ಯಾರ್ಥಿಗಳು ತಮ್ಮ ಲೇಖನಗಳು ಪ್ರಸಿದ್ಧವಾದ ಪತ್ರಿಕೆಗಳಿಂದ ಸ್ವೀಕೃತವಾಗುವಂತೆ ಪ್ರಯತ್ನಿಸುವದಷ್ಟೇ ಏಕೆ, ಅವು ಪ್ರಕಟಗೊಳ್ಳುವಂತೆ ಮಾಡುವಲ್ಲಿಯೂ ಸಹ ಪ್ರಯತ್ನಿಸಿದ್ದರು. (ಆದರೆ ಯಶಸ್ವಿಯಾಗಿರಲಿಲ್ಲ) ಆದರೂ ಸಹ, ಯಾವುದೇ ಖ್ಯಾತ ವಿಶ್ವವಿದ್ಯಾಲಯವೂ ನನಗೆ ಬೋಧಕ ಹುದ್ದೆ ನೀಡಲಿಲ್ಲ. ನೂರಾರು ಹೊಸ ಪಿಎಚ್.ಡಿ. ಅಭ್ಯರ್ಥಿಗಳು ಮೇಲ್ತರಗತಿಯ ಅಮೇರಿಕನ್ ವಿಶ್ವವಿದ್ಯಾಲಯಗಳಲ್ಲಿ ಕೈತುಂಬ ಸಂಬಳದ ಅವಕಾಶ ಪಡೆದರು. ಆದರೆ, ನನ್ನ ಪಾಲಿಗೆ ಮಾತ್ರ ಶೂನ್ಯ. ಏಕೆಂದರೆ ನಾನು ಒಳಗಿನವನಾಗಿರಲಿಲ್ಲ. ತನ್ನ ಹುಲ್ಲುಗಾವಲನ್ನು ಧರ್ಮವೆಂದು ರಕ್ಷಿಸುವ, ಉದಿತೋದಿತ ವ್ಯವಸ್ಥೆಗೆ ನಾನು ಹೊರಗಿನವನೆನಿಸಿದೆ. ಎರಡು ಕಾಲೇಜುಗಳೇನೋ ನನಗೆ ಕರೆ ನೀಡಿದವು. ಆದರೆ ಸ್ವಲ್ಪ ಖ್ಯಾತ ವಿಶ್ವವಿದ್ಯಾಲಯದಲ್ಲಿ ವೃತ್ತಿ ಆರಂಭಿಸೋಣವೆಂದು ನಾನು ಬಗೆದೆ. ಕೊನಗೆ ನಾನು ಸದರ್ನ ಇಲ್ಲಿನೋಯೀಸ್ ವಿಶ್ವವಿದ್ಯಾಲಯದಲ್ಲಿಯೇ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿದ್ದುಕೊಂಡು ಒಂದು ವರುಷ ಪಾಠ ಹೇಳಿದೆ.

ಅಧಿಕಾಧಿಕ ಪ್ರಕಟಣೆಗಳು ಹೊರಬಂದವು. 1970 ರಲ್ಲಿ ಇನ್ನೆರಡು ಪ್ರಕಟವಾದವು. ಅದರಿಂದಾಗಿ ಕೆನಡಾದ ಸುವಿಖ್ಯಾತ ವೆಸ್ಟರ್ನ ಒಂಟೇರಿಯೊ ವಿಶ್ವವಿದ್ಯಾಲಯದಿಂದ ನನಗೆ ಕರೆ ಬಂತು. 1971 ರಲ್ಲಿ ನನ್ನ ಮತ್ತೆ ೃದು ಲೇಖನಗಳು ಸ್ವೀಕೃತವಾದವು. ಅದೂ ಪ್ರಪಂಚ ವ್ಯಾಪ್ತಿಯ ಉಚ್ಚ ಪತ್ರಿಕೆಗಳಲ್ಲಿ. ಆದರಿಂದಾಗಿ ನನಗೆ ಸಹಪ್ರಾಧ್ಯಾಪಕ ಹುದ್ದೆಗ ಬಡ್ತಿ ದೊರಯಿತು. ನಾನು ಕೆನಡಾದಲ್ಲಿ ಸುಖಿಯಾಗಿದ್ದೆ. ನನ್ನ ಜೀವನವಿಧಾನವು ತೀವ್ರವಾಗಿ ಜಿಗಿಯತೊಡಗಿತು. ಆದರೆ ಅಲ್ಲಿಯ ಹವಾಮಾನವು ನನಗಾಗಲಿಲ್ಲ. ಅಲ್ಲಿ ತುಂಬಾ ಚಳಿ. ನಾನಾದರೋ ಸುಡುಬೇಸಗೆಯ ಮತ್ತು ಮಂದ ಚಳಿಗಾಲದ ಭಾರತದ ಭೂಮಿಯಲ್ಲಿ ಬೆಳೆದವ. ಹಾಗಾಗಿ ಕೆನಡಾದಿಂದ ಹೊರಬೀಳಲು ಇಚ್ಛಿಸಿದೆ.

1972 ರ ಜನೇವರಿಯಲ್ಲಿ ನಾನು ಡಲ್ಲಾಸ್‌ದಲ್ಲಿಯ ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯಕ್ಕೆ ಸಂದರ್ಶನ ನೀಡಿದೆ. ಈಗ ಹಿಮಗಾಳಿ ಹಿಂದುಳಿದವು). ಆದರೆ, ಆಗಿನ್ನೂ ಜನೆವರಿಯ ತುಸು ಬೆಚ್ಚಗಿನ 64^0 ಫರೆನ್ ಹೀಟ್ (ಇಲ್ಲವೆ ಸುಮಾರು 18^0 ಸೆ) ಇದು

ಹೊಸದಿಲ್ಲಿಯಂತೆ. ಮರುವಿಚಾರಕ್ಕಿಳಿಯದೆ ನಾನು ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯದ ಕೊಡುಗೆಯನ್ನು ಒಪ್ಪಿಕೊಂಡೆ. 1973 ರ ಹೊತ್ತಿಗೆ ನನ್ನ 20 ಲೇಖನಗಳು ಉಚ್ಚ ಶ್ರೇಣಿಯ ಪತ್ರಿಕೆಗಳಲ್ಲಿ ಪ್ರಕಟವಾದವು. ಆ ವರ್ಷವೇ ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯವು ನನಗೆ ಪೂರ್ಣ ಪ್ರಮಾಣದ ಪ್ರಾಧ್ಯಾಪಕ ಹುದ್ದೆಯನ್ನು ಕೊಡಮಾಡಿತು. ನಾನು ಇಂದಿಗೂ ಅಲ್ಲಿಯೇ ಸೇವೆ ಸಲ್ಲಿಸುತ್ತಿದ್ದೇನೆ.

1968 ರಲ್ಲಿ ನನ್ನ ಪ್ರಥಮ ಲೇಖನ ಪ್ರಕಟಗೊಂಡ ದಿನದಂದಿನಿಂದ ಅರ್ಥಶಾಸ್ತ್ರಜ್ಞ ನೆಂಬ ಆತ್ಮವಿಶ್ವಾಸ ಉದಿಸಲಾರಂಭಿಸಿತು. ಅಧಿಕಾಧಿಕ ಲೇಖನಗಳು ಪ್ರಕಟಣೆಗೆ ಸ್ವೀಕೃತವಾದಂತೆ, ಅಂತಾರಾಷ್ಟ್ರೀಯ ವಾಣಿಜ್ಯ ಸಿದ್ಧಾಂತ ಕುರಿತು ಒಂದು ಆಳವಾದ ವಿಚಾರದ ಗ್ರಂಥ ಬರೆಯಬೇಕೆಂದು ಚಿಂತನಶೀಲನಾದೆ. ನಾನೊಂದು ಪ್ರಸ್ತಾವವನ್ನು ಸಿದ್ಧಪಡಿಸಿ ಐದು ಪ್ರಕಟಣಾಲಯಗಳಿಗೆ ಕಳಿಸಿದೆ. ಇಂಗ್ಲಂಡಿನ ಲಂಡನ್ನಿನಲ್ಲಿರುವ ಮ್ಯಾಕಮಿಲನ್ ಕಂಪನಿಯು ಪ್ರಕಟಣೆಯ ಒಪ್ಪಂದ–ಪತ್ರವನ್ನು ಕಳಿಸುವಲ್ಲಿ ತಡ ಮಾಡಲಿಲ್ಲ. ನಾನೂ ಒಪ್ಪಿಕೊಂಡೆ. 1973ರಲ್ಲಿ ಪುಸ್ತಕವೂ ಹೊರಬಿತ್ತು. ಎರಡು ವರ್ಷಗಳ ನಂತರ ನಾನು ಇನ್ನೊಂದು ಮುಂದುವರಿದ ತಾಂತ್ರಿಕ ಗ್ರಂಥವನ್ನು ರಚಿಸಿದೆ. ಅದರ ವಿಷಯ ವಾಣಿಜ್ಯ ಸಿದ್ಧಾಂತ. ಮ್ಯಾಕಮಿಲನ್ ಕಂಪನಿಯೇ ಪ್ರಕಟಣಾಲಯವಾಯಿತು. ಉಭಯ ಗ್ರಂಥಗಳು ಪ್ರತಿಷ್ಠಿತ ವಾಣಿಜ್ಯ ಸಿದ್ಧಾಂತವಾದಿಗಳ ವಿರಳ ವಿಮರ್ಶೆಯ ಮನ್ನಣೆಗೆ ಪಾತ್ರವಾದವು.

1977 ರಲ್ಲಿ ನಾನು ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥನಾದೆ. ನನ್ನ ಜೀವನ ವಿಧಾನದಲ್ಲಿ ಇದು ಇನ್ನೊಂದು ತಿರುವು. ನಾನು ಹೊಸ ಹುದ್ದೆ ಪಡೆದೆ ಎಂದಲ್ಲ. ಆದರೆ ಆ ವರುಷ ನನ್ನ ಸಂಶೋಧನೆಯು ಹೊಸ ದಿಕ್ಕಿನಲ್ಲಿ ಸಾಗಿತು ಎಂದು.

ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯವು ನನ್ನ ಚಿಕ್ಕ ವಯಸ್ಸಿನಲ್ಲಿಯೇ ನನಗೆ ಪೂರ್ಣಮಟ್ಟದ ಪ್ರಾಧ್ಯಾಪಕ ಹುದ್ದೆ ನೀಡಿತು. ಆಗ ನನಗಿನ್ನೂ ಕೇವಲ 30 ವರ್ಷ ವಯಸ್ಸು. ಅದಕ್ಕೆ ಪ್ರತಿಯಾಗಿ, ಅದು ನನ್ನ ವರ್ಧಮಾನ ಖ್ಯಾತಿಯ ಲಾಭ ಪಡೆಯಬಯಸಿತು. ನಾನು ಸುಪ್ರಸಿದ್ಧ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುತ್ತಿರಬೇಕೆಂದು ಅದರ ನಿರೀಕ್ಷೆ. ಆದರೆ ಆ ಹೊತ್ತಿಗೆ ಈ ಎಲ್ಲ ತಾಂತ್ರಿಕ ಬರಹ ಹಾಗೂ ಗಣಿತೀಯ ಅರ್ಥಶಾಸ್ತ್ರದ ಮಾದರಿಗಳು, ವಾಡಿಕೆಯ ಅರ್ಥಶಾಸ್ತ್ರದಲ್ಲಿ ನನಗಿದ್ದ ಅಭಿರುಚಿಯನ್ನೇ ನಾಶಪಡಿಸಿದ್ದವು. ನಾನು ಕಠಿಣ ದುಡಿಮೆ ಹಾಗೂ ಕಷ್ಟಸಹಿಷ್ಣುತೆಯಿಂದ, ಅರ್ಥಶಾಸ್ತ್ರ ಕುರಿತ ಪ್ರಕಟಣೆಗಳ ಅಬ್ಬರದ ಪ್ರಪಂಚದಲ್ಲಿ ನುಗ್ಗಿದ್ದೆ. ನಾನು ಈ ವ್ಯವಸ್ಥೆಗೆ ಹೊಸಬನಾಗಿದ್ದರೂ ಸಹ, ನನ್ನ ಆರಂಭದ ಆಕಸ್ಮಿಕ ಯಶಸ್ಸಿನ ನಂತರ ಸುವಿಖ್ಯಾತ ಪತ್ರಿಕೆಗಳು ನನ್ನ ಲೇಖನ ಪ್ರಕಟಣೆಗೆ ಸಂತೋಷದಿಂದ ಮುಂದಾದವು. ಈ ರೀತಿಯ ಪ್ರಕಟಣೆ ವಾಸ್ತವದಲ್ಲಿ ಒಂದು ಆಟದಂತೆ ಎಂದು ನನಗೆ ಮನದಟ್ಟಾಗಿತ್ತು. ಇಲ್ಲಿ ಕೆಲವು ನಿಯಮಗಳಿಗನುಸರಿಸಿ ಲೇಖಕನು ಕಾರ್ಯಶೀಲನಾಗಬೇಕಾಗುತ್ತದೆ. ಹಾಗೆ ಅವನು ಮಾಡದಿದ್ದರೆ, ಅವನ ಲೇಖನ ಸ್ವೀಕೃತಿಯ ಸಂಭವವೇ ಇರದು.

ಪ್ರಪ್ರಥಮ ಪ್ರಮುಖ ನಿಯಮವೆಂದರೆ, ಲೇಖಕನು ಗಣಿತೀಯ ಮಾದರಿಯಲ್ಲಿ ತನ್ನ ವಿಚಾರಗಳನ್ನು ಪ್ರಸ್ತುತ ಪಡಿಸಬೇಕು. ವಿಚಾರದ ಗುಣಮಟ್ಟಕ್ಕಿಂತಲೂ ಈ ಗಣಿತೀಯ ಮಾದರಿಯೇ ಮೇಲುಗೈ ಪಡೆಯುತ್ತದೆ. ಇನ್ನು ಎರಡನೆಯ ನಿಯಮವೆಂದರೆ, ವಿಚಾರಗಳು ವಾಡಿಕೆಯ ಸಿದ್ಧಾಂತಗಳಿಂದ ದೂರ ಸರಿಯಕೂಡದು. ಇಲ್ಲವಾದರೆ, ಲೇಖಕನನ್ನು ತೀವ್ರಗಾಮಿಯೆಂದು ಗುರ್ತಿಸಿಬಿಡುತ್ತಾರೆ. ಇನ್ನು ಅವನ/ಅವಳ ಕೃತಿಯ ಹಣೆಬರಹ ಮುಗಿದಂತೆಯೇ. ಮೂರನೆಯ ನಿಯಮವೆಂದರೆ ಲೇಖಕನ ಸಿದ್ಧಾಂತವು ಇತರ ಅರ್ಥಶಾಸ್ತ್ರಜ್ಞರ ಮಾದರಿಯನ್ನು ಪ್ರಶಂಸಿಸಿದರೆ ತೀರಿತು. ಅಡಕವಾದ ವಿಚಾರಗಳು ಎಷ್ಟೇ ಕ್ಷುಲ್ಲಕ ಇದ್ದರೂ ಲೇಖನದ ಸ್ವೀಕೃತಿಯ ಸಾಧ್ಯತೆ ಅಧಿಕಾಧಿಕ.

ಈ ಮೇಲಿನ ನಿಯಮಗಳ ಜೊತೆಗೆ ಈ ಆಟದ ಇನ್ನಿತರ ಹಲವು ನಿಯಮಗಳೂ ಇವೆ. ವಿಮರ್ಶೆಗೆ ಆಗಲೂ ಅವಕಾಶವಿತ್ತು. ಈಗಲೂ ಇದೆ. ಆದರೆ ಪಾಖಂಡವಾದಕ್ಕೆ ಆಗಲೂ ಅವಕಾಶವಿರಲಿಲ್ಲ; ಈಗಲೂ ಇಲ್ಲ. ನೀವು ಭಂಡವಾಳವಾದವನ್ನು ಸಹ ದಾಳಿಗೀಡು ಮಾಡಬಹುದು. ಆದರೆ ಇರುವ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ಸಲಹೆಗಳನ್ನು ನೀಡಬೇಕು. ಆದರೆ ಲಾಭವನ್ನು ಆಧರಿಸಿದ ಅರ್ಥವ್ಯವಸ್ಥೆಯು ಆಂತರಿಕವಾಗಿ ಮತ್ತು ಆತ್ಯಂತಿಕವಾಗಿ ಸ್ವಯಂನಾಶಕ್ಕೆ ಕೊಂಡೊಯ್ಯುತ್ತದೆ ಎಂದು ನೀವು ಹೇಳಕೂಡದು. ನೀವೇನಾದರೂ ಹಾಗೆ ಮಾಡಿದರೆ, ನೀವು ಪರಿಹಾಸ್ಯಕ್ಕೆ ಈಡಾಗುವಿರೇ ಹೊರತು ಇನ್ನೇನೂ ಇಲ್ಲ.

ನಾನಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ನಿಯಮಗಳನ್ನು ಕಲಿತಿದ್ದೆ. ನಾನು ಸಾಂಪ್ರದಾಯಕ ಅರ್ಥಶಾಸ್ತ್ರಜ್ಞರ ಗುಪ್ತಕೂಟ ಸೇರಿದ್ದೆ. ಆದರೆ ಇನ್ನಿತರರ ಕೃತಿಗಳಂತೆ ನನ್ನದು ಸಹ ಸಮಾಜಕ್ಕೆ ನಿಷ್ಪ್ರಯೋಜಕವೆಂದು ನನ್ನ ಒಳದನಿಯು ಮಿಡಿಯುತ್ತದೆ. ಬಹಳಷ್ಟು ಪತ್ರಿಕೆಗಳ ಲೇಖನಗಳಲ್ಲಿ ಹದಿನೈದು ಪುಟಗಳಷ್ಟು ಸಮೀಕರಣ ಸಂಬಂಧಗಳೇ ತುಂಬಿರುತ್ತವೆ. ಕೇವಲ ಒಂದರ್ಧ ಪುಟದಲ್ಲಿ ಮಾತ್ರ ಸರಳ ನಿರ್ಣಯಗಳಿರುತ್ತವೆ. ಈ ಬಗೆಯನ್ನೇ ಸಂಶೋಧನೆಯೆಂದು ವಿದ್ವತ್ತೆಂದು ಮನ್ನಿಸುತ್ತಾರ. ಇದಕ್ಕಾಗಿಯೇ ಸಂಯುಕ್ತ ಸಂಸ್ಥಾನ ಸರಕಾರವು ಪ್ರತಿ ವರ್ಷ ನೂರಾರು ದಶಲಕ್ಷ ಡಾಲರುಗಳನ್ನು ಹಂಚುತ್ತದೆ. ಏಕೆಂದರೆ ಅನೇಕ ಅರ್ಥಶಾಸ್ತ್ರಜ್ಞರು ಲೇಖನ ಬರೆಯಲು ಸರಕಾರಿ ಸಹಾಯಧನ ಸ್ವೀಕರಿಸುತ್ತಾರೆ. ಆದರೆ ಅದೆಲ್ಲ ಸಾಮಾಜಿಕ ಉದ್ದೇಶದ ದೃಷ್ಟಿಯಿಂದ ಮೂಲತಃ ನಿಷ್ಪ್ರಯೋಜಕವಾಗಿದೆ.

ಆದರೆ, ನನ್ನ ಕೃತಿಗಳು ಬೇರೆಯವರಿಗೆ ಮೂಲ್ಯಹೀನವೆನಿಸಿದರೂ ನನಗೆ ತುಂಬಾ ಒಳ್ಳೆಯವಾಗಿವೆ. ನನ್ನ ಕೃತಿಯಿಂದ ನಾನು ಬೇಗ ಬಡ್ತಿ ಪಡೆದೆ. ಮೇಲಾಗಿ ಮೇಲ್ಮಟ್ಟದ ಹತ್ತು ವಿಶ್ವವಿದ್ಯಾಲಯಗಳ ಹೊರಗೆ ಬೋಧಿಸುವ ಅರ್ಥಶಾಸ್ತ್ರಜ್ಞರಲ್ಲಿ ನನ್ನ ಕೀರ್ತಿಯು ಹೆಚ್ಚಿತು. ಈ ಹತ್ತರ ಕೂಟ ಇನ್ನೂ ನನ್ನ ಕೈಗೆ ಎಟುಕಿರಲಿಲ್ಲ. ಆ ಕೂಟದ ಸದಸ್ಯರೊಂದಿಗೆ ಸಾಮಾಜಿಕ ಸಂಲಗ್ನತೆ ಪಡೆಯಲು ನನಗೆ ವೇಳೆಯೂ ಇರಲಿಲ್ಲ. ಒಲವೂ ಇರಲಿಲ್ಲ. ದಿನನಿತ್ಯ ನಾಲ್ಕೈದು ಘಂಟೆ ಧ್ಯಾನದಲ್ಲಿ ಕಳೆಯುತ್ತಿತ್ತು. ಉಳಿದ ವೇಳೆಯು ಬೋಧನೆ, ಲೇಖನ ಮತ್ತು ಟೆನ್ನಿಸ್ ಆಟದಲ್ಲಿ ಕಳೆಯುತ್ತಿತ್ತು. ಹೀಗಾಗಿ ಸ್ನೇಹಕೂಟಗಳಿಗೆ ಹೋಗಿ ಸಿಕ್ಕ ಸಿಕ್ಕವರ ಜೊತೆಗೆ ಬೆರೆಯಲು ನನಗೆ ಬಿಡುವೇ ಇರಲಿಲ್ಲ.

1977 ರಲ್ಲಿ ನಾನು ವಿಭಾಗ ಮುಖ್ಯಸ್ಥನಾದ ಬಳಿಕ ನನ್ನ ಆಲೋಚನೆಯಲ್ಲಿ ಮಹತ್ ಪರಿವರ್ತನೆ ಉಂಟಾಗಿತ್ತು. ಈಗ ಲೇಖನ ಪ್ರಕಟಣೆಯ ಒತ್ತಡ ನನಗೆ ಉಳಿಯಲಿಲ್ಲ. ನಾನೀಗ ಒಬ್ಬ ಆಡಳಿತಗಾರ. ಬರೆಹವು ಕೆಲ ಕಾಲ ಕಾಯಬಹುದಾಗಿತ್ತು.

ಸಾಂಪ್ರದಾಯಿಕ ಅರ್ಥನೀತಿಯ ಅನೇಕ ಟೀಕಾಕಾರರಿದ್ದರು. ಇವರು ನಿರಂತರವಾಗಿ ತಪ್ಪು ತಪ್ಪು ಭವಿಷ್ಯವಾಣಿಯನ್ನು ನುಡಿಯುತ್ತಿದ್ದರು. ಆದರೆ ಅವುಗಳ ಪ್ರತಿಪಾದಕರು ತಮ್ಮ ಸ್ಥಾನಬಲ ಹಾಗೂ ಸಂಖ್ಯಾಬಲದಿಂದ ಅಯಶಸ್ಸನ್ನು ಏನಾದರೊಂದು ನೆಪ ನೀಡಿ ಸಮರ್ಥಿಸಿಕೊಳ್ಳುತ್ತಿದ್ದರು. ಟೀಕಾಕಾರರೇನೋ ಇದ್ದರು. ಆದರೆ ಅವರ ಧ್ವನಿಯನ್ನು ಸೀಮಿತವಾಗಿ ಹತ್ತಿಕ್ಕಲಾಗುತ್ತಿತ್ತು. ಷುಮಚೇರನೆಂಬ ಅರ್ಥಶಾಸ್ತ್ರಜ್ಞನು ಬಹುವಾಗಿ ಬೇಜಾರುಪಟ್ಟು "ಸ್ಮಾಲ್ ಈಜ ಬ್ಯೂಟಿಫುಲ್ : ಇಕಾನಾಮಿಕ್ಸ ಆ್ಯಜ ಇಫ್ ಪೀಪಲ್ ಮ್ಯಾಟರ್ಡ" (ಚಿಕ್ಕದು ಚೊಕ್ಕವಾಗಿದೆ : ಜನತೆಗೆ ಮಹತ್ವ ನೀಡುವ ಅರ್ಥನೀತಿ) ಎಂಬ ಗ್ರಂಥವನ್ನೇ ಬರೆದನು. ಇದು ಸಮಸ್ಯೆಯ ಹೃದಯ. ಸಾಂಪ್ರದಾಯಿಕ ಅರ್ಥನೀತಿ ಸಿದ್ಧಾಂತದಲ್ಲಿ ಜನತೆಗೆ ಯಾವ ಮಹತ್ವವೂ ಇರಲಿಲ್ಲ.

1977 ನನ್ನ ಜೀವನ ವಿಧಾನದಲ್ಲಿ ಮತ್ತೊಂದು ತಿರುವು; ಎಂದು ಈಗಾಗಲೇ ಹೇಳಿದ್ದೇನಷ್ಟೇ. ಏಕೆಂದರೆ, ಆ ವರ್ಷ ನಾನು ಸಾಂಪ್ರದಾಯಕ ಅರ್ಥನೀತಿಯಿಂದ ಸಿಡಿದು ನಿಂತೆ. ಮತ್ತು ಜಾಗತಿಕ ಚರಿತ್ರೆ ಕುರಿತು ಒಂದು ಗ್ರಂಥ ರಚಿಸಿದೆ. ಸಾಂಪ್ರದಾಯಿಕ ವಿಚಾರಗಳಿಂದ ಬೇಸತ್ತಿದ್ದೆ; ಹೊಸ ಹೊಸ ವಿಚಾರಗಳಿಗಾಗಿ ತಡಕಾಡುತ್ತಿದ್ದೆ, ನಾನು ಇತಿಹಾಸದತ್ತ ತಿರುಗಿದೆ. ಅದರಲ್ಲಿ ಪ್ರಚಲಿತ ಆರ್ಥಿಕ ಸಮಸ್ಯೆಗಳಿಗೆ ಪಾಠಗಳಿರಬಹುದೆಂದು ಭಾವಿಸಿದೆ. ಮೇಲಾಗಿ, ನಾನು ನನ್ನ ಯೋಗಶಿಕ್ಷಕ ಬಾಬಾರ ಇತಿಹಾಸ ಹಾಗೂ ಅರ್ಥನೀತಿ ಸಿದ್ಧಾಂತಗಳತ್ತ ಆಂಬೆಗಾಲಿಕ್ಕುತ್ತ ಸಾಗಿದೆ. 1964 ರಲ್ಲಿ ಬಾಬಾ ನನಗೆ ಯೋಗದೀಕ್ಷೆ ನೀಡಿದಾಗ, ಅವರು ಅರ್ಥನೀತಿ ಹಾಗೂ ಇತಿಹಾಸ ಕುರಿತು ಬರೆದ ಕೃತಿಗಳ ಬಗ್ಗೆ ಕೇಳಿದ್ದೆ. ನನ್ನ ಕುತೂಹಲ ತಣಿಸಲು ಆ ಪುಸ್ತಕಗಳನ್ನು ಸಹ ಕೊಂಡಿದ್ದೆ. ಆ ಬಳಿಕ, ಸ್ವಲ್ಪು ಕುತೂಹಲದಿಂದ ಪುಟ ತಿರುವಿ ಹಾಗೆಯೇ ಕಪಾಟಿನಲ್ಲಿಟ್ಟಿದ್ದೆ. ಏಕೆಂದರೆ, ಯೋಗಶಿಕ್ಷಕನೊಬ್ಬ ಸಾಮಾಜಿಕ ಹಾಗೂ ಆರ್ಥಿಕ ತತ್ತ್ವಜ್ಞಾನ ಕುರಿತು ಮೌಲಿಕ ವಿಚಾರಗಳನ್ನು ನೀಡಬಹುದೆಂದು ನಾನು ನಂಬಿರಲಿಲ್ಲ.

1976 ರಲ್ಲಿ ನಾನು ಬಾಬಾರ ಪುಸ್ತಕಗಳನ್ನು ಪುನಃ ಓದಿದೆ. ನಾನು ಅವಾಕ್ಕಾದೆ. ಈ ಪುಸ್ತಕಗಳನ್ನು ಆನಂದಮಾರ್ಗ ಪ್ರಕಾಶನವು ಪ್ರಕಟಿಸಿತ್ತು. ಪುಸ್ತಕಗಳ ಓದು ಅಷ್ಟೇನೂ ಸುಲಭವಾಗಿರಲಿಲ್ಲ. ಮುದ್ರಣವು ಹೊಲಸಾಗಿತ್ತು. ಕಟ್ಟು ಬಿಗಿದುರವಿರಲಿಲ್ಲ. ಆದರೆ ಅವುಗಳಲ್ಲಿ ಅಡಕವಾದ ಬುದ್ಧಿಮತ್ತೆಯು ದಂಗುಬಡಿಸುವಂತಿತ್ತು. ತಡವಾಗಿಯಾದರೂ ಆಗಲಿ ಈ ಯೋಗಶಿಕ್ಷಕರು ಜಾಗತಿಕ ಇತಿಹಾಸ ಹಾಗೂ ಅರ್ಥನೀತಿಗಳಲ್ಲಿ ಪ್ರಬುದ್ಧ ಪಡೆದಿರುವರೆಂಬುದನ್ನು ಕಂಡು ಹಿಡಿದೆ.

ಶ್ರೀ ಸರಕಾರರ ಚಾರಿತ್ರಿಕ ತತ್ತ್ವಜ್ಞಾನವು ನನ್ನನ್ನು ಎಷ್ಟೊಂದು ಮುಗ್ಧನನ್ನಾಗಿಸಿತೆಂದರೆ ಅದು ಮಾರ್ಕ್ಸ, ಟೊಯ್ನಬಿ ಹಾಗೂ ಸ್ಪೆಂಗ್ಲರ್‌ರೆಲ್ಲರ ತತ್ತ್ವಜ್ಞಾನಗಳ ಸಂಕಲನಕ್ಕಿಂತ

ಹೆಚ್ಚು ಜನಪರವೆಂದು ನನಗನಿಸಿತು. ನಾನು ಆ ವಿಷಯ ಕುರಿತು 1977 ರಲ್ಲಿ ಒಂದು ಪುಸ್ತಕವನ್ನೂ ಬರೆದೆ. ಒಂದು ವರುಷದ ಬಳಿಕ 'ದಿ ಡೌನಫಾಲ ಆಫ್ ಕೆಪಿಟ್ಯಾಲಿಜಂ ಆ್ಯಂಡ ಕಮ್ಯುನಿಜಂ : ಎ ನ್ಯೂ ಸ್ಟಡಿ ಆಫ್ ಹಿಸ್ಟರಿ' (ಬಂಡವಾಳವಾದ ಮತ್ತು ಸಾಮ್ಯವಾದಗಳ ಪತನ: ಇತಿಹಾಸದ ಒಂದು ನೂತನ ಅಧ್ಯಯನ) ಎಂಬ ಹೆಸರಿನಲ್ಲಿ ಮ್ಯಾಕಮಿಲನ್‌ರು ಅದನ್ನು ಪ್ರಕಟಿಸಿದರು.

ತುಂಬಾ ಆಕರ್ಷಕ ಶಿರೋನಾಮೆ ಹೊಂದಿದ್ದರೂ ಸಹ, ಈ ಪುಸ್ತಕವು ಯಾವುದೇ ಅಲೆಗಳನ್ನು ಉಂಟು ಮಾಡಲಿಲ್ಲ. ಬ್ರಿಟಿಷ್ ಮತ್ತು ಭಾರತೀಯ ಪತ್ರಿಕೆಗಳು ಗ್ರಂಥ ವಿಮರ್ಶೆ ಮಾಡಿದ್ದನ್ನು ಬಿಟ್ಟರೆ ಬೇರೇನೂ ಘಟಿಸಲಿಲ್ಲ. ಪ್ರಥಮ ಮುದ್ರಣದ ಪ್ರತಿಗಳು ಹೆಚ್ಚಾಗಿ ಮಾರಾಟವಾದುದರಿಂದ ನಾನು ಸಂತೃಪ್ತಿಪಟ್ಟೆ ಈ ಪುಸ್ತಕದಿಂದ ನನಗಾವ ಮಿತ್ರರೂ ದೊರೆಯಲಿಲ್ಲ. ಆದರೆ ಟೀಕಾಕಾರರಿಗೇನೂ ಕೊರತೆಯಿರಲಿಲ್ಲ. ಅರ್ಥಶಾಸ್ತ್ರಜ್ಞ ವೃತ್ತಿಯವರಿಂದ ನನ್ನ ಬಹಿಷ್ಕಾರದ ಆರಂಭವಂತೂ ಆಯಿತು. ಮೊದಮೊದಲು ಅದು ನನ್ನ ಗಮನಕ್ಕೆ ಬರಲಿಲ್ಲ. ಇದರಿಂದ ನನ್ನ ಕೀರ್ತಿ ಹೆಚ್ಚುವುದೆಂದು ತಿಳಿದಿದ್ದೆ. ತಮ್ಮ ಸೀಮಿತ ವಿಶೇಷಜ್ಞತೆಯ ಚೌಕಟ್ಟನಾಚೆ ಸಾಹಸ ಮಾಡುವ ಅರ್ಥಶಾಸ್ತ್ರಜ್ಞರು ವಿರಳ. ಇತ್ತ ನಾನಾದರೋ ಮೂಲಕಾಂಡದಿಂದ ಸಿಡಿದು ನನ್ನೆಣಿಕೆಯಲ್ಲಿ ವಿಚಾರ ಪ್ರಚೋದಕವಾದ ಇತಿಹಾಸ ಕುರಿತು ವಿವೇಚನೆ ಮಾಡಿದ್ದೆ.

1978 ರಲ್ಲಿ 'ಇಕಾನಮಿಕ್ ಇನ್‌ಕ್ವಾಯರಿ' ಎಂಬ ಪತ್ರಿಕೆಯು ಅಮೇರಿಕೆ ಮತ್ತು ಕೆನಡಾ ವಿಶ್ವವಿದ್ಯಾಲಯಗಳ ಅರ್ಥಶಾಸ್ತ್ರಜ್ಞರನ್ನು, ಅವರು ಪ್ರಕಟಿಸಿದ ಲೇಖನಗಳನ್ನು ಆಧರಿಸಿ, ಶ್ರೇಣೀಕರಿಸಿತು. ಅದು ತನ್ನ ಸಮೀಕ್ಷೆಯಲ್ಲಿ ನಲವತ್ತಾರು ಜನರನ್ನು ಪರಿಗಣಿಸಿತ್ತು. ಅವರು ಅರ್ಥನೀತಿಯ ವರಿಷ್ಠ ತಾರಾಮಣಿಗಳೆಂದು ಕರೆಯಿತು. ಆ ನಲವತ್ತಾರರಲ್ಲಿ ನಾನು ತೃತೀಯ ಸ್ಥಾನದಲ್ಲಿದ್ದೆ. ಪ್ರಥಮ ಹಾಗೂ ದ್ವಿತೀಯ ಸ್ಥಾನಗಳು ಹಾರ್ವರ್ಡ ಮತ್ತು ಸ್ಟ್ಯಾನಫೋರ್ಡ ವಿಶ್ವವಿದ್ಯಾಲಯಗಳ ಪಾಲಾಗಿದ್ದವು.

'ಇಕಾನಾಮಿಕ್ ಇನ್‌ಕ್ವಾಯರಿ' ಲೇಖನದಿಂದ ನನ್ನಲ್ಲಿ ವಿದ್ಯುತ್ ಸಂಚಾರವಾಯಿತು. ಈಗ ನಾನು ತಜ್ಞರ ಅಭಿಪ್ರಾಯ ರೂಪಿಸುವ ಹಾಗೂ ಅದನ್ನು ಸಮಾಜ ಹಿತ ಸಾಧಿಸಲು ವಾಸ್ತವತೆಯತ್ತ ತಿರುಗಿಸಬಲ್ಲ ಪ್ರತಿಷ್ಠಿತ ಅರ್ಥಶಾಸ್ತ್ರಜ್ಞನಾಗಿರುವೆನೆಂದು ಅರಿತುಕೊಂಡೆ. ನನ್ನ ಗೆಳೆಯರಿಂದ ಮತ್ತು ನನಗೆ ಅಪರಿಚಿತರಾದ ಇತರರಿಂದ ಅಭಿನಂದನೆಗಳು ಬರಲಾರಂಭಿಸಿದವು. ಅದುವರೆಗೆ ಕೇವಲ ಹತ್ತು ಮೇಲ್ವರ್ಗದ ವಿಶ್ವವಿದ್ಯಾಲಯಗಳಿಗೆ ಮೀಸಲಾಗಿದ್ದ ಕೋಟೆಗೆ ನಾನು ಲಗ್ಗೆ ಹಾಕಿದ ಬಗ್ಗೆ ಅವರೆಲ್ಲ ಮೆಚ್ಚಿ ಬರೆದಿದ್ದರು. ತಮ್ಮ ಸ್ವಂತದ ಪತ್ರಿಕೆಗಳನ್ನು ಹೊಂದಿ ತಮ್ಮವರಿಗೇ ಪ್ರಾಶಸ್ತ್ಯ ನೀಡುತ್ತಿದ್ದ ಹಾರ್ವರ್ಡ ಮತ್ತು ಸ್ಟ್ಯಾನಫೋರ್ಡ ನಿಪುಣರಿಗೆ ಸರಿಸಾಟಿಯಾಗಿ ಹೊರಗಿನವನೋರ್ವನು ನಿಂತದ್ದರಿಂದ ಅವರಿಗೆ ಹೊಸ ಪ್ರೇರಣೆ ದೊರಕಿತ್ತು.

ನನ್ನ ವಿಜಯೋತ್ಸವವು ಕೇವಲ ಕ್ಷಣಿಕವಾಗಿತ್ತು. ಈ ವೃತ್ತಿಯಲ್ಲಿ ಶತಮಾನ ಗಳಿಂದ ಬೇರೂರಿದ ಅರ್ಥನೀತಿ ಸಿದ್ಧಾಂತದ ಮೂಲವನ್ನೇ ನಾನು ಪ್ರಶ್ನಿಸತೊಡಗಿದ್ದೆ. ಆದರೆ ಪರಿಣಾಮವು ಮರುಮಾತಿಲ್ಲದ ಬಹಿಷ್ಕಾರ ತಾನೇ?

ನಾನು ಬರೆದ ಇತಿಹಾಸ ಗ್ರಂಥದಲ್ಲಿ ಯುಗದ ಸಂದೇಶವಿತ್ತು. ಅರ್ಥಾತ್ ಪ್ರಚಲಿತ ಶತಮಾನಾಂತ್ಯದಲ್ಲಿ ಪ್ರಜಾಸತ್ತಾತ್ಮಕ ಮತ್ತಿತರ ದೇಶಗಳಲ್ಲಿ ಸಂಪತ್ತಿನ ಅತಿಶಯ ಕೇಂದ್ರೀಕರಣದಿಂದ, ಹಿಂಸಾತ್ಮಕ ಸಾಮಾಜಿಕ ಕ್ರಾಂತಿ ಘಟಿಸುತ್ತದೆ. ಇದರ ಆರಂಭ ಇರಾಣದಿಂದ, ಎಂದು ತಿಳಿಸಿದ್ದೆ. ಆನಂತರ ಒಂದು ಭಾಷಣದಲ್ಲಿ 1980 ರ ದಶಕದ ಕೊನೆಗೆ ಜಗದ್ವ್ಯಾಪ್ತಿಯಾದ 'ಮಹಾ–ಆರ್ಥಿಕ ಕುಸಿತ' ಘಟಿಸುವುದೆಂದು ಭವಿಷ್ಯ ನುಡಿದಿದ್ದೆ.

ಈ ಭವಿಷ್ಯವಾಣಿಗಳ ಮೂಲಕ ನಮ್ಮೀ ಉಪಗ್ರಹವನ್ನು ಬಾಧಿಸಿದ, ಸಾಂಪತ್ತಿಕ ಆಸಮತೋಲನದ ಅತಿರೇಕದ ವಿರುದ್ಧ ಸಾರ್ವಜನಿಕರನ್ನು ಎಚ್ಚರಿಸಿ ಅವರ ವಿವೇಕವನ್ನು ಜಾಗ್ರತಗೊಳಿಸಬೇಕೆಂಬ ಆಶಯ ನನ್ನದಾಗಿತ್ತು. ಆದರೆ ಯಾರೂ ಇತ್ತ ಲಕ್ಷ್ಯ ಗೊಡಲಿಲ್ಲ. ಪ್ರಪಂಚದ ಬಡತನವನ್ನು ನಿರ್ಮೂಲಗೊಳಿಸುವುದು ನನ್ನ ಜೀವನೋದ್ದೇಶ ವಾಗಿತ್ತು. ಅದಕ್ಕೆ ಪ್ರತಿಯಾಗಿ ನನಗೆ ಕಾಣಬಂದುದು, ಜಾಗತಿಕ ವ್ಯಾಪ್ತಿಯ ಆರ್ಥಿಕ ಕುಸಿತ.

ಎಂಥ ಹೃದಯವಿದ್ರಾವಕವಿದು ! ನನಗೆ ವೇದ್ಯವಾದಂತೆ ನಮ್ಮೀ ಉಪಗ್ರಹ – ವ್ಯಾಪ್ತಿಯ ಕುಸಿತದ ಲಕ್ಷಣಗಳು ಹೊರಬರಲಾರಂಭಿಸಿವೆ. ಇತಿಹಾಸದಲ್ಲಿ ಅದರ ಪರಾವರ್ತನೆ ಗಳು ಪುನರಪಿ ಘಟಿಸುವುದನ್ನು ನಾನು ಕಂಡಿದ್ದೇನೆ. ಅಧಿಕ ಆಸಮತೋಲನ ಮತ್ತು ಅದರಿಂದ ಉದ್ಭೂತವಾಗುವ ಬಡತನ ಹಾಗೂ ಶೋಷಣೆಗಳು ಆರ್ಥಿಕ ದುರಂತಗಳಿಗೆ ಕಾರಣೀಭೂತ ವಾಗಿರುವುದನ್ನು ಐದು ಸಹಸ್ರ ವರುಷದ ಮಾನವೇತಿಹಾಸವು ಪುನಃ ಪುನಃ ತೋರಿಸಿದೆ.

ನಮ್ಮ ಭೂಖಂಡವು ಇನ್ನೊಂದು ಆರ್ಥಿಕ ಅನರ್ಥದತ್ತ ನಡೆದಿರುವ ಬಗ್ಗೆ ನನಗೆ ಖಾತರಿಯಾಗಿತ್ತು. ಈಗಾಗಲೇ ಹಸಿವೆಯಿಂದ ಬಳಲಿದ ಜಗತ್ತಿನಲ್ಲಿ ದಾರಿದ್ರ್ಯ ಮತ್ತು ಉಪವಾಸಗಳು ಹೆಚ್ಚುತ್ತಿವೆಯೆಂಬ ವಿಚಾರಮಾತ್ರದಿಂದ ನನ್ನ ಹೃದಯವು ಕುಸಿಯುತ್ತಿತ್ತು. ಮುಂಬರುವ ದುರಂತ ಕುರಿತು ಮುಖಂಡರ ಮನ ಸೆಳೆಯುವಂತೆ ನನ್ನ ಮಿತ್ರರಿಗೆ ಹಾಗೂ ಸಹೋದ್ಯೋಗಿಗಳಿಗೆ ನಾನು ಬಿನ್ನವಿಸಿದೆ. ಆದರೆ ಅದರಿಂದೇನೂ ಫಲಿಸಲಿಲ್ಲ. ನಾನು ಮಾತನಾಡಿಸಿದವರೆಲ್ಲ ನನ್ನತ್ತ ನಗೆಯಾಡಿದರಷ್ಟೇ!

ಇನ್ನೊಂದು ದುರಂತವು ಏಕೆ ಅನಿವಾರ್ಯವಾಗಿದೆಯೆಂಬ ಬಗ್ಗೆ ನಾನೊಂದು ಪುಸ್ತಕ ಬರೆಯಬೇಕೆಂದು ನನಗೆ ನಾನೇ ಹೇಳಿಕೊಂಡೆ. ವಿಶ್ವಾಸಾರ್ಹತೆಯನ್ನೂ ಹಾಗೂ ಸಾರ್ವಜನಿಕ ನಂಬುಗೆಯನ್ನೂ ಸಂಪಾದಿಸಲು ನಾನು ಖಚಿತ ಭವಿಷ್ಯವನ್ನು ಸಾರಬೇಕಾಗಿತ್ತು.

ಅರ್ಥನೀತಿಯು ಒಂದು ವಿಜ್ಞಾನ. ಅದನ್ನು ಸರಿಯಾಗಿ ಅರಿತರೆ, ಅದು ಚೊಕ್ಕ ಭವಿಷ್ಯವಾಣಿಗೆ– ವಿಶೇಷವಾಗಿ ದೀರ್ಘಕಾಲೀನ ಒಲವುಗಳಿಗೆ – ದಿಕ್ಸೂಚಿಯಾಗಬಹುದು. ಏಕೆಂದರೆ ಇವುಗಳ ದಿಶೆಯನ್ನು ಹಿಂದಿನ ಘಟನೆಗಳಿಂದ ಊಹಿಸಬಹುದಾಗಿದೆ. ಆದರೆ ಒಂದು

ವೇಳೆ, ತನ್ನ ಸ್ವಂತ ಹಣಕಾಸಿನ ಹಿತಾಸಕ್ತಿಯಿಂದ ಸಿರಿವಂತರ ಹಾಗೂ ಅಧಿಕಾರಸ್ಥರ ಆರ್ಥಿಕ ಪ್ರಭುತ್ವವನ್ನೇ ಸಮರ್ಥಿಸುವ ವಾದಕ್ಕಿಳಿದರೆ, ಕೇವಲ ಕಾಮಾಲೆಗ್ರಸ್ತ ಧೋರಣೆಗಳನ್ನು ಮಾತ್ರ ನಿರೂಪಿಸಬಹುದು. ಅದರಿಂದ ಸಾರ್ವಜನಿಕರಿಗೆ ನೀಡಿದ ಭರವಸೆಗಳು ಈಡೇರಲಾರವು. ಆಗ ಎಲ್ಲ ಭವಿಷ್ಯವಾಣಿಗಳು ತಪ್ಪಾಗುತ್ತವೆ. ಸಾರ್ವಜನಿಕರನ್ನು ಕೆಲವು ಕಾಲ ಮೂರ್ಖರನ್ನಾಗಿಸ ಬಹುದೇ ಹೊರತು ಸದಾಕಾಲ ಅಲ್ಲ.

1980 ರ ದಶಕದಲ್ಲಿ ಅಮೇರಿಕೆಯ ಅರ್ಥಶಾಸ್ತ್ರಜ್ಞ ವೃತ್ತಿಯು ಆ ಸ್ಥಿತಿಯಲ್ಲಿತ್ತು. ಆ ವೃತ್ತಿಪರರ ಭವಿಷ್ಯ ವಾಣಿಗಳನ್ನು ಕುರಿತು ಸಾರ್ವಜನಿಕರು ಭ್ರಮ ನಿರಸನರಾಗಿದ್ದರು. ಆದರೂ ಸಹ ಅರ್ಥಶಾಸ್ತ್ರಜ್ಞರಿನ್ನೂ ತಮ್ಮ ಸ್ವಂತದ ಬೇಳೆ ಬೇಯಿಸಿಕೊಳ್ಳುವ ಸಿದ್ಧಾಂತಗಳಿಗೇ ಜೋತುಬಿದ್ದಿದ್ದರು. ಕೀನ್ಸಿಯನ್ನರೊಂದಿಗೆ ಸೇರಿದ ಒಂದು ವಿಚಾರಧಾರೆಯವರು 1980 ರ ದಶಕದಲ್ಲಾಗುವ ಅತಿಪ್ರಸರಣದ ಹೆಚ್ಚಳ, ನಿರುದ್ಯೋಗದ ಹೆಚ್ಚಳ, ಬಡ್ಡಿಯದರಗಳ ಹೆಚ್ಚಳ, ಮತ್ತು ತೈಲ ದರಗಳ ಹೆಚ್ಚಳ ಕುರಿತು ಭವಿಷ್ಯ ನುಡಿದಿದ್ದರು. ಇನ್ನೊಂದು ವಿಚಾರಧಾರೆಯವರು – ತಮ್ಮನ್ನು ಪೂರೈಕೆದಾರರ ಕಡೆಯವರೆಂದು ಕರೆದುಕೊಂಡು, 1984 ರಷ್ಟು ಹೊತ್ತಿಗೆ ಅಮೇರಿಕೆ ಸರಕಾರದ ಮುಂಗಡ ಪತ್ರವು ಸಮತೋಲನದ್ದಾಗಿರುವದೆಂದು ಭವಿಷ್ಯ ನುಡಿದಿದ್ದರು.

ನಾನು ತದ್ವಿರುದ್ಧವಾಗಿ 1982 ರಲ್ಲಿ ಎರಡು ಲೇಖನಗಳನ್ನು ಬರೆದೆ. ಹಣದುಬ್ಬರದ ಇಳಿಕೆ, ಬಡ್ಡಿದರಗಳಲ್ಲಿ ಇಳಿಕೆ, ತೈಲ ದರಗಳ ಇಳಿಕೆಗಳನ್ನೂ ಇತ್ತ ಮುಂಗಡ ಪತ್ರದ ಕೊರತೆ, ಸಂಪತ್ತಿನ ಹಂಚಿಕೆಯ ವಿಷಮತೆ, ವಾಣಿಜ್ಯ ಸಂಸ್ಥೆಗಳ ವಿಲೀನೀಕರಣ ಹಾಗೂ ಶೇರು ಪೇಟೆಯ ಗುಳ್ಳೆ ಒಡೆದು ಕೊನೆಗೆ 1990 ರಲ್ಲಿ ಆರ್ಥಿಕ ಕುಸಿತ ಆರಂಭವಾಗುವುದನ್ನೂ ಮುಂಗಂಡ ನಾನು ಎರಡು ಪತ್ರಿಕೆಗಳಿಗೆ ನನ್ನ ಲೇಖನಗಳನ್ನು ಕಳಿಸಿದೆ. ಅವರು ಆರು ತಿಂಗಳ ನಂತರ ಅವುಗಳನ್ನು ತಿರಸ್ಕರಿಸಿದರು. ಆ ಬಳಿಕ ಆ ಲೇಖನಗಳನ್ನು ಕಡಿಮೆ ಪ್ರಸಿದ್ಧಿಯ ಎರಡು ಪತ್ರಿಕೆಗಳಿಗೆ ಕಳಿಸಿದೆ. ಅವುಗಳನ್ನು ಕಡಿಮೆ ಅವಧಿಯಲ್ಲಿಯೇ ಅವರು ತಿರಸ್ಕರಿಸಿದುದು ನನ್ನ ಸುದೈವ.

1983 ರಲ್ಲಿ ನಾನು "ದಿ ಗ್ರೇಟ ಡಿಪ್ರೆಶನ್ ಆಫ್ – 1990" (1990 ರ ಮಹಾನ್ ಆರ್ಥಿಕ ಕುಸಿತ) ಎಂಬ ಗ್ರಂಥ ರಚಿಸಿದೆ. 'ಡೌನಫಾಲ ಆಫ್ ಕೆಪಿಟ್ಯಾಲಿಜಂ ಆ್ಯಂಡ ಕಮ್ಯುನಿಜಂ' (ಬಂಡವಾಳವಾದ ಹಾಗೂ ಸಮತಾವಾದದ ಪತನ) ಎಂಬ ನನ್ನ ಪುಸ್ತಕವು 1978 ರ ಅಂತ್ಯದಲ್ಲಿ ಪ್ರಕಟವಾದ ಲಾಗಾಯ್ತು ನನ್ನ ವೃತ್ತಿಯವರು ನನಗೆ ಬಹಿಷ್ಕಾರ ಹೇರಿದ್ದರು. ನಾನು 'ದಿ ಗ್ರೇಟ ಡಿಪ್ರೆಶನ್ – 1990' ಬರೆದ ಮೇಲಂತೂ ಆ ಬಹಿಷ್ಕಾರ ಪೂರ್ಣ ಪ್ರಮಾಣದ್ದಾಯಿತು. ಅಂತಾರಾಷ್ಟ್ರೀಯ ವಾಣಿಜ್ಯದ ತಾಂತ್ರಿಕ ಮಾದರಿಗಳನ್ನೊಳಗೊಂಡ ಲೇಖನ ಸಹಿತ ನನ್ನೆಲ್ಲ ಲೇಖನಗಳನ್ನೂ ಪತ್ರಿಕೆಗಳು ತಿರಸ್ಕರಿಸಿದವು. ಈ ಮುನ್ನ 1980 ರಲ್ಲಿ ನಾನು ಅರ್ಥಶಾಸ್ತ್ರ ವಿಭಾಗದ ಚೇರಮನ್ ಹುದ್ದೆಯನ್ನೂ ಖಾಲಿ ಮಾಡಿದ್ದೆ. ಏಕೆಂದರೆ, ಸದರ್ನ ಮೆಥಾಡಿಸ್ಟ ವಿಶ್ವವಿದ್ಯಾಲಯದ ಇಬ್ಬರು ದಾನಿಗಳು, ಬಂಡವಾಳವಾದದ ಭದ್ರತೆ ಕುರಿತು ನನ್ನ ಖಂಡನಾತ್ಮಕ ಅಭಿಪ್ರಾಯದ ದೂರು ನೀಡಿದ್ದರು. ನಾನೀಗ ಕೇವಲ ಒಬ್ಬ ವಿರುದ್ಧ

ಪ್ರಾಧ್ಯಾಪಕ : ನಾನೀಗ 'ಪ್ರಕಟಿಸು ಅಥವಾ ಪ್ರಣಾಶ ಹೊಂದು, ಎನ್ನುವವರ ಸಾಲಿಗೆ ಸೇರಿದೆ. ಅರ್ಥನೀತಿಪರ ಪತ್ರಿಕೆಗಳಂತೂ ನನ್ನೀ ಪ್ರಣಾಶವನ್ನೇ ಎದುರು ನೋಡುತ್ತಿದ್ದವು. ಕೇವಲ ಮೇಲ್ಮಟ್ಟದ ಪತ್ರಿಕೆಗಳಷ್ಟೇ ಏಕೆ; ಸಾಧಾರಣ ಮಟ್ಟದ ಪತ್ರಿಕೆಗಳೂ ಸಹ ನನ್ನ ಲೇಖನಗಳಿಗೆ ಮುಟ್ಟುಗೋಲು ಹಾಕಿದವು.

ಅರ್ಥಶಾಸ್ತ್ರ ಸಿಬ್ಬಂದಿಯಂತೂ ಹೆಜ್ಜೆಹೆಜ್ಜೆಗೆ ಹುಚ್ಚುನಾಯಿಯಂತೆ ನನ್ನ ಬೆನ್ನು ಹತ್ತಿದರು. 1980 ಮತ್ತು 1983 ರ ಮಧ್ಯೆ ನಾನು ಇಪ್ಪತ್ತು ಲೇಖನಗಳನ್ನು ಬರೆದೆ. ಅವುಗಳಲ್ಲಿ ಹತ್ತೊಂಬತ್ತು ತಿರಸ್ಕೃತವಾದವು. ಕೊಟ್ಟ ಕಾರಣವೆಂದರೆ, ನನ್ನ ಕೃತಿಗಳು ಕ್ಷುಲ್ಲಕ ಎಂಬುದಾಗಿತ್ತು. ಅನಂತರ ಮೂಲತಃ ಅದೇ ಬಗೆಯ ವಿಚಾರಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದ ವಾದರೂ ನನ್ನ ಹೆಸರಿನಲ್ಲಿ ಅಲ್ಲ.

ನಾನು ಮುಂಬರುವ ಆರ್ಥಿಕ ಕುಸಿತ ಕುರಿತ ನನ್ನ ಪುಸ್ತಕದ ಪ್ರಸ್ತಾವದ ಹಸ್ತ ಪ್ರತಿಯನ್ನು ಖ್ಯಾತ ಪ್ರಕಟಣಾಲಯಗಳಿಗೆ ಕಳಿಸಿದೆ. ಅವರೆಲ್ಲರೂ ಅದನ್ನು ತಿರಸ್ಕರಿಸಿದರು. ಹಲವರಂತೂ ನನ್ನ ಸಮಾನಸ್ಕರಿಂದ ತುಂಬಾ ನಿಷೇಧಾತ್ಮಕ ಪರಾಮರ್ಶೆ ಪಡೆದರು. ಹೀಗಾಗಿ, ಪ್ರಕಟಣಕಾರರೆಲ್ಲರೂ ನನ್ನ ಪ್ರಸ್ತಾವವನ್ನು ತಿರಸ್ಕರಿಸದೆ ಬೇರೆ ಹಾದಿ ಇರಲಿಲ್ಲವೆಂದು ಬರೆದರು. ಆ ಬಳಿಕ ನಾನು ನನ್ನ ಪ್ರಸ್ತಾವವನ್ನು ಮತ್ತಿತರ ಹತ್ತು ಮುದ್ರಣಾಲಯಗಳಿಗೆ ಕಳಿಸಿದೆ. ಪರಿಣಾಮ ಮಾತ್ರ ಅದೇ ಆಯಿತು. ನಂತರ ನಾನು ಮೂವತ್ತು ಚಿಕ್ಕ ಪ್ರಕಟಣಕಾರರಿಗೆ ಕಳಿಸಿದೆ. ಅವರಲ್ಲೊಬ್ಬನು ಮಾತ್ರ, ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರ ಕುರಿತ ನನ್ನ ಟೀಕೆಯನ್ನು ತೆಗೆದರೆ ಪ್ರಕಟಿಸಲು ಸಿದ್ಧನಾದ. ನನ್ನ ಮೇರಗೆ ಈ ರೀತಿ ಮಾಡುವುದು ಸ್ವತಂತ್ರ ಸಮಾಜದಲ್ಲಿಯ ಕತ್ತರಿ ಪ್ರಯೋಗವಾಗಿತ್ತು. ತತ್ತ್ವಪಃ ಇದು ಅಸಮ್ಮತವಿತ್ತು – ಅದೂ ಸಹ ಒಂದಾದ ಮೇಲೊಂದಾಗಿ ನನ್ನ ಭವಿಷ್ಯಗಳು ನಿಜವಾಗುತ್ತಿದ್ದ ಕಾಲದಲ್ಲಿ.

ಕೇವಲ ಐದು ವರ್ಷ ಮುನ್ನ, ನಲವತ್ತಾರು ಅರ್ಥನಿಪುಣ ತಾರಾವರೇಣ್ಯರ ಯಾದಿಯಲ್ಲಿ ತೃತೀಯ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿಗೆ ಹೀಗೆಲ್ಲ ಆಗುತ್ತಿರುವುದನ್ನು ನಂಬಲಾರದಾದೆ. ನಾನು ಈ ಮುನ್ನ ಏನನ್ನೂ ಬರೆದಿಲ್ಲವೋ ಏನೋ ಎಂಬಂತೆ, ನಾನೊಬ್ಬ ಮೂರ್ಖನೇನೋ ಎಂಬಂತೆ ಪ್ರಕಟಣಕಾರರು ನನ್ನ ಪ್ರಸ್ತಾವವನ್ನು ತಿರಸ್ಕರಿಸುತ್ತಿದ್ದರು. ನಾನು ಹಾಗೆಯೇ ಇದ್ದಿರಬಹುದು. ಇಲ್ಲವಾದರೆ, ನಾನು ಅದೆಷ್ಟೋ ದಿನ ಮೊದಲೇ ಎಲ್ಲವನ್ನೂ ಕೈಬಿಡುತ್ತಿದ್ದೆ.

ಕೈ ಬಿಡುವುದೇ? ಅದು ಸಾಧ್ಯವೇ ಇಲ್ಲ. ನಾನು ನನ್ನ ಅನಂತ ತಂದೆಯನ್ನು ಕುರಿತು ಇಪ್ಪತ್ತು ವರುಷಗಳಿಂದ ಧ್ಯಾನ ಮಾಡುತ್ತಿದ್ದ. ಮತ್ತವನು ನನಗೆ ಅಪಾರ ಸಹನೆ ಹಾಗೂ ಚೇತನವನ್ನು ದಯಪಾಲಿಸಿದ್ದನು. ಮೇಲಾಗಿ ನಾನು ಕೈ ಬಿಡುವುದಾದರೂ ಹೇಗೆ? ಆರ್ಥಿಕ ಕುಸಿತವೆಂದರೆ ನಗೆಚಾಟಿಕೆಯೇನೂ ಅಲ್ಲ. ಇಡೀ ಮಾನವತೆಯ ಭವಿಷ್ಯವೇ ಪಣಕ್ಕೀಡಾಗಿತ್ತು. ಆದರೆ ನಾನು ಎಳ್ಳಷ್ಟೂ ಅಲುಗದೆ ಕಲ್ಲು ಗೋಡೆಗೆ ತಲೆ ಜಜ್ಜಿಕೊಂಡಂತಾಗಿದ್ದಿತು. ನಾನೆಷ್ಟೇ ಪರಿಶ್ರಮಪೂರ್ವಕ ಪ್ರಯತ್ನಿಸಲಿ, ವಿಘ್ನಗಳು ನನ್ನ ಬೆನ್ನು ಹತ್ತಿದ್ದವು. ದಿಶೆ ದಿಶೆಗಳಲ್ಲಿ

ಸೋಲು ನನ್ನ ಪಾಲಿಗೆ ಬಂದಿತು. ತಳಮಳಗೊಂಡು ಶ್ರದ್ಧೆಯ ಎಲ್ಲೆ ಮೀರಿ ಉಪವಾಸಕ್ಕಿಳಿದೆ. ನಾನು ಏನನ್ನೂ ಮಾಡದೆ ಸುಮ್ಮನೆ ಕುಳಿತುಕೊಳ್ಳದಾದೆ.

ವಿಘ್ನಗಳನ್ನು ಯಜ್ಞಮೂಲಕ ಪರಿಹರಿಸಬಹುದಾಗಿದೆಯೆಂದು ನಾನು ಗೀತೆಯಲ್ಲಿ ಓದಿರುವೆ. ಆದರೆ, ಆ ಕುರಿತು ವ್ಯಾಖ್ಯಾನವನ್ನೇನೂ ಅದರಲ್ಲಿ ಕೊಟ್ಟಿಲ್ಲ. ಇದಕ್ಕಿಂತ ಹೆಚ್ಚಿಗೆ ಇನ್ನೇನು ಮಾಡಬಲ್ಲೆ? ಅಗತ್ಯವಿದ್ದವರಿಗೆ ಧನ ದಾನವೇ ? ಅದನ್ನು ನಾನು ನಿಯಮಿತವಾಗಿ ಮಾಡುತ್ತಿದ್ದೆ. ಹಸಿದವರಿಗೆ ಉಣಬಡಿಸಲು ಇಲ್ಲವೆ ನೈಸರ್ಗಿಕ ದುರಂತಕ್ಕೆ ಬಲಿಯಾದವರನ್ನು ಸೇವಿಸಲು ವೇಳೆ ಹಾಗೂ ದೈಹಿಕ ಪರಿಶ್ರಮಗಳನ್ನು ಧಾನ ಮಾಡಬೇಕಷ್ಟೇ. ಇದನ್ನೂ ಸಹ ನಾನು ಕಾಲ ಕಾಲಕ್ಕೆ ಮಾಡಿದ್ದೇನೆ. ಇನ್ನೇನು ಉಪವಾಸ ಯಜ್ಞವನ್ನು ನಾನು ಮಾಡಿರಲಿಲ್ಲ. ಅದಕ್ಕಾಗಿ ಕಾರಣವೂ ಇಲ್ಲದಿಲ್ಲ. ಉಪವಾಸ ಮಾಡುವುದನ್ನು ಯಾರು ಬಯಸುತ್ತಾರೆ?

1983 ರ ಬೇಸಿಗೆಯ ರಜೆಯ ಕಾಲಕ್ಕೆ ನಾನು ಉಪವಾಸ ವ್ರತವನ್ನು ಆರಂಭಿಸಿದೆ. ಒಂದು ವಾರ ಪರ್ಯಂತ ಉಪವಾಸ ಮಾಡಿದೆ. ಮೊದಲ ಮೂರು ದಿನ ಅನ್ನ – ಪಾನೀಯಗಳಿಲ್ಲದೆ ಮತ್ತು ಕೊನೆಯ ನಾಲ್ಕು ದಿನ ಲವಣ ಮಿಶ್ರಿತ ನಿಂಬರಸದೊಂದಿಗೆ ನೀರು ಸೇವಿಸಿದೆ. ನಾನು ಸಾಯುವುದರಲ್ಲಿದ್ದೆ. ಬಡಕಲಾದ, ಅತಿ ದಣಿದ ನನ್ನ ದೇಹವು ಪುನಃ ಪುನಃ ಎದುರು ನಿಂತಿತು. ಆದರೆ ಪರಿಸ್ಥಿತಿಯು ನನ್ನನ್ನು ಹುಚ್ಚನನ್ನಾಗಿಸಿತ್ತು. ಆಗ ನನ್ನ ಗಂಟಲು ಒಣಗಹತ್ತಿತ್ತು. ತಲೆನೋವು ಉಲ್ಬಣಿಸಿತು, ಸಾಲದೆ ಹೊಟ್ಟೆನೋವು ಉಂಟಾಗಿ ನಾನು ತತ್ತರಿಸಿದೆ.

ಯಾವ ಬದಲಾವಣೆಯೂ ಆಗಲಿಲ್ಲ. ಎರಡು ವಾರಗಳ ನಂತರ ಒಂದು ವಾರ ಪರ್ಯಂತ ನಾನು ಮತ್ತೆ ಉಪವಾಸ ಮಾಡಿದೆ. ಮತ್ತೆರಡು ವಾರಗಳ ನಂತರ ಮತ್ತೆ ಅದೇ ಕ್ರಮದ ಪುನರಾವೃತ್ತಿ ಮಾಡಿದೆ. ನಾನು 1983 ರ ಇಡೀ ರಜಾ ಕಾಲವನ್ನು ಮೇಲಿಂದ ಮೇಲೆ ಉಪವಾಸ ಮಾಡುವುದರಲ್ಲಿಯೇ ಕಳೆದೆ. 1984 ರ ಬೇಸಗೆಯ ರಜೆಯನ್ನೂ ಸಹ ಅದೇ ರೀತಿ ಕಳೆದೆ. ಹೀಗೆ ನಾನು ಒಟ್ಟು ಆರು ವಾರ ಉಪವಾಸ ಮಾಡಿದೆ. ಆದರೆ ಯಾವುದೇ ಪರಿಣಾಮವು ಕಾಣಬರಲಿಲ್ಲ.

ಇದೆಲ್ಲವೂ ವ್ಯರ್ಥವೇನು? ಅದು ಹಾಗೆಯೇ ಎಂದು ಆ ಕಾಲಕ್ಕೆ ಅನಿಸಿತು. ಆದರೆ, ಆದುದೆಲ್ಲವೂ ಅತಿರೇಕದ ತುತ್ತ ತುದಿ ತಲುಪಲಿತ್ತು. ಮುಂಬರುವ ಯಶಸ್ಸಿಗಾಗಿ, ಮಹಾ ಸ್ಫೋಟಕ್ಕಾಗಿ, ಸ್ವಲ್ಪ ಸ್ವಲ್ಪ, ಇಟ್ಟಿಗೆಯ ಮೇಲೆ ಇಟ್ಟಿಗೆ, ಧರದ ಮೇಲೆ ಧರ ಹೀಗೆ ಪ್ರಬಲ ತಳಪಾಯ ಹಾಕಲಾಗುತ್ತಿತ್ತು.

ಈಗ ಏಕಮಾತ್ರ ಉಪಾಯ ಬಾಕಿ ಇತ್ತು. ಅದು ಬೇಸರುಗೊಳಿಸುವ ಅಂತಿಮ ಉಪಾಯವೇ ಸರಿ. ಅದೆಂದರೆ ಸ್ವಯಂ – ಪ್ರಕಾಶನ. 1985 ರ ಮೇ ತಿಂಗಳಲ್ಲಿ ಅಂದರೆ ಪ್ರಕಾಶಕರಿಗಾಗಿ ನಡೆಸಿದ ಎರಡು ವರುಷ ವರಗಿನ ನಿರರ್ಥಕ ಶೋಧದ ನಂತರ, 'ಆ ಪುಸ್ತಕ "ವೀನಸ್ ಬುಕ್ಸ್" ಎಂಬ ಹೆಸರಿನಡಿ ನಾನೇ ಪ್ರಕಟಿಸಿದೆ. ಯಾರೊಬ್ಬರೂ ಕೈಕೊಳ್ಳದ ಆ ಪುಸ್ತಕ

ಪ್ರಕಟಣೆಯನ್ನು ನಾನು ಸ್ವಯಂ ಮಾಡಿದೆನೆಂದು ಜನರು ತಿಳಿಯಬಾರದೆಂದು ಕಂಪನಿಯ ಹೆಸರಿನಲ್ಲಿ ಪುಸ್ತಕ ಪ್ರಕಟಿಸುತ್ತಿದ್ದೆ. ಕಾರಣವಿಷ್ಟೇ; ತಿಳಿಯಬಾರದೆಂದು ಹಾಗೆ ಮಾಡಿದ್ದೆ. ಸ್ವಯಂ ಪ್ರಕಾಶನವು ತುಂಬಾ ಮುಜುಗರವಾದುದು. ಇನ್ನು ಹಾಗೆ ಒಪ್ಪಿಕೊಳ್ಳುವುದೆಂದರೆ, ಗ್ರಂಥ ಕರ್ತನ ನಿವೇದನೆಯನ್ನು ಓದುಗನು ತಿರಸ್ಕರಿಸುವನೆಂದೇ ಪೂರ್ವಗ್ರಹಿಕೆ ಮಾಡಿದಂತೆ.

ನಾನು 3000 ಪ್ರತಿಗಳನ್ನು ಅಚ್ಚು ಹಾಕಿಸಿದೆ. ಅವುಗಳನ್ನು ಡಲ್ಲಾಸ್ ನಗರದ ಹೊರವಲಯದ ಒಂದು ಗುದಾಮಿನಲ್ಲಿರಿಸಿದೆ. ನಿಮ್ಮ ಸ್ವಂತ ಪುಸ್ತಕದ ಪ್ರಕಟಣೆಯೇ ಒಂದು; ಅದರ ಮಾರಾಟವು ಇನ್ನೊಂದು. ಈ ಕೆಲಸ ಬೆನ್ನುಮೂಳೆ ಮುರಿಯುವಂಥದೆಂದು ಕಂಡುಕೊಳ್ಳಲು ಹೆಚ್ಚು ಕಾಲ ಹಿಡಿಯಲಿಲ್ಲ. ನಾನು ಸುಮಾರು ಇಪ್ಪತ್ತು ಜನ ಸಗಟು ವ್ಯಾಪಾರಿಗಳಿಗೆ ನನ್ನ ಪುಸ್ತಕ ಕಳಿಸಿದೆ. ಮತ್ತು ಡಲ್ಲಾಸ್‌ನ ಮತ್ತಿತರ ಮುಖ್ಯ ಪಟ್ಟಣಗಳ ಪುಸ್ತಕ ಭಾಂಡಾರಗಳಿಗೆ ಅವುಗಳನ್ನು ವಿತರಿಸಲು ಕೇಳಿಕೊಂಡೆ. ಇದೊಂದು ಹೇಯದ ಪ್ರಕಟಣೆಯೆಂದು ಬಗೆದ ಅವರು ನನ್ನ ಕೋರಿಕೆಯನ್ನು ತಿರಸ್ಕರಿಸಿದರು. ಹೀಗಾಗಿ ನನ್ನ ಕೃತಿಯ 3000 ಪ್ರತಿಗಳು ಗಿರಾಕಿಗಳಿಲ್ಲದೆ ನನಗೆ ಹೊರೆಯಾದವು. ಕೊಳ್ಳುವವರೇ ಇರಲಿಲ್ಲ.

ವಿತರಣೆಯ ಪ್ರಕ್ರಿಯೆಯನ್ನು ನಾನೇ ಕೈಗತ್ತಿಕೊಂಡೆ. ಡಲ್ಲಾಸ್‌ನ ಒಂದು ಪುಸ್ತಕಾಲಯದಿಂದ ಇನ್ನೊಂದಕ್ಕೆ ಅಲೆದೆ. ಕೆಲವು ಪುಸ್ತಕಗಳನ್ನಾದರೂ ಕೊಳ್ಳಿರೆಂದು ಅವುಗಳ ಮಾಲೀಕರನ್ನು ಕೇಳಿಕೊಂಡೆ. ಕನಿಷ್ಠ, ಮಾರಾಟವಾದ ನಂತರ ಹಣ ಕೊಡಬಹುದೆಂದು ಹೇಳಿದೆ. ಹನ್ನೆರಡು ಪುಸ್ತಕಾಲಯಗಳು ನನ್ನ ಕೋರಿಕೆಯನ್ನು ಮನ್ನಿಸಿದವು.

ನಾನು ಸಾರ್ವಜನಿಕರಿಗೆ ಭಾಷಣ ಕುಟ್ಟಿದೆ. ಅಷ್ಟೇಕೆ? ಕ್ಲಬ್ಬಿನಲ್ಲಾಗಲಿ, ಸ್ನೇಹ ಕೂಟಗಳಲ್ಲಾಗಲಿ, ಪಾಠದ ಕೊಠಡಿಯಲ್ಲಾಗಲಿ, ಯಾರೇ ಆಗಲಿ ಕೇಳುಗರು ದೊರಕಿದರೆ ಸಾಕು, ಅವರಿಗೆ ತಿಳಿಸಿ ಹೇಳತೊಡಗಿದೆ. ನನ್ನ ಪ್ರಥಮ ಭಾಷಣಕ್ಕೆ ಕೇವಲ ಆರು ಜನ ಉಪಸ್ಥಿತರಿದ್ದರು. ಅವರು ಸಹ ನನ್ನ ಆಮಂತ್ರಣದ ಮೇರೆಗೆ ಬಂದವರು. ಅವರು ತುಂಬಾ ಸಂಶಯಗ್ರಸ್ತರು, ಅಂತೂ ಭಾಷಣದ ಕೊನೆಗೆ ಪ್ರತಿಯೊಬ್ಬರೂ ಒಂದೊಂದು ಪ್ರತಿಯನ್ನು ಖರೀದಿಸಿದರು.

ನನ್ನ ಕೋರಿಕೆಯನ್ನು ಮನ್ನಿಸಿ, ಡಲ್ಲಸ್‌ನ ಕೆ.ಆರ್.ಎಲ್.ಡಿ. ಬಾನುಲಿಯ ಮಿ.ಅಲೆಕ್ಸ್ ಬರ್ಟನ್ ಬಾನುಲಿ ಸಂದರ್ಶನಕ್ಕಾಗಿ ನನ್ನನ್ನು ಆಹ್ವಾನಿಸಿದರು. ಆ ದಿನ ನನಗೆ ನೆಗಡಿ ಜ್ವರ. ಆದರೂ ನಾನು ಅವನಿರುವ ಜಾಗೆಗೆ ಧಾವಿಸಿದೆ. ಮೂರು ದಿನ ಸತತವಾಗಿ ಬರ್ಟನ್ ನನ್ನ ಸಂದರ್ಶನವನ್ನು ಬಾನುಲಿ ಮೇಲೆ ಬಿತ್ತರಿಸಿದ. ಹೀಗಾಗಿ, ಅದೇ ವಾರ ನನ್ನ ಪುಸ್ತಕದ ಎಲ್ಲ ಪ್ರತಿಗಳು ಎಲ್ಲ ಪುಸ್ತಕ ಭಾಂಡಾರಗಳಲ್ಲಿ ಮಾರಾಟವಾದವು.

ನಾನೀಗ ಮಾರಾಟಗಾರನಾದೆ. ನಾನು ನಿಯಮಿತವಾಗಿ ಪುಸ್ತಕ ಭಾಂಡಾರಗಳಿಗೆ ಹೋಗುತ್ತಿದ್ದೆ. ಖಾಲಿಯಾದಂತೆ ಮರಳಿ ಮರಳಿ ಪೂರೈಸುತ್ತಿದ್ದೆ. ಪುಸ್ತಕಗಳು ನಿಧಾನವಾಗಿ ಮತ್ತು ಸತತವಾಗಿ ಮಾರಾಟಗೊಳ್ಳುತ್ತಿದ್ದವು. ಬಾಯಿಯಿಂದ ಬಾಯಿಗೆ ತಲುಪುತ್ತ ಪುಸ್ತಕದ ಸಂದೇಶವು ಕೆಳಗಿನಿಂದ ಮೇಲಿನ ವರೆಗೆ ಹರಡಿತು. ಪ್ರಥಮ ಮುದ್ರಣದ ಪ್ರತಿಗಳು ಮೂರು

ತಿಂಗಳಲ್ಲಿ ತೀರಿದವು. ನಾನು ಸ್ಥಳೀಯ ಹಾಗೂ ರಾಷ್ಟ್ರೀಯ ಮಟ್ಟದ ಹಲವು ಪ್ರಕಾಶಕರನ್ನು ಸಂಪರ್ಕಿಸಿದೆ. ಈ ಮುಂಚಿನಂತೆಯೇ ಅವರು ತಮ್ಮ ಅನಾಸಕ್ತಿ ತೋರಿದರು.

1985 ರ ಅಕ್ಟೋಬರದಲ್ಲಿ ದ್ವಿತೀಯ ಮುದ್ರಣವು ಹೊರಬಂದಿತು. ಆ ತಿಂಗಳು ಸ್ಕಾಟ್ ಬರ್ನ್ಸ ಎಂಬ ಅರ್ಥನೀತಿ ವಿಶ್ಲೇಷಕನು ನನ್ನ ಪುಸ್ತಕ ಕುರಿತು 'ಡಲ್ಲಾಸ ಮಾರ್ನಿಂಗ ನ್ಯೂಜ' ಪತ್ರಿಕೆಯಲ್ಲಿ ಪ್ರಶಂಸಾತ್ಮಕ ಲೇಖನ ಬರೆದನು. ಅದರಿಂದ ಈಗಾಗಲೇ ಗರಿ ಮೂಡತೊಡಗಿದ್ದ ನನ್ನ ಉದ್ದಿಮೆ ಇನ್ನಷ್ಟು ಉಬ್ಬಿತು. ಹೀಗಾಗಿ ಎರಡನೆಯ ಮುದ್ರಣದ 5000 ಪ್ರತಿಗಳು ಡಿಸೆಂಬರ ತಿಂಗಳ ಹೊತ್ತಿಗೆ ಮಾರಾಟವಾದವು. ಈಗಲೂ ಸಹ, ವಿಶ್ವಾದ್ಯಂತ ನನ್ನ ಸಂದೇಶ ಹರಡಬಲ್ಲ ಯಾವೊಬ್ಬ ಪ್ರಕಾಶಕನೂ ಮುಂದೆ ಬರಲಿಲ್ಲ.

1986 ರ ಫೆಬ್ರುವರಿಯಲ್ಲಿ ನಾನು ಮತ್ತೆ ಮೂರನೆಯ ಮುದ್ರಣವನ್ನು ಹೊರತಂದೆ. ಈ ವೇಳೆಗೆ ಡಲ್ಲಾಸನಲ್ಲಿ ಮಾರಾಟ ಸಾಧ್ಯತೆ ತೀರಿ ಹೋಗಿತ್ತು. ಬಹುಶಃ ನಾನು ದೇಶ ಸುತ್ತಿ ಭಾಂಡಾರದಿಂದ ಭಾಂಡಾರ ಅಲೆದು ನನ್ನ ಪುಸ್ತಕವನ್ನು ಹಂಚುವ ಶಕ್ತಿತೆ ಇರಲಿಲ್ಲ. ನಾನು ಇನ್ನೊಂದು ಕೊನೆ ತಲುಪಿದ್ದೆ. ಮೇಲಾಗಿ ನನ್ನ ಆರೋಗ್ಯ ಕೆಡಲಾರಂಭಿಸಿತ್ತು. ಎಷ್ಟು ದಿನ ವಾರದ ಏಳು ದಿನಗಳೂ, ಪ್ರತಿದಿನ ಹದಿನಾರು ಘಂಟೆ ಕೆಲಸ ಮಾಡಬಹುದು? ನಾನು ಹಲವಾರು ತಿಂಗಳುಗಳಲ್ಲಿಯೇ ನನ್ನ ಪುಸ್ತಕದ 8000 ಪ್ರತಿಗಳನ್ನು ಮಾರಿದ್ದೆ. ಆದರೂ ಅದಕ್ಕೆ ಪ್ರಕಾಶಕರು ಸಿಗದಾದರು.

ಮರಳಿ ನಾನು ಉಪವಾಸ ಕೈಕೊಂಡೆ. 1986 ರ ಮೇನಲ್ಲಿ ನನ್ನ ಪಾಠಗಳು ಮುಗಿದೊಡನೆಯೇ ನಾನು ಉಪವಾಸ ಸಪ್ತಾಹ ಆಚರಿಸಿದೆ. ಪೂರ್ವದ ಕ್ರಮದಲ್ಲಿಯೇ. ಅಂದರೆ ಮೂರು ದಿನ ಅನ್ನ ಪಾನೀಯಗಳೆರಡೂ ಇಲ್ಲದೆ ಮತ್ತು ಮುಂದಿನ ನಾಲ್ಕು ದಿನ ಜಲ ಮಾತ್ರ ಇದು ನನ್ನ ಏಳನೆಯ ಸುದೀರ್ಘ ಉಪವಾಸವಾಗಿತ್ತು. ಈ ಹೊತ್ತಿಗೆ ನನ್ನ ದೇಹವು ತುಂಬಾ ಬಡಕಲಾಗಿತ್ತು. ನನ್ನ ಹೋರಾಟಗಳು ತಮ್ಮ ಕೊನೆಯ ಹಂತವನ್ನು ತಲುಪಿದ್ದವು. ನಾನು ಆರನೆಯ ದಿನ ದಾಟದಾದೆ. ನಾನು ಉಬ್ಬಳಿಕೆ ರೋಗಕ್ಕೆ ತುತ್ತಾದೆ. ಸಾಕಷ್ಟು ವಾಂತಿಯಾಯಿತು. ಹೀಗಾಗಿ, ನನ್ನ ನಿರಶನ ವ್ರತವನ್ನು ಪೂರ್ಣ ಗೊಳಿಸಲಾರದೆ ಮುರಿದೆ.

ನನ್ನ ಜೀವನದ ತುಂಬಾ ಕಷ್ಟದಾಯಕ ಕಾಲಗಳಲ್ಲಿ ಅದೊಂದಾಗಿತ್ತು. ನನ್ನ ತಂದೆಯಲ್ಲಿರಿಸಿದ ಶ್ರದ್ಧೆ ಅಲುಗಾಡಿತು. ಹಸಿವು ವಿಶ್ವದ ಆ ಮೂಲೆಯಿಂದ ಈ ಮೂಲೆಯ ವರೆಗೆ ಬಹುಗುಣಿಸಬಹುದಾದ ಮುಂಬರುವ ದುರಂತದ ಭೀತಿಯನ್ನು ಕುರಿತು ಪ್ರಪಂಚಕ್ಕೆ ಎಚ್ಚರಿಕೆ ನೀಡಲು, ಮಾನವ ಸಾಧ್ಯವಾದುದನ್ನೆಲ್ಲ ಮಾಡಿದೆ. ಯಾವುದು ಎಷ್ಟಿರಬೇಕೋ ಅಷ್ಟೇ ಸರಿ. ಇನ್ನು ಹೆಚ್ಚಿನ ಆತ್ಮ ನಿರಾಕರಣೆ ಸಾಕು. ಹೆಚ್ಚಿನ ವೈಯಕ್ತಿಕ ಬಳಲುವಿಕೆ ಸಾಕು; ಎಂದು ನನ್ನ ತಳಮಳಿಸುವ ಒಳಧ್ವನಿ ಉಲಿಯಿತು: ಇನ್ನು ಆತ್ಮ ಹಿಂಸೆಯ ನೋವು ಸಾಕು.

ನನ್ನ ಪುಸ್ತಕ ಕುರಿತ ಎಲ್ಲ ಕಾರ್ಯವನ್ನೂ ನಾನು ನಿಲ್ಲಿಸಿದೆ. ನನ್ನ ಮಟ್ಟಿಗೆ, ಹೇಳುವುದಾದರೆ ತೃತೀಯ ಮುದ್ರಣದ ಪ್ರತಿಗಳು ಕೊಳೆತು ಹೋದರೂ ಸರಿಯೇ ಎನಿಸಿತು.

ಈಗ ನಾನು ಅಹೋರಾತ್ರಿ, ಸುದೀರ್ಘ ಸಮಯ ಆನಂದಮಯ ಧ್ಯಾನಮಗ್ನನಾಗುತ್ತಿದ್ದೆ. ನಾನು ನನ್ನ ತಂದೆಯನ್ನು ಮರೆಯಲಾರದಾದೆ.

ನನಗರಿಯದಂತೆ ಏನೋ ಮಹಾಸಂಗತಿ ಘಟಿಸಲಿತ್ತು. ನನ್ನ ಏಳನೆಯ ಉಪವಾಸ ಸಪ್ತಾಹವು ಅಪೂರ್ಣವಾದರೂ ಸಹ ನಿರಂತರವಾಗಿ ನನ್ನ ಬೆನ್ನು ಹತ್ತಿದ್ದ ಅಡ್ಡಿ ಆತಂಕಗಳ ಬೆನ್ನುಮೂಳೆಯನ್ನೇ ವಾಸ್ತವವಾಗಿ ಮುರಿಯಿತು. 1986 ರ ಜೂನ ಮಾಸಾಂತ್ಯಕ್ಕೆ ನ್ಯೂಯಾರ್ಕಿನ ವೆಂಡಿ ಬಿಗ್ಸ ಅವರಿಂದ ನನಗೆ ದೂರವಾಣಿ ಕರೆ ಬಂತು. ಅವಳು ನನ್ನ ಪುಸ್ತಕ ಕುರಿತು ಸುದೀರ್ಘ ಪರಾಮರ್ಶ ಬರೆಯುವ ಸಿದ್ಧತೆಯಲ್ಲಿದ್ದಳು. ಅದರ ಪ್ರತಿಯನ್ನವಳು ಡಲ್ಲಾಸ್‌ನ ತನ್ನ ಗೆಳತಿಯಿಂದ ಪಡೆದಿದ್ದಳಂತೆ. ಅವಳು ದೂರವಾಣಿ ಮೂಲಕವೇ ನನ್ನ ಸಂದರ್ಶನ ಪಡೆದಳು. ಇನ್ನಷ್ಟು ಭವಿಷ್ಯವಾಣಿ ನುಡಿಯಲು ಕೋರಿದಳು. ನಾನೂ ಅವಳ ಕೋರಿಕೆಯನ್ನು ಪೂರೈಸಿದೆ. ಅವಳ ತಂದೆ ಬಾರ್ಟನ್ ಬಿಗ್ಸ ಮಾರ್ಗನ್ ಸ್ಟ್ಯಾನ್ಲೇ ಆ್ಯಂಡ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕನೆಂಬ ಬಗ್ಗೆ ನನಗೇನೂ ತಿಳಿದಿರಲಿಲ್ಲ. ಈ ಕಂಪನಿಯು ಜಗತ್ತಿನ ಸುಪ್ರಸಿದ್ಧ, ಆರ್ಥಿಕ ಜಗತ್ತಿನ ಪ್ರಭಾವಿಪೂರ್ಣ ಕಂಪನಿಗಳಲ್ಲಿ ಒಂದಾಗಿತ್ತು. ವೆಂಡಿ ಮತ್ತು ಬಾರ್ಟನ್ ಇಬ್ಬರೂ ಗ್ರಂಥ ವಿಮರ್ಶೆ ಮಾಡಿದರು. ನನ್ನ ವಿದ್ವತ್ತೆಯನ್ನು ಹಾಗೂ ಭವಿಷ್ಯ ನುಡಿಯುವ ಸಾಮರ್ಥ್ಯವನ್ನು ತುಂಬಾ ಪ್ರಶಂಸಿದರು.

ಈಗ ನನ್ನ ದೂರವಾಣಿ ಕರಗಳಿಗೆ ಬಿಡುವೇ ಉಳಿಯದಂತಾಯಿತು. ಪ್ರಪಂಚಾದ್ಯಂತದಿಂದ ಕರೆಗಳು ಬರತೊಡಗಿದವು. ಸ್ಟಾಕ್ ಪೇಟೆಯಲ್ಲಿ ಹಣ ತೊಡಗಿಸುವ ಹಲವರು ಉದ್ರಿಕ್ತರಾಗಿ ಪುಸ್ತಕ ಭಾಂಡಾರಗಳಲ್ಲಿ ನನ್ನ ಪುಸ್ತಕ ಖರೀದಿಸಲು ತಡಕಾಡಿದರು. ಆದರೆ ಇಲ್ಲಿ ಅವು ಲಭ್ಯವಿಲ್ಲದಿರುವುದನ್ನು ಕಂಡು ಆಚ್ಚರಿಪಟ್ಟರು. ದೂರವಾಣಿಯಲ್ಲಿ ಒಬ್ಬ ಹೇಳಿದ. "ನಿಮ್ಮ ಪುಸ್ತಕವು ನ್ಯೂಯಾರ್ಕ ಸ್ಟಾಕ್ ವಿನಿಮಯವನ್ನೇ ಅಲುಗಾಡಿಸಿದೆ. ಇತ್ತ ನೀವು ಅದರ ಪ್ರತಿಗಳು ಪುಸ್ತಕ ಭಾಂಡಾರದಲ್ಲಿ ಇಲ್ಲವೆನ್ನುತ್ತೀರಲ್ಲ ? ರಾತ್ರೋ ರಾತ್ರಿ ಟಪ್ಪಾಲಿನಿಂದ ಒಂದು ಪ್ರತಿ ಕಳಿಸಿಕೊಡುವಂತೆ ಅವನು ಕೇಳಿದ. ಇದೆಂಥ ವಿಪರ್ಯಾಸ ಎನಿಸಿತು ನನಗೆ. ಇಲ್ಲಿ ನನಗಿನ್ನು ಯಾವುದೇ ಪ್ರಕಾಶಕನು ದೊರಕುತ್ತಿಲ್ಲ. ಅಲ್ಲಿ ಅನೇಕಾನೇಕ ಜನರು ನನ್ನ ಪುಸ್ತಕಕ್ಕಾಗಿ ಹಂಬಲಿಸುತ್ತಿದ್ದಾರೆ. ಮತ್ತು ಒಂದು ಪ್ರತಿ ಪಡೆದುಕೊಳ್ಳಲು ಏನು ಮಾಡಲೂ ಸಿದ್ಧರಾಗಿದ್ದಾರೆ.

ಮಾರ್ಗನ್ ಸ್ಟ್ಯಾನ್ಲೇ ವಿಮರ್ಶೆ ಪ್ರಕಟಗೊಂಡ ಎರಡು ವಾರಗಳಲ್ಲಿ 'ದಿ ನ್ಯೂಯಾರ್ಕ ಟೈಮ್ಸ್' ತುಂಬಾ ಅನುಕೂಲಕರ ಅಭಿಪ್ರಾಯ ಪ್ರಕಟಿಸಿತು. ನಾನು ನೂರಾರು ಪ್ರತಿಗಳನ್ನು ಟಪಾಲು ಮೂಲಕವೇ ಒಬ್ಬರಿಗೆ ಒಂದೊಂದು ಪ್ರತಿ ಮಾತ್ರ ಕಳಿಸಲಾರಂಭಿಸಿದೆ. ನನ್ನ ಕೃತಿಯ ಹಿಮರಾಶಿ ಉರುಳತೊಡಗಿತು. ಈಗ ಘಟನೆಗಳ ಗತಿ ತೀವ್ರವಾಯಿತು. ನ್ಯೂಯಾರ್ಕಿನ ಐವರು ಪ್ರಕಾಶಕರು ನನ್ನ ಪುಸ್ತಕ ಪ್ರಕಟಣೆಗೆ ದುಂಬಾಲು ಬಿದ್ದರು. 1986 ರ ಆಗಸ್ಟ 9 ಕ್ಕೆ ನಾನು ಸೈಮನ್ ಆ್ಯಂಡ ಶೂಸ್ಟರ ಕಂಪನಿಯ ಬೇಡಿಕೆಯನ್ನು ಒಪ್ಪಿದೆ. 'ಸಾರ್ವಜನಿಕರಿಗೆ ಸಲಹೆ'ಯ ಅಧ್ಯಾಯವನ್ನು ವಿಸ್ತರಿಸಲು ಪ್ರಕಾಶಕರು ನನ್ನನ್ನು ಕೇಳಿದರು. ಈ ರೀತಿ ವಿಸ್ತೃತ ಸಂಪುಟವು 1987 ರ ಜೂನ್ ತಿಂಗಳಲ್ಲಿ ಪ್ರಕಾಶಿತವಾಯಿತು.

ನನ್ನ ಗ್ರಂಥವು ಈಗಾಗಲೇ ಹಲವು ವರ್ಶುಲಗಳಲ್ಲಿ ಚೋದನೆಯನ್ನುಂಟು ಮಾಡಿತ್ತು. ಈಗಂತೂ ಅದು ದೇಶಾದ್ಯಂತ ಪುಸ್ತಕ ಭಾಂಡಾರಗಳಲ್ಲಿ ದೊರೆಯುತ್ತಿತ್ತು. ಪುನರ್ಮುದ್ರಣಗೊಂಡ ಪ್ರಥಮ ವಾರವೇ ಅದು ಡಲ್ಲಾಸ್ ನಗರದಲ್ಲಿ ಗರಿಷ್ಠ ಮಾರಾಟದ ಯಾದಿ ಸೇರಿತು. ಎರಡನೇ ವಾರ ಮುಗಿಯುವುದರಲ್ಲಿಯೇ, ಅದು ರಾಷ್ಟ್ರ ಮಟ್ಟದಲ್ಲಿ ಗರಿಷ್ಠ ಮಾರಾಟದ ಗ್ರಂಥವೆನಿಸಿ ನ್ಯೂಯಾರ್ಕ ಟೈಮ್ಸ ಯಾದಿಯಲ್ಲಿ ಹದಿಮೂರನೇ ಸ್ಥಾನ ಪಡೆಯಿತು. ಇನ್ನೆರಡು ವಾರ ಕಳೆಯುವುದರೊಳಗೆ ಅದು ಮೂರನೆಯ ಸ್ಥಾನಕ್ಕೇರಿತು. ನನ್ನ ಹೊರತು, ಇತರರೆಲ್ಲರಿಗೂ ಶಾಕ್ ಆಯಿತು. ಪುಸ್ತಕದ ಮಾರಾಟ ಚೆನ್ನಾಗಿ ಆಗಬಹುದೆಂದು ಸೈಮನ್ ಆ್ಯಂಡ ಶುಸ್ಟರ ಅವರು ನಿರೀಕ್ಷಿಸಿದ್ದರು. ಆದರೆ ಇಷ್ಟೊಂದು ಚೆನ್ನಾಗಿ ಎಂದಲ್ಲ; ಮತ್ತು ಇಷ್ಟು ಶೀಘ್ರಗತಿಯಲ್ಲಿ ಎಂದೂ ಅಲ್ಲ. ಅರ್ಥಶಾಸ್ತ್ರದ ಎರಡು ನೂರು ವರ್ಷಗಳ ಇತಿಹಾಸದಲ್ಲಿ ಗರಿಷ್ಠ ಮಾರಾಟ ಗ್ರಂಥಗಳ ಮೇಲಿನ ಹತ್ತು ಸ್ಥಾನಗಳಲ್ಲಿ, ಯಾವುದೇ ಅರ್ಥನೀತಿಯ ಪುಸ್ತಕವು ಅಮೇರಿಕೆಯಲ್ಲಾಗಲಿ, ಜಗತ್ತಿನ ಬೇರೆಡೆಯಲ್ಲಾಗಲಿ, ಏರಿ ನಿಂತಿಲ್ಲ. ನನ್ನ ಪುಸ್ತಕದ ವಿಮರ್ಶೆಗಳ ಸಂಖ್ಯೆ ಏರುತ್ತಾ ಸಾಗಿತು.

ನನ್ನ ಪುಸ್ತಕವನ್ನು ಓದಿದವರೆಲ್ಲರೂ ಅದನ್ನು ಪ್ರಶಂಶಿಸಿದರು. ನನ್ನ ಸಹೋದ್ಯೋಗಿ ಅರ್ಥಶಾಸ್ತ್ರಜ್ಞರು ಮತ್ತು ಸಿರಿವಂತ ಪೋಷಕರು ಮಾತ್ರ ಇದಕ್ಕೆ ಅಪವಾದವಾದರು. ಸಂಪತ್ತಿನ ಕೇಂದ್ರೀಕರಣವು ಆರ್ಥಿಕ ಕುಸಿತ ಹಾಗೂ ಬಡತನಗಳ ಏಕೈಕ ಕಾರಣವಲ್ಲವಾದರೂ ಮುಖ್ಯ ಕಾರಣವಾಗಿದೆಯೆಂಬ ವಾದದಿಂದ ಅವರು ಭಯಗ್ರಸ್ತರಾಗಿದ್ದರು. ನನ್ನ ಪುಸ್ತಕವು ಅರ್ಥಶಾಸ್ತ್ರ ವೃತ್ತಿಯವರ ಮೂಲವನ್ನೇ ಅಲುಗಾಡಿಸುವ ಅಲೆಗಳನ್ನು ಎಬ್ಬಿಸಿತು. ಏಕೆಂದರೆ ಇವರು ಕಳೆದ ಎರಡು ಶತಮಾನಗಳಿಂದ ಬಂಡವಾಳವಾದ ವ್ಯವಸ್ಥೆಯಲ್ಲಿ ಆರ್ಥಿಕ ಕುಸಿತವು ಅಸಾಧ್ಯ ಎಂದು ವಾದಿಸುತ್ತ ಬಂದಿದ್ದರು. 1920 ರ ದಶಕದ ವರೆಗೆ ಪ್ರಚಲಿತವಿದ್ದ ವಾದವೆಂದರೆ, ಅರ್ಥವ್ಯವಸ್ಥೆಯಲ್ಲಿ ಸರಕಾರವು ಕೈ ಹಾಕದಿದ್ದರೆ, ಆರ್ಥಿಕ ಕುಸಿತ ಘಟಿಸದು ಎಂಬುದಾಗಿತ್ತು. ಆದರೆ 1930 ರ ದಶಕದಿಂದ ಪ್ರಚಲಿತಗೊಂಡ ಸರ್ವಸಮ್ಮತ ವಾದವೆಂದರೆ, ಸರಕಾರವು ಆರ್ಥಿಕ ಕುಸಿತವನ್ನು ತಪ್ಪಿಸಬಲ್ಲದು ಮತ್ತು ತಪ್ಪಿಸುತ್ತದೆ ಎಂಬುದು.

ಅರ್ಥಶಾಸ್ತ್ರಜ್ಞ ಸಮೂಹವು ನನ್ನ ಸಂದೇಶವನ್ನು ಅನೇಕ ವರ್ಷಗಳ ವರೆಗೆ ದಬ್ಬಲು ಯತ್ನಿಸಿತು. ಈಗ ನನ್ನ ಮಾತು ಹೊರಬಿದ್ದು ಹರಡಿತು. ಆದ್ದರಿಂದ ನನ್ನ ಸಮಾನಸ್ಕಂದರು ಅಸಾಮಾನ್ಯ ಜೋರಿನಿಂದ ಹೀಗಳೆಯತೊಡಗಿದರು. ಹಲವರು ನನ್ನ ಪುಸ್ತಕವನ್ನು ಡೊಂಬರಾಟವೆಂದು ಜರೆದರು. ಹಲವರು ಆಷಾಢಭೂತಿಯ ವಿಚಾರಗಳ ಕಲಸು ಮೇಲೋಗರ ಎಂದು ಹೀಗಳೆದರು. ಇನ್ನು ಹಲವರು ಇದೊಂದು ಕೇವಲ ಕಲ್ಪನೆ ಎಂದರು. ಎಮ್.ಐ.ಟಿ. ವಿಶ್ವವಿದ್ಯಾಲಯದ, ವಿಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ಲಿಸ್ಟರ ಥರೋ ಅವರು ಸಹ ಮೊದಲು ಸೌಥ ಮಥೋಡಿಸ್ಟ ವಿಶ್ವವಿದ್ಯಾಲಯದ ನನ್ನ ಗ್ರಂಥಕ್ಕೆ ಮುನ್ನುಡಿ ಬರೆದು ಹೆಣಗಾಡುವ ಲೇಖಕನಿಗೆ ಪ್ರೋತ್ಸಾಹಿಸಿದ್ದರು ಅವರೂ ಸಹ ಕೊನೆಗೆ ಅದನ್ನು ಹೀಗಳೆದು ಸುದ್ದಿ ಪತ್ರಿಕೆಗಳಿಗೆ ಬರೆದು ತಿಳಿಸಿದರು. ನನ್ನ ಕೃತಿಯ ಯಶಸ್ಸಿನಿಂದ ತಮಗೆ ಶಾಕ್ ಆಗಿದೆಯೆಂದು ಅವರು ಒಪ್ಪಿದರು. ಕೇವಲ ಕೆಲವೇ ಜನರು ಅದನ್ನು ಓದಬಹುದೆಂದು ನಾನು

ಅದಕ್ಕೆ ಮುನ್ನುಡಿ ಬರೆದೆ ಎಂದವರು ಬರೆದಿದ್ದಾರೆ. ನನ್ನ ಭವಿಷ್ಯವಾಣಿಗಳು ಚಾಚೂ ತಪ್ಪದಂತೆ ನಿಜವಾದ ಪ್ರಸಂಗವು ಎದುರಾದಾಗ, ನಾನೊಬ್ಬ 'ಭಾಗ್ಯಶಾಲಿ' ಮತ್ತಿತರ ಅರ್ಥಶಾಸ್ತ್ರಜ್ಞರು ಭಾಗ್ಯಹೀನರಷ್ಟೇ ಎಂದವರು ಸಾರಿದರು.

ಹಲವಾರು ಕಡೆಗಳಿಂದ ತೆಗಳಿಕೆ ಬಂತು. ಅವರಲ್ಲಿ ಸ್ವಯಂಕೃತ ಪಂಡಿತರು ಸರಕಾರಿ ಸಲಹೆಗಾರರು, ನೋಬೆಲ್ ಸನ್ಮಾನಿತರು, ಬಲಪಕ್ಷೀಯ ನಿಯತಕಾಲಿಕೆಗಳು ಮತ್ತು ಸುದ್ದಿ ಪತ್ರಗಳು, ಕೋಟ್ಯಾಧೀಶರು, ಮತ್ತು ಬಿಲಿಯಾಧೀಶರು ಮತ್ತು ರಾಜಕಾರಣಿಗಳು ಸೇರಿದ್ದರು. ಆದರೇನು? ಪುಸ್ತಕವು ಗರಿಷ್ಠ ಮಾರಾಟ ಸ್ಥಾನದಿಂದ ಸರಿಯಲಿಲ್ಲ. ಅದು ವಾರಗಟ್ಟಲೆ ಅಲ್ಲಿಯೇ ನಿಂತಿತು. ಟೀಕೆಯು ಬರುಬರುತ್ತ ಕೀಳು ಮಟ್ಟಕ್ಕಿಳಿದುದೇನೂ ಆಶ್ಚರ್ಯಿಯ ಸಂಗತಿಯಲ್ಲ. ನನ್ನ ವಾದದ ತರ್ಕಬದ್ಧತೆಯನ್ನು ಹೀಗಳೆಯುವ ಬದಲು ಟೀಕಾಕಾರರು ನನ್ನತ್ತ ವೈಯಕ್ತಿಕವಾಗಿ ಹಾಗೂ ಶ್ರೀ ಪಿ. ಆರ್. ಸರಕಾರ ಅವರತ್ತ ಸಹ ಚಿಲ್ಲರೆ ಮಾತಿಗಿಳಿದರು. ಕೇವಲ ಅಂಧಶ್ರದ್ಧೆ ಹಾಗೂ ಜಾತಿ ಪದ್ಧತಿಯ ಮೇಲೆ ನನ್ನ ಇಡೀ ವಾದವು ಆಧಾರಿತವಾಗಿದೆಯೆಂದು ಅವರ ವಾದ. ಏನೇ ಇರಲಿ; ಭಾರತೀಯ ಯೋಗಿಗಳಿಗೇನು ಗೊತ್ತು ಅರ್ಥಶಾಸ್ತ್ರ? ಎಂದವರು ಮೂಗು ಮುರಿದರು.

ನನ್ನತ್ತ ಟೀಕಾಕಾರರು ತೂರಿದ ರಾಡಿಯು ಮತ್ಸರ, ಜನಾಂಗದ್ವೇಷ ಹಾಗೂ ಮತಾಂಧತೆಯಿಂದ ಕೂಡಿತ್ತು. ಸತ್ಯವು ಕಟುವಾಗಿರಲೇಬೇಕು ಎಂದರಿತ ನಾನು ಶಾಂತನಾಗಿ ಅಕ್ಷೋಭನಾಗಿ ಇದ್ದೆ. ಆದರೆ 1987 ಅಕ್ಟೋಬರ 19 ರ ವರೆಗೆ ಹೀಗಳೆತಗಳ ಧ್ವನಿ ಹೆಚ್ಚು ಜೋರಾಗಿತ್ತು.

1987 ರ ಕೊನೆಗೆ ಸ್ಟಾಕ್ ಪೇಟೆಗೆ ತಿದ್ದುಪಡಿಯ ಸಂಭವವಿರುವ ಕುರಿತು ನಾನು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದೆ. ಅಬ್ಬಾ ನೋಡಿರಿ! ಅದೇ ವರುಷ ಅಕ್ಟೋಬರ 19 ರಂದು ನ್ಯೂಯಾರ್ಕ ಸ್ಟಾಕ್ ಏಸಿಮಯ ಕೇಂದ್ರವು ಇತಿಹಾಸದಲ್ಲಿಯೇ ಅತಿ ದೊಡ್ಡ ಇಳಿತಾಯದಿಂದ ದಿವಾಳಿ ಎದ್ದು ಕುಸಿಯಿತು. ಒಮ್ಮಿಂದೊಮ್ಮೆಲೇ, ಟೀಕೆಯ ಚೇರಾಟದ ಸದ್ದಡಗಿತು. ಊಹೆಗೆ ನಿಲುಕದ್ದು ಆಗಿ ಹೋಗಿತ್ತು. ಈಗ ಕುಸಿತದ ದೃಶ್ಯವು ದೂರದ ಮಾತಾಗಿ ಉಳಿಯಲಿಲ್ಲ. ಆಹುದು; ಅದು ಇನ್ನೊಮ್ಮೆ ಘಟಿಸಬಹುದಾಗಿತ್ತು.

ಅಕ್ಟೋಬರ 19 ರ ಸ್ಟಾಕ್ ಪೇಟೆಯ ವಧೆಯು ಕರಾಳ ಸೋಮವಾರ ಅಥವಾ ಅಕ್ಟೋಬರ ಕಗ್ಗೊಲೆ ಎಂದೇ ಹೆಸರಾಗಿದೆ. ತಮ್ಮ ಆಕಾರಕ್ಕೆ ತಕ್ಕಂತೆ ಅರ್ಥಶಾಸ್ತ್ರಜ್ಞರು ಧ್ವನಿ ಬದಲಿಸಿದರು. ಅವರು ಆರು ತಿಂಗಳಿಗೊಮ್ಮೆ ತಮ್ಮ ಭವಿಷ್ಯವಾಣಿಗಳನ್ನು ಬದಲಿಸುವ ರೂಢಿ ಬೆಳೆಸಿಕೊಂಡಿದ್ದರು. ಈಗ ಮತ್ತೆ ಅಂಥ ಬದಲಾವಣೆಗೆ ತಕ್ಕ ಕಾಲ ಒದಗಿತ್ತು. ಆರ್ಥಿಕ ಕುಸಿತ, ಇಲ್ಲವೆ ಕನಿಷ್ಠ ಆರ್ಥಿಕ ಹಿನ್ನಡೆಯು 1988 ರೊಳಗಾಗಿ ನಿಶ್ಚಯವಾಗಿ ಸನ್ನಿಹಿತವಾಗಿದೆಯೆಂದು ಕೆಲವರು ನುಡಿದರು. ಮತ್ತು ಎರಡು ವರ್ಷಗಳನ್ನು ಬಿಟ್ಟು ನಾನು ಲೆಕ್ಕ ಹಾಕಿದ್ದೇನೆಂದು ನನ್ನನ್ನು ಟೀಕಿಸಿದರು. ನಾನು ನನ್ನ ಪುಸ್ತಕದಲ್ಲಿ ಆರ್ಥಿಕ ಕುಸಿತವನ್ನು ನಿರೀಕ್ಷಿಸಿದ್ದೆ. ಅದೇ ಮೇರೆಗೆ ಆರ್ಥಿಕ ಕುಸಿತವು 1990 ರಿಂದ ಆರಂಭಿಸುವುದೆಂಬ ನಿಲುಮೆಗೇ ನಾನು ಅಂಟಿಕೊಂಡೆ.

ಆದರೆ ಸಮಾನಸ್ಕಂದರಿಂದಾದ ಪುಸ್ತಕದ ಹೀಗಳಿಕೆಯಿಂದ ಸಾರ್ವಜನಿಕರು ಸಂಶಯಗ್ರಸ್ತರಾಗಿದ್ದರು. ಕರಾಳ ಸೋಮವಾರದ ನಂತರ ಆ ಸಂಶಯವು ಬಹುತೇಕ ಕಡಿಮೆಯಾಗಿತ್ತು. ಜನರು ನನ್ನ ಪುಸ್ತಕವನ್ನು ಹೆಚ್ಚು ಹೆಚ್ಚಾಗಿ ಖರೀದಿಸಿದರು. ಅಂತೂ ಈ ಪುಸ್ತಕವು ಗರಿಷ್ಠ ಮಾರಾಟ ಯಾದಿಯಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಉಳಿದಿತ್ತು.

1988 ರ ಫೆಬ್ರುವರಿಯಲ್ಲಿ ನಾನು ಕೆನಡಾ, ಜಪಾನ, ನ್ಯೂಝಿಲಂಡ, ಆಸ್ಟ್ರೇಲಿಯಾ ಹಾಗೂ ಕೊನೆಯಲ್ಲಿ ನನ್ನ ಜನ್ಮಸ್ಥಾನವಾದ ಭಾರತ ಹೀಗೆ ಐದು ದೇಶಗಳ ಪರ್ಯಟನ ಕೈಕೊಂಡೆ. ನಾನು ಹೋದೆಡೆಯಲ್ಲೆಲ್ಲ ಸಾರ್ವಜನಿಕರು ಹಾಗೂ ಪ್ರಸಾರ ಮಾಧ್ಯಮದವರು ನನ್ನನ್ನು ಮುತ್ತುತ್ತಿದ್ದರು. ಹಲವರು ನನ್ನನ್ನು ಪ್ರವಾದಿ ಎಂದರು. ಅಮೇರಿಕೆಯಲ್ಲಿ ಕೆಲವರು ನನ್ನನ್ನು ಮಿ. ಡೂಮ (ನಾಶ) ಎಂದು ಕರೆದರು. ಭಾರತ ದೇಶದಲ್ಲಿ ಜನರು ನನ್ನನ್ನು ಡಾ. ಹೋಪ್ (ಆಶಾ) ಎಂದು ಕರೆದರು. ಆದರೆ ನಾನು ಹಿಂದಿನ ರವಿ ಬತ್ರಾ ಆಗಿರುವೆ; ನಾನು ನನ್ನ ತಂದೆಗೆ ಸಲ್ಲಿಸುವ ಪ್ರಾರ್ಥನೆ ಒಂದೇ : "ತಂದೆಯೇ! ನನ್ನನ್ನು ಏನೂ ಆಲ್ಲದವನಾಗಿಸು . ಅರ್ಥಾತ್ ಈಗಲೂ ನಾನು ಅದೇ ರೀತಿ ಇರುವೆ. ನಾನು ಏನೂ ಅಲ್ಲ; ಆದರೆ ನನ್ನ ತಂದೆಯೇ ಸರ್ವವೂ ಆಗಿದ್ದಾನೆ."

ನನ್ನ ಪ್ರಿಯ ಸಹೋದರ – ಸಹೋದರಿಯರೇ, ಇದುವೇ ನನ್ನ ಕಥೆಯ ಸಂಕ್ಷೇಪ ರೂಪ. ಅಧ್ಯಾತ್ಮದಲ್ಲಿ ಎಂಥ ಶಕ್ತಿ ಇದೆಯೆಂಬುದು ಇದರಿಂದ ನಿಮಗೆ ಮನದಟ್ಟಾಗಿರ ಬಹುದು. ಅಮೇರಿಕಾ ಸಂಯುಕ್ತ ಸಂಸ್ಥಾನದ ಅರ್ಥಶಾಸ್ತ್ರದ ಸಕಲ ಸಿಬ್ಬಂದಿಯನ್ನೆದುರಿಸಿ, ನೋಬೆಲ್ ಸನ್ಮಾನಿತರು, ಉಚ್ಚಾಧಿಕಾರಸಂಪನ್ನರಾದ ಸರಕಾರಿ ಸಲಹೆಗಾರರ, ಇನ್ನಿತರ ಅಸಂಖ್ಯಾತರ ಹೀಗಳೆತವನ್ನೆದುರಿಸಿಯೂ ಸಹ ನನ್ನ ಸಂದೇಶವು ಪ್ರಪಂಚಾದ್ಯಂತ ವಿಸ್ಫೋಟಿಸಿದೆ. ಪಾಶ್ಚಿಮಾತ್ಯರು ಮತ್ತು ಹಲವು ಭಾರತೀಯರೂ ಸಹ ಈ ಶತಮಾನದಲ್ಲಿ ಯಾವ ದೇಶವನ್ನು ಅಂಧಶ್ರದ್ಧೆಯ, ಹಾವಾಡಿಗರ, ನಿರಕ್ಷರ ಕುಕ್ಷಿಗಳ, ಮತಾಂಧರ ಇತ್ಯಾದಿಗಳ ನಾಡೆಂದು ಕಡೆಗಣಿಸಿದ್ದರೋ ಆ ನಾಡಿನ ಮೂಲನಿವಾಸಿಯಿಂದ ಇದೆಲ್ಲವೂ ನಡೆಯಿತು.

ಕಡಿಮೆ ಅಭಿವೃದ್ಧ ದೇಶಗಳೂ ಸೇರಿದಂತೆ ಇತರ ಬಹುತೇಕ ರಾಷ್ಟ್ರಗಳಿಗೆ ಹೋಲಿಸಿದರೆ, ಭಾರತ ಅತಿಶಯ ಬಡದೇಶವಾಗಿದೆ. ಆಹ್ವಾನವು ವಿಸ್ತೃತವಾಗಿದೆ; ಆದರೆ ಅಪರಿಹಾರ್ಯವೇನಲ್ಲ. 'ಅಸಾಧ್ಯ' ಶಬ್ದವು ಮೂರ್ಖರ ಶಬ್ದಕೋಶದಲ್ಲಿ ಮಾತ್ರ ಇರುವ ಶಬ್ದವೆಂದು ನೆಪೋಲಿಯನ್ ಹೇಳುತ್ತಿದ್ದನಂತೆ. ವಿಷಣ್ಣತೆಯನ್ನು ಎದುರಿಸಲು ಇದೊಂದೇ ಸರಿಯಾದ ಸ್ಫೂರ್ತಿ.

ಸ್ವಾತಂತ್ರ್ಯಾನಂತರ ಬಡವರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾಗಿರುವುದನ್ನು ಅನೇಕ ಭಾರತೀಯ ಅರ್ಥಶಾಸ್ತ್ರಜ್ಞರು ತೋರಿಸಿದ್ದಾರೆ. 1960 ಮತ್ತು 1970 ರ ಅವಧಿಯೊಂದರಲ್ಲಿಯೇ ನಿರ್ಗತಿಕ ಗ್ರಾಮಾಂತರ ಮನೆತನಗಳ ಸಂಖ್ಯೆಯು 64 ಲಕ್ಷದಿಂದ 271 ಲಕ್ಷಕ್ಕೇರಿದೆ ಅರ್ಥಾತ್ ಕೇವಲ ಒಂದೇ ದಶಕದಲ್ಲಿ ಪ್ರತಿಶತ 32 ರಷ್ಟು ಹೆಚ್ಚಾಗಿದೆ. ಅದೇ ರೀತಿ, ಬಡವ

ರೈತರ ಸಂಖ್ಯೆಯು 22 ಲಕ್ಷದಿಂದ 103 ಲಕ್ಷಕ್ಕೇರಿದೆ. ಇನ್ನು ಯಾವ ಆಸ್ತಿಯನ್ನೂ ಹೊಂದದ ಗ್ರಾಮಾಂತರದ ಮನೆತನಗಳ ಸಂಖ್ಯೆಯು 7,50,000 ರಿಂದ 21 ಲಕ್ಷಕ್ಕೆ ಅರ್ಥಾತ್ ಕಣ್ಣು ಕುಕ್ಕಿಸುವ ಪ್ರತಿಶತ 280 ರಷ್ಟು ಏರಿದೆ.

ಹೀಗಾಗಿ, ಭಾರತದ ಸಮಸ್ಯೆಯು ಬೃಹತ್ತಾಗಿದೆ. ಆದರೆ, ಭಾರತವು ಅಪಾರ ಆಧ್ಯಾತ್ಮಿಕ ಸಂಪತ್ತನ್ನೂ ಹೊಂದಿದೆ. ಇದುವೇ ಭಾರತದ ಬಡತನದ ರೋಗವನ್ನು ಗುಣಪಡಿಸಬಲ್ಲದು. ಮುಂದಿನ ಪುಟಗಳಲ್ಲಿ ಈ ರೋಗಗಳು ಯಾವವು ? ಮತ್ತು ಅವುಗಳನ್ನು ಶೀಘ್ರದಲ್ಲಿ ಗುಣಪಡಿಸುವುದು ಹೇಗೆ ? ಎಂಬುದನ್ನು ತೋರಿಸುತ್ತೇನೆ. ಏತನ್ಮಧ್ಯೆ, ಭಾರತವು ಪ್ರಪಂಚಕ್ಕೆ ನೀಡಿದ ಆಧ್ಯಾತ್ಮಿಕ ವರದಾನವಾಗಿ ನಾನಿರುವೆ ಎಂಬ ಬಗ್ಗೆ ನೀವು ಹೆಮ್ಮೆ ಪಡಬಹುದು.

ಅಧ್ಯಾಯ – 3

ಪ್ರಉತದ ಮೂಲಭೂತ ತತ್ತ್ವಗಳು

ಪ್ರಭಾತ ರಂಜನ ಸರಕಾರ ಊರ್ಫ ಬಾಬಾ ಅವರು ಕೇವಲ ಮಹಾಯೋಗಿ ಅಷ್ಟೇ ಅಲ್ಲ; ಅವರು ಮಹಾತತ್ತ್ವಜ್ಞಾನಿ, ಇತಿಹಾಸಕಾರ ಹಾಗೂ ಅರ್ಥಶಾಸ್ತ್ರಜ್ಞರೂ ಆಹುದು. ಅವರು ಏನನ್ನೇ ಬರೆಯಲಿ; ಅದು ಹೊಸತಾಗಿರುತ್ತದೆ. ಮೌಲಿಕವಾಗಿರುತ್ತದೆ. ಮಾನವತೆಗೆ ಆನಂದ ನೀಡುವ ಮತ್ತು ಜಾಗತಿಕ ಸಮಾಜಕ್ಕೆ ಕ್ರಮಬದ್ಧತೆ ಒದಗಿಸುವ ಹಂಬಿಕೆ ಅದರಲ್ಲಿ ಇರುತ್ತದೆ. ಈ ಸಮಾಜವಾದರೋ, ಆಸೆ, ಅಪರಾಧ ಮತ್ತು ಭಯೋತ್ಪಾದಕತೆಗಳಿಂದ ಹೆಚ್ಚು ಹೆಚ್ಚಾಗಿ ಬಾಧಿತವಾಗುತ್ತದೆ. ಅವರ ಬಹುಮುಖೀ ಬರೆಹಗಳನ್ನು ಕಾಳಜಿಪೂರ್ವಕ ಮೂಲ್ಯಾಂಕರನ ಮಾಡಿಯೇ ನಾನೀ ಮಾತನ್ನು ಹೇಳುತ್ತಿದ್ದೇನೆ. ತೆರೆದ ಮನಸ್ಸಿನಿಂದ ನೀವು ಅವುಗಳನ್ನು ಓದಿದರೆ, ಮೌಲ್ಯವಾನ ವಿಚಾರಗಳ ವಜ್ರದ ಗಣಿಯನ್ನೇ ನೀವು ಕಂಡುಕೊಳ್ಳುವಿರಿ.

ಸರಕಾರರು ತಮ್ಮ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ತತ್ತ್ವಕ್ಕೆ ಪ್ರಉತ ಎಂದರು. ಪ್ರಥಮಾಕ್ಷರಗಳು ಸೇರಿ ಆದ ಪದ ಅದು; ಸರಕಾರರೇ ಹೆಸರಿಸಿದ **"ಪ್ರಗತಿಶೀಲ ಉಪಯೋಗ ತತ್ತ್ವ"** ಎನ್ನುವುದರಿಂದ ಬಂದಿದೆ. ಅರ್ಥಾತ್ ಪ್ರ–ಅನ್ನು ಪ್ರಗತಿಶೀಲದಿಂದಲೂ ಉ–ಅನ್ನು ಉಪಯೋಗ ಎಂಬುದರಿಂದಲೂ ಹಾಗೂ ತ–ಅನ್ನು ತತ್ತ್ವದಿಂದಲೂ ತೆಗೆದುಕೊಂಡು ಪ್ರಉತ ಶಬ್ದ ಹುಟ್ಟಿದೆ. **ಪ್ರಉತ,** ಸಾಮಾಜಿಕ ಆರ್ಥಿಕ ಸಿದ್ಧಾಂತ. ಆದರೆ, ಅದು ಅಧ್ಯಾತ್ಮಿಕತೆಯನ್ನು, ಉತ್ಪಾದನಾ ದಕ್ಷತೆಯನ್ನು ಹಾಗೂ ವಿತರಣೆಯ ಜ್ಞಾನವನ್ನೂ ಬರೆಸಿದೆ. ಮಾರ್ಕ್ಸ್‌ನ ರಾಜಕೀಯ ಸಾಮಾಜಿಕ.ಸಮಾನತೆ ಮತ್ತು ರಾಲ್‌ನ ನ್ಯಾಯಬುದ್ಧಿಗಳು ನೀತಿ ಸೂತ್ರಗಳ ರೂಪದಿಂದ ಅದರಲ್ಲಿ ಅಡಕವಾಗಿವೆ. ಈ ಸೂತ್ರಗಳು ಅಧ್ಯಾತ್ಮಿಕವಾಗಿ ವ್ಯಕ್ತಿಗೂ ಮತ್ತು ಸಮಾಜಕ್ಕೂ ಪ್ರಯೋಜನಕಾರಿಯಾಗಿವೆ. ಅರ್ಥಶಾಸ್ತ್ರ, ಉದ್ದಿಮೆ ಹಾಗೂ ಸರಕಾರಗಳ ಬಗೆಗಿನ ಶ್ರೀ ಸರಕಾರರ ಅಭಿಪ್ರಾಯಗಳು ಅವರ ಬರೆಹಗಳಲ್ಲಿ ತುಂಡು ತುಂಡಾಗಿ ಹರಿದು ಹಂಚಿಹೋಗಿವೆ. ಈ ಅಧ್ಯಾಯದಲ್ಲಿ ಮತ್ತು ಇನ್ನು ಮುಂದಿನ ಅಧ್ಯಾಯಗಳಲ್ಲಿ ನಾನು ಆ ತುಣುಕುಗಳನ್ನು ಒಂದು ಸುಸಂಬದ್ಧ ವಿಚಾರದೋಹದಲ್ಲಿ ಸಂಕಲಿಸಿದ್ದೇನೆ. ಮತ್ತು ಆಧುನಿಕ ಅರ್ಥನೀತಿ ಸಿದ್ಧಾಂತಗಳ ಬೆಳಕಿನಲ್ಲಿ ಅವುಗಳ ಬೆಲೆ ಕಟ್ಟಿದ್ದೇನೆ. ಈ ದಿಶೆಯಲ್ಲಿ ಅವರ ಹಲವಾರು ವಿದ್ಯಾರ್ಥಿಗಳ ಕಾಣಿಕೆಗಳೂ ಸಹ ಇಲ್ಲಿ ಪ್ರಯೋಜನಕಾರಿಯಾಗಿವೆ.

ನಿಖರವಾಗಿ ಹೇಳುವುದಾದರೆ, ಪ್ರಉತ ಗೂಢವಾದ ಸಿದ್ಧಾಂತವೇನೂ ಅಲ್ಲ. ಆದರೆ ಅದೊಂದು ವಿವಿಧ ರಂಗಗಳಲ್ಲಿ ಸಮಾಜ ನಿರ್ವಹಣೆಗೆ ಮಾರ್ಗದರ್ಶಿಯಾಗಬಲ್ಲ ತತ್ತ್ವಾವಳಿ ಯಷ್ಟೇ. ಅದು ಅನುಷ್ಠಾನ ಯೋಗ್ಯ ಸಿದ್ಧಾಂತವೆನ್ನಬಹುದು. ಏಕೆಂದರೆ, ಅದೇನೂ ಸುಂದರ ಹಾಗೂ ಭಾವಾತ್ಮಕ ಕಲ್ಪನೆಗಳ ಮೇಲೆ ಒತ್ತು ಕೊಡುವುದಿಲ್ಲ. ಆದರೆ ಯಾವುದು ಜನತೆಗಾಗಿ ಗರಿಷ್ಠ ಕಲ್ಯಾಣಕಾರಿಯಾಗಿದೆಯೋ, ಮತ್ತು ಆ ದಿಶೆಯಲ್ಲಿ ಕೆಲಸ ಮಾಡುವುದೋ

ಅದರ ಮೇಲೆ ಪ್ರಉತ, ಒತ್ತು ಕೊಡುತ್ತದೆ. ಅದು ಬಂಡವಾಳವಾದ ಹಾಗೂ ಸಾಮ್ಯವಾದಗಳ ಭಾವನಾತ್ಮಕ ಆಧಾರಗಳಿಗೆ ಪ್ರತಿಸ್ಪರ್ಧಿ ವಿಚಾರಧಾರೆಯಾಗಿದೆ. ಏನೇ ಇರಲಿ, ಶ್ರೀ ಸರಕಾರ ಅವರಂತೂ ಪ್ರಉತನ್ನು ಆಧುನಿಕ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳ ಬೌದ್ಧಿಕ ದಿವಾಳಿತನಕ್ಕೆ ಪ್ರತಿಕ್ರಿಯಾತ್ಮಕವೆಂದು ಬಗೆದಿಲ್ಲ. ಆದರೆ ಅದನ್ನು ವಿಶ್ವಾತ್ಮಕವೆಂದೂ ಮತ್ತು ಮುಂಬರುವ ಸುದೀರ್ಘ ಕಾಲಪರ್ಯಂತ ಸಮರ್ಪಕವಾಗಬಲ್ಲ ಸಿದ್ಧಾಂತವೆಂದೂ ಬಗೆಯುತ್ತಾರೆ. ಏಕೆಂದರೆ, ಅವರ ದೃಷ್ಟಿಯಲ್ಲಿ ಬಂಡವಾಳವಾದ ಮತ್ತು ಸಾಮ್ಯವಾದಗಳು ವಿಭಿನ್ನ ನಾಗರಿಕತೆಗಳಲ್ಲ. ಸಮಾಜ ಚಕ್ರಗಳ ತಾತ್ಕಾಲಿಕ ಹಂತಗಳೆನಿಸಿವೆ. ಆದರೆ ಪ್ರಉತ ವ್ಯವಸ್ಥೆಯು ಕ್ಷಣಭಂಗುರ ವಾದುದಲ್ಲ. ಮಾನಸಶಾಸ್ತ್ರ ಮತ್ತು ಸಮಾಜದ ಚೈತನ್ಯ ಹಾಗೂ ವಿಕಾಸಗಳನ್ನು ಆಧರಿಸಿದ ಅದು ಸರ್ವ ರಾಷ್ಟ್ರಗಳಿಗೂ ಅನ್ವಯಿಸುತ್ತಿದೆ.

ಪ್ರಗತಿ ಎಂದರೇನು ?

ಪ್ರಉತನ್ನು ಅರಿಯಬೇಕಾದರೆ, ಅದರ ಪ್ರಗತಿಯ ಗ್ರಹಿಕೆಯಿಂದ ಆರಂಭಿಸ ಬೇಕಾಗುತ್ತದೆ. ಸಾಮಾನ್ಯ ಸಂದರ್ಭಗಳಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಮುನ್ನಡೆ ಇಲ್ಲವೆ ಜೀವನ ಸೌಲಭ್ಯಗಳನ್ನು ವರ್ಧಿಸುವ ಯಾವುದೊಂದರೊಡನೆ 'ಪ್ರಗತಿ' ಶಬ್ದವನ್ನು ಅನ್ವಯಿಸುವುದುಂಟು. ಇಂದು ಮಾನವತೆಯು ಭಾರಿ ಪ್ರಗತಿ ಸಾಧಿಸಿದೆಯೆಂದು ಹೇಳಲಾಗುತ್ತಿದೆ. ಏಕೆಂದರೆ, ಈ ಹಿಂದಿನ ಕೆಲವು ಶತಮಾನಗಳಿಗಿಂತ ಈಗ ಅದು ಅತ್ಯಧಿಕ ಸೌಲಭ್ಯಯುಕ್ತವಾಗಿದೆ. ಜನರಿಂದು ಶೀಘ್ರಗತಿಯ ಮೋಟರ ವಾಹನ ಮತ್ತು ವಾಯುಯಾನ ಮೂಲಕ ಪ್ರವಾಸ ಮಾಡಬಹುದು. ಆದರೆ ಅದೇ ಒಂದು ಶತಮಾನ ಪೂರ್ವದಲ್ಲಿ ಅವರು ಕುದುರೆ ಹೂಡಿದ ಬಗಿಗಳಲ್ಲಿ ಮತ್ತು ಎತ್ತು ಹೂಡಿದ ಚಕ್ಕಡಿಗಳಲ್ಲಿ ಪಯಣಿಸುತ್ತಿದ್ದರು. ಇನ್ನು ಪ್ರಾಚೀನ ಕಾಲದತ್ತ ತಿರುಗಿದರೆ, ಜನರು ಪಾದಚಾರಿಗಳಾಗಿಯೇ ಪಯಣಿಸುತ್ತಿದ್ದರು. ಹೀಗಾಗಿ, ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಜೀವನ ಸೌಲಭ್ಯಗಳ ಲ್ಲಾಗುವ ಹೆಚ್ಚಳವನ್ನೇ ಸಾಮಾನ್ಯವಾಗಿ ಪ್ರಗತಿಯೆಂದು ತಿಳಿಯುತ್ತಾರೆ. ಈ ಆವಿಷ್ಕಾರಗಳು, ಭೌತಿಕವಾಗಿ ಅಷ್ಟೇ ಅಲ್ಲ; ಬೌದ್ಧಿಕವಾಗಿಯೂ ಸಹ, ನಮ್ಮ ಜೀವನಗಳನ್ನು ಹಗುರಗೊಳಿಸಿವೆ. ಕಾಗದದ ಆವಿಷ್ಕಾರವು ವಿದ್ವಜ್ಜನರ ವಿಚಾರಗಳನ್ನು ಹರಡಲು ನೆರವಾಗಿವೆ. ಇಂದು ಜನರು ಕಾದಂಬರಿ ಮತ್ತಿತರ ಸಾಹಿತ್ಯ ಗ್ರಂಥಗಳನ್ನೋದುವಲ್ಲಿ ತಮ್ಮ ಮನಸ್ಸು ತೊಡಗಿಸಬಲ್ಲರು. ಹೀಗೆ, ಭೌತಿಕ ಮತ್ತು ಬೌದ್ಧಿಕ ವಲಯಗಳಲ್ಲಿ, ಮಾನವತೆಯು ಗೆಯ್ದ ಅಪಾರ ಮುನ್ನಡೆಯ ಕೀರ್ತಿ ಈ ವೈಜ್ಞಾನಿಕ ಆವಿಷ್ಕಾರಗಳಿಗೇ ಸಲ್ಲುತ್ತದೆ.

ಶ್ರೀ ಸರಕಾರ ಅವರ ದೃಷ್ಟಿಯಲ್ಲಿ ಇದಾವುದೂ ಪ್ರಗತಿಯಲ್ಲ. ಇವು ಜೀವನ ವಿಧಾನದಲ್ಲಿ ಮಹಾಪರಿವರ್ತನೆಯಾಗಿ ಪರಿಣಮಿಸಿರುವುದೇನೋ ನಿಜ. ಆದರೆ ಅವೆಲ್ಲವನ್ನು ಪ್ರಗತಿಯೆನ್ನಲು ಒಪ್ಪರು. ಏಕೆಂದರೆ, ಬಹುತೇಕ ವೈಜ್ಞಾನಿಕ ಆವಿಷ್ಕಾರಗಳು ತತ್ಪೂರ್ವದಲ್ಲಿ ಇರದ ಸಮಸ್ಯೆಗಳನ್ನು ಸೃಷ್ಟಿಸಿವೆ. ಶೀಘ್ರಯಾನವು ಇಂದು ಅಪಘಾತಗಳ ಸಂಕಟವನ್ನು ಹೆಚ್ಚಿಸಿದೆ. ಔದ್ಯೋಗೀಕರಣವು ಇಂದು ಪರಿಸರ ಮಾಲಿನ್ಯಕ್ಕೂ ಹಿಂದಿನ ಕಾಲದಲ್ಲಿ ಗೊತ್ತೇ

ಇರದ, ಕ್ಯಾನ್ಸರ ಮತ್ತಿತರ ರೋಗಗಳಿಗೆ ಕಾರಣವಾಗಿದೆ. ಆಧುನಿಕ ಔಷಧಿಗಳು ಅತಿ ಶೀಘ್ರ ಗುಣಪಡಿಸುವುದೇನೋ ನಿಜ. ಆದರೆ, ಅನ್ಯ ಬಾಧೆ ಉಂಟು ಮಾಡುತ್ತವೆ. ಮತ್ತೆ ಅವುಗಳ ಉಪಚಾರಕ್ಕೆಳಿಯಬೇಕಾಗುತ್ತದೆ. ಬೌದ್ಧಿಕ ಕ್ಷೇತ್ರದಲ್ಲಿಯೂ ಸಹ, ಮನವನ್ನು ತೊಡಗಿಸಲು ಸಾಕಷ್ಟು ಅನುವಿದೆ. ಆದರೆ ಇಂದಿನ ಜನರು ಭಾವುಕ ಸಮಸ್ಯೆಗಳಿಂದ ಮತ್ತು ನರ ಗುಂದುವಿಕೆಯಿಂದ ಬಳಲುತ್ತಿದ್ದಾರೆ. ಇವು ಆ ಮುನ್ನ ಇರಲೇ ಇಲ್ಲ. ಭೌತಿಕ ಮತ್ತು ಬೌದ್ಧಿಕ ವರ್ಚುಲಗಳಲ್ಲಿಯ ಸೌಕರ್ಯಗಳ ಹೆಚ್ಚಳದ ಬೆಂಬತ್ತಿ ಹಾನಿಕಾರಕವಾದ ಇತರ ಪೀಡೆಗಳೂ ಬರುತ್ತಿವೆ. ಅಂದ ಮೇಲೆ, ಈ ವಲಯಗಳಲ್ಲಿ ನಿಜವಾಗಿ ಪ್ರಗತಿ ಘಟಿಸಿದೆಯೆಂದು ಯಾರು ಹೇಳಬಲ್ಲರು ? ಜೊತೆ ಜೊತೆಯಾಗಿ ಅಧ್ಯಾತ್ಮಿಕ ಮುನ್ನಡೆಯಾದ ಹೊರತು, ಬೌದ್ಧಿಕ ಹಾಗೂ ಭೌತಿಕ ದೃಷ್ಟಿಯಲ್ಲಿ ಪ್ರಗತಿ ಅಸಾಧ್ಯ ಎಂದು ಹೇಳುವ ಮಟ್ಟಿಗೆ ಶ್ರೀ ಸರಕಾರ ಅವರು ಹೋಗಿದ್ದಾರೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭೌತಿಕ ಮತ್ತು ಬೌದ್ಧಿಕ ಕ್ಷೇತ್ರಗಳಲ್ಲಿ 'ಪ್ರಗತಿ' ಎನ್ನುವುದು ತಪ್ಪು.

ಭೌತಿಕ ಮತ್ತು ಬೌದ್ಧಿಕ ಕ್ಷೇತ್ರಗಳಲ್ಲಿ ಪ್ರಗತಿ ಘಟಿಸುವುದಿಲ್ಲವೇಕೆ ? ಆ ಸ್ತರ ಗಳಲ್ಲಿಯ ಧನಾತ್ಮಕ ಅಭಿವೃದ್ಧಿಯೇಕೆ ನಿಷೇಧಾತ್ಮಕ ಗತಿಯೊಂದಿಗೆ ಜೊತೆಗೂಡಬೇಕು? ಇದರ ಕಾರಣವು ವಿಶ್ವ ಪ್ರಕೃತಿಯಲ್ಲಿಯೇ ಇದೆ. ಅದು ಧನಾತ್ಮಕ ಮತ್ತು ಋಣಾತ್ಮಕ ಶಕ್ತಿ ಗಳಿಂದ ಸಮತೋಲ ಕಾಪಾಡಿಕೊಂಡ ಸ್ಪಂದನಾತ್ಮಕ ಪ್ರವಾಹದಲ್ಲಿ ಅಸ್ತಿತ್ವ ಹೊಂದಿದೆ.

ನಮ್ಮ ಭೂಮಿ ಹಾಗೂ ಅದರ ಸುತ್ತಲಿನ ವಾತಾವಾರಣಗಳು ಶಾಂತವಾಗಿವೆ. ಈ ಶಾಂತ ವಲಯದಲ್ಲಿನ ಯಾವುದೇ ಧನಾತ್ಮಕ ತರಂಗವು ಋಣಾತ್ಮಕ ತರಂಗಗಳೊಂದಿಗೆ ಸಮತೋಲ ಹೊಂದಬೇಕು. ಆದ್ದರಿಂದ, ಭೌತಿಕ ಸೌಕರ್ಯ ಒದಗಿಸುವ ಧನಾತ್ಮಕ ತರಂಗವನ್ನು ಉಂಟುಮಾಡುವ ಯಾವುದೊಂದು ಆವಿಷ್ಕಾರವು ಅಸೌಕರ್ಯವನ್ನು ಉಂಟು ಮಾಡುವ ತತ್ಸಂಬಂಧಿ ಋಣಾತ್ಮಕ ತರಂಗಕ್ಕೆ ದಾರಿ ಮಾಡುತ್ತದೆ. ಭೌತಿಕ ಜಗತ್ತಿನ ಈ ಪರಸ್ಪರಾವಲಂಬಿ ಪ್ರಕೃತಿಯ ಕಾರಣ, ನೂತನ ತಾಂತ್ರಿಕತೆಯ ಪರಿಣಾಮಗಳು ಇತರ ದುಷ್ಪರಿಣಾಮಗಳಿಂದ ಸಮತೋಲನ ಕಾಯ್ದುಕೊಳ್ಳುತ್ತವೆ. ಆದ್ದರಿಂದ ಹಲವು ರೀತಿಯಲ್ಲಿ ಜೀವನವು ಸಲೀಸಾದರೆ, ಇನ್ನಿತರ ರೀತಿಯಲ್ಲಿ ಅದು ಕಠಿಣವಾಗುತ್ತದೆ. ವಿಜ್ಞಾನ ಮತ್ತು ತಾಂತ್ರಿಕತೆಗಳನ್ನಾರೂ ಮಿಶ್ರಿತವಲ್ಲದ ಆಶೀರ್ವಾದಗಳೆಂದು ಹಾಡಿ ಹೊಗಳುವಂತಿಲ್ಲ.

ಭೌತಿಕ ವಲಯದಲ್ಲಿ ಪ್ರಗತಿಯು ತೀರ ಅಸಾಧ್ಯವೆಂಬ ಸರಕಾರರ ಪ್ರತಿ ಪಾದನೆಯು ನಿಜವಾಗಿಯೂ ಅತಿ ಪ್ರಬಲವಾಗಿದೆ. ಅದು ನಂಬಲಾರದಂತಿದೆ. ಆದರೆ ಅದಕ್ಕೆ ಅದರದೇ ಆದ ಆಂತರಿಕ ತರ್ಕಬದ್ಧತೆ ಇದೆ. ಇಂದು ಸರ್ವ ದಿಶೆಗಳಲ್ಲಿ ವಿಜ್ಞಾನದ ವಿಧಾಯಕ ಮತ್ತು ವಿಘಾತುಕ ಫಲಗಳು ಕಾಣಬರುತ್ತಿದ್ದು, ಈ ತರ್ಕವು ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಬಾಳಿನ ಬೇಸರವನ್ನು ಕಡಿಮೆ ಮಾಡುವಾಗ, ಬಾಳಿನ ದುರಂತವನ್ನು ಹೆಚ್ಚಿಸದಿರುವ ಯಾವುದಾದರೂ ಆವಿಷ್ಕಾರವನ್ನು ನೀವು ಊಹಿಸಬಲ್ಲಿರಾ? ಪದೇ ಪದೇ ಅದೇ ಕೆಲಸ ಮಾಡುವುದು ಕತ್ತೆಯ ದುಡಿತ. ಇನ್ನು ಆ ಕಾರ್ಯವನ್ನು ಯಂತ್ರಗಳೇ ಮಾಡುವಾಗ, ಬಾಳು ಮುಂಚೆಗಿಂತ ಅಧಿಕ ಸುಖಕರವಾಗಿರುತ್ತದೆ. ಪಾತ್ರೆ ತೊಳೆಯುವ ಯಂತ್ರಗಳು ಪಾತ್ರೆ

ತೊಳೆಯುತ್ತಿದ್ದರೆ, ಹವಾನಿಯಂತ್ರಕಗಳು ಕೊರಡಿಯನ್ನು ತಂಪಾಗಿರಿಸಿದರೆ, ಲಾಂಡ್ರಿ ಯಂತ್ರಗಳು ಬಟ್ಟೆಯನ್ನು ತೊಳೆದರೆ, ಸ್ವಯಂಚಾಲಿತ ವಾಹನಗಳು ನಡೆಯುವ ಕೆಲಸ ಮಾಡಿದರೆ, ನಮ್ಮ ಪೂರ್ವಜರು ಬಾಳಿನ ಆ ವಿಜ್ಞಾನರಹಿತ ಜಗತ್ತಿನಲ್ಲಿ ಇದ್ದುದಕ್ಕಿಂತಲೂ ನಿಶ್ಚಯವಾಗಿಯೂ ಬಾಳು ಹೆಚ್ಚು ಸುಖಮಯವಾಗಿರುತ್ತದೆ. ಆದರೆ ಆ ಪೂರ್ವಜರಿಗೆ 'ವಿದ್ಯುತ್ ಶಾಕ್ಕಿ'ನ ಮರಣಾಂತಿಕ ಆಪಘಾತಗಳ, ವಾಯು, ಜಲ, ಭೂಮಿ ಮತ್ತು ಶಬ್ದ ಮಾಲಿನ್ಯ, ದುರ್ವಾಸನೆಯ ಸ್ವಯಂಚಾಲಿತ ವಾಹನಗಳ ಹೊಗೆ, ನಗರದ ಜನದಟ್ಟಣೆ, ಅತೀವ ಸ್ವಾರ್ಥಪರತೆ, ಅಪರಾಧ ಇತ್ಯಾದಿಗಳು ಎದುರಾಗಿರಲಿಲ್ಲ.

ನಿಜವಾಗಿ ನೋಡಿದರೆ ಪ್ರತಿಯೊಂದು ಆವಿಷ್ಕಾರದಿಂದ ಘಟಿಸುವ ಅಪಾಯಗಳು ಅವು ನೀಡುವ ಸೌಕರ್ಯಕ್ಕೆ ಸರಿಸಮನಾಗಿಯೇ ಇರುತ್ತವೆ. ಕಲ್ಲಿದ್ದಲು ಹೊಗೆಯು ಕಶ್ಮಲವುಂಟು ಮಾಡುತ್ತದೆ. ತೈಲವೂ ಸಹ ಅದೇ ರೀತಿ. ಅಣುಶಕ್ತಿಯು ಮಾತ್ರ ಇವೆರಡರಿಂದ ಮುಕ್ತ. ಮೇಲಾಗಿ ಅದು ಶಕ್ತಿಯ ವಿಸ್ತೃತ ಸಾಗರವೇ ಆಗಿದೆ. ಆದರೆ, ಅದು ಸಾಂಪ್ರದಾಯಿಕ ಶಕ್ತಿ ಮೂಲಕ್ಕಿಂತ ಎಷ್ಟೋ ಪಾಲು ಅಧಿಕ ಭೀಕರ. ನೀವು ಬೇಕಾದರೆ, ತೈಲ ಮತ್ತು ಕಲ್ಲಿದ್ದಲುಗಳ ಮಾಲಿನ್ಯದಿಂದ ದೂರ ಹೋಗಬಹುದು. ಆದರೆ ಅಣುವಿಕಿರಣದಿಂದ ಪಾರಾಗುವುದು ಕಷ್ಟ ಸಾಧ್ಯ. ನೀವು ಹೋದ ಹೋದೆಡೆಯಲ್ಲಿ ಅದು ಬೆನ್ನು ಹತ್ತುತ್ತದೆ.

ಇಂದು ಸೌರ ಶಕ್ತಿಯು ಅಣುಯಂತ್ರಗಳಿಗಿಂತ ಅಧಿಕ ಆಶಾದಾಯಕವಾಗಿದೆ. ಏಕೆಂದರೆ ಅದರ ಅಪಾಯಗಳು ಇನ್ನೂ ತಿಳಿದುಬಂದಿಲ್ಲ. ಪ್ರತಿಯೊಂದು ವೈಜ್ಞಾನಿಕ ಉಪಕರಣವೂ ಅದೃಶ್ಯ ಅಪಾಯಗಳನ್ನು ಬಚ್ಚಿಟ್ಟುಕೊಂಡಿರುತ್ತದೆ. ಅವು ದೀರ್ಘ ಸಮಯಾನಂತರ ತೋರಿಬರುತ್ತವೆ. ನವೀನ ತಂತ್ರಜ್ಞಾನವನ್ನು ಬಳಸುವಾಗ, ನಾವು ಅದರಿಂದ ಯಾವುದೇ ತೊಂದರೆಯನ್ನು ಅಪೇಕ್ಷಿಸುವುದಿಲ್ಲ. ಇದು ದೋಷಯುತ ತರ್ಕ ಹಾಗೂ ದೋಷಯುತ ಚಿಂತನೆ. ಶ್ರೀ ಸರಕಾರ ಅವರು ಈ ಚಿಂತನವನ್ನು ತಿದ್ದುತ್ತ, ಪ್ರತಿಯೊಂದು ಆವಿಷ್ಕಾರದ ಜೊತೆ ಪರಿಣಾಮಗಳು ಅನಿವಾರ್ಯವಾಗಿವೆಯೆಂದು ಸಾರುತ್ತಾರೆ. ಏಕೆಂದರೆ, ವಿಶ್ವವು ಸ್ವಭಾವತಃ ಸ್ಪಂದನಾತ್ಮಕವಿದೆ ಮತ್ತು ಭೌತಿಕ ಸೌಲಭ್ಯ ಸೃಷ್ಟಿಸುವ ಯಾವುದೇ ಭೌತಿಕ ಪರಿವರ್ತನೆ ಇರಲಿ, ಅದನ್ನು ಅದೇ ಪ್ರಮಾಣದಲ್ಲಿ ಉಂಟಾಗುವ ದುಃಖವು ಸರಿದೂಗುತ್ತದೆ.

ಹಾಗಾದರೆ ವಿಜ್ಞಾನವನ್ನು ಉಪೇಕ್ಷಿಸಬಹುದೇ ? ಹಾಗೇನಿಲ್ಲ. ಶಕ್ತಿ, ಮಾಲಿನ್ಯ ಹಾಗೂ ಜನಸಂಖ್ಯೆಗಳ ಸಮಸ್ಯೆಗಳು ತುಂಬಿ ತುಳುಕಿರುವಾಗ, ವಿಜ್ಞಾನಪೂರ್ವ ದಿನಮಾನಕ್ಕೆ ಮರಳುವುದಂತೂ ದೂರದ ಮಾತು. ಮತಿತಾರ್ಥವಿಷ್ಟೆ: ನಾವು ಆವಿಷ್ಕಾರಗಳನ್ನು ಕುರಿತು ಜಾಗರೂಕರಾಗಿರಬೇಕಷ್ಟೇ, ಯಾವುದೊಂದು ನೂತನ ಆವಿಷ್ಕಾರವನ್ನು ಔದ್ಯೋಗಿಕ ತಾಂತ್ರಿಕತೆಯಲ್ಲಿ ಅಳವಡಿಸಬೇಕಾದರೆ, ಅದರ ಜೊತೆ ಪರಿಣಾಮಗಳನ್ನು ಪೂರ್ಣವಾಗಿ ಅಭ್ಯಸಿಸಬೇಕು. ಮತ್ತು ಅದರಿಂದ ಹೊರತೂರುವ ವಸ್ತುಗಳನ್ನು ನಿಯಂತ್ರಿಸಲು ಕೂಡಲೇ ಹಣ ತೊಡಗಿಸಬೇಕು. ಈ ಕುರಿತು ಮುಂದಿನ ಅಧ್ಯಾಯದಲ್ಲಿ ಇನ್ನಷ್ಟು ಹೇಳುತ್ತೇನೆ.

ಭೌತಿಕ ಕ್ಷೇತ್ರದಲ್ಲಿ ಪ್ರಗತಿಯ ಗ್ರಹಿಕೆಯು ಅತಿ ಹೆಚ್ಚೆಂದರೆ ಸಂದೇಹಾಸ್ಪದವಾಗಿದ್ದರೆ, ಬೌದ್ಧಿಕ ಕ್ಷೇತ್ರದಲ್ಲಿ ಇದಕ್ಕಿಂತ ಉತ್ತಮವೇನೂ ಅಲ್ಲ. ಜಗತ್ತು ಬೌದ್ಧಿಕ ಕ್ಷೇತ್ರದಲ್ಲಿ ಮಹಾನ್ ಮುನ್ನಡೆ ಸಾಧಿಸಿದಂತೆ ತೋರುತ್ತದೆ. ಇಂದು ಎಂದಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ವಿದ್ವಾನರಿದ್ದಾರೆ. ಅನೇಕ ದೇಶಗಳಲ್ಲಿ ಎಂ.ಎ. ಮತ್ತು ಪಿಎಚ್.ಡಿ. ಪದವಿ ಸಂಪನ್ನರು ತುಂಬಿದ್ದಾರೆ. ಮತ್ತಿನ್ನು ಹಲವರು ನಿಯಮಿತ ಓದು ಬರೆಹಗಳನ್ನು ರೂಢಿಸಿಕೊಂಡಿದ್ದಾರೆ. ಇದೆಲ್ಲವೂ ಹಣ ವೆಚ್ಚ ಮಾಡದೆ ಆಗಿದೆಯೇ ?

ಪ್ರಾಚೀನ ಕಾಲದ ಜನರು ಬೌದ್ಧಿಕವಾಗಿ ಹಿಂದುಳಿದಿದ್ದರೇನೋ ಸರಿ. ಆದರೆ ಅವರು ಭಾವನಾತ್ಮಕ ಒತ್ತಡ ಹಾಗೂ ನರಬೇನೆಗಳಿಂದ ಬಳಲುತ್ತಿರಲಿಲ್ಲ. ಕಡಿಮೆ ವಿದ್ವತ್ತೆಯುಳ್ಳವನು ಮಾನಸಿಕ ಕ್ಷೋಭೆಗಳಿಗೀಡಾಗುವುದೂ ಕಡಿಮೆ. ಅದೇ ನೋಡಿ; ಓರ್ವ ಬುದ್ಧಿಶಾಲಿಯು ಇಂಥವುಗಳಿಗೆ ಬಲಿಯಾಗುವ ಸಂಭವ ಹೆಚ್ಚು, ಅವನು ತನ್ನ ಸ್ವಂತ ಕಲ್ಪನೆಯ ಜಾಲದಲ್ಲಿ ಅನವಶ್ಯಕ ಸಮಸ್ಯೆಗಳಿಗೆ ಹುಟ್ಟು ಹಾಕುತ್ತಾನೆ ಮತ್ತು ನಿದ್ರಾರಹಿತ ರಾತ್ರಿಗಳನ್ನು ಕಳೆಯುತ್ತಾನೆ. ಹೀಗಾಗಿ, ಬೌದ್ಧಿಕ ಕ್ಷೇತ್ರದಲ್ಲಿಯೂ ಸಹ, ಪ್ರಗತಿಯು ಕಷ್ಟಸಾಧ್ಯ. ಏಕೆಂದರೆ, ಸುಖದ ಹೆಚ್ಚಳದ ವೇದನೆಯನ್ನು ಹೆಚ್ಚಿದ ದುಃಖವೇದನೆಯು ಸರಿದೂಗುತ್ತದ.

ಅಂತಿಮ ವಿಶ್ಲೇಷಣಾನುಸಾರ ಪ್ರಗತಿಯ ಅಳತೆಗೋಲೆಂದರೆ, ನರಮಂಡಲದ ಸಡಿಲಿಕೆಯ ಮುಖಾಂತರ ಅಭಿವ್ಯಕ್ತವಾಗುವ ಮಾನಸಿಕ ಸ್ಪಂದನವೇ ಹೊರತು ಬೇರೇನಲ್ಲ. ಅರ್ಥಾತ್ ಸುಖವೆಂದರೆ, ಸಡಿಲುಗೊಂಡ ನರಗಳಿಂದ ತೂರಿಬರುವ ಮಾನಸಿಕ ಸ್ಪಂದನಗಳೇ ಹೊರತು ಮತ್ತೇನಲ್ಲ. ಪ್ರತಿಯಾಗಿ ದುಃಖವು ಇದಕ್ಕೆ ತೀರ ವಿಪರೀತವಾದ ಅನುಭವ. ನರಗಳು ಒತ್ತಡಕ್ಕೆ ಸಿಲುಕಿದಾಗ, ಮನದಲ್ಲಿ ಉದ್ಭವಿಸುವ ಸ್ಪಂದನಕ್ಕೆ ದುಃಖವೆಂದು ಹೆಸರು. ವಿಜ್ಞಾನದ ತಾಡನೆಯ ಮೌಲ್ಯಮಾಪನ ಮಾಡುವಲ್ಲಿ, ಜನರು ಅದರ ಅನುಕೂಲತೆಗಳತ್ತ ಲಕ್ಷ್ಯವೀಯುವರೇ ಹೊರತು ಅದರಿಂದ ಉದ್ಭವಿಸುವ ನರಮಂಡಲದ ಒತ್ತಡದತ್ತ ಅಲ್ಲ. ಅದನ್ನವರು ಕಡೆಗಣಿಸುತ್ತಾರೆ. ಭೌತಿಕ ಕ್ಷೇತ್ರದಲ್ಲಿ ಪ್ರಗತಿ ಸಾಧ್ಯವಿಲ್ಲವೆನ್ನುವುದರ ಇಂಗಿತಾರ್ಥವಿಷ್ಟೇ: ವೈಜ್ಞಾನಿಕ ಪರಿವರ್ತನೆಯು ಸುಖದುಃಖಗಳೆರಡನ್ನೂ ಸಮಪ್ರಮಾಣದಲ್ಲಿ ಹೆಚ್ಚಿಸುತ್ತದೆ.

ಬೌದ್ಧಿಕ ಚಟುವಟಿಕೆಯಲ್ಲಿಯೂ ಸಹ, ನಿಜವಾಗಿ ಇದೇ ಅನ್ವಯಿಸುತ್ತದೆ. ಮಾನಸಿಕ ಹಿನ್ನಡೆಗಳ ಅಥವಾ ಅನಾನುಕೂಲ ಸಂಗತಿಗಳ ಮಾನಸಿಕ ನಿರಾಕರಣೆಗಳ ಪ್ರಕರಣಗಳಿರಬಹುದು. ಆದರೆ ಇಂಥ ಮಾನಸಿಕ ಅವಸ್ಥೆಗಳು ದೀರ್ಘ ಕಾಲ ಉಳಿಯಲಾರವು. ಸಾಮಾನ್ಯವಾಗಿ ಮನವು ಸಂತುಷ್ಟವಿರಬಹುದು, ಅಥವಾ ಅಸಂತುಷ್ಟವಿರಬಹುದು. ಬೌದ್ಧಿಕ ಚಟುವಟಿಕೆಯಂತೂ ಸಂತುಷ್ಟಿಯ ಭಾವನೆಯನ್ನು ಹೆಚ್ಚಿಸುವುದು ನಿಸ್ಸಂದೇಹ. ಒಬ್ಬನೆದುರು ವಾದದಲ್ಲಿ ಗೆದ್ದ ಇನ್ನೊಬ್ಬನು ಬಹುಶಃ ಅತಿಸುಖಿಯಾಗಿರುತ್ತಾನೆ. ಅಷ್ಟೇಕೆ; ಸಂತೋಷದಿಂದ ಹುಚ್ಚನಾಗುವುದೂ ಉಂಟು. ಆದರೆ, ಕೆಲ ಸಮಯಾನಂತರ, ಅವನಿಗೆ ಅದೇ ಪ್ರಮಾಣದ ನೋವು ತನ್ನ ಮನದಲ್ಲಿ ಇನ್ನೊಂದು ಪ್ರಕಾರದಲ್ಲಿ ಉಂಟಾಗುತ್ತದೆ. ಕಾರಣವೆಂದರೆ, ಮಾನವನ ಮನಸ್ಸು ಕೆಲವೊಂದು ದ್ರವ್ಯರಾಶಿ ಮತ್ತು ಗಾತ್ರಗಳನ್ನು ಹೊಂದಿದೆ. ಶುದ್ಧ ಭೌದ್ಧಿಕ

ಆದ್ಯಯನ ಹಾಗೂ ವಿಶ್ಲೇಷಣೆಗಳು ಈ ರಾಶಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗುವುದಿಲ್ಲ. ಯಾವುದೊಂದು ಬೌದ್ಧಿಕ ಕ್ಷೇತ್ರದಲ್ಲಿ, ಆಲೋಚನೆಗಳ ಆಟ ಹಾಗೂ ಚಟುವಟಿಕೆಗಳನ್ನು ಮಾತ್ರ ಅವು ಹೆಚ್ಚಿಸಬಲ್ಲವಷ್ಟೇ. ಒಂದು ಮಾನಸ ಕ್ಷೇತ್ರದಲ್ಲಿ ವಿಚಾರಗಳ ಸಂಖ್ಯೆ ಹೆಚ್ಚಾದರೆ, ಮನದಲ್ಲಿ ಘರ್ಷಣೆಯೂ ಸಹ ಹೆಚ್ಚುವದು ಅನಿವಾರ್ಯ. ಇದರಿಂದ ಮಾನಸಿಕ ಕುಸಿತ ಉಂಟಾಗುತ್ತದೆ. ಹಾಗಾಗಿ ನರಗುಂದುವಿಕೆ; ಅದರಿಂದ ಬೌದ್ಧಿಕವಾಗಿ ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ಮನೋವಿಶ್ಲೇಷಕರ ಅಗತ್ಯವು ಹೆಚ್ಚುತ್ತ ಹೋಗುತ್ತದೆ.

ಅಂದಮೇಲೆ, ಪ್ರಗತಿಯೇನಾದರೂ ಸಾಧ್ಯವೇ ? ಅಹುದು; ಸಾಧ್ಯ. ಮಾನವ ಅಸ್ತಿತ್ವವು ಮೂರು ಬಗೆಯಾಗಿದೆ; ಭೌತಿಕ, ಬೌದ್ಧಿಕ ಮತ್ತು ಅಧ್ಯಾತ್ಮಿಕ. ಮೊದಲಿನವೆರಡು ಪ್ರಗತಿ ಸಾಧನೆಗೆ ಕ್ಷೇತ್ರವಾಗವು, ಮೂರನೆಯದು ಆಗುತ್ತದೆ. ಮೊದಲಿನವೆರಡರಲ್ಲಿ ಸುಖ ಹೆಚ್ಚಾದರೆ ಅದು ಹೆಚ್ಚಾದ ದುಃಖದಿಂದ ನಿರ್ನಾಮವಾಗುವುದು.

ಈಗ ಅಧ್ಯಾತ್ಮಿಕ ಕ್ರಿಯೆ ಎಂದರೇನು? ಮನವನ್ನು ತನ್ನ ಸಾಕ್ಷಿಸತ್ತೆಯತ್ತ ಹೋಗ ಗೊಡುವ ಕ್ರಿಯೆಯೇ ಅಧ್ಯಾತ್ಮಿಕ ಕ್ರಿಯೆಯಾಗಿದೆ. ತನ್ನ ಸಾಕ್ಷಿತ್ವದಿಂದ ಮಾನಸಿಕ ಕರ್ಮವನ್ನು ನಡೆಸುವ ಮಾನವ ಜೀವಿಯ ಸಾಮರ್ಥ್ಯವೇ ಆ ಸಾಕ್ಷಿಸತ್ತೆ. ದೃಷ್ಟಾಂತ ನೀಡುವುದಾದರೆ, ಒಬ್ಬನು ಸುಪ್ತಾವಸ್ಥೆಯಲ್ಲಿ ಸ್ವಪ್ನರತನಾದರೆ, ಆ ವ್ಯಕ್ತಿಯು ಸ್ವಪ್ನದ ಅನುಭೂತಿ ಹೊಂದುತ್ತಿರುವ ತಥ್ಯವನ್ನು ವೀಕ್ಷಿಸುವ ಬೇರೊಂದು ಸತ್ತೆ ಇರಬೇಕು. ಈ ಸಾಕ್ಷಿತ್ವದ ಕಾರಣದಿಂದಾಗಿಯೇ ಆ ವ್ಯಕ್ತಿಯು ಮಾರನೆಯ ದಿನ ಸ್ವಪ್ನವನ್ನು ಸ್ಮರಿಸಬಲ್ಲನು. ಅಂದ ಮೇಲೆ, ಮನಸ್ಸು ಮತ್ತದರ ಸಾಕ್ಷಿಸತ್ತೆಗಳು ವಿಭಿನ್ನವಾಗಿವೆ. ಮನದ ಈ ಸಾಕ್ಷಿತ್ವಕ್ಕೆ ಚೈತನ್ಯ, ಆತ್ಮ ಎಂದು ಕರೆಯುತ್ತಾರೆ. ಈ ಸಕಲಾತ್ಮಗಳ ಸಮಷ್ಟಿರೂಪವೇ ದೇವರು ಅಥವಾ ಪರಮಾತ್ಮ. ಈ ರೀತಿ ವ್ಯಾಖ್ಯಾನಿಸಿದ ಮೇಲೆ ದೇವರು ಇರಲೇಬೇಕು. ಏಕೆಂದರೆ ಪ್ರತಿಯೊಂದು ಮನಸ್ಸಿನ ಸಾಕ್ಷಿಸತ್ತೆ ಇರಲೇಬೇಕು. ಆದ್ದರಿಂದ ದೇವರು ಚರಮ ಸಾಕ್ಷಿಸತ್ತೆ ಅಥವಾ ಬ್ರಾಹ್ಮೀ ಸತ್ತೆ.

ಈ ರೀತಿ ವ್ಯಾಖ್ಯಾನಿಸಿದರೆ, ದೇವರ ಬಗೆಗೆ ಗುಹ್ಯವಾದುದೇನೂ ಉಳಿಯದು. ಮಾನಸಿಕ ಕ್ರಿಯೆಗೆ ಆಧಾರ ಒದಗಿಸುವ ಒಂದು ಸಾಕ್ಷೀ ಸತ್ತೆ ಇದೆಯೆಂಬುದು ತುಂಬಾ ತರ್ಕಬದ್ಧ ಸಂಗತಿ. ನಾವು ಕ್ರಿಯೆ ಕುರಿತು ಜಾಗ್ರತರಾಗಿರುವಾಗ ಸಾಕ್ಷಿಸತ್ತೆಯು ಉಪಸ್ಥಿತವಿರುವಂತೆ ತೋರುವುದಿಲ್ಲ. ಆದರೆ, ನಾವು ಸ್ವಪ್ನದಲ್ಲಿಯಂತೆ, ಕ್ರಿಯೆ ಕುರಿತು ಜಾಗ್ರತರಿಲ್ಲದಿರುವಾಗ, ಮಾರನೆಯ ದಿನದಂದು ಇರುವ ಸ್ವಪ್ನಸ್ಮರಣೆಯು, ಮನದೊಂದಿಗೆ ಸಾಕ್ಷಿಸತ್ತೆಯು ಇತ್ತೆಂಬುದನ್ನು ಸಿದ್ಧಪಡಿಸುತ್ತದೆ. ಇಂಥ ಸತ್ತೆಗಳ ಸಮಷ್ಟಿಯನ್ನೇ ನಾವು ದೇವರೆನ್ನುತ್ತೇವೆ. ನೀವು ಅದಕ್ಕೆ ಏನಾದರೂ ಹೆಸರು ಕೊಡಿರಿ. ಆದರೆ ಅದು ಇದ್ದೇ ಇರುತ್ತದೆ.

ದೇವರು ಅನಂತ ಸತ್ತೆ. ಏಕೆಂದರೆ ಮಾನವ ಮನಸ್ಸು ಅದನ್ನು ಅಳೆಯಲಾರದು. ಮನವು ತನ್ನ ಸ್ವಂತ ಆತ್ಮವನ್ನೂ ಅಳೆಯಲಾರದು. ಏಕೆಂದರೆ, ತನ್ನ ಸಾಕ್ಷಿತ್ವ ಸನ್ನಿಧಿಯಿಂದ ಮನಸ್ಸಿನ ಕ್ರಿಯೆಗೆ ಅದು ಆಧಾರವಾಗಿದೆ. ಅಂದ ಮೇಲೆ ಮನವು ದೇವರ ಅಳತೆಗೋಲಾಗುವುದೆಂದು ಕಲ್ಪಿಸುವುದಾದರೂ ಎಂತು ? ದೇವರ ಸಂಪರ್ಕದಲ್ಲಿ ಬರುವ ಮನಸ್ಸಿನ ಪ್ರಯತ್ನವನ್ನೇ

ನಾವು ಆಧ್ಯಾತ್ಮಿಕ ಕ್ರಿಯೆ ಎನ್ನುತ್ತೇವೆ. ಆದ್ದರಿಂದ ಅಧ್ಯಾತ್ಮಿಕ ಕ್ಷೇತ್ರದ ಗುರಿಯು ಅನಂತವೇ ಹೊರತು ಸಾಂತವಲ್ಲ. ಆದ್ದರಿಂದ ಅಲ್ಲಿ ಸುಖ ವೇದನೆಯನ್ನು ದುಃಖ ವೇದನೆಯು ಬೆಂಬತ್ತದು. ಅಥವಾ ಸಂತೋಷದ ಬೆನ್ನಿಗಂಟಿ ಸಂಕಷ್ಟವು ಬರದು. ಇದುವೇ ನೈಜ ಪ್ರಗತಿ. ಅಧ್ಯಾತ್ಮಿಕ ಅನುಭೂತಿಯಲ್ಲಿ ನಿಷೇಧಾತ್ಮಕ ಗತಿಯೇ ಇರದು. ಅಲ್ಲಿಯ ಪ್ರತಿಯೊಂದು ಪ್ರಯತ್ನವೂ ಶಿಸ್ತಿನ ಮುನ್ನಡೆ. ಅದರ ಬೆನ್ನ ಹಿಂದೆ ಯಾವುದೇ ಹಾನಿಕಾರಕ ಜೊತೆ ಪರಿಣಾಮಗಳಿರವು.

ಅಧ್ಯಾತ್ಮಿಕ ಕ್ರಿಯೆಗಳಲ್ಲಿ ಧ್ಯಾನ ಹಾಗೂ ಸ್ವಾರ್ಥರಹಿತ ಬಾಳು ಸೇರಿವೆ. ಬಡವರಿಗೆ ನೆರವು ನೀಡದೆ ದೇವರೆಡೆಗೆ ಮುನ್ನಡೆಯುವುದು ಅಸಾಧ್ಯ. ಇನ್ನು ಮನದ ಗುರಿಯು ಅನಂತ ಸತ್ತೆಯಾದುದರಿಂದ ಅಧ್ಯಾತ್ಮಿಕ ಜೀವನವು ಮನಸ್ಸಿನ ಗಾತ್ರ ಮತ್ತು ದ್ರವ್ಯರಾಶಿಯ ವಿಸ್ತಾರದಲ್ಲಿ ಪರಿಣಮಿಸುತ್ತದೆ. ಇದರ ಫಲವೆಂದರೆ, ಮಾನಸಿಕ ತಾಕಲಾಟಗಳು ಕಡಿಮೆಯಾಗಿ ನರಗಳು ಸಡಿಲಾಗುತ್ತವೆ. ಆಗ ಮನುಷ್ಯನು ಉದಾರ ಮನಸ್ಕನಾಗುತ್ತಾನೆ. ಅವನು ಇತರರ ಸೇವೆ ಮಾಡಬಯಸುತ್ತಾನೆ. ಅವರ ನೋವನ್ನು ಹಂಚಿಕೊಳ್ಳಬಯಸುತ್ತಾನೆ. ಅಂಥ ನಿಃಸ್ವಾರ್ಥಿ ಜೀವಿಗಳನ್ನು ಗೌರವಿಸುವ ಮತ್ತು ಅವರನ್ನು ಅನುಕರಿಸಲು ಯತ್ನಿಸುವ ಸಮುದಾಯವೂ ಸಹ ದುಃಖದ, ದ್ವಂದ್ವವಿಲ್ಲದ, ಅಧಿಕಾಧಿಕ ಸುಖವನ್ನು ಅನುಭವಿಸುತ್ತದೆ. ಇಡೀ ಸಮಾಜದಲ್ಲಿ ನೈಜ ಪ್ರಗತಿಯಾಗುತ್ತದೆ. ನಿಃಸ್ವಾರ್ಥಿಯ ಪ್ರಮಾಣವು ಸಮಾಜದ ಪ್ರಗತಿಯ ಮಾಪಕವೇ ಹೊರತು ಭೌತಿಕ ಅಭಿವೃದ್ಧಿಯೂ ಅಲ್ಲ; ಬೌದ್ಧಿಕ ಸಂಪಾದನೆಯೂ ಅಲ್ಲ.

ಭೌತಿಕ ಹಾಗೂ ಬೌದ್ಧಿಕ ಜಗತ್ತಿನಲ್ಲಿ ಪ್ರಗತಿ ಸಂಭವವಿಲ್ಲವೆಂದಾದ ಮೇಲೆ ವೈಜ್ಞಾನಿಕ ಹಾಗೂ ಬೌದ್ಧಿಕ ಶೋಧಗಳನ್ನು ತೊರೆಯಬೇಕೆಂದು ಶ್ರೀ ಸರಕಾರವೇನೂ ಪ್ರತಿಪಾದಿಸುವದಿಲ್ಲ. ಪ್ರತಿಯಾಗಿ ಅವರು ವಿಜ್ಞಾನ, ಕಲೆ ಮತ್ತು ಸಾಹಿತ್ಯಗಳ ಹರಿಕಾರರಾಗಿದ್ದಾರೆ. ಆದರೆ ವೈಜ್ಞಾನಿಕ ಮುನ್ನಡೆಗಳನ್ನು ಅವರು ಅಧ್ಯಾತ್ಮೀಕರಿಸಬೇಕೆನ್ನುವರು. ಅಂದರೆ, ತತ್ಕಾಲಕ್ಕೆ ಅಧ್ಯಾತ್ಮಿಕ ಅಭ್ಯಸನಗಳೂ ನಡೆಯಬೇಕೆಂಬುದು ಅವರ ಅಭಿಮತ. ಇಂಥ ಅಭ್ಯಾಸಗಳಿಂದ ದೇಹ ಹಾಗೂ ಮನಗಳ ಮೇಲೆ ಅಧಿಕಾಧಿಕ ಪ್ರಭುತ್ವ ಸಾಧಿಸಲು ನಮಗೆ ಶಕ್ಯವಾಗುತ್ತದೆ. ಹೀಗೆ ಮಾನವ ಜೀವಿಯ ಮೇಲೆ ಆಗುವ ವೈಜ್ಞಾನಿಕ ಹಾಗೂ ಬೌದ್ಧಿಕ ಮಾರಕ ಪರಿಣಾಮಗಳನ್ನು ಅಂಕೆಯಲ್ಲಿರಿಸಬಹುದಾಗಿದೆ.

ಹೊಸ ತಾಂತ್ರಿಕತೆಯು ಬಾಳಗತಿಯನ್ನು ವರ್ಧಿಸುತ್ತದೆ. ತುಲನಾತ್ಮಕವಾಗಿ, ಅಲ್ಪ ಸಮಯದಲ್ಲಿ ಹೆಚ್ಚು ಹೆಚ್ಚು ನಿರ್ಣಯಗಳನ್ನು ಕೈಕೊಳ್ಳಬೇಕಾಗುತ್ತದೆ. ಯಂತ್ರದ ವೇಗಕ್ಕೆ ಸರಿಹೊಂದುವಂತೆ ಸ್ಥಾನದಿಂದ ಸ್ಥಾನಕ್ಕೆ ಶೀಘ್ರವಾಗಿ ಚಲಿಸಬೇಕಾಗುತ್ತದೆ. ಇದೆಲ್ಲವೂ ಅನಿಷ್ಟ ನರಬಾಧೆಗೆ ದಾರಿಯಾಗುತ್ತದೆ. ಮುಂದೆ ಮಿದುಳು ಮತ್ತು ಹೃದಯಗಳ ಮೇಲೆ ಒತ್ತಡ ಬೀಳುತ್ತದೆ. ಹೃದಯಾಘಾತ ಹಾಗೂ ಮಾನಸಿಕ ಯಾತನೆಗಳು ವಿಜ್ಞಾನ ಮತ್ತು ತಂತ್ರಜ್ಞಾನಗಳ ಉಪಜಗಳು. ಆದ್ದರಿಂದ ವಿಜ್ಞಾನವನ್ನು ಅಂಕೆಯಲ್ಲಿರಿಸಿಕೊಳ್ಳಲು ಮತ್ತು ವಿಜ್ಞಾನದ ಪ್ರಭುತ್ವಕ್ಕೆ ಒಳಗಾಗದಿರಲು, ನರಗಳಿಗೆ ಶಾಂತಿ ನೀಡುವ ಅಧ್ಯಾತ್ಮಿಕ ಸಾಧನಗಳು ಅನಿವಾರ್ಯವಾಗಿವೆ.

ಪ್ರಗತಿ ಕುರಿತು ಸರಕಾರರ ಗ್ರಹಿಕೆಯು ಮಾನವತೆಯ ಮೇಲೆ ಗಾಢ ಪರಿಣಾಮ ಗಳನ್ನು ಮಾಡಬಲ್ಲದು. ಅಧ್ಯಾತ್ಮಿಕ ಮುನ್ನಡೆಯು ಬೆನ್ನಿಗಿಲ್ಲದ ವೈಜ್ಞಾನಿಕ ಪರಿವರ್ತನೆ ಹಾಗೂ ಬೌದ್ಧಿಕ ರೂಪಾಂತರಗಳು ಕೇವಲ ಭೌತಿಕ ಕ್ಷೇತ್ರದ ಪತನಕ್ಕೆ ನಮ್ಮ ಪರಿಸರ ಇತ್ಯಾದಿಗಳನ್ನು ಕೊಂಡೊಯ್ಯುವವಷ್ಟೇ ಅಲ್ಲದೆ ಜನಾಂಗವಾದ, ಮತಾಂಧತೆ ಹಾಗೂ ಸಾಮಾಜಿಕ ಘರ್ಷಣೆಗಳಿಗೆ ದಾರಿಯಾಗುವುದೆಂದು ಅವರು ಸೂಚಿಸಿದ್ದಾರೆ. ಅಧ್ಯಾತ್ಮಿಕತೆಯು ಎಲ್ಲ ಪ್ರಗತಿಯ ತಳಪಾಯ. ಇಪ್ಪತ್ತನೆಯ ಶತಮಾನದಲ್ಲಿ ಸಾವಿರಾರು ಹೊಸ ಆವಿಷ್ಕಾರಗಳು ಮತ್ತು ನೂತನ ಸಿದ್ಧಾಂತಗಳು ನಮ್ಮ ಜೀವನ ವಿಧಾನವನ್ನು ಇಡಿಯಾಗಿ ರೂಪಾಂತರಿಸಿವೆ. ಆದರೆ, ಆಧ್ಯಾತ್ಮಿಕವಾಗಿ ನಾವು ಮಲೆತ ಮಡುವಿನಂತಿದ್ದೇವೆ ಇಲ್ಲವೆ ಹಿನ್ನಡೆದಿದ್ದೇವೆ. ತತ್ಪರಿಣಾಮವಾಗಿ ಯುದ್ಧ ಮತ್ತು ಕದನಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಭೀಕರವಾಗಿವೆ. ಹೆಚ್ಚುತ್ತಿರುವ ಲೋಭ, ಅಪರಾಧ ಮಾದಕ ವಸ್ತುಗಳು ಮತ್ತು ಪರಿಸರ ಮಾಲಿನ್ಯಗಳು ಈ ಶಾಂತ ಉಪಗ್ರಹದ ಮೇಲಿನ ನಮ್ಮ ಬಾಳಿನ ಸೂಕ್ಷ್ಮ ಎಳೆಯನ್ನೇ ನುಂಗುವಂತಾಗಿದೆ. ಇದರಿಂದ ದೊರೆಯುವ ನೀತಿಪಾಠವೆಂದರೆ, ಅಧ್ಯಾತ್ಮಿಕ ಮುನ್ನಡೆ ಸಾಧಿಸದ ಭೌತಿಕ ಮತ್ತು ಬೌದ್ಧಿಕ ಕ್ಷೇತ್ರಗಳಲ್ಲಿಯ ಪರಿವರ್ತನೆಯು ಅಂತಿಮವಾಗಿ ಆತ್ಮಘಾತುಕವಾಗಿದೆ ಎನ್ನುವದೇ ಆಗಿದೆ.

ಸಂಪನ್ಮೂಲಗಳ ಗ್ರಹಿಕೆ :

ಶ್ರೀ ಸರಕಾರ ಪರಿಚಯಿಸುವ ಇನ್ನೊಂದು ಗ್ರಹಿಕೆಯು ಸಂಪನ್ಮೂಲಗಳಿಗೆ ಸಂಬಂಧಿಸಿದೆ. ಸಾಮ್ಯವಾಗಿ ವ್ಯಾಖ್ಯಾನಿಸುವಂತೆ, ಸಂಪನ್ಮೂಲಗಳಲ್ಲಿ ಸಮಾಜದ ಬಂಡವಾಳ, ಶ್ರಮ ಮತ್ತು ಭೂಮಿ, ಅದರ ಖನಿಜ ಸಂಪತ್ತು, ಅದರ ಶಿಕ್ಷಣ, ಜ್ಞಾನ ಮತ್ತು ತಾಂತ್ರಿಕತೆಗಳ ಮಟ್ಟಗಳು ಸೇರುತ್ತವೆ. ಇನ್ನಿತರ ಪ್ರಸಂಗಗಳಂತೆ ಇಲ್ಲಿಯೂ ಸಹ ಶ್ರೀ ಸರಕಾರ ಮೂಲದಿಂದಲೇ ಆರಂಭಿಸುತ್ತಾರೆ. ಅವರು ವ್ಯಕ್ತಿಗೆ ಲಭ್ಯವಿರುವ ಸಂಪನ್ಮೂಲಗಳನ್ನು ಹಾಗೂ ಸಮಾಜಕ್ಕೆ ಲಭ್ಯವಿರುವ ಸಂಪನ್ಮೂಲಗಳನ್ನು ವಿಂಗಡಿಸುತ್ತಾರೆ. ಇಂಥ ವಿಂಗಡಣೆಯು ಆಗೀಗ ಮ್ಲಾನವಾಗುವುದಾದರೂ ಅದನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುವುದು ಪ್ರಯೋಜನಕಾರಿ ಯಾಗಿದೆ. ವೈಯಕ್ತಿಕ ಸಂಪನ್ಮೂಲಗಳೆಲ್ಲ ಸಮಾಜದ ಸಾಮೂಹಿಕ ಬಳಕೆಗೆ ಲಭ್ಯವಾಗದಿರಬಹುದು.

ನಾವೀಗ ವೈಯಕ್ತಿಕ ಸಂಪನ್ಮೂಲಗಳಿಂದ ಆರಂಭಿಸೋಣ. ಇವುಗಳನ್ನು ದೈಹಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಎಂದು ಶ್ರೇಣೀಕರಿಸಬಹುದು. ದೈಹಿಕ ಸಂಪನ್ಮೂಲದ ಅರ್ಥವೂ ತೀರ ಸುಸ್ಪಷ್ಟ. ಅದು ತನ್ನ ಸ್ವಾಸ್ಥ್ಯ, ಬಲ ಹಾಗೂ ಸಾಮರ್ಥ್ಯಗಳನ್ನು ಮಾನವ ದೇಹದಿಂದ ಪಡೆಯುತ್ತದೆ. ಹೆಚ್ಚು ಹೆಚ್ಚು ಆರೋಗ್ಯವಂತನಿದ್ದರೆ ಅವನ ಕಾರ್ಯಸಾಮರ್ಥ್ಯವೂ ಹೆಚ್ಚು ಹೆಚ್ಚಾಗುತ್ತದೆ. ಅದೇ ರೀತಿ, ಭೋಗ ಸಾಮರ್ಥ್ಯವೂ ಹೆಚ್ಚು ಹೆಚ್ಚಾಗುತ್ತದೆ. ಇನ್ನು ಮಾನಸಿಕ ಸಂಪನ್ಮೂಲದಲ್ಲಿ ಮಾನವ ಮನ ಮತ್ತು ಬುದ್ಧಿಗಳು ಸೇರುತ್ತವೆ. ಶಿಕ್ಷಣ, ಕೌಶಲಗಳನ್ನು, ಅರ್ಥಾತ್ ಅರ್ಥಶಾಸ್ತ್ರಜ್ಞರು ಕರೆಯುವ ಮಾನವ ಬಂಡವಾಳವನ್ನು ಸಂಪಾದಿಸಲು ಇವು ಬೇಕು.

ಮಾನಸಿಕ ಸಂಪನ್ಮೂಲಗಳು ದೈಹಿಕ ಸಂಪನ್ಮೂಲಗಳಿಗಿಂತ ಸೂಕ್ಷ್ಮವಾಗಿವೆ. ಕೇವಲ ಆಲೋಚನಾ ರೂಪದಲ್ಲಿ ಗ್ರಹಿಸಬಲ್ಲದ್ದು ಸೂಕ್ಷ್ಮ ಮತ್ತು ಆಲೋಚನೆ ಹಾಗೂ ಭೌತಿಕ ತಥ್ಯವಾಗಿ ಗ್ರಹಿಸಬಲ್ಲದ್ದನ್ನು ಸ್ಥೂಲ; ಎಂದು ವ್ಯಾಖ್ಯಾನಿಸುತ್ತಾರೆ. ಈ ಅರ್ಥದಲ್ಲಿ ಮಾನವ ಸಂಪತ್ತು ದೈಹಿಕ ಸಂಪನ್ಮೂಲಗಳಿಗಿಂತ ಸೂಕ್ಷ್ಮವಾಗಿದೆ. ಕರ್ಮ ಮತ್ತು ಭೋಗಗಳಿಗಾಗಿ ನಮ್ಮ ಸಾಮರ್ಥ್ಯ ಹಾಗೂ ಬುದ್ಧಿಮತ್ತೆಗಳನ್ನು ಅದು ಅವಲಂಬಿಸಿರುತ್ತದೆ. ಇನ್ನಷ್ಟು ನಿರ್ದಿಷ್ಟವಾಗಿ ಹೇಳುವುದಾದರೆ, ಮಾನಸಿಕ ಸಂಪನ್ಮೂಲವೆಂದರೆ, ಆಲೋಚನೆಗಳು, ಗ್ರಹಿಕೆಗಳು, ಭಾಷೆಗಳು, ಸಾಹಿತ್ಯ, ಕಲೆ, ವೈಜ್ಞಾನಿಕ ಹಾಗೂ ತಾಂತ್ರಿಕ ಆವಿಷ್ಕಾರಗಳು ಇತ್ಯಾದಿಗಳಾಗಿವೆ.

ಇನ್ನು ವ್ಯಕ್ತಿಯು ಹೊಂದಿರಬಹುದಾದ ತೃತೀಯ ಸಂಪನ್ಮೂಲವೇ ಆಧ್ಯಾತ್ಮಿಕ ಸಂಪನ್ಮೂಲ. ಇದು ವೈಯಕ್ತಿಕ ಹಾಗೂ ಸಾಮಾಜಿಕ ಕಲ್ಯಾಣಗಳಿಗೆ ಅತ್ಯಂತ ಮಹತ್ವ ಪೂರ್ಣವಾಗಿದ್ದರೂ ಸಹ, ಇಂದು ಬುದ್ಧಿಜೀವಿಗಳು ಇದನ್ನು ಲಘುವಾಗಿ ಪರಿಗಣಿಸುತ್ತಿದ್ದಾರೆ. ಆಧ್ಯಾತ್ಮಿಕ ಸಂಪನ್ಮೂಲಗಳು ಮನದ ವಿಸ್ತಾರ, ಹರಹುಗಳಿಗೆ ಸಂಬಂಧಿಸಿವೆ. ಅವು ಪ್ರಾಮಾಣಿಕತೆ, ಪರಿಪೂರ್ಣತೆ ಮತ್ತು ಸ್ವಾರ್ಥತ್ಯಾಗಗಳಿಗೆ ಸಂಬಂಧಿಸಿವೆ. ಇವು ಪ್ರತಿ ವ್ಯಕ್ತಿಯೂ ಹೊಂದಬಲ್ಲಂಥವುಗಳಾಗಿವೆ. ಮೂರು ವೈಯಕ್ತಿಕ ಸಂಪನ್ಮೂಲಗಳಲ್ಲಿ ಆಧ್ಯಾತ್ಮಿಕ ಸಂಪನ್ಮೂಲಗಳು ಸೂಕ್ಷ್ಮತಮವಾಗಿವೆ. ಈ ಕಾರಣದಿಂದಾಗಿ ಅವುಗಳ ಸಿದ್ಧಿಯೂ ಸಹ ಕಠಿಣತಮ. ಅವುಗಳ ವೃದ್ಧಿಗಾಗಿ ಬಹಳಷ್ಟು ಹೆಣಗಾಡಬೇಕು. ಆದರೆ, ಗಮನಿಸಬೇಕಾದ ಸಂಗತಿಯೆಂದರೆ, ಸಮಾಜ – ಕಲ್ಯಾಣದ ಯಾವುದೇ ಚರ್ಚೆಯಿಂದ ಅವುಗಳನ್ನು ಹೊರಗಿಡುವುದು ಸಾಧ್ಯವಿಲ್ಲ. ಆಧುನಿಕ ಕಾಲದ ಅರ್ಥಶಾಸ್ತ್ರಜ್ಞರು ಹಾಗೂ ಸಾಮಾಜಿಕ ವಿಜ್ಞಾನಿಗಳು ಇದನ್ನು ಗುರುತಿಸುವಲ್ಲಿ ಅಯಶಸ್ವಿಯಾಗಿದ್ದಾರೆ.

ನಾವೀಗ ಸಮಾಜಕ್ಕೆ ಲಭ್ಯವಿರುವ ಸಂಪನ್ಮೂಲಗಳನ್ನು ಕುರಿತು ಒಳಹೊಕ್ಕು ನೋಡೋಣ. ವಿಶ್ವವು ಪಂಚಭೂತಾತ್ಮಕವಾಗಿದೆ. ಆ ಪಂಚಮಹಾಭೂತಗಳೆಂದರೆ ಆಕಾಶ, ವಾಯು, ಅಗ್ನಿ, ಆಪ್ ಮತ್ತು ಪೃಥಿವಿ. ಆಕಾಶೀಯ ಅಂಶದಲ್ಲಿ ವಾಯುಗಳು, ಬೆಳಕು ಮತ್ತು ಬೆಂಕಿಗಳ ಅಗ್ನಿ ಅಂಶ, ಜಲ, ತೈಲಗಳ ದ್ರವಾಂಶ, ಮತ್ತು ಧೂಳಿ, ಶಿಲೆ ಇತ್ಯಾದಿ ಘನ ಪದಾರ್ಥಗಳು ಸೇರುತ್ತವೆ. ಶ್ರೀ ಸರಕಾರ ಅವರ ಮೇರೆಗೆ ಈ ಎಲ್ಲ ಪಂಚಮಹಾಭೂತಗಳು ಸಮಾಜದ ಬಳಕೆಗೆ ಲಭ್ಯವಿರುವ ಸ್ಥೂಲ ಸಂಪನ್ಮೂಲಗಳಾಗಿವೆ.

ಆಧುನಿಕ ಭೌತ ವಿಜ್ಞಾನಾನುಸಾರ, ವಿಶ್ವದ ಜನನವು ವಾಯವೀಯ ಅಂಶ ದಿಂದಾಗಿದೆ. ಹಲವು ಲಕ್ಷ ಕೋಟಿ ವರ್ಷ ಪೂರ್ವದಲ್ಲಿ ವಾಯುಗಳ ಮಹಾರಾಶಿಯಲ್ಲಿ ದೊಡ್ಡ ತಾಡನವಾಯಿತು. ಆ ಮಹಾಸ್ಫೋಟದಿಂದ ಅಗ್ನಿ, ಆಪ್ ಮತ್ತು ಪೃಥಿವಿಗಳು ಉದಿಸಿದವು, ಆದರೆ ವಾಯುಗಳ ಆ ಮಹಾರಾಶಿಗೆ ಆಧಾರ ಒದಗಿಸುದುದು ಯಾವುದು ? ಆಕಾಶ ತತ್ತ್ವವಲ್ಲದೆ ಬೇರಾವುದೂ ಅಲ್ಲ. ಸಮಾಜ – ಸಂಪನ್ಮೂಲಗಳನ್ನು ಬಣ್ಣಿಸಲು ಶ್ರೀ ಸರಕಾರ ಅವರು ತಮ್ಮವೇ ಆದ ಪದಗಳನ್ನು ಬಳಸುತ್ತಾರೆ. ಅವುಗಳನ್ನು ಅವರು 'ಲೌಕಿಕ' ಮತ್ತು 'ಅತಿಲೌಕಿಕ' ಎಂದು ಕರೆಯುತ್ತಾರೆ. ಇವೆರಡೂ ಸಾಂಪ್ರದಾಯಕವಾಗಿ ಬಳಸುವ

ಪರ್ಯಾಯ ಶಬ್ದಗಳಿಗಿಂತ ಹೆಚ್ಚಿನ ವಿಸ್ತೃತ ಅರ್ಥ ನೀಡುತ್ತವೆ. ಲೌಕಿಕ ಸಂಪನ್ಮೂಲಗಳಲ್ಲಿ ವ್ಯಕ್ತಿಯ ದೈಹಿಕ ಶಕ್ತಿ ಹಾಗೂ ಬಂಡವಾಳಗಳಷ್ಟೇ ಅಲ್ಲದೆ ಸಮಾಜದ ಬಳಕೆಗೆ ಲಭ್ಯವಾಗುವ ಪಂಚ ಮಹಾಭೂತಗಳನ್ನೂ ಸಹ ಸೇರಿಸುತ್ತಾರೆ. ಇದಕ್ಕೆ ಪ್ರತಿಯಾಗಿ, ಅತಿಲೌಕಿಕ ಸಂಪನ್ಮೂಲಗಳಲ್ಲಿ ಮಾನವನ ಅರ್ಥಾತ್ ಬೌದ್ಧಿಕ ಬಂಡವಾಳ, ಅವಿಷ್ಕಾರಗಳು, ತಾಂತ್ರಿಕತೆ, ಇತಿಹಾಸ, ಸಾಹಿತ್ಯ, ಕಾವ್ಯ ಮತ್ತಿತ್ಯಾದಿ ಸೇರುತ್ತವೆ. ಹೀಗೆ, ಇಂದಿನ ವಿದ್ವಜ್ಜನರು ಗ್ರಹಿಸುವ ಸಾಮಾಜಿಕ ಸಂಪತ್ತಿನ ಗ್ರಹಿಕೆಗಿಂತ ಸರಕಾರರ ಗ್ರಹಿಕೆಯು ಹೆಚ್ಚು ವಿಸ್ತೃತವಾಗಿದೆ.

ಪ್ರಗತಿಶೀಲ ಉಪಯೋಗ ತತ್ತ್ವ :

ಶ್ರೀ ಸರಕಾರರು ಅಳವಡಿಸಿದ ಪ್ರಗತಿ ಮತ್ತು ಸಂಪನ್ಮೂಲಗಳ ಗ್ರಹಿಕೆಯು 'ಪ್ರಉತ'ದ ಕೇಂದ್ರವಸ್ತುವಾಗಿದೆ. ಕಾಲದ ಯಾವುದೇ ಕ್ಷಣದಲ್ಲಿ ಎಲ್ಲ ಸಾಮಾಜಿಕ ಸಂಪನ್ಮೂಲಗಳ ವಿನಿಯೋಗವು ಪ್ರಗತಿಯಲ್ಲಿ ಪರಿಣಮಿಸಬೇಕೆಂದು ಶ್ರೀ ಸರಕಾರ ಅವರು ಪ್ರತಿಪಾದಿಸುತ್ತಾರೆ. ಅದರಿಂದಾಗಿಯೇ 'ಪ್ರಗತಿಶೀಲ ಉಪಯೋಗ ತತ್ತ್ವ' ಎಂಬ ಅಭಿಧಾನ. ಆದರೆ ಶ್ರೀ ಸರಕಾರ ಅವರ ಅಭಿಪ್ರಾಯದಲ್ಲಿ ಪ್ರಗತಿಯು ಕೇವಲ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಆಗುವುದು. ವಿಜ್ಞಾನ ಹಾಗೂ ತಂತ್ರಜ್ಞಾನಗಳೇನೋ ಮಹತ್ವಪೂರ್ಣವಾಗಿವೆ. ಆದರೆ, ಅವುಗಳ ಅಪಾಯಕರ ಮಾಲಿನ್ಯದ ಉಗುಳುವಿಕೆಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಬೇಕು. ಆದ್ದರಿಂದ ಶ್ರೀ ಸರಕಾರಪ್ರಣೀತ ಪ್ರಗತಿ ಸಾಧಿಸಲು ಭೂಮಿ, ಶ್ರಮ ಹಾಗೂ ಖನಿಜ ಮತ್ತು ಮಾನವ ಸಂಪತ್ತು ಮುಂತಾದ ಸಾಂಪ್ರದಾಯಿಕ ಸಂಪನ್ಮೂಲಗಳನ್ನು ಬಳಸುವುದಷ್ಟೇ ಅಲ್ಲ; ವ್ಯಕ್ತಿಗತ ಹಾಗೂ ಸಮಾಜದ ಕಲಾತ್ಮಕ ಮತ್ತು ಅಧ್ಯಾತ್ಮಿಕದತ್ತ ಶಕ್ತಿಯೊಂದಿಗೆ ಎಲ್ಲ ಮೂಲ ತತ್ತ್ವಗಳನ್ನು ಬಳಸುವುದೂ ಸೇರಿದೆ.

ಪ್ರಗತಿ ಸಾಧನೆ ಹೇಗೆ ಮಾಡಬೇಕು ? ಇಲ್ಲಿ ಶ್ರೀ ಸರಕಾರರು ಪ್ರಉತ ಮೂಲ ತತ್ತ್ವಗಳೆಂದು ಕರೆಯುವ, ಐದು ಮಾರ್ಗದರ್ಶಿ ಸೂತ್ರಗಳನ್ನು ಪ್ರಸ್ತುತ ಪಡಿಸುತ್ತಾರೆ. ಅವುಗಳಲ್ಲಿ ಹಲವು ಸಮಾಜದ ಸ್ಥಿರ ರೂಪಕ್ಕೂ, ಇನ್ನು ಹಲವು ಅದರ ಚರ ಹೊಂದಾಣಿಕೆಗೂ ಸಂಬಂಧಿಸಿವೆ.

1958 ರಲ್ಲಿ ನೀಡಿದ ಉಪನ್ಯಾಸವೊಂದರಲ್ಲಿ ಶ್ರೀ ಸರಕಾರರು ಮೊತ್ತಮೊದಲು ಈ ತತ್ವಗಳ ರೂಪರೇಷೆ ಹಾಕಿದರು. ಅನಂತರ ಅವರು ಅವುಗಳಿಗೆ ಸಂಸ್ಕೃತದಲ್ಲಿ ಸೂತ್ರ ರೂಪ ನೀಡಿದರು. ಮತ್ತು ಇತ್ತೀಚೆಗೆ 'ಪ್ರಉತ ಇನ್ ಎ ನಟ್‌ಶೆಲ್'' (ಭಾಗ 1–13) ಎಂಬ ಶಿರೋನಾಮೆಯಡಿ ಚಿಕ್ಕ ಪುಸ್ತಕಗಳ ಮಾಲೆಯಲ್ಲಿ ಅವು ಪ್ರಸ್ತುತಪಡಿಸಲ್ಪಟ್ಟಿವೆ.

1) ಸಮಾಜಾದೇಶೇನ ವಿನಾ ಧನಸಂಚಯ : ಅಕರ್ತವ್ಯ :

ಯಾವುದೇ ವ್ಯಕ್ತಿಯು ಸಮಾಜದ ಸುಸ್ಪಷ್ಟ ಅನುಮತಿಯಿಲ್ಲದೆ, ಅರ್ಥಾತ್ ಅನುಮೋದನೆ ಇಲ್ಲದೆ, ಯಾವುದೇ ಭೌತಿಕ ಸಂಪತ್ತನ್ನು ಕೂಡಿಡತಕ್ಕದ್ದಲ್ಲ.

ಈ ತತ್ತ್ವದಲ್ಲಿ ಖಾಸಗಿ ಆಸ್ತಿಯ ಗ್ರಹಿಕೆಯೊಂದಿಗೆ ಪ್ರಉತ ಸಂಬಂಧ ಹೊಂದಿದೆ. ಖಾಸಗಿ ಆಸ್ತಿ ಎಂಬುದೇ ತಪ್ಪು ಪದ ಪ್ರಯೋಗ ಎನ್ನುತ್ತಾರೆ ಶ್ರೀ ಸರಕಾರ. ಯಾವನೂ ಜನ್ಮತಃ ಬರುವಾಗ ಏನನ್ನೂ ತರಲಿಲ್ಲ; ಮತ್ತು ಮರಣಕಾಲಕ್ಕೆ ತನ್ನೊಂದಿಗೆ ಏನನ್ನೂ ಒಯ್ಯುವದಿಲ್ಲ. ಈ ವಿಶ್ವ ಬ್ರಹ್ಮಾಂಡವು ಸರ್ವರ ಸಂಪತ್ತಾಗಿದೆ. ಇದನ್ನು ಭೋಗಿಸುವ ಅಧಿಕಾರ ಸಹ ಸರ್ವರಿಗೂ ಇದೆ. ಆದರೆ ಅಪವ್ಯಯ ಮಾಡುವ ಅಧಿಕಾರವು ಮಾತ್ರ ಯಾರಿಗೂ ಇಲ್ಲ. ಗಾಳಿ ಮತ್ತು ಬೆಳಕನ್ನು ಸರ್ವರ ಬಳಕೆಗೆ ಮುಕ್ತವಿಡಲಾಗಿದೆ. ಅದರಿಂದ ಅವುಗಳು ಸಮಾಜದ ಸೊತ್ತಾಗಿವೆ. ಅಂದ ಮೇಲೆ, ಗಾಳಿ, ಬೆಳಕುಗಳ ರೂಪಾಂತರಗಳೇ ಆದ ಘನವಸ್ತುಗಳನ್ನೇಕೆ ಸಂಯುಕ್ತ ಒಡೆತನಕ್ಕೆ ಬಿಡಕೂಡದು ?

ಹೀಗೆ, ಖಾಸಗಿ ಆಸ್ತಿಗೆ ಇಲ್ಲವೆ ಖಾಸಗಿ ಅನುವಂಶಿಕ ಹಕ್ಕಿಗೆ ಯಾವುದೇ ನಿಸರ್ಗದತ್ತ ಅರ್ಥಾತ್ ಮೌಲಿಕ ಮಾನವೀಯ ಹಕ್ಕು ಇಲ್ಲ. ಆದರೂ ಸಹ, ಸಮಾಜವು ಉಚಿತವೆಂದು ಪರಿಗಣಿಸಿದ ಪ್ರಸಂಗಗಳಲ್ಲಿ, ಭೌತಿಕ ಸಂಪತ್ತಿನ ಖಾಸಗಿ ಸಂಗ್ರಹವನ್ನು ಅನುಮತಿಸಬಹುದು. ಆದ್ದರಿಂದ ಸಮಾಜದ ಅನುಮತಿ ಇಲ್ಲದೆ ಯಾವುದೇ ಸಂಪತ್ತಿನಲ್ಲಿ ಕೂಡಿಡುವ ಅವಕಾಶವು ಯಾವ ವ್ಯಕ್ತಿಗೂ ಸಲ್ಲದು.

ಸಮಾಜವು ಖಾಸಗಿ ಆಸ್ತಿಗೆ ಮನ್ನಣೆ ನೀಡಿದ ಕಾರಣ, ಪ್ರಪಂಚದಲ್ಲಿ ಅನೇಕ ಅಸಮಾನತೆ ಹಾಗೂ ಅನ್ಯಾಯಗಳು ಉಂಟಾಗಿವೆ. ಇದು ಇಂದಿಗೂ ಸತ್ಯ; ಹಿಂದೆಯೂ ಸತ್ಯ. ಖಾಸಗಿ ಆಸ್ತಿಗೆ ರಾಜ್ಯಮನ್ನಣೆ ಇರುವ ಕಾರಣವೇ ಸಿರಿವಂತ ಬಂಡವಾಳಶಾಹೀ ದೇಶಗಳಲ್ಲಿ ಬಲ್ಲಿದರೊಂದಿಗೆ ಸಾಕಷ್ಟು ಬಡತನವೂ ಉಳಿದಿದೆ. ಇದುವೇ ಬಡ ಅನಭಿವೃದ್ಧ ದೇಶಗಳ ಪಾಡೂ ಆಗಿದೆ. ಸಾಲದೆ, ಅವುಗಳ ತೈಲ ಹಾಗೂ ಖನಿಜ ಸಂಪತ್ತುಗಳ ಮೇಲೆ ಮೈ ಕಾಯಿಸಿಕೊಳ್ಳುವ ದೇಶಗಳ ಪಾಡು ಸಹ ಬೇರೆಯೇನಲ್ಲ. ಆಸ್ತಿ ಕುರಿತ ಈ ವಿಚಾರಲಹರಿಯೇ, ಬಡತನದ ಬವಣೆಗೀಡಾದ ರಾಷ್ಟ್ರಗಳಿಗೆ ಬಂಡವಾಳ ಹಾಗೂ ತಂತ್ರಜ್ಞಾನಗಳ ಹಸ್ತಾಂತರಕ್ಕೆ ಸಿರಿವಂತ ದೇಶಗಳು ಹೇರುವ ಕಟ್ಟುಕರಾರುಗಳ ಆತಂಕಕ್ಕೆ ಕಾರಣವಾಗಿದೆ. ಹೀಗೆ, ಖಾಸಗಿ ಆಸ್ತಿಯ ಗ್ರಹಿಕೆಯು ಯುಗಾಂತರದಿಂದ ಅನೇಕ ಕ್ರೌರ್ಯಗಳಿಗೆ ಆಧಾರವಾಗಿದೆ. ಇದರಿಂದ ಕೆಲವು ವ್ಯಕ್ತಿಗಳು ಮತ್ತು ರಾಷ್ಟ್ರಗಳು ದುಂದುಗಾರವಾಗಿದ್ದು, ವಿಶಾಲ ಮಾನವ ಜನಸಾಗರವು ಸಾಕಷ್ಟು ಪೌಷ್ಟಿಕ ಅನ್ನವಿಲ್ಲದೆ ಕೊರಗುತ್ತಿದೆ. ಅಷ್ಟೇಕೆ; ವರುಷದಿಂದ ವರುಷಕ್ಕೆ ಕೂಳಿಲ್ಲದೆ ಸಾವನ್ನಪ್ಪುತ್ತಿದೆ.

ಖಾಸಗಿ ಒಡೆತನದ ದೃಷ್ಟಿಕೋನದೊಂದಿಗೆ ಸರಕಾರಿ ಒಡೆತನದ ದೃಷ್ಟಿಕೋನವು ಸ್ಪರ್ಧಿಗಿಳಿದಿದೆ. ಸರಕಾರಿ ಒಡೆತನವನ್ನು ಸಮತಾವಾದಿ ಮತ್ತು ಕೆಲವು ಪ್ರಜಾಸತ್ತಾತ್ಮಕ ದೇಶಗಳು ಎತ್ತಿ ಹಿಡಿದಿವೆ. ಖಾಸಗಿ ಆಸ್ತಿಯು ತಪ್ಪು ಹೆಸರೆನಿಸಿದರೆ ಸರಕಾರಿ ಆಸ್ತಿ ಎನ್ನುವುದೂ ಸಹ ತಪ್ಪು ಹೆಸರೇ ಸರಿ. ಮಿತಿಯಿಲ್ಲದ ಆಸ್ತಿಯ ಒಡೆತನವು ವ್ಯಕ್ತಿಗಳಿಗೆ ನಿಷಿದ್ಧವಾದರೆ, ಸರಕಾರಕ್ಕೂ ಅದೇ ನ್ಯಾಯವು ಅನ್ವಯಿಸುತ್ತದೆ. ಸಮತಾವಾದಿ ರಾಷ್ಟ್ರಗಳಲ್ಲಿ ಸರಕಾರ ಇಲ್ಲವೆ, ಹಾಗೆ ತಿಳಿಯುವುದಾದರೆ, ಸಮಾಜವೇ ಎಲ್ಲದರ ಒಡೆತನ ಹೊಂದಿರುತ್ತದೆ. ಮಾಲಿಕನೇ ಇಲ್ಲ; ಎಲ್ಲರೂ ಸಂಬಳ ಪಡೆಯುವವರಷ್ಟೇ. ಇದು ಇನ್ನೊಂದು ಅತಿರೇಕ. ಮತ್ತು ಅಸೀಮಿತ ಖಾಸಗಿ

ಆಸ್ತಿಯ ವಿಚಾರದಂತೆಯೇ ಇದೂ ಕೂಡ ಮಾನವ ಪ್ರಗತಿಗೆ ಮಾರಕವಾಗಿದೆ. ಏಕೆಂದರೆ, ಸರಕಾರಿ ಒಡೆತನವು ಕಠಿಣ ಪರಿಶ್ರಮವ ಎಲ್ಲ ಪ್ರಚೋದಕಗಳನ್ನು ಹಾಳು ಮಾಡುತ್ತದೆ. ಇಲ್ಲವೆ ಸಂತತ ಪರಿವರ್ತನಶೀಲ ಪ್ರಪಂಚದೊಂದಿಗೆ ಸರಿದೂಗುವ ನೂತನ ಆಲೋಚನೆಗಳ ಅಳವಡಿಕೆಗೂ ಅಡ್ಡಿಯಾಗುತ್ತದೆ. ಅಷ್ಟೇಕೆ? ಅದು ಮತ್ತನೇಕ ವೈಯಕ್ತಿಕ ಸ್ವಾತಂತ್ರ್ಯಗಳನ್ನು ಸಹ ಹಾಳು ಮಾಡುತ್ತದೆ. ಭವಿಷ್ಯವು ಅನಿಶ್ಚಿತ. ಆದ್ದರಿಂದ ಅನೇಕ ಜನರು ಕಷ್ಟಕಾಲಕ್ಕಾಗಿ ಉಳಿತಾಯ ಮಾಡಬಯಸುತ್ತಾರೆ. ಈ ಒತ್ತಾಸೆಯನ್ನು ಅದುಮುವುದು ಸಾಧುವೂ ಅಲ್ಲ; ಸಾಧ್ಯವೂ ಅಲ್ಲ. ಪ್ರತಿ ವ್ಯಕ್ತಿಯನ್ನು ಅವನೆಲ್ಲ ಆಸ್ತಿಯಿಂದ ವಂಚಿತನನ್ನಾಗಿ ಮಾಡುವುದು ಎಷ್ಟು ಕಠಿಣವೆಂಬುದನ್ನು ಎಲ್ಲ ಸಮತಾವಾದಿ ರಾಷ್ಟ್ರಗಳ ಪೂರ್ವಾನುಭವದಿಂದ ತಿಳಿಯಬಹುದು. ಈಗ ಕೇವಲ ಸೀಮಿತ ಪ್ರಮಾಣದಲ್ಲಾದರೂ ಸರಿಯೇ, ಸಂಚಯದ ಈ ನೈಸರ್ಗಿಕ ಒತ್ತಾಸೆಗೆ, ಒಂದು ವೇಳೆ ಅನುಮತಿ ನೀಡಿದ್ದರೆ, ಆಸ್ತಿ ಹಿಡುವಳಿದಾರರ ಮೇಲೆ ಛೂ ಬಿಟ್ಟ ದೊಡ್ಡ ದೊಡ್ಡ ಸ್ಥಿತ್ಯಂತರಗಳನ್ನು ತಪ್ಪಿಸಬಹುದಿತ್ತು.

ಉಭಯತಾಪಿ ಅತಿರೇಕಗಳ ಮಧ್ಯೆ ಪ್ರಉತ ಒಪ್ಪಂದವೇರ್ಪಡಿಸುತ್ತದೆ. ಪ್ರಚೋದನೆ ಹಾಗೂ ಪ್ರೇರಣೆಗಳ ದೃಷ್ಟಿಯಿಂದ, ಹಲವು ವ್ಯಕ್ತಿಗಳಿಗೆ ಸ್ವಲ್ಪು ಸಂಪತ್ತು ಸಂಚಯಿಸಲು ಅನುವು ಮಾಡಬಹುದು. ಆದರೆ ಈ ಸಂಚಯವು ಅಸೀಮಿತವಾಗಿರಕೂಡದು. ಇಲ್ಲವಾದರೆ, ಭ್ರಷ್ಟಾಚಾರ, ಬಡತನ, ವೈಯಕ್ತಿಕ ಈರ್ಷೆ, ಅಪರಾಧ ಹಾಗೂ ಸಹವರ್ತಿ ಸಮಸ್ಯೆಗಳನ್ನುಂಟು ಮಾಡುವ ಅತಿಶಯ ಜಡವಾದ ಇತ್ಯಾದಿಗಳಲ್ಲಿ ಪರಿಣಮಿಸುವ, ಆದಾಯದ ಬೃಹತ್ ಏರುಪೇರುಗಳುಂಟಾಗುವವು. ಏಕೆಂದರೆ, ಗರಿಷ್ಠ ಪ್ರಮಾಣದ ಜನತೆಗೆ ಗರಿಷ್ಠ ಪ್ರಯೋಜನಗಳ ವಿತರಣೆಗೆ ಅಡ್ಡಿಯಾಗುವಂತೆ ಸಿರಿವಂತರು ಸಮಾಜದ ಮೇಲೆ ತಮ್ಮ ಪ್ರಭಾವ ಬೀರುತ್ತಾರೆ.

2) ಸ್ಥೂಲ ಸೂಕ್ಷ್ಮ ಕಾರಣೇಷು ಚರಮೋಪಯೋಗ : ಪ್ರಕರ್ತವ್ಯ: ವಿಚಾರಸಮರ್ಥಿತಂ ವಂಟನಂ ಚ

(ಸ್ಥೂಲ ಸೂಕ್ಷ್ಮ ಹಾಗೂ ಕಾರಣ ಜಗತ್ತಿನಲ್ಲಿ ಅಡಗಿರುವ ಸಕಲ ಸಂಪತ್ತಿನ ಗರಿಷ್ಠ ಬಳಕೆಯಾಗಬೇಕು ಮತ್ತು ವಿವೇಚನಾಯುತ ವಿತರಣೆಯಾಗಬೇಕು.)

ಈ ತತ್ತ್ವವು ದ್ವಿಮುಖಿಯಾಗಿದೆ – ಗರಿಷ್ಠ ಬಳಕೆ ಮತ್ತು ವಿವೇಚನಾಯುತ ವಿತರಣೆ. ಗರಿಷ್ಠ ಬಳಕೆಯೆಂದರೆ, ಆಯಾ ಕಾಲದಲ್ಲಿ ಸಮಾಜಕ್ಕೆ ಲಭ್ಯವಿರುವ ಭೌತಿಕ ಮತ್ತು ಅಧಿಭೌತಿಕ ಸಂಪನ್ಮೂಲಗಳನ್ನು ಗರಿಷ್ಠ ಸಂಖ್ಯೆಯ ಜನರಿಗೆ ಗರಿಷ್ಠ ಸಮಾಧಾನ ನೀಡುವಂಥ ಬಳಕೆಯಾಗಿದೆ. ಇದರ ಇಂಗಿತಾರ್ಥವೆಂದರೆ, ಕೆಲಸ ಮಾಡಲು ಶಕ್ತನಾದ ಪ್ರತಿಯೊಬ್ಬನಿಗೂ ಉದ್ಯೋಗಾವಕಾಶವನ್ನು ಒದಗಿಸಲೇಬೇಕು ಮತ್ತು ಉತ್ಪಾದನಾ ತಾಂತ್ರಿಕತೆಗಳು ಅತ್ಯಾಧುನಿಕವಾಗಿರಬೇಕು ಇಲ್ಲವೆ ಸಾಧ್ಯವಿದ್ದಷ್ಟು ಸಮರ್ಥವಾಗಿರಬೇಕು. ಈ ಎರಡು ಗುರಿಗಳ ಮಧ್ಯೆ ಘರ್ಷಣೆ ಇರಬಹುದು. ಒಂದು ವೇಳೆ, ಅತ್ಯಂತ ಸಮರ್ಥ ಉತ್ಪಾದನಾ ಪದ್ಧತಿಗಳು ಅತಿ ಹೆಚ್ಚಾಗಿ ಬಂಡವಾಳನ್ನಾಧರಿಸಿದ್ದರೆ, ಅವುಗಳ ಬಳಕೆಯು ಸಕಲ ಶಕ್ತ

ವ್ಯಕ್ತಿಗಳಿಗೆ ಸೂಕ್ತ ಹುದ್ದೆಗಳನ್ನು ಒದಗಿಸುವ ಗುರಿಯೊಂದಿಗೆ ಘರ್ಷಿಸಬಹುದು. ಇಂಥ ಪ್ರಸಂಗಗಳಲ್ಲಿ, ಉದ್ಯೋಗ ಒದಗಿಸುವ ಉದ್ದೇಶಕ್ಕೆ, ಅತ್ಯಂತ ಸಮರ್ಥ ತಂತ್ರಕ್ಕಿಂತ ಅಧಿಕ ಪ್ರಾಶಸ್ತ್ಯವಿರತಕ್ಕದ್ದು. ಇಲ್ಲವಾದರೆ ಅತ್ಯಂತ ಬಂಡವಾಳಾಧಾರಿತ ತಾಂತ್ರಿಕತೆಯನ್ನು ಬಳಸಿದಾಗ, ಉದ್ದಿಮೆಯ ಶ್ರಮಜೀವಿಗಳಿಗೆ ಹೆಚ್ಚಿನ ವಿರಾಮ ನೀಡಬೇಕು. ಹಾಗಾದರೆ, ಸರ್ವರಿಗೂ ಉದ್ಯೋಗಾವಕಾಶ ದೊರಯುತ್ತದೆ.

ಭೌತಿಕವಾದಿಗೆ ಹೆಚ್ಚುವರಿ ವಿರಾಮವೆಂದರೆ, ಕಾಲಹರಣವೆನಿಸಬಹುದು. ಆದರೆ ಮಾನಸಿಕ ಸಮಾಧಾನವನ್ನು ಗರಿಷ್ಠ ಪ್ರಮಾಣದಲ್ಲಿ ಅರಸುವವನಿಗೆ ವಿರಾಮವು ಅತಿ ಸ್ವಾಗತಾರ್ಹವಾಗಿದೆ. ಏಕೆಂದರೆ, ಆಗ ಅವನು ಅಧ್ಯಾತ್ಮಿಕ ಅಭ್ಯಾಸಗಳಿಗೆ ಸ್ವಲ್ಪು ಸಮಯ ನೀಡಬಲ್ಲನು. ಇದರ ಫಲವಾಗಿ ಅವನ ಸಂತೋಷವೂ ಹೆಚ್ಚುತ್ತದೆ. ಅಂದ ಮೇಲೆ ಗರಿಷ್ಠ ಉದ್ಯೋಗಾವಕಾಶ ಮತ್ತು ಸಮರ್ಥ ಹಾಗೂ ಬಂಡವಾಳಾಧಾರಿತ ಉತ್ಪಾದನಾ ಪದ್ಧತಿಗಳೆಂಬ ಉಭಯ ಗುರಿಗಳ ಮಧ್ಯೆ ಯಾವುದೇ ಘರ್ಷಣೆ ಇರದು. ಆದರೂ ಸಹ, ಗರಿಷ್ಠ ಉಪಯೋಗದ ದೃಷ್ಟಿಯಿಂದ ಲಭ್ಯವಿರುವ ವಿವಿಧ ಪರ್ಯಾಯ ಪದ್ಧತಿಗಳನ್ನು ತೂಗಿ ನೋಡಬೇಕಾಗುತ್ತದೆ. ಈ ಪ್ರಶ್ನೆಯನ್ನು ಮುಂದೆ ಪ್ರಉತದ ನಾಲ್ಕನೇ ತತ್ತ್ವದಡಿ ಪರಿಗಣಿಸೋಣ.

ಸಾಮಗ್ರಿಗಳನ್ನು ಅತ್ಯಂತ ಸಮರ್ಥ ತಾಂತ್ರಿಕತೆಯಿಂದ ಉತ್ಪಾದಿಸುವಾಗ, ಆದಾಯದ ವಿತರಣೆಯು ಸಮಾಜದ ಸದಸ್ಯರ ಮಧ್ಯೆ ವಿವೇಚನಾಯುತವಾಗಿ ನಡೆಯತಕ್ಕದ್ದು. ಪ್ರಥಮ ಸೂತ್ರದಲ್ಲಿ ಹೇಳಿರುವಂತೆ, ಪ್ರಉತ, ಖಾಸಗಿ ಆಸ್ತಿಯ ನಿರ್ಮೂಲನೆಯನ್ನು ಪ್ರತಿಪಾದಿಸುತ್ತಿರುವುದಿಲ್ಲ. ಅಷ್ಟೇ ಏಕೆ, ಆದಾಯದ ತೀರ ಸಮಾನ ವಿವರಣೆಯನ್ನೂ ಸಹ ಅದು ಪ್ರತಿಪಾದಿಸುತ್ತಿಲ್ಲ. ಪ್ರತಿಯಾಗಿ, ವಿವೇಚನಾಯುತ ವಿತರಣೆಗೆ ಅದು ಕರೆ ನೀಡುತ್ತದೆ. ಅರ್ಥಾತ್ ಗರಿಷ್ಠ ಬಳಕೆಯ ಕಲ್ಪನೆಯೊಂದಿಗೆ ಘರ್ಷಣೆಗಿಳಿಯದೆ, ಅದನ್ನು ಮುಂದುವರಿಸುವಂಥ ವಿತರಣೆ ವ್ಯವಸ್ಥೆ ಬೇಕು. ಈ ರೀತಿಯ ವಿತರಣೆಯು ಮಾತ್ರ ಪ್ರಾಪಂಚಿಕ ಪ್ರಚೋದನೆಯ ವ್ಯವಸ್ಥೆಯೊಂದಿಗೆ ಮೇಳವಿಸುತ್ತದೆ. ಹೀಗಿಲ್ಲವಾದರೆ, ಜನರು ಉತ್ಪಾದನಾ ಪ್ರಕ್ರಿಯೆಯಲ್ಲಿ ತಮ್ಮಲ್ಲಿರುವ ಅತ್ಯುತ್ತಮವಾದುದನ್ನು ನೀಡಲಾರರು.

'ವೈಚಿತ್ರ್ಯ ಪ್ರಾಕೃತ ಧರ್ಮ ಸಮಾನಂ ನ ಭವಿಷ್ಯತಿ' ಅರ್ಥಾತ್ ವೈಚಿತ್ರ್ಯವೇ ಪ್ರಕೃತಿಯ ಧರ್ಮ, ಸೃಷ್ಟ ಜಗತ್ತಿನ ಯಾವ ಎರಡು ವಸ್ತುಗಳೂ ಸಮಾನವಾಗಿಲ್ಲ ಎಂದು ಶ್ರೀ ಸರಕಾರರ ಮತ. ಕೇವಲ ಪ್ರಕೃತಿಯ ಅವ್ಯಕ್ತ ಅವಸ್ಥೆಯಲ್ಲಿ ಮಾತ್ರ ಎಲ್ಲವನ್ನೂ ಸಮಾನಗೊಳಿಸ ಬಹುದು. ಅಂದರೆ ಸರ್ವಭೂತಗಳನ್ನು ಶಕ್ತಿರಾಶಿಯಲ್ಲಿ ಪರಿವರ್ತಿಸಿದಾಗ ಮಾತ್ರ ಸಮಾನತೆ ಸಾಧ್ಯ. ಹೀಗೆ ಪೂರ್ಣ ಸಮಾನತೆ ಎಂದರೆ ಸರ್ವ ಕ್ರಿಯೆಗಳ ಪೂರ್ಣ ನಿಲುಗಡೆ – ಅಂದರೆ ವಿಶ್ವದ ಸಾವು. ಆದ್ದರಿಂದ ಸಮಾಜವು ಪೂರ್ಣ ಸಮಾನತೆಗೆ ಎಂದೂ ಯತ್ನಿಸಕೂಡದು. ಏಕೆಂದರೆ, ಇಂಥ ಪ್ರಯತ್ನಗಳು ಅಪಯಶಸ್ಸಿನಲ್ಲಿ ಪರ್ಯವಸಾನವಾಗುವುದುಂಟು. ಮಾಡಬೇಕಾದುದಿಷ್ಟೇ; ಸರ್ವರಿಗೂ ಸಮಾನಾವಕಾಶಗಳನ್ನು ಒದಗಿಸಬೇಕು. ಹೀಗಾದರೆ, ಯಾವನೊಬ್ಬನು ಅನ್ಯಾಯವಾಗಿ ಇನ್ನೋರ್ವನಿಗಿಂತ ಹೆಚ್ಚಿನ ಸೌಕರ್ಯ ಹೊಂದಕೂಡದು. ಇದಲ್ಲದೆ, ಅದು ತನ್ನೆಲ್ಲ ಸದಸ್ಯರಿಗೆ ಕನಿಷ್ಠ ಅಗತ್ಯಗಳನ್ನು ಒದಗಿಸತಕ್ಕದ್ದು. ಅನಂತರ ಹೀಗೆ

ಕಾಲಕ್ರಮೇಣ ಕನಿಷ್ಠ ಜೀವನ ಮಟ್ಟವನ್ನು ಎತ್ತರಿಸಲು ಯತ್ನಿಸಬೇಕು. ಆದ್ದರಿಂದ, ವಿವೇಚನೆಯುತ ಆದಾಯ ವಿತರಣೆಯೆಂದರೆ 1) ಅನ್ನ, ವಸ್ತ್ರ, ವಾಸಗೃಹ, ಶಿಕ್ಷಣ ಮತ್ತು ಚಿಕಿತ್ಸೆಗಳನ್ನು ಸಮಾಜದಲ್ಲಿ ಪ್ರತಿಯೊಬ್ಬನೂ ಪಡೆಯುವಂತೆ ನಿಖರವಾದ ಸಂಬಳ ಪ್ರಮಾಣವನ್ನು ನಿರ್ಧರಿಸಬೇಕು. ಮತ್ತು 2) ವ್ಯಕ್ತಿಯ ಉಳಿತಾಯವು ಕನಿಷ್ಠ ಜೀವನಮಟ್ಟ ಕಾಯ್ದುಕೊಂಡ ಬಳಿಕ ಉಳಿಯುವ ಪಾಲಿಗೆ ಸಮನಾಗಿರಬೇಕು. ಕೊನೆಯದಾಗಿ, ಕೆಲಸ ಮಾಡಲು ಅಶಕ್ತರಾದವರಿಗೂ – ಅಂಗಹೀನರಿಗೂ ಸಹ ಅವರ ಕನಿಷ್ಠ ಅಗತ್ಯಗಳನ್ನು ಒದಗಿಸಬೇಕು. ಇನ್ನು ವಿಶೇಷ ಕೌಶಲ ಮತ್ತು ಶ್ರೇಷ್ಠತೆಗಳುಳ್ಳವರು ಉಳಿತಾಯದ ಆದಾಯವನ್ನು ಹಂಚಿಕೊಳ್ಳಲು ಅವಕಾಶವಿರಬೇಕು.

3) ವ್ಯಷ್ಟಿ – ಸಮಷ್ಟಿ ಶಾರೀರಿಕ ಮಾನಸಾಧ್ಯಾತ್ಮಿಕ ಸಂಭಾವನಾಯಾಂ ಚರಮೋಪಯೋಗಶ್ಚ

(ಮಾನವ ಸಮಾಜದ ವ್ಯಷ್ಟಿ ಹಾಗೂ ಸಮಷ್ಟಿ ದೇಹಗಳ ಶಾರೀರಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಸಂಭಾವನೆಗಳ ಚರಮ ಉಪಯೋಗವಾಗತಕ್ಕದ್ದು.)

ಈ ಮುಂಚಿನ ತತ್ತ್ವದಲ್ಲಿ ಶ್ರೀ ಸರಕಾರರು 'ಲೌಕಿಕ' ಮತ್ತು 'ಅತಿಲೌಕಿಕ' ಪದಗಳನ್ನು ಭೌತಿಕ ಮತ್ತು ಬೌದ್ಧಿಕ ಸಂಪತ್ತು ಸೂಚಿಸಲು ಬಳಸಿದ್ದಾರೆ. ತೃತೀಯ ತತ್ತ್ವದಲ್ಲಿ ಅವೇ ಗ್ರಹಿಕೆಗಳನ್ನು ಸೂಚಿಸಲು ಶಾರೀರಿಕ ಮತ್ತು ಮಾನಸಿಕ ಶಬ್ದಗಳನ್ನು ಬಳಸಿದ್ದಾರೆ. ಏಕೆ? ಅವುಗಳಲ್ಲಿಯ ಅಂತರವೇನು ?

ಈ ಎರಡು ತತ್ತ್ವಗಳಲ್ಲಿ ವಿಭಿನ್ನ ಪದ ಪ್ರಯೋಗ ಮಾಡಿರುವುದಕ್ಕೆ ಅವುಗಳ ಅನ್ವಯಾವಕಾಶವೇ ಕಾರಣ. ತೃತೀಯ ತತ್ತ್ವವು ವ್ಯಷ್ಟಿ ಸತ್ತೆಗಳಿಗೆ, ವ್ಯಕ್ತಿಗಳು ಮತ್ತಿವರ ಸಂಘಟನೆಗಳಿಗೆ, ಇಲ್ಲವೆ ಶ್ರೀ ಸರಕಾರ ಅವರೇ ಹೇಳುವಂತೆ "ವ್ಯಷ್ಟಿ ಮತ್ತು ಸಮಷ್ಟಿ ದೇಹಗಳಿಗೆ" ಅನ್ವಯಿಸುತ್ತದೆ. ಪ್ರತಿಯಾಗಿ, ದ್ವಿತೀಯ ತತ್ತ್ವವು ಬ್ರಹ್ಮಾಂಡೀಯ ಗ್ರಹಿಕೆಗಳಿಗೆ ಸಂಬಂಧಿಸಿದೆ. ಮತ್ತು ಇಡೀ ವಿಶ್ವದಲ್ಲಿ ಲಭ್ಯವಿರುವ ಸಕಲ ಪ್ರಕಾರದ ಸಂಪನ್ಮೂಲಗಳನ್ನು ಒಳಗೊಳ್ಳುತ್ತದೆ.

ತಮ್ಮೆಲ್ಲ ಬರಹಗಳಲ್ಲಿ ಸರಿಯಾದ ಶಬ್ದಗಳ ಬಳಕೆ ಕುರಿತು ಶ್ರೀ ಸರಕಾರ ತುಂಬಾ ಜಾಗರೂಕತೆ ವಹಿಸುತ್ತಾರೆ. ಅದೇ ಪ್ರವೃತ್ತಿಯು ಪ್ರಉತ ತತ್ತ್ವಗಳನ್ನು ಕಾಳಜಿಪೂರ್ವಕ ಸೂಕ್ತ ಶಬ್ದಾವಳಿಯಲ್ಲಿ ಅಭಿವ್ಯಕ್ತಿಸಿರುವುದು ಕಂಡು ಬರುತ್ತದೆ. ಹೀಗೆ, ಪಿಂಡಾಂಡೀಯ ಮಟ್ಟದಲ್ಲಿ, ಸ್ಥೂಲ ಮತ್ತೂ ಸೂಕ್ಷ್ಮ ಸಂಪನ್ಮೂಲಗಳನ್ನು ಶಾರೀರಿಕ ಮತ್ತು ಮಾನಸಿಕ ಶಬ್ದಗಳ ಮೂಲಕ ಸೂಚಿಸಿದ್ದು, ಅವೇ ಸಂಪನ್ಮೂಲಗಳನ್ನು ಬ್ರಹ್ಮಾಂಡೀಯ ಮಟ್ಟದಲ್ಲಿ, ಲೌಕಿಕ ಮತ್ತು ಅತಿಲೌಕಿಕ ಪದಗಳಿಂದ ಬಣ್ಣಿಸಲಾಗಿದೆ.

ತೃತೀಯ ತತ್ತ್ವದಲ್ಲಿ ವ್ಯಷ್ಟಿಹಿತ ಮತ್ತು ಸಮಷ್ಟಿ ಹಿತಗಳ ಮಧ್ಯೆ ವ್ಯಷ್ಟಿ ಆಸಕ್ತಿ ಹಾಗೂ ಸಮಷ್ಟಿ ಆಸಕ್ತಿಗಳ ಮಧ್ಯೆ ಕೊಂಡಿಯನ್ನು ಸ್ಥಾಪಿಸಲಾಗಿದೆ. ಸಮಷ್ಟಿಯ ಕಲ್ಯಾಣವು

ವ್ಯಷ್ಟಿಯಲ್ಲಿ ಮತ್ತು ವ್ಯಷ್ಟಿಯ ಕಲ್ಯಾಣವು ಸಮಷ್ಟಿಯಲ್ಲಿ ಇದೆ. ಉಭಯತಾಪಿ ಸತ್ಯಗಳ ಮೇಲೆ ಒತ್ತು ಕೊಡಬೇಕು. ಒಂದರ ಉಪೇಕ್ಷೆಯಿಂದರೆ ಇನ್ನೊಂದರ ಪೇಚು. ಎಲ್ಲ ಜನರಿಗೂ ತಮ್ಮ ತಮ್ಮ ಶಾರೀರಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಸಂಭಾವನೆಗಳನ್ನು ಗರಿಷ್ಠೀಕರಿಸಿಕೊಳ್ಳಲು ಬೇಕಾದ ಮಾರ್ಗದರ್ಶನ ನೀಡಬೇಕು. ಹಾಗೂ ಅಂಥ ಅನುಕೂಲ ಅವಕಾಶ ಕಲ್ಪಿಸಬೇಕು. ಅದೇ ಕಾಲಕ್ಕೆ ಸಮಾಜವನ್ನು ಸಹ, ನೈತಿಕತೆ ಹಾಗೂ ಪ್ರಾಮಾಣಿಕತೆಗಳನ್ನು ಆಧರಿಸಿ ನಡೆಸಬೇಕು. 'ಸಮಷ್ಟಿ ಕಲ್ಯಾಣವು ವ್ಯಷ್ಟಿಯಲ್ಲಿ ಮತ್ತು ವ್ಯಷ್ಟಿ ಕಲ್ಯಾಣವು ಸಮಷ್ಟಿಯಲ್ಲಿದೆ. ಈ ಮಾತನ್ನು ಮರೆತು ನಡೆದರೆ ಕೆಲಸವಾಗುವಂತಿಲ್ಲ'' (2, ಪು. 54) ಎನ್ನುತ್ತಾರೆ ಶ್ರೀ ಸರಕಾರ. ವೈಯಕ್ತಿಕ ಹಿತವನ್ನು ಕಡೆಗಣಿಸಿದರೆ ಸಾಮಾಜಿಕ ಕಲ್ಯಾಣದ ಗರಿಷ್ಠೀಕರಣ ಸಾಧ್ಯವಿಲ್ಲ. ಈ ಕಾರಣ, ಪ್ರತಿಯೋರ್ವನಿಗೆ ವಿಚಾರ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಬೇಕು, ಪ್ರತಿಯೊಬ್ಬನಿಗೆ ವಿರಾಮವನ್ನೊಳಗೊಂಡಂತೆ, ಕನಿಷ್ಠ ಶಾರೀರಿಕ ಅಗತ್ಯಗಳನ್ನು ಒದಗಿಸಬೇಕು. ಹೀಗಾದರೆ, ಅವನು ಬೌದ್ಧಿಕ ಮತ್ತು ಅಧ್ಯಾತ್ಮಿಕ ವೃತ್ತಿಗಳಿಗಾಗಿ ಸಮಯ ನೀಡಲು ಸಾಧ್ಯವಾಗುತ್ತದೆ. ಆದರೆ, ವೈಯಕ್ತಿಕ ಕಲ್ಯಾಣವು ಸರಕಾರ ಅಥವಾ ಸಮಷ್ಟಿ ದೇಹದ ಸ್ವರೂಪವನ್ನು ಸಹ ಅವಲಂಬಿಸಿರುತ್ತದೆ. ಒಂದು ವೇಳೆ ಸರಕಾರವು ಭ್ರಷ್ಟ ಹಾಗೂ ಅಪ್ರಾಮಾಣಿಕವಾಗಿದ್ದರೆ, ವ್ಯಕ್ತಿಗಳೂ ಸಹ, ಸಾಮಾನ್ಯವಾಗಿ ಭ್ರಷ್ಟರೂ ಮತ್ತು ಅಪ್ರಾಮಾಣಿಕರೂ ಆಗಿರುತ್ತಾರೆ. ಆದ್ದರಿಂದ ವ್ಯಷ್ಟಿಹಿತವು ಸಮಷ್ಟಿ ಹಿತದಲ್ಲಿ ಅಡಗಿದೆ; ಅದೇ ರೀತಿ, ಸಮಷ್ಟಿ ಹಿತವು ವ್ಯಷ್ಟಿ ಹಿತದಲ್ಲಿ ಅಡಗಿದೆ.

ಸಮಷ್ಟಿ ದೇಹವೆಂದರೇನು ? ಸರಕಾರವು ಪ್ರಾಮಾಣಿಕವಾಗಿ ಉಳಿಯಬೇಕಾದರೆ, ಆಡಳಿತದ ಮೇಲೆ ಕಾವಲು ಗೆಯ್ಯುವ ಇನ್ನೊಂದು ಸಂಸ್ಥೆಯು ಇರಬೇಕಾಗುತ್ತದೆ ಎಂದು ಪ್ರಉತ ಸೂಚಿಸುತ್ತದೆ. ಈ ಓಂಬಡ್ಸಮನ್ ಮಾದರಿಯ ಸಂಸ್ಥೆಯೇ ಶ್ರೀ ಸರಕಾರರ ಸಂಘಟನೆ. ಇದು ಕೇವಲ ನೈತಿಕವಾಗಿ ಹಾಗೂ ಅಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಿದ ಸಮಾಜ ಸದಸ್ಯರಿಂದ ರಚಿತವಾಗಿರಬೇಕು. ನಿಃಸ್ವಾರ್ಥಿಗಳು ಹಾಗೂ ಧೀರರಾದವರು, ತಮ್ಮ ಬೇಳೆ ಬೇಯಿಸಿಕೊಳ್ಳುವ ರಾಜಕಾರಣಿಗಳ ಠಕ್ಕತನವನ್ನು ಒಳಹೊಕ್ಕು ನೋಡಬಲ್ಲವರು ಮಾತ್ರ ಸರಕಾರದ ಸಂಭಾವ್ಯ ಕೆಡಿಗೇಡಿತನದ ಮೇಲೆ ಕಾವಲು ಇಡಬಲ್ಲರು. ಆದ್ದರಿಂದ ಸರಕಾರವನ್ನು ಪ್ರಾಮಾಣಿಕವಾಗಿರಿಸಬೇಕಾದರೆ, ಸರಕಾರದ ಚಟುವಟಿಕೆಗಳ ಮೇಲೆ ನಿಗಾ ಇರಿಸುವ ನಿಸ್ಸೀಮ ನೈತಿಕವಾದಿಗಳ ಭ್ರಷ್ಟಾತೀತ ಸಂಘಟನೆಯು ಬೇಕು.

4) ಸ್ಥೂಲ ಸೂಕ್ಷ್ಮ ಕಾರಣೋಪಯೋಗಾ : ಸುಸಂತುಲಿತಾ : ವಿಧೇಯಾ :

(ಶಾರೀರಿಕ, ಮಾನಸಿಕ, ಲೌಕಿಕ, ಅತಿಲೌಕಿಕ ಹಾಗೂ ಅಧ್ಯಾತ್ಮಿಕ ಉಪಯೋಗಗಳಲ್ಲಿ ಸರಿಯಾದ ಹೊಂದಾಣಿಕೆ ಇರತಕ್ಕದ್ದು.)

ಎರಡನೆಯ ತತ್ತ್ವವು ವಿಶ್ವದಲ್ಲಿಯ ಸರ್ವಸಂಪನ್ಮೂಲಗಳ ಗರಿಷ್ಠ ಉಪಯೋಗಕ್ಕೆ ಕರೆಯಿತ್ತರೆ, ಮೂರನೆಯ ತತ್ತ್ವವು ಪ್ರತಿಯೋರ್ವ ವ್ಯಕ್ತಿಯ ಹಾಗೂ ಸಮಾಜದ ಶಾರೀರಿಕ,

ಮಾನಸಿಕ ಹಾಗೂ ಅಧ್ಯಾತ್ಮಿಕ ಸಂಭಾವ್ಯತೆಗಳ ಗರಿಷ್ಠ ಉಪಯೋಗ ಕುರಿತು ಸಿಫಾರಸು ಮಾಡುತ್ತದೆ. ಇನ್ನು ನಾಲ್ಕನೆಯ ತತ್ತ್ವವು ಈ ಎಲ್ಲ ಉಪಯೋಗಗಳ ಸರಿಯಾದ ಹೊಂದಾಣಿಕೆಯನ್ನು ಪ್ರತಿಪಾದಿಸುತ್ತದೆ. ಇದರಿಂದ ವ್ಯಷ್ಟಿ ಹಾಗೂ ಸಮಷ್ಟಿ ಕಲ್ಯಾಣಗಳು ಗರಿಷ್ಠ ಪ್ರಮಾಣದಲ್ಲಿ ತಲುಪುತ್ತವೆ. ಇದು ಕೇವಲ ಆ ಕ್ಷಣ ಮಾತ್ರವಷ್ಟೇ ಅಲ್ಲ; ಅದರ ಬಹು ಕಾಲದ ವರಗೆ ಮಾನವತೆಗೆ ಬೇಕಾಗಿರುವುದು, ಈ ಸಂಪನ್ಮೂಲಗಳ ಬಳಕೆಯಲ್ಲಿ ಜಡ ಸಮತೋಲನ ಮಾತ್ರವಲ್ಲ, ಆದರೆ ಚೈತನ್ಯಮಯ ಸಮತೋಲನ.

ನೈಸರ್ಗಿಕ ಸಂಪನ್ಮೂಲಗಳಲ್ಲಿಯ ಸಮತೋಲನವು ಸ್ವಾಸ್ಥ್ಯಪೂರ್ಣ ಪರಿಸರವನ್ನು ಸಮಾಜವು ಕಾಪಾಡಿಕೊಂಡು ಬರಬೇಕೆಂದು ಸೂಚಿಸುತ್ತದೆ. ಅರ್ಥಾತ್ ಈ ಪರಿಸರವೆಂದರೆ ಅರ್ಥಶಾಸ್ತ್ರಜ್ಞರು ಕರೆಯುವ ಪರಿಸರಾವರಣ ಇಲ್ಲವೆ ಜೀವಶಾಸ್ತ್ರಜ್ಞರು ಕರೆಯುವ ಜೀವಾವರಣ. ಸ್ವಾಸ್ಥ್ಯಪೂರ್ಣ ಪರಿಸರಕ್ಕೆ ಸರ್ವ ಪಂಚಮಹಾಭೂತಗಳ ತಕ್ಕ ಬಳಕೆಯು ತೀರಾ ಅಗತ್ಯ. ಉದಾಹರಣೆ : ಒಂದು ವೇಳೆ, ತಾಂತ್ರಿಕತೆಯು ವಾತಾವರಣ ಮಾಲಿನ್ಯ ಉಂಟುಮಾಡಿದರೆ ಅಥವಾ ಸಾಗರ ಸರೋವರಗಳ ನೀರನ್ನು ಕಲುಷಿತಗೊಳಿಸಿದರೆ, ಅಪ್ ಮತ್ತು ವಾಯು, ತತ್ತ್ವಗಳಿಂದ ಲಭ್ಯವಾಗುವ ಸಂಪನ್ಮೂಲಗಳ ಅತಿಯಾದ ಬಳಕೆಯಾಗಿದೆಯೆಂದೇ ಅರ್ಥ ದೋಷಪೂರ್ಣ ತಾಂತ್ರಿಕತೆಗಳತ್ತ ಕೊಂಡೊಯ್ಯುವ ಮಾನವಬುದ್ಧಿಯ ತಪ್ಪು ಬಳಕೆಯೆಂದೂ ಸಹ ಇದನ್ನು ಅರ್ಥೈಸಬಹುದು. ಆದ್ದರಿಂದ, ಸಮಾಜ – ಕಲ್ಯಾಣವನ್ನು ಗರಿಷ್ಠೀಕರಿಸಬೇಕಾದರೆ, ಸರ್ವ ಸಂಪನ್ಮೂಲಗಳ ಬಳಕೆಯಲ್ಲಿ ಸಮಾಜವು ಸಮತೋಲನ ಕಾಯ್ದುಕೊಳ್ಳಬೇಕಾಗುತ್ತದೆ.

ಅದೇ ರೀತಿ, ಶಾರೀರಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳ ಮಧ್ಯೆ ಸಮತೋಲನ ಕಾಯ್ದುಕೊಳ್ಳುವಂತೆ ಪ್ರತಿಯೋರ್ವ ವ್ಯಕ್ತಿಗೆ ಪ್ರೋತ್ಸಾಹನ ನೀಡಬೇಕು. ಯಾವುದೊಂದರ ಉಪೇಕ್ಷೆಯಾಗಲಿ, ಅತಿಶಯತೆಯಾಗಲಿ ಅಸಂತೋಷಕ್ಕೆ ದಾರಿಯಾಗುತ್ತದೆ. ಬಾಳಿನಲ್ಲಿ ಅತ್ಯುತ್ತಮವಾದುದನ್ನು ಪಡೆಯಬೇಕಾದರೆ, ಮೂರನ್ನೂ ತತ್ಕಾಲಕ್ಕೆ ಅನುಸರಿಸಬೇಕು. ತನ್ನ ದೇಹದತ್ತ ದೈಹಿಕ ವ್ಯಾಯಾಮಾದಿ ಮೂಲಕ ತನ್ನ ದೇಹದ ಕಾಳಜಿ ವಹಿಸುವಂತೆ ಪ್ರತಿಯೋರ್ವನನ್ನೂ ಪ್ರೋತ್ಸಾಹಿಸಬೇಕು. ಎರಡನೆಯದಾಗಿ, ಆಯಾ ಕಾಲದ ಅಗತ್ಯ ಕೌಶಲಗಳನ್ನೂ ಹಾಗೂ ಪ್ರಾಮಾಣಿಕತೆ, ವೈಯಕ್ತಿಕ ಘನತೆ ಹಾಗೂ ಅನ್ಯರಿಗೆ ನೆರವಾಗುವ ಭಾವನೆಗಳನ್ನೂ ಒಳಗೊಂಡು ತಕ್ಕ ಶಿಕ್ಷಣ ಒದಗಿಸಬೇಕು. ಮೂರನೆಯದಾಗಿ, ಅಧ್ಯಾತ್ಮಿಕ ಅಭ್ಯಾಸ ಕೈಕೊಳ್ಳುವಂತೆ ವ್ಯಕ್ತಿಗೆ ಪ್ರೋತ್ಸಾಹ ನೀಡಬೇಕು. ಈ ಅಭ್ಯಾಸಗಳಲ್ಲಿ ಧ್ಯಾನ ಹಾಗೂ ಫಲಾಪೇಕ್ಷೆಯಿಲ್ಲದ ಬಡವರಿಗೆ ನೆರವಾಗಲು ಶತ ಪ್ರಯತ್ನ ನಡೆಸಲು ವಾಸ್ತವವಾಗಿ ಮುನ್ನಡೆಯುವಂತೆ ವ್ಯಕ್ತಿಗೆ ಪ್ರೋತ್ಸಾಹವನ್ನು ನೀಡಬೇಕು. ಅಧ್ಯಾತ್ಮಿಕತೆಯೆಂದರೆ, ವಿಶಾಲ ಮನಸ್ಸಿನ ತತ್ವಜ್ಞಾನ ಹಾಗೂ ಶಿಕ್ಷಣಗಳು ಬೋಧಿಸುವುದನ್ನು ಅಗತ್ಯವಾಗಿ ಅನುಷ್ಠಾನಿಸುವುದಾಗಿದೆ. ತರ್ಕಶಾಸ್ತ್ರದೊಂದಿಗೆ ಅದರ ಘರ್ಷಣೆ ಇರದು. ಬಹಳವಾದರೆ ಅದರ ಕೆಲ ಮುಖಗಳು ತರ್ಕಶಾಸ್ತ್ರವ್ಯಾಪ್ತಿಯ ಹೊರಗಿರಬಹುದಷ್ಟೇ.

ಅಧ್ಯಾತ್ಮವು ಮತಧರ್ಮವಲ್ಲ. ಏಕೆಂದರೆ ಮತಧರ್ಮವು ತರ್ಕಕ್ಕೆ ವಿರೋಧಿಯಾಗಿರುತ್ತದೆ. ಅಧ್ಯಾತ್ಮವು ಮನೋ ವೈಶಾಲ್ಯ ಹಾಗೂ ವಿಶ್ವಾತ್ಮಕತೆಯತ್ತ ಕರೆದೊಯ್ಯುತ್ತದೆ. ಆದರೆ

ಮತಧರ್ಮವು ಮತಾಂಧತೆಯತ್ತ ಕರೆದೊಯ್ಯುತ್ತದೆ. ಅಧ್ಯಾತ್ಮವು ಅನಂದದತ್ತ ಕರೆದೊಯ್ದರೆ, ಮತಧರ್ಮವು ಮೂಢನಂಬುಗೆ ಮತ್ತು ತಾಪತ್ರಯಗಳಿಗೆ ದಾರಿಯಾಗುತ್ತದೆ. ಆದ್ದರಿಂದ, ಅಧ್ಯಾತ್ಮಿಕ ಸಾಧನೆ ಕೈಕೊಳ್ಳಲು ಪ್ರತಿ ವ್ಯಕ್ತಿಯನ್ನೂ ಪ್ರೋತ್ಸಾಹಿಸಬೇಕು. ಈ ಸಾಧನಗಳು ಮತಧರ್ಮೀಯ ನಂಬುಗೆಗಳ ಗೊಡವೆಗೆ ಹೋಗದಿದ್ದರೂ ಅವುಗಳ ಅನುಷ್ಠಾನ ಅಗತ್ಯ.

ಗರಿಷ್ಠ ವ್ಯಷ್ಟಿ ಕಲ್ಯಾಣವಾಗಬೇಕಾದರೆ, ಶಾರೀರಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ಜೀವನಮುಖಗಳ ಮಧ್ಯೆ ಸಮತೋಲನ ಬೇಕೇ ಬೇಕು. ಅದೇ ರೀತಿ ಸಮಷ್ಟಿ ಕಲ್ಯಾಣಕ್ಕಾಗಿ ಸರ್ವ ಸಂಪನ್ಮೂಲಗಳ ಬಳಕೆಯಲ್ಲಿ ಚೈತನ್ಯಾತ್ಮಕ ಸಮತೋಲನ ಬೇಕು. ಸಮಾಜವು ಒಂದನ್ನು ಉಪೇಕ್ಷಿಸುವುದೆಂದರೆ ಇನ್ನೊಂದಕ್ಕೆ ಅಪಾಯದ ಗಂಟೆ ಬಾರಿಸಿದಂತೆಯೇ ಸರಿ. ಉದಾಹರಣೆಗಾಗಿ ವ್ಯಕ್ತಿಯ ಜೀವನಮಟ್ಟ ಅಥವಾ ಆರ್ಥಿಕ ವೃದ್ಧಿಯ ಗತಿಯ ಗರಿಷ್ಠೀಕರಣದ ಉದ್ದೇಶವನ್ನೇ ನೋಡುವಾ : ಈ ಉದ್ದೇಶವು ಕಾರ್ಯಸಾಧುವಾದ ಅತ್ಯುತ್ತಮ ತಾಂತ್ರಿಕತೆಯ ನೆರವಿನಿಂದ ಕೇವಲ ಸಂಪನ್ಮೂಲಗಳ ಬಳಕೆಯೊಂದಿಗೆ ಸಂಬಂಧಿಸಿದೆ. ಒಂದು ವೇಳೆ, ಇಂಥ ತಾಂತ್ರಿಕತೆಯು ಹೊಗೆ ಇಬ್ಬನಿಗಳ ಇಲ್ಲವೆ ಅತಿಶಯ ಕಾರ್ಬನ್ ಮೋನೋಕ್ಸೈಡ್‌ಗಳ ಹುಟ್ಟಿನಲ್ಲಿ ಪರಿಣಮಿಸಿದರೆ, ಅದು ನೈಸರ್ಗಿಕ ಸಂಪನ್ಮೂಲಗಳ ತಕ್ಕ ಬಳಕೆಯೊಂದಿಗೆ ಘರ್ಷಿಸಬಹುದು. ಈ ಕಾರ್ಬನ್ ಮೋನೋಕ್ಸೈಡ್ ಅನೇಕ ಔದ್ಯಮಿಕ ರಾಷ್ಟ್ರಗಳಲ್ಲಿ ಜೀವಾವರಣವನ್ನು ಕಲುಷಿತಗೊಳಿಸಿದೆ. ಅದರಿಂದ ಗಂಭೀರ ಆರೋಗ್ಯ ಹಾಗೂ ಮಾನಸಿಕ ಸಮಸ್ಯೆಗಳು ಉಂಟಾಗುತ್ತವೆ. ಸರಕು ಉತ್ಪಾದನೆಗಾಗಿ ಹಾಗೂ ಸೇವೆಗಳಿಗಾಗಿ ಜನರು ಅತಿ ಹೆಚ್ಚು ವೇಳೆ ಮೀಸಲಿರಿಸಬೇಕಾಗಬಹುದು. ಹೀಗಾಗಿ, ಅಧ್ಯಾತ್ಮಿಕ ಹಾಗೂ ಬೌದ್ಧಿಕ ವೃತ್ತಿಗಳಿಗೆ ಅತ್ಯಲ್ಪ ಸಮಯ ಮಾತ್ರ ಉಳಿಯುತ್ತದೆ. ಅನಿವಾರ್ಯವಾಗಿ ಘಟಿಸುವ ಇಂಥ ಘರ್ಷಣೆಗಳಲ್ಲಿ ಸಮಾಜ ಇಲ್ಲವೆ ಅಡಳಿತ ಸಂಸ್ಥೆಯು ನೈಸರ್ಗಿಕ ಸಂಪನ್ಮೂಲಗಳ ವಿಭಿನ್ನ ಉಪಯೋಗವನ್ನಾಗಲಿ ಇಲ್ಲವೆ ಜನರ ವೇಳೆಗಳ ಮಧ್ಯೆ ಒಂದು ಹೊಂದಾಣಿಕೆಯನ್ನಾಗಲಿ ಏರ್ಪಡಿಸಬೇಕಾಗುತ್ತದೆ.

ಉದ್ಯೋಗಾವಕಾಶಗಳನ್ನು ಸಾಧ್ಯವಾದ ಮಟ್ಟಿಗೆ, ಉದ್ಯೋಗಿಯ ಮನೋಧರ್ಮಕ್ಕೆ ಅನುಗುಣವಾಗುವಂತೆ ಇರಿಸುವುದೂ ಸಹ ಹೊಂದಾಣಿಕೆಯ ತತ್ತ್ವದಲ್ಲಿ ಅಡಕವಾಗಿದೆ. ಬಹಳ ಪ್ರಕಾರದ ಆಸ್ತಿ ಹೊಂದಿದ ವ್ಯಕ್ತಿಗಳನ್ನು ಸೂಕ್ಷ್ಮ ಧಂಧೆಗಳಲ್ಲಿ ತೊಡಗಿಸಬೇಕು. ಉದಾಹರಣೆಗೆ– ಬುದ್ಧಿವಂತನೊಬ್ಬನು ಕ್ಷಾತ್ರ ಬಲವನ್ನು ಹೊಂದಿದ್ದರೂ ಸಹ, ಅವನನ್ನು ಬುದ್ಧಿಪರ ಸೇವೆಯಲ್ಲಿಯೇ ತೊಡಗಿಸಬೇಕು. ಅದೇ ರೀತಿ, ಅಧ್ಯಾತ್ಮಿಕ ಜ್ಞಾನ ಸಂಪನ್ನನಿಗೆ, ಇನ್ನಿತರರಿಗೆ ಅಧ್ಯಾತ್ಮಿಕತೆಯಲ್ಲಿ ತರಬೇತಿ ನೀಡುವ ಕರ್ತವ್ಯ ನೀಡಬೇಕು. ಇಲ್ಲವೆ ಯೋಧನಿಗೆ ರಕ್ಷಣೆ, ಆರಕ್ಷಕ ಸೇವೆ ಇತ್ಯಾದಿ ವಹಿಸಿಕೊಡಬೇಕು.

ಅಧ್ಯಾತ್ಮಿಕ ಜ್ಞಾನವು ವಿರಳ. ಈ ಕಾರಣದಿಂದಾಗಿ, ಅಧ್ಯಾತ್ಮವಾದಿಗಳು ತುಂಬಾ ಪ್ರಯೋಜನಕಾರಿ ಸಮಾಜ ಸದಸ್ಯರಾಗಿದ್ದಾರೆ. ಅವರಲ್ಲಿ ಮಾತ್ರ ಶಾರೀರಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಎಂಬೀ ಗುಣಗಳು ಚೆನ್ನಾಗಿ ವಿಕಾಸಗೊಂಡಿರುತ್ತವೆ. ಅವರು ಶಾರೀರಿಕ ದಾರ್ಢ್ಯ ಹೊಂದಿರಲಿಕ್ಕಿಲ್ಲ. ಆದರೆ ಅವರು ಬುದ್ಧಿವಂತರೂ, ನಿಃಸ್ವಾರ್ಥಿಗಳೂ ಆಗಿರುತ್ತಾರೆ. ಆದ್ದರಿಂದ ಜಾಗೃತಿ ಹೊಂದಿದವರು ಮಾತ್ರ ಸಮಾಜದ ನಿಯಂತ್ರಣ ಮತ್ತು ನಿರ್ವಹಣೆಯ ಹೊರೆ ಹೊರಬೇಕು.

5) ದೇಶಕಾಲಪಾತ್ರೆ : ಉಪಯೋಗಾ : ಪರಿವರ್ತಂತೇ
ತೇ ಉಪಯೋಗಾ : ಪ್ರಗತಿಶೀಲಾ ಭವೇಯು :

(ಉಪಯೋಗ ಪದ್ಧತಿಯು ದೇಶ, ಕಾಲ ಮತ್ತು ಪಾತ್ರಗಳಲ್ಲಿಯ ಬದಲಾವಣೆಗಳಿಗನುಸರಿಸಿ ಭಿನ್ನವಾಗಿರುತ್ತದೆ. ಮತ್ತು ಆ ಉಪಯೋಗವು ಪ್ರಗತಿಶೀಲವಾಗಿರತಕ್ಕದ್ದು.)

"ಯಾವುದೊಂದು ವಸ್ತುವಿನ ಯಥಾರ್ಥ ಬಳಕೆಯು ಏನೆಂಬುದು ದೇಶ, ಕಾಲ ಮತ್ತು ಪಾತ್ರಗಳಿಗನುಸಾರವಾಗಿ ಪರಿವರ್ತಿತವಾಗುತ್ತಿರಬೇಕು. ಈ ಪ್ರಪಂಚದ ಪ್ರತಿಯೊಂದು ಅಣುರೇಣುಗಳು ಒಂದರಿಂದೊಂದು ವಿಭಿನ್ನವಾಗಿವೆ. ಅಷ್ಟೇ ಏಕೆ? ಪ್ರತಿಯೊಂದು, ಸದಾಕಾಲ ರೂಪಾಂತರಗೊಳ್ಳುತ್ತಿರುತ್ತದೆ. ಬ್ರಾಹ್ಮೀಸತ್ತೆಯನ್ನುಳಿದು ಬೇರೊಂದು ಶಾಶ್ವತವಾಗಿದ್ದರೆ, ಅದು ಪರಿವರ್ತನೆಯಷ್ಟೇ. ನಿನ್ನೆಯ ವಿಚಾರಗಳು ಇಂದು ನಿಷ್ಪ್ರಯೋಜಕ. ಇಂದಿನ ವಿಚಾರಗಳು ನಾಳೆ ನಿಷ್ಪ್ರಯೋಜಕ. ಯಾವುದೋ ಒಂದು ನಿನ್ನ ಕೆಲಸ ಮಾಡಿತ್ತು. ಆದರೆ ಅದು ನಾಳೆಗೆ ಮಾಡದಿರಬಹುದು. ಆದ್ದರಿಂದ ಸಂಪನ್ಮೂಲ ಬಳಕೆಯ ಪದ್ಧತಿಗಳು, ಉತ್ಪಾದಕ ತಂತ್ರಗಳು, ವಿಚಾರ ಹಾಗೂ ಸಿದ್ಧಾಂತಗಳು, ಅಧ್ಯಾತ್ಮಿಕ ಸಾಧನೆಗಳು ಹೀಗೆ ಎಲ್ಲವನ್ನೂ ಕಾಲಾನುಕ್ರಮದಲ್ಲಿ ಹೊಂದಾಣಿಕೆ ಮಾಡಬೇಕು; ಮರು ಹೊಂದಾಣಿಕೆ ಮಾಡುತ್ತಿರಬೇಕು, ಅವು ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ಮತ್ತು ಇನ್ನು ಮುಂದೆ ಉಪಗ್ರಹದಿಂದ ಉಪಗ್ರಹಕ್ಕೆ ವಿಭಿನ್ನವಾಗಿರಬಹುದು. ಸಂಪನ್ಮೂಲಗಳ ಬಳಕೆಯು ಪರಿಸರಕ್ಕೆ ತಕ್ಕಂತೆ ಬದಲಾಗಬೇಕಷ್ಟೇ ಅಲ್ಲ; ಆದರೆ ಪ್ರಗತಿಶೀಲವೂ ಆಗಿರತಕ್ಕದ್ದು. ಅಂದರೆ, ಅದು ವ್ಯಕ್ತಿ ಹಾಗೂ ಸಮಾಜಗಳ ನಿರಂತರ ಆಧ್ಯಾತ್ಮಿಕ ಮುನ್ನಡೆಯಲ್ಲಿ ಪರಿಣಮಿಸಬೇಕು. ಎಲ್ಲ ಹೊಸ ಆವಿಷ್ಕಾರಗಳನ್ನು, ಶೋಧನೆಗಳನ್ನು ಮತ್ತು ತಾಂತ್ರಿಕತೆಯನ್ನು ಪ್ರಗತಿಯ ಮನೋಭಾವದಿಂದ ಬಳಸಬೇಕು.

ಐದನೆಯ ಮತ್ತು ಅಂತಿಮ ಪ್ರಉತ ತತ್ತ್ವವು ಇನ್ನಿತರ ವ್ಯವಸ್ಥೆಗಳಲ್ಲಿ ಇಲ್ಲದ ಗುಣ ಹಾಗೂ ಹೊಂದಾಣಿಕೆಯನ್ನು ಒದಗಿಸುತ್ತಿದೆ. ಇದರಿಂದಾಗಿಯೇ ಅದಕ್ಕೆ ವಿಶ್ವಾತ್ಮಕ ಶೀಲವೂ, ಸಮರ್ಪಕತೆಯೂ ಬಂದಿವೆ. ಇದರಿಂದಾಗಿಯೇ ಆ ತತ್ತ್ವವು ಜಗದ ಸರ್ವ ಜನರಿಗೆ, ಸರ್ವ ಸಮಾಜಗಳಿಗೆ ಸರ್ವದೇಶಗಳಿಗೆ ಹಿಡಿಸುವಂತಾಗಿದೆ.

ಆಧಾರ ಗ್ರಂಥಗಳು

1) ಶ್ರೀ ಸರಕಾರ ಪಿ. ಆರ್. – 'ಐಡಿಯಾ ಆ್ಯಂಡ ಐಡಿಯಾಲಜಿ' ಕಲಕತ್ತೆ – ಆನಂದ ಮಾರ್ಗ ಪ್ರಕಾಶನ – 1959.

2) ಆನಂದ ಸೂತ್ರಂ – ಕಲಕತ್ತೆ, ಆನಂದ ಮಾರ್ಗ ಪ್ರಕಾಶನ – 1967 ಅಧ್ಯಾಯ – 5.

3) 'ಪ್ರಉತ ಇನ್ ಎ ನಟ್‌ಶೆಲ್' 1–12 ಓರಿಯಂಟ ಪ್ರೆಸ್ 123/1, ಎ.ಪಿ.ಸಿ. ರಸ್ತೆ, ಕಲಕತ್ತೆ – 6, 1987–88.

4) 'ದಿ ಗ್ರೇಟ ಯುನಿವರ್ಸ' ಡೆನವರ, ಆನಂದ ಮಾರ್ಗ ಪ್ರಕಾಶನ – 1971.

ಅಧ್ಯಾಯ – 4

ಪ್ರಉತದ ಅರ್ಥ ವ್ಯವಸ್ಥೆ

ಈ ಹಿಂದಿನ ಅಧ್ಯಾಯದಲ್ಲಿ ಬಣ್ಣಿಸಿದ ತತ್ತ್ವಾವಳಿಯು ವ್ಯಷ್ಟಿ ಮತ್ತು ಸಮಷ್ಟಿ ಕಲ್ಯಾಣಗಳನ್ನು ಯಾವುದೊಂದು ಕಾಲದಲ್ಲಿ, ಅಷ್ಟೇ ಏಕೆ, ಸದಾಕಾಲ ಗರಿಷ್ಠೀಕರಿಸುವ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸುತ್ತದೆ. ಯಾವುದೊಂದು ಕ್ಷಣದಲ್ಲಿ ಸರ್ವ ಭೌತಿಕ ಮತ್ತು ಆಧಿಭೌತಿಕ ಸಂಪನ್ಮೂಲಗಳ ವೈಯಕ್ತಿಕ ಮತ್ತು ಸಾಮಾಜಿಕ ಉತ್ಪಾದಕತೆಯ ಗರಿಷ್ಠೀಕರಣವು ಮಾನವನ ತ್ರಿಮುಖೀ ಅಂದರೆ, ಭೌತಿಕ, ಮಾನಸಿಕ ಮತ್ತು ಆತ್ಮಿಕ ಅಸ್ತಿತ್ವಗಳ ಸ್ಥಿರ ದಕ್ಷತೆಯನ್ನು ಖಚಿತಪಡಿಸುತ್ತದೆ. ಇತ್ತ ಸಂಪನ್ಮೂಲಗಳ ಬಳಕೆಯಲ್ಲಿನ ನಿರಂತರ ಹಾಗೂ ಪ್ರಗತಿಪರ ಹೊಂದಾಣಿಕೆಯು ಚೇತನಾತ್ಮಕ ದಕ್ಷತೆಯತ್ತ ಗುರಿ ಇರಿಸುತ್ತದೆ. ಆದರೂ ಸಹ, ಪ್ರಚಲಿತ ಜಗತ್ತಿನ ಅರ್ಥನೀತಿಯ ವ್ಯವಸ್ಥೆಗಳು ಈ ತತ್ತ್ವಗಳನ್ನು ವಾಸ್ತವದಲ್ಲಿ ತರುವಲ್ಲಿ ಅಸಮರ್ಥವಾಗಿವೆ. ಅವುಗಳಲ್ಲಿ, ವ್ಯಷ್ಟಿ ಮತ್ತು ಸಮಷ್ಟಿ ಕಲ್ಯಾಣಗಳು ಗರಿಷ್ಠವಾಗುವ ತಕ್ಕ ನೈತಿಕ ಮತ್ತು ಬೌದ್ಧಿಕ ವಾತಾವರಣದ ಕೊರತೆಯಿದೆ. ಆದ್ದರಿಂದ ಪ್ರಉತ ತನ್ನದೇ ಆದ ಅರ್ಥನೀತಿ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಇದು ಮೂಲಭೂತ ತತ್ತ್ವಗಳಿಗೆ ಕೃತಕೃತ್ಯತೆಯನ್ನು ಒದಗಿಸುತ್ತದೆ.

ಪ್ರಉತ ಮೇರೆಗೆ, ಸರ್ವ ಸಂಪತ್ತಿನ ಉದ್ದೇಶವು ಮಾನವನ ಬೇಡಿಕೆಗಳನ್ನೂ ಮತ್ತು ಅಗತ್ಯಗಳನ್ನೂ ಸಮಾಧಾನಗೊಳಿಸುವುದಾಗಿದೆ. ಇಂದಿನ ಹಾಗೂ ಮುಂದಿನ ಉಭಯತಾಪಿ ಬಳಕೆಗಾಗಿ ಸಂಪತ್ತು ಬೇಕು. ಆದರೆ ಅತಿಶಯ ಖಾಸಗಿ ಸಂಚಯಕ್ಕಾಗಿಯೂ ಅಲ್ಲ; ಇಲ್ಲವೆ ಲಾಭ ಬಡತನಕ್ಕಾಗಿಯೂ ಅಲ್ಲ. ಹೀಗೆ, ಖಾಸಗಿ ಸಂಚಯ ಇಲ್ಲವೆ ಲಾಭ ಹೇತುವು, ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಏಕಮೇವ ಆಧಾರವೆಂದರೆ ಬಳಕೆ. ಹೀಗೆ ಪ್ರಉತದ ಅರ್ಥನೀತಿಯು ಬಳಕೆಯನ್ನು ಆಧರಿಸಿದೆ. ಅತಿಶಯ ಖಾಸಗಿ ಸಂಚಯವು ಅನಿಷ್ಟಕರ. ಏಕೆಂದರೆ, ಅದು ಸಾಮಾಜಿಕ ಕೇಡಾಗಿದೆ. ಆದರೆ ಸಂಪತ್ತಿನ ಸಾಮಾಜಿಕ ಸಂಚಯವನ್ನು ಮುಂದಿನ ಹಣ ತೊಡಗಿಸುವಿಕೆಗಾಗಿ ಮತ್ತು ಮಾನವ ಅಭಿವೃದ್ಧಿಯ ಸರ್ವ ರಂಗಗಳಲ್ಲಿಯ ಅಭಿವೃದ್ಧಿಯ ಸಂಶೋಧನೆಗಾಗಿ, ಪ್ರೋತ್ಸಾಹಿಸಬೇಕು.

ಬಳಕೆ ಇಲ್ಲವೆ ಮಾನವ ಅಗತ್ಯಗಳ ಸಮಾಧಾನದ ಮೇಲೆ ಒತ್ತು ನೀಡುವುದು ಉಲ್ಲೇಖನಾರ್ಹವಾಗಿದೆ. ತಮ್ಮ ಚರಿತ್ರೆಯಲ್ಲಿಯೇ ಅಪೂರ್ವವಾದ ಸಮೃದ್ಧಿಯನ್ನು ಇಂದು ಅನೇಕ ಅಭಿವೃದ್ಧ ದೇಶಗಳು ಭೋಗಿಸುತ್ತಿವೆ. ಅವುಗಳ ಅರ್ಥ ವ್ಯವಸ್ಥೆಗಳು ತಮ್ಮ ನಾಗರಿಕರ ಭೌತಿಕ ಅಗತ್ಯಗಳನ್ನು ಪರ್ಯಾಪ್ತ ರೂಪದಲ್ಲಿ ಸಮಾಧಾನಗೊಳಿಸುತ್ತವೆ. ಆದರೆ ಅವುಗಳೂ ಸಹ ತಮ್ಮ ಆದಾಯ ಹಾಗೂ ಸಂಪತ್ತಿನ ವಿತರಣೆಯಲ್ಲಿಯ, ಹಿಂದೆಂದೂ ಇರದಷ್ಟು ವಿಷಮತೆಯಿಂದ ಬಾಧಿತವಾಗಿವೆ. ಇದರಿಂದಾಗಿ ಅವಗಳಲ್ಲಿ ಕಡು ಬಡವರಾದ ಹಲವಾರು ಅಲ್ಪಸಂಖ್ಯಾತರಿದ್ದಾರೆ.

ಆದರೂ ಸಹ, ಅಗತ್ಯವನ್ನಾಧರಿಸಿದ ಅರ್ಥ ವ್ಯವಸ್ಥೆಯು ಬಡವರ ಅಗತ್ಯಗಳನ್ನು ಪೂರೈಸಲೋಸುಗ ಪ್ರಾಶಸ್ತ್ಯ ನೀಡುತ್ತದೆ. ಆದರೆ ಅಭಿವೃದ್ಧ ರಾಷ್ಟ್ರಗಳ ಉತ್ಪಾದನೆಯ ಹೆಚ್ಚುವರಿ ಲಾಭಗಳಿಕೆ. ಇದನ್ನು ಖಾಸಗಿಯಾಗಿ ಎಲ್ಲರೂ ಒಪ್ಪುತ್ತಾರೆ. ಆದರೆ ಬಹಿರಂಗದಲ್ಲಲ್ಲ. ಬಡವರಿಗಾಗಿ ಬೇಕಾಗುವ ಸರಕುಗಳಲ್ಲಿ ಹಣ ತೊಡಗಿಸುವಿಕೆಯು ತುಂಬಾ ಪೇಚಿನದ್ದಾಗಿದೆ. ಏಕೆಂದರೆ ಬಡವರಿಗೆ ಸಾಕಷ್ಟು ಖರೀದಿ ಶಕ್ತಿ ಇರುವುದಿಲ್ಲ. ಇದರ ಪರಿಣಾಮವೆಂದರೆ, ಅವರ ಅಗತ್ಯಗಳನ್ನು ಸಾಕಷ್ಟು ಸಮಾಧಾನಪಡಿಸಲಾಗದು, ಹಣವಂತರು ಮಧ್ಯಮ ವರ್ಗದ ಇಲ್ಲವೆ ಸಿರಿವಂತರ ಅಭಿರುಚಿ ತಣಿಸುವ ಉದ್ದಿಮೆಗಳಲ್ಲಿ ಹೊಸತಾಗಿ ಹಣ ತೊಡಗಿಸುತ್ತಾರೆ. ಏಕೆಂದರೆ ಲಾಭ ಗಿಟ್ಟುವುದು ಅಲ್ಲಿಯೇ. ಈಗಾಗಲೇ ಪೂರೈಸಲ್ಪಟ್ಟ ಬೇಡಿಕೆಗಳ ಪೂರೈಕೆಗಾಗಿ ಹೊಸಹೊಸ ಸಲಕರಣೆಗಳನ್ನು ಉತ್ಪಾದಿಸುತ್ತಾರೆ. ಹೀಗಾಗಿ ಬಡತನವು ಸಾಕಷ್ಟು ಪ್ರಮಾಣದಲ್ಲಿ ಉಳಿಯುತ್ತದೆ. ಇನ್ನು ಒಂದು ವೇಳೆ, ಬಹುಕಾಲ ಬಾಳುವ ವಸ್ತುಗಳನ್ನು ಈ ಮುನ್ನ ಖರೀದಿಸಿದ ಕಾರಣ ಮಧ್ಯಮ ವರ್ಗದ ಬೇಡಿಕೆಗಳನ್ನು ಈಗಾಗಲೇ ಪೂರೈಸಿದ್ದರೆ, ಹೊಸ ಉಪಕರಣಗಳು ಸುಲಭವಾಗಿ ಮಾರಾಟವಾಗದಿರಬಹುದು, ಆಗ ಉತ್ಪಾದಕನು, ಹಳೆಯ ವಸ್ತುಗಳನ್ನು ತೊರೆದು ಹೊಸದಾದ ನಿಮ್ನ ಗುಣಮಟ್ಟದ ಆದರೆ ಹೆಚ್ಚು ಅಂದಚೆಂದದ ಸರಕನ್ನು ಖರೀದಿಸಲು ಒತ್ತಾಯಿಸುವ ಜಾಹೀರಾತುಗಳಿಗಾಗಿ ಮಿಲಿಯಗಟ್ಟಲೆ ಹಾಳು ಮಾಡುತ್ತಾನೆ. ಈ ಎಲ್ಲವೂ ಐಹಿಕ ಮತ್ತು ಅಮುಷ್ಮಿಕ ಸಂಪನ್ಮೂಲಗಳ ತೀವ್ರ ದೋಷಪೂರ್ಣ ಹಂಚಿಕೆಯಾಗಿದೆ.

ಸಿರಿವಂತರು ತಪ್ಪಿತಸ್ಥರೇ ? ನಿಜವಾಗಿ ಅಲ್ಲ. ಏಕೆಂದರೆ, ಹಣ ಕಳೆದುಕೊಳ್ಳಲು ಯಾರ ಮನವೂ ಒಪ್ಪದು. ಆದರೆ ಲೋಭವಿಲ್ಲದಿದ್ದರೆ, ಅನುಕೂಲಸ್ಥರು ಬಡವರಿಗೆ ಉಣಬಡಿಸಲು ತಮ್ಮ ಸಂಪತ್ತಿನ ಒಂದಂಶವನ್ನು ಸೊಡಬಹುದಾಗಿತ್ತು. ನಿಜವಾದ ದೋಷ ವಿರುವುದು ವ್ಯವಸ್ಥೆಯಲ್ಲಿಯೇ. ಅದು ಕೆಲವು ವ್ಯಕ್ತಿಗಳಿಗೆ ಹೇಸಿಗೆ ಎನಿಸುವಷ್ಟು ಸಿರಿವಂತಿಕೆ ನೀಡಿದೆ. ಆದರೆ ಅದೇ ಇತರರು ತಮ್ಮ ಕನಿಷ್ಠ ಅಗತ್ಯಗಳಿಗಾಗಿ ಭಿಕ್ಷೆ ಬೇಡಬೇಕಾಗಿದೆ.

ಇದೇ ಸ್ಥಿತಿಯು ಭಾರತವನ್ನೊಳಗೊಂಡಂತೆ ಅನಭಿವೃದ್ಧ ರಾಷ್ಟ್ರಗಳಲ್ಲಿಯೂ ಇದೆ. ಅಲ್ಲಿ ಸಮೃದ್ಧಿಯ ಜೇಬುಗಳು ಸಾಮಾನ್ಯರ ಬಡತನವನ್ನು ಅಣಕಿಸುತ್ತವೆ. ಆದ್ದರಿಂದ, ಗರಿಷ್ಠ ಸಮಾಜ ಕಲ್ಯಾಣದ ದೃಷ್ಟಿಯಿಂದ, ಸಂಪನ್ಮೂಲಗಳ ಹಂಚಿಕೆಯನ್ನು, ಮಾನವನ ಅತ್ಯಾಸೆಯನ್ನು ಆಧರಿಸಿ ಮಾಡದೆ, ಮಾನವನ ಅಗತ್ಯವನ್ನು ಆಧರಿಸಿ ಮಾಡಬೇಕು. ಪ್ರಉತ ಹೇಗೆ ಈ ಬಗೆಗೆ ಭರವಸೆ ನೀಡುತ್ತದೆ? ಆನಂತರ ನಾನಿದನ್ನು ಚರ್ಚಿಸುವೆ.

ಆದಾಯ ವಿತರಣೆ :

ಕನಿಷ್ಠ ಭೌತಿಕ ಅವಶ್ಯಕತೆಗಳಾದ ಅನ್ನ, ವಸ್ತ್ರ, ಆಶ್ರಯ, ಶಿಕ್ಷಣ ಹಾಗೂ ಚಿಕಿತ್ಸೆ ಎಂಬ ಕನಿಷ್ಠ ಅವಶ್ಯಕತೆಗಳ ಭರವಸೆಯು ಸರ್ವರಿಗೂ ಲಭ್ಯವಾಗಬೇಕೆಂದು ಪ್ರಉತ ತನ್ನ ಪ್ರಥಮ ತತ್ತ್ವದಲ್ಲಿ ಪ್ರತಿಪಾದಿಸುತ್ತದೆ. ಆದರೆ ಕನಿಷ್ಠ ಅವಶ್ಯಕತೆಗಳ ವಿವರಗಳನ್ನು ನೀಡಿಲ್ಲ. ಏಕೆಂದರೆ, ಅವು ದೇಶ ಮತ್ತು ಕಾಲಗಳೊಂದಿಗೆ ಬದಲಾಗುತ್ತಿರುತ್ತವೆ. ಮಾನವ ಜೀವಿಗಳು

ವಿಕಾಸಗೊಂಡಂತೆ, ಅದರ ದೇಹ ರಚನೆಯು ಬದಲಾದಂತೆ, ಅಧಿಕಾಧಿಕ ವೈಜ್ಞಾನಿಕ ಮುನ್ನಡೆಗಳು ಘಟಿಸಿದಂತೆ, ಯಾವುದು ಕನಿಷ್ಠ ಎಂಬ ನಿಲುಮೆಯೂ ಸಹ ಬದಲಾಗುತ್ತದೆ. ಆದ್ದರಿಂದ ಕನಿಷ್ಠ ಅಗತ್ಯಗಳ ಗ್ರಹಿಕೆಯನ್ನು ಕಾಲಾನುಕ್ರಮೇಣ ಪುನರ್ವಿಮರ್ಶಿಸುತ್ತ ಹೋಗಬೇಕಾಗಿದೆ. ಅಷ್ಟೇ ಅಲ್ಲ; ಸಾಮಾನ್ಯ ಆರ್ಥಿಕ ಮುನ್ನಡೆಯೊಂದಿಗೆ ಕನಿಷ್ಠ ಜೀವನ ಮಟ್ಟವೂ ಸಹ ಕಾಲಕಾಲಕ್ಕೆ ಎತ್ತರಿಸುತ್ತ ಹೋಗಬೇಕು. ಇದರಿಂದ, ಆರ್ಥಿಕ ಸಮೃದ್ಧಿಯು ಕೇವಲ ಕೆಲವು ವಿಶೇಷಾಧಿಕಾರಸಂಪನ್ನ ವರ್ಗಗಳಿಗಷ್ಟೇ ವಿಸ್ತರಿಸದೆ, ಸರ್ವ ಶ್ರಮಜೀವಿ ವರ್ಗಕ್ಕೂ ವಿಸ್ತರಿಸುತ್ತದೆ.

ಮಾರುಕಟ್ಟೆಯ ದರಗಳಲ್ಲಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಖರೀದಿ ಶಕ್ತಿಹೊಂದಿದ ಪ್ರಮಾಣದ ಸಂಬಳವನ್ನು ಪಡೆಯುವಂತೆ ಪ್ರತಿಯೋರ್ವನಿಗೂ ತಕ್ಕದಾದ ಉದ್ಯೋಗವನ್ನು ಒದಗಿಸುವ ಭರವಸೆಯನ್ನು ನೀಡಲಾಗುವುದು. ಈ ಅಗತ್ಯಗಳಲ್ಲಿ ಶಿಕ್ಷಣ ಹಾಗೂ ಚಿಕಿತ್ಸೆಗಳನ್ನು ಉಚಿತವಾಗಿ ಸರ್ವರಿಗೂ ಒದಗಿಸಬೇಕೆಂದು ಪ್ರಉತ ಪ್ರತಿಪಾದಿಸುತ್ತದೆ. ಹಾಗಾಗಿ ಆಹಾರ, ಆಶ್ರಯ ಹಾಗೂ ವಸ್ತುಗಳನ್ನಷ್ಟೇ ಒಬ್ಬನು ಸಂಬಳದಿಂದ ಪಡೆಯಬೇಕಾಗುತ್ತದೆ. ಈ ರೀತಿಯಾಗಿ ಎಲ್ಲರಿಗೂ ಜೀವನದ ಕನಿಷ್ಠ ಅವಶ್ಯಕತೆಗಳ ಪೂರೈಕೆಯಾಗುತ್ತದೆ.

ಇತಿಹಾಸವನ್ನು ಅಭ್ಯಸಿಸಿದಾಗ ಕಂಡುಬರುವುದೇನೆಂದರೆ, ಶಾರೀರಿಕ ಶ್ರಮಜೀವಿ ವರ್ಗವೇ ಅತ್ಯಂತ ಶೋಷಣೆಗೆ ಒಳಗಾಗಿದೆ. ಇದು ಎಲ್ಲ ನಾಗರಿಕತೆಗಳಲ್ಲಿ ಹಿಂದೆಯೂ ಸತ್ಯವಾಗಿತ್ತು; ಇಂದೂ ಸತ್ಯವಾಗಿದೆ. ಹಿಂದೆ ಹಾಗೂ ಇಂದು ಇದ್ದ ಮತ್ತು ಇರುವ ಕಾರಣವೆಂದರೆ, ಎಲ್ಲ ಶ್ರಮಜೀವಿಗಳಲ್ಲಿ ಶಾರೀರಿಕ ಶ್ರಮಜೀವಿಗಳು ಮಾರಾಟ ಮಾಡಬಲ್ಲ ಕೌಶಲವನ್ನು ಕನಿಷ್ಠ ಪ್ರಮಾಣದಲ್ಲಿ ಹೊಂದಿರುತ್ತಾರೆ. ಆದರೂ ಸಹ, ಸಮಾಜದ ಉಳಿವಿಗಾಗಿ ಅವರ ದುಡಿತವು ಅನಿವಾರ್ಯ. ಇತರರಿಗೆ ಕೀಳೆನಿಸುವ, ಅಸಹ್ಯವೆನಿಸುವ ಕೆಲಸಗಳನ್ನು ಅವರು ಮಾಡುತ್ತಾರೆ. ಅವರು ಸರಕಾರದ ಸಹಾಯ ಹಸ್ತ ಕೋರುತ್ತಾರಷ್ಟೇ. ಅದಕ್ಕವರು ಪಾತ್ರರೂ ಆಗಿದ್ದಾರೆ. ತುಲನಾತ್ಮಕವಾಗಿ, ಕುಶಲರಲ್ಲದ ಶ್ರಮಜೀವಿಗಳು ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಂತೆ, ಸರಕಾರವು ಕನಿಷ್ಠ ಸಂಬಳ ದರವನ್ನು ನಿಗದಿಪಡಿಸಬೇಕು. ಪ್ರತಿಯೊಂದು ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಕನಿಷ್ಠ ವೇತನ ಕಾನೂನುಗಳಿವೆ. ಆದರೆ, ಈ ಕನಿಷ್ಠ ವೇತನಗಳು ಶಾರೀರಿಕ ಶ್ರಮಜೀವಿಗಳ ಬಡತನವನ್ನು ಕಡಿಮೆ ಮಾಡಲಾರದಷ್ಟು ಕೆಳಮಟ್ಟದಲ್ಲಿವೆ. ಪ್ರತಿಯೋರ್ವನಿಗೂ ತನ್ನ ಮೂಲಭೂತ ಅಗತ್ಯಗಳ ಭರವಸೆ ಹೊಂದುವಂತೆ ಪ್ರಉತದ ಕನಿಷ್ಠ ವೇತನವಿರುತ್ತದೆ.

ಕನಿಷ್ಠ ವೇತನ ಗ್ರಹಿಕೆಯ ಟೀಕಾಕಾರರು, ಅದರಿಂದ ನಿರುದ್ಯೋಗ ಮತ್ತು ಅತಿ ಪ್ರಸರಣ ಉಂಟಾಗುತ್ತದೆಯೆಂದು ಪ್ರತಿಪಾದಿಸುತ್ತಾರೆ. ಪ್ರಉತ ಅರ್ಥ ವ್ಯವಸ್ಥೆಯಲ್ಲಿ ಇಂಥ ಪ್ರಸಂಗಗಳು ಉದ್ಭವಿಸುವುದಿಲ್ಲವೆಂದು ನಾನು ಆನಂತರ ವಾದಿಸುವೆ.

ಸರ್ವರಿಗೂ ಕನಿಷ್ಠ ಅಗತ್ಯಗಳನ್ನು ಒದಗಿಸಿದ ಬಳಿಕ ಉಳಿಯುವ ಹೆಚ್ಚುವರಿ ರಾಷ್ಟ್ರೀಯ ಆದಾಯವನ್ನು ಬೇರೆ ಬೇರೆ ಜನರಲ್ಲಿ, ಅವರವರು ಸಮಾಜಕ್ಕೆ ನೀಡುವ ಕೊಡುಗೆಗಳಿಗನುಸಾರ, ಹಂಚಬೇಕು. ಪ್ರಉತದ ವಿವೇಚನಾಯುತ ವಿತರಣೆಯು ವಾಸ್ತವವಾಗಿ

ಒಂದು ಮಾನವೀಯ ಮತ್ತು ನ್ಯಾಯಯುತವಾದ ರಾಷ್ಟ್ರೀಯ ಉತ್ಪನ್ನ ವಿತರಣೆ ಅಥವಾ ನಿಕ್ಕಿ ರಾಷ್ಟ್ರೀಯ ಉತ್ಪಾದನೆ (ಎನ್.ಎನ್.ಪಿ. ನೆಟ್ ನ್ಯಾಶನಲ್ ಪ್ರಾಡಕ್ಟ್) ಯಲ್ಲಿ ಸಂಪತ್ತಿನ ಸವಕಳಿಯನ್ನು ಕಳೆದುಳಿದ ಬಾಕಿಗೆ ಸಮನಾಗಿರುತ್ತದೆ. ಈಗ ಕೆಳಗಿನ ಸಂಕೇತ ಬಳಸಿ ಸೂತ್ರ ಕಂಡು ಹಿಡಿಯುವಾ.

NNP = ನಿವ್ವಳ ರಾಷ್ಟ್ರೀಯ ಉತ್ಪಾದನೆ
S = ಹೆಚ್ಚುವರಿ ರಾಷ್ಟ್ರೀಯ ಆದಾಯ
W = ವೇತನ ದರ – ಕನಿಷ್ಠ ಜೀವನ ಮಟ್ಟಕ್ಕೆ ಅನ್ವಯಿಸಿದ್ದು
L = ಕಾರ್ಮಿಕರ ಸಂಖ್ಯೆ
S = NNP - WL

TPj ಎಂದರೆ 'j' ವ್ಯಕ್ತಿಯು ಅರ್ಥ ವ್ಯವಸ್ಥೆಗೆ ಕನಿಷ್ಠ ನೈಜ ವೇತನಕ್ಕಿಂತ ಹೆಚ್ಚಿಗೆ ನೀಡುವ ಒಟ್ಟು ಉತ್ಪಾದನೆಯ ಫಲ ಎಂದು ತಿಳಿಯಿರಿ. ಆಗ ಪ್ರಉತ ಮಾರ್ಗದರ್ಶಿ ಸೂತ್ರಗಳ ಮೇರೆಗೆ, ವಿವೇಚನಾಯುತ ವಿತರಣೆಯೆಂದರೆ, 'j' ನೆಯ ವ್ಯಕ್ತಿಯ ಆದಾಯ ಪ್ರೇರಕವು (I) ಈ ಸೂತ್ರಾನುಸಾರ ಇರುತ್ತದೆ :

$$I_j = (NNP-WL)\frac{TP_j}{\sum_{j=1}^{n} TP_j}$$

$$= S\frac{TP_j}{\sum_{j=1}^{n} TP_j}$$

ಇಲ್ಲಿ N ಎಂದರೆ W ಕ್ಕಿಂತ ಹೆಚ್ಚಾಗಿ ಉತ್ಪಾದಿಸುವ ವ್ಯಕ್ತಿಗಳ ಸಂಖ್ಯೆ.

ಈ ವಿತರಣೆಯ ತತ್ತ್ವವನ್ನು ಒಂದು ಸರಳ ಉದಾಹರಣೆಯಿಂದ ವಿಶದೀಕರಿಸ ಬಹುದು. ಶ್ರಮ ಬಲವೊಂದೇ ಉತ್ಪಾದನೆಯ ಅಂಶವೆಂದು ತಿಳಿಯಿರಿ. ಶ್ರಮ ಬಲದಲ್ಲಿ ಐವರು ವ್ಯಕ್ತಿಗಳಿದ್ದರೆ, ಆಗ

L = 5 ಆಗುತ್ತದೆ.

ಇಂದಿನ ರೂಪಾಯಿಗಳ ರೂಪದಲ್ಲಿ ಅವರ ಮಾಸಿಕ ಆದಾಯವನ್ನು 100, 200, 1,000, 1,500 ಎಂದು ಅಳೆಯಲಾಗಿದೆಯೆಂದೂ ತಿಳಿಯಿರಿ. ಆಗ NNP = 3,100, ಈಗ ಕನಿಷ್ಠ ಅಗತ್ಯ ಪೂರೈಸಲು ವೇತನ ದರವು 500 ಎಂದು ತಿಳಿಯಿರಿ. ಆಗ ಮೂವರು, ಕನಿಷ್ಠ ಜೀವನ ಪ್ರಮಾಣ ರೇಖೆಯ ಕೆಳಗೆ ಇರುವರು ಹಾಗೂ ಇಬ್ಬರು ಅತಿ ಸಮೃದ್ಧ ಜೀವನ ಮಟ್ಟಗಳಲ್ಲಿ ಲೋಲಾಡುತ್ತಿರುವರು. ಈ ಪರಿಸ್ಥಿತಿಯು, ಬಹುತೇಕ ರಾಷ್ಟ್ರಗಳಲ್ಲಿರುವ ಇಂದಿನ

ನೈಜ ಸ್ಥಿತಿಗಿಂತ ಭಿನ್ನವಾಗಿಲ್ಲ. ಆ ರಾಷ್ಟ್ರಗಳಲ್ಲಿ ಅಲ್ಪ ಸಂಖ್ಯಾತರು ಆದಾಯದ ಬಹ್ವಂಶವನ್ನು ಕಬಳಿಸುತ್ತಿದ್ದಾರೆ. ಅರ್ಥ ವ್ಯವಸ್ಥೆಯನ್ನು ಅದರ ಮಟ್ಟಿಗೆ ಬಿಟ್ಟುಬಿಟ್ಟರೆ, ಆಗ ಈ ಐದು ಜನರಲ್ಲಿ ಬಹುಸಂಖ್ಯಾತರು ಎಂದೆಂದಿಗೂ ನಿಮ್ನ ಮಟ್ಟದ ಜೀವನದಲ್ಲಿಯೇ ಕೊರಗುವರು. ಆದರೆ ಪ್ರಉತ ಪ್ರತಿಯೋರ್ವನಿಗೆ ಪ್ರತಿ ತಿಂಗಳು 500 ರೂಪಾಯಿ ಆದಾಯ ಲಭಿಸುವಂತೆ ಭರವಸೆ ನೀಡುತ್ತದೆ. ಮತ್ತು ಬಾಕಿ ಉಳಿತಾಯವನ್ನು ಮೇಲ್ಮಟ್ಟದ ಇಬ್ಬರಲ್ಲಿ ಅವರ ಉತ್ಪಾದಕತೆಗೆ ಅನುಸರಿಸಿ ಹಂಚುತ್ತದೆ. ಇಬ್ಬರು ಸಿರಿವಂತರ ಆದಾಯಗಳು ಅವರು ಸಮಾಜಕ್ಕೆ ಸಲ್ಲಿಸುವ ಕೊಡುಗೆಯಲ್ಲಿ ಪ್ರತಿಫಲಿತವಾಗಿದ್ದರೆ, ಈ ಗ್ರಹಿಕೆಯು ಯಾವಾಗಲೂ ಸಿಂಧುವಾಗಿರದು. ಹೆಚ್ಚುವರಿ ಆದಾಯವನ್ನು ಈ ರೀತಿ ನಿರ್ಧರಿಸಬಹುದು : ಇಲ್ಲಿ

$$n \neq 2, \sum_{j} TPj$$
$$= 1000 + 1500$$
$$= 2500$$

ಮತ್ತು

$$S = 3100 - 2500$$
$$= 600$$

1,000 ರೂಪಾಯಿ ಗಳಿಸುವ ಮನುಷ್ಯನ ಆದಾಯ ಪ್ರೇರಕವು ಈ ಕೆಳಗಿನಂತಾಗುತ್ತದೆ.
600 X (1000/2500) = 240

ಆದೇ ಇನ್ನೋರ್ವನ ಆದಾಯ ಪ್ರೇರಕವು 600 X (1500/2500) = 360 ಆಗುತ್ತದೆ. ಆದ್ದರಿಂದ, ಸಾಮಾಜಿಕ ಮಧ್ಯ ಪ್ರವೇಶಕ್ಕಿಂತ ಮುನ್ನ ಆದಾಯ ವಿತರಣೆಯು ಹೀಗಿತ್ತು :

(100, 200, 300, 1,000, 1,500) ಆದರೆ ಪ್ರಉತ ಸೂತ್ರಾನುಸಾರ, ಅದು

(500, 500, 500, 740, 860) ಎಂದಾಗುತ್ತದೆ.

ಪ್ರಉತ ವಿತರಣಾತ್ಮಕ ನ್ಯಾಯಕ್ಕೆ ಇದೊಂದು ಉದಾಹರಣೆ. ಈ ವಿತರಣೆಯು ಪೂರ್ಣವಾಗಿ ಸಮಾನವಿಲ್ಲವೆಂಬುದು ತೀರ ಸುಸ್ಪಷ್ಟವಿದೆ. ಒಂದು ವೇಳೆ, ಸಮುದಾಯವು ಅರ್ಥನೀತಿಯಲ್ಲಿ ಮಧ್ಯ ಪ್ರವೇಶಿಸದಿದ್ದರೆ ಆಗುವಷ್ಟು ಓರೆಯಾಗಿಯೂ ಇಲ್ಲ. ಆದ್ದರಿಂದ ಪ್ರಉತ ವ್ಯವಸ್ಥೆಯು ಅಸಮತೆಯನ್ನು ಕಡಿಮೆ ಮಾಡುತ್ತದೆ. ಆದರೆ ಹೆಚ್ಚು ಪರಿಶ್ರಮಿಸಿ ಕೆಲಸ ಮಾಡಲು ಪ್ರೇರಣೆಯನ್ನು ನಾಶಮಾಡದು.

ಒಂದು ವೇಳೆ, NNP ನಿ.ರಾ.ಉ. (ನಿಕ್ಕಿ ರಾಷ್ಟ್ರೀಯ ಉತ್ಪಾದನೆ), ಎಲ್ಲ ವ್ಯಕ್ತಿಗಳ ಕನಿಷ್ಠ ಅಗತ್ಯಗಳನ್ನು ಪೂರೈಸದಷ್ಟಿದ್ದರೆ ಮುಂದೇನು? ಭಾರತವೂ ಸೇರಿದಂತೆ ಅನೇಕ ಅನಭಿವೃದ್ಧ ರಾಷ್ಟ್ರಗಳು ತಮ್ಮ ಸಂಪನ್ಮೂಲಗಳನ್ನು ಪೂರ್ಣ ಬಳಕೆ ಮಾಡುತ್ತಿಲ್ಲ. ಅಲ್ಲಿ NNP ಪ್ರಉತ ವ್ಯಾಖ್ಯಾನದ ಮೇರೆಗೆ ಪ್ರತಿಯೋರ್ವನ ಕನಿಷ್ಠ ಆವಶ್ಯಕತೆಗಳನ್ನು ಪೂರೈಸುವಷ್ಟು ಇರಲಿಕ್ಕಿಲ್ಲ.

ಇಂಥ ಪ್ರಸಂಗಗಳಲ್ಲಿ ಪ್ರೇರಕ ನೀಡಲು ಏನೂ ಉಳಿಯದಿರಬಹುದು. ಈಗ ವಿವೇಚನಾಯುತ ವಿತರಣೆಯ ತತ್ತ್ವಕ್ಕೆ ಎರಡು ಆಕ್ಷೇಪಣೆಗಳನ್ನು ಎತ್ತಬಹುದು. ಮೊದಲನೆಯದೆಂದರೆ, ಕನಿಷ್ಠ ಅವಶ್ಯಕತೆಗಿಂತ ಹೆಚ್ಚು ಉತ್ಪಾದಿಸುವವರ ಹೆಚ್ಚುವರಿ ಆದಾಯವನ್ನು ಕೊಂಡೊಯ್ದುಬಿಟ್ಟರೆ, ಮತ್ತು ಅದನ್ನು ಕಡು ಬಡವರಲ್ಲಿ ಮತ್ತು ಪ್ರಚಲಿತ ನಿರುದ್ಯೋಗಿಗಳಾಗಿರುವವರಲ್ಲಿ ಮರು ಹಂಚಿಕೆ ಮಾಡಿದರೆ, ಆಗ ಅತಿ ಹೆಚ್ಚು ಉತ್ಪಾದಿಸುವ ವ್ಯಕ್ತಿಗಳು ನಿರುತ್ಸಾಹಿತರಾಗಿ ತಮ್ಮ ಸ್ವಂತ ಉತ್ಪಾದನೆಯನ್ನೇ ಕಡಿಮೆ ಮಾಡಬಹುದು. ಆನಂತರ ಇದು ರಾಷ್ಟ್ರೀಯ ಆದಾಯದ ಹಾನಿಯಾಗಿ ಪರಿಣಮಿಸುತ್ತದೆ. ಎರಡನೆಯದೆಂದರೆ, ಆದಾಯದ ವಿವೇಚನಾಯುತ ವಿತರಣೆಯು ವರ್ತಮಾನದ ಬಳಕೆಯನ್ನು ಹೆಚ್ಚಿಸುತ್ತದೆ; ಇತ್ತ ಉಳಿತಾಯವನ್ನು ಕಡಿಮೆ ಮಾಡುತ್ತದೆ. ತನ್ಮೂಲಕ ಬೆಳವಣಿಗೆಯ ಗತಿಯನ್ನು ಬಾಧಿಸುತ್ತದೆ. ವಿಶೇಷತಃ ಜನಸಂಖ್ಯೆಯ ಏರುವಿಕೆಯ ದೃಷ್ಟಿಯಿಂದ ಇದು ತುಂಬಾ ತೀವ್ರ ಪರಿಣಾಮಗಳಿಗೆ ಔತಣವೀಯುವುದೆಂದು ವಾದಿಸಲೂಬಹುದು. ಮೇಲಾಗಿ ಇದು ದೀರ್ಘ ಕಾಲಾನಂತರ, ಈಗಿನ ಬಡತನದ ಬವಣೆಗೊಳಗಾದ ಜನರೂ ಸೇರಿದಂತೆ, ಪ್ರತಿಯೋರ್ವನ ಬಡತನವನ್ನೇ ಹೆಚ್ಚಿಸಬಹುದಾಗಿದೆ.

ಈ ವಾದಗಳನ್ನು ಪ್ರಉತ ಉಪೇಕ್ಷಿಸುವುದಿಲ್ಲ. ಪ್ರತಿಯಾಗಿ ಈಗ, ಭಾರದಲ್ಲಾಗಲಿ ಇತರತ್ರವಾಗಲಿ ಪ್ರಚಲಿತ ಸಂಪನ್ಮೂಲಗಳನ್ನು ದಕ್ಷವಾಗಿ ಉಪಯೋಗಿಸುತ್ತಿಲ್ಲವೆಂದು ಅದು ಪ್ರತಿವಾದ. ಬೌದ್ಧಿಕ ಸಾಮರ್ಥ್ಯಗಳನ್ನಷ್ಟೇ ಹಾಳು ಮಾಡುತ್ತಿಲ್ಲ. ಮೇಲಾಗಿ ಭೌತಿಕ ಸಂಪನ್ಮೂಲಗಳನ್ನು ಸಹ ಸರಿಯಾಗಿ ವಿನಿಯೋಗಿಸುತ್ತಿಲ್ಲ. ಕನಿಷ್ಠ ಅವಶ್ಯಕತೆಗಳನ್ನು ಒದಗಿಸುವಲ್ಲಿ ವಿವೇಚನಾಯುತ ವಿತರಣೆಯು ಅಯಶಸ್ವಿಯಾದ ದೇಶದಲ್ಲಿ ಐಷಾರಾಮಿ ವಸ್ತುಗಳ ಹಾಗೂ ಸೇವೆಗಳ ಉತ್ಪಾದನೆಯು ಸಂಪನ್ಮೂಲಗಳ ದುರ್ವಿನಿಯೋಗವೇ ಸರಿ. ಇಂಥ ಪ್ರಸಂಗಗಳಲ್ಲಿ ಪ್ರಉತ ಐಷಾರಾಮಿ ವಸ್ತುಗಳ ಉತ್ಪಾದನೆಯನ್ನು ಸಂಪೂರ್ಣ, ತಡೆದು ಅವುಗಳ ಯಂತ್ರೋಪಕರಣಗಳನ್ನು ಇಂದಿನ ಹಾಗೂ ಮುಂದಿನ ಅಗತ್ಯಗಳನ್ನು ಉತ್ಪಾದಿಸಲು ಬಳಸಲಾಗುವುದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಪ್ರಉತ ಮೊತ್ತಮೊದಲು ಸಂಪನ್ಮೂಲಗಳ ವಿನಿಯೋಗವನ್ನು ಸರಿಪಡಿಸುತ್ತದೆ. ಅಗತ್ಯ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಮತ್ತು ಸೂಕ್ತವೆನಿಸಿದಾಗ ತನ್ನ ವಿವೇಚನಾಯುತ ಹಂಚಿಕೆಯ ವ್ಯವಸ್ಥೆಯನ್ನು ಜಾರಿಗೊಳಿಸುತ್ತದೆ.

ಕನಿಷ್ಠ ಹಾಗೂ ಗರಿಷ್ಠ ವೇತನ :

ಆದಾಯ ವಿತರಣೆಯ ಯಾವುದೇ ವ್ಯವಸ್ಥೆ ಕುರಿತು ಪರೀಕ್ಷಿಸುವಾಗ, ಮುಳ್ಳು ಚುಚ್ಚುವಂಥ ಪ್ರಶ್ನೆಗಳು ಎದುರಾಗುತ್ತವೆ. ಸಮಾಜದಲ್ಲಿ ಅಸಮತೆಯ ಗರಿಷ್ಠ ಮಟ್ಟವಾವುದು? ಆದಾಯಗಳ ಸಂಪೂರ್ಣ ಸಮಾನತೆಯು ಸಾಧುವೂ ಅಲ್ಲ; ಸಾಧ್ಯವೂ ಅಲ್ಲ ಎಂಬ ತಥ್ಯವನ್ನು ಈ ಪ್ರಶ್ನೆಯು ಮನ್ನಿಸುತ್ತದೆ. ಇದಲ್ಲದೆ, ಸರಕಾರವು ಮಧ್ಯ ಪ್ರವೇಶಿಸದ ಕಾರಣ ಅತ್ಯಂತ ಅಸಮವೂ ಹಾಗೂ ಶಾರೀರಿಕ ಶ್ರಮ ಜೀವಿಗಳ ಶೋಷಣಾಕಾರಿಯೂ ಆಗಿದೆ. ಹಾಗೂ ಹಿಂದೆಯೂ ಆಗಿತ್ತೊ ಎಂದು ಈ ಪ್ರಶ್ನೆ ಭಾವಿಸುತ್ತದೆ.

ಸೃಜನಾತ್ಮಕ ಅಥವಾ ಅನುಕೂಲಕರ ಅಸಮಾನತೆಯ ಪ್ರಶ್ನೆಯನ್ನು ಪಂಡಿತರು ಎತ್ತಿದ್ದಾರೆ. ಮತ್ತು ಚರ್ಚಿಸಿದ್ದಾರೆ. ಆದರೆ ಇದುವರೆಗೆ ಯಾವುದೇ ವ್ಯವಹಾರಿಕ ಮಾರ್ಗದರ್ಶಿ ಸೂತ್ರಗಳನ್ನು ಹುಡುಕಿಲ್ಲ. ಹಲವು ಸೈದ್ಧಾಂತಿಕ ಪರಿಹಾರಗಳೇನೋ ಇವೆ. ಆದರೆ, ಕಾರ್ಯಸಾಧುವಾದ ಉಪಾಯಗಳಿಲ್ಲ. ಇಲ್ಲಿ ನನ್ನ ಮುಖ್ಯ ಸಂಬಂಧವು ಸೈದ್ಧಾಂತಿಕ ವಾಗಿ ಭದ್ರವಾದ ನಿರ್ಣಯಗಳೊಂದಿಗೆ ಅಲ್ಲ, ಆದರೆ ಅನುಷ್ಠಾನಪರ ಧೋರಣಾತ್ಮಕ ವಿಷಯ ಗಳೊಂದಿಗೆ ಇದೆ. ಸಕಲ ವ್ಯಕ್ತಿಗಳಿಗೆ ಆದಾಯದ ಅಂಚಿನ ತುಷ್ಟೀಕರಣ (Marginal Utility) ದಲ್ಲಿ ಸಮಪಾಲು ದೊರೆಯುವಂತೆ ರಾಷ್ಟ್ರೀಯ ಆದಾಯದ ಹಂಚಿಕೆಯಾಗ ಬೇಕೆಂದು ಹಲವು ಪಂಡಿತರ ಸಲಹೆ. ಜನರ ರುಚಿಗಳು ಭಿನ್ನ ಭಿನ್ನ. ಹೀಗಾಗಿ ಈ ನಿಯಮವು ಗರಿಷ್ಠ ಸಾಮಾಜಿಕ ಕಲ್ಯಾಣದತ್ತ ಕರೆದೊಯ್ಯಬಹುದು. ಆದರೆ ಸಂಪೂರ್ಣ ಸಮತೆಯನ್ನು ಉಂಟು ಮಾಡದು. ಬಹುತೇಕ ರಾಷ್ಟ್ರಗಳು ಅಳವಡಿಸಿಕೊಂಡಿರುವ ಪ್ರಗತಿಪರ ಆದಾಯ ಕರಾಕರಣೆಯ ಗ್ರಹಿಕೆಗೆ ಈ ವಾದವೇ ತಾತ್ವಿಕ ತಳಹದಿ ಒದಗಿಸಿದೆ. ಈ ಕರವು ಹೆಚ್ಚಾಗಿ ಸಿರಿವಂತರಿಂದ ಅಧಿಕ ಹಣ ಕೊಂಡೊಯ್ಯುವುದೇ ಹೊರತು ಕಡು ಬಡವರಿಂದಲ್ಲ. ಕರ ಆದಾಯವನ್ನು ಆಳ ಕಂದಕದ ಆದಾಯ ಮಟ್ಟದಲ್ಲಿರುವವರಿಗಾಗಿ ವ್ಯಯಿಸಬೇಕೆಂಬ ಭಾವನೆಯು ಇದರಲ್ಲಿ ನಿಹಿತವಾಗಿದೆ.

ವೈಯಕ್ತಿಕ ಅಂಚಿನ ತುಷ್ಟೀಗುಣಗಳನ್ನು ಸಮಾನಗೊಳಿಸುವಲ್ಲಿ ಎದುರಾಗುವ ಪ್ರಶ್ನೆಯೆಂದರೆ, ಅವುಗಳನ್ನು ಲೆಕ್ಕ ಹಾಕಲು ಬರುವಂತಿಲ್ಲ. ಇಲ್ಲವೆ ಅವುಗಳ ಮೊತ್ತ ಕುರಿತು ಸಹ ನಮಗೆ ಅಜಮಾಸ ಕಲ್ಪನೆಯೂ ಇಲ್ಲ. ಹೀಗಾಗಿ ಅಂಚಿನ ತುಷ್ಟೀಗುಣ ನಿಯಮವು ವ್ಯಾವಹಾರಿಕವಾಗಿ ನಿಷ್ಪ್ರಯೋಜಕವಿರದಿದ್ದರೂ ಅಪೂರ್ಣವಂತೂ ಆಗಿದೆ. ಅದೇ ರೀತಿ, ಆದಾಯದ ಪ್ರಗತಿಪರ ಕರಾಕರಣೆಯ ದಕ್ಷತೆಯು ಸಿರಿವಂತರ ಪ್ರಾಮಾಣಿಕತೆಯನ್ನೇ ಅವಲಂಬಿಸಿದೆ. ಅಂದಮೇಲೆ ಈ ನೀತಿಯ ಯಶಸ್ಸು ಕರದಾತನ ಕರುಣೆಯನ್ನವಲಂಬಿಸಿದೆ. ಈ ಯಶಸ್ಸಿನ ಸಂಭವನೀಯತೆಯೇನು ? ವಾಸ್ತವಿಕವಾಗಿ ಬರೀ ಶೂನ್ಯ; ಪ್ರಾಮಾಣಿಕ ಬದುಕಿನಿಂದ ಯಾವನೂ ಸಿರಿವಂತನಾಗಲಾರ ಎಂಬ ನಾಣ್ಣುಡಿಯಿಂದ ಇದರ ಸಿಂಧುತ್ವವನ್ನು ಕರ – ನ್ಯಾಯಾಲಯದಲ್ಲಿ ಸಿದ್ಧಪಡಿಸಲಾರೆವು. ಆದರೆ ಬಹುತೇಕ ಜನರು ತಿಳಿದಿರುವಂತೆ ಇದುವೇ ಜೀವನ ರೀತಿಯಾಗಿದೆ. ಆದ್ದರಿಂದ ಪ್ರಗತಿಪರ ಕರಾಕರಣ ವ್ಯವಸ್ಥೆಯು ಅಪ್ರಾಮಾಣಿಕ ಜನರ ಪ್ರಾಮಾಣಿಕತೆಯ ಮೇಲೆ ನಿಂತಿದೆ. ಭಾರತದಲ್ಲಿಯೇ ಆಗಲಿ ಇಲ್ಲವೆ ಇತರ ದೇಶಗಳಲ್ಲಿಯೇ ಆಗಲಿ, ಎಷ್ಟು ಜನರು ತಮ್ಮ ಕರದ ಪೂರ್ಣ ಪಾಲು ತುಂಬುವರು. ಅಂಥವರು ಕೈ ಬೆರಳ ಮೇಲೆ ಎಣಿಸುವಷ್ಟು ಮಾತ್ರ. ಹಲವಾರು ದೇಶಗಳಲ್ಲಿ ರಾಜಕೀಯ ಮುಖಂಡರೂ ಸಹ ತಮ್ಮ ಕರಗಳನ್ನು ಕಾಯದೆ ವಿರೋಧವಾಗಿ ತಪ್ಪಿಸುತ್ತಾರೆ. ಆದ್ದರಿಂದ ಕೇವಲ ಆದಾಯದ ಪ್ರಗತಿಪರ ಕರಾಕರಣೆಯಷ್ಟೇ ಸಾಲದು. ದೋಷಮುಕ್ತವಾದ ವ್ಯವಸ್ಥೆಯೊಂದು ಬೇಕು.

ಒಂದು ವೇಳೆ, ಸರಕಾರವು ಸಿರಿವಂತರಿಂದ ಸಾಕಷ್ಟು ಕಂದಾಯವನ್ನು ಸಂಗ್ರಹಿಸಿದರೂ ಸಹ, ಅದನ್ನು ಬಡವರ ಮಧ್ಯೆ ವಿತರಿಸುವ ಸಮಸ್ಯೆ ಉಳಿದೇ ಉಳಿಯುತ್ತದೆ. ಏಕೆಂದರೆ, ಈ

ವಿತರಣೆಯೂ ಸಹ ಭ್ರಷ್ಟ ರಾಜಕೀಯ ಮುಖಂಡರನ್ನು ಹಾಗೂ ಅಧಿಕಾರಶಾಹಿಯನ್ನು ಅವಲಂಬಿಸಿರುತ್ತದೆ. ಇನ್ನು ಅವರಂತೂ ಪುಟ್ಟಾಪೂರ ಭ್ರಷ್ಟರೇ. ಅವರಿಗೆ ಮೊತ್ತಮೊದಲು ತಮ್ಮ ಜೇಬು ತುಂಬಿಕೊಳ್ಳುವ ಚಿಂತೆ. ನಂತರ ತಮ್ಮ ಬಂಧುಬಳಗ ಅನಂತರ ತಮ್ಮ ಸ್ವಂತ ಇಷ್ಟ – ಮಿತ್ರರು ಮತ್ತು ಕೊನೆಗೆ, ಯಾರಾದರೂ ಇದ್ದರೆ ಅವರೇ ಅಗತ್ಯವಿರುವವರು. ಸಂಯುಕ್ತ ಸಂಸ್ಥಾನ, ಭಾರತ ಮತ್ತಿತರ ದೇಶಗಳಲ್ಲಿ ಅನೇಕ ಕಲ್ಯಾಣಕಾರಿ ಯೋಜನೆಗಳ ಅಪಯಶಕ್ಕೆ ಇದುವೇ ಮೂಲ ಕಾರಣವಾಗಿದೆ. ಒಂದು ವೇಳೆ, ಅಧಿಕಾರ ಶಾಹಿ ಭ್ರಷ್ಟವಿರದಿದ್ದರೂ ಸಹ, ಅವರ ದುರಾಡಳಿತವು ಹಲವು ಭಾರಿ ಫಲಾನುಭವಿಗಳಿಂದ ವಿಪುಲ ಹಣ ಹಾಳಾಗಲಿಕ್ಕೂ ಹಾಗೂ ವಂಚನೆಗೂ ಕಾರಣವಾಗುತ್ತದೆ. ಸಾಮಾಜಿಕ ಮತ್ತು ರಾಜಕೀಯ ಸಮಾನತೆಯು ಸರಕಾರದ ಭಿಕ್ಷೆಯ ಮೇಲೂ ನಿಂತಿರಕೂಡದು; ಇಲ್ಲವೆ ಕರದಾತನ ಮತ್ತು ಫಲಾನುಭವಿಯ ಪ್ರಾಮಾಣಿಕತೆಯ ಮೇಲೂ ನಿಂತಿರಕೂಡದು. ಅದನ್ನು ಆರ್ಥಿಕ ವ್ಯವಸ್ಥೆಯನ್ನು ರಚಿಸುವಲ್ಲಿಯೇ ಅಳವಡಿಸಬೇಕು. ಸರಕಾರದ ಚಂಚು ಪ್ರವೇಶವಿಲ್ಲದೆ ಅದು ಕಾರ್ಯ ಮಾಡುವಂತಿರಬೇಕು. ಪ್ರಉತದ ಅರ್ಥ ನೀತಿಯು ಇಂಥ ಸಮಾನತ್ವದ ವ್ಯವಸ್ಥೆಯನ್ನು ಹುಟ್ಟಿಸುವುದೆಂದು ನಾನೀಗ ಪ್ರತಿಪಾದಿಸುತ್ತೇನೆ.

ಆದಾಯ ಸಮಾನತೆ ಕುರಿತು ಸದ್ಯೋಭವಿಷ್ಯತ್ತಿನಲ್ಲಿ ಏನು ಮಾಡಬೇಕು ? ಪ್ರಉತ ವ್ಯವಸ್ಥೆಯು ಒಂದು ದಿನ ವಾಸ್ತವ ರೂಪ ತಾಳಲಿದೆ. ಆದರೆ ಇಂದು ಅದರ ಅಸ್ತಿತ್ವವಿಲ್ಲ. ಯಾವುದೇ ಪ್ರಗತಿಪರ ವಿಚಾರವನ್ನು ಎಂದೆಂದಿಗೂ ಗೂಟಕ್ಕೆ ತೂಗ ಹಾಕಲಾರವು. ಆದರೆ ಅದು ಕಾರ್ಯರೂಪ ತಾಳಲು ಕಾಲಾವಧಿ ಬೇಕು. ಸಾಮಾಜಿಕ ಘರ್ಷಣೆ ಮತ್ತು ತ್ಯಾಗಗಳೂ ಬೇಕು. ಈತನ್ಮಧ್ಯೆ, ಉತ್ಪನ್ನದ ಮಹದಂತರವನ್ನು ಕಡಿಮೆ ಮಾಡಲು ಏನು ಮಾಡಬೇಕು?

ಆರಂಭದಲ್ಲಿ, ಜಪ್ತಿಯನ್ನೊಳಗೊಳ್ಳದ ಯಾವುದೇ ವಿಧದ ಕರಾಕರಣೆಯು ಆದಾಯದ ಅಸಮಾನತೆಯನ್ನು ತೊಡೆಯಲಾರದಂಬುದನ್ನು ನಾವು ಗಮನಿಸಬೇಕು. ಇಂದು ಆದಾಯದ ಜಪ್ತಿಯು ಸಾಧ್ಯವೂ ಅಲ್ಲ. ಇಷ್ಟವೂ ಅಲ್ಲ. ಆಂದಮೇಲೆ ಬೇರಿನ್ನೇನು ಮಾಡಬೇಕು? ಅಧಿಕ ಸಂಬಳ ದರಗಳ ಮೇಲೇಕೆ ಮಿತಿ ವಿಧಿಸಬಾರದು? ಅಸಮಾನತೆಯ ಪಾರ್ಶ್ವಗಳು ಎರಡು. ಉದಾ : ಶಾರೀರಿಕ ಶ್ರಮಜೀವಿಗಳ ಅತ್ಯಂತ ಕಡಿಮೆ ಆದಾಯಗಳು ಮತ್ತು ಆರ್ಥಿಕ ಅಧಿಕಾರ ಸಂಪನ್ನ ಉನ್ನತ ಶ್ರೇಣಿಯವರ ಶೋಷಣಾತ್ಮಕ ಆದಾಯಗಳು.

1978 ರಲ್ಲಿ ಜನರಲ್ ಮೋಟರ್ಸ ಕಂಪನಿಯ ವರಿಷ್ಠ ಕಾರ್ಯನಿರ್ವಾಹಕನು ಒಂದು ದಶಲಕ್ಷ ಡಾಲರಿಗೂ ಮಿಕ್ಕಿ ಹಣ ಆರ್ಜಿಸಿದನು. ಅವನು ಹಲಕೆಲವು ಅರ್ಥನೀತಿಜ್ಞರೊಡ ಗೂಡಿ, ಅಮೇರಿಕೆ ಸಮಾಜಕ್ಕೆ ತಾನು ನೀಡಿದ ಕೊಡುಗೆಯ ಫಲ ಎಂದು ವಾದಿಸಬಹುದು. ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನು ಕೇವಲ ಎರಡು ಲಕ್ಷ ಡಾಲರ ಮಾತ್ರ ಪಡೆಯುತ್ತಾನೆಂದು ನೆನಪಿಸಿ ಹೇಳಿದರೂ ಸಹ ಅವರು ತಮ್ಮ ಛಲಕ್ಕಂಟುವರು. ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಕೆಲಸವು ಜನರಲ್ ಮೋಟರ್ಸ ಅಧ್ಯಕ್ಷರ ಕೆಲಸದಷ್ಟೇ ಮಹತ್ವದ್ದಲ್ಲ ಎಂದವರ ಭಾವನೆ; ಬಂಡವಾಳವಾದದ ವಿಪರ್ಯಾಸಗಳೇ ಈ ರೀತಿ :

ಪ್ರತಿ ವಾರದ ಪೂರ್ಣಾವಧಿಯ 40 ಘಂಟೆಗಳ ಕೆಲಸಕ್ಕೆ ಅಥವಾ ಪ್ರತಿ ವರ್ಷದ 2080 ಘಂಟೆಗಳ ಕೆಲಸಕ್ಕೆ ಜನರಲ್ ಮೋಟರ್ಸ ಚೇರಮನ್ನನ ಪ್ರತಿ ಘಂಟೆಯ ಗಳಿಕೆಯು 4,890 ಡಾಲರ. 1978 ರಲ್ಲಿಯ ಕನಿಷ್ಠ ವೇತನ ದರವು ಪ್ರತಿ ಘಂಟೆಗೆ 2.65 ಡಾಲರ. ಹೀಗೆ 1978 ರಲ್ಲಿ ಸಂಯುಕ್ತ ಸಂಸ್ಥಾನದಲ್ಲಿಯ ಗರಿಷ್ಠ ವೇತನವು ಅಲ್ಲಿಯ ಕನಿಷ್ಠ ವೇತನದ 1800 ಪಟ್ಟು ಹೆಚ್ಚಾಗಿತ್ತು. ಹೀಗಿರುವಾಗ ಈ ದೈತ್ಯ ಪ್ರಮಾಣದ ಅಸಮಾನತೆಯನ್ನು ಮಾನವೀಯತೆಯ ಹೆಸರಿನಲ್ಲಿ ಹೇಗ ಸಮರ್ಥಿಸಿಕೊಳ್ಳಬಹುದು? ಇನ್ನು ತುಲನೆಗೆ ಬರುವಲ್ಲಿ ನಾವು ಜನರಲ್ ಮೋಟರ್ಸ ಚೇರಮನ್ನನಿಗೆ ತನ್ನ ಸ್ವಂತ ಒಡೆತನದ ಆಸ್ತಿಗಳಾದ ಸ್ಟಾಕ್, ಬಾಂಡಗಳು, ಭೂಮಿ ಮತ್ತು ಕಟ್ಟಡ ಇತ್ಯಾದಿಗಳಿಂದ ಬರುವ ಇನ್ನಿತರ ಗಳಿಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅವರದೂಂದು ಪ್ರತ್ಯೇಕ ಉದಾಹರಣೆಯೆಂದೇನೂ ಅಲ್ಲ. ಫೋರ್ಡ ಮೋಟರ್ಸ, ಐ.ಬಿ.ಎಂ. ಮುಂತಾದ ಸಂಸ್ಥೆಗಳ ಚೇರಮನ್ನರ ಆದಾಯವೂ ಅದೇ ರೀತಿ ಇದೆ. 1988 ರ ಹೊತ್ತಿಗೆ ಈ ಅಸಮಾನತೆಗಳು ಇನ್ನೂ ಹೆಚ್ಚಾಗಿವೆ.

ಇನ್ನು ಭಾರತದಲ್ಲಿ ಮತ್ತು ತೃತೀಯ ಜಗತ್ತಿನಲ್ಲಿ ಪರಿಸ್ಥಿತಿಯು ಭಿನ್ನವಿಲ್ಲ. 1978 ರಲ್ಲಿ ಖಾಸಗಿ ರಂಗದಲ್ಲಿ ವರಿಷ್ಠ ಕಾರ್ಯ ನಿರ್ವಾಹಕನು ಒಟ್ಟು 2,23,350 ರೂಪಾಯಿಗಳನ್ನು ಗಳಿಸಿದನು. ಅಂದರೆ ಪ್ರತಿ ಘಂಟೆಗೆ 1000 ರೂಪಾಯಿಗಳಿಗಿಂತ ಹೆಚ್ಚು. ಭಾರತದಲ್ಲಿ ಗರಿಷ್ಠ ವೇತನ ಮಿತಿಯು ಸುಸ್ಪಷ್ಟವಿದೆ. ಆದರೆ ಕನಿಷ್ಠ ವೇತನ ಮಿತಿಯು ಸ್ಪಷ್ಟವಿಲ್ಲ. ಏಕೆಂದರೆ ಅಲ್ಲಿ ನಿರುದ್ಯೋಗವು ತುಂಬಾ ಹೆಚ್ಚಾಗಿದೆ. ಇನ್ನು ಕೃಷಿ ಕಾರ್ಮಿಕರಿಗೆ ದಿನಾಲು 10 ರಿಂದ 12 ಘಂಟೆ ಬೆವರು ಸುರಿಸಿದ ನಂತರ ಒಂದು ಕೆಲೋ ಗ್ರಾಮಿಗಿಂತ ಹೆಚ್ಚಿನ ದವಸ ಧಾನ್ಯ ದಕ್ಕದು. ಬಹಳ ಉದಾರ ರೀತಿಯಿಂದ ಲೆಕ್ಕ ಹಾಕಿದರೂ ಸಹ ಈ ವೇತನವು ಪ್ರತಿ ಘಂಟೆಗೆ ಅರ್ಧ ರೂಪಾಯಿಗಿಂತ ಹೆಚ್ಚಾಗದು. ಆದ್ದರಿಂದ ಭಾರತದಲ್ಲಿ ಗರಿಷ್ಠ ವೇತನವು ಅಲ್ಲಿಯ ಹೊಟ್ಟೆಬಟ್ಟೆಗೆ ಮಾತ್ರ ಸಾಲುವ ವೇತನದ ಕನಿಷ್ಠ 2000 ಪಟ್ಟು ಹೆಚ್ಚಾಗಿದೆ. 1980 ರ ದಶಕದಲ್ಲಿ ಇನ್ನಷ್ಟು ಏರಿದೆ. ಈ ಕ್ರೂರ ಅಸಮಾನತೆಯನ್ನು ನಾವು ಸ್ವರ್ಗದಲ್ಲಿ ಹೇಗೆ ಸಮರ್ಥಿಸಿಕೊಳ್ಳಬಲ್ಲೆವು?

ಜಗತ್ತಿನ ಅರ್ಥನೀತಿಗಳಲ್ಲಿ ಇಂದು ಗರಿಷ್ಠ ವೇತನ ಮತ್ತು ಕನಿಷ್ಠ ವೇತನಗಳ ಗ್ರಹಿಕೆಯ ಅಗತ್ಯವಿರುವುದು ಸುಸ್ಪಷ್ಟ. ಸಾಮಾಜಿಕ ನ್ಯಾಯದ ಸ್ವರೂಪವನ್ನು ಕಾಯ್ದುಕೊಳ್ಳಲು ಇವೆರಡು ಪರಸ್ಪರ ಸಂಬಂಧ ಹೊಂದಿರಬೇಕು. ಈ ರೀತಿ, ಆದಾಯದ ಅಸಮಾನತೆಗಳೆಂದೂ ಸಮಂಜಸತೆಯ ಮೇರೆ ಮೀರಕೂಡದು. ಈ ಧೋರಣೆಯಡಿ, ಒಂದು ವೇಳೆ ಗರಿಷ್ಠ ವೇತನವು ಏರಿದರೆ, ಕನಿಷ್ಠ ವೇತನವೂ ಏರುತ್ತದೆ ಮತ್ತು ಅಸಮಾನತೆಗಳು ಎಂದೆಂದಿಗೂ ಕಾಣದಂತಾಗವು.

ಗರಿಷ್ಠ ಮತ್ತು ಕನಿಷ್ಠ ವೇತನಗಳು ಹೇಗೆ ಸಂಬಂಧಿಸಿರಬೇಕು ? ಬೇರೆ ರೀತಿಯಲ್ಲಿ ಹೇಳುವುದಾದರೆ, ಸಮಾಜವು ಎಷ್ಟು ಅಸಮಾನತೆಯನ್ನು ಅನುಮೋದಿಸಬಹುದು? ಈ ಪ್ರಶ್ನೆಯನ್ನು ಕೇಳುವುದು ಸುಲಭ. ಆದರೆ ಉತ್ತರಿಸುವುದು ಕಷ್ಟ. ಇಂದು ಹಲವಾರು

ವಿದ್ವಾಂಸರು ಹಿತಕರ ಅಥವಾ ಸೃಜನಾತ್ಮಕ ಅಸಮಾನತೆಯ ಗ್ರಹಿಕೆಯಲ್ಲಿ ನಂಬುಗೆ ಇರಿಸಿದ್ದಾರೆ. ಆದರೆ ಅದನ್ನು ಲೆಕ್ಕ ಹಾಕಲು ಗಣಿತ ಸೂತ್ರವನ್ನು ರೂಪಿಸುವುದು ಅತಿ ಕಷ್ಟಕರ; ಅಸಾಧ್ಯವೆನ್ನಲೂಬಹುದು. ಏಕೆಂದರೆ ಈ ಸಾಹಸದ ದುಸ್ಸಾಧ್ಯತೆಯತ್ತ ಗಮನಿಸಿರಿ. ಹಿತಕರವಾದ ಅಸಮಾನತೆಯೆಂದರೆ, ಉತ್ಪಾದಕ ದಕ್ಷತೆಯನ್ನು ಮತ್ತು ಬೆಳವಣಿಗೆಯನ್ನು ಪೋಷಿಸುವಂಥದ್ದಾಗಿದೆ. ಅದು ನ್ಯಾಯಯುತವೂ ನೀತಿಬದ್ಧವೂ ಆಗಿರಬೇಕೆಂದು ಸಮಾಜ ಶಾಸ್ತ್ರಜ್ಞನು ಹೇಳುತ್ತಾನೆ. ಆರ್ಥಿಕ ಹಾಗೂ ಸಾಮಾಜಿಕ ಸಂಗತಿಗಳಲ್ಲಿ ಅತಿಶಯ ಸರಕಾರಿ ಚುರುಚು ಪ್ರವೇಶವಿರಕೂಡದೆಂದು ಉದಾರವಾದಿಯು ಹೇಳುತ್ತಾನೆ. ಅದು ಪೇಚನ್ನೆದುರಿಸುವುದನ್ನೂ ಉಳಿತಾಯ ಹಾಗೂ ಪ್ರಚೋದಕಗಳನ್ನು ತಡೆಯಬಾರದೆಂದು ಇತರರು ಹೇಳುತ್ತಾರೆ. ಇಲ್ಲಿ ಅತ್ಯಂತ ಅನುಕೂಲಕರ ಅಸಮಾನತೆಯ ಸೂತ್ರವೊಂದನ್ನು ರೂಪಿಸವಂಥ ಒಂದು ನಿಷ್ಪುರ ಹಿತಕಾರಿ ಮಾದರಿಯನ್ನು ರೂಪಿಸಲು ಹೀಗೆಯೇ ಅನೇಕಾನೇಕ ವಿಷಯಗಳನ್ನು ಪರಿಗಣಿಸ ಬೇಕಾಗುತ್ತದೆ. ಸಂಪನ್ಮೂಲಗಳ ಇತಿಮಿತಿಗೊಳಪಟ್ಟು ಸಾಮಾಜಿಕ ಕಲ್ಯಾಣವನ್ನು ಗರಿಷ್ಠೀಕರಿಸುವ ಅರ್ಥನೀತಿಯಲ್ಲಿಯ ರೂಢಿಯು ಪದ್ಧತಿಯನ್ನು ಅನುಸರಿಸಿದರೆ ಇದು ಸಾಧ್ಯವಾಗದು. ಏಕೆಂದರೆ ಸಮಾಜ ಕಲ್ಯಾಣ ಕಾರ್ಯವು ಅಳತೆಗೆ ಎಟುಕದ ಅಸಂಖ್ಯಾತ ಅಸ್ಥಿರ ವಸ್ತುಗಳನ್ನು ಒಳಗೊಂಡಿರುತ್ತದೆ.

ಇಂಥ ಒಂದು ವಾದವನ್ನು ಉದಾರವಾದಿಗಳು ನಿಜವಾಗಿಯೂ ಮುಂದಿಡುತ್ತಾರೆ. ಪೂರ್ಣ ಆದಾಯ ಸಮಾನತೆಯ ಗ್ರಹಿಕೆಯನ್ನು ಸುಲಭವಾಗಿ ಟೀಕಿಸಬಹುದಾದ್ದರಿಂದ ಮತ್ತು ಸೃಜನಾತ್ಮಕ ಅಸಮಾನತೆಯ ಸೂತ್ರವನ್ನು ಇದು ವರೆಗೆ ರೂಪಿಸಿಲ್ಲವಾದ್ದರಿಂದ, ಅನಿಯಮಿತ ಖಾಸಗಿ ಆಸ್ತಿಯ ಸಮರ್ಥಕರು ಸಹ, ಅರ್ಥವ್ಯವಸ್ಥೆಯನ್ನು ಅದರಷ್ಟಕ್ಕೇ ಬಿಡಬೇಕೆಂದು ಪಟ್ಟು ಹಿಡಿಯುತ್ತಾರೆ.

ಇರುವ ಪ್ರಶ್ನೆಯೆಂದರೆ-- ನಮಗೆ ವಿಶ್ವಸಮ್ಮತವಾದ ನಿಷ್ಪುರ ಸೂತ್ರ ಬೇಕಾಗಿದೆಯೇ? ಅಥವಾ ಇಂಥ ಸೂತ್ರ ಬರುವ ವರೆಗೆ ನಾವು ಹಾದಿ ಕಾಯಬಲ್ಲವೇ? ಇಂದು ಸಕಲ ದೇಶಗಳಲ್ಲಿ ಭಯಂಕರ ಆದಾಯದ ಅಸಮಾನತೆಗಳು ವ್ಯಾಪಿಸಿರುವ ದೃಷ್ಟಿಯಿಂದ ನೋಡಿದರೆ, ಉತ್ತರವು ನಿಷೇಧಾತ್ಮಕವೇ ಸರಿ. ನಮಗೆ ಬೇಕಾಗಿರುವುದೇನು? ಪ್ರಾರಂಭಿಲು ಅನುಷ್ಠಾನಪರ ಮಾರ್ಗದರ್ಶಿ ಸೂತ್ರ. ಇನ್ನು ಈ ಮಾರ್ಗದರ್ಶಿ ಸೂತ್ರಕ್ಕಾಗಿ ನಾವು ಅರ್ಥನೀತಿಜ್ಞರತ್ತ ಇಲ್ಲವೆ ಸಮಾಜಶಾಸ್ತ್ರಜ್ಞರತ್ತ ನೋಡುವುದು ಬೇಡ. ಆದರೆ ಯುಗಯುಗಗಳಿಂದ ಬಂದ ಸಂಖ್ಯಾ ವಿಜ್ಞಾನದತ್ತ ನೋಡೋಣ. ಪ್ರಕೃತಿಯಲ್ಲಿಯ ವೈಚಿತ್ರ್ಯ ಮತ್ತು ತನ್ಮೂಲಕ ಇರುವ ಅಸಮಾನತೆಯ ತೀರ ಸಾರರೂಪವಾದ ಪ್ರಾಚೀನ ವಿಚಾರದತ್ತ ನಾವು ಕಣ್ಣು ಹೊರಳಿಸುವಾ:

ಪಾಶವೀಯತೆಯಿಂದ ಮಾನವ ಮನವು ತಂತಾನೇ ರೂಪುಗೊಂಡಾಗ ಅದಕ್ಕೆ ಏಕ ಮತ್ತು ಅನೇಕ ವಿಚಾರವು ಎದುರಾಗಿರಲೇಬೇಕು. ಅದು ಒಂದು ಬಳ್ಳಿಯನ್ನು ಹಾಗೂ ಅದರ ಅನೇಕ ಹೂವುಗಳನ್ನೂ ನಿರುಕಿಸಿದಾಗ, ಇಲ್ಲವೆ ಒಂದು ಗಿಡ ಹಾಗೂ ಅದರ ಹಣ್ಣುಗಳನ್ನು ನಿರುಕಿ ಸಿದಾಗ, ಅದಕ್ಕೆ ಎಣಿಸುವ ಅಗತ್ಯ ಉಂಟಾಗಿರಬೇಕು. ಅರ್ಥಾತ್ ತುಲನೆ ಮಾಡುವುದಕ್ಕೋಸುಗ

ಸಂಖ್ಯೆಗಳ ಅಗತ್ಯ ಉಂಟಾಗಿರಬೇಕು. ಎಲ್ಲವೂ ಒಂದೇ ಬಗೆಯಾಗಿದ್ದರೆ, ಅಂಕಿಗಳ ಅಗತ್ಯವೇ ಇರುತ್ತಿರಲಿಲ್ಲ. ಹೀಗೆ ಸಂಖ್ಯೆಗಳ ವಿಚಾರವೇ ಅಸಮಾನತೆಯ ಸಾರವಾಗಿದೆ. ಇನ್ನು ಇದೇ ರೀತಿ ಅಸಮಾನತೆಯು ಸಂಖ್ಯೆಗಳ ಶೋಧದ ಸಾರವಾಗಿದೆ.

ಇತಿಹಾಸಪೂರ್ವ ಯುಗದಲ್ಲಿ ಮಾನವ ಮನಸ್ಸು ಯಾವ ಉಪಾಯ ಹೂಡಿತು? ಒಂದು ಮತ್ತು ಎರಡರ ಗ್ರಹಿಕೆ : ಅನಂತರ ಮೂರು ಮತ್ತು ನಾಲ್ಕು : ಅನಂತರ ಇದೇ ರೀತಿ ಹತ್ತರ ತನಕ ತಲುಪಲು ಸಹಸ್ರಾರು ವರ್ಷ ಕಳೆದಿರಬೇಕು. ಏನೇ ಇರಲಿ; ಒಂದರಿಂದ ಹತ್ತರ ವ್ಯವಸ್ಥೆಯನ್ನು ಆಧರಿಸಿದ ಎಣಿಕೆಯ ರೂಢಿಯು ಅತೀ ಪ್ರಾಚೀನ ಕಾಲದಿಂದಲೂ ಇದೆ. ಹತ್ತು ತಲುಪಿದಾಗ ಮಾನವನು ನಿಂತ:. ಏಕೆಂದರೆ, ಈ ಹತ್ತು ಅಂಕಿಗಳಿಂದ ಹೆಚ್ಚಿನ ಸಂಖ್ಯೆಗಳನ್ನು ರಚಿಸಬಹುದಾಗಿದೆ. ಎಲ್ಲ ನಾಗರಿಕತೆಗಳ ವಿಷಯವೂ ಇದೇ ರೀತಿ. ಎಣಿಕೆಯ ಈ ಪದ್ಧತಿಗೆ ದಶಾಂಶ ಪದ್ಧತಿ ಎನ್ನುತ್ತಾರೆ. ಈಗ ಸುಸ್ಪಷ್ಟವಾಗಿರುವಂತೆ ದಶಾಂಶ ಪದ್ಧತಿಯು ಕಾಲದ ಹೊಡೆತಗಳನ್ನು ಎದುರಿಸಿ ಉಳಿದು ಬಂದಿದೆ.

ದಶಾಂಶ ಪದ್ಧತಿಯನ್ನಾಧರಿಸಿದ ಎಣಿಕೆಯು ಪ್ರಕೃತಿಯ ಅಮಿತ ವೈಚಿತ್ರ್ಯ ಅರ್ಥಾತ್ ಅಸಮಾನತೆಗಳನ್ನು ಅಳೆಯಬಲ್ಲದು. ಆದರೆ ಅದರಲ್ಲಿ ಸಾಮಾಜಿಕ ಅಸಮಾನತೆಗಳ ಮಾಪನದ ವಾಸ್ತವ ಮಾರ್ಗದರ್ಶಿ ಸೂತ್ರಗಳ ಸೂಚನೆಯಿಲ್ಲ. ಪ್ರಕೃತಿಯ ವೈಚಿತ್ರ್ಯ ದಿಂದಾಗಿಯೇ ಸಾಮಾಜಿಕ ಅಸಮಾನತೆಯುಂಟಾಗುವುದಂತೂ ಖಚಿತ. ದಶಾಂಶ ಪದ್ಧತಿಯ ಸೂಚನೆಯ ಮೇರೆಗೆ ಗರಿಷ್ಠ ವೇತನವು ಹತ್ತು ಪಟ್ಟಿಗಿಂತ ಹೆಚ್ಚಿಗಿರಕೂಡದು ಮತ್ತು ಕನಿಷ್ಠ ವೇತನದ ದುಪ್ಪಟ್ಟಿಗಿಂತ ಕಡಿಮೆ ಇರಕೂಡದು. ಇಲ್ಲಿ ಆದಾಯದ ಅಸಮಾನತೆಯ ಬಗೆಗೆ ಅನುಷ್ಠಾನ ಯೋಗ್ಯ ನಿಯಮ ಉಂಟು. ಪ್ರಯುತೀಯ ವ್ಯವಸ್ಥೆಯ ವಿವೇಚನಾಯುತ ವಿತರಣೆಗಾಗಿ ಇಲ್ಲಿ ಒಂದು ನಿಯಮವಿದೆ.

ಪ್ರತಿಯೋರ್ವನ ಕನಿಷ್ಠ ಅಗತ್ಯಗಳನ್ನು ಪೂರೈಸಿದ ನಂತರ ಯಾವುದೇ ಹೆಚ್ಚುವರಿ ಆದಾಯವಿರದಿದ್ದರೆ ಮಾತ್ರ ಎಲ್ಲ ಉದ್ಯೋಗಿಗಳಿಗೆ ಪೂರ್ಣ ಸಮಾನ ವೇತನ ನೀಡುವುದು ಇಷ್ಟಕರ. ಗರಿಷ್ಠ ವೇತನವು ಕನಿಷ್ಠ ವೇತನದ ದುಪ್ಪಟ್ಟಿಗಿಂತ ಅಧಿಕವಿರದಾಗ ನೈತಿಕ ಆಧಾರದಿಂದ ಆದರ್ಶಪ್ರಾಯವಾದ ಆದಾಯದ ಅಸಮಾನತೆಯು ಇರುತ್ತದೆ. ಇದಕ್ಕಿಂತ ವ್ಯತ್ಯಾಸವು ಕಡಿಮೆಯಾದರೆ, ನ್ಯಾಯಬದ್ಧ ಹಾಗೂ ಪ್ರೇರಕಗಳ ಭಾವನೆಗೆ ಧಕ್ಕೆಯಾಗುತ್ತದೆ. ಆದರೇನು ? ಈ ಆದರ್ಶ ಸಾಧನೆಯು ಇನ್ನೂ ಬಹುದೂರದ ಮಾತು. ಇದರ ನಂತರದ ಅತ್ಯುತ್ತಮ ಪರಿಹಾರವೆಂದರೆ, ಗರಿಷ್ಠ ಹಾಗೂ ಕನಿಷ್ಠ ವೇತನಗಳ ಅಂತರವು 2 ಮತ್ತು 10 ರ ನಡುವಿನ ಗುಣಕವಾಗಿದೆ.

ದಶಾಂಶ ಪದ್ಧತಿಯನ್ನು ಆಧರಿಸಿದ ಆದಾಯ – ಅಸಮಾನತೆಯ ವ್ಯವಸ್ಥೆಯು ಸಮಾಜ ಕಲ್ಯಾಣವನ್ನು ಗರಿಷ್ಠೀಕರಿಸುವುದೇ ? ನನಗೆ ಈ ಕುರಿತು ಖಾತರಿಯಿಲ್ಲ. ಆದರೆ ಅದರಿಂದ ಸಾಮಾಜಿಕ ಕಲ್ಯಾಣವಂತೂ ಹೆಚ್ಚುವುದು. ಏಕೆಂದರೆ ಪ್ರಚಲಿತ ಅರ್ಥ ವ್ಯವಸ್ಥೆಯಲ್ಲಿ ಗರಿಷ್ಠ ವೇತನವು ಕನಿಷ್ಠ ವೇತನದ 3000 ಪಟ್ಟಿಗಿಂತ ಹೆಚ್ಚಾಗಿದ್ದು ಕನಿಷ್ಠ ವೇತನವಂತೂ ಪಾಶವೀಯವಾಗಿದೆ. ಅದನ್ನು ಸಮರ್ಥಿಸುವ ಆಧಾರವು ಯಾವ ಕಲ್ಪನೆಗೂ ನಿಲುಕದು.

ದಶಾಂಶ ಪದ್ಧತಿಯ ಆಷ್ಟೊಂದು ಪಾವಿತ್ರ್ಯವಾದರೂ ಏನು? ಅದು ವೈಜ್ಞಾನಿಕವೇ ಇಲ್ಲವೆ ನೈಸರ್ಗಿಕವೇ ? ಅದು ಹಾಗಿರಲೇಬೇಕು. ಏಕೆಂದರೆ, ತರ್ಕಹೀನವಾದ ಇಲ್ಲವೆ ಅನೈಸರ್ಗಿಕವಾದ ಯಾವುದೂ ಇಷ್ಟೊಂದು ಪ್ರಾಚೀನ ಕಾಲದಿಂದ ಉಳಿದು ಬರಲಾರದು. ಅದನ್ನು ಐಗುಪ್ತರು, ಗ್ರೀಕರು, ರೋಮನ್ನರು, ಚೀನೀಯರು ಮತ್ತು ಹಿಂದುಗಳು ನಮ್ಮ ನೆನಪಿನ ತೆಕ್ಕೆಗೆ ಸಿಕ್ಕುವಷ್ಟು ಸುದೀರ್ಘ ಕಾಲದಿಂದ ಬಳಸುತ್ತ ಬಂದಿದ್ದಾರೆ. ಇಂದಿನ ಸಂಖ್ಯಾ ಶಾಸ್ತ್ರ ವ್ಯವಸ್ಥೆಯನ್ನು ಸ್ಥಾನ ಮೂಲ್ಯ ಪದ್ಧತಿಯನ್ನುತ್ತಾರೆ. ಅನುಷಂಗಿಕವಾಗಿ ಹೇಳುವುದಾದರೆ, ಇದು ಮಾನವತೆಗೆ ಭಾರತವು ನೀಡಿದ ಸನಾತನ ಕೊಡುಗೆ. ಈ ಪದ್ಧತಿಯಲ್ಲಿ ಏಕವು ಆಧಾರ ಹಾಗೂ ಹತ್ತು ಮಾಪನದ ತುತ್ತ ತುದಿ. ಈ ವಿಚಾರವೇ ದಶಾಧಾರಿತ ಆದಾಯ ವಿತರಣೆಯಲ್ಲಿ ಅಳವಟ್ಟಿದೆ. ಇಲ್ಲಿ, ಪ್ರತಿಯೋರ್ವನ ಬೇಡಿಕೆಗಳನ್ನು ಪೂರೈಸುವ ಕನಿಷ್ಠ ವೇತನವು ಆಧಾರ. ಇನ್ನು ಅಪವಾದಾತ್ಮಕ ಸಾಮರ್ಥ್ಯ ಮತ್ತು ಕೌಶಲಗಳನ್ನು ಹೊಂದಿದ ವ್ಯಕ್ತಿಗೆ ಇಲ್ಲವೆ ವ್ಯಕ್ತಿ ಸಮೂಹಕ್ಕೆ ಗರಿಷ್ಠ ವೇತನ ನೀಡತಕ್ಕದ್ದು. ಗಣಿತ ಜನಕ ಪೈಥಾಗೋರಸ್‌ನ ಪ್ರಕಾರ ಹತ್ತು ವೈಭವೋಪೇತ ಸಂಖ್ಯೆ. ಅದೇ ರೀತಿ, ಸಮಾಜಕ್ಕೆ ಗರಿಷ್ಠ ಕೊಡುಗೆ ನೀಡಬಲ್ಲವರಿಗೆ ಗರಿಷ್ಠ ವೇತನವನ್ನು ಕಾಯ್ದಿರಿಸಬೇಕು.

ಅನುಷ್ಠಾನ ಯೋಗ್ಯ ಮಾರ್ಗದರ್ಶಿ ಸೂತ್ರಾನುಸಾರ, ಆದಾಯ ವಿತರಣೆಯ ದಶಾಂಶ ಮಾಪನವು ದೋಷಾರೋಪಣೆಗೆ ಅತೀತವಾಗಿದೆ. ಅದು ತೀರ ಸರಳ. ಯಾವುದೇ ಕುಂದುಕೊರತೆಗಳಿಲ್ಲ. ಜನತೆ ಹಾಗೂ ಸರಕಾರಗಳು ಮನಸ್ಸು ಮಾಡಿದರೆ, ಅದನ್ನು ಅಮಲಿನಲ್ಲಿ ತರುವುದು ಕಷ್ಟವೇನಲ್ಲ. ನಾವೀಗ ಕಾಲ ಕಳೆಯದೆ ಅದನ್ನು ಕೃತಿಗಿಳಿಸಲು ಮುಂದಾಗೋಣ. ಅಸಮಾನತೆಯು ಮಾನವನಷ್ಟೇ ಹಳೆಯದು. ಅಸಮಾನತೆಯ ಚರ್ಚೆಯೂ ಸಹ ಪ್ರಾಚೀನ ಪೂರ್ವಾಪರಗಳನ್ನು ಹೊಂದಿದೆ. ಈ ಕುರಿತು ನಡೆದಿರುವ ಕಚ್ಚಾಟಗಳು ಸಮಸ್ಯೆಯ ಮೇಲೆ ಮುಸುಕು ಎಳೆಯುತ್ತವೆ. ಮತ್ತು ಯಥಾ ಸ್ಥಿತಿಯನ್ನು ಸಮರ್ಥಿಸಲು ಸಿರಿವಂತರಿಗೆ ಸೂಕ್ಷ್ಮವಾದ ಗ್ರಾಸ ಒದಗಿಸುತ್ತವೆ. ಆರ್ಥಿಕ ವ್ಯತ್ಯಾಸಗಳನ್ನು ಮುಂಚೆಗಿಂತ ಕಡಿಮೆ ಅಮಾನವೀಯವಾಗಿಸಲು ತಮ್ಮ ಸರಕಾರಗಳು ಕ್ರಮ ಕೈಕೊಳ್ಳಬೇಕೆಂದು ಬುದ್ಧಿಜೀವಿಗಳು ಕೇಳಬೇಕಾದ ಸೂಕ್ತ ಕಾಲ ಈಗ ಒದಗಿದೆ. ವಂಚನೆ ಮತ್ತು ದುರಾಡಳಿತಗಳಿಗೆ ಗುರಿಯಾಗುವ ದರ ನಿಯಂತ್ರಣ ಇಲ್ಲವೆ ಕಲ್ಯಾಣ ಯೋಜನೆಗಳಿಗಾಗಿ ಕೇಳುವ ಬದಲು ಅವರ ಗರಿಷ್ಠ ವೇತನ ಮಿತಿ ಕುರಿತು ಕೇಳಲು ಇಂದು ಪಕ್ವಕಾಲ. ಕಾಲಕ್ರಮೇಣ, ಕಾರ್ಯ ಸಾಧ್ಯವಾಗುವಂತಿದ್ದಾಗ ಕನಿಷ್ಠ ಹಾಗೂ ಗರಿಷ್ಠ ವೇತನಗಳ ಅಂತರವನ್ನು ತಗ್ಗಿಸಬಹುದು. ಗರಿಷ್ಠ ವೇತನಕ್ಕಿಂತ ಹೆಚ್ಚು ಕ್ಷಿಪ್ರಗತಿಯಿಂದ ಕನಿಷ್ಠ ವೇತನವನ್ನು ಏರಿಸುವ ಮೂಲಕ ಇದನ್ನು ಸಾಧಿಸಬಹುದು. ಉದಾಹರಣೆಯೆಂದರೆ, ಒಂದು ವೇಳೆ ಪ್ರತಿಯೋರ್ವನ ನಿಜ ಆದಾಯವು ಪ್ರತಿವರ್ಷ ಪ್ರತಿಶತ 5 ರಷ್ಟು ಏರುವುದೆಂದು ನಿರೀಕ್ಷಿಸಿದರೆ, ಕನಿಷ್ಠ ನಿಜ ವೇತನವನ್ನು ಪ್ರತಿಶತ 10 ರ ದರದಂತೆ ಎತ್ತರಿಸಬೇಕು. ತತ್ಪರಿಣಾಮವಾಗಿ, ಗರಿಷ್ಠ ನಿಜ ವೇತನವು ಪ್ರತಿಶತ 5 ಕ್ಕಿಂತ ಕಡಿಮೆ ದರದಲ್ಲಿ ಏರುವದು. ಆದರೆ ಏರುತ್ತಿರುವ ಸಮೃದ್ಧಿಯಲ್ಲಿ ಪಾಲ್ಗೊಳ್ಳಲು ಸರ್ವರಿಗೂ ಅನುಮತಿಸಬೇಕು. ಹೀಗಾದರೆ ಈ ವ್ಯವಸ್ಥೆಯಿಂದ ಯಾರೂ ಹೊರಗುಳಿಯರು.

ಭಾರತದಲ್ಲಿ ಪ್ರಚಲಿತ ದರಗಳನ್ವಯ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೇಕಾದ ಕನಿಷ್ಠ ವೇತನವು ಪ್ರತಿ ತಿಂಗಳು 100 ರೂಪಾಯಿ ಇದೆ. ಅದರ ಅರ್ಥವೆಂದರೆ, ಗರಿಷ್ಠ ವೇತನವು ಪ್ರತಿ ತಿಂಗಳ 10,000 ರೂಪಾಯಿಗಳಿಗಿಂತ ಹೆಚ್ಚಾಗಿರಕೂಡದು. ಹೀಗಾದರೆ, 1) ಅವಲಂಬಿತರ ಹಾಗೂ ಊಟ ತಿನಿಸುಗಳ ಅಭ್ಯಾಸ ಇತ್ಯಾದಿ 2) ಜೀವನ ವೆಚ್ಚಗಳ ಅಂತರಗಳ ಅಂಶಗಳ ಬಗ್ಗೆ ಕಾಳಜಿ ವಹಿಸಿದಂತಾಗುತ್ತದೆ. ಗರಿಷ್ಠ ವೇತನ ಗ್ರಹಿಕೆಯನ್ನು ಸರಕಾರಿ ಹಾಗೂ ಉದ್ದಿಮೆಗಳ ಎಲ್ಲ ಉಚ್ಚ ಹುದ್ದೆಗಳಿಗೆ ಅನ್ವಯಿಸಬೇಕು. ಅದೇ ಕಾಲಕ್ಕೆ ಅಮರವೃತ್ತಿಯೇನೇ ಇರಲಿ, ಯಾವೊಬ್ಬನಿಗೂ ಪ್ರತಿ ತಿಂಗಳು 1000 ರೂಪಾಯಿಗಳಿಗಿಂತ ಕಡಿಮೆ ವೇತನ ನೀಡಕೂಡದು.

ಇಲ್ಲಿ ಎತ್ತಿ ತೋರಿಸಬೇಕಾದ ಅಂಶವೊಂದಿದೆ. ಅದೆಂದರೆ, ಪ್ರಯುತ ವ್ಯವಸ್ಥೆಯಲ್ಲಿ ಆದಾಯದ ಅಸಮಾನತೆಯು ಸರಕಾರದ ನಿರ್ದೇಶನಕ್ಕಾಗಿ ಕಾಯದೆ, ದಶಾಂಶ ಮಾಪನವನ್ನು ಅನುಸರಿಸಬಹುದಾಗಿದೆ.

ಸಂಪತ್ತಿನ ಮೇಲಿನ ಮಿತಿ :

ಇದುವರೆಗೆ ನಾನು ಶ್ರಮಾದಾಯ ಕುರಿತು ಲಕ್ಷ್ಯ ಕೇಂದ್ರೀಕರಿಸಿದ್ದೆ. ಆದರೆ ಸ್ಟಾಕುಗಳು, ಬಾಂಡಗಳು, ಭೂಮಿ, ಕಟ್ಟಡಗಳು ಏಕಸ್ವಾಮ್ಯದ ಹಕ್ಕುಗಳೇ ಮೊದಲಾದ ಆಸ್ತಿಗಳ ಒಡೆತನದಿಂದ ಬರುವ ಆದಾಯಗಳನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗಿತ್ತು. ಅರ್ಥನೀತಿಯ ವಿತರಣಾತ್ಮಕ ವ್ಯವಸ್ಥೆ ಕುರಿತು ಚರ್ಚೆಯನ್ನು ಪೂರ್ಣಗೊಳಿಸಲು ಆಸ್ತಿಯ ಆದಾಯವನ್ನು ಸಹ ಪರೀಕ್ಷಿಸಲೇಬೇಕು. ನಿಜವಾಗಿ, ಬಹುತೇಕ ರಾಷ್ಟ್ರಗಳಲ್ಲಿ ಆಸ್ತಿ ಒಡೆತನದ ಅಸಮಾನತೆಗಳು ಆದಾಯ ಒಡೆತನದ ಅಸಮಾನತೆಗಳನ್ನು ಕಿರಿದಾಗಿಸುತ್ತವೆ. ಕೆಲವರಂತೂ ಆದಾಯ ವ್ಯತ್ಯಾಸಗಳಿಗೆ ಆಸ್ತಿ ಒಡೆತನಗಳ ವ್ಯತ್ಯಾಸಗಳೇ ಏಕೈಕ ಮೂಲವಾಗದಿದ್ದರೂ ಮುಖ್ಯ ಮೂಲಗಳೇ ಸರಿ ಎಂದು ವಾದಿಸುತ್ತಾರೆ.

ಗರಿಷ್ಠ ವೇತನವನ್ನು ಲೆಕ್ಕ ಹಾಕುವಾಗ, ಆಸ್ತಿಯ ಒಡಯನು ಊನಾಂಗನಾಗಿದ್ದು ತನ್ನ ಉಪಜೀವನ ನಡೆಸಲು ಅಶಕ್ತನಾಗಿರುವ ಪ್ರಸಂಗವನ್ನು ಹೊರತುಪಡಿಸಿ ಉಳಿದ ಪ್ರಸಂಗಗಳಲ್ಲಿ ಆಸ್ತಿ ಆದಾಯವನ್ನು ಸಹ ಸೇರಿಸಲೇಬೇಕು. ಆದರೆ ಇದರಿಂದ ತೀವ್ರವಾದ ವಾಸ್ತವಿಕ ತೊಡರೆ ಉಂಟಾಗುತ್ತದೆ. ಆಸ್ತಿಯ ಒಡೆತನವು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತದೆ. ಸರ್ವರಿಗೂ ಅದೇ ಗರಿಷ್ಠ ಆದಾಯವನ್ನು ಅನ್ವಯಿಸುವುದಾದರೆ, ಆಗ ಗರಿಷ್ಠ ವೇತನವೂ ಸಹ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಈ ದೃಷ್ಟಿಯಿಂದ ನಾವು ಆದಾಯ ಮಿತಿಯ ಗ್ರಹಿಕೆಯನ್ನು ಸಹ ಮರೆಯಬೇಕಾಗಬಹುದು.

ಆದ್ದರಿಂದ ವಾಸ್ತವಿಕ ಕಾರಣಗಳಿಂದಾಗಿ ಒಂದು ಪ್ರಮಾಣಬದ್ಧ ಗರಿಷ್ಠ ವೇತನವಿರಬೇಕು. ಅದೇ ಕಾಲಕ್ಕೆ ಸಂಪತ್ತಿನ ಅಸಮಾನತೆಯನ್ನು ತೊಡೆಯಲು ಯತ್ನಿಸಬೇಕು. ಹಾಗೂ ಆಸ್ತಿ ಒಡೆತನದ ಮೇಲ ಮಿತಿ ಹೇರಬೇಕು. ಅಂಗವಿಕಲರನ್ನು ಹೊರತು ಪಡಿಸಿ

ಉಳಿದವರಿಗೆ, ಆಸ್ತಿಯಿಂದ ಬರುವ ಆದಾಯವು ಗರಿಷ್ಠ ವೇತನವನ್ನು ಮಿಕ್ಕಬಾರದೆಂಬ ನಿಯಮವಿರಬೇಕು. ಕೆಲಸ ಮಾಡುವ ಮನಸ್ಸಿಲ್ಲದ ಆಸ್ತಿ ಒಡೆಯರು ಕನಿಷ್ಠ ಜೀವನ ಮಟ್ಟಕ್ಕಿಂತ ಮೇಲಲ್ಲದ ಜೀವನ ನಡೆಸಲು ಮಾತ್ರ ಅನುಮತಿಸಬೇಕು. ಸರ್ವ ಸಂಪನ್ಮೂಲಗಳು ಸಮಾಜದ ಸಂಯುಕ್ತ ಒಡೆತನಕ್ಕೆ ಸೇರಿವೆ. ಇನ್ನು, ಆಸ್ತಿ ಒಡೆತನವು ಪ್ರಕೃತಿದತ್ತವೂ ಅಲ್ಲ; ಮಾನವೀಯ ಹಕ್ಕೂ ಅಲ್ಲ. ಬಹಳಷ್ಟು ಪ್ರಸಂಗಗಳಲ್ಲಿ ಸಂಪತ್ತಿನ ವ್ಯತ್ಯಾಸವು ದೊಡ್ಡ ದೊಡ್ಡ ಪಿತ್ರಾರ್ಜಿತ ಆಸ್ತಿಗಳಿಂದ ಬರುತ್ತದೆ. ಯಾವುದೊಂದು ಕುಟುಂಬದಲ್ಲಿಯ ನಮ್ಮ ಜನನ ನಮ್ಮ ಆಂಕೆಯಲ್ಲಿಲ್ಲ. ಆದರೆ ವೈಯಕ್ತಿಕ ಹಾಗೂ ಸಾಮಾಜಿಕ ವಿಧಿಯು ನಿಜವಾಗಿ ನಮ್ಮ ನಿಯಂತ್ರಣದಲ್ಲಿಯೇ ಇದೆ. ಯಾವನೋ ಒಬ್ಬನು ಆಕಸ್ಮಿಕವಾಗಿ ಎಲ್ಲಿಯೇ ಜನಿಸಿದನೆಂದು ಸಂಪತ್ತಿನ ಸಾಮಾಜಿಕ ಗ್ರಹಿಕೆಯನ್ನು ಕೈಬಿಡಲೇಕೂಡದು.

ಅದರೇನು ? ಪ್ರತಿಯೋರ್ವನಿಗೂ ಬಾಳುವ ಹಕ್ಕಿದೆ. ಅಂದ ಮೇಲೆ, ಆಸ್ತಿ ಒಡೆತನದಿಂದ ಬರುವ ಆದಾಯವು ಶೂನ್ಯವಾಗಿರಲೂಬಾರದು; ಇಲ್ಲವೆ ಕನಿಷ್ಠ ವೇತನವನ್ನು ಮೀರಿರಲೂಬಾರದು.

ಸಂಪತ್ತಿನ ವಿಭಿನ್ನ ಪ್ರಕಾರಗಳು ವಿಭಿನ್ನ ಪ್ರಮಾಣದ ಪ್ರತಿಫಲ ನೀಡುತ್ತಿವೆಯೆಂಬುದನ್ನು ವಾಸ್ತವಿಕ ಅನುಭವದಿಂದ ನಾವು ಕಂಡುಕೊಳ್ಳಬಹುದು. ಜಮೀನು ಇಲ್ಲವೆ ಕಟ್ಟಡಗಳನ್ನು ಬಾಡಿಗೆಗೆ ನೀಡುವುದರಿಂದ ಬರುವ ಆದಾಯ ದರವು ಮಾರುಕಟ್ಟೆ ಬೆಲೆಯ ಪ್ರತಿಶತ 4 ರಿಂದ 5 ರ ವರೆಗೆ ಇರುತ್ತದೆ. ಇಂಥ ಆಸ್ತಿಯು ವಿರಳವಾಗಿರುವ ಸ್ಥಳಗಳಲ್ಲಿ ಪ್ರತಿಫಲವು ಹೆಚ್ಚಾಗಿರಬಹುದು. ಉದಾಹರಣೆಗಾಗಿ ನೋಡಿರಿ. ದಿಲ್ಲಿಯಲ್ಲಿಯ ಒಂದು ಮನೆಯ ಕಿಮ್ಮತ್ತು 5,00,000 ರೂಪಾಯಿಯೆಂದು ತಿಳಿಯಿರಿ. ಅದರ ಬಾಡಿಗೆಯು ಸಾಮಾನ್ಯವಾಗಿ ಪ್ರತಿವರ್ಷ 20,000 ದಿಂದ 25,000 ರೂಪಾಯಿಯಾಗುತ್ತದೆ. ಆದರೆ ರೋಖು ಹಣ, ಸ್ಟಾಕುಗಳು, ಮತ್ತು ಬಾಂಡುಗಳು ಇತ್ಯಾದಿಗಳಿಂದ ಪ್ರತಿಫಲವು ಪ್ರತಿಶತ 8 ರಿಂದ 10 ರ ವರೆಗೆ ಇರುತ್ತದೆ. ಕನಿಷ್ಠ ವೇತನವನ್ನು ಪ್ರತಿಫಲದ ಪ್ರಚಲಿತ ದರದಿಂದ ಭಾಗಿಸಿ ಸಂಪತ್ತಿನ ಮಿತಿಯ ಸೂತ್ರವನ್ನು ರೂಪಿಸಬಹುದು. ಈಗ

P - ಆಸ್ತಿ
W - ವೇತನ
r - ಪ್ರತಿಫಲದ ದರ.

ಆಗ ಸಂಪತ್ತಿನ ಮಿತಿಯ ದರದ ಸೂತ್ರವು ಈ ಕೆಳಗಿನಂತಾಗುವುದು.

$$P\ max = {}^{Wmini}/_{r}$$

ಈಗ Wmin = 10,000 ರೂಪಾಯಿ ವರ್ಷಕ್ಕೆ ಎಂದು ತಿಳಿಯಿರಿ. ಮತ್ತು r = ಶೇಕಡಾ 4. ಆಗ ಮನೆಯ ಕಿಮ್ಮತ್ತಿನ ಮೇಲಿನ ಮಿತಿಯು 10,000 x (100/4) ಅಥವಾ 2,50,000 ರೂಪಾಯಿ ಆಗುತ್ತದೆ.

ಈಗ ರೋಖು ಹಣದ ಮೇಲಿನ ದೀರ್ಘ ಕಾಲೀನ ಬಡ್ಡಿ ದರವು ಶೇಕಡಾ 10 ಎಂದು ತಿಳಿಯಿರಿ. ಇಲ್ಲಿ ರೋಖು ಇಟ್ಟುಕೊಳ್ಳುವ ಗರಿಷ್ಠ ಮಿತಿಯು $10,000 \times {}^{100}/_{10}$ ಅಂದರೆ 1,00,000 ರೂಪಾಯಿಗಳು. ಈ ರೀತಿ ವಿವಿಧ ಸಂಪತ್ತಿನ ಪ್ರಕಾರಗಳ ಒಡೆತನದ ಮಿತಿಯನ್ನು ನಿಗದಿಪಡಿಸಬಹುದು.

ಒಂದು ವೇಳೆ, ಓರ್ವ ವ್ಯಕ್ತಿಯು ನಗರ ಪ್ರದೇಶದ ಭೂಮಿ ಹಾಗೂ ಕಟ್ಟಡಗಳಂಥ ಸ್ಥಿರ ಆಸ್ತಿಯನ್ನು ಹಾಗೂ ರೋಖು ಇಲ್ಲವೆ ಶೇರುಗಳಂಥ ಚರ ಆಸ್ತಿಯನ್ನೂ ಹೊಂದಿದ್ದರೆ, ಅವನಿಗೆ ಗರಿಷ್ಠ ಪ್ರಮಾಣದಲ್ಲಿ ಅನುಮತಿಸಬಹುದಾದ ಸ್ಥಿರ ಆಸ್ತಿಗಳನ್ನೂ ಹಾಗೂ ಅರ್ಧದಷ್ಟು ಅನುಮತಿಸಬಹುದಾದ ಚರ ಆಸ್ತಿಗಳನ್ನೂ ಹೊಂದುವ ಅವಕಾಶವಿರಬೇಕು. ಈ ಮೇಲೆ ನೀಡಿದ ನಿದರ್ಶನಗಳಲ್ಲಿ ಉಭಯ ಪ್ರಕಾರದ ಆಸ್ತಿಗಳ ತಕ್ಕ ಮಿಶ್ರಣವೆಂದರೆ 2,50,000 ರೂಪಾಯಿಯ ವಾಸದ ಮನೆ ಹಾಗೂ 50,000 ರೂಪಾಯಿ ರೋಖು ಹಣ. ಸ್ಥಿರ ಮತ್ತು ಚರ ಆಸ್ತಿಗಳು ವಿಭಿನ್ನ ನಗದೀಕರಣ ಮೌಲ್ಯ ಹೊಂದಿರುವದರಿಂದ ಈ ಮಾರ್ದವತೆಯು ಉದ್ಭವಿಸಿದೆ. ತರ್ಕು ಪರಿಸ್ಥಿತಿಯ ಕಾಲದಲ್ಲಿ ಅಲ್ಪಸ್ವಲ್ಪು ರೋಖು ಹಣವೂ ಸಹ ಅತಿ ಬೆಚ್ಚದ ವಾಸಗೃಹಗಳಿಗಿಂತ ಹೆಚ್ಚು ಬೆಲೆಯುಳ್ಳದ್ದೆನಿಸುತ್ತದೆ. ಏಕೆಂದರೆ ವಾಸಗೃಹಗಳನ್ನು ಮಾರಿ ಹಣ ಪಡೆಯಲು ಕಾಲ ಹಿಡಿಯುತ್ತದೆ. ಈ ನಿಯಮಾನುಸಾರ, ಆಸ್ತಿ ಒಡೆಯನು ಕನಿಷ್ಠ ಮಟ್ಟಕ್ಕಿಂತ ಒಂದೂವರೆ ಪಟ್ಟು ಹೆಚ್ಚಿನ ಉಪಜೀವನ ಬೆಚ್ಚ ಪಡೆಯುವನಾದರೂ ಅದು ಸಾಮಂಜಸ್ಯ ಪೂರ್ಣ ಮಟ್ಟಕ್ಕೆ ಅನುಗುಣವಾಗಿಯೇ ಇರುತ್ತದೆ.

ಸಂಪತ್ತಿನ ಮಿತಿಯು ನಗರದಿಂದ ನಗರಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಮತ್ತು ದೇಶದಿಂದ ದೇಶಕ್ಕೆ ಬದಲಾಗಬಹುದೇನೋ ನಿಜ. ಏಕೆಂದರೆ, ಜೀವನ ಬೆಚ್ಚ, ಸಾಮಾಜಿಕ ಮಟ್ಟ, ಇತ್ಯಾದಿಗಳು W_{min} ಮತ್ತು r ದ ಮೌಲ್ಯಗಳ ಅಂತರದಲ್ಲಿ ಪರಿಣಮಿಸುತ್ತವೆ. ಸರ್ವತ್ರ, ಸ್ಥಿರ ಆಸ್ತಿಯ ಮೇಲಿನ ಮಿತಿಯ ಹಿಂದಿನ ನೀತಿಯೆಂದರೆ, ಅದರಿಂದ ಬರುವ ಆದಾಯವು ವಾರ್ಷಿಕ ಕನಿಷ್ಠ ವೇತನವನ್ನು ಮೀರಕೂಡದು.

ಉದಾಹರಣಾರ್ಥ ನೋಡಿರಿ : ಜೀವನ ಬೆಚ್ಚವು ತುಂಬಾ ಹೆಚ್ಚಿರುವ ಮುಂಬಯಿಯಲ್ಲಿ ವಾರ್ಷಿಕ ಕನಿಷ್ಠ ವೇತನವು 25,000 ರೂಪಾಯಿ ಇರಬಹುದು. ವಾಸಗೃಹಗಳ ಆಸ್ತಿಯಿಂದ ಬರುವ ಪ್ರತಿಫಲವು ಪ್ರತಿಶತ 4 ರಷ್ಟಿದ್ದರೆ, ಆಸ್ತಿ ಮಿತಿಯು 6,25,000 ರೂಪಾಯಿ ಇರುತ್ತದೆ. ಇದೇ ರೀತಿ, ಜಗತ್ತಿನ ಎಲ್ಲ ಭಾಗಗಳಲ್ಲಿ ಆಸ್ತಿ ಮಿತಿಯನ್ನು ಲೆಕ್ಕ ಹಾಕಬಹುದು. ಮತ್ತು ಸ್ಥಳೀಯ ಸರಕಾರಗಳೇ ಈ ಲೆಕ್ಕಾಚಾರ ನಡೆಸುವವು.

ವಾಸ್ತವಿಕ ಹಾಗೂ ಮಾನವೀಯ ಭೂಮಿಕೆಯನ್ನಾಧರಿಸಿ ಸಂಪತ್ತಿನ ಮಿತಿಯ ನಿಯಮಕ್ಕೆ ಹಲವು ಅಪವಾದಗಳನ್ನು ಸೇರಿಸಬಹುದು. ಅಂಗವಿಕಲರು, ಮುದುಕರು, ವಿಧವೆ ಮುಂತಾದವರಿಗೆ ಮಾನವೀಯ ದೃಷ್ಟಿಯಿಂದ ಸಾಮಾನ್ಯ ಮಿತಿಯಿಂದ ವಿನಾಯತಿ ನೀಡಬಹುದು. ವಾಸ್ತವಾಂಶದ ದೃಷ್ಟಿಯಿಂದ ವಾಸದ ಮನೆಗೆ ವಿನಾಯತಿ ನೀಡಬಹುದು. ಇಲ್ಲಿ ಸಂಪತ್ತಿನ ಮಿತಿಯು ವಾಸದ ಮನೆ ಇಲ್ಲವೆ ನಾನು ನೀಡಿದ ಸೂತ್ರದಿಂದ ಲೆಕ್ಕ ಹಾಕಿದ ಮಿತಿ

ಇವುಗಳಲ್ಲಿ ಯಾವುದು ಹೆಚ್ಚೋ ಅದು ಸಂಪತ್ತಿನ ಮಿತಿಯಾಗುತ್ತದೆ. ಇದೇ ರೀತಿ ಸಾಗುವಳಿ ಜಮೀನಿನ ವಿಷಯದಲ್ಲಿ ಬೇರೆ ಬೇರೆ ಮಿತಿಗಳನ್ನು ರೂಪಿಸಬೇಕು. ಆದರೆ ಇಂಥ ಆಪವಾದಾತ್ಮಕ ಅವಕಾಶಗಳನ್ನು ಯಾವನೂ ದುರುಪಯೋಗಿಸದಂತೆ ಪ್ರತಿಬಂಧಿಸಬೇಕು. ನಾವು ಸಂಪತ್ತಿನ ಮಿತಿಯ ಗ್ರಹಿಕೆಯನ್ನು ಒಪ್ಪಿಕೊಂಡರೆ ತೀರಿತು, ಅವುಗಳನ್ನು ಲೆಕ್ಕ ಹಾಕುವುದೇನೂ ಕಠಿಣವೆನಿಸದು.

ಸಂಪತ್ತಿನ ಮಿತಿಯ ನಿರ್ವಹಣೆಯಲ್ಲಿ ಕೆಲ ಮಟ್ಟಿನ ಹೊಂದಾಣಿಕೆ ಬೇಕೇ ಬೇಕು. ಕೇವಲ ಸಂಪತ್ತಿನ ಮೇಲೆ ಬದುಕುವವರಿಗೆ ಮೊದಲು ತಕ್ಕ ಕೆಲಸ ನೀಡಿ ಆ ನಂತರ ಮಾತ್ರ ಅವರ ಹೆಚ್ಚುವರಿ ಸಂಪತ್ತಿನ ಮೇಲೆ ಕರ ವಿಧಿಸಬೇಕು. ಮತ್ತು ಬಡವರಲ್ಲಿ ಹಂಚಬೇಕು. ನಾವದನ್ನು ಆಸ್ತಿಯ ಸಮಾಜೀಕರಣ ಎನ್ನಬಹುದು. ಆದರೂ ಸಹ, ಗರಿಷ್ಠ ವೇತನಕ್ಕೆ ದಾರಿಯಾಗುವ ಹಣಕ್ಕಿಂತ ಹೆಚ್ಚಿನ ಯಾವುದೇ ಸಂಪತ್ತಿರಲಿ, ಅದನ್ನು ತತ್‌ಕ್ಷಣವೇ ಸಮಾಜೀಕರಿಸಬೇಕು. ಏಕೆಂದರೆ ತನ್ನ ಸಹ ನಾಗರಿಕರು ಕನಿಷ್ಠ ಉಪ ಜೀವನಕ್ಕೂ ಗತಿಯಿಲ್ಲದೆ ತೊಳಲಾಡುತ್ತಿರುವಾಗ ಯಾವನೊಬ್ಬನಿಗೂ, ಗರಿಷ್ಠ ವೇತನ ಮಿಕ್ಕಿದ ಜೀವನ ಮಟ್ಟ ಭೋಗಿಸಲು ಹಕ್ಕು ಇರಲಾರದು.

ನನ್ನ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳು ಏಳುತ್ತವೆ. ಆದರೆ, ನಾವು ಅವುಗಳೊಂದಿಗೆ ಸಹಮತಿಸಿದರೆ ಸಾಕು. ಆನಂತರ ಅವುಗಳ ನಿರ್ವಹಣೆಯ ವಿವರಗಳನ್ನು ರೂಪಿಸಬಹುದು.

ಜನಸಂಖ್ಯೆಗೆ ಸಂಬಂಧಿಸಿದಂತೆ ಸ್ಥೂಲ ಸಂಪನ್ಮೂಲಗಳ ಮೇಲಿನ ಇತಿಮಿತಿಯನ್ನು ಗಮನಿಸಿದಾಗ, ಭಾರತಕ್ಕೆ ಆದರ್ಶಪ್ರಾಯವಾದ ಅರ್ಥವ್ಯವಸ್ಥೆಯಲ್ಲಿ ಪ್ರತಿಯೋರ್ವ ದೃಢಕಾಯದ ವ್ಯಕ್ತಿಗೆ ತಕ್ಕ ಉದ್ಯೋಗ ದೊರೆಯಬೇಕು. ಮತ್ತು ಕನಿಷ್ಠ ವೇತನಕ್ಕೆ ಸರಿಸಮನಾದ ಫಲವೀಯುವ ಸ್ವಲ್ಪ ಆಸ್ತಿ ಬೇಕು. ಈ ಸರಿಸಮವಾದ ಅತ್ಯುತ್ತಮ ಆಸ್ತಿಯೆಂದರೆ ಪ್ರತಿ ಕುಟುಂಬವು ಹೊಂದಿರಬಹುದಾದ ಒಂದು ಮನೆ.

ಔದ್ಯೋಗಿಕ ನೀತಿ :

ಆದಾಯ ವಿತರಣೆಯ ಪ್ರಶ್ನೆಯನ್ನು ಬಗೆಹರಿಸಿದ ಮೇಲೆ ನಾವು ಆ ಆದಾಯದ ಉತ್ಪನ್ನದತ್ತ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಅನೇಕ ಬಾರಿ ಈ ಎರಡು ಮುದ್ದಗಳನ್ನು ಪ್ರತ್ಯೇಕಿಸುವಂತಿಲ್ಲ. ಏಕೆಂದರೆ, ಆದಾಯ ವಿತರಣೆಯು ರಾಷ್ಟ್ರೀಯ ಆದಾಯವನ್ನು ಬಾಧಿಸುತ್ತದೆ. ನಾವು ಅರ್ಥ ವ್ಯವಸ್ಥೆಯ ವಿತರಣಾತ್ಮಕ ನಾಳಗಳಿಗೆ ತೇಪೆ ಹಚ್ಚುವ ದುರಸ್ತಿ ಸಲ್ಲದು. ಏಕೆಂದರೆ, ಅದರಿಂದ ಉತ್ಪಾದಕತೆ ಹಾಗೂ ಬೆಳವಣಿಗೆಗಳು ಪ್ರತಿಕೂಲಕರವಾಗಿ ಬಾಧಿಸಲ್ಪಡುತ್ತವೆ; ಎಂದು ಅನೇಕ ಅರ್ಥನೀತಿಜ್ಞರು ಇಂದು ಅಭಿಪ್ರಾಯ ತಾಳಿದ್ದಾರೆ. ಆದಾಯದ ಮರು ಹಂಚಿಕೆಯ ಗುರಿ ಹೊಂದಿದ ಯಾವುದೇ ಸಮಾನತೆಯ ಧೋರಣೆಯು ಸಿರಿವಂತರ ಕೆಲಸದ ಪ್ರೇರಣೆಯನ್ನೂ ಹಾಗೂ ಪೇಚನ್ನೆದುರಿಸುವ ಅವರ ಇಚ್ಛೆಯನ್ನೂ

ಕುಂದಿಸುವುದೆಂದು ಅವರು ಪ್ರಮುಖವಾಗಿ ವಾದಿಸುತ್ತಾರೆ. ಅವರ ಬಂಡವಾಳ ಹೂಡಿಕೆಯೂ ಸಹ ಕುಂದುತ್ತದೆ. ಹಾಗೆಯೇ ಒಟ್ಟು ನಿಕ್ಕಿ ರಾಷ್ಟ್ರೀಯ ಉತ್ಪಾದನೆ (ನಿರಾಉ) ಕೂಡ.

ಈ ವಾದಗಳು ಮೇಲ್ನೋಟಕ್ಕೆ ಸರಿ ಎನಿಸುತ್ತವೆ. ಓರ್ವ ವ್ಯಕ್ತಿಯು ಬಹಳ ಸಿರಿವಂತನಾಗಿದ್ದರೆ, ಅವನನ್ನು ಕಠಿಣ ಕೆಲಸದಲ್ಲಿ ತೊಡಗಿಸಲು ಬೇಕಾದ ಪ್ರೇರಕಗಳಾವವು? ಅವನು ಈಗಾಗಲೇ ಲಕ್ಷಾಧೀಶ್ವರನಿದ್ದರೆ, ಹಲವು ಸಾವಿರ ಹೆಚ್ಚಿನ ಹಣವು ಅವನಲ್ಲಿ ಪರಿಶ್ರಮದ ಕಿಡಿ ಮೂಡಿಸದು. ಅವನು ಸಾರಾಯಿ, ಸೂಳೆ ಹಾಗೂ ಸ್ವಾದಿಷ್ಟ ಭೋಜನ ಗಳಿಗಾಗಿ ಹಾಳು ಮಾಡುವ ಹಣವೇ ಅನೇಕ ನಿರುದ್ಯೋಗಿಗಳಿಗೆ ಹೆಚ್ಚಿನ ಹುದ್ದೆಗಳನ್ನು ಒದಗಿಸಬಲ್ಲದೆಂಬುದನ್ನು ಗಮನಿಸಿರಿ. ಅವನೊಂದು ವೇಳೆ, ಗರಿಷ್ಠ ವೇತನದ ಕಾರ್ಯಕ್ರಮದಡಿ ಕೆಲಸ ಮಾಡಲು ನಿರಾಕರಿಸಿದರೆ, ಅವನನ್ನು ಅವನ ಪಾಡಿಗೆ ಬಿಡಿ. ಏಕೆಂದರೆ, ಅವನ ಸಂಬಳದ ಅಲ್ಪಾಂಶ ಪಡೆದು ಕೂಡ ಅವನು ನಿರ್ವಹಿಸುವ ಹುದ್ದೆ ಸ್ವೀಕರಿಸಲು ಅನೇಕಾನೇಕ ಜನರು ತುದಿಗಾಲ ಮೇಲೆ ನಿಂತಿರುತ್ತಾರೆ.

ಹೊಸ ಸಾಹಸವನ್ನು ಕೈಕೊಳ್ಳುವ ಇಚ್ಛೆಗೆ ಸಂಬಂಧಿಸಿದಂತೆ ನಾನು ಹೇಳುವುದು ಹೀಗೆ: ಇಂಥ ಇಚ್ಛೆಯು ಯಾವನೊಬ್ಬ ವ್ಯಕ್ತಿಯ ಸಿರಿವಂತಿಕೆಯ ಮಟ್ಟವನ್ನು ಅವಲಂಬಿಸಿಲ್ಲ. ಆದರೆ ಅವನ ಸ್ವಭಾವವನ್ನು ಅವಲಂಬಿಸಿದೆ. ಅವನೊಬ್ಬ ಸಾಹಸಿಗನಾಗಿದ್ದರೆ, ಅವನು ಇಂಥ ಧೀರ ಯೋಜನೆಗಳಲ್ಲಿ ಹಣ ತೊಡಗಿಸುವ ಸಂಭವವಿದೆಯೇ ಹೊರತು ಕೇವಲ ಸಿರಿವಂತನಾದುದರಿಂದಲ್ಲ. ಅಮೇರಿಕೆಯ ಚರಿತ್ರೆ ನೋಡಿದರೆ, ಮಹಾ ಮಹಾ ಸಾಹಸಿ ಉದ್ಯಮಿಗಳು ಹೆಚ್ಚು ಹೆಚ್ಚು ಧೈರ್ಯ ಹೊಂದಿದ್ದರೇ ಹೊರತು ಕಾಂಚಾಣವನ್ನಲ್ಲ. ಅವರೇನೂ ಸಿರಿವಂತರಾಗಿ ಹುಟ್ಟಿರಲಿಲ್ಲ. ಸಾಹಸಿಗ ಮನಸ್ಸು ತನ್ನಷ್ಟಕ್ಕೆ ತಾನೇ ಪೇಚನ್ನೆದುರಿಸುವುದನ್ನು ಮೆಚ್ಚುತ್ತದೆ. ಅದು ಕೇವಲ ಹಣ ಮಾಡಲೆಂದು ಹಾಗೆ ಮಾಡುತ್ತಿಲ್ಲ.

ಅದೇನೇ ಇರಲಿ, ಪ್ರಉತದ ಔದ್ಯೋಗಿಕ ನೀತಿಯು ರಾಜಕೀಯ ಮತ್ತು ಸಾಮಾಜಿಕ ಸಮಾನತೆಯನ್ನು ಆರ್ಥಿಕ ವ್ಯವಸ್ಥೆಯ ಒಂದು ಪರಿಪೂರ್ಣ ಭಾಗವಾಗಿಸುತ್ತದೆ. ಸರಕಾರವು ಕೈಕೊಳ್ಳುವ ಆದಾಯದ ಮರು ಹಂಚಿಕೆಯು ಕನಿಷ್ಠವಿರುತ್ತದೆ. ಏಕೆಂದರೆ, ಅದನ್ನು ಕೇವಲ ಊನಾಂಗರು, ಮುದುಕರು ಹಾಗೂ ಕೆಲವು ಕಾರಣದಿಂದ ಕೆಲಸ ಮಾಡಲಾಗದವರಿಗೆ ಮಾತ್ರ ಅನ್ವಯಿಸಲಾಗುವುದು. ಆಯಾ ಕಾಲದಲ್ಲಿ ಪ್ರಚಲಿತವಿರುವ ಕನಿಷ್ಠ ಶಾರೀರಿಕ ಬೇಡಿಕೆಗಳನ್ನು ಒದಗಿಸುವ ವೇತನ ದರದ ಯೋಗ್ಯ ಹುದ್ದೆಗಳನ್ನು ಪ್ರತಿಯೋರ್ವನಿಗೂ ಒದಗಿಸಲಾಗುವುದು. ಇನ್ನು ಲಭ್ಯವಿದ್ದ ಸಂಪನ್ಮೂಲಗಳು ವಿಪುಲವಾಗಿದ್ದರೆ, ಆಗ ನಿಮ್ನತಮ ಹಾಗೂ ಉಚ್ಚತಮ ಆದಾಯಗಳ ನಡುವಿನ ಅಂತರವು ತೀರ ಕಡಿಮೆ ಇರುವಂತೆ, ಕನಿಷ್ಠ ವೇತನವನ್ನು ಎತ್ತರದ ಮಟ್ಟದಲ್ಲಿ ನಿಗದಿಪಡಿಸಲಾಗುವುದು.

ಬಂಡವಾಳವಾದಿಯಾಗಿರಲಿ, ಸಮತಾವಾದಿಯಾಗಿರಲಿ ಇಲ್ಲವೆ ಸಮಾಜವಾದಿಯಾಗಿರಲಿ, ಬಹುತೇಕ ದೇಶಗಳಲ್ಲಿ ಆರ್ಥಿಕ ಶಕ್ತಿಯು ಸರಕಾರದ ವಶವರ್ತಿಯಾಗಿರುವದು. ಇಲ್ಲವೆ ಸ್ವಲ್ಪು ಜನ ಸಿರಿವಂತರ ಕೈ ವಶವಾಗಿರುವುದು. ಇದು ಎಲ್ಲರಿಗೂ ಗೊತ್ತಿರುವ ವಿಷಯ.

ಅದನ್ನು ಹೆಚ್ಚು ಪುಷ್ಟೀಕರಿಸಬೇಕಿಲ್ಲ. ಆರ್ಥಿಕ ಶಕ್ತಿಯ ಇಂಥ ಕೇಂದ್ರೀಕರಣದ ಪರಿಣಾಮವಾಗಿ, ಬಹುತೇಕ ದೇಶಗಳ ಬಹಳಷ್ಟು ಜನರು ವಿವಿಧ ಬಗೆಯ ಶೋಷಣೆಗಳಿಗೆ ಬಲಿಯಾಗಿದ್ದಾರೆ. ಕೆಲ ದೇಶಗಳಲ್ಲಿ ಬಡತನವು ಸರ್ವ ವ್ಯಾಪಿಯಾಗಿದೆ; ಇತರೆಡೆಗಳಲ್ಲಿ ಸಕಲ ಮಾನವೀಯ ಹಕ್ಕುಗಳನ್ನು ಬಹಿರಂಗವಾಗಿಯೇ ಧ್ವಂಸ ಮಾಡಲಾಗಿದೆ. ಮತ್ತಿನ್ನು ಹಲವೆಡೆ ಅಲ್ಪ ಸಂಖ್ಯಾಕರನ್ನು ಬಡತನವು ಬಳಲಿಸಿದೆ. ಈ ಎಲ್ಲ ಕೇಡಿನ ಮೂಲಕಾರಣವೆಂದರೆ, ಆರ್ಥಿಕ ಶಕ್ತಿಯ ಕೇಂದ್ರೀಕರಣ ಹಾಗೂ ಅದನ್ನು ಎತ್ತಿ ಹಿಡಿದಿರುವ ಪ್ರಾಪಂಚಿಕ ವಿಚಾರ ದೋಷ. ಆರ್ಥಿಕ ಶಕ್ತಿಯ ವಿಕೇಂದ್ರೀಕರಣವನ್ನಾಧರಿಸಿದ ಔದ್ಯೋಗಿಕ ವ್ಯವಸ್ಥೆಯನ್ನು ಪ್ರಉತ ಬೆಂಬಲಿಸುತ್ತದೆ. ಇಲ್ಲಿ ಬಹಳಷ್ಟು ನಿರ್ಣಯಗಳನ್ನು ಸ್ಥಳೀಯ ಸರಕಾರವೇ ಕೈಕೊಳ್ಳುತ್ತದೆ. ಇಲ್ಲವೆ ಶ್ರಮ ಜೀವಿಗಳೇ ಸ್ವತಃ ಕೈಕೊಳ್ಳುತ್ತಾರೆ. ಸರಕಾರವು ಒದಗಿಸಿದ ಔದ್ಯೋಗಿಕ ಆಧಾರ ಹೊಂದಿದ ಸಹಕಾರ ಇಲ್ಲವೇ ಶ್ರಮಜೀವಿಗಳ ನಿರ್ವಹಣೆಯ ವ್ಯವಸ್ಥೆಯನ್ನು ಪ್ರಉತ ಬೆಂಬಲಿಸುತ್ತದೆ.

ಪ್ರತಿಯೋರ್ವನಿಗೂ ಉದ್ಯೋಗವನ್ನು ದೊರಕಿಸಬೇಕಾದರೆ, ವಿಶ್ವಾದ್ಯಂತ ಔದ್ಯೋಗೀಕರಣವು ಅಗತ್ಯ. ಭಾರತ, ಚೀನಾ ಮತ್ತಿತರ ಜಗತ್ತಿನ ರಾಷ್ಟ್ರಗಳ ಜನಸಂಖ್ಯೆ ಮಾನದಿಂದ ನೋಡಿದರೆ, ಔದ್ಯೋಗೀಕರಣವು ಅನಿವಾರ್ಯವೆನಿಸದಿರದು. ಕೃಷಿಯನ್ನೂ ಕಡೆಗಣಿಸಕೂಡದು. ಆದರೆ ಅದೊಂದೇ ಎಲ್ಲ ಭಾರ ಹೊರಲಾರದು. ಆದ್ದರಿಂದಲೇ ಔದ್ಯಮಿಕ ನೀತಿಯ ಆಗತ್ಯ ಉಂಟಾಗಿದೆ.

ಪಿರ್ಯಾಮಿಡೀಯ (ಗೋಪುರೀಯ) ವ್ಯವಸ್ಥೆ :

ಪ್ರಉತ ಅರ್ಥ ವ್ಯವಸ್ಥೆಯು ಪಿರ್ಯಾಮಿಡ (ಗೋಪುರ) ನ್ನು ಹೋಲುತ್ತದೆ. ಪ್ರಉತ ಅರ್ಥವ್ಯವಸ್ಥೆಯನ್ನು ಐದು ಪ್ರಮುಖ ರಂಗಗಳಾಗಿ ವಿಭಜಿಸುತ್ತದೆ: ಸಾರ್ವಜನಿಕ, ಸಹಕಾರಿ, ಖಾಸಗಿ, ಶಿಕ್ಷಣ ಹಾಗೂ ಆರೋಗ್ಯ. ಕೃಷಿಯನ್ನು ಉದ್ದಿಮೆಯ ಮಟ್ಟದಲ್ಲಿ ಪರಿಗಣಿಸಲಾಗುತ್ತಿದೆ. ಶಿಕ್ಷಣ ಮತ್ತು ಚಿಕಿತ್ಸೆಗಳು ಮೊದಲಿನ ಮೂರು ರಂಗಗಳ ಭಾಗವಾಗಬಹುದು. ಆದರೆ ಅವುಗಳಿಗೆ ತಮ್ಮವೇ ಆದ ವಿಶೇಷ ಲಕ್ಷಣಗಳಿರುವುದರಿಂದ ಅವುಗಳ ಪ್ರತ್ಯೇಕ ಪರಿಗಣನೆಯು ಸೂಕ್ತವಾಗಿದೆ. ಅದೇ ರೀತಿ ಕೃಷಿ. ಕೃಷಿಯನ್ನು ದೊಡ್ಡ ಪ್ರಮಾಣದ ಸಹಕಾರಿ ಸಂಘಟನೆಯಂತೆ ಇಲ್ಲವೆ ಚಿಕ್ಕ ಖಾಸಗಿ ಸಂಸ್ಥೆಯಂತೆ ಪರಿಗಣಿಸಲಾಗಿದೆ. ಸಾರ್ವನಿಕ ರಂಗವೇ ತಳಹದಿ. ಅದರಲ್ಲಿ ಸಾರ್ವಜನಿಕ ಹಾಗೂ ಇತರ ಅರ್ಥ ವ್ಯವಸ್ಥೆಗಳು ಅವಲಂಬಿಸಿರುವ ಮಧ್ಯಮ ಹಂತದ ವಸ್ತುಗಳನ್ನು ಉತ್ಪಾದಿಸಲಾಗುವುದು. ಬಳಿಕ, ಸಹಕಾರಿ ರಂಗ. ಇದರಲ್ಲಿ ಗ್ರಾಹಕರ (ಕೃಷಿ ಸಹಿತ) ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುವ ದೊಡ್ಡ ಪ್ರಮಾಣದ ಉದ್ದಿಮೆಗಳ ಸ್ಥಾನ. ಈ ರಂಗದಲ್ಲಿ ಅಂತಿಮ ಹಂತದ ಗ್ರಾಹಕ ವಸ್ತುಗಳನ್ನು, ಕೃಷಿ ಹುಟ್ಟುವಳಿಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಲಾಗುವುದು. ಇನ್ನು ಗೋಪುರದ (ಪಿರ್ಯಾಮಿಡ್) ಕೊನೆಯ ಎರಡು ಚರಣಗಳೇ ಉಚಿತ ಶಿಕ್ಷಣ ಹಾಗೂ ಚಿಕಿತ್ಸೆಯಾಗಿದೆ.

ಸಾರ್ವಜನಿಕ ರಂಗವು ಈ ಗೋಪುರದ ತಳಹದಿ ಏಕೆ ಆಗಿದೆಯೆಂಬುದನ್ನು ಗಮನಿಸುವುದು ಲೇಸು. ಅದು ಅರ್ಥ ವ್ಯವಸ್ಥೆಯ ಅತಿ ದೊಡ್ಡ ಭಾಗವಾಗಿದೆಯೆಂದೇನೂ ಅಲ್ಲ. ಆದರೆ ಅದು ಇನ್ನಿತರ ರಂಗಗಳಿಗೆ ಆಧಾರವಾಗಿರುವ ಕಾರಣ, ಅದನ್ನು ಗೋಪುರದ ತಳಹದಿಯೆನ್ನಲಾಗಿದೆ. ಅದೇ ರೀತಿ, ಗೋಪುರದ ದ್ವಿತೀಯ ಚರಣವಾದ ದೊಡ್ಡ ಪ್ರಮಾಣದ ಸಹಕಾರಿ ಸಂಸ್ಥೆಗಳು ತೃತೀಯ ಚರಣದ ಆಧಾರಗಳಾಗಿವೆ. ಏಕೆಂದರೆ, ಚಿಕ್ಕ ಪ್ರಮಾಣದ ಉದ್ದಿಮೆಗಳು ದೊಡ್ಡ ಉದ್ಯಮಗಳೊಂದಿಗೆ ಜೋಡಿಸಲ್ಪಟ್ಟಿವೆ. ಅಂತಿಮವಾಗಿ, ಮೊದಲಿನ ಮೂರು ಚರಣಗಳು ಕೊನೆಯ ಎರಡನ್ನು ಎತ್ತಿ ಹಿಡಿಯುತ್ತವೆ. ನಾವೀಗ ಈ ಪಂಚರಂಗಗಳನ್ನು ಕ್ರಮವಾಗಿ ಪರೀಕ್ಷಿಸೋಣ.


ಸಾರ್ವಜನಿಕ ರಂಗ :

ಪ್ರಉತ ಅರ್ಥನೀತಿಯಲ್ಲಿ ಸಾರ್ವಜನಿಕ ರಂಗದ ಪಾತ್ರವು ತುಂಬಾ ಮಹತ್ವ ಪೂರ್ಣವಾಗಿದೆ. ಆದು ಕಚ್ಚಾ ಮಾಲು ಹಾಗೂ ಯಂತ್ರೋಪಕರಣಗಳಂಥ ಮಧ್ಯಂತರ ಸರಕುಗಳ ಉತ್ಪಾದನೆಯನ್ನು ಒಳಗೊಂಡಿದೆ. ಇಂಥ ಉತ್ಪಾದನೆಗಳನ್ನು ದೊಡ್ಡ ಪ್ರಮಾಣದಲ್ಲಿಯೇ ಮಾಡಲಿ, ಇಲ್ಲವೆ ಚಿಕ್ಕ ಪ್ರಮಾಣದಲ್ಲಿಯೇ ಮಾಡಲಿ, ಅವುಗಳನ್ನು ಸಾರ್ವಜನಿಕ ರಂಗಕ್ಕೇ ಮೀಸಲಿಡಬೇಕು. ಈ ಉದ್ದಿಮೆಗಳು ಬೀಗದ ಕೈ ಇದ್ದಂತೆ. ಅವುಗಳ ಮಹತ್ವದ ದೃಷ್ಟಿಯಿಂದ ಅವುಗಳನ್ನು ಸಾರ್ವಜನಿಕೇತರ ರಂಗಗಳ ನಿರ್ವಹಣೆಗೆ ಬಿಡುವಂತಿಲ್ಲ. ಅವುಗಳ ಪರ್ಯಾಪ್ತ ಪೂರೈಕೆಯ ಮೇಲೆ ಇಡೀ ಸಮಾಜದ ಸ್ವಾಸ್ಥ್ಯವು ಅವಲಂಬಿಸಿರುತ್ತದೆ. ಈ ಕಾರಣದಿಂದ ಅವುಗಳ ಉತ್ಪಾದನೆಗೆ ಸರಕಾರವೇ ಸಂಪೂರ್ಣ ಹೊಣೆಗಾರವಾಗಬೇಕು. ಉಕ್ಕು, ರಾಸಾಯನಿಕ ಗೊಬ್ಬರ, ತೈಲ, ಗ್ಯಾಸು, ಹಿತ್ತಾಳೆ, ಅಲ್ಯುಮಿನಿಯಮ್, ಸಿಮೆಂಟು, ಕಲ್ಲಿದ್ದಲು, ಯಂತ್ರೋಪಕರಣಗಳು, ಭಾರೀ ಇಂಜಿನಿಯರಿಂಗ್ ಸರಕುಗಳು, ಪೆಟ್ರೋ ರಾಸಾಯನಿಕ ಮುಂತಾದವುಗಳನ್ನು ಕೇವಲ ಸಾರ್ವಜನಿಕ ರಂಗದಲ್ಲಷ್ಟೇ ತಯಾರಿಸಬೇಕು. ಇಂಥ ಉದ್ದಿಮೆಗಳಲ್ಲಿ ಖಾಸಗಿ ಬಂಡವಾಳ ತೊಡಗಿಸುವುದು ನಿಷಿದ್ಧ. ಇನ್ನು ಅವುಗಳನ್ನು ಸಹಕಾರಿ ತತ್ತ್ವದ ಮೇಲೂ ನಡೆಸಕೂಡದು.

ಅವುಗಳನ್ನು ಅಲ್ಲಲ್ಲಿಯ ರಾಜ್ಯ ಸರಕಾರಗಳೇ ನಡೆಸತಕ್ಕದ್ದು. ಉದಾಹರಣೆಗೆ, ನೋಡಿರಿ. ಉಕ್ಕಿನ ಕಾರಖಾನೆಯೊಂದನ್ನು ಕಲಕತ್ತೆಯಲ್ಲಿ ಸ್ಥಾಪಿಸಿದ್ದರೆ, ಅದರ ಉಸ್ತುವಾರಿಯನ್ನು ಬಂಗಾಲ ಸರಕಾರವೇ ವಹಿಸಬೇಕು. ಏಕೆಂದರೆ ಸನಿಹದ ಸರಕಾರವು ಸ್ಥಳೀಯ ಆರ್ಥಿಕ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತಿರುತ್ತದೆ. ಸಾರ್ವಜನಿಕ ಉದ್ದಿಮೆಗಳನ್ನು ಲಾಭ – ಹಾನಿಗಳಿಲ್ಲದ ರೀತಿ ನಡೆಸಬೇಕು. ಅಂದರೆ, ಈ ಉದ್ದಿಮೆಗಳು ಉತ್ಪಾದಿಸುವ ಸರಕುಗಳ ಬೆಲೆಯನ್ನು ಉತ್ಪಾದನೆಯ ಸರಾಸರಿ ವೆಚ್ಚಕ್ಕ ಸರಿದೂಗಿಸುವಂತೆ ನಿಗದಿಪಡಿಸಬೇಕು. ಸರಾಸರಿ ವೆಚ್ಚವೂ ಸಹ ಸಾಧ್ಯವಿದ್ದ ಮಟ್ಟಿಗೆ ಕನಿಷ್ಠವಿರಬೇಕು. ಆಗ ಮಾತ್ರ ಸಾರ್ವಜನಿಕ ಉದ್ಯಮಗಳು ದಕ್ಷತೆಯ ಮಟ್ಟವನ್ನು ಪಾಲಿಸುತ್ತವೆ. ಅವು ಅತ್ಯಂತ ದಕ್ಷ ತಂತ್ರಗಳನ್ನು ಬಳಸಬೇಕು. ಅವು ಬಂಡವಾಳ ಪ್ರಾಧಾನ್ಯವಿರಬಹುದು. ಅಥವಾ ಹಾಗಿರಲಿಕ್ಕಿಲ್ಲ; ಆ ಮಾತು ಬೇರೆ. ಆದೇ ಕಾಲಕ್ಕೆ ಅವುಗಳಿಂದ

ಪರಿಸರ ಮಾಲಿನ್ಯ ಉಂಟಾಗದಂತೆ ಭರವಸೆ ಪಡೆಯಬೇಕು (ನಾನು ಪರಿಸರಾತ್ಮಕ ಗುಣಮಟ್ಟದ ವಿಭಾಗದಲ್ಲಿ ಈ ಬಗ್ಗೆ ಹೆಚ್ಚಿಗೆ ಹೇಳಲಿದ್ದೇನೆ.)

ಬಂಡವಾಳ – ಕೇಂದ್ರಿತ ತಂತ್ರಗಳು ಅತ್ಯಂತ ದಕ್ಷವಾಗಿರುವವೆಂದು ಅಭಿವೃದ್ಧ ಹಾಗೂ ಅನಭಿವೃದ್ಧ ಜಗತ್ತುಗಳ ಅರ್ಥನೀತಿಜ್ಞರು ಇಂದು ನಂಬಿದ್ದಾರೆ. ಇದು ಹೀಗೆಯೇ ಇರಬೇಕೆಂದೇನೂ ಅಲ್ಲ. ಒಂದು ದೃಷ್ಟಿಯಿಂದ, ಕನಿಷ್ಠ ಸರಾಸರಿ ವೆಚ್ಚದಲ್ಲಿ ಪರಿಣಮಿಸು ವಂಥದೆಂದು ವ್ಯಾಖ್ಯಾನಿಸಲ್ಪಟ್ಟ ದಕ್ಷ ತಂತ್ರವು, ಪರಿಶ್ರಮ, ಯಂತ್ರೋಪಕರಣ ಹಾಗೂ ಇತರ ಅಂಗಗಳಿಗೆ ದೊರೆಯುವ ಸ್ಥಳೀಯ ಪ್ರತಿ ಫಲಕ್ಕೆ ತಕ್ಕ ತಂತ್ರಜ್ಞಾನವನ್ನು ಬಳಸುತ್ತದೆ. ನಿಮ್ನ – ವೇತನದ ಅರ್ಥ ನೀತಿಯಲ್ಲಿ, ಶ್ರಮಕೇಂದ್ರಿತ ತಂತ್ರಜ್ಞಾನವೇ ಅತ್ಯಂತ ದಕ್ಷವಾದುದಾಗಿದೆ. ಎರಡನೆಯದಾಗಿ, ಬಂಡವಾಳ ಕೇಂದ್ರಿತ ತಂತ್ರಜ್ಞಾನಗಳು, ಸಾಮಾನ್ಯವಾಗಿ ಹೆಚ್ಚು ಹೆಚ್ಚು ಪರಿಸರ ಮಾಲಿನ್ಯವನ್ನು ಉಂಟು ಮಾಡುವ ಮೂಲಕ ಸಾಮಾಜಿಕ ಹಿತಕ್ಕ ಧಕ್ಕೆಯಾಗುತ್ತದೆ. ಉತ್ಪಾದಕನು ಮಾಲಿನ್ಯ ಪೀಡೆಗೆ ಬಲಿಯಾದವರಿಗೆ ಪರಿಹಾರ ನೀಡುವತನಕ– ಹೀಗಾಗುವದು ತೀರ ವಿರಳ. – ಇಂಥ ಸಾಮಾಜಿಕ ವೆಚ್ಚಗಳು ಸಂಕಲಿತ ವೆಚ್ಚದ ಲೆಕ್ಕಾಚಾರದಲ್ಲಿ ಸೇರುವದಿಲ್ಲ.



ಪ್ರಗತಿಯ ಆರ್ಥಿಕ ಗೋಪುರ

ಹೀಗಾಗಿ, ನಿಜವಾದ ಸರಾಸರಿ ವೆಚ್ಚವು ತೋರಿಕೆಯ ಸರಾಸರಿ ವೆಚ್ಚಕ್ಕಿಂತ ಹೆಚ್ಚಿಗಿರುತ್ತದೆ. ತತ್ಪರಿಣಾಮವಾಗಿ, ಬಂಡವಾಳ ಕೇಂದ್ರಿತ ತಂತ್ರಗಳು ಅತ್ಯಂತ ದಕ್ಷವಾಗಿರಬೇಕೆಂದೇನೂ ಇಲ್ಲ.

ಪ್ರಗತ ಮೂಲಭೂತ ಅಂಶಗಳ ಸಮತೂಕದ ಬಳಕೆಗೆ ಕರೆ ನೀಡುತ್ತದೆ. ಯಾವುಂದು ಸಂಪನ್ಮೂಲದ ದುರ್ಬಳಕೆಯೂ ತರವಲ್ಲ. ಆದ್ದರಿಂದ, ಔದ್ಯೋಗೀಕರಣದ ಸಾಮಾಜಿಕ ವೆಚ್ಚಗಳನ್ನು ಔದ್ಯೋಗಿಕ ನಿರ್ಣಯ ಕೈಕೊಳ್ಳುವಾಗ, ಪರಿಗಣಿಸಬೇಕಾಗುತ್ತದೆ.

ಸರಾಸರಿ ವೆಚ್ಚದ ಲೆಕ್ಕಾಚಾರಗಳಲ್ಲಿ ಶ್ರಮದ ವೆಚ್ಚ, ಬಂಡವಾಳ ಮೇಲಿನ ಪ್ರತಿಫಲ, ಸೊತ್ತಿನ ಸವಕಳಿ, ಇನ್ನಿತರ ಕಚ್ಚಾ ಸಾಮಗ್ರಿಗಳ ವೆಚ್ಚ ಇವುಗಳಲ್ಲದೆ ಪರಿಸರ ಮಾಲಿನ್ಯ ನಿವಾರಣೆಗೆ ತಗಲುವ ಇನ್ನಿತರ ವೆಚ್ಚಗಳೂ ಸಮಾವೇಶವಾಗುತ್ತವೆ. ಸಾರ್ವಜನಿಕ ರಂಗದ ಸರಕುಗಳ ಬೆಲೆಯು ಈ ಎಲ್ಲ ವೆಚ್ಚಗಳನ್ನು ಭರಿಸುವಂತಿರಬೇಕು.

ಸಾರ್ವಜನಿಕ ಉದ್ದಿಮೆಗಳನ್ನು ಬಂಡವಾಳವಾದಿ ಅರ್ಥ ವ್ಯವಸ್ಥೆಯಲ್ಲಿಯಂತೆ ಕಠೋರ ಸ್ಪರ್ಧೆ ಎದುರಿಸುವ ಖಾಸಗಿ ರಂಗದ ಉದ್ದಿಮೆಗಳ ರೀತಿಯಲ್ಲಿಯೇ ನಡೆಸಬೇಕು. ಇಂದು ವಿಶ್ವಾದ್ಯಂತ ಇರುವ ಸ್ಥಿತಿಗೆ ವ್ಯತಿರಿಕ್ತವಾಗಿ, ಸಾರ್ವಜನಿಕ ಸರಕುಗಳ ರಂಗವು ತುಂಬಾ ದಕ್ಷವಿರಬೇಕು. ಈ ಕಾರಣದಿಂದಾಗಿಯೇ ಸಾರ್ವಜನಿಕ ರಂಗವನ್ನು ರಾಜ್ಯ ಸರಕಾರಗಳಿಗೆ ಉತ್ತರದಾಯಿಯಾದ ಸ್ವತಂತ್ರ ಸಂಸ್ಥೆಯು ನಡೆಸಬೇಕು. ಈ ಸಂಸ್ಥೆಗಳ ಅಧಿಕಾರಿಗಳಿಗೆ ಅವರ ಸಾಧನೆಗೆ ತಕ್ಕಂತೆ ಪುರಸ್ಕಾರ ನೀಡಬೇಕು. ತೊಡಗಿಸಿದ ಹಣಕ್ಕೆ ಸಿಗುವ ಪ್ರತಿಫಲದ ಪ್ರಮಾಣಿತ ದರಗಳನ್ನು ಆ ಸಂಸ್ಥೆಗಳು ಆರ್ಜಿಸುವವೋ ಇಲ್ಲವೋ ಎನ್ನುವುದರ ಮೇಲೆ ಅಲ್ಲಿಯ ಸಂಬಳಗಳು ಅವಲಂಬಿಸಿರಬೇಕು. ಔದ್ಯೋಗಿಕ ಕಾರ್ಯಕಲಾಪಗಳಲ್ಲಿ ನಿರ್ಣಯ ಕೈಕೊಳ್ಳುವ ಸಂಪೂರ್ಣಾಧಿಕಾರ ಅವುಗಳಿಗಿರಬೇಕು. ಆಲಸಿ ಹಾಗೂ ಅಸಮರ್ಥ ಕೆಲಸಗಾರರನ್ನು ಕಿತ್ತು ಹಾಕಲು ಅವು ಸ್ವತಂತ್ರವಿರಬೇಕು. ಅದೊಂದು ಸಾರ್ವಜನಿಕ ಯೋಜನೆಯೆಂಬ ಒಂದೇ ಕಾರಣದಿಂದ, ಅದರ ಕೆಲಸಗಾರರನ್ನು, ಅವರವರ ಕಾರ್ಯಾಚರಣೆಯ ದಕ್ಷತೆಯನ್ನು ಗಮನಿಸದ ಕಾಯಂ ಆಗಿ ಮುಂದುವರಿಸಬೇಕೆಂದು ಅರ್ಥವಲ್ಲ.

ವೇತನ ರಚನೆಯಲ್ಲಿಯೂ ಸಹ ಕಠಿಣ ಪರಿಶ್ರಮ ಮತ್ತು ದಕ್ಷತೆಗಳಿಗೆ ಪ್ರತಿಫಲ ದೊರೆಯಬೇಕು. ಇನ್ನು ಮೈಗಳ್ಳರನ್ನು ಹಿಂಬಡತಿ ನೀಡಿ ಇಲ್ಲವೆ ಕೆಲಸದಿಂದ ಕಿತ್ತಿ ಹಾಕಿ ದಂಡಿಸಬೇಕು. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ದಕ್ಷತೆಯ ವಿಷಯದಲ್ಲಿ, ಸ್ಪರ್ಧೆಯನ್ನೆದುರಿಸುವ ಖಾಸಗಿ ಉದ್ದಿಮೆಗಳಂತೆಯೇ, ಸಾರ್ವಜನಿಕ ಉದ್ದಿಮೆಗಳನ್ನು ನಡೆಸಬೇಕು. ಇಂದು ಭಾರತೀಯ ಸಾರ್ವಜನಿಕ ಉದ್ದಿಮೆ ರಂಗವನ್ನು ಪೀಡಿಸುತ್ತಿರುವ ವ್ಯರ್ಥ ವೆಚ್ಚ ಹಾಗೂ ಅದಕ್ಷತೆಯನ್ನು ನಿವಾರಿಸಲು ಇದೊಂದೇ ಉಪಾಯವಾಗಿದೆ.

ಮಧ್ಯಂತರ ವಸ್ತುಗಳ ಉತ್ಪಾದನೆಯಷ್ಟೇ ಅಲ್ಲದೆ ಸಾರ್ವಜನಿಕ ರಂಗವು ಅತ್ಯಂತ ಹೆಚ್ಚು ಬಂಡವಾಳದ ಅಗತ್ಯವಿರುವ ಉದ್ದಿಮೆಗಳ ಹೊಣೆಯನ್ನೂ ಹೊರಬೇಕು. ಇದು, ಸಾಮಾನ್ಯವಾಗಿ, ರೇಲ್ವೆ, ವಾಯುಯಾನ, ಹಡಗು ಇತ್ಯಾದಿಗಳನ್ನು ಒಳಗೊಂಡಂತೆ ಎಲ್ಲ

ಸಾಗಾಣಿಕೆಗಳಿಗೂ ಅನ್ವಯಿಸುತ್ತದೆ. ರಕ್ಷಣಾ ಸಂಬಂಧಿತ ಉದ್ದಿಮೆಗಳಂತೂ ಸಾರ್ವಜನಿಕ ರಂಗಕ್ಕೆ ಮೀಸಲಿರಬೇಕೆಂದು ಬೇರೆ ಹೇಳಬೇಕಾಗಿಲ್ಲ ತಾನೇ.

ಸಾರ್ವಜನಿಕ ರಂಗಕ್ಕೆ ಪ್ರಾಶಸ್ತ್ಯ ನೀಡಿರುವ ಮಹತ್ವವನ್ನು ಸುಲಭವಾಗಿ ಮೆಚ್ಚಿಕೊಳ್ಳಬಹುದು. ಬೀಗದ ಕೈಯಂತಿರುವ ಪ್ರಮುಖ ಉದ್ದಿಮೆಗಳು, ಶ್ರೀ ಸರಕಾರ ಅವರಿಗೆ, ಉಳಿದ ಅರ್ಥ ವ್ಯವಸ್ಥೆಯನ್ನು ಪೋಷಿಸುವ ಕೇಂದ್ರಗಳಾಗಿವೆ. ಸಾಮಾಜಿಕವಾಗಿ ಇಷ್ಟವಾದ ಕ್ಷೇತ್ರಗಳಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ನಿರ್ದೇಶಿಸುವ ಶಕ್ತಿವಂತ ಆಯುಧವನ್ನು ಪ್ರಾಶಸ್ತ್ಯ ರಾಜ್ಯ ಸರಕಾರಕ್ಕೆ ಒದಗಿಸುತ್ತದೆ. ಏಕೆಂದರೆ, ಒಂದು ದೇಶವು ಐಷಾರಾಮಿ ವಸ್ತು ಒದಗಿಸಲಾರದಷ್ಟು ಬಡವಾಗಿದ್ದರೆ ಐಷಾರಾಮಿ ವಸ್ತುಗಳ ತಯಾರಿಕೆಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಳನ್ನು ಅವುಗಳಿಗೆ ಪೂರೈಸದಿರುವುದೇ ಸರಕಾರ ಮಾಡಬೇಕಾದ ಕರ್ತವ್ಯ.

ಸಮತಾವಾದಿ ಇಲ್ಲವೆ ಸಮಾಜವಾದಿ ರಾಷ್ಟ್ರಗಳ ಸಾರ್ವಜನಿಕ ರಂಗಗಳಲ್ಲಿ ಕಾಣಬರುವ ಬಿರುಸು ಹಾಗೂ ಭ್ರಷ್ಟಾಚಾರಗಳನ್ನು ಪ್ರಾಶಸ್ತ್ಯ ಸಾರ್ವಜನಿಕ ರಂಗವು ತಿರಸ್ಕರಿಸುತ್ತದೆ. ಪ್ರಮುಖ ಉದ್ದಿಮೆಗಳಲ್ಲಿ ವೈಯಕ್ತಿಕ ವ್ಯವಸ್ಥೆಗೆ ಪ್ರೋತ್ಸಾಹ ನೀಡಬೇಕು. ಇಂಥ ಉದ್ದಿಮೆಗಳನ್ನು ಸಮಾಜವಾದಿ ರಾಷ್ಟ್ರಗಳಲ್ಲಿಯಂತೆ ರಾಜ್ಯ ಮುಖಂಡರ ಹಿತವರ್ಧನೆಗಾಗಿ ನಡೆಸದೆ, ಅವುಗಳನ್ನು ಸರ್ವರ ಹಿತಕ್ಕಾಗಿ ನಡೆಸಬೇಕು. ಆದರೆ ಅವುಗಳನ್ನು ಖಾಸಗಿ ಉತ್ಪಾದಕರಿಗೆ ವಹಿಸಿಕೊಡಬಾರದು. ಏಕೆಂದರೆ ಅವರು ಸಮಾಜದ ಉಳಿದವರ ಮೇಲೆ ಸವಾರಿ ಮಾಡಬಹುದಾಗಿದೆ.

1970 ರ ದಶಕದಲ್ಲಿ ಕೆಲವೇ ಕೆಲವು ರಾಷ್ಟ್ರಗಳು ಕಚ್ಚಾ ತೈಲೋತ್ಪಾದನೆಯ ಏಕಸ್ವಾಮ್ಯ ಪಡೆದಿದ್ದರು. ಅದು ಜಗತ್ತಿನ ಅರ್ಥವ್ಯವಸ್ಥೆಯ ಜೀವನಾಡಿಯಂತಿದೆ. ತೈಲೋತ್ಪಾದಕ ರಾಷ್ಟ್ರಗಳಿಗೆ ಇದು ತಿಳಿದ ಕಾರಣ ಅವರು ಅದರ ಬೆಲೆಯನ್ನು ಏರಿಸುತ್ತ ನಡೆದರು. ಬಹುರಾಷ್ಟ್ರೀಯ ಕಂಪನಿಗಳಿಗೂ ಗೊತ್ತು. ಅವರೂ ಸಹ, ಈ ಬರ್ಬರ ಆಟದಲ್ಲಿ ಸೇರಿಕೊಂಡರು. ಅವರ ಲಾಭಗಳೂ ಸಹ ಕಣ್ಣು ಕುಕ್ಕುವಷ್ಟು ಮೇಲೇರಿದವು. ಆದರೆ ನೊಂದವರಾರು? ಇತರರೆಲ್ಲರೂ ತಾನೇ. ಅನಭಿವೃದ್ಧ ರಾಷ್ಟ್ರಗಳು; ತೈಲೋತ್ಪಾದಕ ರಾಷ್ಟ್ರಗಳ ಬಂಧುಗಳು ತೀರ ಕೀಳಾದ ಬಲಿಪಶುಗಳಾದರು. ಆದ್ದರಿಂದ ಅರ್ಥವ್ಯವಸ್ಥೆಯ ನರ–ನಾಡಿ ಕೇಂದ್ರಗಳಾದ ಔದ್ಯೋಗಿಕ ಕಚ್ಚಾ ಸಾಮಗ್ರಿಗಳನ್ನು ಖಾಸಗಿ ರಂಗಕ್ಕೆ ಬಿಟ್ಟುಗೊಡಬಾರದು.

ಸಹಕಾರಿ ರಂಗ :

ಸಾಗಾಣಿಕೆ, ರಕ್ಷಣೆ ಮತ್ತು ಮುಂದಿನ ಉತ್ಪಾದನೆಗೆ ಬಳಸುವ ಸರಕುಗಳು ಸಾರ್ವಜನಿಕ ಕ್ಷೇತ್ರದಲ್ಲಿಯೇ ಉಳಿಯಬೇಕು. ಎಲ್ಲ ಅಂತಿಮ ಉತ್ಪಾದನೆಗಳು ಸಾರ್ವಜನಿಕೇತರ ರಂಗಗಳಿಗೆ ಮೀಸಲಾಗಬೇಕು. ಇಲ್ಲಿ ಮುಕ್ತ ಉದ್ಯಮದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಪ್ರಾಶಸ್ತ್ಯ ಶಿಫಾರಸು ಮಾಡುತ್ತದೆ. ಅದರಲ್ಲಿ ತೊಡಗಿದ ಪ್ರತಿಯೋರ್ವನಿಗೂ ಏನಾದರೊಂದು ಹೇತುವಿದ್ದೇ ಇರುತ್ತದೆ.

ತಾಂತ್ರಿಕತೆಯ ಕಾರಣ, ಕೆಲವು ಗ್ರಾಹಕ ಸರಕುಗಳ ಉದ್ದಿಮೆಗಳು ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ ಮಾತ್ರ ದಕ್ಷವೆನಿಸುತ್ತವೆ. ಅವರು ಶ್ರಮಜೀವಿಗಳ ದೊಡ್ಡ ಸೇನೆಯನ್ನೇ ಉದ್ಯೋಗಕ್ಕೆ ತೆಗೆದುಕೊಳ್ಳುತ್ತಾರೆ. ಇಂಥ ಉದ್ದಿಮೆಗಳನ್ನು ಶ್ರಮಜೀವಿಗಳು ತಾವೇ ನಡೆಸಬೇಕು. ಹಾಗೂ ಅವುಗಳ ಒಡೆತನವನ್ನೂ ಹೊಂದಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಾಮಾನ್ಯವಾಗಿ ಪ್ರಾಶಸ್ತ್ಯ, ಸಹಕಾರಿ ಸಂಸ್ಥೆಗಳೆಂದು ಕರೆಯಲ್ಪಡುವವುಗಳನ್ನು ಅಥವಾ ಶ್ರಮಜೀವಿಗಳು ನಿರ್ವಹಿಸುವ ಸಂಸ್ಥೆಗಳನ್ನು ಪ್ರೋತ್ಸಾಹಿಸುತ್ತದೆ. ಇಲ್ಲಿ 'ಶ್ರಮ ಜೀವಿ' ಎಂದರೆ ನೀಲಿ ಹಾಗೂ ಬಿಳಿ ಕಾಲರಿನ ಎಲ್ಲ ಉದ್ಯೋಗಿಗಳು ಸಮಾವೇಶವಾಗುತ್ತಾರೆ.

ಈ ಸಹಕಾರಿ ವ್ಯವಸ್ಥೆಯಡಿ ಮಾತ್ರ ಮುಕ್ತ ಉದ್ಯಮವು ನಿಜವಾಗಿ ರೂಪುಗೊಳ್ಳುತ್ತದೆ. ತಮ್ಮ ಚುನಾಯಿತ ಪ್ರತಿನಿಧಿಗಳ ಮುಖಾಂತರ ಶ್ರಮಜೀವಿಗಳು ತಾವೇ ತಮ್ಮ ಗುರಿ ಸಾಧನೆಯ ಹೊಣೆ ಹೊತ್ತಿದ್ದರೆ, ಆಗ ಮಾತ್ರ ವಿಚಾರ ಮತ್ತು ಭಾಷಣಗಳ ನೈಜ ಸ್ವಾತಂತ್ರ್ಯಗಳು ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಇರುವಂತೆ ಇರಬಲ್ಲವು. ಆದರೆ ಓರ್ವ ಬಂಡವಾಳವಾದಿ ಇಲ್ಲವೆ ಬಹ್ವಂಶ ಶೇರುದಾರಕನು ಸಂಸ್ಥೆಯ ವರಿಷ್ಠನಾಗಿದ್ದರೆ, ಸಂಸ್ಥೆಯ ಸಮಾಜ ವಿರೋಧಿ ಧೋರಣೆಗಳ ವಿರುದ್ಧ ಯಾವ ಶ್ರಮಜೀವಿಯೂ ಚಕಾರ ದನಿ ಎತ್ತಲಾರನು. ಸಮಾಜಕ್ಕೋಸುಗ ವರಿಷ್ಠನನ್ನೆದುರು ಹಾಕಿಕೊಳ್ಳುವವರಾರು? ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

ಅಮೇರಿಕೆ, ಜಪಾನ, ಯುರೋಪ ಹಾಗೂ ಭಾರತಗಳಲ್ಲಿಯ ಖಾಸಗಿ ಸಂಸ್ಥೆಗಳು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಂಚ ಭ್ರಷ್ಟಾಚಾರಗಳಲ್ಲಿ ಸಿಲುಕಿಕೊಂಡಿವೆ. ಆದರೆ ಅವುಗಳ ಶ್ರಮಜೀವಿಗಳಲ್ಲಾರೂ ಅವುಗಳನ್ನು ತಡೆಯರು. ಲಾಕ್ ಹಿಡಿದ ಗೀಳು, ಬೋಯಿಂಗ್ ಕಂಪನಿಯ ಲಂಚ ಮತ್ತಿತರ ಅಸಂಖ್ಯಾತ ಭ್ರಷ್ಟಾಚಾರ ಪ್ರಕರಣಗಳು ನಿರಂತರವಾಗಿ ಬೆಟ್ಟುಮಾಡಿ ತೋರಿಸುವ ಸಂಗತಿಯೆಂದರೆ, ಬಂಡವಾಳಶಾಹಿ ಉದ್ಯಮಗಳು ನಿಜವಾದ ಉತ್ಪಾದಕರಿಗೆ ಹೊಣೆಯಾಗಿರಬೇಕು. ಅವು ತಮ್ಮ ಶ್ರಮಜೀವಿಗಳಿಗೇ ಉತ್ತರದಾಯಿಯಾಗ ಬೇಕು. ಅತ್ಯುತ್ತಮ ಹಾದಿಯೆಂದರೆ, ಶ್ರಮಜೀವಿಗಳು ತಮ್ಮ ಸ್ವಂತ ಅದೃಷ್ಟವನ್ನು ತಾವೇ ರೂಪಿಸಿಕೊಳ್ಳುವಂತಾಗಬೇಕು.

ಪ್ರಜಾಸತ್ತಾತ್ಮಕ ದೇಶಗಳಲ್ಲಿ ಪ್ರಚಲಿತವಿರುವ ಏಕಸ್ವಾಮ್ಯ ಬಂಡವಾಳ ವ್ಯವಸ್ಥೆಯು ನಿಜವಾಗಿ ಸಾಮುದಾಯಿಕ ಗುಲಾಮಗಿರಿ ವ್ಯವಸ್ಥೆಯಷ್ಟೇ. ಗುಲಾಮನು ಸಾಮಾನ್ಯವಾಗಿ ಹೊಲದಲ್ಲಿ ಕೆಲಸ ಮಾಡುವ ಶ್ರಮಜೀವಿ; ಜೀತದಾಳು. ಅವನಿಗೆ ತನ್ನವೇ ಆದ ಹಕ್ಕುಗಳಿಲ್ಲ. ಅವನು ಹೊಲದಲ್ಲಿ ಕೆಲಸ ಮಾಡಬೇಕು. ತನ್ನ ಉದರ ನಿರ್ವಾಹಕ್ಕಾಗಿ ವೇತನ ಪಡೆಯಬೇಕು. ಇಂಥ ವ್ಯವಸ್ಥೆಯು ಇನಾಮದಾರಿಕೆಯ 500 ವರ್ಷಗಳಲ್ಲಿ, ರಶಿಯಾ ಹಾಗೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ (2, ಅ. 5 ಮತ್ತು 6) ಪ್ರಚಲಿತವಿತ್ತು.

ನಿರುದ್ಯೋಗವು ಬೃಹತ್ ಪ್ರಮಾಣದಲ್ಲಿ ಇರುವಾಗ, ಔದ್ಯೋಗಿಕ ಕೆಲಸಗಾರನ ಸ್ಥಿತಿಯು ಗುಲಾಮನ ಸ್ಥಿತಿಗಿಂತ ಬೇರೇನೂ ಇರಲಾರದು. ಭಾರತದಲ್ಲಂತೂ ಈ ವ್ಯವಸ್ಥೆಯು, ಬ್ರಿಟಿಶರ ಆಳ್ವಿಕೆ ಆರಂಭವಾದ ಲಾಗಾಯ್ತು ಇದೆ. ಸ್ವಾತಂತ್ರ್ಯ ಬಂದ ಮೇಲೂ ಸಹ ಪರಿಸ್ಥಿತಿ

ಬದಲಾಗಿಲ್ಲ. ಪಶ್ಚಿಮದಲ್ಲಿಯೂ ಸಹ, ಯುದ್ಧಾನಂತರದ ಅಲ್ಪಾವಧಿಯ ವರ್ಷಗಳನ್ನು ಬಿಟ್ಟರೆ, ಕಳೆದ ಮೂರು ಶತಕಗಳಿಂದ ನಿರುದ್ಯೋಗವು ಧುತ್ತೆಂದು ಎದ್ದು ನಿಂತಿದೆ. ಏತನ್ಮಧ್ಯೆ ಔದ್ಯೋಗೀಕರಣವು ನಾಗಾಲೋಟದಿಂದ ಮುನ್ನಡೆದಿದೆ. ಶ್ರಮ ಜೀವಿಗಳು ಸಮೃದ್ಧಿಯಿಂದಿರುವ ಉತ್ಕರ್ಷದ ಅವಧಿಗಳು ಇದ್ದುದೇನೋ ನಿಜ. ಆದರೆ ಒಂದೆರಡು ಸಮೃದ್ಧ ವರ್ಷಗಳ ಬೆನ್ನ ಹಿಂದೆಯೇ ಹಿನ್ನಡೆಯೂ ಬಂತು; ಕೆಲವೊಮ್ಮೆ ಕುಸಿತವೂ ಉಂಟಾಯಿತು. ಹಿನ್ನಡೆಯ ಭೀತಿಯು ತಮ್ಮ ತಲೆಯ ಮೇಲೆ ತೂಗುವ ಖಡ್ಗದಂತೆ ನಿರಂತರ ಝಳಪಿಸಿದಾಗ ಕೆಲವು ಶ್ರಮಜೀವಿಗಳು ಒಂದು ಸಂಸ್ಥೆಯಿಂದ ಇನ್ನೊಂದಕ್ಕೆ ಸಾಗಿದರು. ಯಾವನೊಬ್ಬ ಶ್ರಮಜೀವಿ ಯಾವುದೊಂದು ಸಂಸ್ಥೆಗೆ ಕಟ್ಟುಬಿದ್ದಿರಬೇಕೆಂಬ ಸಿದ್ಧಾಂತವೇನೂ ಇಲ್ಲ. ಆದರೂ ಸಹ, ವಾಸ್ತವತೆ ಬೇರೆಯೇ ಇರುತ್ತದೆ. ಆದ್ದರಿಂದ, ಪಾಶ್ಚಾತ್ಯ ರಾಷ್ಟ್ರಗಳ ಔದ್ಯೋಗಿಕ ಚರಿತ್ರೆಯಲ್ಲಿ ಸುದೀರ್ಘ ಕಾಲ ಪರ್ಯಂತ ಕಾರಖಾನೆಯ ಕೆಲಸಗಾರನು ಜಮೀನದಾರಿಯ ಜೀತದಾಳಿಗಿಂತ ಬೇರೇನೂ ಇರಲಿಲ್ಲ. ಅವನು ಜಮೀನಿಗೆ ಅಂಟಿದ ಜೀತದಾಳು ಆಗಿರಲಿಲ್ಲ; ನಿಜ: ಆದರೆ ಅವನ ಆರ್ಥಿಕ ಶಕ್ತಿಹೀನತೆಯು ಅವನನ್ನು ನಿಜವಾಗಿ ಗುಲಾಮನನ್ನಾಗಿಸಿತು.

ಇಂದು ಪಾಶ್ಚಾತ್ಯ ಜಗತ್ತು ಬೃಹತ್ ಪ್ರಮಾಣದ ಸಾಲದ ಹೊರೆ ಹೊತ್ತಿದೆ. ತೃತೀಯ ಜಗತ್ತಿನ ಸ್ಥಿತಿಯು ಸಹ ಬೇರೆನಿಲ್ಲ. ದ್ವಿತೀಯ ಜಾಗತಿಕ ಯುದ್ಧದ ನಂತರ ಇಂದು ಎಂದೆಂದಿಗಿಂತಲೂ ಹೆಚ್ಚು ಆರ್ಥಿಕ ಅನಿಶ್ಚಿತತೆ ಮೂಡಿದೆ. ಕೆಲಸಗಾರರು ಮತ್ತೊಮ್ಮೆ ಕೆಲಸ ಕಳೆದುಕೊಳ್ಳುವ ಭೀತಿ ಹೊಂದಿದ್ದಾರೆ. ಅವರು ಒಂದು ಸಂಸ್ಥೆಯಿಂದ ಇನ್ನೊಂದಕ್ಕೆ ಹೇಗೆ ಹೋಗಬಲ್ಲರು? ಅವರು ತಮ್ಮ ತಮ್ಮ ಸಂಸ್ಥೆಗಳಿಗೆ ಅಂಟಿಕೊಂಡಿಲ್ಲವೇ? ಅವರನ್ನು ಜಮೀನುದಾರಿಯ ಜೀತದಾಳಿನಂತೆ ನಡೆಸಿಕೊಳ್ಳುತ್ತಿಲ್ಲವೇ? ತಮ್ಮ ಒಡೆಯನು ಅನ್ಯಾಯ ಮಾಡಿದರೆ ಅವರು ಅವನಿಗೆ ವಿರೋಧವಾಗಿ ಮಾತನಾಡಬಲ್ಲರೇ? ನಿಜ; ಇಂಥವರು ಒಕ್ಕೂಟಗಳನ್ನು ರಚಿಸಿಕೊಂಡಿದ್ದಾರೆ. ಹಾಗಾಗಿ 19 ನೇ ಶತಮಾನದ ಔದ್ಯೋಗಿಕ ಕೆಲಸಗಾರನಿಗಿಂತ ಸ್ವಲ್ಪ ಉತ್ತಮವಾಗಿದ್ದರೆ, ಇರಲಿ; ಒಳ್ಳೆದು, ಜೀತದಾಳುಗಳೂ ಇನಾಮದಾರಿಕೆಯ ಉತ್ಕರ್ಷದ ಕಾಲದಲ್ಲಿ ಸಮೃದ್ಧಿ ಪಡೆದರು ನಿಜ; ಸುಧಾರಿತ ತಂತ್ರಜ್ಞಾನ ಹಾಗೂ ನಾಗರೀಕರಣಗಳು ಅವರ ಸ್ಥಿತಿಯನ್ನು ಬಹಳಷ್ಟು ಸುಧಾರಿಸಿದವು. ಆದರೆ ಅವರನ್ನಿನ್ನೂ ಜೀತದಾಳುಗಳೆಂದೇ ಕರೆದರು. ಏಕೆಂದರೆ, ಅವರ ಜಮೀನುದಾರರು ಅವರಿಗಿಂತ ಬಹುಪಾಲು ಉತ್ಕರ್ಷ ಹೊಂದಿದ್ದರು. ಇಂದು ಶ್ರಮಜೀವಿಯು ಮುಂಚೆಗಿಂತಲೂ ಸ್ವಲ್ಪ ಉತ್ತಮನಾಗಿದ್ದಾನೆ. ಇತ್ತ ಉತ್ಪಾದಕನು ಸಮೃದ್ಧಿಯಲ್ಲಿ ಲೋಲಾಡುತ್ತಿದ್ದಾನೆ. ಇನಾಮ ದಾರಿಕೆಯ ಜೀತದಾಳುಗಳ ಹಾಗೂ ಇಂದಿನ ಔದ್ಯೋಗಿಕ ಶ್ರಮ ಜೀವಿಗಳ ಮಧ್ಯೆ ಅನೇಕಾನೇಕ ಸಾದೃಶ್ಯಗಳಿವೆ. ಉಭಯತಾಪಿ ಪ್ರಸಂಗಗಳಲ್ಲಿ, ಆಸ್ತಿಯನ್ನು ಕೆಲವೇ ಜನರು ಹೊಂದಿದ್ದಾರೆ. ಮತ್ತು ನಿಯಂತ್ರಿಸುತ್ತಾರೆ. ಮತ್ತು ಅವರಿಗಾಗಿ ಸಾಮಾನ್ಯರು ಪರಿಶ್ರಮಿಸುತ್ತಾರೆ. ಅಂದಮೇಲೆ ಬಂಡವಾಳಶಾಹಿ ವ್ಯವಸ್ಥೆಯು ಅದರಲ್ಲಿಯೂ ಏಕಸ್ವಾಮ್ಯದ ಬಂಡವಾಳಶಾಹಿಯು ಬಹ್ವಂಶದಲ್ಲಿ ಸಾಮುದಾಯಿಕ ಗುಲಾಮಗಿರಿ ವ್ಯವಸ್ಥೆಯೆಂಬುದನ್ನು ಅಲ್ಲಗಳೆಯಲಿಕ್ಕಾಗದು.

ಅಂದಮೇಲೆ, ಬಂಡವಾಳಶಾಹಿತ್ವವನ್ನು ಮುಕ್ತ ಉದ್ಯಮವೆಂದು ಕರೆಯುವುದೆಂತು? ತೀರ ಅಲ್ಪಸಂಖ್ಯಾತರಾಗಿರುವ ಉತ್ಪಾದಕರು ಜಗತ್ತಿನಲ್ಲಿಂದು ಸರ್ವ ಸ್ವತಂತ್ರರಾಗಿದ್ದಾರೆ. ಆದರೆ

ಶ್ರಮಜೀವಿ ವರ್ಗದ ಬೃಹತ್ ಪ್ರಮಾಣದ ಬಹು ಸಂಖ್ಯಾಕರು, ತಮ್ಮ ಬೆವರು ಹನಿಗಳಿಂದ, ತೊಳಲಾಟದಿಂದ, ಉತ್ಕರ್ಷಿಸುವ ಉದ್ಯಮಗಳ ವಿಷಯದಲ್ಲಿ ಒಂದು ಮಾತು ಕೂಡ ಹೇಳುವಂತಿಲ್ಲ.

ನಾವೀಗ ಇಂದಿನ ಕಾರಖಾನೆ ವ್ಯವಸ್ಥೆಯತ್ತ ಆಳವಾಗಿ ಇಣಿಕಿ ನೋಡುವಾ: ಉತ್ಪಾದಕನು ಕೆಲಸಗಾರರನ್ನು ಬಾಡಿಗೆಗೆ ಪಡೆಯಬಹುದು. ಬೈದು ಅಟ್ಟಲೂಬಹುದು. ಬೃಹತ್ ಆಸ್ತಿ ಹೊಂದಲು ಸಮಾಜವು ಅವನಿಗೆ ಅನುಮತಿ ನೀಡಿದೆ. ಆದರಿಂದ ಅವನು ಅನೇಕ ಜನರ ಅದೃಷ್ಟವನ್ನು ನಿಯಂತ್ರಿಸಲು ಶಕ್ತನಾಗಿದ್ದಾನೆ. ವ್ಯವಹಾರವು ಚೆನ್ನಾಗಿರುವಾಗ, ಉತ್ಪಾದಕನು ಹೆಚ್ಚು ಜನರನ್ನು ಕೂಲಿ ಕೊಟ್ಟು ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ. ತನ್ನ ಗಳಿಕೆಯ ಅಲ್ಪಾಂಶವನ್ನು ಅವರಿಗೆ ಕೊಡುತ್ತಾನೆ. ವ್ಯವಹಾರವು ಮಂದವಾದಾಗ ಅವರನ್ನು ಕೆಲಸದಿಂದ ಹೊರದೂಡುತ್ತಾನೆ. ನಿರುದ್ಯೋಗಿಗಳ ಉಪವಾಸ ವನವಾಸಗಳ ಗೊಡವೆಯೇ ಅವನಿಗಿಲ್ಲ. ತನ್ನ ಲಕ್ಷಾಂತರ ಹಣ ಸಂಚಯಕ್ಕೆ ಸ್ವಲ್ಪು ಕಾಲ ಮುಂಚೆ ಕೆಲವು ಜನರು ತನಗೆ ನೆರವಾಗಿದ್ದರೆಂಬುದನ್ನು ಅವನು ಶೀಘ್ರ ಮರೆತುಬಿಡುತ್ತಾನೆ. ಅತ್ಯಂತ ಅನಿವಾರ್ಯ ಅಗತ್ಯವೆನಿಸಿದ ಕಾಲದಲ್ಲಿ ಅವರು ಅವನಿಗೆ ನೆರವಾದರು. ಇದೆಲ್ಲವೂ ಹೀಗೇಕಾಯಿತು? ಏಕೆಂದರೆ ಆಸ್ತಿಯ ಒಡೆತನವು ಮೂಲಭೂತ ಹಕ್ಕಾಗಿದೆಯೆಂದು ನಂಬುವಂತೆ ಅವರ ಸಮಾಜವು ಅವರಿಗೆ ತಪ್ಪು ಮಾರ್ಗದರ್ಶನ ಮಾಡಿದೆ.

ಮುಕ್ತ ರೀತಿಯಲ್ಲಿ ಉಪಜೀವಿಸುವದು, ಮಾತನಾಡುವುದು ಹಾಗೂ ವಿಚಾರ ಮಾಡುವುದು ಹಾಗೂ ಪ್ರಪಂಚದಲ್ಲಿ ಬೇಕೆನಿಸಿದಲ್ಲಿ ವಾಸಿಸುವುದು ನಮ್ಮ ಜನ್ಮಸಿದ್ಧ ಹಕ್ಕು. ಆದರೆ, ಆಸ್ತಿಯ ಹಕ್ಕಿನ ವಿಷಯ ಬೇರೆ. ಅದನ್ನು ಪಡೆಯಲು ನಮಗಿರುವ ನಿಯಮಬದ್ಧ ಹಾಗೂ ನೈತಿಕ ಅಧಿಕಾರವೇನು? ತನ್ನ ದೇಹ ಮತ್ತು ಮಿದುಳುಗಳನ್ನು ಬಿಟ್ಟು ಯಾರೇ ಆಗಲಿ, ಜನ್ಮ ಮೂಲಕ ಏನನ್ನು ತಂದಿದ್ದಾರೆ? ಮೊತ್ತ ಮೊದಲ ಮಾನವನು ಹುಟ್ಟುವ ಮೊದಲು ಈ ವಿಶ್ವವು ಇತ್ತು. ಅವನೇನೂ ಇದನ್ನು ಸೃಷ್ಟಿಸಲಿಲ್ಲ. ಅಂದ ಮೇಲೆ ಅವನ ಸಂತತಿ ಇದನ್ನು ಹೇಗೆ ಹೊಂದಬಹುದು ?

ಪ್ರಾಮಾಣಿಕ ಕಾರ್ಯದ ಮೂಲಕ ಯಾವನೂ ಅತಿಶಯ ಸಿರಿವಂತನಾಗಲಾರ. ಇಂದು ಕೆಲವರು ಅನುವಂಶಿಕವಾಗಿ ಪಡೆದಿರುವ ದೊಡ್ಡ ದೊಡ್ಡ ಇಸ್ಟೇಟುಗಳನ್ನು ಅವರ ತಂದೆ – ತಾತರೇನೂ ಪ್ರಾಮಾಣಿಕ ಸಾಧನಗಳಿಂದ ನಿರ್ಮಿಸಿಲ್ಲ. ಅವರ ತಂದೆ – ತಾತಂದಿರು ಕಾಲೆಳೆಯುವ ಇಲ್ಲವೆ ಲಾಭಬಡುಕತನದಲ್ಲಿ ತೊಡಗಿರದಿದ್ದರೆ, ಅವರು ಬಡವರನ್ನು ಸುಲಿದಿರದಿದ್ದರೆ, ಅವರು ಕರ ತಪ್ಪಿಸಿದ ವಂಚಕರಾಗಿರದಿದ್ದರೆ, ಇಂಥ ವಿಶಾಲ ಆರ್ಥಿಕ ಸಾಮ್ರಾಜ್ಯಗಳನ್ನು ಕೂಡಿ ಹಾಕುತ್ತಿರಲಿಲ್ಲ. ಅವರು ತಮ್ಮ ಎಳೆತ – ಸೆಳೆತಗಳ ಹಾಗೂ ಧಂಧೆಯ ಮೂಲಕ ಕಾಯ್ದೆಯಿಂದ ಪಾರಾಗಲು ಶಕ್ತರಾದರು. ಅವರ ಸುಲಿಗೆಯ ಫಲವನ್ನು ಅವರ ಮಕ್ಕಳು ಭೋಗಿಸಲಿಕ್ಕೆ ನಾವು ಅನುಮತಿಸಬಹುದೇ ?

ಪ್ರಉತ, ಆಸ್ತಿಯ ಒಡೆತನವನ್ನೇನೋ ಮನ್ನಿಸುತ್ತದೆ. ಆದರೆ, ಜನ್ಮಸಿದ್ಧ ಹಕ್ಕು ಎಂಬರ್ಥದಲ್ಲಿ ಅಲ್ಲ; ಅದು ಮಾನವೀಯ ಮಾನಸಶಾಸ್ತ್ರಕ್ಕೆ ಅನುಗುಣವಾಗಿದೆ ಎಂಬ

ಅರ್ಥದಲ್ಲಿ. ಒಂದು ವೇಳೆ, ವ್ಯಕ್ತಿಯೋರ್ವನು ಪ್ರಾಮಾಣಿಕ ಜೀವನ ಹಾಗೂ ಪರಿಶ್ರಮ ಮೂಲಕ ಸಂಪತ್ತನ್ನು ಗಳಿಸಿದರೆ, ತಾನು ಕೂಡಿ ಹಾಕಿದುದನ್ನು ಇಟ್ಟುಕೊಳ್ಳಲು ಅವನಿಗೆ ಅನುಮತಿ ನೀಡಬೇಕಾದುದು ಲೇಸು ತಾನೇ? ಅವನು ಅದರ ಸ್ವಲ್ಪ ಭಾಗವನ್ನು ತನ್ನ ಮಕ್ಕಳಿಗೂ ಕೊಡಲು ಅನುಮತಿ ಬೇಕು. ಆದರೆ ಭಾರಿ ಎಸ್ಟೇಟುಗಳನ್ನಲ್ಲ. ಏಕೆಂದರೆ, ನಾವು ವ್ಯಾಖ್ಯಾನಿಸಿದಂತೆ ಅವರು ಈ ಆಸ್ತಿಯನ್ನು ಭ್ರಷ್ಟ ಸಾಧನಗಳ ಮೂಲಕ ಗಳಿಸಿದ್ದಾರೆ.

ಆದ್ದರಿಂದ ಉತ್ಪಾದನ – ದಕ್ಷತೆಯ ದೃಷ್ಟಿಯಿಂದ ಆಸ್ತಿಯ ಹಕ್ಕನ್ನು ಮೊಟಕು ಗೊಳಿಸಬೇಕೇ ಹೊರತು ನಿರ್ಮೂಲಗೊಳಿಸಬಾರದು. ಇಂಥ ಹಕ್ಕನ್ನು ಕಿತ್ತು ಹಾಕಿದ ದೇಶಗಳು ಪೈಶಾಚಿಕ ಪೀಡೆಯ ಉತ್ತಮ ನಿದರ್ಶನಗಳಾಗಿವೆ. ಇಂಥ ದೇಶಗಳಲ್ಲಿ ರಶಿಯಾ ಖಳನಾಯಕ ನಂತಿದೆ. ಆದರೆ ಅಲ್ಲಿ ಸಾಮಾನ್ಯ ನಾಗರಿಕನಿಗೆ ಅನುಮತಿ ಇಲ್ಲ. ಆದರೆ ಎಲ್ಲವೂ ಪಕ್ಷ ಧುರೀಣರಿಗೆ ಮೀಸಲು.

ಸಂಪತ್ತಿನ ಕೇಂದ್ರೀಕರಣವು ಕೆಲವು ವ್ಯಕ್ತಿಗಳ ಕೈಯಲ್ಲಿ ಇರಲಿ ಇಲ್ಲವೆ ರಾಷ್ಟ್ರಗಳ ವಶದಲ್ಲಿ ಇರಲಿ; ಸಮಾಜ ಸ್ವಾಸ್ಥ್ಯಕ್ಕೆ ಮಾರಕವಾಗಿದೆಯೆಂಬ ಸಂಗತಿಯು ಬರುಬರುತ್ತ ಇಂದು ಸ್ಪಷ್ಟವಾಗತೊಡಗಿದೆ. ಈ ಕೇಂದ್ರೀಕರಣವನ್ನು ಪೋಷಿಸುವ ಸಂಘಟನೆಯೇ ಬಂಡವಾಳದ ವಾದ. ಏಕೆಂದರೆ, ಲಾಭರೂಪದ ಹಣದ ದೊಡ್ಡ ಮೊತ್ತವನ್ನು ಕೆಲವೇ ಶೇರುಧಾರಕರಲ್ಲಿ ಹಂಚಲಾಗುತ್ತಿದೆ. ಕೆಲಸಗಾರರಿಂದ, ಚುನಾಯಿತ ಪ್ರತಿನಿಧಿಗಳಿಂದ, ಉದ್ದಿಮೆಗಳ ಆಡಳಿತೆಯನ್ನು ತಪ್ಪಿಸಿ ಸಹಕಾರಿ ತತ್ತ್ವದ ಮೇಲೆ ನಡೆಸಿದರೆ ಈ ಕೇಡು ತೊಲಗುತ್ತದೆ. ಒಂದು ವೇಳೆ, ಶ್ರಮಜೀವಿಗಳೇ ಕಾರಖಾನೆಗಳ ಒಡೆತನ ಹೊಂದಿ ನಡೆಸಿದರೆ, ಲಾಭವನ್ನು ಸಾಮಾನ್ಯರ ಮಧ್ಯೆ ಹಂಚಬೇಕಾಗುವುದು. ಈ ವ್ಯವಸ್ಥೆಯಲ್ಲಿ ಭಯಂಕರ ಆದಾಯ ಅಸಮಾನತೆಗಳು ಇರಲಾರವು. ಇನ್ನು, ಅಸಮಾನತೆಯನ್ನು ನಿವಾರಿಸಲು ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಳ್ಳುವ ಅಗತ್ಯವೂ ಸಹ ಸರಕಾರಕ್ಕೆ ಬರಲಾರದು. ಪ್ರಉತ, ಲಾಭ ಗಳಿಕೆಗೆ ವಿರೋಧಿಯಲ್ಲ. ಆದರೆ ಅದು ಲಾಭ ಬಡುಕತನವನ್ನು ವಿರೋಧಿಸುತ್ತದೆ. ವಾಸ್ತವವಾಗಿ ಉದ್ದಿಮೆಗಳು ದೀರ್ಘ ಕಾಲ ಪರ್ಯಂತ ಸಾಲ ತೀರಿಸಬಲ್ಲವುಗಳಾಗಿರಬೇಕಾದರೆ ಲಾಭಗಳು ಅನಿವಾರ್ಯ ಅಗತ್ಯವಾಗಿವೆ. ಅದೇ ರೀತಿ, ಬೆಳವಣಿಗೆಯ ದೃಷ್ಟಿಯಿಂದ ಹೆಚ್ಚು ಹಣ ತೊಡಗಿಸುವಾಗಲೂ ಸಹ ಲಾಭ ಅಗತ್ಯ. ಆದರೆ ಅವೇ ಲಾಭಗಳು, ಏಕಸ್ವಾಮ್ಯವಾದಿಗಳ ಸಂದೂಕದಲ್ಲಿ ಉಳಿದಾಗ, ಅವು ಸಾಮಾಜಿಕ ಶೋಷಣೆಯ ಯಂತ್ರಗಳಾಗುತ್ತಿವೆ. ಸಹಕಾರಿ ಅರ್ಥವ್ಯವಸ್ಥೆಯು ಇದಕ್ಕೆ ಅನುಮತಿಸದು. ರಾಜಕೀಯ ಹಾಗೂ ಸಾಮಾಜಿಕ ಸಮಾನತಾವಾದವು ಆಗ ವ್ಯವಸ್ಥೆಯ ಭಾಗವೇ ಆಗುತ್ತದೆ.

ಸಿಬ್ಬಂದಿ ವರ್ಗವೇ ನಡೆಸುತ್ತಿರುವ ಸಂಸ್ಥೆಗಳು ಬಹಳ ಕಡೆಗಳಲ್ಲಿ ಇಲ್ಲ. ಆದರೆ ಅವುಗಳನ್ನು ಪ್ರಪಂಚದ ಹಲವು ಭಾಗಗಳಲ್ಲಿ ಪ್ರಯತ್ನಿಸಿ ನೋಡಲಾಗಿದೆ. ಯುಗೋಸ್ಲಾವಿಯಾದಲ್ಲಿ ಅವು ಪ್ರಮುಖ ಯಶಸ್ಸು ಕಂಡಿವೆ. ಬ್ರಿಟನ್, ಜರ್ಮನಿ, ಆಸ್ಟ್ರೇಲಿಯಾ ಹಾಗೂ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿಯೂ ಅವುಗಳನ್ನು ಕಾಣಬಹುದು. ಆದರೆ ಅವು ನಿಯಮ ಎನ್ನುವುದಕ್ಕಿಂತಲೂ ಅಪವಾದಗಳೆಂಬಂತೆ ಇವೆ.

ಸಿಬ್ಬಂದಿ ಆಡಳಿತದ ಸಂಸ್ಥೆಗಳೂ ಮತ್ತು ಲಾಭ ಹಂಚಿಕೊಳ್ಳುವ ಬಂಡವಾಳವಾದಿ ಸಂಸ್ಥೆಗಳೂ ಒಂದೇ ಅಲ್ಲ. ಎರಡನೆಯದರಲ್ಲಿ ಸಂಸ್ಥೆಯ ಆಡಳಿತ ಹಾಗೂ ನಿಯಂತ್ರಣಗಳು ಹೆಚ್ಚಾಗಿ ಸ್ಟಾಕ್‌ಧಾರಕರ ಕೈಯಲ್ಲಿದ್ದರೆ ಮೊದಲನೆಯದರಲ್ಲಿ ಶ್ರಮಜೀವಿಗಳ ಪ್ರತಿನಿಧಿಗಳೇ ಎಲ್ಲ ನಿರ್ಣಯ ಕೈಕೊಳ್ಳುತ್ತಾರೆ. ಶ್ರಮಜೀವಿ ಆಡಳಿತ ಸಂಸ್ಥೆಯ ಪೂರ್ಣ ಒಡೆತನವು ಶ್ರಮ ಜೀವಿಗಳದಾಗಿರಲಿಕ್ಕಿಲ್ಲ. ಆದರೆ, ಅವರು ಬಹು ಸಂಖ್ಯಾತರ ಹಿತವನ್ನು ಹೊಂದಿರುತ್ತಾರೆ. ಇನ್ನಿತರರ ಹಿತವನ್ನು ಹೊರಗಿನ ಶೇರುದಾರರು ಹೊಂದಿರಬಹುದು.

ಇತ್ತೀಚೆಗೆ ಶ್ರಮಜೀವಿಗಳು ನಡೆಸುತ್ತಿರುವ ಸಂಸ್ಥೆಗಳ ಚಟುವಟಿಕೆಯತ್ತ ಅರ್ಥ ನಿಪುಣರ ಸಾಹಿತ್ಯ ಲಕ್ಷ್ಯ ಹಾಕತೊಡಗಿದೆ.ವಾರ್ಡ (13) ಡೋಮರ (6) ವಸೆಕ್ (11) ಗುತ್ತು ನಾನು (3) ಮತ್ತಿತರರು ಸಹಕಾರಿ ಉದ್ದಿಮೆಗಳಲ್ಲಿಯ ನಿರ್ಣಯ ಕೈಕೊಳ್ಳುವಿಕೆ ಕುರಿತು ವಿಶ್ಲೇಷಿಸಿದ್ದೇವೆ. ರೂಢಿಯ ಪ್ರಕಾರ ಬುದ್ಧಿಜೀವಿಗಳಲ್ಲಿಯಂತೆ ಅರ್ಥನೀತಿಜ್ಞರ ಮಧ್ಯ ಸಹ, ಸಹಮತ ಅತ್ಯಲ್ಪ ತಾನೇ. ಬಂಡವಾಳವಾದಿ ಸಂಸ್ಥೆಗಳಿಗೆ ಪ್ರತಿಯಾಗಿ ಶ್ರಮಜೀವಿ ಆಡಳಿತ ವಿರುವ ಸಂಸ್ಥೆಗಳ ದಕ್ಷತೆಯು ವಿವಾದಗ್ರಸ್ತವಾಗಿದೆ. ಆದರೆ, ಒಂದು ಮಾತಂತೂ ಸ್ಪಷ್ಟ. ಶ್ರಮ ಜೀವಿ – ಆಡಳಿತ ವ್ಯವಸ್ಥೆಯು ಹೊರಹೊಮ್ಮಲು ಮತ್ತು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಜಗತ್ತು ಬಹಳಷ್ಟು ಬದಲಾಗಬೇಕಿಲ್ಲ.

ಶ್ರಮ ಜೀವಿ – ಆಡಳಿತ ಉದ್ಯಮಗಳು ಅವುಗಳ ಪ್ರತಿರೂಪದ ಬಂಡವಾಳಶಾಹಿ ಸಂಸ್ಥೆಗಳಷ್ಟು ದಕ್ಷವಾಗಿರುವುದಿಲ್ಲವೆಂದು ಕೆಲವರ ಅಭಿಪ್ರಾಯ. ಇದಕ್ಕೆ ತೀರ ವಿರೋಧವಾಗಿ ಇನ್ನಿತರರ ಸಲಹೆ. ಇನ್ನೂ ಹಲವರು, ಸಹಕಾರಿ ಅರ್ಥ ವ್ಯವಸ್ಥೆಯು ಅತಿಪ್ರಸರಣ ಹಾಗೂ ನಿರುದ್ಯೋಗಗಳಂಥ ಒತ್ತಡಗಳಿಗೆ ತುತ್ತಾಗುವುದಿಲ್ಲ ಎನ್ನುತ್ತಾರೆ. ಈ ವಾದ – ವಿವಾದವು ನಡೆದಿರುವಾಗಲೂ ಸಹ ಬಂಡವಾಳಶಾಹಿ ಉದ್ಯಮಗಳಿಗಿಂತ ಸಹಕಾರಿ ಉದ್ಯಮಗಳು ಕೆಲವೊಂದು ಅನುಕೂಲ ಹೊಂದಿವೆಯೆಂಬುದು ತೀರ ಸ್ಪಷ್ಟವಾಗಿದೆ.

ಮೊತ್ತಮೊದಲು ಸಹಕಾರಿ ಉದ್ಯಮದಲ್ಲಿ ಆದಾಯ ವಿತರಣೆಯು ಈಗಿನಕ್ಕಿಂತ ಹೆಚ್ಚು ನ್ಯಾಯಯುತವಾಗುವುದು. ಎರಡನೆಯದೆಂದರೆ, ತಮಗೆ ತಕ್ಕ ಲಾಭಾಂಶ ಸಿಗುವುದೆಂದು ತಿಳಿದರೆ, ಹೆಚ್ಚು ಪರಿಶ್ರಮ ಮಾಡಬಹುದು. ಅಸೀಮಿತ ಖಾಸಗಿ ಆಸ್ತಿಯ ಪ್ರತಿಪಾದಕರ ವಿಚಾರದೋಷದಿಂದ ಈ ವಾದವು ಮೂಡಿಬರುತ್ತಿದೆ. ಆಸ್ತಿಯ ಒಡೆತನವು ತಮ್ಮ ಉತ್ಪಾದಕತೆಗೆ ಪುಷ್ಟಿದಾಯಕವಾಗಿದೆಯೆಂದು ಅವರ ವಾದ. ಅದೇ ವಾದವನ್ನು ವಿಸ್ತೃತವಾಗಿ ಹರಡಿದ ಸಂಸ್ಥೆಗಳ ಒಡೆತನಕ್ಕೂ ಸಹ ಅನ್ವಯಿಸಬಹುದಾಗಿದೆ. ಮೂರನೆಯದಾಗಿ, ಆದಾಯದ ಸಮಾನ ಹಂಚಿಕೆಯ ಕಾರಣ, ಅಪರಾಧಾದಿ ಸಾಮಾಜಿಕ ಸಮಸ್ಯೆಗಳು ಕುಂಠಿತವಾಗುತ್ತವೆ. ಉದಾಹರಣಾರ್ಥವಾಗಿ ಆರ್ಥಿಕ ಹಿನ್ನೆಡೆಯ ಕಾಲದಲ್ಲಿ ಶ್ರಮಜೀವಿಗಳನ್ನು ಕೆಲಸದಿಂದ ತೆಗೆದು ಹಾಕುವುದಿಲ್ಲ. ಪ್ರತಿಯಾಗಿ ಅವರು ಕಡಿಮೆ ಕೆಲಸದ ಘಂಟೆಗಳನ್ನು ಒಪ್ಪಿಕೊಳ್ಳುತ್ತಾರೆ. ಸಂಕ್ಷೇಪಿಸಿ ಹೇಳುವುದಾದರೆ, ಈ ವ್ಯವಸ್ಥೆಯನ್ನು ಮಾನವೀಕರಿಸಲಾಗುವುದು.

ಶ್ರಮಜೀವಿ ಆಡಳಿತದ ಅರ್ಥ ವ್ಯವಸ್ಥೆಯನ್ನು ಬಂಡವಾಳವಾದಿ ಇಲ್ಲವೆ ಸಮಾಜವಾದಿ ಅರ್ಥವ್ಯವಸ್ಥೆಗಳೊಂದಿಗೆ ತುಲನೆ ಮಾಡಲು ಅತಿ ಸ್ವಲ್ಪ ಪ್ರಯೋಗಾತ್ಮಕ ಅಭ್ಯಸನಗಳು ಲಭ್ಯವಿವೆ. ಆದರೆ ಶ್ರೀ ಬಲಸ್ಸಾ ಮತ್ತು ಬರ್ಟ್ರಾಂಡ (1) ಅವರು ಗೆಯ್ದ ಅಭ್ಯಾಸವು ಸ್ವಯಮಾಡಳಿತ ವ್ಯವಸ್ಥೆಯ ಮೇಲ್ಮೆಯತ್ತ ಬೆರಳು ತೋರುತ್ತದೆ. ಯುಗೋಸ್ಲಾವಿಯಾದಲ್ಲಿ 1953 ಮತ್ತು 1965 ರ ಮಧ್ಯೆ ಒಟ್ಟಾರೆ ಉತ್ಪಾದಕತೆಯು ಪ್ರತಿ ವರುಷ ಕನಿಷ್ಠ ಶೇಕಡಾ 4.5 ಹೆಚ್ಚಾಗಿರುವುದನ್ನು ಈ ಅಧ್ಯಯನವು ಕಂಡುಹಿಡಿದಿದೆ. ಆದರೆ ಬಲ್ಗೇರಿಯಾ, ಹಂಗರಿ, ಪೋಲಂಡ ಮತ್ತು ಝಿಕೋಸ್ಲೊವಾಕಿಯಾಗಳ ಸಮಾಜವಾದಿ ಅರ್ಥವ್ಯವಸ್ಥೆಗಳ ತುಲನಾತ್ಮಕ ಆಂಕೆಗಳು ಬೆಳವಣಿಗೆಯ ದರವನ್ನು ಶೇಕಡಾ 2.5 ಎಂದು ತೋರಿಸಿವೆ. ಸಮಾಜವಾದಿ ರಾಷ್ಟ್ರಗಳಲ್ಲಿ ರುಮಾನಿಯಾ ಮಾತ್ರ ಯುಗೋಸ್ಲಾವಿಯಾದ ಸಾಧನೆಯನ್ನು ಸರಿಗಟ್ಟಿದೆ. ಇನ್ನು ಗ್ರೀಸ್, ಐರ್ಲಂಡ್, ನಾರ್ವೆ ಮುಂತಾದ ಬಂಡವಾಳವಾದಿ ರಾಷ್ಟ್ರಗಳಲ್ಲಿ ಸಹ, ಉತ್ಪಾದನೆ ಹೆಚ್ಚಳದ ದರವು ಸುಮಾರು 2.2 ರಷ್ಟಿದೆ. ಸ್ವೀಡನ್ ಮಾತ್ರ ಹೆಚ್ಚು ಕಡಿಮೆ ಯುಗೋಸ್ಲಾವಿಯಾದ ಮಟ್ಟ ತಲುಪಿದೆ. ಈ ಎಲ್ಲ ದೇಶಗಳು ಸಮಾನ ಅಭಿವೃದ್ಧಿ ಮಟ್ಟದಲ್ಲಿ ಇರುವುದರಿಂದ ಈ ಅಧ್ಯಯನವು ಈ ದೇಶಗಳ ಮೇಲೆ ಕೇಂದ್ರೀಕೃತವಾಗಿದೆ. ಸರಾಸರಿ ದೃಷ್ಟಿಯಿಂದ ನೋಡಿದರೆ, ತುಲನಾತ್ಮಕವಾಗಿ, ತೀರ ಹೊಸದಾದ ಮತ್ತು ಪ್ರಯೋಗದ ಪರೀಕ್ಷೆಗಿಳಿಯದ ವ್ಯವಸ್ಥೆ ಹೊಂದಿದ ಶ್ರಮಜೀವಿ ಆಡಳಿತದ ಯುಗೋಸ್ಲಾವ ಅರ್ಥನೀತಿಯು, ಸುದೀರ್ಘಕಾಲ ಪ್ರತಿಷ್ಠಿತವಾದ ಬಂಡವಾಳಶಾಹಿ ಹಾಗೂ ಸಮಾಜವಾದಿ ರಾಷ್ಟ್ರಗಳ ವ್ಯವಸ್ಥೆಗಳಿಗಿಂತ ಚೆನ್ನಾಗಿಯೇ ಕೆಲಸ ಮಾಡಿದೆ.

ಗ್ರಾಹಕರ ವಸ್ತುಗಳನ್ನು ತಯಾರಿಸುವ ದೊಡ್ಡ ಪ್ರಮಾಣದ ಕಾರಖಾನೆಗಳನ್ನು ಸಹಕಾರಿ ತತ್ತ್ವದ ಮೇಲೆಯೇ ನಡೆಸಬೇಕೆಂದು ಒಪ್ಪಿಕೊಂಡ ಬಳಿಕ ಈಗ ಎದುರಿಸಬೇಕಾದ ಪ್ರಶ್ನೆಯೊಂದಿದೆ: ಸಹಕಾರಿ ಅರ್ಥವ್ಯವಸ್ಥೆಯನ್ನು ಕಾರ್ಯಕಾರಿಗೊಳಿಸುವುದು ಹೇಗೆ ? ಎಂಬುದೇ ಆ ಪ್ರಶ್ನೆ.

ಕೆಲವು ಸಾಹಸಿ ಶ್ರಮಜೀವಿಗಳು ಒಂದೆಡೆ ಕೂಡಿ ತಮ್ಮ ಅಲ್ಪಸ್ವಲ್ಪ ಹಣದಿಂದ ಕೆಲವು ಕಾರಖಾನೆಗಳನ್ನು ಸ್ಥಾಪಿಸಿದರೆ, ಅವುಗಳನ್ನು ದೈತ್ಯಾಕಾರದ ಬಂಡವಾಳಶಾಹಿ ಸಂಸ್ಥೆಗಳು ಕೊಚ್ಚೆ ಹಾಕುತ್ತವೆ. ತಮ್ಮ ತಮ್ಮ ಸ್ವಂತ ಸಂಸ್ಥೆಗಳನ್ನು ಆರಂಭಿಸಲಿಚ್ಛಿಸುವ ಕೆಲಸಗಾರರ ತಂಡಗಳಿಗೆ ಸರಕಾರವು ಉದಾರವಾಗಿ ಸಾಲ ನೀಡಿದರೂ ಸಹ, ಪ್ರಪಂಚಾದ್ಯಂತ ತಮ್ಮ ವ್ಯವಹಾರವನ್ನು ವಿಸ್ತರಿಸಿದ, ಈಗಾಗಲೇ ಬೇರು ಬಿಟ್ಟ ಏಕಸ್ವಾಮ್ಯದ ಸಂಸ್ಥೆಗಳೊಂದಿಗೆ ಸ್ಪರ್ಧಿಸುವ ಅವಕಾಶವೇ ಲಭಿಸದು. ಭಾರತ ಮತ್ತಿತರ ದೇಶಗಳಲ್ಲಿ ಕಾರ್ಯ ಮಾಡುತ್ತಿರುವ ಇಂಥ ಬಹುರಾಷ್ಟ್ರೀಯ ದೈತ್ಯ ಸಂಸ್ಥೆಗಳಿಗೆ ಸಾರ್ವಭೌಮ ಸರಕಾರಗಳೇ ಬೆದರಿ ತತ್ತರಿಸುತ್ತವೆ.

ಒಂದು ವೇಳೆ ಸರಕಾರವೇ ಸಹಕಾರಿ ಸಂಸ್ಥೆಗಳ ಹುಟ್ಟು ಹಾಗೂ ಯಶಸ್ವಿಗಾಗಿ ದೃಢನಿಶ್ಚಯ ಮಾಡಿದರೆ ಮಾತ್ರ ಸಹಕಾರ ಸಂಸ್ಥೆಗಳು ಕಾರ್ಯ ಮಾಡಬಲ್ಲವು. ಸ್ಥಳೀಯ, ರಾಜ್ಯ ಹಾಗೂ ಕೇಂದ್ರ ಮಟ್ಟಗಳಲ್ಲಿ ಭಾರತ ಸರಕಾರವು ಈ ಕೆಳಗಿನ ನೀತಿಗಳನ್ನು ಅಳವಡಿಸಬೇಕು.

1) ಸರಕಾರವು ಪ್ರತಿ ಬಾರಿ ಒಂದೊಂದು ಗ್ರಾಹಕ ಸರಕಿನ ಉದ್ದಿಮೆಯ ಮುಕ್ತ ಸ್ಥಾಪನೆಯ ಗುರಿ ಹೊಂದಬೇಕು. ಮತ್ತು ಪೇಟೆಯಲ್ಲಿ ಅದರ ಶೇಕಡಾ 51 ರಷ್ಟು ಶೇರುಗಳನ್ನು ಖರೀದಿಸಬೇಕು. ಅನಂತರ ಅವುಗಳನ್ನು ವಿವಿಧ ಸಂಸ್ಥೆಗಳ ಸಿಬ್ಬಂದಿಗೆ ಇಳಿಸಿದ ದರದಲ್ಲಿ ಮಾರಬೇಕು. ಈ ಸಿಬ್ಬಂದಿಯು ಈ ರೀತಿ ಇಳಿಸಿದ ದರದ ಶೇರುಗಳನ್ನು ಸ್ಟಾಕ್ ಪೇಟೆಯಲ್ಲಿ ಮಾರಕೂಡದು. ಹೀಗೆ ಪ್ರತಿಯೊಂದು ಸಂಸ್ಥೆಯ ನಿಯಂತ್ರಣವು ಶ್ರಮಜೀವಿಗಳ ಹಾಗೂ ಕಚೇರಿ ಸಿಬ್ಬಂದಿಯ ಪ್ರತಿನಿಧಿಗಳ ಕೈವಶವಾಗುತ್ತದೆ. ಒಂದು ವೇಳೆ ಸಂಸ್ಥೆಯ ಒಡೆಯನು ತನ್ನ ಶೇರುಗಳನ್ನು ಮಾರಲು ನಿರಾಕರಿಸಿದರೆ ಸರಕಾರವು ಇಂಥ ಒಡೆಯರ ಮೇಲೆ ವಿಶೇಷಕರ ಹೇರಬೇಕು ಮತ್ತು ತಮ್ಮ ಬಹು ಸಂಖ್ಯಾತ ಆಸ್ತೆಯನ್ನು ಮಾರುವಂತೆ ಒತ್ತಾಯಿಸಬೇಕು.

ಈಗ ಉದಾಹರಣೆಯಾಗಿ ಭಾರತದಲ್ಲಿಯ ಮೋಟರ ಉದ್ದಿಮೆಯನ್ನೇ ತೆಗೆದು ಕೊಳ್ಳಿರಿ ವಿವಿಧ ಮೋಟರ ಉದ್ದಿಮೆಗಳಲ್ಲಿ ಸರಕಾರವು ಶೇಕಡಾ 51 ರಷ್ಟು ಶೇರುಗಳನ್ನು ಕೊಳ್ಳಬಲ್ಲದು. ಆನಂತರ ಇಳಿಸಿದ ಬೆಲೆಗೆ ಅವುಗಳನ್ನು ಕೆಲಸಗಾರರಿಗೆ ಮಾರಬಹುದು. ಕೆಲಸಗಾರರ ಪ್ರತಿನಿಧಿಗಳು ಇತ್ತ ಪೂರ್ವದ ಆಡಳಿತದ ನೆರವಿನೊಂದಿಗೆ, ಇಲ್ಲವೆ ನೆರವು ಕೋರದೆ, ಆಡಳಿತ ನಿರ್ವಹಿಸುವರು. ಇಂಥ ಸಂಸ್ಥೆಗಳಲ್ಲಿ ಕೆಲಸಗಾರರ ಒಕ್ಕೂಟಗಳ ಅಗತ್ಯವೇ ಇಲ್ಲ. ಏಕೆಂದರೆ ಇವುಗಳ ಒಡೆಯರು ಕೆಲಸಗಾರರೇ ಆಗಿರುತ್ತಾರೆ. ಪ್ರತಿಯೋರ್ವ ಸಿಬ್ಬಂದಿಗೆ ಅವನ ಅಗತ್ಯಾಧಾರಿತ ಕನಿಷ್ಠ ವೇತನ ನೀಡಲಾಗುವುದು. ಮೇಲಾಗಿ, ಅವನ ಅಥವಾ ಅವಳ ಉತ್ಪಾದಕತೆಗೆ ಅನುಸರಿಸಿ ಲಾಭದಲ್ಲಿ ಪಾಲು ಸಹ ಸಿಗುತ್ತದೆ. ಕಠಿಣ ಕೆಲಸ, ಹೊಸ ಹೊಸ ಬದಲಾವಣೆ ಹಾಗೂ ಬುದ್ಧಿಮತ್ತಗಳಿಗೆ ಹೆಚ್ಚುವರಿ ಬೋನಸ್ ನೀಡಿ ಪುರಸ್ಕರಿಸಲಾಗುವುದು. ಇತ್ತ ಆಲಸ್ಯ, ಅಪ್ರಾಮಾಣಿಕ ಹಾಗೂ ಅದಕ್ಷತೆಗಳನ್ನು ಬೋನಸ್ – ಹಾನಿ ಮತ್ತು ಅಂತಿಮವಾಗಿ ಕೆಲಸದಿಂದ ಕಿತ್ತು ಹಾಕುವ ಪರ್ಯಂತ ದಂಡಿಸಲಾಗುವುದು. ಕೆಲಸದಿಂದ ತೆಗೆದು ಹಾಕುವಾಗ ಸಂಸ್ಥೆಯು ಕೆಲಸಗಾರರ ಶೇರುಗಳನ್ನು ಮೂಲ – ವಿನಿಮಯ ದರದನ್ವಯ ಮರಳಿಕೊಳ್ಳುವುದು.

2) ಸ್ವಾಸ್ಥ್ಯಪೂರ್ಣ ಗ್ರಾಹಕ – ಸರಕು ಉದ್ದಿಮೆಗಳಲ್ಲಿ ಸರಕಾರವು ಕೇವಲ ಬಹು ಸಂಖ್ಯಾತ ಆಸ್ತೆಯನ್ನು ಖರೀದಿಸಬೇಕಾಗುತ್ತದೆ. ಆದರೆ ಅಸ್ವಸ್ಥ ಇಲ್ಲವೆ ಹಾನಿಯಿಂದ ಸೊರಗಿದ ಜವಳಿ ಮತ್ತು ಜ್ಯೂಟ ಉದ್ದಿಮೆಗಳಲ್ಲಿ, ಸರಕಾರವು ಇಡೀ ಕಾರಖಾನೆಯನ್ನೇ ಸಾರಾಸಗಟಾಗಿ ಕಡಿಮೆ ದರದಂತೆ ಒಡೆಯರಿಂದ ಕೊಂಡುಕೊಳ್ಳುತ್ತದೆ. ಅವರು ಸಹ ಮಾರಲು ತುಂಬಾ ಸಂತೋಷಿಸುವರು. ಅಸ್ವಸ್ಥ ಘಟಕಗಳಲ್ಲಿ, ಸರಕಾರವು ಶೇರ ಹಣವನ್ನು ಇಳಿಸಿದ ದರದಲ್ಲಿ ಮಾರುವ ಅಗತ್ಯವಿಲ್ಲ. ಏಕೆಂದರೆ, ಆರಂಭದಲ್ಲಿ ಅವುಗಳ ಬೆಲೆಯು ತೀರ ಕಡಿಮೆ ಇರುತ್ತದೆ. ಆದರೆ ಅಸ್ವಸ್ಥ ಉದ್ದಿಮೆಗಳನ್ನು ಆಧುನೀಕರಿಸಲು ಮತ್ತು ಹೊಸ ಯಂತ್ರ ಖರೀದಿಸಲು ಸರಕಾರವು ಅವುಗಳಿಗೆ ಇಳಿಸಿದ ಬಡ್ಡಿ ದರಗಳಂತೆ ಹಣ ನೀಡಬಹುದು. ಅವು ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತಾಗಲೆಂಬ ಆಶಯದಿಂದ ಹೀಗೆ ಮಾಡಬೇಕು.

3) ಕೆಲಸಗಾರರು ತಮ್ಮ ಶೇರು ಹಣವನ್ನು ಕೊಡಲಾರದಷ್ಟು ಬಡವರಾಗಿದ್ದರೆ, ಸರಕಾರವು ಮೊದಲು ಅವರಿಗೆ ಶೇರುಗಳನ್ನು ನೀಡಬೇಕು. ಆ ಬಳಿಕ ಪ್ರತಿಯೊಬ್ಬ ಕೆಲಸಗಾರನ

ಬೋನಸ್‌ದಿಂದ ಮಾಸಿಕ ಇಲ್ಲವೆ ವಾರ್ಷಿಕ ಕಂತುಗಳಲ್ಲಿ ಅವರು ಶೇರು ಹಣ ಭರ್ತಿಯಾಗುವ ವರೆಗೆ ಮುರಿದುಕೊಳ್ಳುತ್ತ ಹೋಗಬೇಕು.

ಈ ರೀತಿ ಸರಕಾರದ ನೆರವು ಹಾಗೂ ಒಪ್ಪಿಗೆಗಳಿಂದ ಗ್ರಾಹಕ ವಸ್ತು ಉದ್ದಿಮೆಗಳನ್ನು ಸಹಕಾರಿ ಉದ್ದಿಮೆ ವ್ಯವಸ್ಥೆಯಲ್ಲಿ ಸ್ಥಾಪಿಸಬಹುದಾಗಿದೆ. ಈ ವ್ಯವಸ್ಥೆಯು ಆಂತರಿಕವಾಗಿ ಉತ್ಪಾದಕವೂ, ದಕ್ಷವೂ ಮತ್ತು ಮಾನ್ಯತೆಯುಳ್ಳದ್ದೂ ಆಗಿದೆ. ಏಕೆಂದರೆ, ಲಾಭವನ್ನು ಜನಸಾಮಾನ್ಯರಲ್ಲಿ ಹಂಚಲಾಗುವುದು. ಕೆಲಸಗಾರರಿಗೆ ಕಠಿಣ ಪರಿಶ್ರಮ ಮಾಡಲು ಪ್ರೇರಣೆ ಸಿಕ್ಕುತ್ತದೆ. ಇಲ್ಲವಾದರೆ ಅವರಿಗೆ ಛೀಮಾರಿ ಹಾಕಬಹುದು. ಇದಲ್ಲದೆ, ಕೆಲಸಗಾರರ ಹಕ್ಕುಗಳನ್ನು ಹಾಗೂ ಸಂಬಳಗಳನ್ನು ರಕ್ಷಿಸಲು ಕೆಲಸಗಾರರ ಒಕ್ಕೂಟಗಳ ಅಗತ್ಯವೇ ಇರದು.

ಚಿಕ್ಕ ಪ್ರಮಾಣದ ಉದ್ದಿಮೆ ರಂಗ :

ಪ್ರಉತದ ಗೋಪುರದ ತೃತೀಯ ಚರಣವೇ ಚಿಕ್ಕ ಪ್ರಮಾಣದ ರಂಗ : ಇದು ಮುಖ್ಯವಾಗಿ ಖಾಸಗಿ ರಂಗ. ಕೆಲವು ಪ್ರಸಂಗಗಳಲ್ಲಿ ಮಾತ್ರ ಸರಕು ಮತ್ತು ಸೇವೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಉತ್ಪಾದಿಸಬಹುದು. ಖಾಸಗಿ ಪ್ರೇರಣೆಯು ಆರ್ಥಿಕ ದಕ್ಷತೆ ಹಾಗೂ ಉತ್ಪಾದಕತೆಯನ್ನು ಪೋಷಿಸಬಹುದು. ಸಾಮಾಜಿಕ ಕಲ್ಯಾಣದ ಹಿತದೃಷ್ಟಿಯಿಂದ ಅದನ್ನು ಸರಿಯಾಗಿ ಉಪಯೋಗಿಸಬಹುದು. ಆದರೆ ಅದನ್ನು ಲಂಗು ಲಗಾಮಿಲ್ಲದೆ ಹಿಗ್ಗಲು ಬಿಡಕೂಡದು. ಇಲ್ಲವಾದರೆ ಅದು ಶೋಷಣೆಯ ಉಪಕರಣವಾಗುತ್ತದೆ. ಈ ವಿಚಾರ ಸರಣಿಯನ್ನು ಮನ್ನಿಸಿ ಪ್ರಉತ, ಖಾಸಗಿ ಹಣ ತೊಡಗಿಸುವಿಕೆಯನ್ನೂ ಮತ್ತು ನಿಷ್ಕಪಟತೆಯನ್ನೂ ಉತ್ತೇಜಿಸುತ್ತದೆ. ಆದರೆ ಇದೆಲ್ಲ ಚಿಕ್ಕ ಪ್ರಮಾಣದ ಉದ್ದಿಮೆ ರಂಗದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ.

ಚಿಕ್ಕ ಪ್ರಮಾಣದ ಹಣ ಹೂಡುವಿಕೆಯ ಅಗತ್ಯವಿರುವ ಮತ್ತು ತೀರ ಸ್ವಲ್ಪ ಜನರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಸಂಸ್ಥೆಗಳನ್ನು ಖಾಸಗಿ ಉದ್ದಿಮೆಗಳಿಗೇ ಬಿಡಬೇಕು. ಇಲ್ಲಿ ಸಂಸ್ಥೆಯ ಅಂಗರಚನೆಯು ವೈಯಕ್ತಿಕ ಒಡೆತನದ್ದಾಗಿರಬಹುದು ಇಲ್ಲವೆ ಪಾಲುಗಾರಿಕೆಯದಾಗಿರ ಬಹುದು. ಇನ್ನು ಅನೇಕ ಸಕ್ರಿಯ ಪಾಲುಗಾರರಿದ್ದರೆ, ಆ ಸಂಸ್ಥೆಯು ಚಿಕ್ಕ ಸಹಕಾರಿ ಸಂಸ್ಥೆಯಂತೆಯೇ ಇರುತ್ತದೆ. ಯಾವುದು ಚಿಕ್ಕದು ? ಯಾವುದು ದೊಡ್ಡದು ? ಎನ್ನುವ ವ್ಯಾಖ್ಯಾನವನ್ನು ನೀತಿ ಯೋಜನಾ ಸಮಿತಿಗೇ ಬಿಡಬೇಕು.

ಖಾಸಗಿ ರಂಗವು ಹೆಚ್ಚಾಗಿ ವ್ಯಾಪಾರ ಹಾಗೂ ಸೇವೆಗಳನ್ನೊದಗಿಸುವ ಉದ್ಯಮ ಗಳಲ್ಲಿ ನಿರತವಾಗಿರುತ್ತವೆ. ಏಕೆಂದರೆ, ಅವುಗಳಿಗೆ ಯಾವುದೇ ಭಾರವಾದ ಆರಂಭದ ಬಂಡವಾಳವಾಗಲಿ ಇಲ್ಲವೆ ಕ್ಲಿಷ್ಟ ತಂತ್ರಜ್ಞಾನವಾಗಲಿ ಬೇಕಿಲ್ಲ. ಉಪಾಹಾರ ಗೃಹ, ಕಿರಾಣಿ ಮಳಿಗೆಗಳು, ಹೊಲಿಗೆ– ಕ್ಷೌರದಂಗಡಿಗಳು, ಲಾಂಡ್ರಿಗಳು ಕರಕುಶಲ ಕೈಗಾರಿಕೆಗಳು, ಸ್ವಯಂ ಚಾಲಕಗಳ ದುರಸ್ತಿ ಇತ್ಯಾದಿಗಳನ್ನು ಈ ರಂಗದಲ್ಲಿ ಕೈಕೊಳ್ಳಬಹುದು. ವೈದ್ಯರ ಹಾಗೂ ವಕೀಲರ ಖಾಸಗಿ ವೃತ್ತಿಗಳೂ ಸಹ ಈ ಚಿಕ್ಕ ಪ್ರಮಾಣದ ಶ್ರೇಣಿಯಲ್ಲಿಯೇ ಸಮಾವೇಶವಾಗುತ್ತವೆ.

ಚಿಕ್ಕ ಗಾತ್ರದ ಕಾರಣ, ಖಾಸಗಿ ರಂಗವು ಸಾಮಾನ್ಯವಾಗಿ ಪೂರ್ಣ ಸ್ಪರ್ಧಾತ್ಮಕ ಸ್ಥಿತಿಯಲ್ಲಿಯೇ ಕಾರ್ಯ ಮಾಡುತ್ತದೆ. ಆದರೂ ಸಹ, ವಿವಿಧ ಗುಂಪುಗಳು ಸೇರಿ ವ್ಯವಹಾರ ಪದ್ಧತಿಯನ್ನು ಅಂಕೆಯಲ್ಲಿ ಇರಿಸಿಕೊಳ್ಳುವುದಕ್ಕೆ ಇಂಬುಗೊಡದಂತೆ ಸರಕಾರವು ಖಚಿತ ಪಡಿಸಬೇಕು. ಸಂಯುಕ್ತ ಸಂಸ್ಥಾನ ಮತ್ತು ಪಶ್ಚಿಮ ಜರ್ಮನಿ ಹಾಗೂ ಫ್ರಾನ್ಸ್‌ಗಳನ್ನು ಒಳಗೊಂಡಂತೆ ಇನ್ನಿತರ ದೇಶಗಳಲ್ಲಿ ಚಿಕಿತ್ಸಕರು ಸಂಘಟನೆಗಳನ್ನು ರೂಪಿಸಿಕೊಂಡಿದ್ದಾರೆ. ಮತ್ತು ವಿಶ್ವವಿದ್ಯಾಲಯಗಳಿಂದ ಪಾಸಾಗುವ ವೈದ್ಯಕೀಯ ಪದವೀಧರರ ಸಂಖ್ಯೆಯನ್ನು ಸೀಮಿತಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದ್ದರಿಂದ, ಈ ದೇಶಗಳಲ್ಲಿ ವೈದ್ಯಕೀಯ ವೃತ್ತಿಗೆ ಗರಿಷ್ಠ ಜೀವನ ಮಟ್ಟ ಭೋಗಿಸುವ ಅನುಕೂಲ ಒದಗಿದೆ. ವಕೀಲರೂ ಸಹ ಅದನ್ನೇ ಮಾಡುತ್ತಿದ್ದಾರೆ. ಇದು ಲಾಭ ಬಡುಕತನದ ಹೊರತು ಬೇರೇನಲ್ಲ. ಈ ವೃತ್ತಿಗಳು ನಮ್ಮ ನಯನಾಜೂಕು ಹಾಗೂ ಔಚಿತ್ಯಗಳ ಭಾವನೆಯನ್ನೇ ಉಲ್ಲಂಘಿಸುತ್ತವೆ. ಆದ್ದರಿಂದ ಸರಕಾರವು ಖಾಸಗಿ ರಂಗದಲ್ಲಿ ಸ್ಪರ್ಧೆಯನ್ನು ಖಚಿತಪಡಿಸಿಕೊಳ್ಳಬೇಕು. ವಿವಿಧ ಗುಂಪುಗಳ ಸಂಘಟನೆಗಳನ್ನು ಕಾಯದೆ ಬಾಹಿರವೆಂದು ಸಾರಲಾಗದು. ಆದರೆ, ಶೈಕ್ಷಣಿಕ ಸಂಸ್ಥೆಗಳ ತರಲೆಗೆ ಹೋಗದಂತೆ ಅವುಗಳನ್ನು ತಡೆಯಬೇಕು.

ಕೃಷಿ :

ಪ್ರಉತ ಕೃಷಿಯನ್ನು ಒಂದು ಉದ್ದಿಮೆಯೆಂದೇ ಬಗೆಯುತ್ತದೆ ಮತ್ತು ಅದಕ್ಕೆ ತುಂಬಾ ಮಹತ್ವದ ಪಾತ್ರವನ್ನು ವಹಿಸಿಕೊಡುತ್ತದೆ. ಸಾಮಾನ್ಯವಾಗಿ ಕೃಷಿಯನ್ನು ಈ ಮುಂಚಿನ ದೊಡ್ಡ ಪ್ರಮಾಣದ ಸಹಕಾರಿ ಸಂಸ್ಥೆಗಳಲ್ಲಿ ಮತ್ತು ಚಿಕ್ಕ ಪ್ರಮಾಣದ ರಂಗಗಳ ವಿಶ್ಲೇಷಣೆಯಲ್ಲಿ ಸೇರಿಸಬೇಕಿತ್ತು. ಆದರೆ ಅದಕ್ಕೆ ಅದರದೇ ಆದ ವಿಶೇಷ ಲಕ್ಷಣಗಳಿವೆ. ಹಾಗಾಗಿ ಅದು ಪ್ರತ್ಯೇಕ ನಿರೂಪಣೆಗೆ ಯೋಗ್ಯವಾಗಿದೆ.

ಬಹುತೇಕ ಅಭಿವೃದ್ಧ ರಾಷ್ಟ್ರಗಳಲ್ಲಿ ಕೃಷಿಯು ಅತಿಯಾಗಿ ಯಾಂತ್ರೀಕೃತವಾಗಿದೆ. ಮತ್ತು ಜನಸಂಖ್ಯೆಯ ಶೇ. 10 ರಿಂದ ಶೇ. 30 ರ ವರೆಗೆ ಜನರು ಕೃಷಿಕರಾಗಿದ್ದಾರೆ. ಭಾರತ ಹಾಗೂ ತೃತೀಯ ಜಗತ್ತಿನಲ್ಲಿ ಈ ಅಂಕಿಯು ಶೇ. 80 ರಷ್ಟಿದೆ. ಈ ದೇಶಗಳ ಅರ್ಥ ವ್ಯವಸ್ಥೆಯು ಎಷ್ಟು ದೂರ ಸಾಗಬೇಕಾಗಿದೆಯೆಂಬುದಕ್ಕೆ ಈ ದೊಡ್ಡ ಅಂಕಿಯೇ ಗುರುತಾಗಿದೆ. ಆದ್ದರಿಂದ ಭಾರತದ ಕೃಷಿಯಲ್ಲಿ ಶ್ರಮದ ಉತ್ಪಾದಕತೆಯ ಪ್ರಮಾಣವು ಪ್ರಪಂಚದಲ್ಲಿಯೇ ತೀರ ಕನಿಷ್ಠವಾಗಿದೆ. ಆದರೂ ಸಹ ಅನುಕೂಲ ವಾತಾವರಣ ಹಾಗೂ ವಿಪುಲ ಜನ ಪೂರೈಕೆಗಳಿಂದ ಭಾರತದ ಕೃಷಿಯ ಸಾಮರ್ಥ್ಯವು ಅಮೇರಿಕೆಯ ಸಂಯುಕ್ತ ಸಂಸ್ಥಾನವನ್ನು ಹೊರತು ಪಡಿಸಿದರೆ ಬೇರಾವ ರಾಷ್ಟ್ರಕ್ಕಿಂತ ಹೆಚ್ಚಾಗಿದೆ. ಇನ್ನೂ ಅನೇಕ ಅನಭಿವೃದ್ಧ ರಾಷ್ಟ್ರಗಳಲ್ಲಿ ಕೂಡ ಕೃಷಿಯು ಹಿಂದುಳಿದಿದೆ. ಇನ್ನು ಮಾಡಬೇಕಾದುದೂ ಸಹ ಸಾಕಷ್ಟಿದೆ. ಆದ್ದರಿಂದ ಪ್ರಉತ ತನ್ನ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಗೆ ಪ್ರಮುಖ ಪಾತ್ರ ನೀಡಿದೆ.

ಕೃಷಿಯಾಧಾರಿತ ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ, ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಹೋಗಬೇಕಾಗಿಲ್ಲ. ಈ ರೀತಿಯ ಗುಳೇ ಹೋಗುವಿಕೆಯು ಈ ಹಿಂದೆ

ಅಪೂರ್ವವಾದ, ಆದರೂ ಪರಿಹಾರ ಸಾಧ್ಯ, ಸಮಸ್ಯೆಗಳನ್ನು ಹುಟ್ಟಿಸಿದೆ. ಕೃಷಿಯಾಧಾರಿತ ಚಿಕ್ಕ ಪ್ರಮಾಣದ ಉದ್ದಿಮೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಿದ್ದರೆ, ನಗರಗಳ ಜನಸಾಂದ್ರತೆ, ಮತ್ತು ಮಾಲಿನ್ಯ, ಮುಗಿಲು ಮುಟ್ಟುವ ಮನೆಗಳ ಬೆಲೆ, ಸಾಗಾಟದ ಕುದುಕೊರತೆ ಇತ್ಯಾದಿಗಳನ್ನು ಅನೇಕ ಅನಭಿವೃದ್ಧ ದೇಶಗಳಲ್ಲಿ ತಪ್ಪಿಸಬಹುದಿತ್ತು. ಇಂಥ ಉದ್ದಿಮೆಗಳನ್ನು ಪೈರುಗಳು ಲಭ್ಯವಿರುವ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸ್ಥಾಪಿಸಬೇಕು. ಉದಾಹರಣೆ ಎಂದರೆ ಕಬ್ಬು ಬೆಳೆಯುವ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು, ಅರಣ್ಯ ಪ್ರದೇಶದಲ್ಲಿ ಕಾಗದ ಕಾರ್ಖಾನೆಯನ್ನು ಸ್ಥಾಪಿಸಬೇಕು.

ಪೈರಿನ ದಕ್ಷ ಉತ್ಪಾದನೆಗೋಸ್ಕರ, ಭೂ ಹಿಡುವಳಿಯ ಮೇಲೆ, ಕನಿಷ್ಠ ಹಾಗೂ ಗರಿಷ್ಠ ಮಟ್ಟದ ಮಿತಿ ವಿಧಿಸಬೇಕು. ಹೀಗೆ ವಿಧಿಸುವಾಗ ಭೂಮಿಯ ಫಲವತ್ತತೆಯನ್ನು ನಿರ್ಧರಿಸಿಸುವ ನೀರಾವರಿಗಾಗಿ ನೀರಿನ ಲಭ್ಯತೆ ಮತ್ತಿತರ ಅನುಕೂಲಗಳನ್ನು ಪರಿಗಣಿಸಬೇಕು. ಈ ಪುಸ್ತಕದಲ್ಲಿ ಮೊದಲು ಸಂಪತ್ತಿನ ಮಿತಿ ಕುರಿತು ಪ್ರಸ್ತಾಪಿಸುವಾಗ ನಾನು ಸೂಚಿಸಿದ ಸಾಮಾನ್ಯ ಸೂತ್ರವನ್ನು ಅನ್ವಯಿಸಿ ಇಂಥ ಮಿತಿಗಳನ್ನು ಲೆಕ್ಕ ಹಾಕಬಹುದು. ಸಾಮನ್ಯವಾಗಿ ವೈಯಕ್ತಿಕ ಅದಾಯದಂತೆ ಗರಿಷ್ಠ ಕೃಷಿ ಅದಾಯವು ಗರಿಷ್ಠ ವೇತನವನ್ನೂ ಮೀರಕೂಡದು. ಹಾಗೆಂದರೆ ಭಾರತದಲ್ಲಿ ತಮ್ಮ ಸ್ವಂತ ಹೊಲದಲ್ಲಿ ಮೈಮುರಿದು ದುಡಿಯುವವರಿಗೆ ಇಂದಿನ ಬೆಲೆ ಸೂಚ್ಯಂಕದಂತೆ ಪ್ರತಿ ತಿಂಗಳು 10,000 ವರೆಗೆ ಆದಾಯ ತರುವಷ್ಟು ಭೂಮಿ ಹೊಂದಲು ಅವಕಾಶವಿರಬೇಕು. ಇನ್ನು ಹೊಲದಲ್ಲಿ ಕೆಲಸ ಮಾಡದವರು ಮತ್ತು ಹೊಲವನ್ನು ಬೇಸಾಯ ಮಾಡುವ ಶ್ರಮಜೀವಿಗಳಿಗೆ ಲಾವಣಿ ಕೊಡುವವರು ಕನಿಷ್ಠ ವೇತನಕ್ಕಿಂತ ಹೆಚ್ಚು ಆದಾಯ ತರುವ ಭೂಮಿಯನ್ನು ಹೊಂದಕೂಡದು. ಬೇರೆ ಶಬ್ದಗಳಲ್ಲಿ ಹೇಳುವದಾದರೆ ಭಾರತದಲ್ಲಿ ಕೃಷಿ ನಿರತನಲ್ಲದ ಭೂ ಒಡೆಯನು ರೂ 1,000 ಮಾಸಿಕ ಆದಾಯ ತರುವಷ್ಟು ಭೂಮಿಯನ್ನು ಮಾತ್ರ ಹೊಂದಬೇಕು. ಹೀಗೆ ನನ್ನ ಸೂತ್ರದಿಂದ ಕನಿಷ್ಠ ಹಾಗೂ ಗರಿಷ್ಠ ಭೂ ಹಿಡುವಳಿಯ ಮಿತಿಯನ್ನು ನಿರ್ಧರಿಸಬಹುದಾಗಿದೆ.

ಸಮಾಜವು ಒಪ್ಪಬಹುದಾದ ಗರಿಷ್ಠ ಪ್ರಮಾಣದ ಭೂ ಹಿಡುವಳಿದಾರನು ತನ್ನ ಭೂಮಿಯಲ್ಲಿ ಖಾಸಗಿ ಕೃಷಿ ಮಾಡಬಹುದು. ಇಲ್ಲವೆ ಸಹಕಾರಿ ತತ್ತ್ವದ ಕೃಷಿ ಮಾಡಬಹುದು. ಆದರೆ ಚಿಕ್ಕ ಭೂ ಹಿಡುವಳಿದಾರನು ಮಾತ್ರ ಕೃಷಿ ಸಹಕಾರಿ ಸಂಸ್ಥೆಗಳನ್ನು ಕಟ್ಟಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಏಕೆಂದರೆ ಅದರಿಂದ ಯಾಂತ್ರೀಕರಣ ಹಾಗೂ ದೊಡ್ಡ ಪ್ರಮಾಣದ ಬೇಸಾಯವನ್ನು ಆರಂಭಿಸಬಹುದು. ಆಗ ಕೃಷಿಕರು ತಮ್ಮ ಪರಿಶ್ರಮಕ್ಕಾಗಿ ತಕ್ಕ ವೇತನ ಪಡೆಯುವವರ ಜೊತೆಗೆ ಲಾಭದಲ್ಲಿ ಪಾಲನ್ನು ಪಡೆಯಬಹುದು.

ಖಾಸಗಿ ಮತ್ತು ಸಹಕಾರಿ ಬೇಸಾಯಗಳಲ್ಲದೆ ಉತ್ಪಾದಕರ ಸಹಕಾರಿ ಸಂಘಗಳೂ ಇರಬೇಕು. ಪೈರಿನ ಮಾರಾಟ, ಸುಧಾರಿಸಿದ ಬೀಜಗಳ ರಾಸಾಯನಿಕ ಗೊಬ್ಬರಗಳ ಹಾಗೂ ಬೇಸಾಯ ಯಂತ್ರೋಪಕರಣಗಳ ಪೂರೈಕೆ ಮತ್ತು ಕೃಷಿ ಉತ್ಪಾದನೆಗ ಪ್ರಾಣಾಪಾಯವಾದ ನೀರಾವರಿ ಮತ್ತಿತರ ಸೇವೆಗಳನ್ನು ಒದಗಿಸುವ ಹೊಣೆ ಅವುಗಳದ್ದಾಗಿರಬೇಕು. ಅಗತ್ಯವಿರುವಾಗ

ಅವು ಸಾಲವನ್ನು ನೀಡಬೇಕು. ಮತ್ತು ಪೈರು ವಿಮಾ ಪಾಲಸಿಗಳನ್ನು ಕೊಳ್ಳಬೇಕು. ಹೀಗೆ ಅವುಗಳ ಸದಸ್ಯರು, ನೈಸರ್ಗಿಕ ದುರಂತಗಳಿಂದ ಉದ್ಭವಿಸುವಂಥ ಪೈರಿನ ನಾಶದಿಂದ ಮುಗ್ಗರಿಸದಂತಾಗಬೇಕು.

ಭಾರತೀಯ ಕೃಷಿಯನ್ನು ಪುನಶ್ಚೇತನಗೊಳಿಸುವ ಬಗೆ ಬಗೆಯ ಪ್ರಯತ್ನಗಳಾಗಿವೆ. ಆದರೂ ಸಹ, ಅದು ಸುದೀರ್ಘ ಕಾಲ ಪರ್ಯಂತ ಗೀಳು ಸ್ಥಿತಿಯಲ್ಲಿದೆ. 'ಹಸಿರು–ಕ್ರಾಂತಿ' ಯು ರಾಷ್ಟ್ರದ ಆಹಾರ ಸಮಸ್ಯೆಗೆ ಪರಿಹಾರವೆಂದು ಹಾಡಿ ಹರಸಲಾಯಿತು. ಆದರೆ ಹೊಲದಲ್ಲಿ ನಾಲ್ಕು ಮಳೆ ಹನಿ ಬೀಳು – ಬೀಳುತ್ತಲೇ ಭಾಷ್ಪೀಭವಿಸುವಂತೆ ಈ ಆಸೆಯೂ ಹಾರಿ ಹೋಯಿತು. ಇಪ್ಪತ್ತು ವರುಷಗಳ ವರೆಗೆ ಬೇಸಾಯದ ಕಬ್ಬಾವಸ್ತು ಪೂರೈಕೆಯ ನಂತರ ಸಹ, ಭಾರತವು ತನ್ನ ಪ್ರಪ್ರಥಮ ಸಮಸ್ಯೆಯಾದ ಕೋಟ್ಯಂತರ ಜನಕೋಟಿಗೆ ಉಣ ಬಡಿಸುವುದನ್ನು ಪರಿಹರಿಸಿಲ್ಲ.

ಭಾರತದ ಜನಸಂಖ್ಯೆ ಇತ್ತೀಚೆನ ವರ್ಷಗಳಲ್ಲಿ ಭಯಂಕರವಾಗಿ ಬೆಳೆದಿದೆ. ಶತಮಾನ ಉರುಳುವುದರೊಳಗೆ ಅದು 200 ಕೋಟಿ ಆಗಬಹುದೆಂಬ ಅಂದಾಜಿದೆ. ಅದರೊಂದಿಗೆ ಅದರ ಆಹಾರ ಸಮಸ್ಯೆಯೂ ಹೆಚ್ಚು ಹೆಚ್ಚಾಗಿ ತೀವ್ರವಾಗುತ್ತದೆ. ಪ್ರಾಧ್ಯಾಪಕ ವಿ.ಕೆ.ಆರ್.ವಿ. ರಾವ್ ಅವರ ಮೇರೆಗೆ, ಬರುವ ವರ್ಷಗಳಲ್ಲಿ ಭಾರತವು ತನ್ನ ಮೂಲಭೂತ ಆಹಾರ ಬೇಡಿಕೆಯನ್ನು ಪೂರೈಸಬೇಕಾದರೆ ಕೃಷಿಯ ಕನಿಷ್ಠ ಬೆಳವಣಿಗೆಯು ಶೇ. 4 ರಷ್ಟು ಇರಬೇಕು. ಆದರೆ 1950 ರ ಮತ್ತು 1985 ರ ಮಧ್ಯಾವಧಿಯಲ್ಲಿ ಕೃಷಿ ಬೆಳವಣಿಗೆಯ ದರವು ಕೇವಲ ಶೇ. 2.5 ರಷ್ಟು ಇದೆ. ಅಂದ ಮೇಲೆ, ಅತಿ ಶೀಘ್ರ ಬೆಳೆಯುತ್ತಿರುವ ಜನಸಂಖ್ಯೆ ಹಾಗೂ ಏರುತ್ತಿರುವ ಆಹಾರ – ಬೇಡಿಕೆಗಳೊಂದಿಗೆ ಹೆಜ್ಜೆ ಹಾಕಲು ಅತ್ಯಲ್ಪ ಅವಧಿಯಲ್ಲಿ ಭಾರತವು ತನ್ನ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ? ಇದು ಇಂದಿನ ಜ್ವಲಂತ ಪ್ರಶ್ನೆ.

ಕಳೆದ ಇಪ್ಪತ್ತು ವರ್ಷಗಳಿಂದ 'ಹಸಿರು ಕ್ರಾಂತಿ' ಯೇ ಉತ್ತರವೆನಿಸಿತ್ತು. ಹಸಿರು ಕ್ರಾಂತಿಯು ಕೃಷಿ ಅಭಿವೃದ್ಧಿಗೋಸುಗ ಸಂಯುಕ್ತ ಸಂಸ್ಥಾನ ಪ್ರೋತ್ಸಾಹಿತ ತಾಂತ್ರಿಕತೆಯ ಸಂಯೋಜನೆ. ಅದನ್ನು ಅಭಿವೃದ್ಧಿಯ ಯೋಜಕರು ಮತ್ತು ಕೃಷಿಕರು ಗ್ರಾಮಾಂತರ ಪ್ರದೇಶದ ಬಡತನ ಹಾಗೂ ಹಸಿವುಗಳ ನಿರಂತರ ಸಮಸ್ಯೆಗಳಿಗೆ ಕಾಯಂ ಪರಿಹಾರವೆಂದು ಉತ್ಸಾಹದಿಂದ ಒಪ್ಪಿದ್ದರು. ಆದರೆ, ಹಸಿರು ಕ್ರಾಂತಿಯು ಮುಂದೆ ತಂದ ಅಧಿಕ ಇಳುವರಿ ನೀಡುವ ಬೀಜಗಳು ಫಲಪ್ರದವಾಗಬೇಕಾದರೆ, ದೊಡ್ಡ ಪ್ರಮಾಣದಲ್ಲಿ ಕ್ರಿಮಿನಾಶಕ, ರಾಸಾಯನಿಕ ಗೊಬ್ಬರ, ನೀರಾವರಿಯ ನೀರು ಹಾಗೂ ಮುಂದುವರಿದ ಬೇಸಾಯ ತಾಂತ್ರಿಕತೆಗಳು ಅಗತ್ಯ. ಇವುಗಳಿಗಾಗಿ ಸಣ್ಣ ಕೃಷಿಕನ ತೆಕ್ಕೆಗೆ ಸಿಕ್ಕದ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಅಗತ್ಯ. ಹೀಗೆ ಬಡತನವನ್ನು ಕಿತ್ತುಹಾಕುವ ಬದಲು ಹಸಿರು ಕ್ರಾಂತಿಯು ವಾಸ್ತವವಾಗಿ ಅದನ್ನು ಹೆಚ್ಚಿಸಿತು. ಮತ್ತು ಗ್ರಾಮಾಂತರದ ಬಡವ ಬಲ್ಲಿದರ ನಡುವಿನ ಕಂದಕವನ್ನು ಜೋಡಿಸುವ ಬದಲು ಅದನ್ನೂ ಹೆಚ್ಚಿಸಿತು. ಇಂದು ಹಳ್ಳಿಗಾಡಿನಲ್ಲಿ ದೊಡ್ಡ ಮತ್ತು ಚಿಕ್ಕ ಕೃಷಿಕರ ಆದಾಯಗಳ ಪ್ರಮಾಣವು 20 ಕ್ಕೆ 1 ರಷ್ಟಿದೆ.

ಹಳ್ಳಿಗಾಡಿನ ಜನರ ಬಡತನ ಹೆಚ್ಚುತ್ತಿದೆ. ಸಾಲಗಾರರಾಗಿ ಚಿಕ್ಕ ರೈತರು ದೊಡ್ಡ ಜಮೀನುದಾರರಿಗೆ ತಮ್ಮ ಹೊಲ ಮಾರುತ್ತ ಭೂರಹಿತ ಶ್ರಮಜೀವಿಗಳ ಸಂಖ್ಯೆಯನ್ನು ಹಿಗ್ಗಿಸುತ್ತ ಹೊರಟಿರುವುದನ್ನು ಎಲ್ಲ ಅಧ್ಯಯನಗಳೂ ಆಂಕಿಸಂಖ್ಯೆಗಳು ಹೊರಗೆಡಹಿವೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅಪವಾದವಿಲ್ಲದಂತೆ ಎಲ್ಲ ಭಾರತೀಯ ರಾಜ್ಯಗಳು, ಬಡತನದ ರೇಖೆಯಡಿ ಇರುವ ಗ್ರಾಮಾಂತರ ಜನರ ಭಾರಿ ಪ್ರಮಾಣದ ಹೆಚ್ಚುವರಿಯನ್ನು ಅನುಭವಿಸಿದವು ಈ ಪ್ರಮಾಣವು ಶೇ. 50 ರಿಂದ ಶೇ. 85 ರ ಮಧ್ಯೆ ಎಲ್ಲಿಯೋ ಇದ್ದಿತು. ಹಸಿರು ಕ್ರಾಂತಿಯ ಪಾವನ ಕ್ಷೇತ್ರಗಳಾದ ಪಂಜಾಬ ಮತ್ತು ಹರಿಯಾಣಗಳಲ್ಲಿ ಬಡವರ ಪ್ರಮಾಣವು ನಾಲ್ಕು ಪಟ್ಟು ಹೆಚ್ಚಾಯಿತು.

ಹಸಿರು ಕ್ರಾಂತಿಯು ಗ್ರಾಮಾಂತರ ಬಡತನದ ಅಸಮಾನತೆಯನ್ನು ಒತ್ತಿ ಹೇಳುವುದಿಷ್ಟೇ ಅಲ್ಲ; ಆದರೆ, ಅದು ಕ್ರಮೇಣ ಮಣ್ಣು ಹಾಗೂ ನೀರುಗಳನ್ನು ಹಾಳು ಮಾಡುತ್ತಿದೆ. ಪಂಜಾಬ ಹರಿಯಾಣಾಗಳಲ್ಲಿ ಈಗಿನ ರೀತಿಯಲ್ಲಿಯೇ ಹೆಚ್ಚು ತೀವ್ರವಾದ ಕೃಷಿ ಪದ್ಧತಿ ಅನುಸರಿಸುತ್ತ ಹೋದರೆ, ಅಂತರ್ಜಲ ಮೂಲವು ಹೆಚ್ಚು ಹೆಚ್ಚು ಶೋಷಿತವಾಗಿ ಆ ರಾಜ್ಯಗಳು ಇಡಿಯಾಗಿ ಮರುಭೂಮಿಯಾಗಬಹುದೆಂದು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಪ್ರಧಾನ ನಿರ್ದೇಶಕರು ಎಚ್ಚರಿಕೆ ನೀಡಿದ್ದಾರೆ. ರಾಸಾಯನಿಕ ಗೊಬ್ಬರವನ್ನು ಬೃಹತ್ ಪ್ರಮಾಣದಲ್ಲಿ ಬಳಸುವುದರಿಂದ ಬೆಳೆಗಳು ದುರ್ಬಲವಾಗುತ್ತಿದ್ದು ರಹಸ್ಯಮಯ ಸಸ್ಯವ್ಯಾಧಿಗಳು ಹರಡುತ್ತವೆ. ಇತ್ತ ವಿವೇಚನಾರಹಿತ ರಾಸಾಯನಿಕ ಕ್ರಿಮಿನಾಶಕಗಳ ಬಳಕೆಯು ಅಂಕೆ ಮೀರಿದ ಹೊಸ ಹೊಸ ಕ್ರಿಮಿಗಳ ಜನನಕ್ಕೆ ಕಾರಣವಾಗಿದೆ. ಆಂಧ್ರಪ್ರದೇಶದಲ್ಲಿ ಹೀಗಾಯಿತು ಮತ್ತು ಹತ್ತಿಯ ಬೆಳೆಯನ್ನು ಇಡಿಯಾಗಿ ನಾಶಪಡಿಸಲಾಯಿತು.

ಇಲ್ಲ; ಇಲ್ಲ; ಹಸಿರು ಕ್ರಾಂತಿಯು ಉತ್ತರವಾಗುವುದಂತೂ ಸಾಧ್ಯವಿಲ್ಲ. ಆರಂಭಿಕ ಉತ್ಸಾಹವು ಕಹಿಯಾದ ಭ್ರಮನಿರಸನದಲ್ಲಿ ರೂಪಾಂತರವಾಗಿದೆ. ಹೊಸ ಉಪಾಯ ಬೇಕು. ಅಂದರೆ, ವೆಚ್ಚದ ಹಾಗೂ ಪರಿಸರಕ್ಕೆ ಅನುಗುಣವಲ್ಲದ ಕಚ್ಚಾ ವಸ್ತುಗಳನ್ನು ಆವಲಂಬಿಸದ ಆದರೆ ಭಾರತದ ನೈಸರ್ಗಿಕ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವಂಥ ಮಾರ್ಗೋಪಾಯ ಬೇಕು.

ಭಾರತದ ಸಕಲ ಜನರಿಗೆ 2000 ಇಸ್ವಿಯೊಳಗೆ ಸಮೃದ್ಧಿಯನ್ನು ಭರವಸೆ ನೀಡಲು ಈ ಸಾಧನೋಪಾಯವು ಪ್ರಯುತದ ಒಟ್ಟಾರೆ ಕಾರ್ಯಕ್ರಮದ ಭಾಗವೇ ಆಗಿದೆ. ಕೃಷಿ ಭೂಮಿಯು ಸರಿಯಾದ ಬಳಕೆಯೇ ಇದರ ಬೀಗದ ಕೈ 1983 ರಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು ನಡೆಸಿದ ಅಧ್ಯಯನದ ಮೇರೆಗೆ ಒಂದು ವೇಳೆ, ಭಾರತೀಯ ಬೇಸಾಯವನ್ನು ಸರಿಯಾಗಿ ನಿರ್ವಹಿಸಿದರೆ, 2000 ನೇ ವರ್ಷದ ಹೊತ್ತಿಗೆ ಭಾರತದ ಪ್ರಕ್ಷೇಪಿತ ಜನಸಂಖ್ಯೆಯ ಎರಡರಷ್ಟು ಅಂದರೆ 200 ಕೋಟಿ ಜನರಿಗೆ ಆಹಾರ ಉಣಬಡಿಸಬಹುದಾಗಿದೆ. ಈಗಿನ್ನೂ ಭಾರತದಲ್ಲಿ ಭೂಮಿಯ ಬಳಕೆಯು ಶೋಚನೀಯ ಪ್ರಮಾಣದಲ್ಲಿದೆ ಮತ್ತು ಇತರ ರಾಷ್ಟ್ರಗಳಿಗೆ ಹೋಲಿಸಿದಾಗ, ಅದರ ಶ್ರಮ ಉತ್ಪಾದಕತೆಯು ತೀರ ಕಡಿಮೆಯಿದೆ. ಭೂಮಿ ಸಾಗುವಳಿಯ ಅದಕ್ಷ ರೀತಿಯೇ ಇದಕ್ಕೆ ಕಾರಣ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡವು ಭೂ ಹಿಡುವಳಿಗಳ ಸರಾಸರಿ ಮಿತಿಯನ್ನು ಎರಡು ಹೆಕ್ಟೇರಿಗಿಂತ ಕಡಿಮೆಯಾಗಿಸಿದೆ. ಇನ್ನು, ಈ ಮಿತಿಯು ದೇಶದ ಹಲವು ಭಾಗಗಳಲ್ಲಿ ಸಾಧಾರಣವಾಗಿ ನೇಗಿಲು ಹೂಡಲು ಸಹ ಬಾರದಷ್ಟು ಚಿಕ್ಕದಾಗಿದೆ. ಇದಲ್ಲದೆ, ಲಾವಣಿದಾರರ ಅಭದ್ರತೆ ಮತ್ತು ಬಡ ರೈತರಿಗೆ ಹಾಗೂ ಭೂ ರಹಿತ ಕೂಲಿಕಾರರಿಗೆ ತಕ್ಕ ಪ್ರೇರಕಗಳಿಲ್ಲದ ಕಾರಣ ಉತ್ಪಾದಕತೆಯು ಪಾತಾಳದಷ್ಟು ಕೆಳಗಿಳಿದಿದೆ.

ಉತ್ಪಾದಕರ ಹಾಗೂ ಗ್ರಾಹಕರ ಸಹಕಾರಿ ಸಂಸ್ಥೆಗಳ ಸಮಗ್ರ ವ್ಯವಸ್ಥೆಯನ್ನು ರೂಪಿಸಿ ಸಮಸ್ಯೆಯನ್ನು ಪರಿಹರಿಸಬಹುದು. ಇದರಿಂದ ಭೂಮಿಯ ಹಾಗೂ ಜನರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಬಹುದಾಗಿದೆ. ಸುಧಾರಿತ ಉಪಕರಣಗಳು, ಬೀಜಗಳು ಮತ್ತು ನೀರಾವರಿ ಸೌಕರ್ಯಗಳಿಗಾಗಿ ಸಾಮೂಹಿಕ ಹಣ ಹೂಡಿಕೆಯೊಂದಿಗೆ, ಹರಿದು ಹಂಚಿ ಹೋದ ಆರ್ಥಿಕವಾಗಿ ಲಾಭದಾಯಕವಲ್ಲದ ಹಿಡುವಳಿಗಳನ್ನು ಸಹಕಾರಿ ನಿರ್ವಹಣೆಯಡಿ ಸಂಯೋಜಿಸಬಹುದು. ಆದರೆ, ಉತ್ಪಾದಕ ಸಹಕಾರಿ ಸಂಸ್ಥೆಗಳನ್ನು ಚೋರು–ಜುಲುಮೆಯಿಂದ ಹೇರದೆ, ಶ್ರಮಜೀವಿಗಳ ಪರಿಶ್ರಮ ಹಾಗೂ ಸಾಮೂಹಿಕ ಚಾತುರ್ಯ ಮೂಲಕ ಅವು ಕ್ರಮೇಣ ಅಭಿವೃದ್ಧಿಯಾಗಲು ಬಿಡಬೇಕು. ಪ್ರಥಮ ಹಂತದಲ್ಲಿ ಒಡೆಯರ ಹಿತದ ದೃಷ್ಟಿಯಿಂದ ಲಾಭದಾಯಕವಲ್ಲದ ಭೂ ಹಿಡುವಳಿಗಳನ್ನು ಸಹಕಾರಿ ನಿರ್ವಹಣೆಗೆ ಒಳಪಡಿಸಬಹುದು. ಕಾಲಾನುಕ್ರಮೇಣ, ಪಾಲ್ಗೊಂಡ ಸಂಸ್ಥೆಗಳ ಹೆಚ್ಚಿದ ಲಾಭ ಮತ್ತು ಉತ್ಪಾದಕತೆಗಳು ಸರ್ವರಿಗೂ ಸುಸ್ಪಷ್ಟವಾದಾಗ, ಸರಿಯಾದ ಶಿಕ್ಷಣ ಮೂಲಕ ಜನರು ತಮ್ಮ ಸ್ವಂತ ಹಿತಕ್ಕಿಂತ ಸಾಮೂಹಿಕ ಕಲ್ಯಾಣ ಕುರಿತು ಚಿಂತನ ಗಯ್ಯಾಲು ಕಲಿತಾಗ, ಸಹಕಾರಿ ವ್ಯವಸ್ಥೆಯನ್ನು ಸೇರಲು ಎಲ್ಲ ರೈತರನ್ನೂ ಬಿನ್ನವಿಸಿಕೊಳ್ಳಲಾಗುವುದು. ಮಧ್ಯವರ್ತಿಗಳನ್ನು ಕಿತ್ತು ಹಾಕುವ ಗ್ರಾಹಕರ ಸಹಕಾರಿ ಸಂಸ್ಥೆಗಳು ಸರಕುಗಳ ದಲ್ಲಾಳಿಗಳ ಊಹಾತ್ಮಕ ವ್ಯವಹಾರದ ಕೇಡನ್ನು ತೊಡೆಯುವುದಲ್ಲದೆ ಹೈರಾಣಾದ ರೈತರು ತಮ್ಮ ಹುಟ್ಟುವಳಿಯನ್ನು ಅಡಚಣೆಯ ಒತ್ತಡದಿಂದ ಕೆಳಮಟ್ಟದ ಬೆಲೆಗೆ ಮಾರುವುದನ್ನು ನಿಲ್ಲಿಸುತ್ತವೆ.

ನೀರಾವರಿ ಸಂಭಾವ್ಯತೆಯುಳ್ಳ ರಾಷ್ಟ್ರಗಳಲ್ಲಿ ಭಾರತವು ಪ್ರಥಮ ಶ್ರೇಣಿಯಲ್ಲಿದೆ. ಈಗ ಬೇಕಾಗಿರುವುದೆಂದರೆ ಈ ಸಂಭಾವ್ಯತೆಯ ಸಂಪೂರ್ಣ ವಿನಿಯೋಗ ಮಾತ್ರ. ಚಿಕ್ಕ ರೈತರಿಗೆ ಕ್ವಚಿತ್ತಾಗಿ ಅನುಕೂಲಕರವಾದ ಉಚ್ಚ – ತಂತ್ರಜ್ಞಾನದ ಪ್ರಕಲ್ಪಗಳು ಬೇಕಾಗಿಲ್ಲ. ಆದರೆ, ಅವರಿಗೆ ಬೇಕಾಗಿರುವದೆಂದರೆ, ರೈತರ ಸಹಕಾರಿ ಸಂಸ್ಥೆಗಳು ಪೂರ್ಣವಾಗಿ ಪಾಲ್ಗೊಳ್ಳುವಂಥ, ಚಿಕ್ಕ ಪ್ರಮಾಣದ ನೀರಾವರಿ ಕಾಮಗಿರಿಗಳು. ದೇಶದ ತುಂಬ ಉತ್ತಮ ನೀರು ನಿರ್ವಹಣೆ ತಂತ್ರಗಳನ್ನು ಅಳವಡಿಸಬೇಕು. ಏಕೆಂದರೆ, ಸಧ್ಯಕ್ಕೆ ಭಾರತದ ನೀರಾವರಿ ಭೂಮಿಯ ಶೇ. 76 ರಷ್ಟು ಪ್ರದೇಶವು ಜವುಳ ಹಾಗೂ ಸವುಳಿನಿಂದಾಗಿ ಅರ್ಧಂಬರ್ಧ ಮಾತ್ರ ಉಪಯೋಗವಾಗಿದೆ. ರೈತನು ಜನುಗು ನೀರಾವರಿಯ ಹಾಗೂ ಚಿಕ್ಕ ಹೊಂಡಗಳ ಗರಿಷ್ಠ ಉಪಯೋಗ ಮಾಡಬೇಕು. ಭಾರತೀಯ ಸಾಂಪ್ರದಾಯಕ ಪದ್ಧತಿಯ ಕೆರೆ – ಕೆಲುವೆಗಳನ್ನು ತೋಡಿ ನೀರು ಮತ್ತು ಮಣ್ಣಿನ ಸಂರಕ್ಷಣೆಗಳನ್ನು ಅಳವಡಿಸಬೇಕೇ ಹೊರತು ಜಲಪಾತಳಿಯನ್ನು ಕೆಳಗಿಳಿಸುವ ಹಾಗೂ ಬರಗಾಲಕ್ಕೆ ಔತಣವೀಯುವ ಹೆಚ್ಚು ಹೆಚ್ಚು ಕೊಳವೆ ಬಾವಿ ತೋಡುವಿಕೆಯನ್ನು ತಪ್ಪಿಸಬೇಕು.

ರಾಸಾಯನಿಕ ಕ್ರಿಮಿನಾಶಕಗಳ ವಿವೇಚನಾರಹಿತ ಬಳಕೆಗೆ ಬದಲಾಗಿ ರೈತನು ಸಮಗ್ರ ಕ್ರಿಮಿನಾಶಕ ನಿಯಂತ್ರಣವನ್ನು ಸಾಧಿಸಬೇಕು. ಕೇವಲ ಒಣ ಹೆಮ್ಮೆಯಿಂದ, ವಿಷದಲ್ಲಿ ತೋಯಿಸಿ ಕ್ರಿಮಿನಾಶಕಗಳನ್ನು ತೊಡೆದು ಹಾಕಬೇಕಿಲ್ಲ. ಆದರೆ ಅವುಗಳ ಸಂಖ್ಯೆಯನ್ನು ಮಿಶ್ರ ಬೆಳೆ ಮತ್ತು ಅವುಗಳನ್ನು ಕಬಳಿಸುವ ಜೀವಿಗಳನ್ನು ವಿನಿಯೋಗಿಸುವ ಮೂಲಕ ಸಹ್ಯ ಮಿತಿಯಲ್ಲಿ ಇರಿಸಬೇಕು.

ಭಾರತೀಯ ಕೃಷಿ ಸಮಸ್ಯೆಗಳಿಗೆ ಬೇಕಾದ ವೈಜ್ಞಾನಿಕ ಹಾಗೂ ತಂತ್ರಜ್ಞಾನಾತ್ಮಕ ಪರಿಹಾರಗಳ ಕೊರತೆಯೇನೂ ಇಲ್ಲ. ಇಳುವರಿ ಹೆಚ್ಚಿಸಲು ಮಿಶ್ರ ಬೆಳೆ ಮತ್ತು ಅಂತರ್ಬೆಳೆಗಳ ಪ್ರಯೋಗ, ಮಣ್ಣನ್ನು ಇನ್ನಷ್ಟು ಬಡವಾಗಿಸುವ ದುಬಾರಿ ರಾಸಾಯನಿಕ ಗೊಬ್ಬರಗಳ ಬದಲಾಗಿ ಸೇಂದ್ರಿಯ ಗೊಬ್ಬರದ ಬಳಕೆ ಮತ್ತು ರೋಗ ನಿರೋಧಕ ಹಾಗೂ ಬರಗಾಲ ನಿರೋಧಕ ಬೆಳೆಗಳನ್ನು ತಳಿ ರಚನೆಯ ಮೂಲಕ ಅಭಿವೃದ್ಧಿ ಪಡಿಸುವದು. ನಿಜವಾದ ಆಹ್ವಾನವೆಂದರೆ ಸ್ಪಂದನಾತ್ಮಕ ಸಾಮಾಜಿಕ – ಆರ್ಥಿಕ ಪರಿಸರವನ್ನು ಉಂಟು ಮಾಡುವುದಾಗಿದೆ. ತಮ್ಮ ಸಂಪನ್ಮೂಲಗಳನ್ನು ಒಗ್ಗೂಡಿಸಲು ಇದು ರೈತರಿಗೆ ಇಂಬುಗೊಡುತ್ತದೆ. ಹಾಗಾಗಿ ಎಲ್ಲರೂ ತಮ್ಮ ಇಳುವರಿಗಳನ್ನು ಸುಧಾರಿಸುವ ಪದ್ಧತಿಗಳನ್ನು ಅಳವಡಿಸಬಲ್ಲರು. ಇದರಿಂದ ಮಣ್ಣು, ನೀರು ಮತ್ತು ಸಸ್ಯಗಳ ಸಂಪನ್ಮೂಲಗಳ ಸಾಮರ್ಥ್ಯವಷ್ಟೇ ಅಲ್ಲ; ಇಂದು ಬಡತನ ಹಾಗೂ ನಿರಾಶೆಗಳಲ್ಲಿ ಕೊಳೆಯುತ್ತಿರುವ ಲಕ್ಷಾಂತರ ರೈತರ ಮಾನವೀಯ ಸಂಭಾವ್ಯತೆಯನ್ನು ಸಹ ಹೊರಹೊಮ್ಮಿಸುವ ಆರ್ಥಿಕ ವಾತಾವರಣ ಉಂಟಾಗುತ್ತದೆ. ತನ್ನ ಒಣ ಮರುಭೂಮಿಯನ್ನು ಇಸ್ರೇಲ್ ದೇಶವು ಸಹಕಾರಿ ವ್ಯವಸ್ಥೆಯ ಮೂಲಕ, ಅರಳುವ ಉಪವನಗಳನ್ನಾಗಿ ರೂಪಾಂತರಿಸಬಲ್ಲುದಾದರೆ, ಭಾರತವೇಕೆ ಹಾಗೆ ಮಾಡಲಾಗದು?

ಇಂದು ಭಾರತವು ಹಸಿವೆಯ ದವಡೆಯಲ್ಲಿ ನರಳುತ್ತಿರುವುದೇಕೆ ? ಅದರ ಜನಸಂಖ್ಯೆ ಇದಕ್ಕೆ ಕಾರಣವಲ್ಲ. ಪ್ರತಿಯಾಗಿ, ದೇಶದ ನೈಸರ್ಗಿಕ ಮತ್ತು ಮಾನವೀಯ ಸಂಪನ್ಮೂಲಗಳ ತಪ್ಪು ನಿರ್ವಹಣೆಯೇ ಕಾರಣವಾಗಿದೆ. ಇತ್ತೀಚೆನ ಬರಗಾಲವು ಎರಡು ದಶಕಗಳ ಕೃಷಿಯ ಮಾರ್ಗೋಪಾಯಗಳ ಮಿತಿಗಳನ್ನು ಬಯಲು ಮಾಡಿದೆ. ಪ್ರಉತ ಸೂಚಿಸಿದ ದಾರಿಯಲ್ಲಿ ಕೃಷಿಯ ಮರು ಸಂರಚನೆ ನಡೆದರೆ, ಅದರಿಂದ ಉತ್ಪಾದಕತೆಯಲ್ಲಿ ಕ್ರಾಂತಿಕಾರಕ ಹೆಚ್ಚಳವಾಗುವುದು.

ಆರೋಗ್ಯ ಮತ್ತು ಶಿಕ್ಷಣ :

ಶಿಕ್ಷಣ ಮತ್ತು ಆರೋಗ್ಯಗಳು ಪ್ರಉತ ಗೋಪುರದ ಅಂತಿಮ ಚರಣದ್ವಯಗಳಾಗಿವೆ. ಭದ್ರವಾದ ಅರ್ಥವ್ಯವಸ್ಥೆಯು ಶಿಕ್ಷಣ ಮತ್ತು ಆರೋಗ್ಯಗಳ ಭದ್ರ ವ್ಯವಸ್ಥೆಯ ಆಸ್ತಿವಾರದ ಮೇಲೆ ನಿಂತಿದೆ. ಆದರಿಂದಾಗಿಯೇ ಪ್ರಉತೀಯ ರಚನೆಯಲ್ಲಿ ಶಿಕ್ಷಣ ಮತ್ತು ಚಿಕಿತ್ಸೆಗಳನ್ನು ಪ್ರತಿಯೋರ್ವನಿಗೂ ಉಚಿತವಾಗಿ ಒದಗಿಸಲಾಗುವುದು. ಶಿಕ್ಷಣ ಮತ್ತು ಚಿಕಿತ್ಸೆಗಳು ಖಾಸಗಿಯಾಗಿಯೂ ಮುಂದುವರಿಯಲು ಮುಕ್ತವಾಗಿವೆ. ಆದರೆ ಅವು ತಮ್ಮ ಸರಕಾರಿ ರಂಗದ ಸಂಸ್ಥೆಯೊಂದಿಗೆ ಪ್ರತಿಸ್ಪರ್ಧಿಸಬೇಕಾಗುತ್ತದೆ.

ಎಲ್ಲ ಮಟ್ಟಗಳಲ್ಲಿ ಸಾರ್ವಜನಿಕ ಶಿಕ್ಷಣವು ಯಾವುದೇ ರಾಜಕೀಯ ಇಲ್ಲವೆ ಇತರರ ಚಂಚು ಪ್ರವೇಶವಿಲ್ಲದಂತೆ ಸ್ವತಂತ್ರ ಸಂಸ್ಥೆಗಳ ಆಡಳಿತಕ್ಕೊಳಪಟ್ಟಿರಬೇಕು. ಶಿಕ್ಷಣದ ಗುಣ ಮಟ್ಟವು ಶಿಕ್ಷಕರ ಗುಣಮಟ್ಟ, ಅವರ ಪಾಂಡಿತ್ಯ, ನಿಷ್ಠೆ, ಪ್ರಾಮಾಣಿಕತನ ಹಾಗೂ ಪರಿಪೂರ್ಣತೆಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದಲೇ ಸಮಾಜವು ಶಿಕ್ಷಕರನ್ನು ಗೌರವಿಸಬೇಕು. ಮತ್ತು ಅವರಿಗೆ ಸಾಮಾನ್ಯ ರೇಖೆಗಿಂತ ಮೇಲಿನ ಸಂಬಳ ನೀಡಬೇಕು. ತಮ್ಮ ಪಾಲಿಗೆ ಶಿಕ್ಷಕರೂ ಸಹ, ತಮ್ಮ ವಿದ್ಯಾರ್ಥಿಗಳಿಗೆ ಆದರ್ಶಪ್ರಾಯರಾಗಿ ಬಾಳಬೇಕು. ಅರ್ಥಾತ್ ಉಪದೇಶಿಸುವಂತೆ ಉಪಜೀವಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ನಡೆಸುವ ವಾರ್ಷಿಕ ಕ್ಯಾಂಪುಗಳಿಗೆ ವಿದ್ಯಾರ್ಥಿಗಳು ಹಾಜರಾಗುವಂತೆ ಅವರನ್ನು ಪ್ರೋತ್ಸಾಹಿಸಬೇಕು. ವಿದ್ಯಾರ್ಥಿಗಳು ಸ್ವಭಾವತಃ ಆದರ್ಶವಾದಿಗಳು ಮತ್ತು ಬಡತನದ ಬವಣೆಯಲ್ಲಿರುವ ಹಳ್ಳಿಗಾಡಿನ ಪ್ರದೇಶಕ್ಕೆ ನೀಡುವ ಅವರ ಭೇಟ್ಟಿಯು ಅವರ ಆದರ್ಶವಾದವನ್ನು ಉತ್ತೇಜಿಸುತ್ತಿದೆ. ನೆರವಿಗಾಗಿ ಹಪಾಪಿಸುವ ಹಳ್ಳಿಗಳಿಗೆ ಅವರು ಸೇವೆ ಸಲ್ಲಿಸಲು ಇಷ್ಟಪಡಬಹುದು. ಆದರಿಂದ ಹಳ್ಳಿಗರಿಗೂ ಒಳ್ಳೆದು, ವಿದ್ಯಾರ್ಥಿಗಳಿಗೂ ಸಾಕಷ್ಟು ಒಳ್ಳೆಯದೇ. ಗ್ರಾಮಾಂತರ ಕ್ಷೇತ್ರಗಳು ಒಂದೆಡೆ ಸಮೃದ್ಧವಾದರೆ ಇತ್ತ ವಿದ್ಯಾರ್ಥಿಗಳು ಸಹ, ವಿನಮ್ರರಾಗುತ್ತಾರೆ ಹಾಗೂ ವಿಶಾಲ ಮನಸ್ಕರಾಗುತ್ತಾರೆ.

ಎಲ್ಲ ಮಟ್ಟದ ಉಚಿತ ಶಿಕ್ಷಣವು ಪ್ರತಿಯೋರ್ವನಿಗೆ ಭೌತಿಕ ಮತ್ತು ಬೌದ್ಧಿಕ ಮುನ್ನಡೆಯ ಸಮಾನ ಅವಕಾಶ ನೀಡುತ್ತದೆ. ಈ ವಿಷಯದಲ್ಲಿ ತಾನು ಸಂಪದ್ಭರಿತನೆಂಬ ಕಾರಣದಿಂದ ಯಾವನೊಬ್ಬನು ಇನ್ನಿತರರಿಗಿಂತ ಮೇಲುಗೈ ಪಡೆಯಲಾರನು. ಅಷ್ಟೇ ಏಕೆ? ಸರ್ವರಿಗೂ ಲಭ್ಯವಿರುವ ಶಿಕ್ಷಣಿಕ ಅವಕಾಶಗಳು ಚತುರ ತಂತ್ರಜ್ಞರ, ವಿಜ್ಞಾನಿಗಳ, ಅರ್ಥಶಾಸ್ತ್ರಜ್ಞರ ಮತ್ತು ಇನ್ನಿತರ ವ್ಯಾಸಂಗಗಳ ವಿದ್ವಜ್ಜನರ ಸಮೂಹವನ್ನು ಹೆಚ್ಚಿಸುತ್ತವೆ.. ಅಧಿಕಾಧಿಕ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಇಂಬು ದೊರೆಯುತ್ತದೆ. ಇನ್ನು ಸಮಾಜವು ತನ್ನ ಬೌದ್ಧಿಕ ಇಲ್ಲವೆ ಅತಿಲೌಕಿಕ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಪಡೆದುಕೊಳ್ಳಲು ಶಕ್ತವಾಗುವದು.

ಸರಕಾರಿ ಚಿಕಿತ್ಸಾಲಯಗಳಲ್ಲಿ ಸೇವೆ ಸಲ್ಲಿಸುವಂತೆ ವೈದ್ಯರನ್ನು ಪ್ರೋತ್ಸಾಹಿಸಬೇಕು. ಆದರೆ ತಮ್ಮ ಸ್ವಂತ ವೃತ್ತಿ ನಡೆಸಲು ಅವರು ಸ್ವತಂತ್ರರಿರಬೇಕು. ಆದರೇನು? ವೈದ್ಯಕೀಯ ಚಿಕಿತ್ಸೆಯ ರಂಗದಲ್ಲಿ ಬೇಡಿಕೆ ಮತ್ತು ಪೂರೈಕೆ ನಿಯಮಗಳು – ಅಂಥವೇನಾದರೂ ಇದ್ದರೆ– ಸರಿಯಾಗಿ ಅನ್ವಯವಾಗುವುದಿಲ್ಲ. ವೈದ್ಯರ ಶುಲ್ಕಕ್ಕೆ ಸಂಬಂಧಿಸಿದಂತೆ ಮಾತಾಡಿ ಹೊಂದಿಸಿಕೊಳ್ಳುವ ಶಕ್ತಿ ರೋಗಿಗಿರುವುದಿಲ್ಲ. ಆದ್ದರಿಂದ ಸರಕಾರವೇ ಇಂಥ ಶುಲ್ಕಗಳನ್ನು ನಿಗದಿಪಡಿಸಬೇಕು. ಇನ್ನು ಅವುಗಳನ್ನು ನಿಗದಿಪಡಿಸುವಾಗ ವೈದ್ಯನ ಉತ್ಪನ್ನವು ಗರಿಷ್ಠ ವೇತನ ಮಿತಿಯನ್ನು ಮೀರದಂತೆ ನೋಡಿಕೊಳ್ಳಬೇಕು. ಇದು ವೈದ್ಯಕೀಯದ ಸಾಮಾನ್ಯ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಇತ್ಯಾದಿಗಳೂ ಸೇರಿದಂತೆ ಸಕಲ ವಿಶೇಷತೆಗಳಿಗೂ ಅನ್ವಯಿಸುತ್ತದೆ.

ಸಂಪನ್ಮೂಲಗಳ ಹಂಚಿಕೆ :

ಪ್ರಉತೀಯ ಅರ್ಥ ವ್ಯವಸ್ಥೆಯಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ಯಾವುದು ನಿರ್ಧರಿಸುತ್ತದೆ? ತನ್ನಲ್ಲಿಯೇ ನಿಹಿತ ಹಿತಾಸಕ್ತಿ ಹೊಂದಿದ ಈ ಪ್ರಶ್ನೆಯನ್ನು ಎತ್ತಲೇಬೇಕು

ಮತ್ತು ಉತ್ತರಿಸಲೂ ಬೇಕು. ಇದರಿಂದ ಪ್ರಉತ ಅರ್ಥವ್ಯವಸ್ಥೆಯು ಆಧುನಿಕ ಬಂಡವಾಳಶಾಹಿ ಮತ್ತು ಸಮತಾವಾದಿ ಅರ್ಥವ್ಯವಸ್ಥೆಯೊಂದಿಗೆ ಹೋಲಿಸಿದರೆ ಹೇಗಿರುತ್ತದೆಂಬುದನ್ನು ಈ ಮೂಲಕ ತಿಳಿದುಕೊಳ್ಳಬಹುದು.

ಮೊದಲು ಬಂಡವಾಳವಾದವನ್ನು ಪರಿಗಣಿಸೋಣ. ಬಂಡವಾಳವಾದದಲ್ಲಿ ಗ್ರಾಹಕನೇ ಸಾರ್ವಭೌಮ ದೊರೆ. ಇನ್ನು ಗ್ರಾಹಕನ ಅಗತ್ಯಗಳನ್ನು ಅತ್ಯಂತ ದಕ್ಷ ರೀತಿಯಲ್ಲಿ ಪೂರೈಸುವ ರೀತಿಯಲ್ಲಿ ಉತ್ಪಾದಕನು ತನ್ನ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಪೇಟೆಯ ಬೇಡಿಕೆ ಮತ್ತು ಪೂರೈಕೆಗಳ ಮೂಲಕ ಇದು ಘಟಿಸುವುದೆಂದು ಅರ್ಥಶಾಸ್ತ್ರಜ್ಞರು ಪ್ರತಿಪಾದಿಸುತ್ತಾರೆ. ಮೊದಲನೆಯದಾಗಿ, ಗ್ರಾಹಕನ ಅಭಿರುಚಿಯು ವಿವಿಧ ಉತ್ಪಾದನೆಗಳಿಗಾಗಿ ಇರುವ ಬೇಡಿಕೆಯಲ್ಲಿ ಪ್ರತಿಫಲಿಸುತ್ತದೆ. ವಿವಿಧ ಸಂಪನ್ಮೂಲಗಳನ್ನು ಆಯಾ ಪೇಟೆ ವಿಭಾಗದಲ್ಲಿ ನಿಗದಿತ ದರಗಳಲ್ಲಿ ಕ್ರಯಕ್ಕೆ ಪಡೆದು ಉತ್ಪಾದಕನು ಈ ಅಗತ್ಯಗಳನ್ನು ಪೂರೈಸುತ್ತಾನೆ. ತಂತ್ರಜ್ಞಾನದ ಹಾಗೂ ಉತ್ಪಾದಕತೆಯ ಸರಾಸರಿ ವೆಚ್ಚಗಳನ್ನು ಕನಿಷ್ಠವಾಗಿರಿಸುವುದು ಲಾಭ ಗಿಟ್ಟಿಸಬೇಕೆನ್ನುವ ಉತ್ಪಾದಕನ ಆಸ್ಥೆಯಾಗಿರುವುದು ಸಹಜ ತಾನೇ ? ವಿವಿಧ ಉತ್ಪಾದಕರ ಮಧ್ಯೆ ಇರುವ ಸ್ಪರ್ಧೆಯ ನಿಮಿತ್ತ ಗ್ರಾಹಕನ ಅಗತ್ಯಗಳನ್ನು ಸಾಧ್ಯವಿರುವಷ್ಟು ನಿಮ್ನತಮ ಸರಾಸರಿ ಉತ್ಪಾದನಾ ವೆಚ್ಚಕ್ಕೆ ಸರಿದೂಗಿಸಲಾಗುವುದು. ಹೀಗೆ ಬಂಡವಾಳವಾದ ವ್ಯವಸ್ಥೆಯಲ್ಲಿ ಗ್ರಾಹಕನೇ ಸಾರ್ವಭೌಮ ದೊರೆ. ಬಂಡವಾಳವಾದಿ ಏನನ್ನು ಉತ್ಪಾದಿಸಬೇಕೆಂಬುದನ್ನು ಗ್ರಾಹಕನೇ ನಿರ್ಧರಿಸುತ್ತಾನೆ. ಇದೆಲ್ಲವೂ ಪೇಟೆಗಳ ಮೂಲಕ ನಡೆಯುತ್ತಿದೆ. ಅಲ್ಲಿ ಗ್ರಾಹಕನು ತನ್ನ ಬೇಡಿಕೆಯನ್ನು ಪ್ರಸ್ತುತಪಡಿಸುತ್ತಾನೆ. ಹಾಗೂ ಉತ್ಪಾದಕನು ಪೂರೈಕೆಯನ್ನು ಹೊಂದಿಸುತ್ತಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಬಂಡವಾಳವಾದದಲ್ಲಿ ಗ್ರಾಹಕನೇ ಸಂಪನ್ಮೂಲಗಳ ಹಂಚಿಕೆಯನ್ನು ನಿರ್ಧರಿಸುತ್ತಾನೆ.

ಉಲ್ಲೇಖಿತ ವಿವರಣೆಯು ಬಂಡವಾಳವಾದದ ಉತ್ತಮ ಮುಖ. ಬಂಡವಾಳವಾದದ ಇಂಥ ಆದರ್ಶದ ಭಾಷ್ಯಗಳನ್ನು ಬಂಡವಾಳವಾದದ ಹೆಸರು ಹೇಳುವವರ ಪಠ್ಯ ಪುಸ್ತಕಗಳಲ್ಲಿ ಪಡೆಯಬಹುದೇ ಹೊರತು ವಾಸ್ತವದಲ್ಲಿ ಅಲ್ಲ; ಎಂದು ಟೀಕಾಕಾರರ ಪ್ರತಿಪಾದನೆ. ವಾಸ್ತವದಲ್ಲಿ ಅನೇಕಾನೇಕ ಉತ್ಪಾದಕರ ಮಧ್ಯೆ ಸ್ಪರ್ಧೆಯೇ ಇರದು. ಅಲ್ಲಿರುವುದೆಂದರೆ ಪೇಟೆಯನ್ನು ಹಂಚಿಕೊಳ್ಳುವುದು ಮತ್ತು ಕೆಲ ಮಟ್ಟಿಗೆ ಏಕಸ್ವಾಮ್ಯಾಧಿಕಾರ ಚಲಾಯಿಸುವ ಕೆಲವೇ ಕೆಲವು ಸರ್ವಾಧಿಕಾರಿ ಉತ್ಪಾದಕರು ತಮ್ಮ ತಮ್ಮಲ್ಲಿ ಏರ್ಪಡಿಸಿಕೊಂಡ ಸಂಧಿಕೂಟ ಮಾತ್ರ. ಈ ವ್ಯವಸ್ಥೆಯಲ್ಲಿ ಸ್ವಲ್ಪ ಜನ ಉತ್ಪಾದಕರು ಉದ್ದಿಮೆಯ ಅಗತ್ಯಗಳನ್ನು ಪೂರೈಸುವಲ್ಲಿ ತೊಡಗಿರುತ್ತಾರೆ. ಆ ಪೂರೈಕೆಗಳನ್ನು ನಿರ್ಧರಿಸಿದ ಬಳಿಕ, ಉತ್ಪಾದಕರು ವಿಸ್ತೃತ ಜಾಹೀರಾತು ಚಳವಳಿಯ ಮುಖಾಂತರ ಗ್ರಾಹಕನ ಮೇಲೆ ಪ್ರಭಾವ ಬೀರಲು ಉದ್ಯುಕ್ತರಾಗುತ್ತಾರೆ. ಆದ್ದರಿಂದ ಆದರ್ಶಪ್ರಾಯ ಸ್ಪರ್ಧಾತ್ಮಕ ವ್ಯವಸ್ಥೆಯಲ್ಲಿ ಘಟಿಸುವುದೆಂದು ತಿಳಿಯಲಾದಂತೆ, ಪೂರೈಕೆಗಳು ಗ್ರಾಹಕನ ಬೇಡಿಕೆಗಳಿಗೆ ಅನುಗುಣವಾಗಿ ಇರದೇ, ಗ್ರಾಹಕನ ಬೇಡಿಕೆಗಳೇ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಿಕ್ಕೊಬೇಕಾಗುತ್ತದೆ. ಹೀಗಾಗಿ ಗ್ರಾಹಕನ ಸಾರ್ವಭೌಮತ್ವವು ಕೇವಲ ಹುಸಿ. ಇಂದಿನ ಬಂಡವಾಳಶಾಹಿತ್ವದಲ್ಲಿ ಉತ್ಪಾದಕನೇ ದೂರದರ್ಶನವಾದಿ ಜಾಹೀರಾತುಗಳ ಮೂಲಕ ಗ್ರಾಹಕನ ಅಗತ್ಯಗಳನ್ನು ನಿರ್ಧರಿಸುತ್ತಾನೆ.

ಹೀಗಾಗಿ ಸಂಪನ್ಮೂಲಗಳ ಹಂಚಿಕೆಯನ್ನು ಇನ್ನೆಂದಿಗೂ ಗ್ರಾಹಕನ ಅಗತ್ಯಗಳ ಮೇಲಿಂದ ನಿರ್ಧರಿಸುವಂತಿಲ್ಲ. ಹೀಗೆ ಎಂದಾದರೂ ಇದ್ದಿತೋ ಇಲ್ಲವೋ? ಬದಲಾಗಿ, ಖಾಸಗಿ ರಂಗದ ಲೋಭದಿಂದ ಅದನ್ನು ನಿರ್ಧರಿಸಲಾಗುತ್ತದೆ. ಸಂಪನ್ಮೂಲಗಳು ತುರ್ತು ಅಗತ್ಯಗಳನ್ನು ಪ್ರತಿಫಲಿಸುವ ಉತ್ಪಾದನೆಗಳತ್ತ ಹರಿಯುತ್ತಿಲ್ಲ. ಆದರೆ, ಹಣ ಹೂಡಿಕೆಯ ಮೇಲಿನ ಪ್ರತಿಫಲದ ಗರಿಷ್ಠ ದರಗಳಿರುವ ಉತ್ಪಾದನೆಯತ್ತ ಹರಿಯುತ್ತಿವೆ. ಇದು ತಪ್ಪದೇ ಒಂದರ್ಥ ನೀಡುತ್ತದೆ. ಗರಿಷ್ಠ ಏಕಸ್ವಾಮ್ಯ ಶಕ್ತಿಯನ್ನು ಹೊಂದಿದ ಉದ್ದಿಮೆಗಳು ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುತ್ತವೆ. ಇದರ ಪರಿಣಾಮವಾಗಿ, ಸ್ವಲ್ಪ ಜನರ ಒಡೆತನವಿರುವ ಉದ್ದಿಮೆಗಳು ಇತರ ರಂಗಗಳನ್ನು ಹಿಮ್ಮೆಟ್ಟಿ ಬೆಳೆಯುತ್ತವೆ. ಅಲ್ಪಜನ ಪ್ರಭುತ್ವದ ಉದ್ದಿಮೆಗಳಲ್ಲಿಯ ಉತ್ಪಾದಕ ಅದಕ್ಷತೆಯು ವಿಖ್ಯಾತವಾಗಿದೆ. ಆದ್ದರಿಂದ ಅರ್ಥವ್ಯವಸ್ಥೆಯ ಅತ್ಯಂತ ಅದಕ್ಷ ರಂಗಗಳು, ಅತ್ಯಂತ ತುರ್ತು ಅಗತ್ಯಗಳನ್ನು ಸಾಮಾನ್ಯವಾಗಿ ಪೂರೈಸುವ ಸ್ಪರ್ಧಾತ್ಮಕ ರಂಗಗಳಿಗೆ ಹಾನಿ ಮಾಡಿ, ಬೆಳೆಯುತ್ತವೆ. ಹೀಗೆ ಇಂದಿನ ಬಂಡವಾಳವಾದದಡಿ, ಸಂಪನ್ಮೂಲಗಳ ಹಂಚಿಕೆಯನ್ನು ಏಕಸ್ವಾಮ್ಯ ಶಕ್ತಿ ಅಥವಾ ಬಂಡವಾಳವಾದಿ ಲೋಭವು ನಿರ್ಧರಿಸುತ್ತದೆ. ಒಂದೇ ಶಬ್ದದಲ್ಲಿ ಹೇಳಬೇಕೆಂದರೆ, ಈ ವ್ಯವಸ್ಥೆಯು ಸಂಪೂರ್ಣವಾಗಿ ಅದಕ್ಷವಾಗಿದೆ.

ಇನ್ನು ಸಮತಾವಾದಿ ಅರ್ಥನೀತಿಯತ್ತ ಹೊರಳಿದರೆ, ಪರಿಸ್ಥಿತಿಯು ಇನ್ನೂ ಕೇಡು. ಬಂಡವಾಳವಾದದಡಿ, ಗ್ರಾಹಕನಿಗೆ ಸಂಪನ್ಮೂಲ ಹಂಚಿಕೆಯಲ್ಲಿ ಹೆಚ್ಚಾಗಿ ಬಾಯಿಹಾಕುವ ಅಧಿಕಾರವಿಲ್ಲ. ಆದರೂ ಸಹ ಅವನು ಆಷ್ಟಿಷ್ಟು ಮಾತಾಡಬಹುದು. ಉತ್ಪಾದಕನು ಜಾಹೀರಾತುಗಳಂಥ ಉಪಾಯಗಳಿಂದ ಗ್ರಾಹಕನ ಮೇಲೆ ಪ್ರಭಾವ ಬೀರುವುದೇನೋ ನಿಜ. ಆದರೆ ಕೆಲವೊಮ್ಮೆ ಅವನ ಮನದೊಲವು ಏನಿದ್ದರೂ ಇಷ್ಟವಾದ ಬೆಲೆಗೆ ತನ್ನ ಉತ್ಪಾದನೆಗಳನ್ನು ಮಾರಲು ಅಸಮರ್ಥನಾಗಬಹುದು. ಅಂಥ ಪ್ರಸಂಗಗಳಲ್ಲಿ ಅಧಿಕ ಗ್ರಾಹಕರನ್ನು ಆಕರ್ಷಿಸಲು ಅವನು ದರಗಳನ್ನು ಇಳಿಸಬೇಕಾಗುತ್ತದೆ. ಆದ್ದರಿಂದ, ಇಂದಿಗೂ ಸಹ ಬಂಡವಾಳವಾದಿ ಅರ್ಥನೀತಿಯಲ್ಲಿ ಸ್ವಲ್ಪ ಮಟ್ಟಿನ ಮಣಿಹಕ್ಕೆ ಅನುವು ಇದ್ದೇ ಇರುತ್ತದೆ. ಗ್ರಾಹಕನ ಬೇಡಿಕೆಗಳು ಪೂರೈಕೆದಾರನ ಕ್ರಿಯೆಗಳಿಂದ ಸ್ವತಂತ್ರವಾಗಿರದಿದ್ದರೂ ಸಹ, ಪೂರೈಕೆ ಮತ್ತು ಬೇಡಿಕೆಯ ಸುವಿಖ್ಯಾತ ನಿಯಮವು ಇನ್ನೂ ಅನ್ವಯಿಸುತ್ತಿದೆ.

ಸಾಮ್ಯವಾದದಲ್ಲಿ ಇಂಥ ಮಣಿಹಕ್ಕೂ ಸಹ ಲೇಶ ಮಾತ್ರವೂ ಅನುವು ಇಲ್ಲ. ಅಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ಸ್ವಲ್ಪು ಜನ ರಾಜಕಾರಣಿಗಳೇ ನಿರ್ಧರಿಸುತ್ತಾರೆ. ಅವರಿಗೆ ಸರಕಾರದ ಬೇಳೆ ಬೇಯಿಸಿಕೊಳ್ಳುವುದು ಮುಖ್ಯವೇ ಹೊರತು ಸಾಮಾಜಿಕ ಕಲ್ಯಾಣವಲ್ಲ. ಪರಿಣಾಮವಾಗಿ, ಸರಕಾರವು ಸಂಪನ್ಮೂಲಗಳ ಗಣನೀಯ ಪಾಲನ್ನು ರಕ್ಷಣಾಪಡೆಯ ವಸ್ತುಗಳಿಗಾಗಿ (ಆದ್ದರಿಂದ ಬಂಡವಾಳ ವಸ್ತುಗಳಿಗಾಗಿ) ಹರಿಸುತ್ತದೆ. ಹೀಗಾಗಿ, ಯೋಜನಾ ಸಮಿತಿಯವರು ಗ್ರಾಹಕರ ಅಗತ್ಯಗಳನ್ನು ಕಡೆಗಣಿಸುತ್ತಾರೆ. ಗ್ರಾಹಕ ವಸ್ತುಗಳ ಪೂರೈಕೆಯು ಸೀಮಿತವಾಗಿ ಉಳಿಯುತ್ತದೆ. ಮತ್ತು ಗ್ರಾಹಕರ ಬೇಡಿಕೆಗಳು ನಿರ್ಬಂಧಿತ ಪೂರೈಕೆಗಳೊಂದಿಗೆ ಪೂರ್ಣ ಹೊಂದಿಕೊಳ್ಳಬೇಕಾಗುತ್ತದೆ.

ಇದಲ್ಲದೆ ರಶಿಯಾ, ಚೀನಾ ಮತ್ತಿತರ ಸಾಮ್ಯವಾದಿ ರಾಷ್ಟ್ರಗಳು ತಮ್ಮ ಅರ್ಥನೀತಿಯನ್ನು ಎಲ್ಲ ಮಟ್ಟಗಳಲ್ಲಿಯೂ ನಿಯಮನಗೊಳಿಸುತ್ತಾರೆ. ಕೇಂದ್ರೀಯ ಯೋಜನಾ ಮಂಡಳಿಯೇ ಸಕಲ ನಿರ್ಣಯಗಳನ್ನು ಕೈಕೊಳ್ಳುತ್ತದೆ. ಯಂತ್ರೋಪಕರಣ ಹಾಗೂ ಕಾರ್ಖಾನೆಗಳ ದಕ್ಷತೆಗೆ ಸಂಬಂಧಿಸಿದ ಸ್ಥಳೀಯ ಪರಿಸ್ಥಿತಿಗೆ ತೀರ ದೂರ ಈ ಮಂಡಳಿ. ಕರಕುಶಲ ಕೈಗಾರಿಕೆಗಳನ್ನೊಳಗೊಂಡ ಅಲ್ಪ ಸ್ವಲ್ಪ ಸಹಕಾರಿ ಉದ್ದಿಮೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಕಾರಖಾನೆಗಳ ಒಡೆತನವನ್ನು ರಾಜ್ಯವೇ ಹೊಂದಿರುತ್ತದೆ. ಪ್ರತಿಯೊಂದು ಕಾರ್ಖಾನೆಗೆ ಸರಕಾರ ನಿಯುಕ್ತ ವ್ಯವಸ್ಥಾಪಕನೇ ಮುಖ್ಯಸ್ಥನಾಗಿರುತ್ತಾನೆ. ಯೋಜನಾಕರ್ತರು ನಿಗದಿಪಡಿಸಿದ ಉತ್ಪಾದನಾ ಗುರಿಗಳನ್ನು ಅವನೆಷ್ಟು ಚೆನ್ನಾಗಿ ಸಾಧಿಸುವನೆಂಬುದರ ಮೇಲೆ ಅವನ ದಕ್ಷತೆಯನ್ನು ನಿರ್ಧರಿಸಲಾಗುತ್ತದೆ. ಉದಾಹರಣಾರ್ಥ, ಓರ್ವ ವ್ಯವಸ್ಥಾಪಕನಿಗೆ ಒಂದು ವರ್ಷದಲ್ಲಿ 10,000 ಪಾದರಕ್ಷೆ ತಯಾರಿಸುವ ಗುರಿ ನೀಡಿದ್ದರೆ, ಆಗ ಅವನು ಬಡತಿಯು, ಅವನು ಗುರಿ ತಲುಪುವ ಇಲ್ಲವೆ ಈ ಗುರಿ ಮೀರುವುದರ ಮೇಲೆ ಅವಲಂಬಿಸಿರುತ್ತದೆಯೇ ಹೊರತು ಉತ್ಪಾದನೆಯ ಗುಣದ ಮೇಲಲ್ಲ. ಸರಕಾರವು ಏನನ್ನೇ ಪೂರೈಸಲಿ ಗ್ರಾಹಕನು ಅದನ್ನೇ ಬಳಸಿಕೊಳ್ಳಬೇಕು. ಕಾರಖಾನೆಯ ವ್ಯವಸ್ಥಾಪಕನಿಗೆ ಕರ–ಕೌಶಲ್ಯದ ಪರಿವೆಯೇ ಇರದು ಒಂದೇ ಪಾದದ 20,000 ಪಾದರಕ್ಷೆಗಳನ್ನು ಉತ್ಪಾದಿಸುವ ವ್ಯವಸ್ಥಾಪಕರನ್ನು ಸೋವಿಯತ್ ಒಕ್ಕೂಟದಲ್ಲಿ ಕಂಡರೆ ಆಶ್ಚರ್ಯವೇನಿಲ್ಲ. ಅಂದಮೇಲೆ, ರಶಿಯಾ ಹಾಗೂ ಚೀನಾಗಳು ಸಹ ತಮ್ಮ ಅರ್ಥವ್ಯವಸ್ಥೆಯನ್ನು ಕೈಬಿಡಲು ತೊಡಗಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಯೋಜನಾ ನಿರೂಪಣೆಯಲ್ಲಿ ಅದೆಷ್ಟೇ ಕಾಳಜಿ ವಹಿಸಿದರೂ ಸಹ, ದಿನ ದಿನದ ಚಿಕ್ಕಪುಟ್ಟ ಆರ್ಥಿಕ ನಿರ್ಣಯಗಳನ್ನು ಕೇಂದ್ರ ಸಂಸ್ಥೆಯೇ ಕೈಕೊಳ್ಳುವಾಗ ಉತ್ಪಾದನಾ ಸಾಮರ್ಥ್ಯವು ಕುಂಠಿತವಾಗಲೇಬೇಕಲ್ಲವೇ ? ಆದ್ದರಿಂದ, ಸಾಮ್ಯವಾದಿ ರಾಷ್ಟ್ರಗಳ ಪ್ರಬಲ ಅರ್ಥ ವ್ಯವಸ್ಥೆಗಳೂ ಸಹ ಬಂಡವಾಳವಾದಿ ಅರ್ಥ ವ್ಯವಸ್ಥೆಗಳಿಗಿಂತ ಹೆಚ್ಚು ಅದಕ್ಷವಾಗಿರುತ್ತವೆ. ಇವೆರಡರಲ್ಲಿಯೂ, ಆರ್ಥಿಕ ಶಕ್ತಿಯು ಕೇಂದ್ರೀಕೃತವಾಗಿರುತ್ತದೆ. ಸಾಮ್ಯವಾದದಲ್ಲಿ ಯೋಜನಾಬದ್ಧವಾಗಿ; ಬಂಡವಾಳವಾದದಲ್ಲಿ ಕೆಲವೇ ಕೆಲವು ವ್ಯಕ್ತಿಗಳಲ್ಲಿ. ಇನ್ನು ಈ ಕೇಂದ್ರೀಕರಣವು, ಅಂತಿಮವಾಗಿ, ತುರ್ತು ಮಾನವೀಯ ಅಗತ್ಯಗಳ ಪೂರೈಕೆಯನ್ನು ನಿರ್ಲಕ್ಷಿಸುತ್ತದೆ.

ಆದರೆ, ಪ್ರಉತ ಅರ್ಥನೀತಿಯು ಅಗತ್ಯಾಧಾರಿತ. ಇಲ್ಲಿ ಸಂಪನ್ಮೂಲಗಳ ವಿತರಣೆಯನ್ನು ಲಾಭದ ಹೇತುವಿನಿಂದಾಗಲಿ ಇಲ್ಲವೆ ಸರಕಾರದ ಬೇಳೆ ಬೇಯಿಸಿಕೊಳ್ಳಲಿಕ್ಕಾಗಲಿ ಮಾಡದೆ, ಮಾನವನ ಅವಶ್ಯಕತೆಗಳ ತೀವ್ರತೆಯ ಮೇರೆಗೆ ಮಾಡಲಾಗುತ್ತದೆ. ಪ್ರಉತ ವಿಕೇಂದ್ರೀಕೃತ ಅರ್ಥನೀತಿಯನ್ನು ಅಪ್ಪಿಕೊಂಡಿದೆ. ಇದರಲ್ಲಿ ಆರ್ಥಿಕ ಶಕ್ತಿಯು ಸರಕಾರದಲ್ಲಿಯಾಗಲಿ, ಕೆಲ ಸಿರಿವಂತ ಸರದಾರರಲ್ಲಿಯಾಗಲಿ ಕೇಂದ್ರೀಕೃತವಾಗಿಲ್ಲ. ಯಾವ ಪೇಟೆಗಳನ್ನು ಖಾಸಗಿ ಉತ್ಪಾದಕರಿಗೆ ಬಿಟ್ಟು ಕೊಟ್ಟರೆ, ಅವರು ದುರುಪಯೋಗಿಸುವ ಸಾಧ್ಯತೆಯು ಹೆಚ್ಚಾಗಿದೆಯೋ ಅಲ್ಲಿ ಮಾತ್ರ ಸರಕಾರದ ಮಧ್ಯ ಪ್ರವೇಶ. ಹೀಗೆ ಸಮಾಜದ ಕಾರ್ಯ ನಿರ್ವಹಣೆಗಾಗಿ ಪ್ರಾಣಪಾಯ ವೆನಿಸುವ ಯಾವುದೇ ಕಚ್ಚಾ ಸರಕರನ್ನು ಸಾರ್ವಜನಿಕೇತರ ರಂಗದಲ್ಲಿ ಉತ್ಪಾದಿಸುವಂತಿಲ್ಲ.

ಉತ್ಪಾದನೆಯ ಪ್ರಕ್ರಿಯೆಯಲ್ಲಿ ಅಗತ್ಯವಾದ ದ್ವಿವಿಧ ಅಂಶಗಳಿವೆ. ಭೂಮಿ, ಪರಿಶ್ರಮ ಹಾಗೂ ಬಂಡವಾಳಗಳನ್ನು ಪ್ರಾಥಮಿಕ ಅಂಶಗಳೆನ್ನಬಹುದು. ಇನ್ನು ಮುಂದಿನ ಉತ್ಪಾದನೆಗಾಗಿ ಪ್ರಾಥಮಿಕೇತರ ಅಂಶಗಳೆನ್ನಬಹುದು. ಈ ಎರಡನೆಯ ಪ್ರಕಾರದ ಅಂಶಗಳ ಉತ್ಪಾದನೆಯು ಸಾರ್ವಜನಿಕ ರಂಗಕ್ಕೇ ಮೀಸಲು. ಎಷ್ಟರ ಮಟ್ಟಿಗೆ ಪ್ರಚಲಿತ ಪ್ರಾಥಮಿಕ ಅಂಶಗಳ ಸಂಚಯವನ್ನು ಪ್ರಾಥಮಿಕೇತರ ಅಂಶಗಳ ಉತ್ಪಾದನೆಗಾಗಿ ಹಂಚಬೇಕೆಂಬುದನ್ನು ಧ್ಯೇಯ ನಿರೂಪಣಾ ಮಂಡಳಿಯು ನಿರ್ಣಯಿಸುತ್ತದೆ. ಈ ಸಂಸ್ಥೆಯು ಅರ್ಥವ್ಯವಸ್ಥೆಯಲ್ಲಿ ಗ್ರಾಹಕ ವಸ್ತುಗಳ ಅಗತ್ಯಗಳನ್ನು ಆಕರಿಸುತ್ತದೆ. ಮತ್ತು ಅದೇರೀತಿ ಲಭ್ಯ ಸಂಪನ್ಮೂಲಗಳನ್ನು ಪಡೆಯುತ್ತದೆ.

ಅವಶ್ಯಕ ವಸ್ತುಗಳಿಗಾಗಿ ಸಮಾಜದ ವಿರಳ ಸಂಪನ್ಮೂಲಗಳನ್ನು ಆದ್ಯತಾನುಸಾರ ನೀಡಬೇಕಾದುದು ತರ್ಕಬದ್ಧವಾಗಿದೆ. ಸರಕಾರವು ಒದಗಿಸಬೇಕಾದ ಪ್ರಾಥಮಿಕ ಅಂಶಗಳನ್ನು ಹಾಗೂ ಪ್ರಾಥಮಿಕೇತರ ಅಂಶಗಳನ್ನು ಹಂಚುವಾಗ ಸಹಕಾರಿ ಹಾಗೂ ಖಾಸಗಿ ರಂಗದಲ್ಲಿ ಉತ್ಪಾದಿಸುವ ಇಂಥ ಗ್ರಾಹಕ ಸರಕುಗಳಿಗೆ ಆದ್ಯತೆ ನೀಡಬೇಕು. ಬಂಡವಾಳ ವಸ್ತುಗಳಿಗೆ ದ್ವಿತೀಯ ಆದ್ಯತೆ ಇರಬೇಕು. ಇವು ಬೆಳವಣಿಗೆಗಾಗಿ ತುಂಬಾ ಅಗತ್ಯ. ಅತ್ಯಂತ ಅನಭಿವೃದ್ಧ ಅರ್ಥ ವ್ಯವಸ್ಥೆಯಲ್ಲಿ ಇನ್ನುಳಿದ ಪ್ರಾಥಮಿಕ ಹಾಗೂ ಪ್ರಾಥಮಿಕೇತರ ಕಚ್ಚಾ ಸರಕುಗಳನ್ನು, ಕನಿಷ್ಠ ಅಗತ್ಯಗಳನ್ನು ಉತ್ಪಾದಿಸಿದ ಬಳಿಕ, ಯಂತ್ರಗಳ ತಯಾರಿಕೆಗಾಗಿ ಹಂಚಬೇಕು. ಐಷಾರಾಮಿ ವಸ್ತುಗಳಿಗಾಗಿ ಹಣ ತೊಡಗಿಸಲೇಕೂಡದು. ಇವು ಯಾವವೆಂಬುದನ್ನು ಯೋಜನಾ ಮಂಡಳಿಯೇ ನಿರ್ಧರಿಸುತ್ತದೆ. ಇನ್ನು ಅಭಿವೃದ್ಧಿ ಅರ್ಥವ್ಯವಸ್ಥೆಯಲ್ಲಿ ಇನ್ನಿತರ ಕಚ್ಚಾ ಸರಕುಗಳನ್ನು ಬಂಡವಾಳ ವಸ್ತುಗಳ ಹಾಗೂ ಐಷಾರಾಮಿ ವಸ್ತುಗಳ ಉತ್ಪಾದನೆಗಾಗಿ ಮೀಸಲಿಡಬೇಕು.

ಹಣ ಹೂಡಿಕೆಯ ಬೇಡಿಕೆ ಮತ್ತು ತಂತ್ರಜ್ಞಾನದ ಕ್ಲಿಷ್ಟತೆಗಳನ್ನವಲಂಬಿಸಿ, ಬಂಡವಾಳ ವಸ್ತುಗಳನ್ನು ಸಾರ್ವಜನಿಕ ರಂಗದಲ್ಲಾಗಲಿ ಇಲ್ಲವೆ ಸಹಕಾರಿ ರಂಗದಲ್ಲಾಗಲಿ ಉತ್ಪಾದಿಸಬಹುದು. ಲಘು ಇಂಜಿನಿಯರಿಂಗ್ ಸರಕುಗಳನ್ನು ಸಹಕಾರಿ ರಂಗಕ್ಕೆ ಮೀಸಲಿರಿಸಿದರೆ, ಭಾರ ಯಂತ್ರಗಳನ್ನು – ಅಂದರೆ ಟ್ರಾನ್ಸ್‌ಫಾರ್ಮರ್, ಕ್ರೇನ್, ಟ್ರಾಕ್ಟರ್ ಇತ್ಯಾದಿಗಳನ್ನು ಸಾರ್ವಜನಿಕ ರಂಗದಲ್ಲಿ ಉತ್ಪಾದಿಸಬೇಕು. ಬಂಡವಾಳ ಸರಕುಗಳಲ್ಲಿಯ ಈ ತರದ ವಿಭಜನೆಯು ದೇಶದ ತಾಂತ್ರಿಕತೆ ಹಾಗೂ ಅಭಿವೃದ್ಧಿಯ ಮೇಲೆ ಅವಲಂಬಿಸಿದೆ. ಆದರೆ, ಯಾವ ಪ್ರಸಂಗದಲ್ಲಿಯೂ ಸಹ ಸಾರ್ವಜನಿಕ ಮತ್ತು ಸಾರ್ವಜನಿಕೇತರ ರಂಗಗಳು ತಳಕು ಬಳಕಾಗಕೂಡದು.

ಖಾಸಗಿ ಇಲ್ಲವೆ ಚಿಕ್ಕ ಪ್ರಮಾಣದ ಉದ್ದಿಮೆ ರಂಗದ ಪಾತ್ರವು ಸಾರ್ವಜನಿಕ ಇಲ್ಲವೆ ಸಹಕಾರಿ ರಂಗಗಳಿಗೆ ಪೂರಕವಾಗಿರಬೇಕು. ದೊಡ್ಡ ಪ್ರಮಾಣದ ಸಂಸ್ಥೆಗಳನ್ನು ಸ್ಥಾಪಿಸಿರುವ ಎಡೆಗಳಲ್ಲಿ ಚಿಕ್ಕ ಪ್ರಮಾಣದ ಸಂಸ್ಥೆಗಳಿಗೂ ಸಹ, ಬಿಡಿಭಾಗಗಳನ್ನು ಪೂರೈಸಲಿಕ್ಕಾಗಲಿ ಇಲ್ಲವೆ ದುರಸ್ತಿ ಕಾರ್ಯ ಕೈಕೊಳ್ಳುವುದಕ್ಕಾಗಲಿ ಪ್ರೋತ್ಸಾಹಿಸಬೇಕು. ಅದೇ ರೀತಿ, ಒಂದು ಉದ್ದಿಮೆಯಲ್ಲಿ, ಪೂರಕ ಕಾರ್ಯ ಕಲಾಪಗಳನ್ನು ಪ್ರತ್ಯೇಕಿಸಬೇಕು. ಇದರಿಂದ ಅರ್ಥವ್ಯವಸ್ಥೆಯಲ್ಲಿ ಇನ್ನೂ

ಮುಂದಿನ ಹಂತದ ವಿಕೇಂದ್ರೀಕರಣವು ನಿಶ್ಚಿತವಾಗುತ್ತದೆ. ಉದಾಹರಣಾರ್ಥ ಸಾಮಾನ್ಯವಾಗಿ ಬಟ್ಟೆ ಹಾಗೂ ನೂಲುಗಳನ್ನು ಒಂದೇ ಕಾರಖಾನೆಯಲ್ಲಿ ಉತ್ಪಾದಿಸುವ ಜವಳಿ ಉದ್ದಿಮೆಯನ್ನೇ ನೋಡಿರಿ. ಪ್ರಉತ ಜವಳಿ ಚಟುವಟಿಕೆಗಳನ್ನು ಎರಡು ಘಟಕಗಳಲ್ಲಿ ವಿಭಜಿಸುತ್ತದೆ. ಬಟ್ಟೆಗಾಗಿ ಕಚ್ಚಾ ಸರಕಾಗಿರುವ ನೂಲನ್ನು ದೊಡ್ಡ ಪ್ರಮಾಣದ ಸಂಸ್ಥೆಗಳು ಉತ್ಪಾದಿಸಬಲ್ಲವು. ಆದರೆ ಬಟ್ಟೆಯನ್ನು ದೊಡ್ಡ ಪ್ರಮಾಣದ ಸಹಕಾರಿ ಸಂಸ್ಥೆಗಳಾಗಲಿ ಇಲ್ಲವೆ ಚಿಕ್ಕ ಚಿಕ್ಕ ಆರ್ಥಿಕ ಘಟಕಗಳು ತಯ್ಯಾರಿಸಬಲ್ಲವು. ಹೀಗೆ ಚಿಕ್ಕ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆಗಳು ಪರಸ್ಪರ ಪೂರಕವಾಗಿ ಇರಬಲ್ಲವು.

ಕೆಲಸಗಾರರಿಂದ ಕಾರಖಾನೆಗಳ ನಿರ್ವಹಣೆಯಷ್ಟೇ ಅಲ್ಲದೆ, ಪ್ರಉತದ ವಿಕೇಂದ್ರೀಕರಣ ಧೋರಣೆಯು ಆಹಾರ ಬಟ್ಟೆಗಳಂಥ ಅವಶ್ಯಕ ವಸ್ತುಗಳನ್ನು ಉತ್ಪಾದಿಸುವ ಆ ಉದ್ದಿಮೆಗಳ ಸ್ಥಾಪನೆಗೆ ಸ್ಪಾವಲಂಬಿ ಪ್ರದೇಶಗಳನ್ನು ಹುಡುಕಲು ಕರ ನೀಡುತ್ತದೆ. ಉದ್ದೇಶವಿಷ್ಟೇ: ದೇಶದ ತುಂಬ ಅಗತ್ಯಗಳ ಕ್ರಮೇಣ ಪೂರೈಕೆಯನ್ನು ಖಚಿತಪಡಿಸಿಕೊಳ್ಳಬೇಕು. ಮತ್ತು ಅನುಷಂಗಿಕವಾಗಿ, ಪ್ರಪಂಚದ ಎಲ್ಲೆಡೆಗಳಲ್ಲಿ ಈ ಪೂರೈಕೆ ಆಗಬೇಕು. ಈ ರೀತಿ, ಉದ್ದಿಮೆಗಳು ಚದರಿದಾಗ ಯಾವ ಪ್ರದೇಶವೂ ನೈಸರ್ಗಿಕ ದುರಂತಗಳಿಗೆ ಬಲಿಯಾಗಬಾರದು.

ಅರ್ಥ ವ್ಯವಸ್ಥೆಯಲ್ಲಿ ಸರಕಾರದ ಚಂಚು ಪ್ರದೇಶವು ಕನಿಷ್ಠವಿರಬೇಕೆಂಬುದು ಪ್ರಉತ ಧೋರಣೆ. ಶಕ್ತಿ ಇತ್ಯಾದಿ ಕಚ್ಚಾ ಸಾಮಗ್ರಿಗಳನ್ನು ಪೂರೈಸುವುದನ್ನು ಬಿಟ್ಟರೆ, ಉದ್ದಿಮೆಗಳಲ್ಲಿ ಸ್ಪರ್ಧೆಯನ್ನು ಏರ್ಪಡಿಸುವುದು ಸರಕಾರದ ಮುಖ್ಯ ಕಾರ್ಯವಾಗಿದೆ. ಹೀಗಾದರೆ, ಬೇಡಿಕೆ ಮತ್ತು ಪೂರೈಕೆಗಳ ನಿಯಮವು ಮುಕ್ತವಾಗಿ ಕ್ರಿಯಾಶೀಲವಾಗುತ್ತದೆ. ಯಾವುದೊಂದು ಆರ್ಥಿಕ ಘಟಕಕ್ಕೆ ಕೊಡುಕೊಳ್ಳುವ ಶಕ್ತಿ ಕಡಿಮೆಯಿದ್ದರೆ ಅಲ್ಲಿ ಸರಕಾರವು ನೆರವು ನೀಡಲು ಮುಂದಾಗಬೇಕು. ಇಲ್ಲವೆ ಅರ್ಥವ್ಯವಸ್ಥೆಯಿಂದ ಕೈ ತೆಗೆಯಬೇಕು. ಉದಾಹರಣಾರ್ಥ, ರೋಗಿಗಳು ವೈದ್ಯನ ಕೃಪೆಗೆ ಒಳಗಾಗಿರುತ್ತಾರೆ. ಆದ್ದರಿಂದ ವೈದ್ಯರ ಶುಲ್ಕವನ್ನು ಸೂಕ್ತವಾಗಿ ನಿರ್ಬಂಧಿಸಬೇಕು. ಅದೇರೀತಿ ಶಾರೀರಿಕ ಪರಿಶ್ರಮದ ಕೆಲಸಗಾರರು ಸಮಾಜಕ್ಕೆ ತುಂಬಾ ಅನಿವಾರ್ಯರಾಗಿದ್ದರೂ ಸಹ, ಯಾವಾಗಲೂ ಬೇಕಾಬಿಟ್ಟಿಯಾಗಿ ದೊರಕುತ್ತಾರೆ. ಹೀಗಾಗಿ ಸಮಾಜದ ಕನಿಷ್ಠ ಅಗತ್ಯಗಳಾದ ಅನ್ನ, ವಸ್ತ್ರ, ವಾಸಗೃಹ, ಶಿಕ್ಷಣ ಹಾಗೂ ಚಿಕಿತ್ಸೆಗಳನ್ನು ಪಡೆಯಲಾರದಷ್ಟು ಕಡಿಮೆ ಪ್ರಮಾಣದ ವೇತನ ಮಾತ್ರ ಪಡೆಯುತ್ತಾರೆ. ಇಲ್ಲಿ ಸರಕಾರವು ಮಧ್ಯ ಪ್ರವೇಶಿಸಬೇಕು ಮತ್ತು ಕನಿಷ್ಠ ವೇತನ ಪ್ರಮಾಣವನ್ನು ಸಾರಬೇಕು. ಇನ್ನಿತರ ಬಹುತೇಕ ಪೇಟೆಗಳಲ್ಲಿ ಸರಕಾರದ ಮಧ್ಯ ಪ್ರವೇಶದ ಅಗತ್ಯವಿಲ್ಲ. ಏಕೆಂದರೆ ಸಹಕಾರಿ ಅರ್ಥವ್ಯವಸ್ಥೆಯು ಖಾಸಗಿ ನಾಗರಿಕರ ಊಹಾತ್ಮಕ ಲೆಕ್ಕಾಚಾರಕ್ಕೆ ಗುರಿಯಾಗುವುದಿಲ್ಲ. ಅದೊಂದು ಪ್ರಜಾಸತ್ತಾತ್ಮಕ ಸಂರಚನೆ. ಕೆಲಸಗಾರರ ಪ್ರಜಾಸತ್ತೆಯು, ಯಾರೊಬ್ಬರೂ ಪ್ರಬಲರಾಗಿ ಅಸಾಮಾನ್ಯ ಆರ್ಥಿಕ ಶಕ್ತಿಯನ್ನು ಪ್ರಯೋಗಿಸಲು ಇಂಬುಗೊಡದು.

ಪ್ರಉತದ ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಗ್ರಾಹಕನೇ ಸಾರ್ವಭೌಮ. ಆರ್ಥಿಕ ಯೋಜನೆ ವಿಧಾನವೇನೋ ಇದೆ. ಆದರೆ ಗ್ರಾಹಕನ ಆದ್ಯತೆಗಳನ್ನೂ ಮತ್ತು ಅವನ ಅಭಿರುಚಿಯನ್ನೂ ರೂಪಿಸುವುದು ಅದರ ಪಾತ್ರವಲ್ಲ. ಪೂರೈಕೆಯ ವಿಷಯದಲ್ಲಿ ಅತಿಶಯ ನಿರ್ಬಂಧವನ್ನು

ಯಾರೂ ಹೇರದಂತೆ ಅದು ನೋಡಿಕೊಳ್ಳುವುದಷ್ಟೇ. ಒಮ್ಮೆ ಅರ್ಥವ್ಯವಸ್ಥೆಯು ಅಭಿವೃದ್ಧವಾದರೆ ತೀರಿತು; ಗ್ರಾಹಕ ಸರಕಿನ ಪೇಟೆಗಳು ಸರ್ವರ ಅಗತ್ಯಗಳನ್ನು ಪೂರೈಸುವಲ್ಲಿ ಮುಕ್ತವಾಗಿ ಕಾರ್ಯಕಲಾಪ ನಡೆಸುತ್ತವೆ. ಪ್ರತಿಯೋರ್ವ ಕೆಲಸಗಾರನಿಗೆ ಪ್ರಚಲಿತ ದರಗಳನ್ವಯ ಕನಿಷ್ಠ ಖರೀದಿ ಶಕ್ತಿಯನ್ನು ಒದಗಿಸುವ ಪ್ರಮಾಣದ ವೇತನದ ಭರವಸೆ ನೀಡಿರುವುದರಿಂದ, ಸಹಕಾರಿ ಸಂಘಗಳು ಮತ್ತು ಖಾಸಗಿ ಸಂಸ್ಥೆಗಳು ಎಲ್ಲ ಕೆಲಸಗಾರರ ಅಗತ್ಯಗಳನ್ನು ಒದಗಿಸುವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ.

ಈ ಅಗತ್ಯಗಳಿಗೆ ಸಾರ್ವಜನಿಕ ರಂಗವನ್ನು ಸಹ ಜೋಡಿಸಲಾಗುತ್ತದೆ. ಏಕೆಂದರೆ, ಸರಕಾರಕ್ಕೆ ಜವಾಬುದಾರವಾದ ಸ್ವಾಯತ್ತ ಸಂಸ್ಥೆಗಳು, ಪ್ರಾಥಮಿಕೇತರ ಅಂಶಗಳಿಗಾಗಿ ಸಾರ್ವಜನಿಕೇತರ ರಂಗದ ಬೇಡಿಕೆಗಳನ್ನು ಪೂರೈಸಲಿಕ್ಕಾಗಿಯೇ ಕಚ್ಚಾ ಸರಕುಗಳನ್ನು ಉತ್ಪಾದಿಸುತ್ತವೆ. ಆದ್ದರಿಂದ, ಸರಕಾರವು ಒಮ್ಮೆ ಒಂದು ಉದ್ದಿಮೆಯಲ್ಲಿರುವ ಸಂಸ್ಥೆಗಳ ಮಧ್ಯೆ ಸ್ಪರ್ಧೆ ಏರ್ಪಡಿಸಿದರೆ ಮತ್ತು ತಕ್ಕ ಕನಿಷ್ಠ ವೇತನವನ್ನು ಜಾರಿಗೊಳಿಸಿದರೆ ತೀರಿತು. ಯಾವುದೇ ಕಾಲದ ಯಾವುದೇ ಕ್ಷಣದಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ಬೇಡಿಕೆ ಮತ್ತು ಪೂರೈಕೆ ನಿಯಮ ಮಾಧ್ಯಮದ ಮೂಲಕ ಮಾನವೀಯ ಅಗತ್ಯಗಳೇ ನಿರ್ದೇಶಿಸುತ್ತವೆ. ಎಲ್ಲರ ಅವಶ್ಯಕತೆಗಳನ್ನು ಸಮಾಧಾನಪಡಿಸುವುದರಿಂದ, ಲಾಭವನ್ನು ಕೆಲಸಗಾರರಲ್ಲಿ ಹಂಚುವಂಥ ನ್ಯಾಯಸಮ್ಮತ ಆದಾಯ ವಿತರಣೆ ಮಾಡುವುದರಿಂದ ಮತ್ತು ಗ್ರಾಹಕನೇ ಸಾರ್ವಭೌಮನಾಗುವುದನ್ನು ಇದು ನಿಶ್ಚಿತಪಡಿಸುವುದರಿಂದ ಈ ಹಂಚಿಕೆಯು ದಕ್ಷವೆನಿಸುತ್ತದೆ. ಇದೇ ನೈಜ ಸಮಾಜವಾದ. ಹೀಗೆ ಪ್ರಉತ ಇಂದಿನ ಬಂಡವಾಳವಾದಿ ಹಾಗೂ ಸಾಮ್ಯವಾದಿ ಅರ್ಥವ್ಯವಸ್ಥೆಗಳ ಬಹುತೇಕ ಆರ್ಥಿಕ ಕೇಡನ್ನು ನಿವಾರಿಸುತ್ತದೆ.

ಪುಸರದ ಗುಣಮಟ್ಟ :

1960 ರ ದಶಕದ ಲಾಗಾಯ್ತು ಆರ್ಥಿಕವಾಗಿ ಅಭಿವೃದ್ಧವಾದ ದೇಶಗಳಲ್ಲಿ ಜೀವನದ ಗುಣಮಟ್ಟ ನಾವು ಬಾಳಿ ಉಸಿರಾಡುವ ಪರಿಸರ, ಅತಿಭೌತಿಕವಾದದ ರಭಸಕ್ಕೆ ಸಿಲುಕಿ ಸೂಕ್ಷ್ಮ ಮೌಲ್ಯಗಳ ಕೊರತೆ ಇತ್ಯಾದಿ ಕುರಿತು ಹೆಚ್ಚು ಹೆಚ್ಚು ಚರ್ಚೆ ನಡೆದಿದೆ. ಒಟ್ಟು ರಾಷ್ಟ್ರೀಯ ಉತ್ಪಾದನೆಯನ್ನು ಅಂದರೆ ಸಕಲ ಆರ್ಥಿಕ ಚಟುವಟಿಕೆಗಳ ಸಂಕಲಿತ ಮೊತ್ತವನ್ನು, ಸಾಮಾಜಿಕ ಸಂತುಷ್ಟಿ – ಸೂಚಿಯನ್ನಾಗಿ ಪರಿಗಣಿಸುವ ಪ್ರಪಂಚದಲ್ಲಿ ಈ ಚರ್ಚೆಯೇ ಎದ್ದು ಕಾಣುವ ಒಂದು ಬೆಳವಣಿಗೆ. ಉತ್ಪಾದಿತ ವಸ್ತುಗಳು ಪ್ರತಿಯೋರ್ವ ನಾಗರಿಕನ ತುರ್ತು ಅಗತ್ಯವನ್ನು ಪೂರೈಸುತ್ತಿವೆಯೋ ಇಲ್ಲವೋ ಎನ್ನುವುದರ ಪರಿವೆ ಇಲ್ಲಿ ಇಲ್ಲ. ಭೌತಿಕವಾದದಲ್ಲಿ ಮುಳುಗೇಳುತ್ತಿರುವ ಸಮಾಜಗಳಲ್ಲಿ ಕ್ರಮೇಣ ಉದಿಸುತ್ತಿರುವ ದೃಷ್ಟಿಕೋನವೆಂದರೆ – ಹಣವು ಸಕಲ ಸಮಸ್ಯೆಗಳಿಗೆ ತಾರಕವಲ್ಲ ಮತ್ತು ಸಂತೋಷ ಸಂತೃಪ್ತಿಗಳನ್ನು ತರದು ಎಂಬುದಾಗಿದೆ.

ಕಾರಣವಾವುದು? ಅಭೂತಪೂರ್ವ ಪರಿಸರಾತ್ಮಕ ಮಾಲಿನ್ಯ ಹಾಗೂ ಸರ್ವದಿಶಗಳಲ್ಲಿ ದೃಗ್ಗೋಚರವಾಗುವ ಅಧಃಪತನ, ಇದುವರೆಗೆ ಬರಿಗಣ್ಣಿಗೆ ಕಾಣದಂತೆ ಬಚ್ಚೆಡಲಾದ

ವಿಜ್ಞಾನ ಮತ್ತು ತಂತ್ರಜ್ಞಾನಗಳ ಅನಿಷ್ಠ ಪರಿಣಾಮಗಳು ಹಠಾತ್ತಾಗಿ ಮೇಲೇರಿಬಂದಿವೆ. ಅವುಗಳ ಚೋರು ಸಹ ನಿರ್ಲಕ್ಷಿಸದಷ್ಟು ಭೀಭತ್ಸವಾಗಿದೆ. ಮೋಟರ ವಾಹನಗಳು ಹೊಗೆಯನ್ನಾಗಲಿ, ಪಟ್ಟಣಗಳ ಹವೆಯಲ್ಲಿರಿುವ ರಾಸಾಯನಿಕ ವಿಷಯುಕ್ತ ಕಣಗಳನ್ನಾಗಲಿ, ರಸ್ತೆಗಳಲ್ಲಿರುವ ಸದ್ದುಗದ್ದಲವನ್ನಾಗಲಿ, ಅಗ್ನಿಯನ್ನೇ ಉಗ್ಗುವ ಇಲ್ಲವೆ ಮೃತ ಮತ್ಸ್ಯಗಳನ್ನು ಉಗುಳುವ ನದಿಗಳನ್ನಾಗಲಿ, ಕಡಲುದಂಡೆಯನ್ನೇ ಹಾಳು ಮಾಡುವ ತೈಲದಲೆಗಳನ್ನಾಗಲಿ, ಕಿವಿಗಡಚಿಕ್ಕಿಸುವ ವಿಮಾನಗಳನ್ನಾಗಲಿ, ಪ್ರಾಣಾಂತಿಕ ಅಣುವಿಕರಣ ಉಂಟು ಮಾಡುವ ಅಣು ಸ್ಥಾವರ ಹಾಗೂ ಅವುಗಳ ಕಶ್ಮಲವನ್ನಾಗಲಿ ನಾವಿನ್ನು ಮುಂದೆ ನಿರ್ಲಕ್ಷಿಸಲಾರವು. ಇಷ್ಟೇ ಏಕೆ? ಹೃದಯ ಬೇನೆಯಿಂದ ಮೊದಲು ಮಾಡಿ, ಉಸಿರಾಟದ ರೋಗ, ಅಂಗವಿಲಕತೆ ಹಾಗೂ ಉರ್ಬುದ ರೋಗಗಳ ವರೆಗೆ ಹಬ್ಬುತ್ತಿರುವ ಆರೋಗ್ಯದ ಸಮಸ್ಯೆಗಳನ್ನು ಸಹ ನಾವಿನ್ನು ನಿರ್ಲಕ್ಷಿಸಲಾರವು. ಇವು ನಮ್ಮ ತಥಾಕಥಿತ ಪ್ರಗತಿಯು ಹೊರಹಾಕಿದ ಅಪಾಯಕರ ವಸ್ತುಗಳು.

ಪರಿಸರ ಮಾಲಿನ್ಯವು ದೇಶ ದೇಶಗಳ ಮಧ್ಯೆ ಇಲ್ಲವೆ ಆದರ್ಶವಾದಗಳ ಮಧ್ಯೆ ತಾರತಮ್ಯ ಮಾಡದು. ಬಂಡವಾಳವಾದಿ ರಾಷ್ಟ್ರಗಳು ಹೇಗೆ ಬಾಧಿತವಾಗಿವೆಯೋ ಸಾಮ್ಯವಾದಿ ರಾಷ್ಟ್ರಗಳೂ ಸಹ ಅದೇ ರೀತಿ ಬಾಧಿತವಾಗಿವೆ. ಅಭಿವೃದ್ಧಿಶೀಲ ದೇಶಗಳನ್ನೂ ಸಹ ಅದು ಬಾಧಿಸದೆ ಬಿಟ್ಟಿಲ್ಲ; ಹೆಚ್ಚಾದರೆ, ಅಲ್ಲಿಯ ಮಾಲಿನ್ಯವು ಸಮೃದ್ಧಿಯಿಂದ ಆಗಿರದೆ, ದಾರಿದ್ರ್ಯದಿಂದಾಗಿಯಷ್ಟೇ. ಪರಿಸರಾತ್ಮಕ ಪತನವು ಬಂಡವಾಳವಾದಿ ರೋಗವೇನಲ್ಲ. ಆದರೆ ಅದು ಲಂಗುಲಗಾಮಿಲ್ಲದ ಭೌತಿಕವಾದದ ರೋಗ.

ಇಂದು ನಮ್ಮ ಅನಾರೋಗ್ಯಕರ ಪರಿಸರದ ಗಂಭೀರತೆಯನ್ನು ಕುರಿತು ಎರಡು ಮಾತಿಲ್ಲ. ಆದರೆ ಅದರ ಕಾರಣಗಳಾವವು? ಹಾಗೂ ಅವುಗಳ ಪರಿಹಾರವಾವುದು? ಎಂಬ ಬಗ್ಗೆ ಪಂಡಿತರಲ್ಲಿ ಮತ ಭೇದವಿದೆ. ಉದ್ದಿಮೆಯೇ ಮುಖ್ಯ ಅಪರಾಧಿ ಎಂಬ ಕಲ್ಪನೆಯೂ ಇದೆ. ಅದರೆ ಆಧುನಿಕ ಯಾಂತ್ರೀಕೃತ ಬೇಸಾಯದ ಅಪರಾಧಿತ್ವವು ಈ ವಿಷಯದಲ್ಲಿ ಕಡಿಮೆಯೇನಲ್ಲ. ಅಂದ ಮೇಲೆ ನಮ್ಮ ಪ್ರಥಮ ಕರ್ತವ್ಯವೆಂದರೆ, ಮಾಲಿನ್ಯದ ಮುಖ್ಯ ಮೂಲಗಳನ್ನು ಗುರುತಿಸುವುದೇ ಆಗಿದೆ.

ಮೊತ್ತಮೊದಲು, ಸುಸ್ಪಷ್ಟ ದೂಷಕಗಳೆಂದರೆ ಕಾರಖಾನೆಗಳು. ಇವು ವಿಷಯುಕ್ತ ರಾಸಾಯನಿಕಗಳನ್ನು ನದಿ – ಸರೋವರಗಳಲ್ಲಿ ಹರಿಬಿಡುತ್ತವೆ. ಮತ್ತು ಮಿಲಿಯನ್ ಟನ್ನುಗಟ್ಟಳೆ ಮಾಲಿನ್ಯಕಾರಕಗಳನ್ನು ಹವೆಯಲ್ಲಿ ವಿಸರ್ಜಿಸುತ್ತವೆ. ಎರಡನೆಯದಾಗಿ, ನೀರಿನಲ್ಲಿ ಬೆರೆಯುವ ಆಮ್ಲಜನಕ ಡಿಟರ್ಜಂಟುಗಳನ್ನು ಬಳಸುವ ಬಳಕೆದಾರರುಂಟು ಮತ್ತು ಹವೆಯನ್ನು ವಿಷಯುಕ್ತ ಮಾಡುವ ಮೋಟರ ವಾಹನಗಳುಂಟು. ಕೊನೆಯದಾಗಿ, ವ್ಯಪಹಾರಸ್ಥರು ಹಾಗೂ ಗ್ರಾಹಕರು, ಏಕ ರೀತಿಯಲ್ಲಿ ಬಳಸಿ ಚೆಲ್ಲುವ ರದ್ದಿ ಪದಾರ್ಥಗಳು ಕೋಟ್ಯಂತರ ಟನ್ನುಗಳಷ್ಟಾಗುತ್ತದೆ. ಇದನ್ನು ಕೂಡಿ ಹಾಕಲು ಜಾಗೆಯನ್ನು ಹುಡುಕಬೇಕು. ಗಟಾರಗಳ ಮೂಲಕ ಈ ರದ್ದಿಯ ಕೆಲವು ಭಾಗವು ಕುಡಿಯುವ ನೀರಿನಲ್ಲಿ ಸೇರುತ್ತದೆ.

ಜೀವನವೇ ಮಾಲಿನ್ಯವನ್ನು ಸೃಷ್ಟಿಸುವುದೆಂದ ಮೇಲೆ, ಸಮಾಜವು ಆ ಕುರಿತು ಏನಾದರೂ ಮಾಡುತ್ತಿಲ್ಲವೇಕೆ? ವಿವಿಧ ಸಂಸ್ಥೆಗಳು ವಿವಿಧ ದೇಶಗಳಲ್ಲಿ ಇದಕ್ಕೆ ಕಾರಣೀಭೂತವಾಗಿವೆ.

ಬಂಡವಾಳವಾದೀ ಸಮಾಜದಲ್ಲಿ ಮಾಲಿನ್ಯದ ಪ್ರಮುಖ ಕಾರಣವೆಂದರೆ, ಖಾಸಗಿ ಆಸ್ತಿಯ ರಚನೆ ಹಾಗೂ ಅದರೊಂದಿಗಿರುವ ಲಾಭಹೇತು. ಇಲ್ಲಿ ಸಣ್ಣ ವ್ಯವಹಾರವೇ ಇರಲಿ, ದೊಡ್ಡ ವ್ಯವಹಾರವೇ ಇರಲಿ; ಏಕೈಕ ಆಸ್ಥೆಯೆಂದರೆ ಗರಿಷ್ಠ ಲಾಭ. ಹೊಳೆ ಹಳ್ಳಗಳಲ್ಲಿ ರಾಸಾಯನಿಕಗಳನ್ನು ವಿಸರ್ಜಿಸುವುದರಿಂದ ಕುಡಿಯುವ ನೀರು ವಿಷಮಯವಾಗುವುದು, ಹವೆಯು ಮಲಿನವಾಗುವುದು. ಇಲ್ಲವೆ ಸಾರ್ವಜನಿಕ ಆರೋಗ್ಯವು ಕೆಡುವುದು. ಅದರ ಗೊಡವೆಯೇ ಅವರಿಗಿಲ್ಲ, ಪ್ರಪಂಚಾದ್ಯಂತ ಖಾಸಗಿ ಉದ್ಯಮಗಳಿಂದ ಘಟಿಸುವ ಮಾಲಿನ್ಯಕಾರಕ ಕ್ರಿಯೆಗಳನ್ನು ದಾಖಲಿಸುವುದು ನನ್ನ ಕಾರ್ಯವಲ್ಲ. ಈ ದಿಶೆಯಲ್ಲಿ ಸಾಕ್ಷ್ಯಾಧಾರಗಳು ತುಂಬಿ ತುಳುಕುತ್ತಿವೆ. ಸಂಯುಕ್ತ ಸಂಸ್ಥಾನದ 'ಥ್ರೀ ಮೈಲ ಐಲಂಡ್' ದಲ್ಲಿ ಆ ಅಣುಸ್ಥಾವರದ ಅಪಘಾತವು ಸಾರ್ವಜನಿಕ ಕಲ್ಯಾಣವನ್ನು ನಿರ್ಲಕ್ಷಿಸುವಲ್ಲಿ ಖಾಸಗಿ ಲೋಭವು ಎಲ್ಲಿಯವರೆಗೆ ಹೋಗಬಹುದೆಂಬುದಕ್ಕೆ ತೀರ ಇತ್ತೀಚಿನ ನಿದರ್ಶನವಾಗಿದೆ. ಪ್ರಾರಂಭದಲ್ಲಿಯೇ ಈ ಅಣುಸ್ಥಾವರವು ಸುರಕ್ಷಿತವಲ್ಲವೆಂಬ ಬಗ್ಗೆ ಹೆಚ್ಚು ಹೆಚ್ಚು ಸಾಕ್ಷ್ಯಾಧಾರ ಗಳಿದ್ದವು. ಆದರೆ, ಕೆಲ ಕರ ಸೌಲಭ್ಯ ಪಡೆಯಲು ಅದನ್ನು ಆರಂಭಿಸಲಾಯಿತು. ವಿದ್ಯುತ್ ಉಪಯೋಗ ಆ ಸ್ಥಾವರದ ಸ್ಥಾಪನೆಯ ಹಿಂದಿನ ಉದ್ದೇಶವಾಗಿತ್ತು. ಇದೊಂದು ಪ್ರತ್ಯೇಕ ನಿದರ್ಶನವಲ್ಲ. ಆದರೆ ಬಂಡವಾಳವಾದಿ ಸಂಸ್ಥೆಗಳ ಸಾಮಾನ್ಯ ಸ್ವರೂಪವಷ್ಟೇ.

ಸ್ಪರ್ಧಾತ್ಮಕ ಬಂಡವಾಳವಾದಿ ಪ್ರಪಂಚದಲ್ಲಿ ಮಾಲಿನ್ಯದ ಆಸ್ತಿತ್ವವನ್ನು ಸ್ಪಷ್ಟೀಕರಿಸುವುದು ಸ್ವಲ್ಪು ಕಠಿಣ. ಅಡ್ಯಾಮ್‌ಸ್ಮಿತ್‌ನ ಪೇಟೆಯ 'ಕಾಣದ ಕೈ' ಯ ಚಳಕದಿಂದ ಎಲ್ಲ ಸಮಸ್ಯೆಗಳನ್ನು ಬಂಡವಾಳ ವ್ಯವಸ್ಥೆಯು ಪರಿಹರಿಸಬಹುದೆಂಬ ಭಾವನೆಯಿದೆ. ಬಂಡವಾಳ ವಾದದ ನೀತಿಪಾಠಕರು, ಕನಿಷ್ಠ ಮಾಲಿನ್ಯದ ವಿಷಯದಲ್ಲಿಯಾದರೂ, ಪೇಟೆ ಯಂತ್ರವು ಸಾಕಷ್ಟು ಸುರಕ್ಷಿತತೆಗಳನ್ನು ಒದಗಿಸುವುದಿಲ್ಲವೆಂಬುದನ್ನು ಈಗ ಒಪ್ಪುತ್ತಾರೆ. ಅವರ ಸ್ಪಷ್ಟೀಕರಣ ಹೀಗೆ: ಉತ್ಪಾದಕನು ಎಲ್ಲ ಸರಳ ಸಂಪನ್ಮೂಲ ಬಳಕೆಯಲ್ಲಿ ಮಿತವ್ಯಯ ಮಾಡುತ್ತಾನೆ. ಏಕೆಂದರೆ ಅವನು ಅವುಗಳಿಗಾಗಿ ಬೆಲೆ ತೆತ್ತಬೇಕಾಗುತ್ತದೆ. ಆದರೆ, ನೀರು ಮತ್ತು ಗಾಳಿಗಳು ಸಾರ್ವಜನಿಕ ಆಸ್ತಿಯಾಗಿವೆ. ಹಾಗಾಗಿ ಮುಕ್ತವಾಗಿವೆ. ಅವುಗಳ ಬಳಕೆ ಮತ್ತು ವಿನಿಯೋಗ ದಿಂದ ಅವುಗಳಿಗೆ ಕ್ಷಯವಿಲ್ಲ. ಆದ್ದರಿಂದ ಉತ್ಪಾದಕನು ಅವುಗಳನ್ನು ಬೇಕಾಬಿಟ್ಟಿಯಾಗಿ ಬಳಸುತ್ತಾನೆ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಅವುಗಳನ್ನು ದುರುಪಯೋಗಿಸುತ್ತಾನೆ. ಖಾಸಗಿ ಲೆಕ್ಕಾಚಾರದಲ್ಲಿ ಬಾರದ ಇಂಥ ಸಾಮಾಜಿಕ ವೆಚ್ಚಗಳನ್ನು ಅರ್ಥಶಾಸ್ತ್ರಜ್ಞರು ಆರ್ಥಿಕ ವಿದೂರ ಇಲ್ಲವೆ ಆರ್ಥಿಕ ವಿಹೀನ ಎಂದು ಬಣ್ಣಿಸುತ್ತಾರೆ. ಇಂಥ ಆರ್ಥೇತರಗಳು ತುಲನಾತ್ಮಕವಾಗಿ ಮಹತ್ವಹೀನಗಳೆಂದು ಮತ್ತು ಹೆಚ್ಚಿನ ಸಮಸ್ಯೆ ಇಲ್ಲದೆ ಕಾಳಜಿ ತೆಗೆದುಕೊಳ್ಳ ಬಲ್ಲಂಥವೆಂದೂ ಪ್ರತಿಪಾದಿಸುತ್ತಾರೆ.

ಮಾಲಿನ್ಯ ಸಮಸ್ಯೆಯನ್ನು ಪರಿಹರಿಸಲು ಗಾಳಿ ಮತ್ತು ನೀರುಗಳನ್ನು ಖಾಸಗೀ ವಲಯಗಳಲ್ಲಿ ವಿಭಾಗಿಸುವ ಮಟ್ಟಿಗೆ ಬಂಡವಾಳವಾದದ ಪ್ರತಿಪಾದಕರು ಭ್ರಾಂತರಾಗಿದ್ದಾರೆ.

ಗಾಳಿ ಮತ್ತು ನೀರುಗಳನ್ನು ಒಮ್ಮೆ ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿದರೆ, ಜನರು ಅವುಗಳನ್ನು ಪೇಟೆಯಲ್ಲಿ ಖರೀದಿಸಲೂಬಹುದು; ಮಾರಲೂಬಹುದು. ಈಗ ಅವುಗಳನ್ನು ಮಾಲಿನ್ಯ ಮಾಡಲು ಬಳಸುವವರು ಒಂದೆಡೆ ಹಾಗೂ ತಮ್ಮ ಉಪಜೀವನಕ್ಕಾಗಿ, ಉಸಿರಾಟಕ್ಕಾಗಿ ಬಳಸುವವರು ಇನ್ನೊಂದೆಡೆ ಉಳಿಯುತ್ತಾರೆ. ಆಗ ಉತ್ಪಾದಕನು ಮಲಿನ ಮಾಡುವ ತನ್ನ ಹಕ್ಕು ಪಡೆಯಲು ಹಣ ನೀಡುತ್ತಾನೆ. ಈ ಬಾಬು ಅವನ ವೆಚ್ಚದ ಲೆಕ್ಕಕ್ಕೆ ಸೇರುತ್ತದೆ. ಇದರಿಂದಾಗಿ ಅವನ ಕೇವಲ ಲಾಭಹೇತುವು ಮಾಲಿನ್ಯ ಹರಡುವಂಥ ಗಾಳಿ ಮತ್ತು ನೀರುಗಳ ಬಳಕೆಯಲ್ಲಿಯೂ ಮಿತವ್ಯಯ ಸಾಧಿಸಲು ಪ್ರೇರಿಸುತ್ತದೆ.

ಬಂಡವಾಳವಾದದ ಬೆಂಬಲಿಗರಿಗೆ ಖಾಸಗಿ ಆಸ್ತಿಯು ಎಷ್ಟೊಂದು ಪಾವನ ತಮವಾಗಿದೆಯೆಂದರೆ, ತಮ್ಮ ಪರಿಹಾರಗಳು ನಗೆಪಾಟಲಿಗೀಡಾಗುವಂಬ ಪರಿವೆಯೇ ಅವರಿಗಿಲ್ಲ. ಕೆಲವು ಆಸ್ತಿಗಳು ಸಾರ್ವಜನಿಕ ಮತ್ತೆ ಕೆಲವು ಖಾಸಗಿ ಆಗಿದ್ದರೆ ಸಮಸ್ಯೆಗಳೇಳು ವುದರಿಂದ ಎಲ್ಲ ಸಂಪನ್ಮೂಲಗಳನ್ನೂ ಖಾಸಗಿ ಒಡೆತನದಲ್ಲಿ ತರಬೇಕೆಂಬುದು ಅವರು ಸೂಚಿಸುವ ಪರಿಹಾರ. ಗಾಳಿ ಮತ್ತು ನೀರುಗಳು ನಿಸರ್ಗ ನಿಯಮಾನುಸಾರ ಅವಿಭಾಜ್ಯವಲ್ಲ ವೆಂಬ ಗೊಡವೆಯೂ ಅವರಿಗಿಲ್ಲ. ಕೆಲವೊಂದು ಪ್ರದೇಶದ ಗಾಳಿ ಮತ್ತು ನೀರುಗಳ ಸ್ಪರ್ಧಾತ್ಮಕ ಒಡೆಯನೊಬ್ಬನು ಒಂದುದಿನ ಏಕಸ್ವಾಮ್ಯ ಚಲಾಯಿಸಿದರೆ ಮುಂದೇನು ? ಆಗ ಉಸಿರಾಟವೂ ಕೂಡ ಶುಂಬಾ ದುಬಾರಿಯಾದೀತು. ನೀರು ಹಾಗೂ ಗಾಳಿಗಳನ್ನು ಬಳಸುವ ನಮ್ಮ ಹಕ್ಕು ಸಹ ಆಗ ನಮ್ಮ ಆದಾಯವನ್ನು ಅವಲಂಬಿಸುತ್ತದೆ.

ಮೇಲಿನ ಸೂಚನೆಯಷ್ಟು ಹಾಸ್ಯಸ್ಪದವಲ್ಲವಾದರೂ ಇನ್ನೊಂದು ಪರಿಹಾರ ಹೀಗಿದೆ. ಸರಕಾರವೇ ಮಾಲಿನ್ಯದ ಕೇಡಿಗಾಗಿ ಮಾಲಿನ್ಯಕಾರಕನ ಮೇಲೆ ಕರ ಹೇರಬೇಕು. ಇಲ್ಲವೆ ಮಲಿನ – ದೂರತೆಯ ಒಪ್ಪಂದಕ್ಕಾಗಿ ಅವನಿಗೆ ಸಹಾಯಧನ ನೀಡಬೇಕು.

ಲಾಭ ಮೂಲ ವ್ಯವಸ್ಥೆಯಲ್ಲಿ ಇವು ಯಾವವೂ ಕೆಲಸ ಮಾಡವು. ಕಾರಣವಿಷ್ಟೇ: ಮಾಲಿನ್ಯ ದೂರವು ಇಡೀ ಸಮಾಜಕ್ಕೆ ಹಿತಕಾರಿ. ಆದರೆ ಅದರಿಂದ ಖಾಸಗಿ ಲಾಭವೇನೂ ಬಾರದು. ಅಂದ ಮೇಲೆ ವ್ಯವಹಾರಸ್ಥರೇಕೆ ಮಾಲಿನ್ಯ ನಿವಾರಣೆಯ ಗೊಡವೆಗೆ ಹೋಗಬೇಕು? ಮೇಲಾಗಿ ಬಂಡವಾಳವಾದದ ಏಕಸ್ವಾಮ್ಯದಲ್ಲಿ ಕರದಿಂದ ಉದ್ಭೂತವಾದ ಮಾಲಿನ್ಯ ವೆಚ್ಚಗಳನ್ನು ಸುಲಭವಾಗಿ ಬಳಕೆದಾರರ ತಲೆಗೆ ಕಟ್ಟಬಹುದಾಗಿದೆ. ಗರಿಷ್ಠ ಬೆಲೆ ಹಾಗೂ ಬದಲಾಗದ ಮಾಲಿನ್ಯಗಳಿಂದ ಬಳಕೆದಾರನು ಎರಡು ಪಟ್ಟು ಫಾಸಿಗೊಳ್ಳುವನು. ಗರಿಷ್ಠ ಬೆಲೆಗಳು ಮತ್ತು ಬದಲಾಗದ ಮಾಲಿನ್ಯ. ಕೊನೆಗೆ, ಸರಕಾರವನ್ನು ವ್ಯವಹಾರಸ್ಥರೇ ನಿಯಂತ್ರಿಸುವರು. ಅಂದಮೇಲೆ ಕರ ಹೇರಿ ವಸೂಲ ಮಾಡುವವರಾರು?

ಈಗ ಸಾಮ್ಯವಾದಿ ರಾಷ್ಟ್ರಗಳ ಕೇಂದ್ರೀಕೃತ ಯೋಜನಾಬದ್ಧ ಅರ್ಥ ವ್ಯವಸ್ಥೆಯಲ್ಲಿ ಪರಿಸರದ ಗೀಳನ್ನು ಕುರಿತು ವಿಶ್ಲೇಷಿಸುವಾ : ಅಲ್ಲಿ ಬಂಡವಾಳವಾದಿ ಲೋಭದ ಪ್ರಶ್ನೆ ಇಲ್ಲ. ಇಡೀ ಸಮಾಜಕ್ಕೋಸುಗ ಯೋಜನೆ ರೂಪಿಸುವ ಯೋಜನಾಕರ್ತನು ವಿಭಿನ್ನ ಪ್ರಕಲ್ಪಗಳ ವೆಚ್ಚವನ್ನು ಲೆಕ್ಕ ಹಾಕುವಾಗ ಮಾಲಿನ್ಯದ ಕೇಡನ್ನೂ ಪರಿಗಣಿಸಬೇಕಾಗುವುದು. ಆದರೆ ಅವನು ಹಾಗೆ

ಮಾಡಿಲ್ಲ; ಮಾಡುತ್ತಿಲ್ಲ. ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಒಂದು ಸರೋವರವು ಮಲಿನವಾಗಿದ್ದರೆ, ಸೋವಿಯತ್ ರಶಿಯಾದಲ್ಲಿ ಸಹ ಒಂದು ಸರೋವರವು ಮಲಿನ ವಾಗಿರುತ್ತದೆ. ಅಮೇರಿಕೆಯಲ್ಲಿ ಕಪ್ಪೆಟ್ಟ ಪ್ರತಿ ಕಡಲು ತೀರಕ್ಕೆ ಸಮನಾಗಿ ರಶಿಯಾದಲ್ಲಿಯೂ ಅಂಥದನ್ನು ನೀವು ಕಾಣಬಲ್ಲಿರಿ. ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಪ್ರತಿ ಅಣು ವಿಕಿರಣದ ಮಾತ್ರೆಗೆ (Dose) ಎಣೆಯಾಗಿ ಪೌರ್ವಾತ್ಯ ರಾಷ್ಟ್ರಗಳಲ್ಲಿಯೂ ಒಂದು ಅಣುವಿಕಿರಣ ಮಾತ್ರೆಯನ್ನು ಕಾಣಬಹುದು. ಮಾಲಿನ್ಯ ಸಮಸ್ಯೆಗಳು ಸಾಮ್ಯವಾದಿ ರಾಷ್ಟ್ರಗಳಲ್ಲಿ ಓಲಾಡುವಂತೆ ಬಂಡವಾಳವಾದಿ ರಾಷ್ಟ್ರಗಳಲ್ಲಿಯೂ ಇವೆ. ಚೆರ್ನೋಬಿಲ್‌ದಲ್ಲಿ ಆದ ಅಣುಸ್ಥಾವರ ಅಪಘಾತ ಇದುವರೆಗೆ ದಾಖಲಾದವುಗಳಲ್ಲಿಯೇ ಭಯಾನಕವಾದುದು.

ಮಾಲಿನ್ಯದ ಕಾರಣಗಳು ಇತರತ್ರ ಇರುವಂತೆಯೇ ರಶಿಯಾದಲ್ಲಿಯೂ ಇವೆ. ಸೋವಿಯತ್ ಉದ್ದಿಮೆಯು ಸಹ ಕೇವಲ ಶ್ರಮ ಉಪಕರಣ ಮತ್ತು ಕಚ್ಚಾಮಾಲಿನ ವೆಚ್ಚಗಳನ್ನು ಮಾತ್ರ ಭರಿಸುತ್ತಿದೆಯೇ ಹೊರತು ಹವೆ ಮತ್ತು ನೀರುಗಳ ದೂಷಣೆಯಿಂದ ತಗಲುವ ಸಾಮಾಜಿಕ ವೆಚ್ಚಗಳನ್ನಲ್ಲ ರಸಿಯಾದಲ್ಲಿ ಭೌತಿಕೇತರ ಸಂಪನ್ಮೂಲಗಳನ್ನು ಸಹ ಮುಕ್ತ ವೆಂದು ಪರಿಗಣಿಸಲಾಗಿದೆ. ಅಲ್ಲಿ ಉತ್ಪಾದನೆಗೆ ಲಾಭ ಹೇತುವಿಲ್ಲ. ಆದರೆ ಸರಕಾರದ ಬೇಳೆ ಬೇಯಿಸಿಕೊಳ್ಳುವಿಕೆಯೇ ಹೇತುವಾಗಿದೆ. ಹೀಗಾಗಿ ಪರಿಣಾಮ ಮಾತ್ರ ಒಂದೇ. ಅಲ್ಲಿಯೂ ಸಹ ಸಮಾಜಕಲ್ಯಾಣ ವಿಷಯಗಳು ಬಂಡವಾಳವಾದಿ ಅರ್ಥವ್ಯವಸ್ಥೆಯಲ್ಲಿ ಇರುವಂತೆಯೇ ಇವೆ. ಮೇಲಾಗಿ, ರಶಿಯಾದಲ್ಲಿಯ ಸರಕಾರಿ ಅಧಿಕಾರಿಗಳಿಗೆ ಅವರ ಪ್ರದೇಶಾಭಿವೃದ್ಧಿಯ ಗತಿಯ ಮೇಲೆ ಪುರಸ್ಕಾರ ನೀಡಲಾಗುವುದು. ಏನೇ ಆಗಲಿ, ಸರಕಾರಿ ಅಧಿಕಾರಿಗಳು ಬೆಳವಣಿಗೆ ಮತ್ತು ಔದ್ಯೋಗೀಕರಣಗಳನ್ನು ಪುರಸ್ಕರಿಸುತ್ತಾರೆ. ಅವರು ಮಾಲಿನ್ಯ ನಿಯಂತ್ರಣಕ್ಕಾಗಿ ಹಣ ವ್ಯಯಿಸುವುದಿಲ್ಲ. ಏಕೆಂದರೆ, ಹಾಗೆ ಮಾಡುವುದು ಸರಕು ಉತ್ಪಾದನೆಯಿಂದ ಬೇರೆಡೆಗೆ ಹಣವನ್ನು ಹೊರಳಿಸಿದಂತಾಗುತ್ತದೆ. ಅದರಿಂದ ಬೆಳವಣಿಗೆಯು ಇಳಿಮುಖವಾಗುತ್ತದೆ. ಸಾಮ್ಯವಾದಿ ರಾಷ್ಟ್ರಗಳಲ್ಲಿ ಎಲ್ಲಿಯವರೆಗೆ ಸಂಪನ್ಮೂಲಗಳ ಹಂಚಿಕೆಗೆ ಜನಕಲ್ಯಾಣಕ್ಕಿಂತ ಸರಕಾರದ ಕಲ್ಯಾಣವು ಮಾರ್ಗದರ್ಶಿಯಾಗಿದೆಯೇ, ಅಲ್ಲಿಯವರೆಗೆ ಮಾಲಿನ್ಯ ನಿಯಂತ್ರಣವು ಕನಸಿನ ಮಾತೇ ಸರಿ.

ಪರಿಸರದ ಅಪಕರ್ಷವು ವಿಚಾರಾದರ್ಶಗಳ ಬಿಂಬದಾಚೆಗೆ ವಿಸ್ತರಿಸುತ್ತದೆ. ಬೇರೆ ಕಾರಣಗಳಿಂದಾಗಿ ಅದು ಆನಭಿವೃದ್ಧ ಅರ್ಥವ್ಯವಸ್ಥೆಗಳನ್ನು ಸಹ ಬಾಧಿಸುತ್ತದೆ. ಅಲ್ಲಿಯ ಮುಖ್ಯ ಕಾರಣವೇ ಬಡತನ. ಭಾರತದಲ್ಲಿಯ ಬೀದಿಗಳು ಹೊಲಸಾಗಿವೆ. ಏಕೆಂದರೆ ಅವುಗಳನ್ನು ಹಸನವಾಗಿಡಲು ಹಣವಿಲ್ಲ. ನೀರು ರಾಡಿಯಾಗಿದೆ. ಮತ್ತು ಕುಡಿಯಲು ಯೋಗ್ಯವಾಗಿಲ್ಲ. ಏಕೆಂದರೆ ಅದನ್ನು ಶುದ್ಧೀಕರಿಸಲು ಹಣದ ಅಭಾವವಿದೆ. ಇವುಗಳಲ್ಲದೆ, ಭಾರತವೂ ಸಹ ಬಂಡವಾಳವಾದಿ ಹಾಗೂ ಸಾಮ್ಯವಾದಿ ಅರ್ಥ ವ್ಯವಸ್ಥೆಗಳ ಹಾದಿಯಲ್ಲಿ ಔದ್ಯೋಗೀಕರಣವನ್ನು ಅನುಸರಿಸಿದೆ. ಮುಂಬಯಿಯ ಮೇಲಿರುವ ಹೊಗ ಮೋಡಗಳೇ ಲಾಸ್‌ಎಂಜಿಲ್ಸ್, ಟೋಕಿಯೋ, ಮಾಸ್ಕೋ ಮತ್ತು ಲಂಡನಗಳ ಮೇಲೂ ಇವೆ. ಇಂದು ಸಂಯುಕ್ತ ಸಂಸ್ಥಾನದಲ್ಲಾದರೂ ಸ್ವಯಂ ಚಾಲಕಗಳ ಹೊಗೆಯು ಮುಂಚಿಗಿಂತ ಕಡಿಮೆ ವಿಷಯುತವಾಗಿದೆ. ಏಕೆಂದರೆ ಪರಿವರ್ತಕಗಳನ್ನು

ವ್ಯಾಪಕವಾಗಿ ಬಳಸಲಾಗುತ್ತದೆ. ಅಪೂರ್ಣ ಔದ್ಯೋಗೀಕರಣವಾದ ಭಾರತ, ಕೋರಿಯಾ, ತೈವಾನ್, ಚೀನ, ಮತ್ತಿತರ ದೇಶಗಳಲ್ಲಿ ಹಾಗಾಗಿಲ್ಲ. ಈ ದೇಶಗಳು ತಮ್ಮಲ್ಲಿಯ ಪರಿಸರವನ್ನು ಹಸನುಗೊಳಿಸಲುಬೇಕಾದ ಸಂಪತ್ತು ಹೊಂದಿಲ್ಲ. ಇದುವರೆಗೆ ನಾವು ಪ್ರಪಂಚಾದ್ಯಂತ ಪರಿಸರ – ಮಾಲಿನ್ಯದ ತೋರಿಕೆಯ ಕಾರಣಗಳನ್ನು ಕುರಿತು ಪರೀಕ್ಷಿಸಿದೆವು ಅದರ ಮೂಲ ಕಾರಣಗಳೇನು? ವಿದ್ವಜ್ಜನರಲ್ಲಿ ಈ ಬಗ್ಗೆ ಮೇಲೆ ತೋರುವುದಕ್ಕಿಂತ ಕಡಿಮೆ ಸಹಮತವಿದೆ.

ಪರಿಸರಾತ್ಮಕ ಕೇಡು ನಿಜವಾದುದೆಂಬ ಬಗ್ಗೆ ವಾದವಿವಾದಗಳಿಲ್ಲ. ವಿವಾದಗ್ರಸ್ತ ವಿಷಯವೆಂದರೆ ಅದರ ತೀವ್ರತೆ. ಮಾನವತೆಯು ತನ್ನ ಮೌಲ್ಯಗಳನ್ನು ಆಮೂಲಾಗ್ರ ಬದಲಿಸಬೇಕಾಗಿದೆಯೇ ಇಲ್ಲವೇ ಎಂಬುದು ಅಭಿವೃದ್ಧ ದೇಶಗಳಲ್ಲಿ ಪ್ರತಿಯೋರ್ವನು ಬಯಸುವ ಮತ್ತು ಅನಭಿವೃದ್ಧ ದೇಶಗಳಲ್ಲಿ ಪ್ರತಿಯೊಬ್ಬನೂ ಸಾಧಿಸಲೆಳಸುವ ಜೀವನ ರೀತಿಯನ್ನು ಬದಲಿಸಬೇಕಾಗಿದೆಯೇ ಇಲ್ಲವೇ? ಎಂಬುದು ಪರಿಸರಾತ್ಮಕ ವಿವಾದವು ಈ ಉಭಯ ಅತಿರೇಕಗಳಲ್ಲಿ ಧ್ರುವೀಕರಣ ಹೊಂದಿದೆ. ಒಂದೆಡೆ, ಇಲ್ಲಿ ದುರಂತವಿದೆ; ದಾಖಲಾದ ಇತಿಹಾಸದಲ್ಲಿಯೇ ಅಭೂತಪೂರ್ವ ಮಟ್ಟವನ್ನು ಅದು ತಲುಪಿದೆ. ಮತ್ತು ಸದ್ಯೋಭವಿಷ್ಯದಲ್ಲಿ ಪರಿಸರಾತ್ಮಕ ದುರಂತವನ್ನು ತಪ್ಪಿಸಲು ಅಭಿವೃದ್ಧ ದೇಶಗಳಲ್ಲಿ ನಾವು ಪ್ರಾಪಂಚಿಕ ಜೀವನ ರೀತಿಯನ್ನು ತುರ್ತಾಗಿ ಬದಲಿಸಿಕೊಳ್ಳಬೇಕು; ಎಂದು ವಾದಿಸುವವರಿದ್ದಾರೆ. ಇನ್ನೊಂದೆಡೆ, ಪರಿಸರಾತ್ಮಕ ಸಮಸ್ಯೆಯನ್ನು ಒಪ್ಪಿದರೂ ಸಹ ಅದು ದುರಂತವೇನಲ್ಲ; ಎಂದು ವಾದಿಸುವವರಿದ್ದಾರೆ. ನಿಜ; ತಂತ್ರಜ್ಞಾನದ ತಪ್ಪುಗಳನ್ನು ಈ ಮೊದಲು ಎಸಗಲಾಗಿದೆ. ಆದರೆ ಆಗಿಹೋದ ತಪ್ಪುಗಳನ್ನು ಸರಿಪಡಿಸಲೋಸುಗ ನೂತನ ತಂತ್ರಜ್ಞಾನವನ್ನು ಅಭಿವೃದ್ಧಪಡಿಸಬೇಕು. ಏನೇ ಇರಲಿ; ಮಾನವ ದೇಹ ಸಂರಚನೆಯು ತೀವ್ರವಾಗಿ ಬದಲಾಗುತ್ತಿರುವ ಪರಿಸರಗಳಿಗೆ ಹೊಂದಿಕೊಳ್ಳುವಷ್ಟು ಹಿನ್ನೆಗೆಯಬಲ್ಲುದು. ಮತ್ತು ನಾವು ಮಾಡಬೇಕಾದುದೆಂದರೆ, ನಮ್ಮ ಜೀವನವಿಧಾನವನ್ನು ಹೆಚ್ಚಾಗಿ ಬದಲಿಸದೆ, ಮಾಲಿನ್ಯವನ್ನು ತಡೆಗಟ್ಟಲು ಸಂಪನ್ಮೂಲಗಳ ಅಲ್ಪಾಂಶವನ್ನು ಅತ್ತ ತಿರುಗಿಸುವದಷ್ಟೇ.

ಇವೆರಡೂ ಅತಿರೇಕದ ಅಭಿಪ್ರಾಯಗಳು. ಮೊದಲನೆಯದರಲ್ಲಿ ಮಿದುವಾಗದ ನಿರಾಶಾವಾದವಿದೆ. ಎರಡನೆಯದರಲ್ಲಿ ಕಾವಲಿಲ್ಲದ ಆಶಾವಾದವಿದೆ. ತಂತ್ರಜ್ಞಾನವು ಏನನ್ನು ಸಾಧಿಸಬಹುದೆಂಬ ಅವರ ದೃಷ್ಟಿಕೋನದಿಂದ ಈ ತೀವ್ರ ಭಿನ್ನಾಭಿಪ್ರಾಯಗಳು ಉದ್ಭವಿಸಿವೆ.

ನಿರಾಶಾವಾದವು ತುಂಬಾ ಹಳೆಯದು. ಥಾಮಸ್ ರಾಬರ್ಟ್ ಮಾಲ್ಥಸ್‌ನು ಅದರ ಜನಕ. ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡದಿಂದ ಉದ್ಭೂತವಾಗುವ ಮುಂಬರುವ ದುರಂತ ಕುರಿತು ಭವಿಷ್ಯ ನುಡಿದು ಅವನು ತನ್ನ ಸಮಕಾಲೀನರನ್ನು ಎಚ್ಚರಿಸಿದನು. ಆಹಾರ ಪೂರೈಕೆಯು ಗಣಿತೀಯ ಶ್ರೇಣಿಯಲ್ಲಿ ಬೆಳೆದರೆ, ಜನಸಂಖ್ಯೆಯಾದರೋ ಹೆಚ್ಚು ತೀವ್ರವಾದ ಜಾಮಿತೀಯ ಶ್ರೇಣಿಯಲ್ಲಿ ಬೆಳೆಯುತ್ತದೆ. ಆದ್ದರಿಂದ ಒಂದುವೇಳೆ ಐಚ್ಛಿಕ ಅಥವಾ 'ನೈತಿಕ' ಸಂಯಮವಿರದಿದ್ದರೆ, ಯುದ್ಧಗಳು, ದುರ್ಭಿಕ್ಷಗಳು ಮತ್ತು ರೋಗ ರುಜಿನುಗಳು ಹರಡಿ ಜನಸಂಖ್ಯೆಯನ್ನು ನಿಯಂತ್ರಿಸುತ್ತವೆ.

ಮಾಲ್ಥಸ ತನ್ನ ಪ್ರಬಂಧವನ್ನು 1798 ರಲ್ಲಿ ಬರೆದನು. ಅಂದಿನಿಂದ ಅದ ವೈಜ್ಞಾನಿಕ ಬೆಳವಣಿಗೆಗಳು ಅವನ ವಾದವನ್ನು ತಪ್ಪೆಂದು ಸಿದ್ಧಪಡಿಸಿವೆ. ಜನಸಂಖ್ಯೆಯು ಅವನು ಹೇಳಿದ ಹಾಗೆ ಬೆಳೆದಿದೆ. ಆದರೆ ಆಹಾರ ಪೂರೈಕೆಯೂ ಸಹ ಅದರೊಂದಿಗೆ ಹೆಚ್ಚಿ ಹಾಕಿದೆ. ಇದರ ಪರಿಣಾಮವಾಗಿ, 20 ನೇಯ ಶತಮಾನದಲ್ಲಿ ವಿಶ್ವವ್ಯಾಪಿ ಬರಗಾಲ ಬಿದ್ದಿಲ್ಲ.

ಮಾಲ್ಥಸ್‌ನನ್ನೂ ಹಾಗೂ ಮಾನವ ಜಾತಿ ಕುರಿತು ಅವನು ತಳೆದ ಅನವಶ್ಯಕ ನಿರಾಶಾವಾದವನ್ನು ಹೀಗಳೆಯುವುದು ವಿದ್ವಜ್ಜನರಲ್ಲಿ ಒಂದು ಫ್ಯಾಶನ್ನೇ ಆಗಿದೆ. ಆದರೆ 1960 ರ ದಶಕದಿಂದೀಚೆಗೆ ಬೆಳೆಯುತ್ತಿರುವ ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ತೀರುವಳಿಯ ಬಗ್ಗೆ ಎಚ್ಚರಿಕೆಯನ್ನು ವ್ಯಕ್ತಪಡಿಸುವ ಲೇಖಕರಿಂದ ಅವನು ಪುರ್ನನೆಲೆ ಕಂಡಿದ್ದಾನೆ. ಬ್ಯಾರಿ ಕಾಮನರ, ಪಾಲ ನಿಹರ್ಲಿಶ ಮತ್ತು ಎಝ್ರಾ ಮಿಶಾನ ಅವರು ನವ ಮಾಲ್ಥಸ ಪರರಲ್ಲಿ ಅಗ್ರಗಣ್ಯರಾಗಿದ್ದಾರೆ. ಕಳೆದ 75 ವರ್ಷಗಳಲ್ಲಿ ಬಳಸಿದ ತಂತ್ರಜ್ಞಾನಗಳು ದೋಷ ಪೂರ್ಣವಾಗಿವೆ. ಸಾರ್ವಜನಿಕರ ಗಮನಕ್ಕೆ ಬಾರದಂತೆ ಅವು ಅಪಾಯಕರ ಮಲ ವಿಸರ್ಜನೆ ಮಾಡುತ್ತಿವೆ. ಪರಿಸರಾವರಣದಲ್ಲಿ ಅವುಗಳ ಸಂಕಲಿತ ಪರಿಣಾಮವು ನಮ್ಮ ಜೀವನಾಧಾರದ ವ್ಯವಸ್ಥೆಯನ್ನು ಸಂಕಟಗ್ರಸ್ತವಾಗಿಸಿದೆ. ಇದರ ಪರಿಣಾಮವಾಗಿ ನಾವು ಈಗಾಗಲೇ ಘಟಿಸಿದ ಕೇಡಿನ ಬಗ್ಗೆ ಕಾಳಜಿ ವಹಿಸಬೇಕು. ಮತ್ತು ಮಾಲಿನ್ಯವನ್ನು ನಿಯಂತ್ರಣದಲ್ಲಿರಿಸುವ ತಾಂತ್ರಿಕತೆಗಳ ಬಳಕೆ ಮಾಡಬೇಕು. ಇಂದಿನ ತಾಂತ್ರಿಕತೆಯು ಆರ್ಥಿಕವಾಗಿ ಯಶಸ್ವಿಯಾಗಿದೆ ನಿಜ. ಆದರೆ ಅದೊಂದು ಪರಿಸರಾತ್ಮಕ ಸೋಲು. (4)

ಎಹ್ರಲಿಶ್ ತನ್ನ ಪತ್ನಿಯ ಜೊತೆಗೂಡಿ ಬರೆದ ಪುಸ್ತಕದಲ್ಲಿ "ಪರಿಸರಾತ್ಮಕ ಅಧಃಪತನದ ಮೂಲ ಕಾರಣವು ಜನಸಂಖ್ಯೆಯ ಬೆಳವಣಿಗೆಯೇ ವಿನಾ ತಾಂತ್ರಿಕತೆಯಲ್ಲ" ಎಂದು ಬರೆದಿದ್ದಾನೆ. ಎಹ್ರಲಿಶ್ ದಂಪತಿಗಳು ಇನ್ನಿತರ ಸಮಸ್ಯೆಗಳಾದ ಬಡತನ, ಜನಾಂಗೀಯ ಕಿತ್ತಾಟ, ಶಕ್ತಿ, ಮತ್ತು ನಗರ ಪ್ರದೇಶದ ರೋಗ ಇತ್ಯಾದಿಗಳನ್ನು ಜನಸಂಖ್ಯೆ ನಿಯಂತ್ರಣವಲ್ಲದೇ ಗುಣಪಡಿಸಲಾಗದೆಂದು ಅವರು ವಾದಿಸುತ್ತಾರೆ.

ಕಾಮನರ ಮತ್ತು ಎಹ್ರಲಿಶ್ ಅವರು ಅನುಕ್ರಮವಾಗಿ ಪರಿಸರಾತ್ಮಕ ಮಾಲಿನ್ಯವನ್ನು ದೋಷಪೂರ್ಣ ತಾಂತ್ರಿಕತೆ ಹಾಗೂ ಜನಸಂಖ್ಯೆ ಒತ್ತಡಗಳಿಗೆ ಆರೋಪಿಸುತ್ತಾರೆ. ಮಿಶಾನನು ಆರ್ಥಿಕ ಬೆಳವಣಿಗೆಗಾಗಿ ಪ್ರಪಂಚಾದ್ಯಂತ ಇರುವ ಅತ್ಯುತ್ಸಾಹದ ಕಾರಣ ಅದನ್ನು ತೆಗಳುತ್ತಾನೆ. ಅವನ ಮೇರೆಗೆ ಸಮಾಜ ಕಲ್ಯಾಣವು ಒಟ್ಟು ರಾಷ್ಟ್ರೀಯ ಉತ್ಪಾದನೆಗಾಗಲಿ ಇಲ್ಲವೆ ಹೊಸ ಉಪಕರಣಗಳ ಮುಖಾಂತರ ಗ್ರಾಹಕನ ಆಯ್ಕೆಯ ವಿಸ್ತಾರಕ್ಕಾಗಲಿ ವಿಶೇಷವಾಗಿ ಸಂಬಂಧಿಸಿಲ್ಲ. ಸಮೃದ್ಧ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಯ ವೆಚ್ಚಗಳು ಹಿತಕಾರಕ ಪರಿಣಾಮಗಳಿಗಿಂತ ತೀರ ಹೆಚ್ಚಾಗಿರುತ್ತವೆ. ಇನ್ನಿತರ ಮೌಲ್ಯಗಳನ್ನು ಬಲಿಗೊಟ್ಟು ಎಡೆಬಿಡದೆ ತಂತ್ರಜ್ಞಾನವನ್ನು ಬೆಂಬತ್ತುವುದು, ಈ ಆರ್ಥಿಕ ಬೆಳವಣಿಗೆಯ ತೀರ ಹುಚ್ಚಿನ ಅಭಿವ್ಯಕ್ತಿ ಮಾತ್ರ.

ಮಿಶಾನನು ಅಭಿವೃದ್ಧ ದೇಶದಲ್ಲಿ ಸಂತತ ಬೆಳವಣಿಗೆಯ ಅಗತ್ಯವನ್ನೇ ಪ್ರಶ್ನಿಸಿದ್ದಾನೆ. ಇತ್ತ ರೋಮರ ಕ್ಲಬ್ ಗೆಳೆಯರೆಂದು ಗುರುತಿಸಿಕೊಳ್ಳುವ ವಿದ್ವಜ್ಜನರ ಒಂದು ಅಂತಾರಾಷ್ಟ್ರೀಯ ಗುಂಪು ಸತತ ಬೆಳವಣಿಗೆಯನ್ನು ತಾಳಿಕೊಳ್ಳುವ ಪೃಥ್ವಿಯ ಸಾಮರ್ಥ್ಯವನ್ನೇ ಪ್ರಶ್ನಿಸಿದೆ. ಅರಲಿಯೋ ಪೆಕ್ಕೀಯವರ ಅಧ್ಯಕ್ಷತೆಯ ಈ ಕ್ಲಬ್ಬು, 'ಬೆಳವಣಿಗೆಯ ಮಿತಿಗಳು' (ಲಿಮಿಟ್ಸ್ ಟೂ ಗ್ರೋತ್) ಎಂಬ ವರದಿ ಶೀರ್ಷಿಕೆಯೇ ಎಲ್ಲ ಕತೆ ಹೇಳುತ್ತದೆ. ಅಂತಾರಾಷ್ಟ್ರೀಯ ಹಾದಿಯನ್ನು ಅನುಸರಿಸಿದ ಈ ವರದಿಯು ಜನಸಂಖ್ಯೆ, ನೈಸರ್ಗಿಕ ಸಂಪನ್ಮೂಲಗಳು, ಕೃಷಿಯ ಹುಟ್ಟುವಳಿ, ಔದ್ಯೋಗಿಕ ಉತ್ಪಾದನೆ ಹಾಗೂ ಮಾಲಿನ್ಯ ಎಂಬೀ ಐದು ಅತ್ಯಂತ ಮಹತ್ವದ ವ್ಯತ್ಯಾಸಸಾಧ್ಯ ಅಂಶಗಳನ್ನು ಪರೀಕ್ಷಿಸಿದೆ. ಮತ್ತು ಅವುಗಳ ಜಾಗತಿಕ ಬೆಳವಣಿಗೆಯನ್ನು 1900 ರ ವರೆಗೆ ಗುರುತಿಸಿದೆ. ಮತ್ತು2100 ನೇ ಇಸ್ವಿಯ ವರೆಗೆ ಪ್ರಕ್ಷೇಪಿಸಿದೆ. ಭೂಮಂಡಲದ ಸಂಪನ್ಮೂಲಗಳು ಮುಂದಿನ ಶತಾಬ್ದಿಯ ಆರಂಭದಲ್ಲಿ ತೀವ್ರ ಕುಂಠಿತವಾಗುತ್ತವೆಯೆಂದೂ ಮತ್ತು ಆಹಾರದ ಕೊರತೆಯಿಂದಾಗಿ ಜನಸಂಖ್ಯೆ ಕಡಿಮೆಯಾಗುವುದೆಂದೂ ಅದು ನಿರ್ಣಯಿಸಿದೆ. (8)

ಇಷ್ಟು ಹೊತ್ತಿಗೆ ಸಂಪನ್ಮೂಲಗಳ ಇಳಿತಕ್ಕೆ ಹಾಗೂ ಪರಿಸರ ಮಾಲಿನ್ಯಕ್ಕೆ ಮುಖ್ಯ ಮೂಲವಾವುದೆಂಬ ಬಗ್ಗೆ ಸರಿಯಾದ ತಿಳಿವಳಿಕೆ ನಮಗಾಗಿದೆ. ಉಪ ಸಂಹರಿಸುವುದಾದರೆ, ವಿದ್ವಜ್ಜನರ ಮೇರೆಗೆ ಮಾಲಿನ್ಯದ ಮೂಲ ಕಾರಣಗಳೆಂದರೆ, ದೋಷಪೂರ್ಣ ತಾಂತ್ರಿಕತೆಗಳು, ಜಾಗತಿಕ ಜನಸಂಖ್ಯೆಯ ಬೆಳವಣಿಗೆಯ ಸ್ಫೋಟ, ಮತ್ತು ಬೆಳವಣಿಗೆಯ ಹುಚ್ಚು. ಈ ಮೂಲಗಳ ನಿಯಂತ್ರಣವೇ ಸಮಸ್ಯೆಗೆ ಪರಿಹಾರವೆಂದವರ ಮತ. ಹೀಗೆ ಕಾಮರನು ಪರಿಸರಾತ್ಮಕವಾಗಿ ದೋಷಯುಕ್ತ ತಾಂತ್ರಿಕತೆಗಳನ್ನು ಅಧಿಕ ಜಾಣ್ಮೆಯ ತಾಂತ್ರಿಕತೆಗಳಿಂದ ಬದಲಾಯಿಸಬೇಕು ಎನ್ನುತ್ತಾನೆ. ಎಹ್ರಲಿಶ್ ದಂಪತಿ ಜಾಗತಿಕ ಜನಸಂಖ್ಯೆಯಲ್ಲಿ ಸಂಯಮಕ್ಕೆ ಕರೆ ನೀಡುತ್ತಾರೆ. ಮಿಶಾನ್ ಹಾಗೂ ರೋಮದ ಕ್ಲಬ್ ಗಳೆಯರು, ಬೆಳವಣಿಗೆಯಿಲ್ಲದ ಸಮಾಜವನ್ನು ನಿರ್ದೇಶಿಸುತ್ತಾರೆ. ಪರಿಸರಾತ್ಮಕ ವಾದ ವಿವಾದಗಳಲ್ಲಿ ಪಾಲ್ಗೊಳ್ಳುವ ಇತರ ಹಲವರು ನಿಸರ್ಗದೊಂದಿಗೆ ತಾದಾತ್ಮ್ಯಕ್ಕೂ ಸದ್ದುಗದ್ದಲವಿಲ್ಲದ ಮತ್ತುಹೊಗೆ ಉಗಿಗಳಿಲ್ಲದ ಸರಳ ಜೀವನಕ್ಕೆ ಮರಳುವುದಕ್ಕೂ ಕರೆ ನೀಡಿದ್ದಾರೆ.

ಪ್ರಉತ ಮತ್ತು ಪರಿಸರ :

ಪರಿಸರಕ್ಕೆ ಸಂಬಂಧಿಸಿದ ವಾದವಿವಾದಕ್ಕೆ ಪ್ರಉತ ಕಾಣಿಕೆಯೇನು? ಎಂಬುದನ್ನು ನೋಡುವಾ: ಈ ವಾದ ವಿವಾದವು ಜೋರಾಗುತ್ತಿದ್ದು ಭವಿಷ್ಯದಲ್ಲಿ ಇನ್ನೂ ಬೆಳೆಯುವಂತೆ ಕಾಣುತ್ತದೆ. ನಮ್ಮ ಪರಿಸರವು ವಿಶ್ವಾದ್ಯಂತ ಎಷ್ಟೊಂದು ದೂಷಿತವಾಗಿದೆಯೆಂದರೆ, ಸಮಾಜ ಕಲ್ಯಾಣದ ಬಗೆಗಿನ ಯಾವುದೇ ಸಿದ್ಧಾಂತವು ಈ ದುರಂತವನ್ನು ಎದುರಿಸಬೇಕಾಗಿದೆ.

ಪರಿಸರ ಕುರಿತ ಚರ್ಚೆಯ ಅನೇಕ ವಿಚಾರಗಳಲ್ಲಿ ಪ್ರಉತ ಪಾಲ್ಗೊಳ್ಳುತ್ತದೆ. ಆದರೆ ನಿವಾರಣೋಪಾಯವನ್ನು ಕುರಿತು ಮೂಲಭೂತ ಅಭಿಪ್ರಾಯ ಭೇದವಿದೆ. ಪ್ರಗತಿಯ ಕುರಿತು ಶ್ರೀ ಸರಕಾರರ ವಿಚಾರವೇ ಸುಸ್ಪಷ್ಟವಾಗಿ ಪರಿಸರಾತ್ಮಕ ಅಧಃಪತನದ ಮೂಲ ಕಾರಣವನ್ನು

ಗುರುತಿಸಿದೆ. ತಾಂತ್ರಿಕ ಮುನ್ನಡೆಯೇ ಮಾಲಿನ್ಯದ ಮುಖ್ಯ ಮೂಲವೆಂದು ಕಾಮನರ ಗುರುತಿಸುವ ನಾಲ್ಕು ವರ್ಷ ಮುನ್ನವೇ ಶ್ರೀ ಸರಕಾರ ಅವರು ತಮ್ಮ ಬರಹ ಮೂಲಕ, ಲೌಕಿಕ ಮತ್ತು ಅತಿ ಲೌಕಿಕ ಸಂಪನ್ಮೂಲಗಳ ಬಳಕೆಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಕರೆ ನೀಡಿದ್ದಾರೆ. ಪ್ರಗತಿ ಕುರಿತು ಅವರ ವಿಚಾರಗಳು ಈ ಕೆಳಗಿನ ವೈಜ್ಞಾನಿಕ ಹಾಗೂ ತಂತ್ರಜ್ಞಾನಾತ್ಮಕ ಪರಿವರ್ತನೆಗಳನ್ನು ಒಳಗೊಂಡಿದೆ.

1) ಶ್ರೀ ಸರಕಾರ ಅವರ ದೃಷ್ಟಿಯಲ್ಲಿ ಪ್ರತಿಯೊಂದು ವೈಜ್ಞಾನಿಕ ಅವಿಷ್ಕಾರ ಇಲ್ಲವೆ ತಂತ್ರಜ್ಞಾನದ ಮುನ್ನಡೆಯು ಜೀವನವನ್ನು ಸುಲಭಗೊಳಿಸುವಂತೆ ತೋರಿದರೂ ಸಹ ಕೆಲವೊಂದು ಅಪಾಯಕರ ವಸ್ತುಗಳನ್ನು ವಿಸರ್ಜಿಸುತ್ತವೆ. ಆದರಿಂದ ಜೀವನವು ಕೆಲವು ಮಟ್ಟಿಗೆ ಇನ್ನೂ ಹೆಚ್ಚು ಕಠಿಣವಾಗುತ್ತದೆ. ಅರ್ಥಶಾಸ್ತ್ರಜ್ಞರು ತಾಂತ್ರಿಕ ಬದಲಾವಣೆಯನ್ನು ಬಂಡವಾಳ – ಉಪಯೋಗಿಸುವ, ಶ್ರಮ ಉಪಯೋಗಿಸುವ, ಇಲ್ಲವೆ ಬಂಡವಾಳ ಹಾಗೂ ಶ್ರಮಗಳ ಬಳಕೆಯಲ್ಲಿ ತಟಸ್ಥವಿರುವ ಎಂದು ಮೂರು ಶ್ರೇಣಿಗಳಲ್ಲಿ ವಿಂಗಡಿಸಿದ್ದಾರೆ. ಸಾಮಾನ್ಯವಾಗಿ ಬಂಡವಾಳ – ಉಪಯೋಗಿಸುವ ತಾಂತ್ರಿಕ ಬದಲಾವಣೆಗಳು ಜೀವನವನ್ನು ಹೆಚ್ಚು ಸುಲಭಗೊಳಿಸುತ್ತವೆ. ಏಕೆಂದರೆ ಈ ಮುನ್ನ ಬೇಸರದ, ಪರಿಶ್ರಮದ ಹಾಗೂ ಪುನರಾವೃತ್ತಿಯ ಕೆಲಸಗಳನ್ನೀಗ ಯಂತ್ರಗಳಿಂದ ಮಾಡಿಸಿಕೊಳ್ಳಬಹುದು. ಯಂತ್ರಗಳಲ್ಲಿ ಶಕ್ತಿಯನ್ನು ಉಪಯೋಗಿಸುತ್ತೇವೆ. ಇನ್ನು ಶಕ್ತಿಯ ಉತ್ಪಾದನೆಯು ಮಾಲಿನ್ಯವನ್ನು ಉಂಟು ಮಾಡುತ್ತದೆ. ಆದ್ದರಿಂದ ಯಂತ್ರಗಳ ಅಧಿಕಾಧಿಕ ಬಳಕೆಯು ಹೆಚ್ಚು ಮಾಲಿನ್ಯಕ್ಕೆ ದಾರಿಯಾಗುತ್ತದೆ.

ಯಂತ್ರ – ಶ್ರಮಗಳ ಪ್ರಮಾಣವು ಬದಲಾಗದಿದ್ದಲ್ಲಿ ಇಲ್ಲವೆ ಕಡಿಮೆಯಾದಲ್ಲಿ ಕೇವಲ ತಾಂತ್ರಿಕ ಪರಿವರ್ತನೆಯು ತನ್ನಷ್ಟಕ್ಕೆ ತಾನೇ ಪರಿಸರಕ್ಕೆ ಹೆಚ್ಚಿನ ಕೇಡನ್ನು ಉಂಟು ಮಾಡದು. ಆದರೆ, ಈ ಪ್ರಕಾರದ ತಾಂತ್ರಿಕ ಮುನ್ನಡೆಯು ವೈಜ್ಞಾನಿಕ ಅವಿಷ್ಕಾರದೊಂದಿಗೆ ಹೆಚ್ಚೆ ಹಾಕಿದೆಯೆಂದು ಹೇಳಲಿಕ್ಕಾಗದು. ಮುಖ್ಯವಾಗಿ ಅದು ಸುಧಾರಿತ ನಿರ್ವಹಣೆ ಇಲ್ಲವೆ ಹೆಚ್ಚಿನ ಶ್ರಮವಿಭಾಗಣೆಯಿಂದ ಪರಿಣಮಿಸಿರುತ್ತದೆಯೇ ಹೊರತು ಹೊಸ ಯಂತ್ರಗಳ ಆವಿಷ್ಕಾರದಿಂದಲ್ಲ. ಆದ್ದರಿಂದ ಬಂಡವಾಳ – ಉಪಯೋಗಿಸುವ ತಾಂತ್ರಿಕ ಬದಲಾವಣೆಯಿಂದ ಮಾತ್ರ ಪರಿಸರಕ್ಕೆ ಧಕ್ಕೆಯುಂಟಾಗುವದೆಂದು ನಾವು ನಿರ್ಣಯಿಸಬಹುದಾಗಿದೆ. ತಟಸ್ಥ ಇಲ್ಲವೆ ಶ್ರಮ ಉಪಯೋಗಿಸುವ ಬದಲಾವಣೆಯು ಹಾಗೆ ಮಾಡದು.

ಕಳೆದ 200 ವರ್ಷಗಳಲ್ಲಿ ಎಲ್ಲಿ ಎಲ್ಲಿ ಔದ್ಯೋಗೀಕರಣವಾಗಿದೆಯೋ, ಅಲ್ಲಿ ಆಗಿರುವ ತಾಂತ್ರಿಕ ಬದಲಾವಣೆಯು ಬಹುತೇಕ ಬಂಡವಾಳ – ಉಪಯೋಗಿಸುವಂಥದೇ ಆಗಿದೆ. ಇನ್ನುಈ ಪೂರ್ವದ ವೈಜ್ಞಾನಿಕ ಅವಿಷ್ಕಾಗಳ ಸಂಕಲಿತ ಪರಿಣಾಮವು ಈಗ ಅಭೂತಪೂರ್ವ ಮಾಲಿನ್ಯವನ್ನುಂಟು ಮಾಡಿರುವುದು ಅಚ್ಚರಿಯ ವಿಷಯವೇನಲ್ಲ.

2) ಶ್ರೀ ಸರಕಾರ ಅವರ ಪ್ರಗತಿಯ ವ್ಯಾಖ್ಯಾನವು ಶಕ್ತಿಪೂರ್ಣವಿದೆ. ಸುಸ್ಪಷ್ಟವಿದೆ. ಯಾವುದೇ ವೈಜ್ಞಾನಿಕ ಅವಿಷ್ಕಾರವಿರಲಿ – ಮಾಲಿನ್ಯ ನಿಯಂತ್ರಣ ಮಾಡಲು ಯೋಜಿಸಿದ್ದೇ ಇರಲಿ–ಹಾನಿಕಾರಕ ಪರಿಣಾಮಗಳನ್ನು ಅರ್ಥಾತ್ ಮಿಶಾನ್ ಹೇಳುವಂತೆ ಅಸೌಕರ್ಯಗಳನ್ನು

ಉಂಟು ಮಾಡುತ್ತದೆ. ಮಾಲಿನ್ಯ ನಿಯಂತ್ರಿಸುವ ತಾಂತ್ರಿಕತೆಗಳು ತಮ್ಮಂತೆ ಆದ ವಿಸರ್ಜನೆಗಳನ್ನು ಉಂಟು ಮಾಡುತ್ತವೆ. ಇಲ್ಲಿಯೇ ಪರಿಸರಾತ್ಮಕ ಸಮಸ್ಯೆಯ ತೀವ್ರತೆ ಇದೆ. ಅದನ್ನು ಲಘುವಾಗಿ ಪರಿಗಣಿಸಕೂಡದು. ಅದರಲ್ಲಿಯೂ ವಿಶೇಷವಾಗಿ ಈಗಾಗಲೇ ಅದರಿಂದ ಆರೋಗ್ಯಕ್ಕೆ ಹಾಗೂ ಉತ್ಪಾದಕ ದಕ್ಷತೆಗೆ ಹಾನಿಯೊದಗಿರುವ ದೇಶಗಳಲ್ಲಿ ಹಾಗೆ ಮಾಡಲೇಕೂಡದು.

ಸಂಯುಕ್ತ ಸಂಸ್ಥಾನಗಳಲ್ಲಿ, ಸರಕಾರದ ನಿಲುಮೆಯಿಂದಾಗಿ, ಕಾರಖಾನೆಗಳು ಹವೆಯನ್ನು ಸ್ವಚ್ಛವಿಡುವುದಕ್ಕೋಸುಗ ಹೊಗೆ ಗೂಡುಗಳನ್ನು ರಚಿಸಿವೆ. ಈ ವಿಧಾನಗಳು ನಿಶ್ಚಯವಾಗಿ, ಹವೆಯಲ್ಲಿ ಹಾಗೆಯೇ ತೂರಿಹೋಗಬಹುದಾದ ಹೊಗೆಯ ಕಣಗಳನ್ನು ಪ್ರತಿಶತ 99.8ರಷ್ಟು ಶುದ್ಧೀಕರಿಸುತ್ತವೆ. ಆದರೆ ಇಂದು ಈ ಹೊಗೆಗೂಡುಗಳು ತಮ್ಮದೇ ಆದ ಘಾಲಿನ್ಯವನ್ನು ಉಂಟು ಮಾಡುವವೆಂದು ಆ ಸಂಯುಕ್ತ ಸಂಸ್ಥಾನಗಳ ವಿಜ್ಞಾನಿಗಳು ಈಗ ವರದಿ ಮಾಡಿದ್ದಾರೆ. ಅವು ಹೆಚ್ಚು ಶಕ್ತಿಯ ವಿದ್ಯುತ್ ಕಣಗಳ ಬಿರುಗಾಳಿಯನ್ನು ಹೊರ ಪಾಕುತ್ತಿವೆಯೆಂದೂ. ಹೀಗಾಗಿ ಆ ಕ್ಷೇತ್ರದಲ್ಲಿ ಬೀಳುವ ಮಳೆಗೆ ಬಾಧಕವಾಗಿವೆಯೆಂದೂ ವರದಿ ತಿಳಿಸುತ್ತದೆ.

ಔದ್ಯೋಗೀಕೃತ ದೇಶಗಳಲ್ಲಿ, ಪರಿಸರಾತ್ಮಕ ಪತನವನ್ನು, ಪೇಟೆ ವ್ಯವಹಾರವನ್ನು ಬಾಧಿಸುವ ಕರ ಹೇರಿಕೆಯಂಥ ತೀಪಕೆಲಸದಿಂದ ಪರಿಹರಿಸಬಹುದೆನ್ನುವವರಂತೂ ಪೂರ್ಣ ತಪ್ಪಿದ್ದಾರೆ. ವಿಶ್ವಾದ್ಯಂತ ಪಸರಿಸಿದ ಅನಿಯಂತ್ರಿತ ಹಾಗೂ ಬಂಡವಾಳ ಉಪಯೋಗಿಸುವ ತಂತ್ರಜ್ಞಾನೀಯ ಬದಲಾವಣೆಯಿಂದ ಆದ ದಶಕಗಳ ಸಂಕಲಿತ ಅಪಾಯವನ್ನು ತೊಡೆಯಲು ಬಹು ದೊಡ್ಡ ರಾಷ್ಟ್ರೀಯ, ಹಾಗೂ ಅನುಷಂಗಿಕವಾಗಿ ಅಂತಾರಾಷ್ಟ್ರೀಯ, ಪ್ರಯತ್ನವೇ ಬೇಕಾಗಿದೆ.

3) ಬಂಡವಾಳ ಉಪಯೋಗಿಸುವ ತಂತ್ರಜ್ಞಾನವು ಅಪಾಯಕರ ವಿಷವಸ್ತುಗಳನ್ನು ವಿಸರ್ಜಿಸುವುದರಿಂದ ಅದನ್ನು ಖಾಸಗಿ ಉತ್ಪಾದಕರ ಕೈಗೆ ಬಿಟ್ಟುಕೊಡಬಾರದು. ಏಕೆಂದರೆ, ತಮ್ಮ ಲಾಭದ ಮೇಲೆ ಅದರ ಹಿತಕರ ಪರಿಣಾಮವನ್ನು ಅವರು ಲೆಕ್ಕಿಸುವರೇ ಹೊರತು ಉಳಿದ ಸಮಾಜದ ಮೇಲೆ ಅದರಿಂದಾಗುವ ಅನಾರೋಗ್ಯಕರ ಹಾಗೂ ಅನಿವಾರ್ಯ ದುಷ್ಪರಿಣಾಮಗಳನ್ನು ಅವರು ಕಡೆಗಣಿಸುತ್ತಾರೆ. ಆದ್ದರಿಂದ ವೈಜ್ಞಾನಿಕ ಸಂಶೋಧನೆಯು ಸಾರ್ವಜನಿಕ ವಲಯದಲ್ಲಿಯೇ ಇರತಕ್ಕದ್ದು. ಖಾಸಗಿ ಉತ್ಪಾದಕರು ಸಂಶೋಧನ ಕ್ರಿಯೆಯಲ್ಲಿ ತೊಡಗಬಹುದು. ಆದರೆ ಯಾವುದೇ ಆವಿಷ್ಕಾರವನ್ನು ಸರಕಾರದ ಅನುಮೋದನೆ ಪಡೆಯದ ಹೊರತು ಔದ್ಯಮಿಕ ತಂತ್ರಜ್ಞಾನದಲ್ಲಿ ತರಬಾರದು. ಸರಕಾರವೇ ಇವುಗಳಿಂದಾಗುವ ದುಷ್ಪರಿಣಾಮದ ಗಾತ್ರವನ್ನು ನಿರ್ಧರಿಸುವುದು.

4) ಪ್ರಉತದ ನಾಲ್ಕನೆಯ ತತ್ವವು ಪರಿಸರಾತ್ಮಕ ಮಾಲಿನ್ಯವು ಕನಿಷ್ಠವಾಗಿರುವಂತೆ ವಿಶ್ವದ ಸಂಪನ್ಮೂಲಗಳ ಬಳಕೆಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಕರ ನೀಡುತ್ತದೆ. ಪರಿಸರ ಪತನವೆಂದರೆ, ಜನಸಂಖ್ಯೆ – ಸಂಪನ್ಮೂಲಗಳ ಹೊಂದಾಣಿಕೆಯಲ್ಲಿಯ ದೋಷ ಪೂರ್ಣ ತಾಂತ್ರಿಕತೆಗಳೆಂದು ಕಾಮನರ ಕರೆಯುವವುಗಳಿಂದ ಪರಿಣಮಿಸುವ ಸ್ಥೂಲ

ಸಂಪನ್ಮೂಲಗಳಲ್ಲಿಯ ಅಸಮತೋಲನವೆಂದು ವ್ಯಾಖ್ಯಾನಿಸಬಹುದು. ಇಂಥ ಅಸಮತೋಲನವು ಪ್ರಚಲಿತ ಪ್ರಪಂಚದಲ್ಲಿ ಅಸ್ತಿತ್ವದಲ್ಲಿದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ, ಪರಿಸರದ ಸ್ವಚ್ಛತೆಗೆ ಅಂತಾರಾಷ್ಟ್ರೀಯ ಪ್ರಯತ್ನಬೇಕೆಂದು ಪ್ರಉತ ಕರೆ ನೀಡುತ್ತದೆ.

ಇದನ್ನು ಸಾಧಿಸುವುದು ಹೇಗೆ? ಮೇಲೆ ತಿಳಿಸಿದಂಥ ಪರಿಸರಾತ್ಮಕ ಸ್ವಚ್ಛತೆಯು ಸರಳ ಕಾರ್ಯವೇನಲ್ಲ. ಇಲ್ಲಿ, ನೂತನ ತಂತ್ರಜ್ಞಾನವೇ ಕೆಲಸ ಮಾಡಬಲ್ಲದೆಂಬ ಕಾಮನರನ ಅಭಿಪ್ರಾಯದೊಂದಿಗೆ ಪ್ರಉತ ಸಹಮತಿಸುತ್ತದೆ. ನೂತನ ಆವಿಷ್ಕಾರಗಳೂ ಸಹ ಅಪಾಯಕರ ವಿಸರ್ಜನೆಗಳನ್ನು ಹುಟ್ಟಿಸುತ್ತವೆಯೆಂಬುದು ನಿಜ. ಆದರೆ ಪೂರ್ವದ ಮಾಲಿನ್ಯವನ್ನು ನಿವಾರಿಸುವ ಹಾಗೂ ಪರಸ್ಪರ ವಿಸರ್ಜನೆಗಳನ್ನು ನಾಶಪಡಿಸುವ ತಾಂತ್ರಿಕತೆಗಳನ್ನು ಹುಡುಕಿತೆಗೆಯಬೇಕು. ಇಂಥ ತಾಂತ್ರಿಕತೆಗಳು ಸಾಧ್ಯತೆಯ ಅಳವಿನಲ್ಲಿಯೇ ಇವೆ. ವಜ್ರವು ವಜ್ರವನ್ನು ಕೊರೆಯುತ್ತದೆ: ಹೀಗೆ ತಾಂತ್ರಿಕತೆಯು ತಾಂತ್ರಿಕತೆಯನ್ನು ತುಂಡರಿಸಲಿ.

5) ಬೆಳವಣಿಗೆಗೆ ಮಿತಿಗಳುಂಟು; ಮತ್ತು ಜನಸಂಖ್ಯೆಯ ಮೇಲೆ ನಿಯಂತ್ರಣ ಹೇರಬೇಕು ಎಂದು ನಂಬುವುದು ಸಹ ಪೂರಾ ತಪ್ಪು. ಪ್ರಉತ ದೃಷ್ಟಿಯಲ್ಲಿ ಪ್ರಚಲಿತ ಜಾಗತಿಕ ಜನಸಂಖ್ಯೆಯು ಕೇವಲ ಅಲ್ಪಕಾಲೀನ ಸಮಸ್ಯೆ. ಅದರ ಹುಟ್ಟು ಆಂತರಿಕ ಸಂಪತ್ತಿನ ವಿಷಮತೆಗಳಲ್ಲಿ ಮತ್ತು ರಾಷ್ಟ್ರಗಳ ಮಧ್ಯೆ ಇರುವ ಆದಾಯದ ಅಸಮಾನತೆಗಳಲ್ಲಿ ಇದೆ. ಜನಸಂಖ್ಯೆಯು ಎಂದೂ ದೀರ್ಘಕಾಲೀನ ಸಮಸ್ಯೆಯಾಗಿರಲಿಲ್ಲ. ಹಾಗಿರಲೂ ಆಗದು. ನಿಜವಾದ ಸಮಸ್ಯೆ ಎಂದರೆ, ಸಂಪನ್ಮೂಲಗಳ ಅಪರ್ಯಾಪ್ತ ಬಳಕೆ. ತನ್ನ ವಿನಾಶದ ಭವಿಷ್ಯವಾಣಿಯ ನಂತರ ಘಟಿಸಿದ ತಂತ್ರಜ್ಞಾನದ ಪರಿವರ್ತನೆಯನ್ನು ಮಾಲ್ಥೂಸ್‌ನು ಮನಗಾಣಲಿಲ್ಲ. ಇಂದಿನ ಪ್ರಳಯವಾದಿಗಳೂ ಸಹ ಬಯಲು ನೌಕೆಯಂತಿರುವ ಭೂಮಿಯ ಸೀಮಿತ ದಿಗಂತದಾಚೆ ದೃಷ್ಟಿಹರಿಸಲಾರದವರಾಗಿದ್ದಾರೆ. ಸಂಪನ್ಮೂಲಗಳ ಅವರ ಗ್ರಹಿಕೆಯು ನಮ್ಮೀ ಉಪಗ್ರಹಕ್ಕೆ ಮಾತ್ರ ಸೀಮಿತವಾಗಿದೆ. ಚಂದ್ರ ಗ್ರಹಕ್ಕೆ ಅನೇಕ ಅಮೇರಿಕನ್‌ರು ಪ್ರಯಾಣಿಸಿರುವುದು ಚಾರಿತ್ರಿಕ ಅಂಶವಾಗಿದ್ದು ಆ ಪ್ರಳಯವಾದಿಗಳ ದೃಷ್ಟಿಯು ಎಷ್ಟು ಕುರುಡಾಗಿದೆಯೆಂಬುದನ್ನು ತೋರಿಸುತ್ತದೆ.

ಪ್ರಉತದ ಅನುಸಾರ, ಭೌತಿಕ ಸಂಪನ್ಮೂಲಗಳ ಅಂತಿಮ ಮಿತಿಗಳನ್ನು ಬೃಹತ್ ವಿಶ್ವವು ಒದಗಿಸುತ್ತಿದೆಯೇ ಹೊರತು ಈ ಚಿಕ್ಕ ಬಿಂದುವಿನಂತಿರುವ, ನಾವು ಪೃಥ್ವಿಯೆಂದು ಕರೆಯುವುದಷ್ಟೇ ಅಲ್ಲ. ಒಂದು ವೇಳೆ, ಪೃಥ್ವಿಯು ತನ್ನೆಲ್ಲ ನಿವಾಸಿಗಳಿಗೆ ವಾಸದ ಜಾಗೆಯನ್ನು ಒದಗಿಸದಿದ್ದರೆ, ಆಗ ಮಾನವರು ಇನ್ನಿತರ ಉಪಗ್ರಹಗಳಿಗೆ ವಲಸೆ ಹೋಗುತ್ತಾರೆ. ಮತ್ತು ಅಲ್ಲಿ ಹೊಸ ಸಮಾಜವನ್ನು ನಿರ್ಮಿಸುತ್ತಾರೆ. 1492 ರ ವರೆಗೆ ಬಹ್ವಂಶ ಜಗತ್ತಿಗೆ ಅಮೇರಿಕೆಯು ಅಪರಿಚಿತವಾಗಿತ್ತು. ಆದರೆ ಅದು ಎಂದೆಂದಿಗೂ ಆಗಮ್ಯವಾಗಿಯೇ ಉಳಿಯುವುದೆಂದು ಅರ್ಥವಲ್ಲ. ಇಂದು ಇತರ ಉಪಗ್ರಹಗಳು ಸಹ ಆಗಮ್ಯವಾಗಿರುವಂತೆ ತೋರುತ್ತದೆ. ಬಹುಶಃ ಅವು ಜೀವಿರಹಿತವಿರಬಹುದು. ಆದರೆ ಮಾನವ ಚೇತನವು ಈ ಹಿಂದೆ ಇನ್ನಿತರ ದುರ್ದಮ್ಯ ಆಹ್ವಾನಗಳನ್ನು ಎದುರಿಸಿದ ರೀತಿಯಲ್ಲಿಯೇ ಇದನ್ನೂ ಎದುರಿಸುವುದು.

ಮಾನವ ಬುದ್ಧಿಯು ಪರಿಸರ ದುರಂತವನ್ನು ನಿರ್ಮಿಸಿದೆ. ಮಾನವ ಬುದ್ಧಿಯೇ ಅದನ್ನು ನಿವಾರಿಸುತ್ತದೆ ಕೂಡ. ಜನಸಂಖ್ಯೆಯು ಹೆಚ್ಚು ತ್ವರಿತವಾಗಿ ಬೆಳೆಯುವುದೋ ಇಲ್ಲವೆ ಮಂದಗತಿಯಲ್ಲಿ ಬೆಳೆಯುವುದೋ ಅದರ ಗೊಡವೆ ಬೇಕಿಲ್ಲ.

ವಾಸ್ತವವಾಗಿ ಜಾಗತಿಕ ಮಟ್ಟದಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸುವುದು ಅಸಾಧ್ಯ. ಒಂದು ಇಲ್ಲವೆ ಎರಡು ದೇಶಗಳು ಅದರ ಬೆಳವಣಿಗೆಯನ್ನು ತಡೆಯಬಲ್ಲವು. ಆದರೆ ಇಡೀ ಪ್ರಪಂಚವಲ್ಲ. ಇದು ವಿಕಾಸವಾದದ ನಿಯಮವನ್ನು ಅನುಸರಿಸುತ್ತದೆ. ಇಲ್ಲಿ ಭೌತ ದ್ರವ್ಯವು ಏಕಾಣು ಜೀವಿ ಅಮೀಬಾದಲ್ಲಿ ಪರಿವರ್ತಿತವಾಗುವುದು. ಮತ್ತು ಅನಂತರ ಕ್ರಮೇಣ ಬಹು ಲಕ್ಷಾಂತರ ಕೋಶಗಳ ಮಾನವರಲ್ಲಿ ಪರಿವರ್ತಿತವಾಗುವುದು. ಈ ವಿಕಾಸಾತ್ಮಕ ಪ್ರಕ್ರಿಯೆಯಲ್ಲಿ, ಜಡಭೂತವು ಜೀವದಲ್ಲಿ ಮೊಳೆಯಬೇಕು. ಜಡಭೂತದ ಗುಣಧರ್ಮವೇ ಅದು. ಆದ್ದರಿಂದ ಜನಸಂಖ್ಯೆಯು ಹೆಚ್ಚುತ್ತ ಸಾಗುವುದು. ಅದನ್ನು ಯುದ್ಧ, ಬರಗಾಲ ಮತ್ತಿತರ ದುರಂತಗಳ ಮೂಲಕ ಅಲ್ಪ ಕಾಲದವರೆಗೆ ತಡೆಯಬಹುದು. ಅಷ್ಟೇ ಏಕೆ? ಕುಟುಂಬ ಯೋಜನೆ ಮೂಲಕ ಸಹ ಅದೇ ರೀತಿ ಮಾಡಬಹುದು. ಆದರೆ ಅದನ್ನು ಬಹುಕಾಲದ ವರೆಗೆ ಕಟ್ಟಿ ಹಾಕಲಾರೆವು. ಆದ್ದರಿಂದ ಜನಸಂಖ್ಯೆಯನ್ನು ನಿಯಂತ್ರಿಸುವ ಪ್ರಯತ್ನಗಳೆಲ್ಲ ಅಯಶಸ್ವಿಯಾಗಲೇಬೇಕು. ಇದು ಇಂದು ಹಿಂದೆಂದಿಗಿಂತಲೂ ಸ್ಫುಟವಾಗಿದೆ.

ಜನಸಂಖ್ಯೆಯ ಬೆಳವಣಿಗೆಯು ಮುಸುಕಿನಲ್ಲಿಯ ವರದಂತಿದೆ. ಪೋಷಿಸಲೋಸುಗ ದೊಡ್ಡ ಜನಸಂಖ್ಯೆ ಇರದಿದ್ದರೆ, ಹೊಸ ಹೊಸ ತಾಂತ್ರಿಕತೆಗಳನ್ನೆಂದೂ ಅನ್ವಯಿಸುತ್ತಿರಲಿಲ್ಲ. ವಿಜ್ಞಾನದ ದೋಷಗಳೇನೇ ಇರಲಿ; ಆಹಾರ ಪೂರೈಕೆಯ ಮೇಲೆ ಮಾನವನ ಪ್ರಭುತ್ವ ಹೆಚ್ಚುತ್ತಿರುವುದು. ಅದರಲ್ಲಾರೂ ತಪ್ಪು ಕಾಣರು. ಈ ಮುನ್ನ ನಿಸರ್ಗದ ಲಹರಿಗೆ ಮಣಿಯಬೇಕಾಗಿತ್ತು. ಅದೇ ರೀತಿ ಪೋಷಿಸಲು ಜನತ್ತೋಮವಿಲ್ಲದಿದ್ದರೆ, ಮಾನವನ ಮಾನಸಿಕ ಕ್ಷಿತಿಜವು ಇಂದಿನಷ್ಟು ವಿಶಾಲವಾಗುತ್ತಿರಲಿಲ್ಲ. ಪೃಥ್ವಿಯ ಮೇಲೆ ಅತ್ಯಲ್ಪ ಜನರಿದ್ದಾಗ ಮೊತ್ತಮೊದಲು ಗ್ರಾಮ ಸಮುದಾಯ ರೂಪದಲ್ಲಿ ಸಮಾಜ ಸಂಘಟನೆ ನಡೆಯಿತು. ಜನಸಂಖ್ಯೆ ಹೆಚ್ಚಿದಂತೆಲ್ಲ, ನಗರಗಳು, ರಾಜ್ಯಗಳು, ಹುಟ್ಟಿಕೊಂಡವು. ಅನಂತರ ಪ್ರಾಂತಗಳೂ ಮತ್ತು ಕೊನೆಗೆ ರಾಷ್ಟ್ರಗಳೂ ಬಂದವು. ಹೀಗೆ ವಿಸ್ತರಿಸುತ್ತಿರುವ ಜನಸಂಖ್ಯೆಯು ಕ್ರಮೇಣ ಗ್ರಾಮ ಸಮುದಾಯಗಳಿಂದ ರಾಷ್ಟ್ರಗಳವರೆಗೆ ಮಾನವನ ನಿಷ್ಠೆಯನ್ನು ವಿಸ್ತರಿಸಿತು. ಹೀಗೆ ಮಾನವ ಮನಸ್ಸು ಮತ್ತು ಸಂಘಟನೆಗಳು, ಅವುಗಳ ವಿರೋಧಾಭಾಸಗಳೇನೇ ಇರಲಿ, ಕ್ರಮೇಣ ವಿಶಾಲ ಮನಸ್ಕವಾದವು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಜನಸಂಖ್ಯೆಯ ಬೆಳವಣಿಗೆಯು ಕೇಡೆನಿಸಲೇಬೇಕಿಲ್ಲ.

ಭಾರತದಲ್ಲಿ ಜನರು ತಮ್ಮೆಲ್ಲ ಸಮಸ್ಯೆಗಳಿಗಾಗಿ ಅತಿಶಯ ಜನಸಂಖ್ಯೆ ಬೆಳವಣಿಗೆಯನ್ನೇ ದೂಷಿಸುವ ಪ್ರವೃತ್ತಿ ಹೊಂದಿದ್ದಾರೆ. ಭಾರತದ ಬಡತನದ ನಿಜವಾದ ಕಾರಣವನ್ನು ಬಚ್ಚಿಡಲು ಇದು ನೆರವಾಗಿದೆ. ಪ್ರತಿಚದುರ ಇಂಚಿಗೆ ಲೆಕ್ಕ ಹಾಕಿದರೆ, ಜಪಾನದಲ್ಲಿ ಜನಸಾಂದ್ರತೆ ಹೆಚ್ಚು; ನೈಸರ್ಗಿಕ ಸಂಪನ್ಮೂಲಗಳು ಕಡಿಮೆ. ಆದರೂ ಸಹ, ಜಪಾನೀಯರು ಕಳೆದ ನಾಲ್ಕು

ದಶಕಗಳಲ್ಲಿ ಆರ್ಥಿಕ ಪವಾಡವನ್ನೇ ಗೆಯ್ದಿದ್ದಾರೆ. ಯುರೋಪಿನ ಜನಸಾಂದ್ರತೆಯೂ ಹೆಚ್ಚು. **ಆದರೂ ಸಹ ಭಾರತಕ್ಕಿಂತ ಅತಿ ಹೆಚ್ಚು ಸಂಪದ್ಭರಿತವಾಗಿದೆ. ಅನೇಕ ರಾಷ್ಟ್ರಗಳು ಹಿಂದಿನ ಕಾಲದಲ್ಲಿ ಈಗಿನಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದ್ದವು. ಆದರೂ ಸದ ಅವು ಇಂದಿಗಿಂತ ಹೆಚ್ಚು ಬಡವಾಗಿದ್ದವು.**

ಜನಸಂಖ್ಯೆಯು ಬಡತನದ ಕಾರಣವಾಗಿರುವುದು ತೀರ ಕ್ವಚಿತ್ತಾಗಿ. ಭ್ರಷ್ಟಾಚಾರ ಹಾಗೂ ದೋಷಪೂರ್ಣ ಆರ್ಥಿಕ ನೀತಿಗಳು ಜನಸಂಖ್ಯೆಗಿಂತ ಹೆಚ್ಚಾಗಿ, ಹೊಟ್ಟೆಯ ಕೂಳಿಗ ಹಾಗೂ ವಾಸದ ಮನೆಗೆ ಎರವು ಮಾಡುತ್ತವೆ, ಅದೇನೇ ಇದ್ದರೂ, ಬಡತನವೇ ಅಧಿಕ ಜನಸಂಖ್ಯಾ ಬೆಳವಣಿಗೆಗೆ ಕಾರಣೀಭೂತವಾಗಿದೆ. ಮತ್ತು ಸರಿಯಾದ ಆರ್ಥಿಕ ನೀತಿಗಳ ಮೂಲಕ ದೇಶವು ಸಮೃದ್ಧವಾದಂತೆಲ್ಲ ಬಡತನವು ಇಳಿಮುಖವಾಗುತ್ತದೆ.

ನಮ್ಮ ಚರ್ಚೆಯನ್ನು ಸಂಕ್ಷೇಪಿಸುವುದಾದರೆ, ಪ್ರಉತ ವೈಜ್ಞಾನಿಕ ಆವಿಷ್ಕಾರಗಳನ್ನು ಪ್ರೋತ್ಸಾಹಿಸುತ್ತವೆ. ಆದರೆ ಅವು ಪರಸ್ಪರ ಅಪಾಯಕಾರಿ ವಿಸರ್ಜನೆಗಳನ್ನು ನಿಯಂತ್ರಿಸುವಂತಿರತಕ್ಕದ್ದು. ಏಕೆಂದರೆ, ಪ್ರತಿಯೊಂದು ವೈಜ್ಞಾನಿಕ ಮುನ್ನಡೆಯು ಅಹಿತಕಾರಿ ಪರಿಣಾಮಗಳನ್ನು ಹೊಂದಿರುವುದೆಂಬುದನ್ನು ನಾವು ಮನ್ನಿಸಲಬೇಕು. ಪ್ರಪಂಚದ ಪ್ರಚಲಿತ ಜನಸಂಖ್ಯೆಯು ಅಲ್ಪಕಾಲೀನ ಅನಾನುಕೂಲವಷ್ಟೇ. ಜಾಗತಿಕ ಸಂಪನ್ಮೂಲಗಳ ಅದಕ್ಷ ಬಳಕೆಯಿಂದ ಸಮಸ್ಯೆ ಏಳುತ್ತದೆ. ಅಭಿವೃದ್ಧ ರಾಷ್ಟ್ರಗಳಲ್ಲಿ ಸತತ ಬೆಳವಣಿಗೆಯಾಗುವುದನ್ನು ಒಬ್ಬನು ಆಕ್ಷೇಪಿಸಬಹುದು. ಆದರೆ ಬೆಳವಣಿಗೆಗೆ ಮಿತಿಗಳಿವೆ ಎಂದಲ್ಲ. ಆದರೆ, ಅದು ಸಮಾಜದಲ್ಲಿ ಭೌತಿಕವಾದವನ್ನೂ, ಸ್ವಾರ್ಥಪರತೆಯನ್ನೂ ಮತ್ತು ಅಪರಾಧವನ್ನೂ ಹುಟ್ಟಿಸಿರುವ ಕಾರಣಕ್ಕಾಗಿ ಆಕ್ಷೇಪಿಸಬಹುದು, ಅನಭಿವೃದ್ಧ ರಾಷ್ಟ್ರಗಳ ಮಟ್ಟಿಗೆ ಹೇಳುವುದಾದರೆ, ತಮ್ಮ ಉಳಿಗಾಲದ ಸಮಸ್ಯೆಗಳ ಪರಿಹಾರಕ್ಕಾಗಿ ಹೆಚ್ಚಿನ ಬೆಳವಣಿಗೆ ದರಗಳು ಅಗತ್ಯವಾಗಿವೆ. ಈ ವಿಷಯದತ್ತ ನಾನು ಮುಂದಿನ ಅಧ್ಯಾಯದಲ್ಲಿ ಗಮನ ಹರಿಸುತ್ತೇನೆ.

ಆರ್ಥಿಕ ಅಭಿವೃದ್ಧಿ :

ದ್ವಿತೀಯ ಮಹಾಯುದ್ಧದ ನಂತರ, ಮತ್ತು ವಿಶೇಷವಾಗಿ ಭಾರತದ ಸ್ವಾತಂತ್ರ್ಯ ನಂತರ ಬಡತನಗ್ರಸ್ತ ಅರ್ಥವ್ಯವಸ್ಥೆಯನ್ನೆದುರಿಸುವ ಸಮಸ್ಯೆಗಳನ್ನು ಹಲವಾರು ಅರ್ಥಶಾಸ್ತ್ರಜ್ಞರು ಒಳಹೊಕ್ಕು ನೋಡಿದ್ದಾರೆ. ಬಡ ರಾಷ್ಟ್ರಗಳು ಎದುರಿಸುತ್ತಿರುವ ಆರ್ಥಿಕ ದುರಂತಗಳನ್ನು ಬಗೆಹರಿಸುವಂತೆ ತೋರುವ ವಿಪುಲ ಸಾಹಿತ್ಯ ಪ್ರಕಟವಾಗಿದೆ. ಸೈದ್ಧಾಂತಿಕವಿರಲಿ ಇಲ್ಲವೆ ಸ್ಥೂಲ ಅಂದಾಜಿನದಿರಲಿ ಈ ಸಾಹಿತ್ಯವನ್ನು ಸಾಮಾನ್ಯವಾಗಿ ಆರ್ಥಿಕ ಅಭಿವೃದ್ಧಿಯ (ಕೆಂಪು ಮಸಿಯಲ್ಲಿ ಬರೆದ) ನಿರ್ದೇಶನದಡಿ ವರ್ಗೀಕರಿಸಲಾಗಿದೆ. ಪ್ರಉತ ತನ್ನದೇ ಆದ ಅಭಿವೃದ್ಧಿಯ ಹಾದಿ ಹಿಡಿದಿದೆ. ಈ ಪೂರ್ವದ ಪಂಡಿತರು ತೋರಿದ ಇತರೆಲ್ಲ ಹಾದಿಗಳಿಗಿಂತ ಇದು ತೀರ ಭಿನ್ನ.

ಬಹುತೇಕ ಅನಭಿವೃದ್ಧ ಅರ್ಥವ್ಯವಸ್ಥೆಗಳು ಸಮಾನ ಲಕ್ಷಣಗಳನ್ನು ತೋರ್ಪಡಿಸುತ್ತಿವೆ. ಅವು ಬಂಡವಾಳದ ಕೊರತೆ ಮತ್ತು ತಾಂತ್ರಿಕ ಪರಿಜ್ಞಾನ, ನಿರಕ್ಷರತೆ, ಕೃಷಿಯ ಮೇಲಿನ ಅತಿಶಯ

ಅವಲಂಬನೆ ಮತ್ತು ಔದ್ಯೋಗೀಕರಣದ ಕೊರತೆಗಳಿಂದ ಬಳಲುತ್ತವೆ. ಈ ಎಲ್ಲ ಲಕ್ಷಣಗಳು ಕಡಿಮೆ ಉತ್ಪಾದನೆ ಮತ್ತು ತೀವ್ರ ನಿರುದ್ಯೋಗಗಳಿಗೆ ದಾರಿಯಾಗುತ್ತವೆ. ಆದರಿಂದಾಗಿಯೇ, ಬಡತನಗ್ರಸ್ತ ದೇಶಗಳನ್ನು ಮುಖ್ಯವಾಗಿ ಶ್ರಮ – ಹೆಚ್ಚುವರಿ ಅರ್ಥವ್ಯವಸ್ಥೆಗಳೆಂದು ಕರೆಯುತ್ತಾರೆ. ಬಡತನದ ನಿವಾರಣೆಗಾಗಿ ಬಡತನದ ಕಾರಣಗಳನ್ನು ನಿವಾರಿಸಬೇಕೆಂಬುದಂತೂ ಸುಸ್ಪಷ್ಟ. ಅರ್ಥಾತ್ ಆರ್ಥಿಕ ಯೋಜನೆಯು ಕೃಷಿ ಅಭಿವೃದ್ಧಿ, ಉದ್ದಿಮೆ, ಹೊಸ ತಂತ್ರಜ್ಞಾನಗಳ ಮತ್ತು ಶೈಕ್ಷಣಿಕ ಅನುಕೂಲತೆಗಳನ್ನು ಸಾಧಿಸುವ ಗುರಿಯಿರಿಸಿಕೊಳ್ಳಬೇಕು. ಇದೆಲ್ಲಕ್ಕೂ ಬೃಹತ್ ಪ್ರಮಾಣದ ಹಣದ ಹೂಡಿಕೆ ಬೇಕು. ಇದು ಅರ್ಥವ್ಯವಸ್ಥೆಯ ಉಳಿತಾಯ ದರವನ್ನು ಅವಲಂಬಿಸಿರುತ್ತದೆ. ಆದರೆ ಬಡ ದೇಶದಲ್ಲಿ ಉಳಿತಾಯ ಕಡಿಮೆ. ಏಕೆಂದರೆ ಅದರ ರಾಷ್ಟ್ರೀಯ ಉತ್ಪನ್ನ ಕಡಿಮೆ. ಇದುವೇ ಬಡತನದ ವಿಷವರ್ತುಲ. ಹೀಗಾಗಿ, ಒಂದು ದೇಶವು ಬಡದೇಶವಾಗಿರುತ್ತದೆ. ಏಕೆಂದರೆ ಅದು ಬಡವಾಗಿದೆ. ಆದ್ದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಥಮ ಹೆಜ್ಜೆಯೆಂದರೆ, ಅರ್ಥವ್ಯವಸ್ಥೆಯ ಉಳಿತಾಯದ ದರವನ್ನು ಹೆಚ್ಚಿಸುವುದು. ಹಾಗಾದರೆ ಹಣ – ಹೂಡಿಕೆಯು ಹೆಚ್ಚುತ್ತದೆ.

ಅರ್ಥವ್ಯವಸ್ಥೆಯ ಉಳಿತಾಯ ದರವನ್ನು ಹೆಚ್ಚಿಸಲು ಅನೇಕ ಹಾದಿಗಳಿವೆ. ಸರಕಾರವು ಅತಿ ಕಠೋರ ಮಾರ್ಗಗಳಿಂದ ಉಳಿತಾಯ ಮಾಡುವಂತೆ ಜನತೆಯನ್ನು ಒತ್ತಾಯಿಸಬಹುದು. ಇದನ್ನೇ ರಶಿಯಾವು, ಅದರಲ್ಲಿಯೂ ಸ್ಟಾಲಿನ್ ಪ್ರಭುತ್ವದ ರಶಿಯಾವು, ಕಳೆದ ಕಾಲು ಶತಮಾನದಿಂದ ಮಾಡುತ್ತ ಬಂದಿದೆ. ಲಕ್ಷಾಂತರ ರಶಿಯನ್ನರನ್ನು ಶ್ರಮಜೀವಿ ವಸತಿಗೆ ಕಳಿಸಲಾಯಿತು. ಅಲ್ಲಿ ಅವರು ಸರಕಾರದ ಕಾರಖಾನೆಗಳಲ್ಲಿ ತೀರ ಕಡಿಮೆ ವೇತನ ಪಡೆದು ದುಡಿದರು. ಅದೇ ಕಾಲಕ್ಕೆ ಸರಕಾರವು ತಾನು ಉತ್ಪಾದಿಸಿದ ಸರಕುಗಳಿಗೆ ವಿಪರೀತ ಬೆಲೆ ಆಕರಿಸಿತು. ಆದರಿಂದ ಕೆಲಸಗಾರರ ಬಳಕೆಯು ಇನ್ನಷ್ಟು ಕುಗ್ಗಿತು. ಅದೇ ರೀತಿ ಹುಟ್ಟುವಳಿಗಳ ದರಗಳನ್ನು ಕೆಳಮಟ್ಟದಲ್ಲಿ ನಿರ್ಧರಿಸಲಾಯಿತು. ಹೀಗಾಗಿ, ತನ್ನ ಉದ್ದಿಮೆಗಳ ಲಾಭದ ಜೊತೆಗೆ ಕೃಷಿಯ ಲಾಭವೂ ಸರಕಾರದ ಕೈ ಸೇರಿತು. ಸುದೀರ್ಘ ಕಾಲ ಪರ್ಯಂತ ರಶಿಯಾದಲ್ಲಿ, ಶ್ರಮಜೀವಿಗಳ ಪರಿಸ್ಥಿತಿಯು ಭಯಂಕರ ಶೋಚನೀಯವಾಗಿತ್ತು. ಮತ್ತು ಲಕ್ಷಾಂತರ ಜನರು ದಂಗೆ ಎದ್ದು ತಮ್ಮ ಪ್ರಾಣ ತೆತ್ತರು. ಇದಂತೂ ನಿಶ್ಚಯವಾಗಿ, ಕಲ್ಯಾಣದ ಗರಿಷ್ಠೀಕರಣಕ್ಕೆ ಸೂಕ್ತ ಉಪಚಾರವಲ್ಲ. ರಾಜ್ಯವು ಸಮೃದ್ಧವಾಗಲೆಂದು ತನ್ನ ನಾಗರಿಕರನ್ನು ಈ ರೀತಿ ದಬ್ಬಾಳಿಕೆಯಲ್ಲಿ ಅರೆಯುವುದನ್ನು ಯಾವ ರಾಷ್ಟ್ರವೂ ಮೆಚ್ಚದು.

ಪರಿಣತರು ಹಾಗೂ ಸಾಂಪ್ರದಾಯಿಕರು ಶಿಫಾರಸ್ಸು ಮಾಡುವ ಇತರ ಪದ್ಧತಿಗಳನ್ನು ಜಾರಿಗೊಳಿಸಲು ಬಡದೇಶದ ಅರ್ಥವ್ಯವಸ್ಥೆಗಳು ಪ್ರಯತ್ನಿಸಿವೆ. ಇವುಗಳೆಂದರೆ, ಕರಾಕರಣೆಯ ಮುಖಾಂತರ ಇಲ್ಲವೆ ಕೊರತೆ ಮುಂಗಡ ಪತ್ರದ ಮುಖಾಂತರ ಉಳಿತಾಯ ಮಾಡುವುದು. ಇದರಲ್ಲಿ ಸರಕಾರವು ಕೇವಲ ಹೆಚ್ಚು ನೋಟುಗಳನ್ನು ಮುದ್ರಿಸುತ್ತದೆ. ಸಾರ್ವಜನಿಕರಿಂದ ಸಂಪನ್ಮೂಲಗಳನ್ನು ಖರೀದಿಸುತ್ತದೆ. ಮತ್ತು ಅವುಗಳನ್ನು ಹೊಸ ಪ್ರಕಲ್ಪಗಳೆಗಾಗಿ ಹಣ ಹೂಡಿಕೆಯಲ್ಲಿ ವಿನಿಯೋಗಿಸುತ್ತದೆ. ಈ ಉಭಯ ಪದ್ಧತಿಗಳನ್ನು ಈ ಮುನ್ನ ಪರೀಕ್ಷಿಸಲಾಗಿದೆ. ಅವುಗಳಲ್ಲಿ ಸ್ವಲ್ಪ ಗುಣಾಂಶವೂ ಇದೆ. ಆದರೂ ಸಹ, ಅವುಗಳನ್ನಷ್ಟೇ ಪ್ರತ್ಯೇಕವಾಗಿ ಅತಿಶಯ

ಬಳಕೆ ಮಾಡಿದರೆ, ಅವು ಅಪಾಯಕಾರಿಯಾಗಬಲ್ಲವು. ಏಕೆಂದರೆ, ಅಧಿಕ ಕರಗಳನ್ನು ತಪ್ಪಿಸಬಹುದು. ಇಲ್ಲವೆ ಅವುಗಳಿಂದಾಗಿ ಕೆಲಸ ಮಾಡಬೇಕೆಂಬ ಪ್ರೇರಣೆಯ ತೀವ್ರ ಹಾನಿಯಾಗಬಹುದು. ಇನ್ನು ಕೊರತೆ ಬಜೆಟ್ ಕರಾಕರಣೆಯ ಒಂದು ರೂಪವಷ್ಟೇ ಅದರಿಂದ ತೀವ್ರವಾದ ಹಣದುಬ್ಬರವು ಉಂಟಾಗುತ್ತದೆ. ಹೀಗಾಗಿ, ಅಭಿವೃದ್ಧಿಯ ಪ್ರಯತ್ನಕ್ಕೆ ಅಡೆತಡೆಯಾಗುತ್ತದೆ.

ಹಣ ಹೂಡಿಕೆಯ ಇನ್ನೊಂದು ಮೂಲವೆಂದರೆ ವಿದೇಶಗಳಿಂದ ಪಡೆಯುವ ನೆರವು. ಆದರೆ ಸಿರಿವಂತರೆಂದೂ ಸಾಕಾಗುವಷ್ಟು ದಾನ ಮಾಡುವುದಿಲ್ಲ. ಅಥವಾ ಅವರ ದಾನಗಳು ಹೇತು ರಹಿತವಾಗಿ ಇಲ್ಲವೆ ಬೇಕೆನಿಸಿದಾಗ ಹಿಡಿದೆಳೆಯುವ ಶರಯತ್ತುಗಳ ದಾರಗಳಿಲ್ಲದ ಇರುವುದಿಲ್ಲ. ಆದ್ದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳು ಏನಾದರೂ ಅಲ್ಪಸ್ವಲ್ಪ ವಿದೇಶಿ ಧನಸಹಾಯ ಪಡೆದಿದ್ದರೂ ಅದರಿಂದ ಬಡತನ ನಿವಾರಣೆಯ ಲವಕೇಶವೂ ಸಾಧ್ಯವಾಗಿಲ್ಲವೆಂಬುದು ಅಚ್ಚರಿಯನ್ನು ಹುಟ್ಟಿಸದು. ಒಂದು ದೇಶವು ವಿದೇಶಿ ವಾಣಿಜ್ಯ ಬ್ಯಾಂಕುಗಳಿಂದ ಸಹ ಸಾಲ ಪಡೆಯಬಹುದು. ಆದರೆ ಅವು ಆಕರಿಸುವ ಬಡ್ಡಿ ದರವು ಹೆಚ್ಚಿಗೆ ಇರುತ್ತದೆ.

ಅಂತೂ ಕೊನೆಗೆ ಪ್ರತಿಯೊಂದು ದೇಶವೂ ತನ್ನ ಸ್ವಂತ ಕಾಲ ಮೇಲೆ ನಿಲ್ಲಬೇಕು. ಜಾಗತಿಕ ಸರಕಾರ ಅಸ್ತಿತ್ವದಲ್ಲಿ ಬರುವ ಪರ್ಯಂತವಾದರೂ ಹೀಗಾಗಲೇಬೇಕಾಗಿದೆ. ಒಂದು ಅರ್ಥವ್ಯವಸ್ಥೆಯೊಳಗಿಂದಲೇ ಉಳಿತಾಯಗಳು ಉಂಟಾಗಬೇಕು. ಆದರೆ ಮರಣ ದಂಡನೆಯ ಭೀತಿಯಿಂದ ಅಲ್ಲ. ಉಳಿತಾಯಗಳ ಅಭಾವಕ್ಕೆ ಪ್ರಶ್ನೆಯ ಉತ್ತರವೆಂದರೆ, ನೈತಿಕತೆ. ತಮ್ಮ ಉಳಿತಾಯಗಳನ್ನು ಹೆಚ್ಚಿಸಲು ಮತ್ತು ವ್ಯರ್ಥ ಖರ್ಚನ್ನು ನಿರೋಧಿಸಲು ಜನತೆಯ ಮನವೊಲಿಸಬೇಕು. ಇನ್ನು ಬಡ ದೇಶಗಳಲ್ಲಂತೂ ಸಾಕಷ್ಟು ವ್ಯರ್ಥ ಖರ್ಚು ಅಥವಾ ಅತಿಬಳಕೆ ಇರುತ್ತದೆ. ಉಳಿತಾಯವು ಒಂದು ಸದ್ಗುಣವೆಂಬುದನ್ನು ಜನರಿಗೆ ಕಲಿಸಬೇಕು. ಏಕೆಂದರೆ, ಅದು ಅಂತಿಮವಾಗಿ ಅವರ ಮಕ್ಕಳ ಮತ್ತು ಸಹಜೀವಿಗಳ ಬಡತನವನ್ನು ಕಡಿಮೆ ಮಾಡುತ್ತದೆ. ಯಾರಿಗೆ ಸಾಧ್ಯವೋ ಅವರು, ಇಂದಿನ ತಮ್ಮ ಬಳಕೆಯನ್ನು ತ್ಯಜಿಸುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಸರ್ವರ ಕಲ್ಯಾಣಕ್ಕಾಗಿ ಅನಿವಾರ್ಯವೆನಿಸಿದ ಮಾನವೀಯ ವಿಚಾರವೆಂದು ಉಳಿತಾಯದ ಸದ್ಗುಣವನ್ನು ಪ್ರಸ್ತುತ ಪಡಿಸಬೇಕು.

ನೈತಿಕ ಶಕ್ತಿಯೆದುರು ಅಧಿಕಾರ ದರ್ಪದ ಆದೇಶಗಳು ಕಿರಿದಾಗಿ ಕಾಣುತ್ತಿವೆಯೆಂಬುದು ಚೆನ್ನಾಗಿ ಗೊತ್ತಾಗಿರುವ ಸಂಗತಿ. ಅದು ಬಂಡವಾಳವಾದದ ಲೋಭವನ್ನು ಸಹ ಕಿರಿದಾಗಿಸುತ್ತದೆ. ಲಕ್ಷಾಂತರ ರೂಪಾಯಿಗಳಿಗಾಗಿ ನಮ್ಮಲ್ಲಿ ಯಾರಾದರೂ ಸಾಯಲು ಸಿದ್ಧರಿರುವರೇ? ಆದರೆ, ನಮ್ಮಲ್ಲಿ ಕೆಲವರು ಒಂದು ಉದಾತ್ತ ಕಾರಣಕ್ಕಾಗಿ ಸಿದ್ಧರಾಗಬಹುದು. ತಮ್ಮ ಸೌಕರ್ಯಕ್ಕಾಗಿ ಯಾರಾದರೂ ರುಂಡ ಕತ್ತರಿಸಿಕೊಳ್ಳುವರೇ? ಆದರೆ ಸ್ವಾರ್ಥತ್ಯಾಗಿ ವಿಚಾರಕ್ಕೋಸುಗ ನಮ್ಮಲ್ಲಿ ಕೆಲವರು ಹಾಗ ಮಾಡಬಹುದು. ಹೀಗೆ ನೈತಿಕತೆಯು ಪಾಶವೀ ಶಕ್ತಿಯನ್ನು ಮತ್ತು ಮಾನವನ ಧನದಾಶೆಯನ್ನು ಮೀರಿ ಹೋಗುತ್ತದೆ. ಈ ಶಕ್ತಿಯನ್ನೇ ಪ್ರಶ್ನೆತ ಉಳಿತಾಯದ ಅಧಿಕತಮ ದರ ಸಾಧಿಸಲು ವಿನಿಯೋಗಿಸುತ್ತಿದೆ. ನೈತಿಕತೆ ಹಾಗೂ ಆರ್ಥಿಕ ಅಭಿವೃದ್ಧಿಗಳ ನಡುವಿನ

ಸಂಬಂಧವು ತೀರ ನೈಜವಾಗಿದೆ. ಏಕೆಂದರೆ, ಕಡಿಮೆ ಬಳಕೆ ಹೆಚ್ಚು ಉಳಿತಾಯವನ್ನು, ತಮ್ಮ ಮಕ್ಕಳ ತ್ಯಾಗಮಯ ಆದರ್ಶವೆಂದು ಜನರೆದುರು ಪ್ರಸ್ತುತ ಪಡಿಸಬಹುದು.

ಇಂಥ ಹೆಚ್ಚಿದ ಉಳಿತಾಯಗಳು ಸಮಾಜ ಕಲ್ಯಾಣವು ಇಳಿಮುಖವಾಗಲು ಕಾರಣವಾಗುತ್ತವೆಯೇ? ಇಲ್ಲ. ಒಂದು ವೇಳೆ, ಮರಣಾಂತಿಕ ಏಟುಗಳ ಭೀತಿಯಡಿ ಬಳಕೆಯನ್ನು ತಗ್ಗಿಸಲು ಜನರನ್ನು ಒತ್ತಾಯಿಸಿದರೆ, ಆಗ ಸಮಾಜದಲ್ಲಿ ನಿಶ್ಚಯವಾಗಿಯೂ ಉಸಿರಾಡಲಾರದಷ್ಟು ಸಂಕಟ ಉಂಟಾಗುತ್ತದೆ. ಆದರೆ, ಯಾರೇ ಆಗಲಿ, ಸ್ವ–ಇಚ್ಛೆಯಿಂದ, ಅದರಲ್ಲೂ ವಿಶೇಷವಾಗಿ, ವಿಶ್ವಾತ್ಮಕ ದೃಷ್ಟಿಯಿಂದ ಅಂದರೆ ಸಾಮಾನ್ಯ ಆರ್ಥಿಕ ಉನ್ನತಿಯ ದೃಷ್ಟಿಯಿಂದ ತ್ಯಾಗ ಮಾಡಿದರೆ, ವೈಯಕ್ತಿಕ ಕಲ್ಯಾಣವು ವಾಸ್ತವವಾಗಿ ಹೆಚ್ಚುತ್ತದೆ. ಮನಸ್ಸು ಮುಂಚಿಗಿಂತ ಹೆಚ್ಚು ಸಂತಸಕರವಾಗುತ್ತದೆ. ಆದ್ದರಿಂದ ಪ್ರಉತದ ಪ್ರೋತ್ಸಾಹದಡಿ, ಹೆಚ್ಚಿದ ಉಳಿತಾಯವು ಸಾಮಾಜಿಕ ಕಲ್ಯಾಣವನ್ನು ಎಂದೂ ತಗ್ಗಿಸದು. ಏನಾದರೂ ಆಗುವುದಿದ್ದರೆ, ಆಗ ಸಮಾಜದಲ್ಲಿಯ ಒಟ್ಟಾರೆ ಸಂತೋಷವು ಹೆಚ್ಚುತ್ತದೆ.

ಸೈದ್ಧಾಂತಿಕವಾಗಿ ನೀತಿಪರ ಬೋಧನೆಯ ಮಾಧ್ಯಮದ ಮೂಲಕ ಉಳಿತಾಯವನ್ನು ಹೆಚ್ಚಿಸಬಹುದು. ಆದರೆ ಸಿದ್ಧಾಂತವೇ ಬೇರೆ; ಹಾಗೂ ಅದನ್ನು ವಾಸ್ತವಕ್ಕಿಳಿಸುವುದೇ ಬೇರೆ ವಿಷಯ. ಹೆಚ್ಚು ಉಳಿತಾಯ ಮಾಡುವಂತೆ ಜನರ ಮನ ಒಲಿಸಬಲ್ಲ ಏಕೈಕ ಮಾರ್ಗವೆಂದರೆ ಅವರ ರಾಜಕೀಯ ಮುಖಂಡರು ಬಳಕೆಯನ್ನು ಕಡಿಮೆ ಮಾಡಲು ಸಂಯಮ ಹೊಂದಿದರೆ ಜನರೂ ಸಹ ಅದನ್ನೇ ಅನುಸರಿಸುವರು. ಕೇವಲ ಸರಕಾರಿ ಬೋಧನೆ ಉಪಯೋಗವಿಲ್ಲ, ಮುಖಂಡರಾದವರು ಜನರಿಗಿಂತ ಹೆಚ್ಚು ಸಂಯಮಶೀಲರಾಗಬೇಕು. ಅವರು ಜನಸಾಮಾನ್ಯರು ಜೀವಿಸುವಂಥ ಉಪಜೀವನ ವಿಧಾನವನ್ನೇ ಬಾಳಿನಲ್ಲಿ ಅನುಸರಿಸಬೇಕು. ಅವರು ತಮ್ಮ ಅನುಯಾಯಿಗಳೆದುರು ಉತ್ತಮ ನಿದರ್ಶನ ನೀಡಬೇಕು. ನೈತಿಕತೆಯು ಪ್ರಬಲ ಶಕ್ತಿ. ಆದರೆ, ಮಾನವ ಪ್ರಜ್ಞೆಯ ಉತ್ತಮ ಪಾರ್ಶ್ವವನ್ನು ಬಳಸಿಕೊಳ್ಳಬೇಕಾದರೆ, ಮುಖಂಡನು ತನ್ನ ವಿಚಾರಗಳನ್ನು ಆಚಾರದಲ್ಲಿ ತರಬೇಕಾಗುತ್ತದೆ. ನುಡಿದಂತೆ ನಡೆಯಬೇಕು. ಎಂಥ ರಾಜನೋ, ಅಂಥ ಪ್ರಜೆಗಳು. ಆದ್ದರಿಂದ, ಒಂದುವೇಳೆ ಮುಖಂಡರು ಸಮೃದ್ಧಿಗೋಸುಗ ತಮ್ಮ ಪ್ರಚಲಿತ ಬಳಕೆಯನ್ನು ತ್ಯಾಗ ಮಾಡಿದರೆ, ಜನಸಾಮಾನ್ಯರು ಬಡವರಾದರೂ ಸಹ ಹಾಗೆ ಮಾಡುವರು.

ನೈತಿಕತೆ ಮತ್ತು ಉಳಿತಾಯ ದರಗಳ ನಡುವಿನ ಪ್ರಉತದ ಜೋಡಣೆಯು ಕಾರ್ಯಸಾಧ್ಯವಲ್ಲದ ಕೇವಲ ಆದರ್ಶದ ವಿಚಾರ ಮಾತ್ರವಲ್ಲ. ಪ್ರತಿಯಾಗಿ, ಅದು ವ್ಯವಹಾರಿಕ ಹಾಗೂ ಅದ್ಭುತವಾದ ಆಲೋಚನೆಯಾಗಿದೆ. ಏಕೆಂದರೆ, ಅದು ಸಾಮಾಜಿಕ ಸಂತೃಪ್ತಿ ಹಾಗೂ ಸಾಮರಸ್ಯಗಳನ್ನು ತಗ್ಗಿಸದೆ, ಉಳಿತಾಯಗಳನ್ನು ಹೆಚ್ಚಿಸುತ್ತದೆ. ಕೆಲವು ಸಿರಿವಂತ ಜನರು ಮುಖಂಡರಷ್ಟೇ ಸ್ವಾರ್ಥರಹಿತರಿದ್ದರೂ ಸಹ, ತಮ್ಮ ನಿಷ್ಪ್ರಯೋಜಕ ಬಳಕೆಯನ್ನು ತಗ್ಗಿಸದಿರಬಹುದು. ಅಂಥವರ ವಿಷಯದಲ್ಲಿ ಕರಾಕರಣೆಯ ಮೂಲಕ ಬಲಪ್ರಯೋಗವು ಅಗತ್ಯವಾಗಬಹುದು. ಆದರೆ, ಹೆಚ್ಚು ಕಡಿಮೆ, ಪ್ರಉತ ಮಾನವೀಯ ಪ್ರಜ್ಞೆ ಹಾಗೂ ಅಧಿಕತರ ಉಳಿತಾಯಕ್ಕೋಸುಗ ಆದರ್ಶಪ್ರಾಯ ಜೀವನಗಳನ್ನೇ ಅವಲಂಬಿಸುತ್ತದೆ.

ಒಮ್ಮೆ ಮನವೊಲಿಕೆಯ ಮುಖಾಂತರವಾಗಲಿ ಇಲ್ಲವೆ ಕರಾಕರಣೆಯ ಮುಖಾಂತರವೇ ಆಗಲಿ, ಸಂಪನ್ಮೂಲಗಳನ್ನು ಹುಟ್ಟಿಸಿದರೆ, ಅನಂತರ ಅವುಗಳ ಬಳಕೆಯ ಪ್ರಶ್ನೆ ಏಳುತ್ತದೆ. ಇಲ್ಲಿ ಪ್ರಉತ ಸಮತೋಲನಾತ್ಮಕ ಬೆಳವಣಿಗೆಯನ್ನು ಬಯಸುತ್ತದೆ. ಅರ್ಥಾತ್ ಸಂಪನ್ಮೂಲಗಳನ್ನು ಅರ್ಥ ವ್ಯವಸ್ಥೆಯ ಮಹತ್ವದ ರಂಗಗಳಲ್ಲಿ ಹಂಚುವುದು. ಕೃಷಿ ಹಾಗೂ ಉದ್ದಿಮೆಗಳೆರಡರ ಮೇಲೂ ಒತ್ತು ನೀಡಬೇಕು. ಮತ್ತು ಅವು ಪರಸ್ಪರ ಪೂರಕವಾಗುವ ರೀತಿಯಲ್ಲಿ ಅಭಿವೃದ್ಧಿ ಹೊಂದಬೇಕು. ಆದ್ದರಿಂದ ಅಕ್ಕಿ ಮತ್ತು ಗೋಧಿಗಳಂಥ ಅಗತ್ಯ ವಸ್ತುಗಳಿಗಾಗಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಬೇಕು. ಹತ್ತಿ, ಕಬ್ಬು, ಜ್ಯೂಟ್ ಇತ್ಯಾದಿ ರೊಕ್ಕದ ಪೈರುಗಳನ್ನು ಸಹ ಪ್ರೋತ್ಸಾಹಿಸಬೇಕು. ಜೊತೆ ಜೊತೆಗೆ ಕೃಷಿಯಾಧಾರಿತ ಉದ್ದಿಮೆಗಳನ್ನೂ ಅಭಿವೃದ್ಧಿ ಪಡಿಸಬೇಕು. ಹೀಗೆ ಕೃಷಿಯು ಉದ್ದಿಮೆಯ ಅಭಿವೃದ್ಧಿಗೆ ಪೂರಕವಾಗಬೇಕು.

ಉದ್ದಿಮೆಗಳು, ತಮ್ಮ ಮಟ್ಟಿಗೆ ಕೃಷಿಗಾಗಿ ರಾಸಾಯನಿಕ ಗೊಬ್ಬರಗಳನ್ನೂ ಮತ್ತು ಬೇಸಾಯಾಧಾರಿತ ಉದ್ದಿಮೆಗಳಿಗಾಗಿ ಆಧುನಿಕ ಯಂತ್ರೋಪಕರಣಗಳನ್ನೂ ಒದಗಿಸಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಉದ್ದಿಮೆಯು ಕೃಷಿಯ ಆಧಾರವಾಗಬೇಕು. ಮತ್ತು ಕೃಷಿಯು ಉದ್ದಿಮೆಯ ಆಧಾರವಾಗಬೇಕು.

ಪ್ರಉತ ಉದ್ದಿಮೆಯನ್ನು ಮೂರು ಶ್ರೇಣಿಗಳಲ್ಲಿ ವಿಂಗಡಿಸಿದೆಯೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಅವುಗಳೆಂದರೆ – ಮುಖ್ಯ ವಸ್ತುಗಳನ್ನು ಉತ್ಪಾದಿಸುವ ಸಾರ್ವಜನಿಕ ರಂಗ, ಗ್ರಾಹಕ ಬಳಕೆ ವಸ್ತುಗಳನ್ನು ಉತ್ಪಾದಿಸುವ ದೊಡ್ಡ ಪ್ರಮಾಣದ ಉದ್ದಿಮೆಗಳನ್ನೊಳಗೊಂಡ ಸಹಕಾರಿ ರಂಗ. ಮತ್ತು ಬಹುತೇಕ ಖಾಸಗಿ ಉದ್ದಿಮೆಗಳನ್ನೊಳಗೊಂಡ ಚಿಕ್ಕ ಪ್ರಮಾಣದ ರಂಗ. ಒಂದು ಮೂಲ ರಂಗವು ಇನ್ನಿತರ ರಂಗಗಳೊಡನೆ, ಗೋಪುರೀಯ ರೀತಿಯಲ್ಲಿ, ಹೇಗೆ ಪೂರಕವಾಗಿವೆಯೆಂಬುದನ್ನೂ ನಾವು ಕಂಡಿದ್ದೇವೆ. ಆದರೆ ಈ ಉದ್ದಿಮೆಗಳನ್ನು ಆರಂಭಿಸುವುದು ಹೇಗೆ? ಅವುಗಳನ್ನು ಸ್ಥಾಪಿಸುವುದೆಲ್ಲಿ? ಆರ್ಥಿಕಾಭಿವೃದ್ಧಿಯ ಯಾವುದೇ ಸಿದ್ಧಾಂತವಿದ್ದರೂ ಈ ಪ್ರಶ್ನೆಗಳಿಗೆ ಅಲ್ಲಿ ಉತ್ತರವಿರಬೇಕು.

ಇಂದಿನ ಕಾರಖಾನೆಗಳ ಅಂಶಗಳನ್ನೂ ಹಾಗೂ 16 ನೆಯ ಶತಮಾನದಿಂದ 19 ನೇ ಶತಾಬ್ದಿಯ ವರೆಗೆ ಆಧುನಿಕ ವ್ಯವಸ್ಥೆಗಿಂತ ಪೂರ್ವದಲ್ಲಿ ಯುರೋಪಿನಲ್ಲಿದ್ದ ಹೊರಗೆ ಕೆಲಸ ಕೊಡುವ (ಪುಟ್ಟಿಂಗ್ ಔಟ) ವ್ಯವಸ್ಥೆಯನ್ನೂ, ಅದು ಕೂಡಿಸಿಕೊಂಡಿರುವ ಸಂಘಟನೆಯನ್ನೂ ಪ್ರಉತ ಬಯಸುತ್ತದೆ. ಸಂಯುಕ್ತ ಸಂಸ್ಥಾನಗಳಲ್ಲಿಯೂ ಸಹ ಉತ್ಪಾದನಾ ಸಂಘಟನೆಯು, 18 ನೇ ಹಾಗೂ 19 ನೇ ಶತಾಮಾನಗಳಲ್ಲಿ (ಪುಟ್ಟಿಂಗ್ ಔಟ) ಹೊರಗೇ ಕೆಲಸ ಕೊಡುವ ವ್ಯವಸ್ಥೆಯೇ ಆಗಿತ್ತು. ಬಡ ದೇಶಗಳಲ್ಲಿ ಸರ್ವ ವ್ಯಾಪಿಯಾದ ಬಡತನದ ಪರಿಹಾರವು ಅಧಿಕ ಶ್ರಮೋತ್ಪಾದನೆಗೆ ಕರೆದೊಯ್ಯುವ ಅತ್ಯಂತ ಆಧುನಿಕ ತಾಂತ್ರಿಕತೆಗಳಲ್ಲಷ್ಟೇ ಇಲ್ಲ. ಪ್ರತಿಯಾಗಿ ನಗರ ಪ್ರದೇಶಗಳಲ್ಲಿ ಸ್ಥಾಪಿಸದೆ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಿದ, ಉದ್ಯೋಗ ನಿರ್ಮಿಸಬಲ್ಲ, ಚಿಕ್ಕ ಪ್ರಮಾಣದ ಉದ್ದಿಮೆಗಳಲ್ಲಿಯೂ ಇದೆ. ಕೇವಲ ದೊಡ್ಡ ಪ್ರಮಾಣದ ಉದ್ದಿಮೆಗಳಲ್ಲಿ ಇತ್ತೀಚೆನ ತಂತ್ರಜ್ಞಾನವನ್ನು ಉಪಯೋಗಿಸಬಹುದು. ಅವುಗಳಿಗೆ ವಿಪುಲ ಬಂಡವಾಳ ಹೂಡಿಕೆ ಅಗತ್ಯ. ಕುಶಲ ಕಾರ್ಮಿಕರು ಮತ್ತು ಗಣನೀಯ ಪ್ರಮಾಣದ

ಆರ್ಥಿಕ ಅನುಕೂಲಗಳಿರುವ ಪುರ ಪ್ರದೇಶಗಳಲ್ಲಿ ಅವು ಲಾಭದಾಯಕವಾಗುತ್ತವೆ. ಆದರೆ, ಅನೇಕ ಅನಭಿವೃದ್ಧ ಅರ್ಥವ್ಯವಸ್ಥೆಗಳಲ್ಲಿ ನಗರ ಪ್ರದೇಶಗಳು ಈಗಾಗಲೇ ಹೆಚ್ಚು ಜನಸಾಂದ್ರತೆ ಹೊಂದಿ ತಮ್ಮವರೇ ಆದ ನಿರುದ್ಯೋಗಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಹೊಂದಿವೆ. ಹೀಗಾಗಿ, ಹಳ್ಳಿಗರನ್ನು ನಗರಗಳಿಗೆ ಆಕರ್ಷಿಸುವ ಅವಶ್ಯಕತೆಯಿಲ್ಲ. ಪ್ರತಿಯಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಚಿಕ್ಕ ಉದ್ದಿಮೆಗಳನ್ನು ಸ್ಥಾಪಿಸಬೇಕು. ಮತ್ತು ಅವುಗಳ ಉತ್ಪಾದನೆಗಳನ್ನು ಸಹ ಅಲ್ಲಿಯೇ ಮಾರಾಟ ಮಾಡಬೇಕು. ಈ ಉದ್ದಿಮೆಗಳಿಗಾಗಿ ಕಚ್ಚಾ ಸರಕನ್ನೂ ಹಾಗೂ ಆಧುನಿಕ ಯಂತ್ರಗಳನ್ನೂ ಸಾರ್ವಜನಿಕ ರಂಗದಿಂದ ಪಡೆಯಬೇಕು. (10)

ಉದಾಹರಣಾರ್ಥ, ಜವಳಿ ಉದ್ದಿಮೆಯನ್ನೇ ತಗೆದುಕೊಳ್ಳಿರಿ. ನೂಲು ಮತ್ತು ಶಕ್ತಿಚಾಲಿತ ಮಗ್ಗಗಳನ್ನು ಸಾರ್ವಜನಿಕ ರಂಗದಲ್ಲಿ ಉತ್ಪಾದಿಸಬಹುದು. ಶಕ್ತಿಚಾಲಿತ ಮಗ್ಗಗಳನ್ನೂ ಮತ್ತು ನೂಲನ್ನೂ ಮತ್ತೆ ಹಳ್ಳಿಗಳಲ್ಲಿಯ ನೇಕಾರರಿಗೆ ತಮ್ಮತಮ್ಮ ಮನೆಗಳಲ್ಲಿ ಬಟ್ಟೆ ನೇಯಲು ಕೊಡಬಹುದು. ಈ ರೀತಿ ಉತ್ಪಾದಿಸಲಾದ ಬಟ್ಟೆಯನ್ನು ನೆರೆಹೊರೆಯ ಹಳ್ಳಿಗಳಲ್ಲಿ ಮಾರಿ ಮಿಕ್ಕುಳಿದುದನ್ನು ನಗರಗಳಲ್ಲಿ ಮಾರಬೇಕು. ಒಂದು ವೇಳೆ ಹಳ್ಳಿಗಾಡು ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಲಭ್ಯವಿರದಿದ್ದರೆ, ಆಗ ಕೈಮಗ್ಗಗಳನ್ನೇ ವಿತರಿಸಬೇಕು. ಅನೇಕ ಉದ್ದಿಮೆಗಳಲ್ಲಿ ಅನುಸರಿಸಬಹುದಾದ ಕ್ರಮಕ್ಕೆ ಇದೊಂದು ನಿದರ್ಶನ ಮಾತ್ರ.

ಈ ರೀತಿ ಹಳ್ಳಿಗಾಡಿನಲ್ಲಿ ಚಿಕ್ಕ ಉದ್ದಿಮೆಗಳನ್ನು ಸ್ಥಾಪಿಸುವುದು ಹೊರಗೇ ಕೆಲಸ ನೀಡುವ (ಪುಟ್ಟಿಂಗ್ ಔಟ್) ವ್ಯವಸ್ಥೆಯೊಂದಿಗೆ ಎಷ್ಟರ ಮಟ್ಟಿಗೆ ಸರಿದೂಗುತ್ತದೆಯೆಂಬುದನ್ನು ನೋಡುವಾ: ಈ ವ್ಯವಸ್ಥೆಯಲ್ಲಿ ಮಧ್ಯವರ್ತಿ ವ್ಯಾಪಾರಿಯ ಅಥವಾ (ಪುಟ್ಟರ್ ಔಟ್) ಹೊರಗೆಲಸ ನೀಡುವವನು ಕುಶಲ ಮತ್ತು ಇತರ ಶ್ರಮ ಜೀವಿಗಳಿಗೆ ಕಚ್ಚಾ ಸರಕು ಪೂರೈಸುತ್ತಾನೆ. ಅವರು ತಮ್ಮ ತಮ್ಮ ಮನೆಗಳಲ್ಲಿ ಕೆಲಸ ಮಾಡುತ್ತಾರೆ. ಅನಂತರ ಅವನು ಪಕ್ಕಾ ಮಾಲನ್ನು ಸಂಗ್ರಹಿಸುತ್ತಾನೆ. ಅದನ್ನು ಪೇಟೆಗೆ ಒಯ್ಯುತ್ತಾನೆ. ಇಲ್ಲವೆ ಇನ್ನೊಂದು ಹಂತದ ತಯಾರಿಕೆಗಾಗಿ ಇನ್ನೋರ್ವ ಕುಶಲ ಕರ್ಮಿಯ ಕಡೆಗೆ ಒಯ್ಯುತ್ತಾನೆ. ಈ (ಪುಟ್ಟಿಂಗ್ ಔಟ್) ಹೊರಗೆ ಕೆಲಸ ನೀಡುವ ವ್ಯವಸ್ಥೆಯು ಕಾಗದ, ಗಣಿ, ಹಡಗು ನಿರ್ಮಾಣ, ಕುಂಬಾರಿಕೆ, ಗಾಜಿನ ಪಾತ್ರೆ ತಯಾರಿಕೆ, ಕಬ್ಬಿಣ ಮತ್ತು ವಿಶೇಷವಾಗಿ ಉಣ್ಣೆ ಮತ್ತು ನೂಲು ಉದ್ದಿಮೆಯಲ್ಲಿ ಪ್ರಚಲಿತವಿತ್ತು. ಮೂಲದಲ್ಲಿ ಹಾಗೂ ಕಾರ್ಯ ಕಲಾಪಗಳ ಮಟ್ಟದಲ್ಲಿ ಮಧ್ಯವರ್ತಿ ಬದಲಾಗುತ್ತಿದ್ದರು. ಅನೇಕರು ತೀರ ವಿನೀತರಾಗಿ ಆರಂಭಿಸಿದರು. ಅವರು ಕೂಲಿ ಕುಂಬಳಿ ಮಾಡುತ್ತಿದ್ದರು. ಆದರೆ ಬಹುಪಾಲು ಜನರು ಕರಕುಶಲ ವೃತ್ತಿಗಳಲ್ಲಿ ಸಂಘಟಿತರಾದ ವ್ಯಾಪಾರಿ ವರ್ಗಕ್ಕೆ ಸೇರಿದವರಾಗಿದ್ದರು.

ಬಹಳ ಸಲ, ವ್ಯಾಪಾರಿಗಳು ಸಾಲದ ಮೇಲೆ ಕಚ್ಚಾ ಸರಕುಗಳನ್ನು ಒದಗಿಸಿದರು. ಮತ್ತು ತಯಾರಾದ ಮಾಲನ್ನು ಬಿಡಿಬಿಡಿಯಾಗಿ ಕೊಂಡು ಆಗೀಗ, ಕೆಲಸಗಾರರು ಕಚ್ಚಾ ಮಾಲನ್ನು ಕೊಂಡು ಕೂಲಿ ರೂಪದಲ್ಲಿ ಹಣ ಪಾವತಿ ಕರಾರು ಮಾಡಿಕೊಂಡರು.

ಉಪಕರಣಗಳ ವಿಷಯದಲ್ಲಿಯೂ ಕೆಲಸ ನೀಡುವವನು (ಪುಟ್ಟರ್ ಔಟ್) ಹೆಚ್ಚಾಗಿ ಬಾಡಿಗೆ ಮೇಲೆ ಕೊಡುತ್ತಿದ್ದನು. ಆದರೆ ಆಗೀಗ ಕೆಲಸಗಾರರಿಗೆ ಮಾರುತ್ತಿದ್ದನು.

ಇತ್ತ ಕೆಲಸಗಾರರು ಹೆಚ್ಚಾಗಿ ತಮ್ಮ ತಮ್ಮ ಮನೆಗಳಲ್ಲಿ ಸಾಮಾನ್ಯವಾಗಿ ಹೊರಗಿನವರ ಮೇಲ್ವಿಚಾರಣೆ ಇಲ್ಲದೆ ಕೆಲಸ ಮಾಡುತ್ತಿದ್ದರು. ವಿದ್ಯುಚ್ಚಾಲಿತ ಯಂತ್ರಗಳು ಹೊರಬಂದ ಮೇಲೆ ಅನೇಕ ಚಿಕ್ಕ ಚಿಕ್ಕ ಕಾರ್ಯಾಗಾರಗಳ, ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿ ಬಂದವು. ಈ ಕಾರ್ಯಾಗಾರಗಳಲ್ಲಿ, ಓರ್ವ ಮುಖ್ಯ ಕಸಬುಗಾರನ ಮೇಲ್ವಿಚಾರಣೆಯಡಿ ಎಂಟರಿಂದ ಹತ್ತು ಜನ ಕುಶಲ ಕರ್ಮಿಗಳು ಕೆಲಸ ಮಾಡುತ್ತಿದ್ದರು. ಕೆಲವೊಮ್ಮೆ ಕೆಲಸಗಾರರು ಈ ಕಾರ್ಯಾಗಾರಗಳಲ್ಲಿ ಸ್ಥಳವನ್ನು ಬಾಡಿಗೆಗೆ ಪಡೆಯುತ್ತಿದ್ದರು. ಮತ್ತು ಮಧ್ಯವರ್ತಿಗೋಸುಗ ಸರಕುಗಳನ್ನು ಉತ್ಪಾದಿಸುತ್ತಿದ್ದರು. ಉದಾಹರಣೆ 17 ನೇ ಶತಮಾನದಲ್ಲಿ ಇಂಗ್ಲಂಡಿನಲ್ಲಿ ಶ್ರೂಸಬರ್ರಿ ಎಂಬ ಶ್ರೀಮಂತನು ಕೇಂದ್ರೀಯವಾಗಿ ಸ್ಥಾಪಿಸಿದ ಸಾಣೆ – ಚಕ್ರಗಳನ್ನು ಕೊರೆಯುವ ವೃತ್ತಿಯವರಿಗೆ ಬಾಡಿಗೆ ಮೇಲೆ ನೀಡಿದನು. ಅವರು ತಮ್ಮಲ್ಲಿ ಕೆಲಸವಿರದ ಸಮಯದಲ್ಲಿ, ಇನ್ನಿತರ ಕೆಲಸಗಾರರಿಗೆ ಅದನ್ನು ಬಾಡಿಗೆಗೆ ಕೊಡುತ್ತಿದ್ದರು.

ವಿದ್ಯುಚ್ಚಾಲಿತ ಯಂತ್ರಗಳ ಅಭಿವೃದ್ಧಿಯಾದ ಬಳಿಕ ದೊಡ್ಡ ಪ್ರಮಾಣದ ಕಾರ್ಖಾನೆಗಳನ್ನು ನಗರ ಪ್ರದೇಶದಲ್ಲಿ ಸ್ಥಾಪಿಸಲಾಯಿತು. ಆದರೂ ಸುದೀರ್ಘ ಕಾಲ ಪರ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಹೊರಗೆ ಕೆಲಸ ನೀಡಿಕೆ ವ್ಯವಸ್ಥೆಯು ಚೆನ್ನಾಗಿ ನಡೆಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಲಾಭದಾಯಕ ಚಿಕ್ಕ ಚಿಕ್ಕ ಉದ್ದಿಮೆಗಳೊಂದಿಗೆ ದೊಡ್ಡ ಪ್ರಮಾಣದ ಉದ್ದಿಮೆಗಳೂ ಸಹ ಸಹವರ್ತಿಯಾಗಿ ಇರಬಲ್ಲವೆಂಬುದನ್ನು ಇದು ತೋರಿಸುತ್ತದೆ. ಹಳ್ಳಿಯಿಂದ ನಗರ ಪ್ರದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗದೆ, ಹೆಚ್ಚಿನ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳನ್ನು ಉಂಟು ಮಾಡಲೆಂದು, ಶೀಘ್ರ ಆರ್ಥಿಕ ಅಭಿವೃದ್ಧಿಗಾಗಿ ಈ ಎರಡನೆಯ ಮಾದರಿಯನ್ನು ಬಳಸುವಂತೆ ಪ್ರಬುತ ಪ್ರತಿಪಾದಿಸುತ್ತದೆ. ಇದರಿಂದ ನಗರ ಪ್ರದೇಶದ ಸಾಂದ್ರತೆ ಹಾಗೂ ಅಸಂಖ್ಯಾತ ತತ್ಸಂಬಂಧಿ ಸಮಸ್ಯೆಗಳು ತಪ್ಪುತ್ತವೆ.

ಸರಕಾರದ ಕ್ರಿಯಾಸಂಪನ್ನ ಪಾತ್ರವನ್ನು ಸೇರಿಸುವ ಮೂಲಕ ಈ ಕಾರ್ಖಾನೆ ಮತ್ತು ಮಧ್ಯವರ್ತಿ ವ್ಯವಸ್ಥೆಯನ್ನು ಪ್ರಬುತ ತಿದ್ದುತ್ತದೆ. ಸರಕಾರವು ಕಚ್ಚಾ ಸರಕು ಹಾಗೂ ಉಪಕರಣಗಳನ್ನು ಉತ್ಪಾದಿಸುವ ಆಧುನಿಕ ಯಂತ್ರಗಳಲ್ಲಿ ನೇರವಾಗಿ ಹಣ ಹೂಡುತ್ತದೆ. ಕ್ರಮೇಣ, ಕಚ್ಚಾ ಸರಕು ಹಾಗೂ ಉಪಕರಣಗಳನ್ನು ಗ್ರಾಮಾಂತರ ಪ್ರದೇಶದಲ್ಲಿಯ ಕುಶಲ ಕರ್ಮಿಗಳಿಗೆ, ಅರ್ಧವ್ಯವಸ್ಥೆಯಲ್ಲಿ ಪಾರಂಪಾರವಾಗಿ ಹಬ್ಬಿದ ಶಾಖೋಪಶಾಖೆಗಳನ್ನು ಹೊಂದಿದ, ಕೇಂದ್ರೀಯ ಚಿಕ್ಕ ಪ್ರಮಾಣದ ಉದ್ದಿಮೆಗಳ ಪ್ರತಿನಿಧಿಗಳ ಮುಖಾಂತರ, ಪೂರೈಸಬೇಕು. ಪ್ರಾರಂಭಾವಸ್ಥೆಯಲ್ಲಿ ಬಹುತೇಕ ಕಾರ್ಮಿಕರು ತಮ್ಮವ್ಯಕ್ಕೆ ತಾವು ಹಣ ಹೂಡಲಾರದಷ್ಟು ಬಡವರಾಗಿರುವುದರಿಂದ, ಪ್ರತಿನಿಧಿ ಸಂಸ್ಥೆಯು (ಎಜೆನ್ಸಿ) ಕೆಲಸಗಾರರಿಗೆ ಯಂತ್ರೋಪಕರಣಗಳನ್ನೂ ಹಾಗೂ ಕಚ್ಚಾ ಸರಕುಗಳನ್ನೂ ಗುತ್ತಿಗೆಯ ಮೇಲೆ ಪೂರೈಸಬೇಕು. ಇಲ್ಲವಾದರೆ, ಅವರು ತಮ್ಮ ತಮ್ಮ ಗಳಿಕೆಯಲ್ಲಿ, ಕಡಿತ ಮಾಡಬಹುದಾದ ಕಂತುಗಳ ಮೇಲೆ,

ಯಂತ್ರಗಳನ್ನು ಖರೀದಿಸಬಹುದು. ಕೆಲಸಗಾರರು ತಮ್ಮ ಮನೆಗಳಲ್ಲಿ ಕೆಲಸ ಮಾಡಬಹುದು. ಇಲ್ಲವೆ ಅವಶ್ಯಬಿದ್ದರೆ, ಗ್ರಾಮಾಂತರ ಕಾರ್ಯಾಗಾರಗಳಲ್ಲಿ ಕೆಲಸ ಮಾಡಬಹುದು.

ಈ ಕಾರ್ಯಗಳಲ್ಲದೆ, ಪ್ರತಿನಿಧಿ ಸಂಸ್ಥೆಯು 1) ಕೆಲಸಗಾರರಿಗೆ ಯಂತ್ರ ಬಳಕೆಯಲ್ಲಿ ಅವಶ್ಯಕ ತರಬೇತಿಯನ್ನು ಒದಗಿಸಬೇಕು. 2) ಕನಿಷ್ಠ ಪಕ್ಷ ಪ್ರಾರಂಭದಲ್ಲಿ ಯಾದರೂ ಗುಣಮಟ್ಟ ನಿಯಂತ್ರಣದ ದೃಷ್ಟಿಯಿಂದ ಅವರ ಕಾರ್ಯದ ಮೇಲ್ವಿಚಾರಣೆ ಮಾಡಬೇಕು. 3) ಬಿಡಿ ಬಿಡಿಯಾಗಿ ಅವರ ಸರಕನ್ನು ಖರೀದಿಸಬೇಕು. ಈ ಸರಕುಗಳನ್ನು ನೇರವಾಗಿ ಪ್ರತಿನಿಧಿ ಸಂಸ್ಥೆಯೇ ಸುತ್ತುಮುತ್ತಲಿನ ಪ್ರದೇಶದಲ್ಲಿ ಮಾರಾಟ ಮಾಡಬಹುದು. ಇಲ್ಲವಾದರೆ, ಗ್ರಾಹಕ ಸಹಕಾರಿ ಸಂಘಗಳಿಗೆ ಮಾರಬಹುದು. ಅವು ಆ ಬಳಿಕ, ಅಂತಿಮ ಗ್ರಾಹಕರಿಗೆ ಸರಕನ್ನು ಮಾರಬಹುದು. ಇದಕ್ಕೆ ಪರ್ಯಾಯವಾಗಿ, ಪ್ರತಿನಿಧಿ ಸಂಸ್ಥೆಗಳೇ ಸಹಕಾರಿ ಸಂಘಗಳನ್ನು ಸಂಘಟಿಸುವಂತೆ ಕೆಲಸಗಾರರನ್ನು ಪ್ರೋತ್ಸಾಹಿಸಬಹುದು. ಅವು ಕಚ್ಚಾ ಸರಕು ಹಾಗೂ ಯಂತ್ರೋಪಕರಣಗಳನ್ನು ಬಾಡಿಗೆಗೆ ನೀಡಬಹುದು, ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಬಹುದು ಮತ್ತು ಗುಣಮಟ್ಟ ನಿಯಂತ್ರಣ ಹಾಗೂ ಪಕ್ಕಾ ಸರಕಿನ ಮಾರಾಟದ ಕಾರ್ಯಗಳನ್ನು ನೆರವೇರಿಸಬೇಕು. ಈ ರೀತಿ, ಗ್ರಾಮಾಂತರ ಪ್ರದೇಶದಲ್ಲಿ ಸಕಲ ಅವಶ್ಯಕ ಸರಕುಗಳಿಗಾಗಿ ಕೆಲಸಗಾರರ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಬಹುದು. ಕಚ್ಚಾ ಸರಕುಗಳು ಕೃಷಿ ಮೂಲಕ ಹಾಗೂ ಯಂತ್ರೋಪಕರಣಗಳು ಚಿಕ್ಕ ಉದ್ದಿಮೆಗಳ ಪ್ರತಿನಿಧಿ ಸಂಸ್ಥೆಯ ಮೂಲಕ ಬರುತ್ತವೆ. ಇದೇ ಕೃಷಿ ಆಧಾರಿತ ಉದ್ದಿಮೆಗಳಿಗೂ ಅನ್ವಯಿಸುತ್ತದೆ. ಈ ಮಾದರಿಯನ್ನನುಸರಿಸಿ, ಪುರ ಪ್ರದೇಶಗಳಲ್ಲಿ ಸಹ ಚಿಕ್ಕ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸಬಹುದು.

ಪ್ರಸ್ತುತ ಸೂಚಿಸುವ ಆರ್ಥಿಕ ಅಭಿವೃದ್ಧಿಯ ಕಾರ್ಯಾನೆ ಮತ್ತು ಹೊರಗೆ ಕೆಲಸ ನೀಡುವ ಮಧ್ಯವರ್ತಿ ಪದ್ಧತಿಯು, ಕಳೆದ ನಾಲ್ಕು ದಶಕಗಳಿಂದ ಬಡ ರಾಷ್ಟ್ರಗಳು ಅನುಸರಿಸಿದ ಔದ್ಯಮೀಕರಣದ ಮಾರ್ಗಕ್ಕಿಂತ ಹಲವಾರು ಹೆಚ್ಚಿನ ಅನುಕೂಲಗಳನ್ನು ಹೊಂದಿದೆ.

ಮೊತ್ತಮೊದಲನೆಯ ಸುಸ್ಪಷ್ಟ ಅನುಕೂಲವೆಂದರೆ, ಗ್ರಾಮಾಂತರ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಗುಳೇ ಹೋಗುವ ಸ್ಫೋಟಕ ಸ್ಥಿತಿ ತಪ್ಪುತ್ತದೆ. ಇದರಿಂದ ಜನಸಾಂದ್ರತೆಯ ಹಾಗೂ ನಗರ ಮಾಲಿನ್ಯದ ತಜ್ಞನ್ಯ ಸಮಸ್ಯೆಗಳನ್ನು ತಪ್ಪಿಸಬಹುದಾಗಿದೆ.

ಎರಡನೆಯ ಅನುಕೂಲವೆಂದರೆ, ಕೆಲಸಗಾರರು ತಮ್ಮ ಮನೆಯಲ್ಲಿ ಕೆಲಸ ಮಾಡುವ ವರೆಗೆ, ದೊಡ್ಡ ದೊಡ್ಡ ಕಟ್ಟಡಗಳ ಅಗತ್ಯವೂ ಇಲ್ಲ; ಮತ್ತು ದೊಡ್ಡ ಕಾರ್ಖಾನೆಗಳ ಪೂರ್ವಭಾವಿ ಸರಂಜಾಮು ಬೇಕಿಲ್ಲ. ಇದರ ಪರಿಣಾಮವೆಂದರೆ, ಬಂಡವಾಳ ವೆಚ್ಚದಲ್ಲಿ ಸಾಕಷ್ಟು ಉಳಿತಾಯವನ್ನು ಸಾಧಿಸಬಹುದು.

ಮೂರನೆಯದಾಗಿ, ಕೆಲಸಗಾರರ ಸಹಕಾರಿ ಸಂಸ್ಥೆಗಳು ಅಥವಾ ಕೆಲಸಗಾರರು ಸಹ, ತಮ್ಮ ಸ್ವಂತ ಉಪಕರಣಗಳನ್ನು ಬಾಡಿಗೆ ಮೇಲೆ ಪಡೆಯುವ ಇಲ್ಲವೆ ಅವುಗಳ ಒಡೆತನ ಹೊಂದಬಹುದಾದ ವ್ಯವಸ್ಥೆಯು ಅದೇ ರೀತಿಯ ಉತ್ಪಾದಕನು ಕೆಲಸಗಾರರನ್ನು ಕೂಲಿ

ಗಿಟ್ಟುಕೊಳ್ಳುವ ಬಂಡವಾಳ ಸಂಸ್ಥೆಯನ್ನಾಧರಿಸಿದ ಉತ್ಪಾದನಾ ಸಂಘಟನೆಗಿಂತ ಹೆಚ್ಚು ಶ್ರಮದ ಉತ್ಪಾದಕತೆಯನ್ನು ಹೊಂದಿರುತ್ತದೆ. ಈ ಅಂಶವನ್ನು ವನೆಕ್ ಅವರು ತಮ್ಮ ಉಪಜೀವನಾತ್ಮಕ ಅರ್ಥ ವ್ಯವಸ್ಥೆಯಲ್ಲಿಯ ಆರ್ಥಿಕ ಅಭಿವೃದ್ಧಿಯ ವಿಶ್ಲೇಷಣೆಯಲ್ಲಿ ನೀಡಿದ್ದಾರೆ. (12)

ನಾಲ್ಕನೆಯದಾಗಿ, ಈ ವ್ಯವಸ್ಥೆಯು ತುಲನಾತ್ಮಕವಾಗಿ ಹೆಚ್ಚು ನ್ಯಾಯ ಸಮ್ಮತ ಆದಾಯದ ವಿತರಣೆಯನ್ನು ಉಂಟು ಮಾಡುತ್ತದೆ. ಈ ಹಿಂದಿನ ಅಭಿವೃದ್ಧಿ ಪ್ರಯತ್ನಗಳ ಪ್ರಸಂಗಕ್ಕೆ ವ್ಯತಿರಿಕ್ತವಾಗಿ, ಬಡವರು – ಬರೀ ಸಿರಿವಂತರಲ್ಲ – ಸಹ ಆರ್ಥಿಕ ಅಭಿವೃದ್ಧಿಯ ಫಲಗಳನ್ನು ಸವಿಯಬಲ್ಲರು.

ಅಂತಿಮವಾಗಿ, ಅಗತ್ಯದ ಸರಕುಗಳಲ್ಲಿ ಸ್ವಾವಲಂಬಿಯಾಗಿರುವ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಯ ದುರಂತಗಳಿಂದ ಘಟಿಸುವ ಸಾಗಾಣಿಕೆಯ ಕುಂದು ಕೊರತೆಗಳು ಮತ್ತು ಅಡೆತಡೆಗಳು ದೂರ ದೂರದ ಜಾಗೆಗಳಲ್ಲಿ ಅಭಾವವನ್ನು ಉಂಟು ಮಾಡಲಾರವು.

ಆಧಾರ ಗ್ರಂಥಗಳು

1. ಬಲಾಸ್ಸಾ ಬಿ. ಮತ್ತು ಟಿ.ಬರ್ಟ್ಸಾಂಡ, "ಗ್ರೋಥ್ ಪರ್ಫಾರನ್ಸ ಆಫ್ ಈಸ್ಟರ್ನ್ ಯುರೋಪಿಯನ್ ಇಕಾನಾಮಿಕ್ಸ ಆ್ಯಂಡ ಕಂಪೈರೇಬಲ್ ವೆಸ್ಟರ್ನ ಯುರೋಪಿಯನ್ ಇಕಾನಾಮಿಕ್ಸ ಜೆ ವನೇಕ್" (ಸಂ) "ಸೆಲ್ಫ ಮ್ಯಾನೇಜಮೆಂಟ : ಇಕಾನಾಮಿಕ್ ಲಿಬರೇಶನ್ ಆಫ್ ಮ್ಯಾನ್" ಪೆಂಗ್ವಿನ್ ಬುಕ್ಸ, ಬಾಲ್ಟಿಮೋರ – 1976

2. ಬತ್ರಾ ಆರ್. ಎನ್. – "ದಿ ಡಾನಫಾಲ್ ಆಫ್ ಕೆಪಿಟಾಲಿಜಂ ಆ್ಯಂಡ ಕಮ್ಯುನಿಜಂ : ಎ ನ್ಯೂ ಸ್ಟಡಿ ಆಫ್ ಹಿಸ್ಟರಿ" ಲಂಡನ್ ಮತ್ತು ದಿಲ್ಲಿ – 1978.

3. "ಟೆಕ್ನಾಲಾಜಿಕಲ್ ಚೇಂಜ ಇನ್ ದಿ ಸೋವಿಯ್ಟ್ ಕಲೆಕ್ಟಿವ್ ಫಾರ್ಮ', ಅಮೇರಿಕನ್ ಇಕಾನಾಮಿಕ್ ರಿವ್ಯೂ – 1974.

4. ಕಾಮನರ ಬಿ : "ದಿ ಕ್ಲೋಜಿಂಗ ಸರ್ಕಲ್", ಲಂಡನ್ – 1963.

5. ಸರಕಾರ ಪಿ. ಆರ್. – 'ಪ್ರಸ್ತುತ ಇನ್ ಎ ನಟ್‌ಶೆಲ್', XIII ಓರಿಯಂಟ್ ಪ್ರೆಸ್, ಕಲಕತ್ತೆ – 1988

6. ಡೋಮರ ಈ. ಡಿ. 'ದಿ. ಸೋವಿಯಟ್ ಕಲೆಕ್ಟಿವ್ ಫಾರ್ಮ ಆ್ಯಜ ಎ ಪ್ರೊಡ್ಯೂಸರ ಕೋ– ಆಪರೇಟಿವ್", ಅಮೇರಿಕನ್ ಇಕಾನಾಮಿಕ್ ರಿವ್ಯೂ – 1966.

7. ಎಹರ್ಲಿಕ್ ಪಿ ಮತ್ತು ಎ : ಪಾಪ್ಯುಲೇಶನ್, ರಿಸೋರ್ಸಿಸ್, ಎನ್ವಿರಾನ್‌ಮೆಂಟ, ಡಡ್ಲೊ ಕೆ ಎಚ್. ಫ್ರೀಮನ್, ಸ್ಯಾನ್‌ಫ್ರಾನ್ಸಿಸ್ಕೋ– 1972.

8. ಮೆಡೋವ್ಸ ಡಿ. ಎಚ್. ಎಲ್. "ದಿ. ಲಿಮಿಟ್ಸ್, ಟು ಗ್ರೋಥ", ಆರ್ಥ ಐಲ್ಯಾಂಡ, ನ್ಯೂಯಾರ್ಕ – 1972.

9. ಮಿಶಾನ ಈ. "ದಿ. ಕಾಸ್ಟ್ಸ ಆಫ್ ಇಕಾನಾಮಿಕ್ ಗ್ರೋಥ", ಪಾಲಿಕನ್ ಹರ್ಮೋಂಡ್ಸ ವರ್ಥ – 1967.

10. ಸರಕಾರ ಪಿ. ಆರ್. 'ಪ್ರಾಬ್ಲೆಮ್ಸ್ ಆಫ್ ದಿ ಡೇ" ಆನಂದ ಮಾರ್ಗ ಪ್ರಕಾಶನ, ಕಲಕತ್ತೆ – 1959.

11. ವನೇಕ್ ಜಿ. ಡಿ. "ದಿ ಜನರಲ್ ಥಿಯರಿ ಆಫ್ ಲೇಬರ್ ಮ್ಯಾನೇಜ್ಡ್ ಮಾರ್ಕೆಟ್ ಇಕಾನಾಮಿಕ್ಸ್, ಕಾರ್ನೆಲ್ ಯುನಿವರ್ಸಿಟಿ ಪ್ರೆಸ್, ಇಥಾಕಾ – 1971.

12. "ದಿ. ಸಬ್ಸಿಸ್ಟನ್ಸ ಇನ್‌ಕಮ್, ಎಫರ್ಟ ಆ್ಯಂಡ ಡೆವಲಪಮೆಂಟ ಪೊಟೆನ್ಶಲ್ ಆಫ್ ಲೇಬರ ಮ್ಯಾನೇಜಮೆಂಟ ಅಂಡ ಅದರ ಇಕಾನಾಮಿಕ ಸಿಸ್ಟಿಮ್ಸ" ಜೆ ಮಣೇಕ (ಸಂ) ಸೆಲ್ಫ ಮ್ಯಾನೇಜಮೆಂಟ : ಇಕನಾಮಿಕ್ ಲಿಬರೇಶನ್ ಆಫ್ ಮ್ಯಾನ್" ಪೆಂಗ್ವಿನ್ ಬುಕ್ಸ ಬಾಲ್ಟಿಮೋರ, 1973.

13. ವಾರ್ಡ ಬಿ. "ದಿ ಸೊಶಲಿಸ್ಟ ಇಕಾನಮಿ : ಎ ಸ್ಟಡಿ ಆಫ್ ಆರ್ಗನೈಜೇಶನಲ್ ಅಲ್ಟರ್ನೇಟಿವ್ಸ್", ರ್ಯಾಂಡಮ್ ಹೌಸ, ನ್ಯೂಯಾರ್ಕ – 1967.

●○●

ಅಧ್ಯಾಯ – 5

ಪ್ರಉತದ ಯೋಜನಾ ಪದ್ಧತಿ

ಪ್ರಉತೀಯ ಅರ್ಥ ವ್ಯವಸ್ಥೆಯನ್ನು ಕಾರ್ಯ ರೂಪಕ್ಕಿಳಿಸಲು ಮತ್ತು ತನ್ಮೂಲಕ ಭಾರತದಂಥ ಅಭಿವೃದ್ಧಿಶೀಲ ದೇಶದಿಂದ ಬಡತನವನ್ನು ನಿರ್ಮೂಲಗೊಳಿಸಲು ಆರ್ಥಿಕ ಯೋಜನೆಯು ಅಗತ್ಯವಾಗಿದೆ. ಅಭಿವೃದ್ಧ ಅರ್ಥವ್ಯವಸ್ಥೆಗಳಲ್ಲಿ ಪ್ರಉತೀಯ ಗುರಿಗಳಾದ ಸರ್ವರ ಸಂತುಷ್ಟಿ– ಸಮೃದ್ಧಿಗಳನ್ನು ಸರಕಾರದ ಹಸ್ತಕ್ಷೇಪವಿಲ್ಲದೆ, ಕಾರ್ಯಗತಗೊಳಿಸಬಹುದು. ಆದರೆ ಅಭಿವೃದ್ಧಿಯ ಅಗತ್ಯಗಳ ಕೊರತೆ ಇರುವ ತೃತೀಯ ಜಗತ್ತಿನಲ್ಲಿ ತ್ವರಿತ ಆರ್ಥಿಕ ಬೆಳವಣಿಗೆಗೋಸುಗ ವಿಸ್ತೃತ ಸರಕಾರಿ ಯೋಜನೆಯು ಅನಿವಾರ್ಯ.

ಆರ್ಥಿಕ ಯೋಜನೆಗಳನ್ನು, ಭಾರತವೂ ಸೇರಿದಂತೆ ಅನೇಕ ದೇಶಗಳು ಅಳವಡಿಸಿಕೊಂಡಿವೆ. ಆದರೆ ಪ್ರಉತೀಯ ಯೋಜನೆಯು ಈಗಾಗಲೇ ಪ್ರಯೋಗಿಸಲಾದ ಇತರ ಯೋಜನೆಗಳಿಗಿಂತ ತೀರ ಭಿನ್ನ. ಅದು ರಶಿಯಾದಲ್ಲಿ ಮತ್ತು ಚೀನಾದಲ್ಲಿ ದೀರ್ಘ ಕಾಲ ಪ್ರಯೋಗಿಸಿದ ಕೇಂದ್ರೀಕೃತ ವ್ಯವಸ್ಥೆಗಿಂತ ಅತಿದೂರ. ಸಾಮ್ಯವಾದಿ ರಾಷ್ಟ್ರಗಳೂ ಸಹ ಈಗ ತಮ್ಮ ವ್ಯವಸ್ಥೆಯನ್ನು ತ್ಯಜಿಸುವಂತೆ ಕಾಣಬರುತ್ತದೆ. ಕಳೆದ ಏಳು ಪಂಚವಾರ್ಷಿಕ ಯೋಜನೆಗಳ ಮೂಲಕ ಭಾರತದಲ್ಲಿ ಪ್ರಯೋಗಿಸಿದ ಮಿಶ್ರ ಅರ್ಥ ವ್ಯವಸ್ಥೆಗಿಂತ ಪ್ರಉತ ಅಮೂಲಾಗ್ರ ಭಿನ್ನವಾಗಿದೆ.

ವಿಕೇಂದ್ರೀಕೃತ ಯೋಜನಾ ನಿರೂಪಣೆ :

ಸಾಮ್ಯವಾದಿ ರಾಷ್ಟ್ರಗಳಲ್ಲಿ ಮತ್ತು ಭಾರತದಲ್ಲಿ, ಯೋಜನೆಗಳನ್ನು ಸ್ಥಳೀಯ ಪ್ರದೇಶಗಳಿಂದ ಬಹುದೂರವಿರುವ ಯೋಜನಾ ಮಂಡಳಿಯು, ಕೇಂದ್ರ ಒಕ್ಕೂಟ ಮಟ್ಟದಲ್ಲಿ ರೂಪಿಸುತ್ತದೆ. ಇದರ ಅನಿವಾರ್ಯ ಪರಿಣಾಮವೆಂದರೆ, ಗುರಿ ಮತ್ತು ಅವುಗಳ ಕೃತಕೃತ್ಯತೆಗಳ ಮಧ್ಯೆ ಇರುವ ಬಾಯ್ತೆರದ ಮಹದಂತರ. ಸರಕಾರವು ದೊಡ್ಡ ಆಡಂಬರದೊಂದಿಗೆ ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ. ಆದರೆ ಆ ಬಳಿಕ ಐದು ವರ್ಷಗಳ ನಂತರ ಒಳ್ಳೆಯ ಉದ್ದೇಶಗಳು ಈಡೇರದಾಗಲು ಸೋತು ಹೈರಾಣಾಗುತ್ತದೆ.

ಶ್ರೀ ಸರಕಾರ ಅವರ ಮೇರೆಗೆ, ಅಭಿವೃದ್ಧಿ ಅರ್ಥ ವ್ಯವಸ್ಥೆಯು ನಾಲ್ಕು ಮುಖ್ಯಭಾಗಗಳನ್ನು ಒಳಗೊಂಡಿದೆ. ಸಾಮಾನ್ಯ ಅರ್ಥವ್ಯವಸ್ಥೆ, ಜನತೆಯ ಅರ್ಥವ್ಯವಸ್ಥೆ, ವಾಣಿಜ್ಯ ಅರ್ಥವ್ಯವಸ್ಥೆ ಹಾಗೂ ಮಾನಸಿಕ ಅರ್ಥ ವ್ಯವಸ್ಥೆ.

ಸಾಮಾನ್ಯ ಅರ್ಥಶಾಸ್ತ್ರವು ಸಾಮ್ಯವಾದಿ, ಸಮಾಜವಾದಿ ಹಾಗೂ ಬಂಡವಾಳವಾದಿ ಹೀಗೆ ಮೂರು ಅರ್ಥವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಪ್ರಉತೀಯ ಅರ್ಥ ನೀತಿಯು, ಮುಮ್ಮುಖವಾಗಿದೆ. ಅದರಲ್ಲಿ ಪ್ರಮುಖ ಉದ್ದಿಮೆಗಳು, ಸಹಕಾರಿ ರಂಗ ಹಾಗೂ ಚಿಕ್ಕ ಪ್ರಮಾಣದ ಮೂಲ ತತ್ವಗಳು ಸೇರುತ್ತವೆ. ಇದನ್ನೆಲ್ಲ ಈ ಹಿಂದಿನ ಅಧ್ಯಾಯದಲ್ಲಿ ಅಧ್ಯಯನ

ಮಾಡಿದ್ದೇವೆ. ಇವುಗಳನ್ನು ಹೊರತುಪಡಿಸಿ ಸಾಮಾನ್ಯ ಅರ್ಥಶಾಸ್ತ್ರದಲ್ಲಿ ಎಲ್ಲ ಮಟ್ಟಗಳಲ್ಲಿಯ ಯೋಜನೆಯ ಹೊಂದಾಣಿಕೆ, ಪೂರ್ವಭಾವಿ ಸೌಕರ್ಯಗಳು, ಕರಾಕರಣೆ, ಬ್ಯಾಂಕ ವ್ಯವಸ್ಥೆ, ಮತ್ತು ರಾಷ್ಟ್ರ ಮಟ್ಟದಲ್ಲಿ ಸಂಘಟಿಸಲಾದ ಇನ್ನಿತರ ಆರ್ಥಿಕ ಸಂಸ್ಥೆಗಳು ಸಮಾವೇಶ ವಾಗುತ್ತವೆ.

ವಾಣಿಜ್ಯ ಅರ್ಥ ವ್ಯವಸ್ಥೆಯಲ್ಲಿ ಇದಕ್ಕೆ ತೀರ ವಿರುದ್ಧವಾಗಿ, ವಿಶ್ವದ ಸಂಪನ್ಮೂಲಗಳ ವಿವೇಚನಾಯುತ ವಿತರಣೆ ಹಾಗೂ ಗರಿಷ್ಠ ವಿನಿಯೋಗಗಳ ಗುರಿ ಸೇರಿವೆ. ಅದು ಮುಖ್ಯವಾಗಿ ಆಂತರಿಕ ಹಾಗೂ ಆಂತಾರಾಷ್ಟ್ರೀಯ ವ್ಯಾಪಾರ ಹಾಗೂ ಹಣ – ಹೂಡಿಕೆಗಳೊಂದಿಗೆ ವ್ಯವಹರಿಸುತ್ತದೆ.

ಶ್ರೀ ಸರಕಾರ ಅವರ ಮೇರೆಗೆ, ಆಧುನಿಕ ಆರ್ಥಿಕ ಸಿದ್ಧಾಂತಗಳು ಸಾಮಾನ್ಯ ಹಾಗೂ ವಾಣಿಜ್ಯ ಅರ್ಥ ವ್ಯವಸ್ಥೆಗಳ ವಿಶ್ಲೇಷಣೆಗೆ ಸೀಮಿತವಾಗಿರುತ್ತವೆ. ಸಾಮಾನ್ಯವಾಗಿ ಅರ್ಥ ಶಾಸ್ತ್ರಜ್ಞರು, ಜನತೆಯ ಹಾಗೂ ಮಾನಸಿಕ ಅರ್ಥ ವ್ಯವಸ್ಥೆಗಳನ್ನು ನಿರ್ಲಕ್ಷಿಸುವುದುಂಟು.

ಜನತೆಯ ಅರ್ಥ ವ್ಯವಸ್ಥೆಯು ಸರ್ವರ ಕನಿಷ್ಠ ಅಗತ್ಯಗಳ ಪೂರ್ತಿಕೆಯನ್ನು ನಿಶ್ಚಿತಗೊಳಿಸುತ್ತದೆ. ಪ್ರತಿಯೊಬ್ಬ ಕೆಲಸಗಾರನು ಆಹಾರ, ವಸ್ತ್ರ, ಶಿಕ್ಷಣ, ಮನೆ ಹಾಗೂ ಚಿಕಿತ್ಸೆಗಳ ಕನಿಷ್ಠ ಅಗತ್ಯಗಳ ಪೂರ್ತಿಕೆಗೋಸುಗ ಸಾಕಷ್ಟು ಗಳಿಕೆ ಮಾಡಬೇಕು. ಕನಿಷ್ಠ ಅಗತ್ಯಗಳ ಭರವಸೆಯನ್ನು ನಮ್ಮ ರಾಜ್ಯ ಘಟನೆಯಲ್ಲಿಯೇ ಪ್ರತಿಷ್ಠಿಸಬೇಕೆಂದು ಹೇಳುವ ಮಟ್ಟಕ್ಕೆ ಶ್ರೀ ಸರಕಾರ ಮುಂದುವರಿದಿದ್ದಾರೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅಗತ್ಯವನ್ನು ಆಧರಿಸಿದ ಕನಿಷ್ಠ ವಾಸ್ತವ ವೇತನದ ಆಧಾರದ ಮೇಲೆ ಉದ್ಯೋಗಾವಕಾಶ ಹೊಂದುವುದು ಮಾನವನ ಮೂಲಭೂತ ಹಕ್ಕೇ ಆಗಿದೆ. ತೀರ ಅಲ್ಪ ರಾಷ್ಟ್ರಗಳು ಮಾತ್ರ ಇದನ್ನು ಮಾಡಿವೆ.

ಮಾನಸ ಅರ್ಥನೀತಿಯಂತೂ ನವೀನ ಗ್ರಹಿಕೆ. ಕೆಲಸಗಾರರನ್ನು ಹಾಗೂ ಅಂಗವಿಕಲ ರನ್ನು ಶೋಷಿಸುವ ಸಿದ್ಧಾಂತಗಳನ್ನು ಮತ್ತು ಸಾಮಾಜಿಕ ಸಂಘಟನೆಗಳನ್ನು ಬಯಲು ಮಾಡುವುದು ಅದರ ಮುಖ್ಯ ಉದ್ದೇಶ. "ಮಾನಸ – ಅರ್ಥ ನೀತಿಯ ಪ್ರಪ್ರಥಮ ಕರ್ತವ್ಯವೆಂದರೆ, ಸಮಾಜದಲ್ಲಿ ಅವನತಿ ಹೊಂದುತ್ತಿರುವ ಹಾಗೂ ಅಮಾನವೀಯತೆ ಗಿಳಿಯುತ್ತಿರುವ ಆರ್ಥಿಕ ಪ್ರವೃತ್ತಿಯ ವಿರುದ್ಧ ದನಿಯನ್ನು ಲೆಕ್ಕಿಸದೆ ಹೋರಾಟ ನಡೆಸುವುದೇ ಆಗಿದೆ" ಎಂದು ಹೇಳುತ್ತಾರೆ ಶ್ರೀ ಸರಕಾರ. (2,ಪು. 19) ಕೆಲವು ಮಾನಸ – ಅರ್ಥನೀತಿ ಸಿದ್ಧಾಂತಗಳು ಹೀಗಿವೆ :

1. ಏಕಸ್ವಾಮ್ಯಗಳು ಅತಿಶಯ ಲಾಭ ಹಾಗೂ ನಿಮ್ನತರ ವೇತನಕ್ಕೆ ಕೊಂಡೊಯ್ಯುತ್ತವೆ.
2. ಸಂಪತ್ತಿನ ಕೇಂದ್ರೀಕರಣ ಹಾಗೂ ಅತಿಶಯ ಆದಾಯದ ವಿಷಮತೆಯು ಆರ್ಥಿಕ ಕುಸಿತವನ್ನು ಉಂಟು ಮಾಡುತ್ತದೆ.
3. ಸಾಮ್ಯವಾದ ಅಥವಾ ಕೇಂದ್ರೀಕೃತ ಯೋಜನೆಯು ಆರ್ಥಿಕ ಜಡತೆಯನ್ನು ಉಂಟು ಮಾಡುತ್ತದೆ.

ಶ್ರಮದ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಕೆಲಸದ ವೇಳೆಯನ್ನು ತಗ್ಗಿಸುವ ನೂತನ ತಂತ್ರಜ್ಞಾನಗಳ ಶೋಧವು ಮಾನಸ ಅರ್ಥನೀತಿಯ ಮುಖ್ಯ ಉದ್ದೇಶವಾಗಿದೆ. ಕೆಲಸದ ವೇಳೆ ಅತ್ಯಲ್ಪವಾದರೆ, ಬೌದ್ಧಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳಿಗಾಗಿ ಜನತೆಗೆ ಹೆಚ್ಚು ಕಾಲಾವಕಾಶ ಲಭಿಸುತ್ತದೆ.

ಒಮ್ಮೆ ಅರ್ಥವ್ಯವಸ್ಥೆಯ ಇನ್ನಿತರ ಭಾಗಗಳು ಒಮ್ಮೆ ಪೂರ್ಣಾಭಿವೃದ್ಧಿ ಹೊಂದಿದರೆ, ಮಾನಸ–ಅರ್ಥನೀತಿಯು ಬೆಳೆಯುವುದು. ಅರ್ಥನೀತಿ ಸಿದ್ಧಾಂತದ ಈ ಮುಖದತ್ತ ಪರಿಣತರು ಅತ್ಯಲ್ಪ ಲಕ್ಷ್ಯ ಹಾಕಿದ್ದರೂ ಸಹ, ಗರಿಷ್ಠ ಸಾಮಾಜಿಕ ಕಲ್ಯಾಣಕ್ಕಾಗಿ ಅದು ಅತ್ಯಂತ ಮಹತ್ವದ್ದಾಗಿದೆ.

ಈ ಚತುರ್ಮುಖೀ ಆರ್ಥಿಕ ವ್ಯವಸ್ಥೆಯನ್ನು ವಿಶೇಷವಾಗಿ ಪ್ರಪಂಚದ ಬಡತನಗ್ರಸ್ತ ಪ್ರದೇಶಗಳಲ್ಲಿ ಹೇಗೆ ಕಾರ್ಯರೂಪಕ್ಕೆಳಿಸುವುದು? ವಿಕೇಂದ್ರೀಕೃತ ಯೋಜನೆಯ ಮುಖಾಂತರ ಶಾನೇ. ಈ ಪ್ರಕಾರದ ಯೋಜನೆ ವಿಧಾನವು ರಾಷ್ಟ್ರದ ಸಕಲ ಮಟ್ಟಗಳನ್ನು ವ್ಯಾಪಿಸುತ್ತದೆ. ರಾಷ್ಟ್ರವನ್ನು ಆರ್ಥಿಕ ಅಭಿವೃದ್ಧಿಯ ವಿವಿಧ ಹಂತಗಳ ಮೂಲಕ ಸಾಗಿಸಬಲ್ಲ ಕ್ರಮೇಣ ಮೆಟ್ಟಲು – ಮೆಟ್ಟಲೇರುವ ಪ್ರಕ್ರಿಯೆಯಾಗಿದೆ ಇದು. ಇದರನ್ವಯ, ಕೇವಲ ಕೆಲವು ಶಾಖೆಗಳಷ್ಟೇ ಏಕೆ, ಕೆಲವು ಜನವರ್ಗಗಳಷ್ಟೇ ಏಕೆ, ಇಡೀ ಸಮಾಜವೇ ವರ್ಧಿಸುತ್ತಿರುವ ಸಮೃದ್ಧಿಯಲ್ಲಿ ಪಾಲ್ಗೊಳ್ಳುತ್ತದೆ.

ತೃತೀಯ ಜಗತ್ತಿನ ಕೆಲವು ರಾಷ್ಟ್ರಗಳು ಕೇಂದ್ರೀಕೃತ ಯೋಜನೆಯ ಮಾದರಿಗಳನ್ನು ಅಳವಡಿಸಿಕೊಂಡಿವೆ. ಆದರೆ ಅವು ನಗರಾಭಿವೃದ್ಧಿಯತ್ತ ಲಕ್ಷ್ಯ ಕೇಂದ್ರೀಕರಿಸಿವೆ. ಮತ್ತು ಗ್ರಾಮಾಂತರ ಪ್ರದೇಶವನ್ನು ನಿರ್ಲಕ್ಷಿಸಿವೆ. ಆದರೆ ಈ ರಾಷ್ಟ್ರಗಳ ಬಹುಪಾಲು ಗ್ರಾಮಾಂತರ ಪ್ರದೇಶವೇ ಆಗಿದೆ. ಭಾರತೀಯ ಆರ್ಥಿಕ ಯೋಜನೆಗಳು ಬಹುದೊಡ್ಡ ಸಂಖ್ಯೆಯಲ್ಲಿರುವ ಹಳ್ಳಿಗಳನ್ನು ನಿರ್ಲಕ್ಷಿಸಿದ ಅಪರಾಧ ಗೆಯ್ದಿವೆ. ಅಭಿವೃದ್ಧಿಯಲ್ಲಿಯ ಈ ದೋಷವನ್ನು ಕೇವಲ ವಿಕೇಂದ್ರೀಕೃತ ಯೋಜನೆಯ ಮೂಲಕ ತಿದ್ದಬೇಕಾಗಿದೆ. ಆದ್ದರಿಂದ ಯೋಜನಾ ಯಂತ್ರಕ್ಕೆ ಕೇಂದ್ರೀಯ, ರಾಜ್ಯ, ಜಿಲ್ಲೆ ಮತ್ತು ಬ್ಲಾಕ ಮಟ್ಟಗಳಲ್ಲಿ ಕಾರ್ಯ ಮಾಡಬೇಕು. ಬ್ಲಾಕ – ಮಟ್ಟದ ಯೋಜನಾ – ಮಂಡಳಿಯೇ ಕೆಳಹಂತದ ಯೋಜನಾ ಘಟಕವಾಗಬೇಕು.

ಎಲ್ಲ ಮಟ್ಟಗಳ ಯೋಜನಾ ಮಂಡಳಿಗಳು ಅರ್ಹ ಅರ್ಥಶಾಸ್ತ್ರಜ್ಞರಿಂದ ಒಡಗೂಡಿರಬೇಕು. ಜನತೆಯ ಅರ್ಥನೀತಿಯ ಅಭಿವೃದ್ಧಿಯೇ ಅವರ ಪ್ರಪ್ರಥಮ ಕಾರ್ಯವಾಗಬೇಕು. ಮೊದ ಮೊದಲು ಗ್ರಾಮಾಂತರ, ಬ್ಲಾಕ್ ಹಾಗೂ ಜಿಲ್ಲೆಗಳಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಕೃಷಿ ಹಾಗೂ ತತ್ಸಂಬಂಧಿ ಉದ್ದಿಮೆಗಳ ಮೇಲೆ ಒತ್ತು ಇರಬೇಕು. ಭಾರತವೂ ಸೇರಿದಂತೆ ತೃತೀಯ ಜಗತ್ತಿನ ಬಹುತೇಕ ರಾಷ್ಟ್ರಗಳು ಜನತೆಯ ಅರ್ಥನೀತಿಯನ್ನು ಹೊಂದಿಲ್ಲ. ಏಕೆಂದರೆ, ದಶಕಾನುಗಟ್ಟಳೆ ಯೋಜನಾಬದ್ಧ ವ್ಯವಸ್ಥೆ ಸಾಗಿದ್ದರೂ ಸಹ ಮತ್ತು ಅದೇ ರೀತಿ ಅಭಿವೃದ್ಧ ಜಗತ್ತಿನಿಂದ ಸಹಾಯಧನ ಪಡೆಯುತ್ತಿದ್ದರೂ ಸಹ, ಈ ರಾಷ್ಟ್ರಗಳು ಜನತೆಗೆ ಕನಿಷ್ಠ ಅಗತ್ಯಗಳನ್ನು ಪೂರೈಸಲು ಅಸಮರ್ಥವಾಗಿವೆ.

ಬ್ಲಾಕ್ ಮತ್ತು ಜಿಲ್ಲಾ ಮಟ್ಟದ ಯೋಜನಾ ಮಂಡಳಿಗಳು ಶ್ರೀ ಸರಕಾರ ಅವರು ಕರೆಯುವ 'ಸಮಾಜ' ಗಳನ್ನು ಒಳಗೊಂಡಿರಬೇಕು. ಈ ಸಮಾಜವೆಂದರೆ, ಸಾಮಾಜಿಕ–ಆರ್ಥಿಕ ಸಮೂಹ ಅಥವಾ ಘಟಕ. ಈ ಸಮೂಹಗಳನ್ನು "ಸಾಮಾನ್ಯ ಆರ್ಥಿಕ ಸಮಸ್ಯೆಗಳು, ಸಮಾನ ಆರ್ಥಿಕ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳು ಜನಾಂಗೀಯ ಭಾವನಾತ್ಮಕ ಬಳುವಳಿ ಇತ್ಯಾದಿಗಳನ್ನಾಧರಿಸಿ ರೂಪಿಸಬೇಕು. ಭಾವನಾತ್ಮಕ ಬಳುವಳಿಯು ಸಾಮಾನ್ಯ ಸಾಮಾಜಿಕ – ಸಾಂಸ್ಕೃತಿಕ ಕಟ್ಟುಪಾಡುಗಳಾದ ಭಾಷೆ, ಸಾಂಸ್ಕೃತಿಕ ಗುಣ ಇತ್ಯಾದಿಗಳಿಂದ ಉದಿಸುತ್ತದೆ". (1 ಪು. 10)

ಈ ಸಾಮಾಜಿಕ ಆರ್ಥಿಕ ಘಟಕಗಳು ಅರ್ಥಾತ್ ಸಮಾಜಗಳು ಈ ಕೆಳಗಿನ ಗುಣಧರ್ಮಗಳನ್ನು ಹೊಂದಿರುತ್ತವೆ :

1. ಪ್ರತಿಯೊಂದು ಸಮಾಜವು ತನ್ನ ಸ್ವಂತ ಯೋಜನೆಯನ್ನು ರೂಪಿಸಿಕೊಳ್ಳಲು ಮುಕ್ತವಿದೆ. ಮೊತ್ತಮೊದಲು, ಜನತೆಯ ಅರ್ಥವ್ಯವಸ್ಥೆ, ಆ ಬಳಿಕ ವಾಣಿಜ್ಯಪರ ಅರ್ಥವ್ಯವಸ್ಥೆ, ಇನ್ನು ಕೊನೆಯದಾಗಿ ಮಾನಸ ಅರ್ಥವ್ಯವಸ್ಥೆ.

2. ಪ್ರತಿಯೊಂದು ಸಮಾಜವು ಜೀವನದ ಮೂಲ ಅಗತ್ಯಗಳನ್ನು ಕುರಿತಂತೆ ಯಾದರೂ ಸ್ವಾವಲಂಬಿಯಾಗುವ ಗುರಿ ಹೊಂದಿರಬೇಕು. ವಾಣಿಜ್ಯವು ಅದರ ಅಂತಿಮ ಆಶ್ರಯವಾಗಬೇಕು. ಸ್ವಾವಲಂಬನವೆಂದರೆ, ಪ್ರತಿಯೊಂದು ಸಮಾಜವು ತನ್ನ ಸ್ವಂತನೀರಾವರಿ ಸೌಕರ್ಯಗಳನ್ನೂ, ವಿದ್ಯುಚ್ಛಕ್ತಿ ಸ್ಥಾವರಗಳನ್ನೂ ಯಂತ್ರೋಪಕರಣಗಳ ಉದ್ದಿಮೆ ಇತ್ಯಾದಿಗಳನ್ನೂ ಹೊಂದಿರಬೇಕು. ಇಂಥ ಬಹುತೇಕ ಯೋಜನೆಗಳು ಚಿಕ್ಕ ಪ್ರಮಾಣದ ವಾಗಿರುತ್ತವೆ. ಅವುಗಳಿಗಾಗಿ, ಬೃಹತ್ ಪ್ರಮಾಣದ ಪ್ರಕಲ್ಪಗಳಿಗಾಗಿ ಬೇಕಾಗುವುದಕ್ಕಿಂತ ಕಡಿಮೆ ಬಂಡವಾಳ ಹಾಗೂ ಹಣ ಹೂಡಿಕೆಗಳಾದರೆ ಸಾಕು. ಆದರೆ ಭಾರತದ ಸಾರ್ವಜನಿಕ ರಂಗದಲ್ಲಿ ಬೃಹತ್ ಉದ್ದಿಮೆಗಳು ತಮ್ಮ ಪ್ರಚಲಿತ ಪೂರ್ಣ ಸಾಮರ್ಥ್ಯ ಬಳಸಿಕೊಳ್ಳುತ್ತಿಲ್ಲ ಮತ್ತು ಅತ್ಯಂತ ಅದಕ್ಷವೂ ಆಗಿವೆ.

ವಾಣಿಜ್ಯವು ಸಮಾಜಗಳ ಕೊನೆಯ ಆಶ್ರಯ. ಅದು ಇದ್ದೇ ಇರುತ್ತದೆ. ಅದನ್ನು ಯೋಜನಾವಧಿಯ ಆರಂಭದಲ್ಲಿ ಸಹ ಪೂರ್ಣ ನಿವಾರಿಸಲಾಗದು. ಆದರೂ ಸಹ ಸಾಧ್ಯವಾದ ಮಟ್ಟಿಗೆ, ಕಚ್ಚಾ ಸರಕುಗಳನ್ನು ರಫ್ತು ಮಾಡಕೂಡದು. ಪ್ರತಿಯಾಗಿ ಅವುಗಳನ್ನು ಸ್ಥಳೀಯ ಉದ್ದಿಮೆಗಳಲ್ಲಿ ಗ್ರಾಹಕ ವಸ್ತುಗಳ ಹಾಗೂ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ಬಳಸಬೇಕು.

3. ಪ್ರತಿಯೊಂದು ಸಮಾಜದಲ್ಲಿ ಸ್ಥಳೀಯರಲ್ಲದ ಶ್ರಮಜೀವಿಗಳಿಗಿಂತ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ನೀಡುವಲ್ಲಿ ಅಧಿಕ ಪ್ರಾಶಸ್ತ್ಯವಿರಬೇಕು. ಪೂರ್ಣ ಉದ್ಯೋಗಾವಕಾಶವನ್ನು ಒದಗಿಸಲು ಮೇಲೆ ಹೇಳಿದ ಸ್ವಾವಲಂಬನ ತತ್ತ್ವವು ತುಂಬಾ ಮಹತ್ವ ಪೂರ್ಣವಾಗಿದೆ. ಸ್ವಾವಲಂಬನೆಯಿಂದ ಒಂದು ಸಮಾಜದಲ್ಲಿಯ ಗ್ರಾಹಕರು ಸರಕುಗಳನ್ನು ಅತ್ಯಂತ ಸೋವಿ ದರದಲ್ಲಾಗಲಿ ಅಥವಾ ಅತ್ಯಂತ ಉನ್ನತ ಗುಣಮಟ್ಟದಲ್ಲಾಗಲಿ ಪಡೆದುಕೊಳ್ಳಲಿಕ್ಕಿಲ್ಲ.

ಆದರೆ ಇವರು ಏನಿಲ್ಲೆಂದರೂ ಉದ್ಯೋಗ ನಿರತರಾಗುತ್ತಾರೆ. ಉತ್ಪಾದಿಸುತ್ತಾರೆ. ಮತ್ತು ಸ್ಥಳೀಯವಾಗಿ ಸರಕುಗಳನ್ನು ಬಳಸುತ್ತಾರೆ. ತೃತೀಯ ಜಗತ್ತಿನಲ್ಲಿ ಇಷ್ಟೊಂದು ನಿರುದ್ಯೋಗ ವಿರುವಾಗ, ಯೋಜನೆಯ ಪ್ರಥಮ ಪ್ರಾಶಸ್ತ್ಯವು, ಸ್ಥಳೀಯ ಶ್ರಮಜೀವಿಗಳಿಗೆ – ಕನಿಷ್ಠ ತಮ್ಮ ಅಗತ್ಯಗಳನ್ನಾದರೂ ಕೊಳ್ಳಬಲ್ಲಷ್ಟು ವೇತನ ದರದಲ್ಲಿ ಉದ್ಯೋಗ ಒದಗಿಸುವುದೇ ಆಗಿರಬೇಕು.

4. ಪೂರ್ಣ ಉದ್ಯೋಗಾವಕಾಶವನ್ನು ಒದಗಿಸಲು, ಶ್ರಮಬಾಹುಳ್ಯವಿರುವ ಕೃಷಿಯಾಧಾರಿತ ಮತ್ತು ಕೃಷಿ ಪೂರಕ ಉದ್ದಿಮೆಗಳನ್ನು ಪ್ರಾರಂಭಿಸಬೇಕು. ಮತ್ತು ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಬೇಕು. ಆಧುನಿಕ ತಂತ್ರಜ್ಞಾನವನ್ನು ಇನ್ನಿತರ ಪ್ರದೇಶಗಳಿಂದ ಪಡೆಯುವುದು ಶಕ್ಯ ಮತ್ತು ಪಡೆಯಲೇಬೇಕು. ಆದರೆ ಕಚ್ಚಾ ಸರಕುಗಳನ್ನಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಕಚ್ಚಾ ಸರಕುಗಳನ್ನು ಸ್ಥಳೀಯವಾಗಿ ಉತ್ಪಾದಿಸಬೇಕು. ಹಾಗೂ ತದನಂತರ ತತ್ಸಂಬಂಧಿ ಉದ್ದಿಮೆಗಳನ್ನು ಸ್ಥಾಪಿಸಬೇಕು.

ಉದ್ದಿಮೆಗಳು ಸಹಕಾರಿ ಸಂಘಟನೆಯಲ್ಲಾಗಲಿ ಇಲ್ಲವೆ ವೈಯಕ್ತಿಕ ಒಡೆತನ ದಲ್ಲಾಗಲಿ ಇರಬೇಕು. ಕೃಷಿ ಪೂರಕ ಉದ್ದಿಮೆಗಳೆಂದರೆ ಸುಗ್ಗಿಗಿಂತ ಮುನ್ನ ಕೃಷಿಯಲ್ಲಿ ಬಳಸುವ ವಸ್ತುಗಳನ್ನು ಉತ್ಪಾದಿಸುವಂಥವುಗಳು. ಇನ್ನು, ಕೃಷಿ ಹುಟ್ಟುವಳಿಯಾಧಾರಿತ ಉದ್ದಿಮೆಗಳೆಂದರೆ ಕೃಷಿ ಹುಟ್ಟುವಳಿಯನ್ನು ಕಚ್ಚಾ ಸರಕನ್ನಾಗಿ ಬಳಸುವ ಸುಗ್ಗಿಯ ನಂತರದ ಸ್ಥಾವರಗಳು. ಹೀಗೆ, ಕೃತ್ರಿಮ ಗೊಬ್ಬರವು ಕೃಷಿ ಪೂರಕ ಉದ್ದಿಮೆಯಾದರೆ, ಜವಳಿ ಉದ್ದಿಮೆಯು ಕೃಷಿ ಹುಟ್ಟುವಳಿಯಾಧಾರಿತ ಉದ್ದಿಮೆಯಾಗಿದೆ.

5. ಪ್ರತಿಯೊಂದು ಸಮಾಜದಲ್ಲಿ ಯೋಜನೆಯು ಸ್ವಾವಲಂಬನೆ ಮತ್ತು ಸ್ಥಳೀಯ ಶ್ರಮಜೀವಿಗಳ ಗರಿಷ್ಠ ಉದ್ಯೋಗಾವಕಾಶಗಳ ಗುರಿಯಿರಿಸಿಕೊಂಡು ಪಂಚ ಅಂಶಗಳನ್ನು ಪರಿಗಣಿಸಬೇಕು. ಅವುಗಳೆಂದರೆ ಉತ್ಪಾದಕತೆ, ಉತ್ಪಾದನಾ ವೆಚ್ಚ, ಖರೀದಿ ಶಕ್ತಿ, ಸಾಮೂಹಿಕ ಅಗತ್ಯಗಳು ಹಾಗೂ ಬೆಳವಣಿಗೆಯ ಸಮತೋಲನ.

ಸ್ಥಳೀಯ ಸಂಪನ್ಮೂಲಗಳ ಉತ್ಪಾದಕತೆಯವನ್ನು, ಕಚ್ಚಾ ಸರಕುಗಳ ಹಾಗೂ ಶಕ್ತಿ ಮೂಲಗಳ ಬಳಿ ಸ್ಥಾಪಿಸಿ, ಗರಿಷ್ಠೀಕರಿಸಬಹುದು. ಉತ್ಪಾದನಾ ವೆಚ್ಚವು ಕನಿಷ್ಠವಿರಬೇಕು. ಆದರೆ ಅದನ್ನು ಲೆಕ್ಕ ಹಾಕುವಾಗ ಎಲ್ಲ ವೆಚ್ಚಗಳನ್ನು ಸೇರಿಸಬೇಕು. ಅರ್ಥಾತ್ ತನ್ನ ಸ್ವಂತ ಹಾಗೂ ಕುಟುಂಬದ ಸದಸ್ಯರ ಕೆಲಸದಿಂದ ಉದ್ಭವಿಸುವ ವೆಚ್ಚವನ್ನೂ ಅದರಲ್ಲಿ ಸೇರಿಸಬೇಕು. ಇದನ್ನು ನಮ್ಮ ಭಾರತೀಯ ರೈತರು ಸುದೀರ್ಘ ಸಮಯದಿಂದ ಕಡೆಗಣಿಸುತ್ತ ಬಂದಿದ್ದಾರೆ. ದರ ನಿರ್ಧಾರವನ್ನು ಇಂಥ ವಿವೇಚನಾಯುತ ವೆಚ್ಚದ ಲೆಕ್ಕಾಚಾರದ ಮೇಲೆ ಆಧರಿಸಬೇಕು.

ಯೋಜನೆಯ ಒತ್ತು ಜನತೆಯ ಖರೀದಿ ಸಾಮರ್ಥ್ಯದ ಮೇರೆ ಇರಬೇಕೇ ಹೊರತು ಕೇವಲ ಪ್ರತಿ ವ್ಯಕ್ತಿಯ ಆದಾಯದ ಮೇಲಲ್ಲ. ಇದು ಹೀಗೆಯೇ ಇರತಕ್ಕದ್ದು. ಏಕೆಂದರೆ ಒಂದು ವೇಳೆ, ಆದಾಯಗಳು ಅಸಮತೋಲವಾದರೆ, ಒಂದು ದೇಶದ ಪ್ರತಿ ವ್ಯಕ್ತಿಗತ ಆದಾಯವು ತೀರ ಹೆಚ್ಚಾಗುತ್ತದೆ. ಆದರೂ ಸಹ ಅನೇಕ ಜನರು ಉಪವಾಸದಿಂದ ಬಳಲುತ್ತಿರುತ್ತಾರೆ.


ಆದ್ದರಿಂದ ವ್ಯಕ್ತಿಗತ ಸಂಕಲಿತ ಆದಾಯಕ್ಕಿಂತ, ಜನತೆಯ ಖರೀದಿ ಶಕ್ತಿಯು ಹೆಚ್ಚು ಮಹತ್ವದ್ದಾಗಿದೆ. ಆದ್ದರಿಂದ, ಕನಿಷ್ಠ ಖರೀದಿ ಶಕ್ತಿಯ ಭರವಸೆಯನ್ನು ಆಗತ್ಯಾಧಾರಿತ ಕನಿಷ್ಠ ವೇತನದ ಮೇಲಿಂದ ನೀಡಬೇಕು. ಈ ವೇತನದ ಕೆಲ ಅಂಶವನ್ನು ಸ್ಥಳೀಯವಾಗಿ ಉತ್ಪಾದಿಸಿದ ಸರಕಿನ ರೂಪದಲ್ಲಿ ನೀಡಬೇಕೇ ಹೊರತು ಹಣದ ರೂಪದಲ್ಲಲ್ಲ. ಸ್ಥಳೀಯ ಉತ್ಪಾದನೆಯ ಬೇಡಿಕೆ ಮತ್ತು ಪೂರೈಕೆಗಳ ಸಮತೋಲವನ್ನು ಕಾಯ್ದುಕೊಳ್ಳುವ ಮೂಲಕ ಒಂದು ಸಮಾಜದ ಸ್ವಾವಲಂಬನೆಯನ್ನು ಹೆಚ್ಚಿಸಬಹುದಾಗಿದೆ.

ಪ್ರತಿಯೊಂದು ಯೋಜನಾ ಘಟಕವು ಸಾಮೂಹಿಕ ಆಗತ್ಯಗಳನ್ನು ಅಂದಾಜಿಸ ತಕ್ಕದ್ದು. ಮತ್ತು ಎಲ್ಲ ಸ್ಥಳೀಯ ಉತ್ಪಾದಿತ ಸರಕುಗಳ ಬೇಡಿಕೆ ಮತ್ತು ಪೂರೈಕೆಗಳ ಮಧ್ಯ ಚೈತನ್ಯಾತ್ಮಕ ಸಮತೋಲದ ಭರವಸೆ ನೀಡಬೇಕು. ಯೋಜನಾ ಮಂಡಳಿಗಳು ದರಗಳನ್ನು ನಿಗದಿಪಡಿಸಬೇಕು. ಆದರೆ ಸ್ವಲ್ಪ ಮಾರ್ದವತೆ ಇರಬೇಕು. ಹೀಗೆ ಬೇಡಿಕೆ ಪೂರೈಕೆಯ ಸಮತೋಲವನ್ನು ಕಾಲಾನುಕ್ರಮದಲ್ಲಿ ಕಾಯ್ದುಕೊಳ್ಳಬೇಕು. ಆದಾಯಗಳಲ್ಲಿ ಅತ್ಯಂತ ಅಸಮತೋಲವಿಲ್ಲದಿರುವಾಗ ಬೇಡಿಕೆ– ಪೂರೈಕೆಗಳ ಅಸಮತೋಲವಿರುವುದು ತುಂಬಾ ವಿರಳ ಎಂಬುದನ್ನು ಗಮನಿಸಬಹುದಾಗಿದೆ.

ಅಂತಿಮವಾಗಿ, ಪ್ರತಿಯೊಂದು ಸಮಾಜವು ಸಮತೋಲದ ಆರ್ಥಿಕ ಬೆಳವಣಿಗೆಯನ್ನೇ ಗುರಿಯಾಗಿಸಿಕೊಳ್ಳಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಶೇ. 30 ರಿಂದ ಶೇ. 40 ಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ನೇರ ಕೃಷಿಯಲ್ಲಿ ತೊಡಗಿಸಕೂಡದು. ಇನ್ನುಳಿದ ಶೇ. 20 ರಷ್ಟು ಜನರನ್ನು ಕೃಷಿ ಪೂರಕ ಉದ್ದಿಮೆಗಳಲ್ಲಿ ಅಂದರೆ ಕೃತ್ರಿಮ ಗೊಬ್ಬರ, ಗುದ್ದಲಿ, ಸಲಿಕೆ, ಕೊಡಲಿ, ಟ್ರ್ಯಾಕ್ಟರ, ಸುಗ್ಗಿಯಂತ್ರಗಳೇ ಮುಂತಾದವುಗಳ ತಯಾರಿಕೆಯಲ್ಲಿ ತೊಡಗಿಸಬೇಕು. ಮತ್ತೆ ಶೇ. 20 ರಷ್ಟನ್ನು ಕೃಷಿ – ಹುಟ್ಟುವಳಿಯಾಧಾರಿತ ಉದ್ದಿಮೆಗಳಲ್ಲಿ ಅಂದರೆ ಹಿಟ್ಟಿನ ಗಿರಣಿಗಳು, ಜವಳಿ ಗಿರಣಿಗಳು, ಕಾಗದ ಕಾರಖಾನೆಗಳೇ ಮುಂತಾದವುಗಳಲ್ಲಿ ತೊಡಗಿಸಬೇಕು. ಶೇ. 10 ರಷ್ಟನ್ನು ಆಂತರಿಕ ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಮತ್ತುಳಿದ ಜನರನ್ನು ಬೌದ್ಧಿಕ ಮತ್ತು ಕಚೇರಿ ಹುದ್ದೆಗಳಲ್ಲಿ ತೊಡಗಿಸಬೇಕು.

ಭಾರತಕ್ಕೋಸುಗ ಸಾಮಾಜಿಕ – ಆರ್ಥಿಕ ಘಟಕಗಳು :

ಭಾರತೀಯ ಭೂಗೋಲ, ಮಣ್ಣಿನ ಸ್ಥಿತಿಗತಿ, ನೈಸರ್ಗಿಕ ಸಂಪನ್ಮೂಲಗಳು, ಭಾಷೆಗಳು ಮತ್ತು ಸಾಂಸ್ಕೃತಿಕ ಅಂಶಗಳ ಕಾಳಜಿಪೂರ್ವಕ ಅಭ್ಯಾಸದ ನಂತರ, ಶ್ರೀ ಸರಕಾರ ಅವರು, ಭಾರತವನ್ನು 44 ಸಮಾಜಗಳಲ್ಲಿ ವಿಭಜಿಸಬೇಕೆಂದು ಸೂಚಿಸಿದ್ದಾರೆ. ಮತ್ತು ಪ್ರತಿಯೊಂದನ್ನು ಪ್ರಚಲಿತ ವ್ಯವಸ್ಥೆಗೆ ಹೆಚ್ಚು ಧಕ್ಕೆಯಾಗದಂತೆ ಸ್ವಾವಲಂಬಿ ಜನತಾ ಅರ್ಥವ್ಯವಸ್ಥೆಯಲ್ಲಿ ಅಭಿವೃದ್ಧಿಪಡಿಸಬೇಕೆಂದೂ ಅವರ ಸಲಹೆ. ಪ್ರಚಲಿತ ಭಾರತೀಯ ಸಂರಚನೆಯನ್ನು ಪ್ರಜಾತೀಯ ಪದ್ಧತಿಯ ಯೋಜನೆಯಲ್ಲಿ ಸಮೀಕರಿಸಬೇಕು. ಈ ಸಮಾಜಗಳು ಈ ಕೆಳಗಿನಂತಿವೆ ಮತ್ತು ಅವುಗಳ ಸಂಖ್ಯೆಯನ್ನು ಲಗತ್ತಿಸಿದ ನಕ್ಷೆಯಲ್ಲಿ ಅವುಗಳಿಗೆ ನೀಡಿದ ಸಂಖ್ಯೆಗಳ ಮೂಲಕ ಸೂಚಿಸಿದ್ದೇವೆ.



1. ಆಮ್ರಾ ಬಂಗಾಲಿ ಸಮಾಜ
2. ಅಂಗಿಕ ಸಮಾಜ
3. ಮಿಥಿಲಾ ಸಮಾಜ
4. ಮಗಹಿ ಸಮಾಜ
5. ಭೋಜಪುರಿ ಸಮಾಜ
6. ನಾಗಪುರಿಯಾ ಸಮಾಜ
7. ಉತ್ಕಲ ಸಮಾಜ
8. ಕೋಸಲ ಸಮಾಜ
9. ಭೂತಿಯಾ ಸಮಾಜ
10. ಬೋಡೋ ಸಮಾಜ
11. ಅಸ್ಸಾಮಿಯಾ ಸಮಾಜ
12. ಲೆಪಚಾ ಸಮಾಜ
13. ಅವಧೀ ಸಮಾಜ
14. ವ್ರಜ ಸಮಾಜ
15. ಹರಿಯಾಣ್ವೆ ಸಮಾಜ
16. ಗಡವಾಲಿ ಸಮಾಜ
17. ಕುಮಯೂನಿ ಸಮಾಜ
18. ಪಂಜಾಬಿ ಸಮಾಜ
19. ಸಿರಿಮಾರಿ ಸಮಾಜ
20. ಪಹಾಡಿ ಸಮಾಜ
21. ಕಿನ್ನರಿ ಸಮಾಜ
22. ಡೋಗ್ರಿ ಸಮಾಜ
23. ಕಶ್ಮೀರಿ ಸಮಾಜ
24. ಲಡ್ಡಾಖಿ ಸಮಾಜ
25. ಮಾರವಾಡಿ ಸಮಾಜ
26. ಹಡೌತಿ ಸಮಾಜ
27. ಮೇವಾಡಿ ಸಮಾಜ
28. ಕಚ್ಚಿ ಸಮಾಜ
29. ಕಾಠಿಯಾವಾಡಿ ಸಮಾಜ
30. ಗುರ್ಜರ ಸಮಾಜ

31. ವಿದರ್ಭ ಸಮಾಜ	32. ಸಹ್ಯಾದ್ರಿ ಸಮಾಜ
33. ಮಾಳವಾ ಸಮಾಜ	34. ಬುಂದೇಲಖಂಡ ಸಮಾಜ
35. ಬಾಘೇಲ ಖಂಡಿ ಸಮಾಜ	36. ಚತ್ತೀಸಗಡಿ ಸಮಾಜ
37. ತೆಲಂಗಣ ಸಮಾಜ	38. ಸರ್ಕಾರ ಸಮಾಜ
39. ರಾಯಲಸೀಮಾ ಸಮಾಜ	40. ತಮಿಳ ಸಮಾಜ
41. ಮಲಯಾಳಂ ಸಮಾಜ	42. ಕನ್ನಡ ಸಮಾಜ
43. ತುಳು ಸಮಾಜ	44. ಕೊಂಕಣಿ ಸಮಾಜ

ಬಹುತೇಕ ಭಾರತೀಯ ಪ್ರಾಂತಗಳು ಒಂದಾದರೂ ಸಮಾಜವನ್ನು ಹೊಂದಿವೆ. ಕೆಲವು ಎರಡು ಇಲ್ಲವೆ ಮೂರು ಸಮಾಜಗಳನ್ನು ಹೊಂದಿವೆ. ಉದಾಹರಣಾರ್ಥ, ಬಿಹಾರದಲ್ಲಿ ಅಂಗಿಕಾ, ಮಗಹಿ, ಮಿಥಿಲಾ ಭೋಜಪುರಿ ಮತ್ತು ನಾಗಪುರಿಯಾ ಎಂಬ ಐದು ಸಾಮಾಜಿಕ – ಆರ್ಥಿಕ ಘಟಕಗಳಿವೆ. ಪ್ರತಿ ಸಮಾಜದಲ್ಲಿಯ ಸಾಂಸ್ಕೃತಿಕ, ಭಾಷೀಯ ಮತ್ತು ಆರ್ಥಿಕ ಸಾದೃಶ್ಯಗಳು, ಜನರಲ್ಲಿ ಸಹಕಾರ ಹಾಗೂ ದೃಢಪ್ರಯತ್ನದ ಸ್ಫೂರ್ತಿ ಚಿಮ್ಮಿಸಿ, ಸಾಮಾಜಿಕ–ಆರ್ಥಿಕ ಪ್ರಜ್ಞೆಯನ್ನು ಜಾಗ್ರತಗೊಳಿಸಲಿಕ್ಕೋಸುಗ ಅಗತ್ಯವಾಗಿವೆ.

ಭಾರತದಲ್ಲಿಯ ಸಮಾಜಗಳ ಗ್ರಹಿಕೆಯನ್ನು ಶ್ರೀ ಸರಕಾರ ಅವರು ಅಮ್ರಾ ಬಂಗಾಲಿ ಮತ್ತು ಪಂಜಾಬ ಸಮಾಜಗಳನ್ನು ಕುರಿತು ವಿವರಿಸುವ ಮೂಲಕ ಸ್ಫುಟಗೊಳಿಸಿದ್ದಾರೆ. ಅವರು ಹೇಳಿರುವುದು ಹೀಗೆ "ನಾವು ಬಂಗಾಲದ ನಿದರ್ಶನವನ್ನೇ ನೋಡೋಣ, ಕನಿಷ್ಠ ಜೀವನಾವಶ್ಯಕತೆಗಳಿಗೆ ಸಂಬಂಧಿಸಿದಂತೆ ಜನತೆಯ ಅರ್ಧನೀತಿಯನ್ನು ಹೇಗೆ ಅಭಿವೃದ್ಧಿ ಪಡಿಸಬೇಕು ಎಂಬುದಕ್ಕೆ ನಿದರ್ಶನ ರೂಪದಲ್ಲಿ ಈ ಕೆಳಗಿನ ಕಾರ್ಯಕ್ರಮವನ್ನು ಅಳವಡಿಸಿ ಬಂಗಾಲದ ಆರ್ಥಿಕ ಮಟ್ಟವನ್ನು ಸುಧಾರಿಸಬಹುದು."

"ಮೊದಲು ಆಹಾರ. ಬಂಗಾಲವು ಫಲವತ್ತಾದ ಪ್ರದೇಶ. ಆದರೆ ಅದು ಇಬ್ಭಾಗವಾಗಿದೆ. ಕಡಿಮೆ ಮಳೆ ಬೀಳುವ ಭಾಗ ಮತ್ತು ಬಳಿಗಾಲ ಬಿಟ್ಟರೆ, ಮಳೆಯ ಅಭಾವವಿರದ ಭಾಗ. ಉಭಯ ಭಾಗಗಳಲ್ಲಿ, ಜಲ ಸಂರಕ್ಷಣೆಯಾಗಬೇಕು. ನೀರಾವರಿ ಸಮಸ್ಯೆಯನ್ನು ಕಾಲುವೆ ನೀರಾವರಿ, ಖತ ನೀರಾವರಿ, ಕರೆ ಕಟ್ಟೆ ನೀರಾವರಿ, ಮತ್ತು ಚಿಕ್ಕ ಪ್ರಮಾಣದ ನದಿ ಯೋಜನೆಗಳೇ ಮುಂತಾದ ನಾಲ್ಕರಲ್ಲಿ ಯಾವುದೇ ಒಂದು ಅನುಕೂಲಕರ ಪದ್ಧತಿಯ ಮೂಲಕ ಮಾಡಬಹುದು. ಬೇರೆ ಬೇರೆ ನದಿಗಳಲ್ಲಿಯ ನೀರಿನ ಗುಣಮಟ್ಟ ಬೇರೆ ಬೇರೆ. ಕೆಲವು ನದಿ ನೀರು ಸಿಹಿ, ಮತ್ತು ಈ ನೀರಿನ ವಿವೇಕಪೂರ್ಣ ಬಳಕೆಯಿಂದ ಕೃಷಿ – ಉತ್ಪಾದನೆಯನ್ನು ಸುಧಾರಿಸುವದು ಸಾಧ್ಯ. ವಿವಿಧ ಬೆಳೆಗಳು, ಹಣ್ಣು ಮತ್ತು ಕಾಯಿಪಲ್ಯಗಳನ್ನು ಬಂಗಾಲದಲ್ಲೆಲ್ಲ ಬೆಳೆಯಬಹುದು. ಸರಿಯಾಗಿ ವ್ಯವಸ್ಥೆತಗೊಳಿಸಿದರೆ, ತನ್ನ ಸ್ವಂತ ಸಂಪನ್ಮೂಲಗಳ ಮುಖಾಂತರ, ತನ್ನ ಅಂದಾಜು 6 ಕೋಟಿಯಷ್ಟಿರುವ ಇಡೀ ಜನತೆಗೆ ಆಹಾರ ಒದಗಿಸುವ ಶಕ್ತಿ ಸಂಪನ್ನ ಸಮಾಜವದು.

"ಇನ್ನು ಬಟ್ಟೆಯ ವಿಷಯ. ಜನರುಡುವ ಬಟ್ಟೆಯ ಪ್ರಕಾರವು ಪ್ರಥಮತಃ ವಾತಾವರಣದ ಸ್ಥಿತಿಗತಿ ಮತ್ತು ಕಚ್ಚಾ ಸರಕುಗಳ ಲಭ್ಯತೆಯನ್ನು ಅವಲಂಬಿಸಿದೆ. ಬಂಗಾಲದಲ್ಲಿ ಲಭ್ಯವಿರುವ ಕಚ್ಚಾ ಸರಕುಗಳು ಐದು. ಹತ್ತಿ, ಮಲಬೆರಿ ರೇಶ್ಮೆ, ಮಲಬೆರೀತರ ರೇಶ್ಮೆ

ಮತ್ತು ಕೃತಕ ವಸ್ತುಗಳು. ಹತ್ತಿ, ರೇಶ್ಮೆ ಮತ್ತು ಕೃತಕ ವಸ್ತುಗಳಲ್ಲಿ ಬಂಗಾಲವು ಕೇವಲ ಸ್ವಾವಲಂಬಿಯಾಗಿದೆಯಷ್ಟೇ ಅಲ್ಲ, ಆದರೆ ಇತರ ಪ್ರದೇಶಗಳಿಗೆ ರಫ್ತು ಮಾಡುವಷ್ಟು ಹೆಚ್ಚುವರಿ ಮೊತ್ತದಲ್ಲಿ ಬೆಳೆಯಬಹುದು. ಮಲಬೆರಿ ರೇಶ್ಮೆ ಬಂಗಾಲಕ್ಕೇ ಹೇಳಿ ಮಾಡಿಸಿದಂಥ ಬೆಳೆ. ಏಕೆಂದರೆ, ಅದಕ್ಕೆ ಸ್ವಲ್ಪು ಒಣ ಹವೆ ಬೇಕು. ಇದು ಪಶ್ಚಿಮ ಬಂಗಾಲದಲ್ಲಿದೆ. ಮಲಬೆರೀತರ ರೇಶ್ಮೆಯನ್ನು ಬಂಗಾಲವಿಡೀ ಅಭಿವೃದ್ಧಿಪಡಿಸಬಹುದು. ಇನ್ನು ಕೃತಕ ನೂಲನ್ನು ತೆಂಗು, ಭತ್ತದ ಹುಲ್ಲು, ಬಿದಿರು ಮತ್ತು ತೆಂಗಿನಕಾಯಿಯ ಪರಟೆ, ಬಾಳಹಣ್ಣು ಮತ್ತು ವಿಪುಲವಾಗಿರುವ ಅನಾನಸ ಎಲೆಗಳಿಂದ ತೆಗೆಯಬಹುದು. ಬಂಗಾಲವು ಉಣ್ಣೆಯನ್ನೂ ಉತ್ಪಾದಿಸಬಲ್ಲದು. ಸಣಬಿನಿಂದ ಬಟ್ಟೆಗಳನ್ನೂ ತಯ್ಯಾರಿಸಬಹುದು.

ಇನ್ನು ಮನೆಗಳ ವಿಷಯ. ಬಂಗಾಲ ತುಂಬ ಗೃಹನಿರ್ಮಾಣ ವಸ್ತುಗಳು ಹೇರಳವಾಗಿ ಸಿಗುತ್ತವೆ. ಈ ಅಗತ್ಯದ ವಸ್ತುಗಳೆಂದರೆ ಉಸುಕು, ಸುಣ್ಣ ಮತ್ತು ಸಿಮೆಂಟ. ಬಂಗಾಲದ ಮಣ್ಣು, ಇಟ್ಟಿಗೆ, ಅಗ್ನಿ ಇಟ್ಟಿಗೆ ಮತ್ತು ಹಂಚುಗಳನ್ನು ತಯಾರಿಸಲು ತಕ್ಕದ್ದಾಗಿದೆ. ಇನ್ನು ಒಂದು ಜಿಲ್ಲೆಯಲ್ಲಿ ವಿಪುಲ ಸುಣ್ಣದ ಕಲ್ಲುಗಣಿಗಳನ್ನೇ ಕಂಡುಹಿಡಿದಿದ್ದಾರೆ. ಬಂಗಾಲವು ಕಟ್ಟಡ ಸಾಮಗ್ರಿಗಳಲ್ಲಿ ಸ್ವಾವಲಂಬಿಯಾಗಿಯಷ್ಟೇ ಅಲ್ಲ, ಆದರೆ ಅದು ಇತರ ಪ್ರದೇಶಗಳಿಗೆ ರಫ್ತು ಸಹ ಮಾಡಬಲ್ಲದು. ಗೃಹ ನಿರ್ಮಾಣ ವಸ್ತು ತಯಾರಿಕೆಯ ಉದ್ದಿಮೆಗಳನ್ನು ಲಾಭದಾಯಕವಾಗಿ ನಡೆಸಬಹುದು.

"ಇನ್ನು ಚಿಕಿತ್ಸೆ. ಬಂಗಾಲವು ವನಸ್ಪತಿ ಹಾಗೂ ಖನಿಜ ಔಷಧಿಗಳಲ್ಲಿ ಶ್ರೀಮಂತವಾಗಿವೆ. ಬಂಗಾಲದ ಮುಖ್ಯ ರೋಗಗಳೆಂದರೆ, ಜ್ವರ ಮತ್ತು ಹೊಟ್ಟೆನೋವು. ನಿಸರ್ಗ–ನಿಯಮಾನುಸಾರ, ಸ್ಥಳೀಯ ರೋಗಗಳನ್ನು ಗುಣಪಡಿಸುವ ಸಸ್ಯೌಷಧಿಗಳು ಅಲ್ಲಲ್ಲಿ ಸದಾ ಲಭ್ಯವಾಗಿರುತ್ತವೆ. ಕೆಲವು ನಿರ್ದಿಷ್ಟ ಜಿಲ್ಲೆಗಳು ವನಸ್ಪತಿಗಳ ಸಾಗುವಳಿಗೆ ತಕ್ಕವಾಗಿವೆ, ಇತರ ಜಿಲ್ಲೆಗಳು ಖನಿಜೌಷಧಿಗಳಲ್ಲಿ ಶ್ರೀಮಂತವಾಗಿವೆ.

"ಶಿಕ್ಷಣದ ವಿಷಯ. ಮಾತೃಭಾಷೆಯೇ ಒಬ್ಬನ ಸಹಜ ಅಭಿವ್ಯಕ್ತಿಯ ಮಾಧ್ಯಮ. ಆದ್ದರಿಂದ, ಬಂಗಾಲದ ಶಾಲೆಗಳಲ್ಲಿ ಬಂಗಾಲಿಯೇ ಬೋಧ–ಮಾಧ್ಯಮವಾಗಿರಬೇಕು. ಪ್ರಚಲಿತ ಜಾಗತಿಕ ಭಾಷೆಯಾಗಿರುವ ಇಂಗ್ಲೀಷು ದ್ವಿತೀಯ ಭಾಷೆಯಾಗಿರಬೇಕು. ಉಚ್ಚ ಶಿಕ್ಷಣವನ್ನು ಇಂಗ್ಲೀಷಿನಲ್ಲಿಯೇ ನೀಡಬೇಕು. ಬಂಗಾಲದ ಸಾಂಸ್ಕೃತಿಕ ಬಳುವಳಿಯನ್ನು ಶ್ರೀಮಂತಗೊಳಿಸಲು ಸಂಸ್ಕೃತವನ್ನು ಬೋಧಿಸಬೇಕು. ಶಿಕ್ಷಣ ಸಾಮಗ್ರಿಗಳಾದ ಕಾಗದ ಮಸಿ ಇತ್ಯಾದಿಗಳು ಸಹ ಬಂಗಾಲದಲ್ಲಿ ಲಭ್ಯ. ಅನೇಕ ಜಿಲ್ಲೆಗಳಲ್ಲಿ ಬೆಳೆಯಬಹುದಾದ ಹುಲ್ಲು ಮತ್ತು ಗಿಡಬಳ್ಳಿಗಳಿಂದ ಕಾಗದ ತಯಾರಿಸಬಹುದು. ಮಸಿಯನ್ನು ಕೃತ್ರಿಮ ರೀತಿಯಿಂದಾಗಲಿ ಇಲ್ಲವೆ ನೀಲಿ ಬಣ್ಣದಿಂದಾಗಲಿ ತಯಾರಿಸಬಹುದು."

"ಶಕ್ತಿ ಮತ್ತು ಸಾಗಾಣಿಕೆ : ಸೌರಶಕ್ತಿಯನ್ನು ಸೋವಿಯಾಗಿ ಉತ್ಪಾದಿಸುವ ವರೆಗೆ ಇನ್ನಿತರ ಶಕ್ತಿಗಳಾದ ಜಲ–ವಿದ್ಯುಚ್ಛಕ್ತಿ, ಕಲ್ಲಿದ್ದಲು, ಉಷ್ಣತಾಶಕ್ತಿ ತೆರಗಳ ಶಕ್ತಿ, ಭೂಗತ ಉಷ್ಣತಾಶಕ್ತಿ, ವಾಯು ಶಕ್ತಿ ಮತ್ತು ನೈಸರ್ಗಿಕ ಅನಿಲಗಳನ್ನು ಬಳಸಬಹುದು. ಸಾಗಾಣಿಕೆಗೆ ಅಗತ್ಯವಿರುವ ರಬ್ಬರ, ಉಕ್ಕು, ಅಭ್ರಕ, ಅಭ್ರಕ ಚೂರುಗಳು, ಪಾರಜ, ಬೆಳ್ಳಿ, ಹಿತ್ತಾಳೆ ಬೆಣಚುಗಲ್ಲು ಹಾಗೂ ಮ್ಯಾಂಗನೀಜ ಇತ್ಯಾದಿ ಎಲ್ಲಾ ಕಚ್ಚಾ ಸರಕುಗಳು

ದೊರೆಯುತ್ತಿವೆ. ಆದ್ದರಿಂದ ಬಂಗಾಲವು ಸರ್ವ ವಿಧದ ಸಾಗಾಣಿಕೆಯನ್ನು ಒದಗಿಸಬಲ್ಲದು''. (2, ಪು. 17–19)

ವಿಕೇಂದ್ರೀಕೃತ ಯೋಜನೆಯಲ್ಲಿ ಇಡೀ ಸಮಾಜಕ್ಕೊಂದು ಯೋಜನೆ ಹಾಗೂ ಪ್ರತಿ ಸಮಾಜದಲ್ಲಿರುವ ಜಿಲ್ಲೆಗಳಿಗೆ ಹಾಗೂ ಬ್ಲಾಕುಗಳಿಗೆ ಇತರ ಯೋಜನೆಗಳಿರುತ್ತವೆ. ಶ್ರೀ ಸರಕಾರ ಅವರ ಶಬ್ದಗಳಲ್ಲಿಯೇ ಹೇಳುವುದಾದರೆ, ಪುನಃ ಬಂಗಾಲದ ಉದಾಹರಣೆಯನ್ನೇ ನೋಡಿರಿ. ಬಂಕುರಾ, ಪುರುಲಿಯಾ ಇತ್ಯಾದಿ ಸೇರಿದಂತೆ ಇಡೀ ಪಶ್ಚಿಮದ ರಾಢ ಪ್ರದೇಶಕ್ಕಾಗಿ ಒಂದು ಉಪಯೋಜನೆ ಬೇಕು. ಅದೇ ರೀತಿ ಜಲಪಾಯಿಗುರಿ, ಕೂಚಬಿಹಾರ ಸಿಲಗುರಿ ಮತ್ತು ಗೊಲ್ಪೆರಾ ಇತ್ಯಾದಿಗಳಿಗಾಗಿ ಇನ್ನೊಂದು ಉಪಯೋಜನೆಬೇಕು.'' (1, ಪು. 12–13)

ಆಮ್ರಾ ಬಂಗಾಲದ ಸರ್ವ ಜನರ ಕನಿಷ್ಠ ಅಗತ್ಯಗಳನ್ನು ಹೇಗೆ ಪೂರೈಸಬೇಕು ಮತ್ತು ಬಡನತವನ್ನು ಹೇಗೆ ನಿರ್ಮೂಲನಗೊಳಿಸಬೇಕು ಎಂಬ ಬಗೆಗೆ ಶ್ರೀ ಸರಕಾರರ ನಿದರ್ಶನವನ್ನು ಮೇಲೆ ತಿಳಿಸಲಾಗಿದೆ. ಬೇರೊಂದು ಸಂದರ್ಭದಲ್ಲಿ ಶ್ರೀ ಸರಕಾರ ಅವರು ವಿಕೇಂದ್ರೀಕೃತ ಇಲ್ಲವೆ ಬ್ಲಾಕ ಮಟ್ಟದ ಯೋಜನೆಯ ಒಳ್ಳೆಯ ಅಂಶಗಳನ್ನು ನಿದರ್ಶಿಸಲು ಪಂಜಾಬ ಸಮಾಜವನ್ನು ದಕ್ಷಿಣದಲ್ಲಿಯ ಅನೇಕ ಸಮಾಜಗಳನ್ನು ದಾಟಿ ಹಬ್ಬಿದ ಕಾವೇರಿ ಕೊಳ್ಳದೊಂದಿಗೆ ಹೋಲಿಕೆ ನೀಡುತ್ತಾರೆ. ಇವೆರಡಕ್ಕೂ ಸಂಪೂರ್ಣ ವಿಭಿನ್ನ ಪ್ರಕಾರದ ಯೋಜನೆಗಳು ಬೇಕು. ಏಕೆಂದರೆ, ಅಲ್ಲಿಯ ಮಣ್ಣು ಮತ್ತು ವಾತಾವರಣದ ಸ್ಥಿತಿಗತಿಗಳಲ್ಲಿ ಪ್ರಾದೇಶಿಕ ಭಿನ್ನತೆಗಳುಂಟು.

''ಪ್ರಥಮತಃ ಬಂಜಾಬದ ಪಂಚ ನದಿಗಳಾದ ಜೇಲ್ಲಂ, ಚೇನಾಬ, ರಾವಿ, ಬಿಯಾಸ, ಸತಲಜಗಳ ಉಗಮ ಸ್ಥಾನ ಹಿಮಾಲಯ ಪರ್ವತ. ಆದರೆ, ಕಾವೇರಿಕೊಳ್ಳದ ನದಿಗಳ ಉಗಮವು ಪಶ್ಚಿಮ ಘಟ್ಟದ ಪ್ರದೇಶದಲ್ಲಿ. ಅವು ಋತುಮಾನಾನುಸಾರ ಬೀಳುವ ಮಳೆಯನ್ನು ಅವಲಂಬಿಸಿವೆ. ಕಾವೇರಿ ಕೊಳ್ಳದ ಕ್ಷೇತ್ರದಲ್ಲಿ ಪ್ರತಿ ವರ್ಷ ಎರಡು ಮಳೆಯ ಋತುಗಳಿವೆ. ಅವು ಹಿಮಪೋಷಿತವಲ್ಲವಾದುದರಿಂದ ನಿರಂತರವಲ್ಲ. ಆದ್ದರಿಂದ ಕಾವೇರಿ ಕೊಳ್ಳದ ನದಿಗಳಲ್ಲಿ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವಂತಿಲ್ಲ. ಏಕೆಂದರೆ, ನೀರಿನ ಪೂರೈಕೆಯು ಅನಿಶ್ಚಿತ. ಆದರೆ ಪಂಜಾಬ ನದಿಗಳಿಂದ ವಿಪುಲ ವಿದ್ಯುಚ್ಛಕ್ತಿ ಉತ್ಪಾದಿಸಬಹುದು. ಏಕೆಂದರೆ ವರ್ಷವಿಡೀ, ಭಾಕ್ರಾನಂಗಲ ಆಣೆಕಟ್ಟಿನಲ್ಲಿರುವಂತೆ, ನೀರಿನ ಪೂರೈಕೆ ಇರುತ್ತದೆ. ಪಂಜಾಬಿನ ನದಿಗಳು ಕರಗುವ ಹಿಮದಿಂದಾಗಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತವೆ.''

''ಎರಡನೆಯದಾಗಿ, ಕಾವೇರಿ ಕೊಳ್ಳವು ಭೂ ಮಧ್ಯೆ ರೇಖೆಗೆ ಹೆಚ್ಚು ನಿಕಟವಿರುವುದರಿಂದ ವಿಪರೀತ ಹವಾಮಾನ ಹೊಂದಿದೆ. ಪಂಜಾಬದಲ್ಲಿ ವಿಪರೀತ ಹವಾಮಾನವಿದ್ದರೂ ಸಹ, ಕಾರಣ ಬೇರೆ. ವಾಯವ್ಯ ಮತ್ತು ಪೂರ್ವ ದಿಕ್ಕಿನಿಂದ ಬೀಸುವ ವಿಭಿನ್ನ ಗಾಳಿಗಳಿಂದ ವೈಪರೀತ್ಯವಿದೆ. ಕಾವೇರಿ ಕೊಳ್ಳವು ಯಾವುದೇ ಗಾಳಿಗಳನ್ನು ಅವಲಂಬಿಸಿಲ್ಲ.''

''ಮೂರನೆಯದಾಗಿ, ಕಾವೇರಿ ಕೊಳ್ಳದ ಮಧ್ಯ ಪ್ರದೇಶವು ಖರಿಳಿತದ, ಹುರುಕು ಕಲ್ಲಿನ ಮಣ್ಣಿನಿಂದಾಗಿದ್ದು, ಅದನ್ನು 'ಡೆಕ್ಕನ ಪ್ಲೇಟೋ' (ದಕ್ಷಿಣದ ತಪ್ಪಲು) ಎಂದು ಕರೆಯುತ್ತಾರೆ. ಬೆಟ್ಟಗಳ ಮತ್ತು ಸಮುದ್ರದ ನಡುವೆ ಚಿಕ್ಕ ಭೂಪಟ್ಟಿಯಿದ್ದು ಅದು ರೇವೆ ಮಣ್ಣಿನಿಂದ ಕೂಡಿದ್ದು ಬಯಲು ಪ್ರದೇಶವಾಗಿದೆ. ದಕ್ಷಿಣ ತಪ್ಪಲಿನ ಅಲ್ಪಾಂಶ ಮಾತ್ರ ರೇವೆ ಮಣ್ಣಿನದಾಗಿದೆ. ಪಂಜಾಬವು ಸಮತಟ್ಟಿನ ಪ್ರದೇಶ. ದಕ್ಷಿಣ ಪರ್ಯಾಯ ದ್ವೀಪವು ನಾಲ್ಕು

ಕಡಲು ತೀರಗಳನ್ನು ಹೊಂದಿದೆ. ಮೊದಲನೆಯದಾಗಿ ಉತ್ಕಲ ಕರಾವಳಿ. ಇದು ಮಹಾನದಿಯಿಂದ ಗೋದಾವರಿಯ ವರೆಗೆ ಹಬ್ಬಿದೆ. ಎರಡನೆಯದಾಗಿ ಕೋರಮಂಡಲ ಕರಾವಳಿ. ಇದು ಗೋದಾವರಿಯಿಂದ ಕನ್ಯಾಕುಮಾರಿಯ ವರೆಗೆ ವಿಸ್ತರಿಸಿದೆ. ಮೂರನೆಯದಾಗಿ, ಮಲಬಾರ ಕರಾವಳಿ, ಇದು ಕನ್ಯಾಕುಮಾರಿಯಿಂದ ಗೋವೆಯ ವರೆಗೆ ಹಬ್ಬಿದೆ. ನಾಲ್ಕನೆಯದಾಗಿ ಕೊಂಕಣ ಕರಾವಳಿ. ಇದು ಗೋವೆಯಿಂದ ಗುಜರಾತಿನ ವರೆಗೆ ಹಬ್ಬಿದೆ. ಈ ಕರಾವಳಿ ಪ್ರದೇಶಗಳು ಖರಿಳಿತದ ಭೂಮಿಯನ್ನು ಹೊಂದಿಲ್ಲ. ಈ ಕರಾವಳಿ ಪ್ರದೇಶಗಳು ಭಾರತದ ಧಾನ್ಯ ಕಣಜಗಳೆನಿಸಿವೆ. ದಕ್ಷಿಣ ತೊಪ್ಪಲಿನ ತೆಲಂಗಾಣ ಪ್ರದೇಶದಲ್ಲಿ ಆಹಾರದ ತೀವ್ರ ಅಭಾವವಿದೆ. ಕಾವೇರಿ ಕೊಳ್ಳದಲ್ಲಿ ಪೂರ್ವದ ಕರಾವಳಿ ಪ್ರದೇಶವು, ಅರ್ಥಾತ್ ಕೋರಮಂಡಲ ಪ್ರದೇಶವು ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ದಕ್ಷಿಣ ತೊಪ್ಪಲಿನಲ್ಲಿ ತಾಳ ಮರಗಳನ್ನು ಮಾತ್ರ ಬೆಳೆಯಬಹುದೇ ಹೊರತು ತೆಂಗಿನ ಮರಗಳನ್ನಲ್ಲ. ಅದೇ ಕರಾವಳಿ ಪ್ರದೇಶದಲ್ಲಿ ಉಭಯತಾಪಿ ಗಿಡಗಳನ್ನು ಬೆಳೆಯಬಹುದು.

ಯೋಜನೆಯ ನಿರೂಪಣೆಯ ಸರಿಯಾದ ದಾರಿಯಲ್ಲಿ, ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತ ಮಾಡುವ ಮುನ್ನವೇ ಎಲ್ಲ ತತ್ಸಂಬಂಧಿ ಅಂಶಗಳನ್ನು ಪರಿಗಣಿಸಲಾಗುವುದು. (2, ಪು. 38–39).

ತೃತೀಯ ಜಗತ್ತಿನಲ್ಲಿ ಸಾಮಾಜಿಕ ಆರ್ಥಿಕ ಘಟಕಗಳು :

ಭಾರತೀಯ ಸಮಾಜ ಯೋಜನೆಯಂತೆಯೇ ತೃತೀಯ ಜಗತ್ತಿನ ಇತರ ರಾಷ್ಟ್ರಗಳನ್ನು ಸಹ, ಅವುಗಳ ಆರ್ಥಿಕ ಅಭಿವೃದ್ಧಿ ಸಾಧಿಸಲು ಹಾಗೂ ಅವುಗಳ ಬಡತನವನ್ನು ನಿರ್ಮೂಲಗೊಳಿಸಲು ಸರಿಯಾದ ಸಾಮಾಜಿಕ – ಆರ್ಥಿಕ ಗುಂಪುಗಳಲ್ಲಿ ವಿಭಜಿಸಬೇಕು. ಈ ಘಟಕಗಳ ಮೂಲಭೂತ ತತ್ವಗಳು ಭಾರತದಲ್ಲಿಯ ಸಮಾಜಗಳಿಗಿರುವ ತೆರನಾಗಿಯೇ ಇವೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅನೇಕ ಸಾಮಾನ್ಯ ಸಮಸ್ಯೆಗಳಿರುವಾಗಲೂ ಸಹ ಅವುಗಳಲ್ಲಿ ಅಂತರಗಳ ವೈವಿಧ್ಯವೂ ಇರುತ್ತದೆ. ಉದಾಹರಣೆಗೆ, ಭಾರತದಲ್ಲಿ ಅನೇಕ ಪ್ರಾದೇಶಿಕ ಭಾಷೆಗಳಿವೆ. ಮೆಕ್ಸಿಕೊದಲ್ಲಿ ಏಕೈಕ ಮುಖ್ಯ ಭಾಷೆಯಿದೆ. ಅದೇ ಸ್ಪ್ಯಾನಿಶ್. ಅದೇ ರೀತಿ ಬ್ರಾಝಿಲ್‌ದಲ್ಲಿ ಅದರ ಮುಖ್ಯ ಭಾಷೆಯೆಂದು ಪೋರ್ತುಗೀಜ ಇದೆ. ಈ ರಾಷ್ಟ್ರಗಳ ಭಾಷಾ ಭಿನ್ನತೆಯು ಸಮಾಜ ನಿರ್ಮಾಣದಲ್ಲಿ ಉಪಯೋಗಕ್ಕೆ ಬಾರದು. ಅವುಗಳ ಸಾಮಾಜಿಕ ಆರ್ಥಿಕ ಗುಂಪುಗಳನ್ನು ಆರ್ಥಿಕ ಸಮಸ್ಯೆಗಳ ಸಂಪನ್ಮೂಲಗಳ ಹಾಗೂ ಸಂಭಾವ್ಯತೆಗಳ ಸಾದೃಶ್ಯತೆಯ ಆಧಾರದ ಮೇಲೆ, ರೂಪಿಸಬೇಕು. ಆದರೆ, ವಿವಿಧ ರಾಷ್ಟ್ರಗಳನ್ನು ಸಮಾಜದಲ್ಲಿ ವಿಭಜಿಸುವುದು, ಅವುಗಳ ಅಭಿವೃದ್ಧಿಗೆ ಅನಿವಾರ್ಯ. ಏಕೆಂದರೆ, ಆಗ ಮಾತ್ರ, ವಿಕೇಂದ್ರೀಕೃತ ಯೋಜನೆಯ ಗ್ರಹಿಕೆಯನ್ನು ಕೃತಕೃತ್ಯಗೊಳಿಸಬಹುದು. ಸ್ವಾವಲಂಬಿ ಜನತೆಯ ಅರ್ಥವ್ಯವಸ್ಥೆಯನ್ನು ರೂಪಿಸುವುದು ಅವುಗಳ ಪ್ರಪ್ರಥಮ ಆದ್ಯತೆ ಎಂಬುದನ್ನು ಹೇಳಬೇಕಾದ ಅಗತ್ಯವೇನಿಲ್ಲ.

ದೀರ್ಘ ಕಾಲೀನ ಯೋಜನೆ :

ಪ್ರಉತ ಹಂತ ಹಂತದ ಯೋಜನೆಯನ್ನು ಸಮರ್ಥಿಸುತ್ತದೆ. ಸಕಲ ಸಮಾಜಗಳಲ್ಲಿ ಜನತೆಯ ಅರ್ಥ ವ್ಯವಸ್ಥೆಯನ್ನು ಕೃತಕೃತ್ಯಗೊಳಿಸುವುದು ಯೋಜನಾ ಪ್ರಕ್ರಿಯೆಯಲ್ಲಿಯ

ಪ್ರಥಮ ಚರಣ. ಈ ಕೂಡಲೇ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮವದು. ಅಂದರೆ ಪ್ರತಿಯೋರ್ವನ ಕನಿಷ್ಠ ಅಗತ್ಯಗಳನ್ನು ಪೂರೈಸಬಹುದು. ಆದರೆ ಯೋಜನಾಪ್ರಕ್ರಿಯೆಯು ಅಲ್ಲಿಗೇ ನಿಲ್ಲಕೂಡದು. ಸರ್ವರಿಗಾಗಿ ಜೀವನ ಮಟ್ಟವನ್ನು ಎತ್ತರಿಸಲೋಸುಗ ಪ್ರಯತ್ನವನ್ನು ಮುಂದುವರಿಸಲೇಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ತೃತೀಯ ಜಗತ್ತಿನಿಂದ ಬಡತನವನ್ನು ನಿವಾರಿಸಲು ಪ್ರಯತ ಬಳಿ ಅಲ್ಪಕಾಲೀನ ಯೋಜನೆಯೂ ಉಂಟು; ದೀರ್ಘ ಕಾಲೀನ ಯೋಜನೆಯೂ ಉಂಟು.

ಅಲ್ಪ ಕಾಲಾವಧಿಯಲ್ಲಿ ಮೊದಲು ರಾಷ್ಟ್ರಗಳನ್ನು ಸುಸಂಬದ್ಧ ಸಮಾಜಗಳಲ್ಲಿ ವಿಭಜಿಸಬೇಕು. ಆ ಬಳಿಕ, ಸಮಾಜ, ಜಿಲ್ಲೆ ಹಾಗೂ ಬ್ಲಾಕ ಮಟ್ಟದಲ್ಲಿ ವಿಕೇಂದ್ರೀಕೃತ ಯೋಜನೆಯ ಮೂಲಕ ಎಲ್ಲ ಪ್ರದೇಶಗಳಲ್ಲಿ ಜನತೆಯ ಅರ್ಥವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಬೇಕು. ಜಿಲ್ಲಾ ಹಾಗೂ ಬ್ಲಾಕ ಮಟ್ಟದ ಯೋಜನೆಗಳು ಹೊಸ ಸಹಕಾರಿ ಉದ್ದಿಮೆ ಮತ್ತು ಐಕ್ಯೆಕ ಒಡೆತನಗಳತ್ತ ಕೇಂದ್ರೀಕರಿಸಿದರೆ, ಸಮಾಜ ಮಟ್ಟದ ಯೋಜನೆಗಳು ಪ್ರಚಲಿತ ಪ್ರಮುಖ ಉದ್ದಿಮೆಗಳನ್ನು ಬಲಪಡಿಸುವುದರತ್ತ ಲಕ್ಷ್ಯ ಹರಿಸಬಲ್ಲವು. ಆದರೀಗ ಇವು ಸಾರ್ವಜನಿಕ ರಂಗದಲ್ಲಿ ಕೊರಗುತ್ತ ನಿಂತಿವೆ. ಈ ಹಂತದಲ್ಲಿ ನೂತನವಾದ ಅತಿ ಹೆಚ್ಚು ಬಂಡವಾಳ. ಬಾಹುಳ್ಯದ ಪ್ರಕಲ್ಪಗಳನ್ನು ಹಮ್ಮಿಕೊಳ್ಳಲು ಅವಸರಸಲ್ಲದು. ಬಂಡವಾಳದ ತೀವ್ರ ಅಭಾವವಿರುವಾಗ, ಬಂಡವಾಳದ ಪ್ರಚಲಿತ ಸಂಚಯವನ್ನು ಮೊದಲು ಗರಿಷ್ಠ ಉಪಯೋಗ ಮಾಡಬೇಕು. ಮತ್ತು ಹೊಸ ಶ್ರಮ–ಬಾಹುಳ್ಯದ, ಕೃಷಿಪೂರಕ ಉದ್ದಿಮೆಗಳನ್ನು ಆರಂಭಿಸಬೇಕು.

ದೀರ್ಘಾವಧಿಯಲ್ಲಿ ಯೋಜನೆಯ ಪ್ರಕ್ರಿಯೆಯು ಮುಂದಿನ ಹಂತ ತಲುಪುತ್ತದೆ. ಪ್ರಥಮ ಹಂತಕ್ಕೆ ಐದುವರ್ಷ ಕಾಲ ಹಿಡಿಯುತ್ತದೆ. ಪ್ರಾರಂಭದ ಪಂಚ ವರ್ಷಗಳೊಳಗೆ ಪ್ರಯತ ಯೋಜನಾ ವ್ಯವಸ್ಥೆಯು ಶ್ರಮಜೀವಿಗಳು ಮತ್ತು ಬುದ್ಧಿಜೀವಿಗಳು, ಹಳ್ಳಿಗರು ಮತ್ತು ಪಟ್ಟಣಿಗರು, ಹೀಗೆ ಎಲ್ಲ ಭಾರತೀಯರ ಕನಿಷ್ಠ ಅಗತ್ಯಗಳನ್ನು ಒದಗಿಸಬಲ್ಲದು. ಮುಂದಿನ ಹಂತದಲ್ಲಿ ವಾಣಿಜ್ಯ ಅರ್ಥ ವ್ಯವಸ್ಥೆಯನ್ನು ವಿಕಾಸಪಡಿಸಬಹುದು. ಆದು ಈ ಕೆಳಗಿನ ಚರಣಗಳನ್ನು ಒಳಗೊಳ್ಳುತ್ತದೆ.

1. ಘಟಕ ಸಮಾಜಗಳು ಬೆಳೆದಂತೆ ಮತ್ತು ಆರ್ಥಿಕವಾಗಿ ಸ್ವಾವಲಂಬಿಯಾದಂತೆ ಎರಡು ಇಲ್ಲವೆ ಮೂರನ್ನು ಸೇರಿಸಿ, ಹೆಚ್ಚು ದೊಡ್ಡ ಘಟಕವನ್ನು ರೂಪಿಸಬಹುದು. ಇದರಿಂದ ಆರ್ಥಿಕ ಹಾಗೂ ಆಡಳಿತಾತ್ಮಕ ದಕ್ಷತೆಗೆ ಪ್ರೋತ್ಸಾಹ ದೊರೆಯುತ್ತದೆ. ದೊಡ್ಡ ಘಟಕದಲ್ಲಿ ಜಿಲ್ಲಾ ಹಾಗೂ ಬ್ಲಾಕ ಮಟ್ಟದ ಯೋಜನಾ ಸಮಿತಿಗಳು ಇದ್ದಕ್ಕಿದ್ದಂತೆ ಉಳಿಯುತ್ತವೆ. ಸಮಾಜ ಮಟ್ಟದಲ್ಲಿ ದೊಡ್ಡ ಘಟಕವು ಒಂದೇ ಮಂಡಳಿಯನ್ನು ಹೊಂದಿರುತ್ತವೆ.

2. ಸರಕುಗಳ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲೋಸುಗ, ದೊಡ್ಡ ಸಮಾಜವು, ಹೆಚ್ಚು ಸಂಪನ್ಮೂಲಗಳನ್ನೂ ಮತ್ತು ವಿಸ್ತೃತ ಬೇಡಿಕೆಯಾಧಾರ ಅರ್ಥಾತ್ ಖರೀದಿ ಶಕ್ತಿಯನ್ನು ಹೊಂದಿರುತ್ತದೆಯೆಂಬುದು ಸುಸ್ಪಷ್ಟ. ಈ ಹಂತಲ್ಲಿ ಯೋಜನಾ ಪ್ರಕ್ರಿಯೆಯ ಸಕಲ ಮಟ್ಟಗಳಲ್ಲಿ ಬಂಡವಾಳ–ಬಾಹುಳ್ಯದ ಪ್ರಕಲ್ಪಗಳನ್ನು ಆರಂಭಿಸಬೇಕು. ಆ ಬಳಿಕ, ಸಮಾಜವು ನೂತನ ಯಾಂತ್ರೀಕೃತ ಶಕ್ತಿ–ಸ್ಥಾವರಗಳನ್ನೂ ಮತ್ತು ಉದ್ದಿಮೆಗಳನ್ನೂ ಹಮ್ಮಿಕೊಳ್ಳಬೇಕು. ಇಲ್ಲವೆ ಪ್ರಚಲಿತ ಉದ್ದಿಮೆಗಳಲ್ಲಿಯೇ ನವೀನ ತಾಂತ್ರೀಕತೆಯನ್ನು ಅಳವಡಿಸಬೇಕು. ಅವನ್ನೇ ಜಿಲ್ಲಾ ಮತ್ತು ಬ್ಲಾಕ್ ಮಟ್ಟಗಳಲ್ಲೂ ಮಾಡಬೇಕು. ಅನಂತರ ಕ್ಲಿಷ್ಟ

ಆಧುನಿಕ ತಾಂತ್ರಿಕತೆಯಲ್ಲಿ ಕೆಲಸಗಾರರಿಗೆ ತರಬೇತಿಬೇಕು. ಉತ್ಪಾದಕಯ ತೀವ್ರವಾಗಿ ಏರುತ್ತದೆ. ಆದರೂ ಸಹ ಯಾರನ್ನೂ ಸಹ ಕೆಲಸದಿಂದ ತೆಗೆದು ಹಾಕುವುದಿಲ್ಲ. ಅಧಿಕ ಉತ್ಪಾದನೆಯ ಪರಿಣಾಮವಾಗಿ, ವೇತನಗಳು ಏರುತ್ತವೆ. ಆದರೆ ಪೂರ್ಣ ಉದ್ಯೋಗಾವಕಾಶ ದೊರೆಯಲು ಕೆಲಸದ ವೇಳೆಯಲ್ಲಿ ಕಡಿತ ಸಾಧಿಸಲಾಗುವುದು.

3. ಕೆಲಸದ ವೇಳೆಯಲ್ಲಿ ಆದ ಕಡಿತದಿಂದ, ಜನರು ಹೆಚ್ಚು ಕಾಲ ಬೌದ್ಧಿಕ ಮತ್ತು ಅಧ್ಯಾತ್ಮಿಕ ಸಾಧನಗಳಲ್ಲಿ ಹಾಗೂ ಮನರಂಜನೆಯಲ್ಲಿ ಕಳೆಯಬಲ್ಲರು. ಆ ಹಂತದಲ್ಲಿ ಹಲವು ವಿರಾಮಪರ ಉದ್ದಿಮೆಗಳು ಹುಟ್ಟಿಕೊಳ್ಳುತ್ತವೆ. ಆಕಾಶವಾಣಿ, ದೂರವಾಣಿ, ಪ್ರವಾಸೋದ್ದಿಮೆ, ಚಲನ ಚಿತ್ರೋದ್ದಿಮೆ ಹಾಗೂ ನಾಟ್ಯಪರ ಉದ್ದಿಮೆಗಳು ಆ ಬಳಿಕ ಪುಟಿದೇಳಬಹುದು.

4. ಈಗ ಸಮಾಜಗಳ ಸಂಖ್ಯೆ ಕಡಿಮೆಯಾಗುತ್ತ ಉತ್ಪಾದನೆಯ ಗಾತ್ರ ಹೆಚ್ಚು ಇರುವುದು. ಪರಸ್ಪರ ವ್ಯಾಪಾರವೂ ಹೆಚ್ಚಾಗುವುದು. ಇದರಿಂದ ವಿಶೇಷತೆಗೆ ಅನುಕೂಲ ಮತ್ತು ಶ್ರಮ ಉತ್ಪಾದಕೆಯು ಇನ್ನಷ್ಟು ಹೆಚ್ಚುತ್ತದೆ.

5. ಅಂತರ್ ಸಮಾಜ ವ್ಯಾಪಾರವು ಹೆಚ್ಚಿದರೂ ದ್ವಿತೀಯ ಯೋಜನಾ ಹಂತದಲ್ಲಿ, ವಿದೇಶ ವ್ಯಾಪಾರವನ್ನು ಕನಿಷ್ಠ ಮಟ್ಟದಲ್ಲಿಯೇ ಇರಿಸಬೇಕು. ಏಕೆಂದರೆ, ಭಾರತದ ಶೈಶವಾವಸ್ಥೆಯ ಉದ್ದಿಮೆಗಳು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಎದುರಿಸಲಾರವು.

6. ಪರಿಶ್ರಮಪೂರ್ವಕ ಪ್ರಯತ್ನಿಸಿದರೂ ಸಹ ಕೆಲವು ಶ್ರಮಜೀವಿಗಳು ನಿರುದ್ಯೋಗಿಗಳಾಗಿ ಉಳಿದರೆ, ಆಗ ಭಾರತದ ಉನ್ನತ ಕೌಶಲ್ಯವುಳ್ಳ ಶ್ರಮಜೀವಿಗಳನ್ನು ರಫ್ತು ಉದ್ದಿಮೆಗಳಲ್ಲಿ ತೊಡಗಿಸುವುದು ವಿದೇಶಿ ಬಂಡವಾಳ ಹಾಗೂ ತಾಂತ್ರಿಕತೆಗೆ ಔತಣವೀಯಬೇಕು. ವಿದೇಶಿ ಸಂಸ್ಥೆಗಳು ಪ್ರತಿಶತ 49ಕ್ಕಿಂತ ಅಧಿಕ ಸಹಕಾರಿ ಉದ್ದಿಮೆಗಳ ಒಡೆತನವನ್ನು ಹೊಂದಿರಕೂಡದು. ಅಥವಾ ನೂರಕ್ಕೆ ನೂರರಷ್ಟು ಒಡೆತನ ನೀಡಿ ಅವುಗಳನ್ನು ಆಮಂತ್ರಿಸುವುದಾದರೆ ಕೇವಲ ರಫ್ತು ಸರಕುಗಳ ಉತ್ಪಾದನೆಯನ್ನು ಮಾಡುವ ಸಂಸ್ಥೆಗಳಿಗೆ ಅವುಗಳು ಸೀಮಿತವಿರಬೇಕು. ರಫ್ತು ರಂಗಕ್ಕೆ ಅವರನ್ನು ಆಕರ್ಷಿಸಲು ಅವರಿಗೆ ಉದಾರವಾಗಿ ಕರಾಕರಣೆ ಸವಲತ್ತುಗಳನ್ನು ನೀಡಬೇಕು. ಈ ರೀತಿಯ ಸವಲತ್ತುಗಳಿಂದ ಇನ್ನಿತರ ಭಾರತೀಯ ಸಮಾಜ ಮಟ್ಟದ ಅರ್ಥವ್ಯವಸ್ಥೆಗಳೊಂದಿಗೆ ಸ್ಪರ್ಧೆ ಉಂಟಾಗದಂತೆ ನೋಡಿಕೊಳ್ಳಬೇಕು. ದ್ವಿತೀಯ ಹಂತದ ಪ್ರಯತೀಯ ಅಭಿವೃದ್ಧಿ ಕಾರ್ಯಕ್ರಮವು ಪೂರ್ಣಗೊಳ್ಳಲು 10 ವರ್ಷ ಬೇಕು. ಈ ವರ್ಷಗಳಲ್ಲಿ ದೇಶವು ಕೃಷಿಯಲ್ಲಿ ಮತ್ತು ಸ್ಥಳೀಯ ಕಚ್ಚಾ ಸರಕುಗಳನ್ನು ಬಳಸುವ ಎಲ್ಲ ಉದ್ದಿಮೆಗಳಲ್ಲಿ ಸ್ವಾವಲಂಬಿಯಾಗುವದು. ತಾಂತ್ರಿಕತೆಯು ಸ್ಥಳೀಯವಿರಬಹುದು. ಇಲ್ಲವೇ ವಿದೇಶೀಯವಿರಬಹುದು. ಆದರೆ ಅದು ಅಂತರಿಕವಾದ ಉತ್ಪಾದಿತ ಸಂಪನ್ಮೂಲಗಳಿಗೆ ತಕ್ಕುದಾಗಿರಬೇಕು.

ಅಭಿವೃದ್ಧಿ ಕಾರ್ಯಕ್ರಮದ ದ್ವಿತೀಯ ಹಂತವು ಮುಗಿದ ಬಳಿಕ ತೃತೀಯ ಮತ್ತು ಅಂತಿಮ ಹಂತ ಬರುತ್ತದೆ. ಇದು ಭಾರತವನ್ನು ಚೆನ್ನಾಗಿ ಅಭಿವೃದ್ಧಿ ಅರ್ಥ ವ್ಯವಸ್ಥೆಯಲ್ಲಿ ಪರಿವರ್ತಿಸುತ್ತದೆ. ಶ್ರೀ ಸರಕಾರ ಅವರ ನಾಲ್ಕೂ ಅರ್ಥವ್ಯವಸ್ಥೆಗಳು ರಭಸದಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೊಳ್ಳುತ್ತವೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಆಗ ಭಾರತವು

ವಾಣಿಜ್ಯ, ಮಾನಿಸಿಕ ಮತ್ತು ಜನತೆಯ ಅರ್ಥವ್ಯವಸ್ಥೆಗಳ ಪೂರ್ಣ ಬೆಳವಣಿಗೆಗಳನ್ನು ಹೊಂದಿರುತ್ತದೆ. ತೃತೀಯ ಹಂತವು ಈ ಕೆಳಗಿನ ಚರಣಗಳನ್ನು ಒಳಗೊಳ್ಳುತ್ತದೆ.

1. ದ್ವಿತೀಯ ಹಂತದ ಎಲ್ಲ ಸಮಾಜಗಳು ಒಂದು ಮಹಾಘಟಕವಾದ ಭಾರತದಲ್ಲಿ ವಿಲೀನವಾಗುತ್ತವೆ ಮತ್ತು ಕೇಂದ್ರದಲ್ಲಿ ಒಂದು ಯೋಜನಾಮಂಡಳಿ ಇರುತ್ತದೆ. ಜಿಲ್ಲಾ ಮತ್ತು ಬ್ಲಾಕ ಮಟ್ಟದ ಯೋಜನಾ ಮಂಡಳಿಗಳಂತೂ ಮುಂದುವರಿಯುತ್ತವೆ. ಆದರೆ, ಅವುಗಳಲ್ಲಿಯೂ ಸಹ ಕೆಲವನ್ನು ದೊಡ್ಡ ಪ್ರಮಾಣದ ಕಾರ್ಯಾಲಾಪಗಳಿಂದ ಘಟಿಸುವ ಮಿತವ್ಯಯಕ್ಕೋಸುಗ ಒಟ್ಟುಗೂಡಿಸಬಹುದು. ಈ ಸಂದರ್ಭದಲ್ಲಿ ಕೃಷಿಯಲ್ಲಿ ಮತ್ತು ಉದ್ದಿಮೆಯಲ್ಲಿ ಅತ್ಯಾಧುನಿಕ ತಂತ್ರಗಳನ್ನು ಸೇರ್ಪಡೆ ಮಾಡಬಹುದು.

2. ಆಗ ಭಾರತವು ಏಕ – ಸಮಾಜವಾಗುತ್ತದೆ. ಆಗ ಉದ್ಯೋಗಾವಕಾಶ ನೀಡಲು ಸ್ಥಳೀಯ ಶ್ರಮಿಕರಿಗೆ ವಿಶೇಷ ಪ್ರಾಶಸ್ತ್ಯ ನೀಡುವ ಪ್ರಶ್ನೆ ಏಳದು. ಆಗ ಇಡೀ ಭಾರತದ ಶ್ರಮಿಕರು ಸ್ಥಳೀಯ ಶ್ರಮಿಕರೆನಿಸುತ್ತಾರೆ. ಅವರು ಉತ್ತಮ ಅವಕಾಶಗಳನ್ನು ಹುಡುಕುತ್ತ ಮುಕ್ತವಾಗಿ ಸಂಚರಿಸಬಹುದು.

3. ಭಾರತದಲ್ಲಿ ಪೂರ್ಣ ಪ್ರಮಾಣದ ವ್ಯಾಪಾರವಿರುವುದು.

4. ಈ ಹಂತದಲ್ಲಿ ಭಾರತವು ತನ್ನ ವಿದೇಶೀಯ ವ್ಯಾಪಾರದ ಸೀಮಾ ರೇಖೆಗಳನ್ನು ತೊಡೆದು, ಅಂತಾರಾಷ್ಟ್ರೀಯ ವ್ಯಾಪಾರವನ್ನು ವಿಸ್ತರಿಸಬಹುದು. ಅಗತ್ಯ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಗಳನ್ನು ಇನ್ನೂ ವಿದೇಶಿ ಸ್ಪರ್ಧೆಯಿಂದ ರಕ್ಷಿಸುವ ಅಗತ್ಯವಿದೆ. ಆದರೆ, ಅವು ದಕ್ಷವಾಗಿರಬೇಕಾದರೆ, ಆಂತರಿಕ ಸ್ಪರ್ಧೆ ಏರ್ಪಡುವುದು ಅಗತ್ಯ. ಈ ರೀತಿ, ಉದ್ದಿಮೆಗಳಲ್ಲಿಯ ಸ್ಪರ್ಧೆಯು ಯೋಜನಾ ಪ್ರಕ್ರಿಯೆಯ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೆಚ್ಚುತ್ತ ಹೋಗುವುದು. ಉದ್ದಿಮೆಗಳು ಬಂಡವಾಳವಾದಿ ಇರಲಿ ಇಲ್ಲವೆ ಸಹಕಾರಿವಾದಿಗಳಿರಲಿ ಕಾಲಾನುಕ್ರಮದಲ್ಲಿ ಅವು ದಕ್ಷವಾಗಬೇಕಾದರೆ ಸ್ಪರ್ಧೆ ಏರ್ಪಡಿಸುವುದೊಂದೇ ದಾರಿ. ಏಕಸ್ವಾಮ್ಯವು ಅದಕ್ಷತೆಯನ್ನು ಬೆಳೆಸುತ್ತದೆ ಮತ್ತು ಕಳಪೆ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಉತ್ಪಾದಿಸುತ್ತದೆ.

ಪ್ರಉತ ಕಾರ್ಯಕ್ರಮದ ತೃತೀಯ ಹಂತವು ಪೂರ್ತಿಯಾಗಲು ಹತ್ತುವರ್ಷ ಹಿಡಿಯುತ್ತದೆ. ಈ ರೀತಿ ಆರಂಭದಿಂದ 25 ವರ್ಷಗಳೊಳಗೆ, ಪ್ರಉತ ಭಾರತವನ್ನು ಬಡ ದೇಶದಿಂದ ವಿಶಾಲ ಅಭಿವೃದ್ಧಿ ದೇಶವಾಗಿ, ಅಮೇರಿಕ, ಜಪಾನ ಮತ್ತು ಜರ್ಮನಿಗಳೊಂದಿಗೆ ಸೆಣಸುವಂತೆ ಮಾಡುತ್ತದೆ. ಭಾರತಕ್ಕಿಂದು ಬೇಕಾಗಿರುವುದು, ಪ್ರಾಮಾಣಿಕತೆ, ಶಿಸ್ತು ಮತ್ತು ಸಹಕಾರಗಳ ಪ್ರಉತೀಯ ಸ್ಫೂರ್ತಿ ಮತ್ತು ಈ ದಿಶೆಯಲ್ಲಿ, ಭಾರತಕ್ಕಾಗಿ ಏನೇನು ಮಾಡಬೇಕೋ ಅದನ್ನೆಲ್ಲ ಇಡೀ ತೃತೀಯ ಜಗತ್ತಿಗಾಗಿಯೂ ಮಾಡಬಹುದಾಗಿದೆ.

ಆಧಾರ ಗ್ರಂಥಗಳು

1. ಪಿ. ಆರ್. ಸರಕಾರ – ಪ್ರಉತ ಇನ್ ಎ ನಟ್‌ಶೆಲ್ XIII, ಓರಿಯಂಟ ಪ್ರೆಸ್ 123:1, ಎಪಿಸಿ ರಸ್ತೆ,ಕಲಕತ್ತೆ – 6 1988.
2. ಪ್ರಉತ ಇನ್ ಎ ನಟ್‌ಶೆಲ್ VII, ಓರಿಯಂಟ ಪ್ರೆಸ್, ಕಲಕತ್ತೆ –1987.

●○●

ಅಧ್ಯಾಯ – 6

ಪ್ರಉತೀಯ ಯೋಜನೆಯ ಒಂದು ಮಾದರಿ

ವಿಕೇಂದ್ರೀಕೃತ ಆರ್ಥಿಕ ಯೋಜನೆಯ ನಿರೂಪಣೆಯು ಒಂದು ನವೀನ ವಿಚಾರ. ಈ ಮುನ್ನ ಅದನ್ನು ಕಾರ್ಯ ರೂಪಕ್ಕಿಳಿಸುವ ಪ್ರಯತ್ನ ನಡೆದಿಲ್ಲ. ಪ್ರಉತೀಯ ಯೋಜನೆಯು ಹೇಗೆ ಕಾರ್ಯ ಮಾಡುತ್ತದೆ? ಏನೂ ಇಲ್ಲದೆಡೆ ಅದೆಂತು ಪವಾಡಗಳನ್ನು ಸೃಷ್ಟಿಸಬಲ್ಲದು? ಎಂಬುದನ್ನು ತೋರಿಸಲು ಶ್ರೀ ಸರಕಾರರು ಹಾಗೂ ಅವರ ಶಿಷ್ಯರು ಆನಂದ ನಗರವೆಂಬ ಮಾದರಿ ನಗರವನ್ನು ಬಂಜರು ಪ್ರದೇಶದಲ್ಲಿ ನಿರ್ಮಿಸುವಲ್ಲಿ ಈಗ ತೊಡಗಿದ್ದಾರೆ. ಇದು ಬಂಗಾಲಿ ಸಮಾಜದ ಒಂದು ಭಾಗ. ಪಶ್ಚಿಮ ಬಂಗಾಲದ ಪುರುಲಿಯಾ ಜಿಲ್ಲೆಗೆ ಸೇರಿದ ಭಾರತದಲ್ಲಿಯೇ ಅತಿ ಹಿಂದುಳಿದ ಪ್ರದೇಶದಲ್ಲಿ ಇರುವ ಆನಂದ ನಗರದ ಸುತ್ತುಮುತ್ತಿನ ಪ್ರದೇಶದಲ್ಲಿ ಬುಡಕಟ್ಟು ಜನಾಂಗದ ಹಳ್ಳಿಗರು ವಾಸಿಸುತ್ತಿದ್ದಾರೆ. ಮತ್ತು ತೃತೀಯ ಜಗತ್ತಿನಲ್ಲಿ ಗ್ರಾಮೀಣ ಜನರಿಂದು ಎದುರಿಸುತ್ತಿರುವ ಬಹುತೇಕ ಸಮಸ್ಯೆಗಳನ್ನು ಅದು ಚಿತ್ರಿಸುತ್ತದೆ. ಅಂದರೆ, ಬೃಹತ್ ಪ್ರಮಾಣದ ನಿರಕ್ಷರತೆ, ಸಾಂಕ್ರಾಮಿಕ ರೋಗಗಳು, ಉಪವಾಸ ಬೀಳುವ ವರೆಗಿನ ಪೌಷ್ಟಿಕಾಂಶಗಳ ಅಭಾವ, ವಿದ್ಯುಚ್ಛಕ್ತಿಯ ಅಭಾವ, ಒಣ ಪ್ರದೇಶದಲ್ಲಿನ ಅನುತ್ಪಾದಕ ಸಾಗುವಳಿ ಮತ್ತು ಉದ್ದಿಮೆಗಳ ಪೂರ್ಣ ಅಭಾವ.

ಪ್ರಪಂಚದ ಅತ್ಯಂತ ನಿರ್ಲಕ್ಷಿತ ಪ್ರದೇಶವೊಂದನ್ನು ಸ್ಪಂದನಾತ್ಮಕ ಸಮುದಾಯದಲ್ಲಿ ವಿಕಾಸಗೊಳಿಸಿ ಶ್ರೀಸರಕಾರ ಅವರು ಸ್ಥಳೀಯ ಸ್ವಾವಲಂಬನೆಯ ಗುರಿಯುಳ್ಳ ಯೋಜನೆಯ ಮೇಲ್ಮೆಯನ್ನು ನಿದರ್ಶಿಸುವ ಲಸೆ ಇರಿಸಿಕೊಂಡಿದ್ದಾರೆ. ಅವರು ಮರುಭೂಮಿಯಲ್ಲೊಂದು ಸೇರಾಬು ಸೃಷ್ಟಿಸುತ್ತಿದ್ದಾರೆ. ಇದುವರೆಗೆ ಬರಡಾಗಿದ್ದ ಭೂಮಿಯಲ್ಲಿ ಮೊದಲು ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳುವುದು; ಸ್ಥಳೀಯವಾಗಿ ಕಚ್ಚಾ ಸರಕನ್ನು ಅಭಿವೃದ್ಧಿಪಡಿಸುವುದು. ಮತ್ತು ಅನಂತರ ಕೃಷಿಯಾಧಾರಿತ ಉದ್ದಿಮೆಗಳನ್ನು ನಿರ್ಮಿಸಿ ಸ್ಥಳೀಯ ಶ್ರಮಜೀವಿಗಳಿಗೆ ಉದ್ಯೋಗಾವಕಾಶ ಒದಗಿಸುವುದು. ಬದಲಾವಣೆಗೆ ಭಾರಿ ವಿರೋಧ ಒಡ್ಡುವ ಗುಡ್ಡಗಾಡು ಜನಾಂಗದ ಪ್ರದೇಶದಲ್ಲಿ ಇದೊಂದು ಉದಾತ್ತ ಪ್ರಯೋಗ. ಆನಂದ ನಗರವು ಅಮ್ರಾ ಬಂಗಾಲದ ಚೆಕ್ಕ ಬ್ಲಾಕಿನಲ್ಲಿ ಸಮತೋಲದ ಅರ್ಥವ್ಯವಸ್ಥೆಯನ್ನು ರೂಪಿಸುವ ಗುರಿ ಹೊಂದಿದ ಯೋಜನೆಯ ಸಮಗ್ರ ರೂಪದ ಕಾರ್ಯಾಚರಣೆಯ ಮಾದರಿ. ಈಗಾಗಲೇ ಕೆಲವು ಪೂರ್ಣಗೊಂಡಿರುವ ಈ ಕೆಳಗಿನ ಪ್ರಕಲ್ಪಗಳನ್ನು ಯೋಜನೆಯಲ್ಲಿ ಸೇರಿಸಲಾಗಿದೆ.

1. ಪ್ರಾಥಮಿಕ ಶಾಲೆ.
2. ಮಾಧ್ಯಮಿಕ ಶಾಲೆ.
3. ಪದವಿ ಮಹಾವಿದ್ಯಾಲಯ
4. ತಾಂತ್ರಿಕ ಸಂಸ್ಥೆ.
5. ಅನಾಥ ಹಾಗೂ ಅಂಗವಿಕಲ ಮಕ್ಕಳ ಆಲಯ.
6. ಬಡ ವಿದ್ಯಾರ್ಥಿಗಳ ಭೋಜನ ಶಾಲೆ.

7. ಆಸ್ಪತ್ರೆ
8. ಕುಷ್ಠರೋಗ ರುಗ್ಣಾಲಯ.
9. ಸಾಂಸ್ಕೃತಿಕ ಅಕಾಡಮಿ.
10. ಮಹಿಳಾ ಕಲ್ಯಾಣ ಕೇಂದ್ರ.
11. ವಯಸ್ಕ ಶಿಕ್ಷಣ ಕೇಂದ್ರ.
12. ಮುದ್ರಣಾಲಯ ಮತ್ತು ಪುಸ್ತಕಾಲಯ
13. ಹೂಲ, ಗದ್ದೆ, ತೋಟಗಳು.
14. ಆಣೆಕಟ್ಟು ಹಾಗೂ ನೀರಾವರಿ ಕಾಮಗಾರಿ
15. ಕೃಷಿ ಸಂಶೋಧನಾ ಕೇಂದ್ರಗಳು.
16. ಉದ್ದಿಮೆಗಳು ಮತ್ತು ಔದ್ಯಮಿಕ ಸಂಶೋಧನ ಕೇಂದ್ರ
17. ಸೌರಶಕ್ತಿ ಸ್ಥಾವರಗಳು.
18. ಜೈವಾನಿಲ ಸ್ಥಾವರಗಳು.
19. ಅರಣ್ಯೀಕರಣ ಪ್ರಕಲ್ಪಗಳು.
20. ಪ್ರಾಣಿ ಸಂಗ್ರಹಾಲಯ ಹಾಗೂ ಸಸ್ಯ ವನಗಳು

ಮಾನವ ಸಂಪನ್ಮೂಲ :

ಯಾವುದೊಂದು ಪ್ರದೇಶದಲ್ಲಿ ನಿರುದ್ಯೋಗವನ್ನು ನಿವಾರಿಸಬೇಕಾದರೆ, ಮೊತ್ತ ಮೊದಲು ಜನರಿಗೆ ಶಿಕ್ಷಣ ನೀಡಬೇಕು. ಮತ್ತು ಅವರಿಗೆ ತಕ್ಕ ತರಬೇತಿ ನೀಡಬೇಕು. ಈ ಕಾರಣಕ್ಕೋಸುಗ, ಆನಂದ ನಗರ ಪ್ರಕಲ್ಪವು ಒಂದು ಶೈಕ್ಷಣಿಕ ಸಂಕೀರ್ಣವನ್ನು ಸ್ಥಾಪಿಸಿದೆ. ಇದು ಕೇವಲ ಗುಡ್ಡಗಾಡು ಜನರಿಗಷ್ಟೇ ಅಲ್ಲದೆ ನೆರೆಹೊರೆಯ ಪಟ್ಟಣಗಳಿಂದಲೂ ಬರುವ ವಿದ್ಯಾರ್ಥಿಗಳಿಗಾಗಿ ಸಹ ಅತ್ಯುಚ್ಚ ಮಟ್ಟದ ಶಿಕ್ಷಣವನ್ನು ಒದಗಿಸುವ ಗುರಿ ಹೊಂದಿದೆ.

ಆನಂದನಗರದ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಹೆಚ್ಚಾಗಿ ಅಶಿಕ್ಷಿತ ಹಳ್ಳಿಗಾಡಿನ ಹಾಗೂ ಗಿರಿಜನ ಕುಟುಂಬಗಳ ಮಕ್ಕಳೇ ಆಗಿದ್ದಾರೆ. ಆದರೂ ಸಹ ಈ ಸಂಸ್ಥೆಯು ಎಂಥ ಚತುರಮತಿಗಳನ್ನು ಹೊರತರುತ್ತಿದೆಯೆಂದರೆ, ಅವರು ಬೇರೆ ಮಾಧ್ಯಮಿಕ ಶಾಲೆಗೆ ಸೇರಿದಾಗ ಮೂರು ವರ್ಗಗಳ ಬಡತಿ ಪಡೆಯುತ್ತಾರೆಂಬ ವರದಿಯಿದೆ. ಆನಂದನಗರದ ಮಾಧ್ಯಮಿಕ ಶಾಲೆಯಲ್ಲಿ ಕೇವಲ ಅಕಾಡಮೀಯ ವಿಷಯಗಳಲ್ಲಿ ಮಾತ್ರ ತರಬೇತಿ ನೀಡದೆ, ಪಠ್ಯೇತರ ಚಟುವಟಿಕೆಗಳಾದ ಕಲೆ ಮತ್ತು ಆಟಗಳಲ್ಲಿ ಸಹ ತರಬೇತಿ ನೀಡಲಾಗುವುದು. ಅದರ ವಿದ್ಯಾರ್ಥಿಗಳು ಅಂತರಶಾಲೆ ಆಟಪಾಟಗಳಲ್ಲಿ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಲೆಕ್ಕವಿಲ್ಲದಷ್ಟು ಬಹುಮಾನಗಳನ್ನು ಗಳಿಸಿದ್ದಾರೆ. ಪಶ್ಚಿಮ ಬಂಗಾಲದಲ್ಲಿರುವ ಬರ್ದ್ವಾನ ವಿಶ್ವವಿದ್ಯಾಲಯಕ್ಕೆ ಸೇರಿದ ಆನಂದ ನಗರದ ಪದವಿ ಮಹಾವಿದ್ಯಾಲಯವು ಯೋಗ್ಯ, ಜಾಣ ವಿದ್ಯಾರ್ಥಿಗಳಿಗೆ ಶಿಷ್ಯ ವೇತನಗಳನ್ನೂ, ಉಚಿತ ಚಿಕಿತ್ಸೆಯನ್ನೂ ಮತ್ತು ಹಳ್ಳಿಯ ಯುವಕರಿಗೆ ಸೋವಿ ವಸತಿ ಸೌಕರ್ಯವನ್ನೂ ಒದಗಿಸುತ್ತದೆ. ಆನಂದ ನಗರದ ತಾಂತ್ರಿಕ ಸಂಸ್ಥೆಯು ಸಿವ್ಹಿಲ್, ಇಲೆಕ್ಟ್ರಿಕಲ್ ಮೆಕ್ಯಾನಿಕಲ್ ಹಾಗೂ ಕೆಮಿಕಲ್ ಇಂಜಿನೀಯರಿಂಗ ಕೋರ್ಸುಗಳಲ್ಲಿ ಪದವಿಯನ್ನು ನೀಡುತ್ತಿದೆ. ಇದಲ್ಲದ ಇಂಜಿನೀಯರಿಂಗ್ ವಿದ್ಯಾರ್ಥಿಗಳಿಗೆ ಸನಿಹದ ಜಮಶೇಡಪುರ ಮತ್ತು ಬೋಕಾರೋಗಳಂಥ ಔದ್ಯಮಿಕ ನಗರಗಳಲ್ಲಿ ತರಬೇತಿ ವೇತನವನ್ನು ನೀಡಲಾಗುವುದು. ಇದರಿಂದ ಅವರಿಗೆ

ಪ್ರಾಣಪ್ರಾಯವಾದ ವಾಸ್ತವಿಕ ತರಬೇತಿ ದೊರೆಯುವುದಲ್ಲದೆ, ಬಡ ವಿದ್ಯಾರ್ಥಿಗಳು ಕಲಿಯುವಾಗಲೇ ಗಳಿಸಲೂ ಅನುಕೂಲವಾಗುತ್ತದೆ.

ಉಮಾ ನಿವಾಸವೆಂದು ಹೆಸರಿಸಿದ ಆನಂದ ನಗರದ ಮಹಿಳಾ ಕಲ್ಯಾಣಾಭಿವೃದ್ಧಿ ಕೇಂದ್ರವು ಬಾಲವಾಡಿ ಮತ್ತು ಪ್ರಾಥಮಿಕ ಶಾಲೆ, ಮಕ್ಕಳ ಮನೆ ಮತ್ತು ವಸತಿ ಗೃಹ ಹಾಗೂ ಆ ಪ್ರದೇಶದ ಹಿಂದುಳಿದ ಹೆಣ್ಣುಮಕ್ಕಳನ್ನು ಕೇವಲ ಬೌದ್ಧಿಕವಾಗಿ ಅಷ್ಟೇ ಅಲ್ಲದೆ, ಆರ್ಥಿಕವಾಗಿ ಸಹ ಅಭಿವೃದ್ಧಿ ಪಡಿಸಲೋಸುಗ ಒಂದು ಗುಡಿ ಕೈಗಾರಿಕೆಯ ಪ್ರಕಲ್ಪವನ್ನು ಒಳಗೊಂಡಿದೆ. ಸಂಪ್ರದಾಯಬದ್ಧ ಸಮಾಜಗಳನ್ನು ಬದಲಿಸಲು ಅತ್ಯಂತ ಮಹತ್ವಪೂರ್ಣ ಅಂಶವೆಂದು, ಗ್ರಾಮಾಂತರ ಮಹಿಳೆಯರ ಮನೋ ವೃತ್ತಿಯ ರೂಪಾಂತರವೆಂದು ಇದನ್ನು ಗುರುತಿಸಲಾಗಿದೆ. ಉಮಾ ನಿವಾಸವು ಮಕ್ಕಳಿಗೋಸುಗ ಮತ್ತು ವಯಸ್ಕ ಮಹಿಳೆಯರಿಗೋಸುಗ ಆರೋಗ್ಯ ಮತ್ತು ಸ್ವಚ್ಛತೆ, ಪೌಷ್ಟಿಕ ಆಹಾರ, ಸಾಕ್ಷರತೆ, ಅಕಾಡಮೀಯ ವಿಷಯಗಳು ಮತ್ತು ಉಪಜೀವನ ಪ್ರಕಲ್ಪಗಳನ್ನು ಹೊಂದಿದ್ದು, ಮುಂಬರುವ ವರ್ಷಗಳಲ್ಲಿ ಹೆಚ್ಚುತ್ತಿರುವ ಮಹತ್ವವುಳ್ಳ ಪರಿವರ್ತನೆಯ ಹರಿಕಾರನಂತಿದೆ.

ಕೃಷಿ :

ತೃತೀಯ ಜಗತ್ತಿನ ಬಹುತೇಕ ರಾಷ್ಟ್ರಗಳಂತೆ, ಭಾರತವು ಪ್ರಥಮತಃ ಕೃಷಿ ಪ್ರಧಾನ ದೇಶ. ಅದರ ಶೇ. 80 ರಷ್ಟು ಜನರು ಗ್ರಾಮ ನಿವಾಸಿಗಳು. ಭಾರತದ ಹೆಚ್ಚುತ್ತಿರುವ ಆಹಾರ ಸಮಸ್ಯೆಗೆ ಹಸಿರು ಕ್ರಾಂತಿಯು ಒಂದು ಪರಿಹಾರ ಎಂದು ಪ್ರಶಂಸಿಸಲಾಯಿತು. ಆದರೆ ಅದರ ಬಂಡವಾಳ ಬಾಹುಳ್ಯತೆ, ದೊಡ್ಡ ಪ್ರಮಾಣದ ಹಾಗೂ ಅಸಮತೋಲ ನೈಸರ್ಗಿಕ ಸಾಗುವಳಿ ಪದ್ಧತಿಗಳು ಬೆಕ್ಕ ಬೆಕ್ಕ ರೈತರನ್ನು ಕಡೆಗಣಿಸಿದವು. ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬಡವ ಬಲ್ಲಿದರ ನಡುವಿನ ಅಂತರವನ್ನು ಹೆಚ್ಚಿಸಿದವು. ದೇಶಾದ್ಯಂತ ಪುರಾತನ ಮತ್ತು ಆರ್ಥಿಕವಲ್ಲದ ಸಾಗುವಳಿ ಪದ್ಧತಿಯನ್ನು ಬಳಸಿ ವರ್ಷವೊಂದಕ್ಕೆ ಒಂದೇ ಬೆಳೆ ಬೆಳೆದರು. ಇನ್ನುಳಿದ ಎಂಟು ತಿಂಗಳು ಹೊಲ–ಗದ್ದೆಗಳು ಉಪಯೋಗವಾಗದೆ ಉಳಿದವು. ನೈಸರ್ಗಿಕ ಸಂಪನ್ಮೂಲದ ಎಂಥ ದೊಡ್ಡ ದುರ್ವಿನಿಯೋಗ?

ಆನಂದ ನಗರದ ಕೃಷಿ ಅಭಿವೃದ್ಧಿಯ ಯೋಜನೆಯು ಹನಿ ನೀರಾವರಿ, ಗಿಡ ನೆಡುವ ಮೂಲಕ ಕೊರೆತದ ಪ್ರತಿಬಂಧ, ಮತ್ತು ಮಣ್ಣು ಸಂರಕ್ಷಣೆ, ಜೈವಾನಿಲ ಸ್ಥಾವರಗಳಿಂದ ಸೇಂದ್ರೀಯ ಗೊಬ್ಬರದ ಬಳಕೆ, ಮತ್ತು ಅಂತರ್ಬೆಳೆ ಹಾಗೂ ಕಾಲಗೈಗಳ ಮೂಲಕ ವಿಶೇಷವಾಗಿ ಕ್ರಮಬದ್ಧ ಬೆಳೆಯ ಯೋಜನೆಗಳಂಥ ಪ್ರಗತಿಪರ ನೀರು ನಿರ್ವಹಣೆ – ತಂತ್ರಜ್ಞಾನ ಮೂಲಕ ಭೂಮಿಯ ಗರಿಷ್ಠ ಉತ್ಪಾದಕತೆಯನ್ನು ಒದಗಿಸುತ್ತದೆ. ಉದಾಹರಣಾರ್ಥ, ಇಲ್ಲಿ ಕಾರ್ಯಕಾರಿಗೊಳಿಸಿದ ಕಾಲುಗೈ ಪದ್ಧತಿ ಹೀಗೆ : ವಸಂತ ಋತುವಿನಲ್ಲಿ ಗೋವಿನಜೋಳ ದೊಂದಿಗೆ ನೆಲಗಡಲೆ, ಮಳೆಗಾಲದಲ್ಲಿ ರಾಗಿ, ನವಣೆಗಳೊಂದಿಗೆ ಸೋಯಾ ಅವರೆ, ಶರತ್ಕಾಲದಲ್ಲಿ ಮಸಾಲೆ ಪದಾರ್ಥಗಳೊಂದಿಗೆ ಬಟಾಟೆ ಮತ್ತು ಚಳಿಗಾಲದಲ್ಲಿ ಗೆಣಸಿನೊಂದಿಗೆ ಹತ್ತಿ, ಭತ್ತದ ಗದ್ದೆಗಳಲ್ಲಿ ತೋಟಗಾರಿಕೆ ಮಾಡಿ, ಹೊಲಗಳ ಬದುವಿನ ಗುಂಟ ಹಣ್ಣಿನ

ಗಿಡ ನೆಟ್ಟು ಬೇಲಿ ಮಾಡಿ ಶುಂಠಿ ಮತ್ತು ಅರಿಷಿಣಗಳಂಥ ಮಸಾಲೆಗಳನ್ನು ಹಣ್ಣಿನ ಗಿಡಗಳ ನೆರಳಿನಲ್ಲಿ ಬೆಳೆಯುತ್ತ ಭೂಮಿಯ ಪೂರ್ಣ ಬಳಕೆ ಮಾಡುವುದರಿಂದ ಭೂಖಂಡದಲ್ಲಿಯೇ ಅತ್ಯಂತ ಅನುತ್ಪಾದಕ ಕ್ಷೇತ್ರವೊಂದರಲ್ಲಿ ಶೀಘ್ರ ಹಾಗೂ ಬಹುಕಾಲ ಉಳಿಯಬಲ್ಲ ಉತ್ಪಾದಕತೆಯಲ್ಲಿಯ ಹೆಚ್ಚಳವನ್ನು ಸಾಧಿಸಬಹುದಾಗಿದೆ.

ಸುಮಾರು 20,00,000 ಜಾತಿಗಳ ಸಸ್ಯವಿರುವ, ವಿಶಾಲವಾದ ಬಳಕೆ ಮಾಡದೆ ಉಳಿದ, ಸಸ್ಯ – ಸಂಪನ್ಮೂಲಗಳ ಸಂಪತ್ತನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಲಿಕ್ಕೋಸುಗ ಆನಂದ ನಗರದಲ್ಲಿ ಕೃಷಿ ಸಂಶೋಧನಾ ಕೇಂದ್ರಗಳ ಸಮಗ್ರ ಜಾಲವನ್ನೇ ಸ್ಥಾಪಿಸಲಾಗಿದೆ. ಇವುಗಳಲ್ಲಿ ಹಲವನ್ನು ಒಣ ಇಲ್ಲವೆ ಕಲ್ಲು ಭೂಮಿಗಳಿಗೆ ಅನ್ವಯಿಸಬಹುದಾಗಿದೆ. ಸಸ್ಯ ಜೀವಾಣು ರಸ ಮತ್ತು ಬೀಜಗಳನ್ನು ವಿಶ್ವದ ವಿವಿಧ ಭಾಗಗಳಿಂದ ಸಂಗ್ರಹಿಸಲಾಗುತ್ತಿದೆ. ಏಕೆಂದರೆ, ಸಸ್ಯಗಳ ಹೊಸ ತಳಿಗಳನ್ನು ಹುಟ್ಟಿಸಲು ಮಿಶ್ರ – ತಳಿಯ ಸಂವರ್ಧನೆ ಮೇಲೆ ಸಂಶೋಧನೆ ಮಾಡಲಾಗುತ್ತಿದೆ. ಅದರಲ್ಲೂ ವಿಶೇಷವಾಗಿ, ಆಹಾರಕ್ಕಾಗಿ ಕಾಳು ಇಲ್ಲವೆ ಹಣ್ಣುಗಳನ್ನೂ, ಮೇವಿಗಾಗಿ ಸೊಪ್ಪಿಯನ್ನೂ, ಬಟ್ಟೆಗಾಗಿ ನಾರನ್ನೂ ಮತ್ತು ಕಟ್ಟಡಕ್ಕಾಗಿ ಕಟ್ಟಿಗೆಯನ್ನೂ ಒದಗಿಸುವ (Polyvalent) ಬಹೂಪಯೋಗಿ ಸಸ್ಯಗಳ ಮತ್ತು ಗಿಡಗಳ ಹೊಸ ತಳಿ ಶೋಧಿಸುತ್ತಿದ್ದಾರೆ. ಬೇಸಗೆ ಮತ್ತು ಛಳಿಗಾಲಗಳ ಕಾಯಿಪಲ್ಯ, ಗಡ್ಡೆಗಳು, ಮಸಾಲೆ, ನಾರುಳ್ಳ ಬಳ್ಳಿಗಳು, ಹಣ್ಣುಗಳು, ಧಾನ್ಯಗಳು, ಬೇಳೆಕಾಳುಗಳು, ತೈಲ, ಕಬ್ಬಿನ ಪೈರು, ರೇಶ್ಮೆ, ಹತ್ತಿ, ಔಷಧಿ– ವನಸ್ಪತಿಗಳು ಹಾಗೂ ಹೂ ಬಳ್ಳಿಗಳು, ಮುಂತಾದವುಗಳ ಸಂಶೋಧನಾ ಕೇಂದ್ರಗಳಲ್ಲಿ ಕೃಷಿ ಹುಟ್ಟುವಳಿಯಾಧಾರಿತ ಉದ್ದಿಮೆಗಳನ್ನು ಅಭಿವೃದ್ಧಿ ಪಡಿಸುವ ತಂತ್ರ ಕುರಿತು ಸಂಶೋಧನೆ ನಡೆಸಲಾಗುವುದು. ಉದಾರಣೆಯಿಂದರೆ, ಗೆಣಸು ಮತ್ತು ಹೂವುಗಳಿಂದ ಕಾಕಂಬಿಯನ್ನು ಪಡೆಯಬಹುದು. ಕಲ್ಲಂಗಡಿ ಮತ್ತು ಮೂಲಂಗಿ ಬೀಜಗಳಿಂದ ತೈಲವನ್ನೂ ಬೆಂಡಿಯಿಂದ ಬಟ್ಟೆ ನೂಲನ್ನೂ ಪಡೆಯಬಹುದು.

ಹೀಗೆ, ಸರಳವಾದ, ಹೆಚ್ಚು ವೆಚ್ಚವಿಲ್ಲದ ಮತ್ತು ರೈತರು ಸುಲಭವಾಗಿ ಕರಗತ ಮಾಡಿಕೊಳ್ಳಬಹುದಾದ ತಕ್ಕ ತಂತ್ರಜ್ಞಾನ ಬಳಸುವ ತೀವ್ರ ವೈಜ್ಞಾನಿಕ ಸಂಶೋಧನೆಯನ್ನು ಆಧರಿಸಿದ ಕೃಷಿಯ ಅಭಿವೃದ್ಧಿಯು ಆಹಾರ ಸ್ವಾವಲಂಬನೆ ಸಾಧಿಸುವಲ್ಲಿ ಹೊಸ ಆಸೆ ಮೂಡಿಸುತ್ತದೆ. ನೀರು, ಮಣ್ಣು ಮತ್ತು ತರುಲತೆಗಳ ಸಾಮರ್ಥ್ಯವನ್ನು ಬಳಸಿ ಈ ಸೇಂದ್ರೀಯ ಕೃಷಿಯು ಬಂಜರು ಭೂಮಿಯನ್ನು ಫಲವತ್ತಾದ ಹೊಲಗದ್ದೆಗಳಲ್ಲಿ ಪರಿವರ್ತಿಸುತ್ತದೆ. ಮತ್ತು ಏರುತ್ತಿರುವ ಜನಸಂಖ್ಯೆಯೊಂದಿಗೆ ಹೆಜ್ಜೆ ಹಾಕಬಲ್ಲಷ್ಟು ಉತ್ಪಾಕತೆಯಲ್ಲಿ ಅಧಿಕ ಹೆಚ್ಚಳವನ್ನು ತರಬಲ್ಲದು.

ಕೃಷಿಪೂರಕ ಮತ್ತು ಕೃಷಿ ಹುಟ್ಟುವಳಿಯಾಧಾರಿತ ಉದ್ದಿಮೆಗಳು :

ಹಲಕೆಲವು ಅಪವಾದಗಳನ್ನು ಬಿಟ್ಟರೆ, ತೃತೀಯ ಜಗತ್ತಿನಲ್ಲಿ ತಂತ್ರಜ್ಞಾನದ ಮತ್ತು ಔದ್ಯೋಗಿಕ ಅಭಿವೃದ್ಧಿಯ ಚಿಕ್ಕ ಆಧುನಿಕ ರಂಗಕ್ಕೆ ಮಾತ್ರ ಅನುಕೂಲ ಒದಗಿಸಿದೆ. ಅದೂ ಕೂಡ ಹಸಿರು ಕ್ರಾಂತಿಯ ರೀತಿಯಲ್ಲಿಯೇ ಗ್ರಾಮಾಂತರದ ಜನತೆಯನ್ನು ಕಡೆಗಣಿಸಿದೆ. ಬಡತನ

ಮತ್ತು ಸಾಮಾಜಿಕ ಒತ್ತಡವನ್ನು ತಡೆಯಲು ಈಗ ತುರ್ತು ಬೇಕಾಗಿರುವುದೆಂದರೆ, ಹಳ್ಳಿಗರಿಗೆ ವ್ಯವಸ್ಥಿತ ರೀತಿಯಲ್ಲಿ ತಂತ್ರಜ್ಞಾನದ ಹಸ್ತಾಂತರ. ಹೀಗಾದರೆ, ಆಧುನಿಕ ತಂತ್ರಜ್ಞಾನದ ಫಲಗಳು ಬಡವನ ಬಾಗಿಲು ತಲುಪಬಹುದು.

ಆನಂದ ನಗರವು ತ್ವರಿತ ಗ್ರಾಮಾಂತರ ಔದ್ಯೋಗಿಕ ಬೆಳವಣಿಗೆಯ ಒಂದು ಚೈತನ್ಯಾತ್ಮಕ ನಿದರ್ಶನವಾಗಿದೆ. ಹಳ್ಳಿಗರ ಆದಾಯ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಕೇವಲ ಚಿಕ್ಕ ಪ್ರಮಾಣದ ಗುಡಿ ಕೈಗಾರಿಕೆಗಳನ್ನಷ್ಟೇ ಅಲ್ಲದೆ ಬೃಹತ್ ಪ್ರಮಾಣದ ಕೃಷಿಪೂರಕ ಉದ್ದಿಮೆಗಳನ್ನೂ ಸಹ ಆರಂಭಿಸಲಾಗಿದೆ. ಅಭಿವೃದ್ಧಿಯ ಗುರಿಯೆಂದರೆ ಆನಂದ ನಗರದಂಥ ಪ್ರತಿ ಗ್ರಾಮೀಣ ಜನಸಮುದಾಯವನ್ನು ಸ್ವಾವಲಂಬಿ ಘಟಕವನ್ನಾಗಿಸಬೇಕು. ಇದಕ್ಕೋಸುಗ, ತನ್ನ ಸ್ವಂತ ಆಹಾರವನ್ನಷ್ಟೇ ಅಲ್ಲದೆ ಸ್ವಂತ ಬಟ್ಟೆಗಳನ್ನು, ಔಷಧಿಗಳನ್ನು ಸ್ವಚ್ಛತೆಯ ಸರಕುಗಳನ್ನು, ಪಾತ್ರೆಗಳನ್ನು, ಗೊಬ್ಬರ, ಕಾಗದ, ಕಟ್ಟಡ, ಸಾಮಗ್ರಿ ಇತ್ಯಾದಿಗಳನ್ನು ಉತ್ಪಾದಿಸಬೇಕು. ಸ್ಥಳೀಯ ಸಂಪನ್ಮೂಲಗಳನ್ನೂ ಮತ್ತು ಕೃಷಿಯನ್ನೂ ಪೂರ್ಣವಾಗಿ ವಿನಿಯೋಗಿಸಿ ಇದನ್ನು ಸಾಧಿಸಬೇಕು.

ಹೀಗೆ ಆನಂದ ನಗರದ ಸಂಶೋಧನ ಕೇಂದ್ರಗಳು ಹೊಸ ಹೊಸ ಬದಲಾವಣೆಗಳನ್ನು ತರುತ್ತಿವೆ. ಉದಾ : ಬಾಳೆ ನಾರಿನಿಂದ ಬಟ್ಟೆ, ಅಕ್ಕಿ ತೌಡಿನಿಂದ ಸಿಮೆಂಟು, ಇತ್ಯಾದಿ. ಅವರು ಸಾಂಪ್ರದಾಯಿಕ ದೇಶೀಯ ತಾಂತ್ರಿಕತೆಗಳನ್ನು ಪುನಶ್ಚೇತನಗೊಳಿಸುವುದಷ್ಟೇ ಅಲ್ಲದೆ ಇನ್ನೂ ಹೆಚ್ಚು ಸೂಕ್ಷ್ಮ ತಾಂತ್ರಿಕತೆಗಳಾದ ಇಲೆಕ್ಟ್ರಾನಿಕ್ಸ್ ಮತ್ತು ಸೌರ ಹಾಗೂ ಪರಮಾಣವಿಕ ಶಕ್ತಿಗಳ ಕುರಿತು ಸಂಶೋಧನೆ ಮಾಡುತ್ತಿದ್ದಾರೆ.

ತಾಂತ್ರಿಕ ಸಂಸ್ಥೆಯು ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗದಿಂದ ಬರುವ ಜಾಣ ವಿದ್ಯಾರ್ಥಿಗಳಿಗೆ ತಾಂತ್ರಿಕ ತರಬೇತಿಯನ್ನು ನೀಡುತ್ತದೆ. ಹಳ್ಳಿಯ ಗಿರಿಜನ ಯುವಕರಿಗೆ ಕಾರ್ಯ ಕೌಶಲ್ಯ ಒದಗಿಸುತ್ತದೆ. ಸುತ್ತಮುತ್ತಲಿನ ಹಳ್ಳಿಗಳಿಗೆ ತಾಂತ್ರಿಕ ಜ್ಞಾನದ ಹಸ್ತಾಂತರ ಕ್ಕೋಸುಗ ಕಾರ್ಯಕ್ರಮಗಳನ್ನು ಸಂಘಟಿಸುತ್ತದೆ. ಆನಂದ ಮಾರ್ಗ ಅಭಿವೃದ್ಧಿ ಯೋಜನೆಯು ಈ ಕೆಳಗಿನ ಸರಕುಗಳ ಉತ್ಪಾದನೆಗಾಗಿ ಆರವತ್ತಕ್ಕಿಂತ ಅಧಿಕ ಕಾರ್ಖಾನೆಗಳ ಸ್ಥಾಪನೆಯನ್ನು ಒಳಗೊಳ್ಳುತ್ತದೆ:

1. ಡೇರಿ ಉತ್ಪಾದನೆಗಳು (ಹಾಲು, ಗಿಣ್ಣ, ಬೆಣ್ಣೆ, ಮೊಸರು, ಸಿಹಿ ತಿಂಡಿಗಳು ಇತ್ಯಾದಿ)
2. ವನಸ್ಪತಿ ಹಾಗೂ ಆಯುರ್ವೇದಿಯ ಔಷಧಿಗಳು.
3. ಜೇನು ತುಪ್ಪ ಮತ್ತು ಮೇಣದ ಉತ್ಪಾದನೆಗಳು.
4. ಜಾಮ್, ಜೆಲ್ಲಿ, ಸಾಸ್, ಸ್ಕ್ವಾಷ್, ಉಪ್ಪಿನಕಾಯಿ.
5. ಶುದ್ಧೀಕೃತ ಸಕ್ಕರಿ ಮತ್ತು ಗ್ಲೂಕೋಜ.
6. ಶುದ್ಧೀಕೃತ ಖಾದ್ಯ ಮತ್ತು ಅಖಾದ್ಯ ತೈಲಗಳು.
7. ಪ್ಲಾಸ್ಟಿಕ್ ಡಬ್ಬಿ ಮತ್ತಿತರ ಉತ್ಪಾದನೆಗಳು.

8. ಕಾಗದ ಮತ್ತು ಪ್ಯಾಕಿಂಗ ಪೆಟ್ಟಿಗೆಗಳು.
9. ಮಸಿ ಮತ್ತು ಪೆನ್ನುಗಳು.
10. ಯಂತ್ರಗಳು ಮತ್ತು ಉಪಕರಣಗಳು.
11. ಬೋಲ್ಟು ನಟ್ ಹಾಗೂ ರಿಬ್ಬೆಟ್.
12. ಉಣ್ಣೆಯ ಸರಕು.
13. ಭತ್ತದ ತೌಡಿನಿಂದ ಸಿಮಂಟ್.
14. ಸುಣ್ಣದ ಕಲ್ಲು.
15. ಸಾಬೂನು, ಶಾಂಪೂ, ಹಲ್ಲುಜ್ಜುವ ಪೇಸ್ಟ್, ಡಿಟರ್ಜಂಟಗಳು.
16. ರೂಪಾಂತರಿತ ದವಸಧಾನ್ಯ ಹಾಗೂ ಬೇಳೆ ಕಾಳುಗಳು.
17. ಹಗ್ಗದ ಉತ್ಪಾದನೆಗಳು.
18. ನೈಸರ್ಗಿಕ ಶೃಂಗಾರ ಸಾಧನಗಳು.
19. ಗ್ಲಾಸ್ ಸಾಮಾನು ಮತ್ತು ಅಡುಗೆ – ಪಾತ್ರೆಗಳು.
20. ರೇಶ್ಮೆ ಮತ್ತು ಅರಳೆ ನೂಲು.
21. ಬ್ಯಾಂಡೇಜ್ ಹಾಗೂ ಪ್ರಥಮ ಚಿಕಿತ್ಸೆ ವಸ್ತುಗಳು.
22. ಆಸ್ಪತ್ರೆ ಮತ್ತು ವೈದ್ಯೋಪಕರಣಗಳು.
23. ಬಿಸ್ಕಿಟ, ಕ್ಯಾಂಡಿ, ಔಷಧಿಯುಕ್ತ ಚಾಕಲೇಟ.
24. ನೇಯ್ದ ಬಟ್ಟೆ
25. ಸಿದ್ಧ ಉಡುಪು.
26. ಗೊಂಬೆಗಳು ಮತ್ತು ಆಟದ ಸಾಮಾನು.
27. ಬೇಯಿಸಿದ ವಸ್ತುಗಳು.
28. ಭಾಷ್ಪೀಕರಿಸಿದ ನೀರು ಮತ್ತು ಬರ್ಫ್.
29. ಕಲ್ಲಿದ್ದಲು ಉತ್ಪಾದನೆಗಳು.
30. ವಿವಿಧ ಹೂಗಳಿಂದ ಸುಗಂಧ ದ್ರವ್ಯ.
31. ಒಣಗಿಸಿದ ಹಣ್ಣು ಮತ್ತು ಹಣ್ಣಿನ ರಸಗಳು.
32. ಕರ ಕುಶಲ ವಸ್ತುಗಳು.
33. ಪೀಠೋಪಕರಣಗಳು.
34. ಜಲಾಂಶವರ್ಜಿತ ಕಾಯಿಪಲ್ಲೆ.
35. ಕಬ್ಬಿಣದ ಉತ್ಪಾದನೆಗಳು.

36. ಸಕ್ಕುವಿನ ಪೆಟ್ಟಿಗೆಗಳು.
37. ಅಲ್ಯುಮಿನಿಯಂ ಸರಕುಗಳು.
38. ಸ್ಟೇನಲೆಸ್ ಸ್ಟೀಲ್ ವಸ್ತುಗಳು.
39. ಬೋರಿಕ್ ಪೌಡರ ಮತ್ತು ನಫ್ತಲೀನ್.
40. ಗಾದಿಗಳು ಮತ್ತು ಮಚ್ಚರದಾನಿಗಳು.
41. ಗೊಬ್ಬರ.

ಪರ್ಯಾಯ ಶಕ್ತಿ : ಜೈವಾನಿಲ ಮತ್ತು ಸೌರಶಕ್ತಿ :

ಬಡತನ, ರೋಗ, ಅರಣ್ಯನಾಶ, ಮಣ್ಣಿನ ಕೊರತ, ಮತ್ತು ಅಭಿವೃದ್ಧಶೀಲ ದೇಶಗಳಲ್ಲಿ ಅತಿಶಯ ಮಹಾಪೂರ ಇತ್ಯಾದಿ ಕೇಡುಗಳು ಶಕ್ತಿ ಉತ್ಪಾದನೆಯ ಸಮಸ್ಯೆಗಳಿಗೆ ನೇರವಾಗಿ ಸಂಬಂಧಿಸಿವೆ. ತೈಲ ಮತ್ತು ಕಲ್ಲಿದ್ದಲುಗಳಂಥ ಪಳೆಯುಳಿಕೆಗಳ ಉರವಲು ಸೀಮಿತ ವಾಗಿದೆಯಷ್ಟೇ ಅಲ್ಲ ಆದರೆ ಅಭಿವೃದ್ಧಿಶೀಲ ದೇಶಗಳಿಗೆ ಅವು ಕೊಳ್ಳಲಾರದಷ್ಟು ದುಬಾರಿಯಾಗಿವೆಯೆಂಬುದನ್ನು ಈಗ ವಿಶ್ವಾದ್ಯಂತ ಎಲ್ಲರೂ ಒಪ್ಪುತ್ತಾರೆ. ಉರುವಲಿನ ಅಭಾವದಿಂದ ಅನೇಕ ಹಳ್ಳಿಗರು ಉರವಲು ಕಟ್ಟಿಗೆಯ ಮೇಲೆ ಕೈಯೂರುತ್ತಾರೆ. ಇದರಿಂದ ದೊಡ್ಡ ಪ್ರಮಾಣದ ಅರಣ್ಯನಾಶ ಪರಿಣಮಿಸುತ್ತದೆ. ಹಾಗೂ ಮಹಾಪೂರ ಮತ್ತು ಮಣ್ಣಿನ ಕೊರತೆಗಳೂ ಉಂಟಾಗುತ್ತವೆ. ಇನ್ನುಳಿದ ಲಕ್ಷಾಂತರ ಜನರು ಉರುವಲಿಗಾಗಿ ದನದ ಶೆಗಣಿಯ ಕುಳ್ಳನ್ನು ಬಳಸುತ್ತಾರೆ. ಇದರಿಂದ ಕೃಷಿಗೆ ಬೇಕಾದ ಬಹುಮೂಲ್ಯದ ಸೇಂದ್ರಿಯ ಗೊಬ್ಬರದಿಂದ ವಂಚಿತರಾಗುವುದಲ್ಲದೆ ಅದು ತುಂಬಾ ಅಸಮರ್ಥ, ತೊಂದರೆದಾಯಕ ಹಾಗೂ ಅನಾರೋಗ್ಯಕರ ಉರುವಲಾಗಿದೆ. ತೃತೀಯ ಜಗತ್ತಿನಲ್ಲಿಯ ಶಕ್ತಿ ದುರಂತವನ್ನು ತಪ್ಪಿಸಲು ಕ್ಷೀಣಿಸುತ್ತಿರುವ ಪಳೆಯುಳಿಕೆ ಉರುವಲುಗಳನ್ನು ಜೈವಾನಿಲ ಹಾಗೂ ಸೌರ ಶಕ್ತಿಗಳಂಥ ನವೀಕರಿಸಬಲ್ಲ ಶಕ್ತಿ ಮೂಲಗಳಿಂದ ಬದಲಿಸಬೇಕು.

ಆನಂದ ನಗರವು ಜೈವಾನಿಲ ತಾಂತ್ರಿಕತೆಯಲ್ಲಿ ಮುಂದೆ ಮುಂದೆ ಹೆಜ್ಜೆ ಇಡುತ್ತಿದೆ. ಈಗಾಗಲೇ ಇಡೀ ಸಂಕೀರ್ಣದಲ್ಲಿ 23 ಹೊಸ ಜೈವಾನಿಲ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಡೇರಿಫಾರ್ಮಿಗೆ ಸಂಬಂಧಿಸಿದ ದೊಡ್ಡ ಸ್ಥಾವರವೂ ಸೇರಿದೆ. ಈ ಸ್ಥಾವರಗಳಿಂದ ಉತ್ಪಾದಿಸಲ್ಪಟ್ಟ ಮೆಥೇನ್ ಅನಿಲದಿಂದ ನೀರಾವರಿಗಾಗಿ ನೀರೆತ್ತುವ ಜನರೇಟರುಗಳನ್ನು ನಡೆಸಲಾಗುತ್ತಿದೆ. ಉದ್ದಿಮೆಗಳನ್ನು ನಡೆಸಲು ಪ್ರಯೋಗಾಲಯಗಳಲ್ಲಿ ದೀಪದ ಬನಸೇನ್ ಬರ್ನರುಗಳನ್ನು ಉರಿಸಲು ಉಪಯೋಗಿಸಲಾಗುತ್ತಿದೆ. ಇದಲ್ಲದೆ ಈ ಸ್ಥಾವರಗಳು ಹೊಗ ರಹಿತ ಉರುವಲನ್ನು ಅಡುಗೆಗೋಸುಗ ಒದಗಿಸುತ್ತಿವೆ. ಈ ಸ್ಥಾವರಗಳಿಂದ ಬರುವ ರಾಡಿಯನ್ನು ಹೊಲಗದ್ದೆಗಳಿಗಾಗಿ ವಿಪುಲ ಸೇಂದ್ರಿಯ ಗೊಬ್ಬರಕ್ಕಾಗಿ ಉಪಯೋಗಿಸುತ್ತಾರೆ. ಪ್ರಉತದ ಮೂಲಭೂತ ತತ್ವವಾದ ಸಂಪನ್ಮೂಲಗಳ ಗರಿಷ್ಠ ಉಪಯೋಗದ ಪ್ರಕಾರ, ಜೈವಾನಿಲ ತಾಂತ್ರಿಕತೆಯು ಮಾನವ, ಪ್ರಾಣಿ ಮತ್ತು ಗಿಡಗಂಟಿಗಳ ತ್ಯಾಜ್ಯವನ್ನು ಆರೋಗ್ಯಕರ

ರೀತಿಯಲ್ಲಿ ಹೊರಹಾಕುವದಷ್ಟೇ ಅಲ್ಲ; ಮೇಲಾಗಿ ಅವುಗಳನ್ನು ಉಪಯೋಗಕರ ಹಾಗೂ ಲಾಭದಾಯಕ ಜೈವಾನಿಲ ಮತ್ತು ಗೊಬ್ಬರಗಳ ಅಂತಿಮ ಉತ್ಪಾದನೆಗಳಲ್ಲಿ ಪರಿವರ್ತಿಸುತ್ತದೆ.

ಆನಂದ ನಗರದಲ್ಲಿ ಸೌರ ಶಕ್ತಿಯನ್ನು ಸಹ ಬಳಸಿಕೊಳ್ಳುವ ಏರ್ಪಾಟಾಗಿದೆ. ಸೌರ – ಫಾವಣಿಗಳು, ಮತ್ತು ಪ್ಯಾನೆಲಗಳಿಂದ ನೀರಾವರಿ ಪಂಪುಗಳನ್ನು ನಡೆಸುವುದು, ಮನೆ ಮತ್ತು ಬೀದಿ ದೀಪಗಳು ಶೈಕ್ಷಣಿಕ ದೂರದರ್ಶನ ಮತ್ತು ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ಲಸಿಕೆಗಳಿಗಾಗಿ ರೆಫ್ರಿಜರೇಟರುಗಳನ್ನು ನಡೆಸಲಾಗುವುದು.

ಜೈವಾನಿಲ ಹಾಗೂ ಸೌರಶಕ್ತಿ, ಸಂಶೋಧನ ಕೇಂದ್ರಗಳಲ್ಲಿ ಪರ್ಯಾಯ ಶಕ್ತಿ ಸಂಪನ್ಮೂಲ ಕುರಿತು ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಸಂಯೋಜಿಸಲಾಗಿದೆ. ಆನಂದ ನಗರದಲ್ಲಿ ತಾಂತ್ರಿಕ ಸಂಸ್ಥೆಯಲ್ಲಿ ಸ್ಥಳೀಯ ತಂತ್ರಜ್ಞರಿಗೆ ತರಬೇತಿ ನೀಡುವ ಮೂಲಕ ಮತ್ತು ಗ್ರಾಮಾಂತರ ಅಭಿವೃದ್ಧಿಗೋಸುಗ ಸಮಗ್ರ ಕಾರ್ಯಕ್ರಮದ ಭಾಗವಾಗಿ ಜೈವಾನಿಲ ಹಾಗೂ ಸೌರ ಶಕ್ತಿಗಳ ಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಆನಂದನಗರವು ಹೊಸ ತಂತ್ರಜ್ಞಾನದ ಪ್ರಸಾರ ಕೇಂದ್ರವಾಗಿ ಕೆಲಸ ಮಾಡುತ್ತದೆ. ನಿಸರ್ಗ – ಸಮತೋಲನದ ದೃಷ್ಟಿಯಿಂದ ಭದ್ರವಾದ ಮತ್ತು ಆರೋಗ್ಯ ದೃಷ್ಟಿಯಿಂದ ಸುರಕ್ಷಿತವಾದ ಈ ಶಕ್ತಿ ಮೂಲಗಳು ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಉರುವಲಿನ ಅಭಾವದಿಂದ ಕಂಗಾಲಾಗಿರುವ ಬಡ ಹಳ್ಳಿಗರಿಗೆ ಅತಿ ಮಹತ್ವಪೂರ್ಣ ಪರ್ಯಾಯ ಶಕ್ತಿಯನ್ನೊದಗಿಸುತ್ತದೆ.

ಪೊಸರ ಕೆಡಿಸದಂತೆ ಅಭಿವೃದ್ಧಿ :

ನಿರಂತರ ಆರ್ಥಿಕ ಅಭಿವೃದ್ಧಿಯು ನಿಸರ್ಗದ ನಿಯಮ ಹಾಗೂ ಜೀವಿಗಳಿಗೆ ಮಾರಕವಾಗಿ ಮುಂದರಿಯದೆ, ಧರೆಯೊಂದಿಗೆ ಸಾಮರಸ್ಯವಿರುವಂತೆ ಮುಂದರಿಯಬೇಕೆಂಬುದನ್ನು ಈಗ ಯೋಜನಾಕರ್ತರು ಮನಗಂಡಿದ್ದಾರೆ. ಮುಂಬರುವ ಜಾಗತಿಕ ನಿಸರ್ಗ ಸಮತೋಲದ ವಿನಾಶವನ್ನು ತಡೆಗಟ್ಟಲು ಆರಂಭದಿಂದಲೇ ಪರಿಸರ ಪೂರಕ ತತ್ವಗಳನ್ನು ಅಭಿವೃದ್ಧಿ ಯೋಜನೆಗಳಲ್ಲಿ ಅಳವಡಿಸಬೇಕು. ಆನಂದ ನಗರದ ವಿವಿಧ ಪ್ರಕಲ್ಪಗಳನ್ನು ಮಾನವ ಪ್ರಗತಿಯನ್ನಷ್ಟೇ ಅಲ್ಲದೆ, ಪ್ರಾಣಿ ವರ್ಗ ಹಾಗೂ ಸಸ್ಯಜೀವಿಗಳ ಪ್ರಗತಿಯನ್ನೂ ಸಹ ಗಮನದಲ್ಲಿರಿಸಿ ಯೋಜಿಸಲಾಗಿದೆ. ಸಕಲ ಜೀವಿಗಳು ಬೇರ್ಪಡಿಸಲು ಬಾರದ ಜೀವಜಾಲದಲ್ಲಿ ತಳಕು ಹಾಕಿಕೊಂಡಿವೆಯೆಂಬ ಶ್ರೀ ಸರಕಾರ ಅವರ ತತ್ವಜ್ಞಾನವೇ ಆನಂದ ನಗರದಲ್ಲಿಯ ಪ್ರತಿಯೊಂದು ಪ್ರಯತ್ನದ ಹಿಂದಿನ ಪ್ರೇರಣೆ. ಮಾನವರು ಭೂಮಿಯ ಮೇಲಿನ ಅತ್ಯಂತ ವಿಕಸಿತ ಜೀವಿಗಳು. ಆದರೇನೂ ತಾವು ಬದುಕುತ್ತಿರುವ ಪರಿಸರವನ್ನು ಹಾಳು ಮಾಡುವ ನಿರ್ದಯಿಗಳಲ್ಲ. ಆದ್ದರಿಂದ ಅವರು ಇಡೀ ಜೀವಕೋಟಿಯ ಕುರಿತು ಕಾಳಜಿ ವಹಿಸುವ ಪವಿತ್ರ ಜವಾಬುದಾರಿ ಹೊತ್ತಿದ್ದಾರೆ. ಇಲ್ಲವಾದರೆ, ನಾವೊಂದು ವೇಳೆ, ಈಗ ನಾಶ ಮಾಡುತ್ತಿರುವ ವೇಗದಲ್ಲಿ ಜೀವರಾಶಿಯನ್ನು ನಾಶ ಮಾಡುವುದನ್ನೇ ಮುಂದುವರಿಸಿದರೆ, (ಪ್ರತಿ ದಿನ ಒಂದು ತಳಿಯಂತೆ) ಕೊನೆಗೊಂದು ದಿನ ನಾವು ನಮ್ಮನ್ನೇ ನಾಶ ಮಾಡಿಕೊಳ್ಳುತ್ತೇವೆ.

ಪರಿವೇಶ ಸಂವರ್ಧನ ಕಾನನ ಅರ್ಥಾತ್ ಆನಂದ ನಗರದಲ್ಲಿರುವ ಪಸಕಾ ಸಕಲ ಜೀವಿಗಳ ಅಭಿವೃದ್ಧಿಗಾಗಿರುವ ಕಾನನವಾಗಿದೆ. ಎರಡು ಚದುರು ಕಿಲೋಮೀಟರುಗಳ ಸಂರಕ್ಷಿತ ಪ್ರದೇಶದಲ್ಲಿ ವಿರಳ ಸಸ್ಯಗಳನ್ನು ಪೋಷಿಸಲಾಗುವುದು ಮತ್ತು ವಿನಾಶದ ಅಂಚಿನಲ್ಲಿರುವ ಪ್ರಾಣಿಗಳಿಗೆ ಸುರಕ್ಷಿತ ನಿವಾಸ ಸ್ಥಾನ ಲಭಿಸುವುದು. ಪಸಕಾ ಪ್ರಪಂಚದ ಎಲ್ಲ ಭಾಗಗಳಿಂದ ಬರುವ ಜೀವಜಂತುಗಳಿಗೆ ಆಶ್ರಯಸ್ಥಾನವಾಗುತ್ತದೆ. ಅದರಲ್ಲಿಯೂ ಅರಣ್ಯ ನಾಶದಿಂದ ನಶಿಸುತ್ತಿರುವ ಪ್ರಾಣಿಗಳಿಗಂತೂ ಸುರಕ್ಷಿತ ಆಶ್ರಯವಿದು. ನಾಶದ ಅಂಚಿನಲ್ಲಿರುವ ಜೀವಿಗಳನ್ನು ಅಂದರೆ ದೈತ್ಯಾಕಾರದ ಕ್ರೌಂಚ ಪಕ್ಷಿ, ಕಪ್ಪು ಕತ್ತಿನ ಕೊಕ್ಕರೆ, ಉದ್ದನೆಯ ಬಿಳಿ ಬಾಲದ ಶೀಘ್ರ ಗತಿಯ ಸ್ವಿಫ್ಟ ಹಕ್ಕಿ, ಭಾರತೀಯ ಆನೆ, ಆಲಸಿ, ಕರಡಿ, ಚೇನು – ಗರಡಿ ಇತ್ಯಾದಿಗಳನ್ನು ಸಂರಕ್ಷಿತ ಆಶ್ರಯದಲ್ಲಿ ಶೀತೋಷ್ಣಗಳಿಂದ ಕಾಪಾಡಲಾಗುವುದು. ಮತ್ತು ಅವುಗಳ ಕಾಳಜಿ ವಹಿಸಲಾಗುವುದು.

ತೃತೀಯ ಜಗತ್ತಿನ ಚಿಕ್ಕ ಮಾದರಿ :

ಇಪ್ಪತ್ತನೆಯ ಶತಮಾನದಲ್ಲಿ ತಂತ್ರಜ್ಞಾನದ ಅದ್ಭುತ ಪ್ರಗತಿಯಾದರೂ ಸಹ, ಗ್ರಾಮಾಂತರ ಪ್ರದೇಶದ ಲಕ್ಷಗಟ್ಟಲೆ ಜನರು ಕೋಟಲೆ ಮತ್ತು ರಾಶಾಮಯ ಜೀವನವನ್ನೇ ಮುಂದುವರಿಸಿದ್ದಾರೆ. ಪ್ರಪಂಚದ ಅತ್ಯಂತ ಬಡ ಹಾಗೂ ಮಲೆತ ಪ್ರದೇಶದಲ್ಲಿರುವ ಆನಂದ ನಗರವು ಗ್ರಾಮಾಂತರ ಜನರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಹಳ್ಳಿಯ ಜೀವನದ ಗುಣಮಟ್ಟವನ್ನು ತೀವ್ರವಾಗಿ ಸುಧಾರಿಸಲು ಅರ್ಪಿತ ಜನರ ನಿಸ್ಸೀಮ ಪ್ರಯತ್ನವೇ ಆಗಿದೆ. ಪ್ರಉತದ ಬಹುಮುಖೀ ಹಾದಿಯು ಶಿಕ್ಷಣ, ಕೃಷಿ, ಉದ್ದಿಮೆ, ಶಕ್ತಿ ಉತ್ಪಾದನೆ, ಆರೋಗ್ಯ ಮತ್ತು ನೈರ್ಮಲ್ಯ ಮುಂತಾದವುಗಳಿಗೆ ಅಭಿವೃದ್ಧಿಯಲ್ಲಿ ಸಮಾನವಾದ ಒತ್ತು ನೀಡುತ್ತದೆ. ಇಲ್ಲಿ ಕಾರಖಾನೆಗಳು, ಗದ್ದೆಗಳು, ಶಾಲೆಗಳು, ತೋಟಗಳು, ಮಾನವರು, ಪ್ರಾಣಿಗಳು ಹಾಗೂ ಗಿಡಮರಗಳೆಲ್ಲವೂ ನೈಸರ್ಗಿಕ ಸಮತೋಲನದಲ್ಲಿ ಸಾಮರಸ್ಯಪೂರ್ಣ ಜೀವನದ ಚಿತ್ರಿತ ಪರದೆಯಂತಿವೆ. ಕೇವಲ ಭಾರತದ ಜ್ವಲಂತ ಸಮಸ್ಯೆಗಳನ್ನಷ್ಟೇ ಏಕೆ, ಇಡೀ ಅಭಿವೃದ್ಧಿಶೀಲ ಜಗತ್ತಿನ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲೋಸುಗ ಆನಂದ ನಗರವು ಒಂದು ಆದರ್ಶಪರ ಮಾದರಿಯಾಗಿದೆ.

●○●

ಅಧ್ಯಾಯ – 7

ತೃತೀಯ ಜಗತ್ತಿನ ಸಾಲ

1982 ರ ಮೊದಲು ಸುದ್ದಿ ಪತ್ರಿಕೆಗಳಲ್ಲಿ ದೊಡ್ಡ ಶಿರೋನಾಮೆ ಗಿಟ್ಟಿಸಿದ್ದ ಹೊರದೇಶಗಳಿಂದ ಪಡೆದ ತೃತೀಯ ಜಗತ್ತಿನ ಸಾಲದ ತೊಂದರೆಗಳು ಅಂದಿನಿಂದ ನಾಯಿಕೊಡೆಯಂತೆ ಬೆಳೆದು ಒಂದು ದುರಂತದಲ್ಲಿ ಪರಿಣಮಿಸಿದವು. ಈ ದುರಂತವು ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳ ಚರಿತ್ರೆಯಲ್ಲಿಯೇ ಅಪೂರ್ವವಾದುದು. ಈ ದುರಂತದ ಟಾಯೆಯು ಈಗ ಜಾಗತಿಕ ಹಣಕಾಸಿನ ಕೇಂದ್ರಗಳ ಮಖಮಲ್ ಹಾಸಿದ ಬೋರ್ಡ ರೂಮಿನಿಂದ ಪ್ರಪಂಚದ ಸುತ್ತಲಿನ ಬಡ ರಾಷ್ಟ್ರಗಳ ಬಂಜರು ಜವುಗು ಭೂಮಿಯ ವರೆಗೆ ವಿಸ್ತರಿಸುತ್ತದೆ. ವರುಷಗಳು ಉರುಳಿದಂತೆ ಈ ಟಾಯೆಯು ಹೆಚ್ಚು ಹೆಚ್ಚು ಕರಾಳವಾಗುತ್ತ ಸಾಗಿದೆ.

1987 ರ ಹೊತ್ತಿಗೆ ತೃತೀಯ ಜಗತ್ತಿನ ದೇಶಗಳು ಒಂದು ಟ್ರಿಲ್ಲಿಯನ್ (ದಶಕೋಟಿ ಕೋಟಿ) ಡಾಲರುಗಳ ವಿದೇಶಿ ಸಾಲ ಮಾಡಿದ್ದವು. ಆರು ದೇಶಗಳು ತಮ್ಮ ಒಟ್ಟು ರಾಷ್ಟ್ರೀಯ ಉತ್ಪಾದನೆಯ ಮಿತಿ ದಾಟಿದ ಋಣಭಾರ ಹೊತ್ತಿದ್ದವು. ಇನ್ನುಳಿದವುಗಳೂ ಸಹ ತೀರ ಹಿಂದೆ ಉಳಿಯಲಿಲ್ಲ. ಜಾಗತಿಕ ಬ್ಯಾಂಕು ಅತಿಶಯ ಋಣಭಾರದ ದೇಶಗಳೆಂದು ಗುರುತಿಸಿದ 17 ದೇಶಗಳಲ್ಲಿ ವಿದೇಶಿ ಸಾಲದ ಮೊತ್ತವು ಸರಾಸರಿ ಒಟ್ಟು ರಾಷ್ಟ್ರೀಯ ಉಳಿತಾಯದ (ಜಿ.ಎನ್.ಪಿ.) ಶೇ. 61ರಷ್ಟಿತ್ತು. ಈ ಋಣಭಾರದಲ್ಲಿ ಏರಿಳಿತಗಳಾಗುತ್ತಿದ್ದರೂ ಸಹ, ಆ ದೇಶಗಳಿಗೆ ಎದುರಾದ ದುರಂತದ ನೈಜ ಮೂಲವು ಈ ಸಾಲದ ಮೊತ್ತಗಳೇನಲ್ಲ. ಪ್ರತಿಯಾಗಿ, ನಿಯಮಿತವಾಗಿ ಸಾಲ ಮರುಪಾವತಿಸುವಲ್ಲಿ ಈ ದೇಶಗಳ ಅಸಾಮರ್ಥ್ಯದಲ್ಲಿ ಈ ದುರಂತದ ಬೇರುಗಳಿವೆ.

ಒಂದು ದೇಶವು ತನ್ನ ಸಾಲದ ಅಸಲು ಮತ್ತು ಬಡ್ಡಿಯನ್ನು ಮರು ಪಾವತಿಸುವಲ್ಲಿ ಪ್ರಚಲಿತವಿದ್ದರೆ, ಅದನ್ನು 'ಆರೋಗ್ಯವಂತ' ಸಾಲಗಾರ ದೇಶ ಎನ್ನುತ್ತಾರೆ. ಅದರ ಋಣಭಾರದ ಗಾತ್ರದ ಪರಿವೆ ಇಲ್ಲಿಲ್ಲ. ಈ ವಿಷಯದಲ್ಲಿ ಸಂಯುಕ್ತ ಸಂಸ್ಥಾನವೇ ಒಂದು ನಿದರ್ಶನ. ಅದರ ಋಣಭಾರವು ಇಡೀ ತೃತೀಯ ಜಗತ್ತಿನ ಋಣಭಾರದ ಅರ್ಧದಷ್ಟಿದೆ. ಆದರೂ ಸಹ ಅಮೇರಿಕೆಯ ಸಾಲ – ದುರಂತ ಕುರಿತು ಯಾರೇ ಆಗಲಿ ಕೇಳುವುದು ವಿರಳ. ಏಕೆಂದರೆ, ಸಂಯುಕ್ತ ಸಂಸ್ಥಾನವು ತನ್ನ ಸಾಲದ ಬಡ್ಡಿ ಮತ್ತು ಅಸಲಿನ ಮರುಪಾವತಿಯನ್ನು ನಿಯಮಿತವಾಗಿ ನಿರ್ವಹಿಸುತ್ತ ಬಂದಿದೆ. ಇನ್ನೂ ಹೆಚ್ಚು ಸಾಧಾರಣ ಮಟ್ಟದಲ್ಲಿ ಭಾರತವು 45 ಬಿಲಿಯನ್ (ಲಕ್ಷ ಕೋಟಿ) ಡಾಲರ ವಿದೇಶಿ ಸಾಲ ಹೊಂದಿದ್ದರೂ ಸಹ, ಅತಿಶಯ ಋಣಭಾರದ ದೇಶ (ಆ ಋದೇ) ಎಂಬ ವರ್ಗೀಕರಣ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. 17 ರಾಷ್ಟ್ರಗಳ ಪೈಕಿ ಈ ಅಪ್ರಿಯ ಹಣ ಪಟ್ಟಿಯನ್ನು ವಾಸ್ತವವಾಗಿ ಹೊಂದಿದ ಮೂರು ರಾಷ್ಟ್ರಗಳ (ಅರ್ಜೆಂಟೀನಾ, ಬ್ರಾಯಿಲ್ ಮತ್ತು ಮೆಕ್ಸಿಕೋ) ಋಣದ ಗಾತ್ರವು ಹೆಚ್ಚಿನ ಮಟ್ಟದಲ್ಲಿವೆ.

ಆದ್ದರಿಂದ, ಈ ದುರಂತದ ಗಾತ್ರದ ಕಲ್ಪನೆಯನ್ನು ಪಡೆಯಬೇಕಾದರೆ, ಅನೇಕ ತೃತೀಯ ಜಗತ್ತಿನ ದೇಶಗಳಿಗೆ ಈ ಸಾಲ ತೀರುವಳಿಯು ಅದೆಷ್ಟು ಪೀಡೆಯಾಗಿದೆಯೆಂಬುದನ್ನು ನೀವು ತಿಳಿಯಬಹುದು.

ಅಂತಾರಾಷ್ಟ್ರೀಯ ಸಾಲ ನೀಡಿಕೆಯಲ್ಲಿದ್ದ ಪ್ರಮುಖ ದುರಂತಗಳು ಕೇವಲ 1980ಕ್ಕೆ ಸೀಮಿತ ಘಟನೆಗಳೇನಲ್ಲ. ಯಾದವೀ ಕಲಹವಾದ ಅನತಿ ಕಾಲದಲ್ಲಿ ಸಂಯುಕ್ತ ಸಂಸ್ಥಾನಗಳ ಅನೇಕಾನೇಕ ರಾಜ್ಯ ಸರಕಾರಗಳು ಹಾಗೂ ನಗರ ಸಭೆಗಳು, ತಮ್ಮ ರೈಲು ಮಾರ್ಗದ ವಿಸ್ತರಣೆಗಾಗಿ ಮತ್ತು ಹೊಸ ಪ್ರದೇಶಗಳನ್ನು ತೆರೆಯುವದಕ್ಕಾಗಿ, ಐರೋಪ್ಯ ಪತ್ತಿನ ಪೇಟೆಯಿಂದ ಅತಿಶಯ ಸಾಲ ಪಡೆದವು. ಒಂದು ದಶಕದೊಳಗಾಗಿ ಇವುಗಳಲ್ಲಿ ಅನೇಕ ಸರಕಾರಗಳು ಎಷ್ಟೊಂದು ಸಾಲದಲ್ಲಿ ಮುಳುಗಿದ್ದವೆಂದರೆ, ತಮ್ಮ ಪ್ರಚಲಿತ ಸಾಲಗಳ ಮೇಲಿನ ಬಡ್ಡಿಯ ಮರುಪಾವತಿಗಾಗಿ ಹೊಸ ಸಾಲಗಳನ್ನು ಎತ್ತಬೇಕಾಯಿತು. ಇದೊಂದು ಸಾಲದ ಮೋಸದ ಬಲೆ. ಅರವತ್ತು ವರ್ಷಗಳ ನಂತರ, ಈ ಕತೆಯ ಪುನರುಕ್ತಿಯಾಯಿತು. ಈ ಬಾರಿ, ಲ್ಯಾಟಿನ್ ಅಮೇರಿಕಾ ಭೂಖಂಡದ ರಾಷ್ಟ್ರೀಯ ಸರಕಾರಗಳು ತಾವೇ ಸಾಲಗಾರರ ಪಾತ್ರವನ್ನು ವಹಿಸಿದವು.

ಇಂದಿನ ದುರಂತವೇಕೆ ಅಷ್ಟೊಂದು ಎದ್ದು ಕಾಣುವಂತಾಗಿದೆ? ಸಾಲಗಾರರ ಹಾಗೂ ಸಾಲ ನೀಡುವವರಿಬ್ಬರ ಪಕ್ಷದಲ್ಲಿಯೂ ಇರುವ ಅಭೂತಪೂರ್ವ ಅವಕಾಶದಲ್ಲಿ ಉತ್ತರವು ಅಡಗಿದೆ.

ಸಾಲಗಾರನ ಪಕ್ಷದಲ್ಲಿ ಅಂತಾರಾಷ್ಟ್ರೀಯ ಋಣಭಾರದ ಪ್ರಮಾಣವೇ ಪ್ರಾಣಾಂತಿಕವಾಗಿದೆ. 1930 ರ ಲ್ಯಾಟಿನ್ ಅಮೇರಿಕಾದ ಸಾಲಭಾರ ತುತ್ತ ತುದಿ ತಲುಪಿತ್ತು. ಇಂದಿನ ದುರಂತ ಎದುರಾಗುವ ವರೆಗೆ ಅದನ್ನೇ ಅತ್ಯಂತ ತೀವ್ರವೆಂದು ಸಾಮಾನ್ಯವಾಗಿ ಪರಿಗಣಿಸಲಾಗಿತ್ತು. ಸಾಲಕ್ಕೆ ಸಂಬಂಧಿಸಿದ ತೊಂದರೆಗಳನ್ನು ಹತ್ತಕ್ಕಿಂತ ಹೆಚ್ಚು ರಾಷ್ಟ್ರಗಳೇನೂ ಅನುಭವಿಸಿರಲಿಲ್ಲ. 1982 ರಿಂದೀಚೆಗೆ ನಲವತ್ತಕ್ಕಿಂತ ಹೆಚ್ಚು ಅಭಿವೃದ್ಧಿಶೀಲ ರಾಷ್ಟ್ರಗಳು, ಮತ್ತು ಲ್ಯಾಟೀನ ಅಮೇರಿಕ ಹಾಗೂ ಆಫ್ರಿಕದ ಎಲ್ಲ ರಾಷ್ಟ್ರಗಳು ಸಾಲ ತೀರುವಳಿಯ ಸಮಸ್ಯೆಗಳನ್ನು ವ್ಯಕ್ತಪಡಿಸಿದವು. ಇಷ್ಟು ಹೊತ್ತಿಗೆ ಇವುಗಳ ಪೈಕಿ ಬಹುತೇಕ ರಾಷ್ಟ್ರಗಳು ಸಾಲದ ಬಲೆಯ ಹಿಡಿತದಲ್ಲಿ ಸಿಕ್ಕು ಬಿದ್ದಿದ್ದವು. ಇನ್ನು ತಮ್ಮ ಬೇನೆಯನ್ನು ಗುಣಪಡಿಸಿಕೊಳ್ಳ ಬೇಕೆಂಬ ಅವುಗಳ ಯಾವುದಕ್ಕೂ ಹೇಸದ ಪ್ರಯತ್ನಗಳು, ತೀವ್ರ ಹಣದುಬ್ಬರ, ಏರುತ್ತಿರುವ ಬಡ್ಡಿದರ, ಪ್ರತಿ ವ್ಯಕ್ತಿಯ ಆದಾಯದ ಇಳಿತಾಯ ಮತ್ತು ನೈಜ ಹೂಡಿಕೆಯ ಕಡಿತಗಳಲ್ಲಿ ಪರಿಣಮಿಸಿದವು. ಆದರೆ ಇನ್ನೂ ಹೆಚ್ಚು ಮಹತ್ವ ಪೂರ್ಣವಾದುದೆಂದರೆ, ಆರೋಗ್ಯ ಶಿಕ್ಷಣ ಮತ್ತು ಆಹಾರ ಇವುಗಳಿಗಾಗಿ ಮಾಡುವ ವೆಚ್ಚದಲ್ಲಿ ಕಟುವಾದ ಮಿತಿ ಹೇರಲಾಯಿತು. ಈ ಕಾರ್ಯಕ್ರಮಗಳ ಮೇಲೆಯೇ ರಾಷ್ಟ್ರದ ಬಡ ವರ್ಗಗಳು ತಮ್ಮ ಜೀವ ಹಿಡಿಯಲು ಅವಲಂಬಿಸಿದ್ದವು.

ಸಾಲ ನೀಡುವವರ ಪಕ್ಷದಲ್ಲಿ ಈ ದುರಂತವನ್ನು ತೃತೀಯ ಜಗತ್ತಿನ ಸರಕಾರಗಳಿಗೆ ಸಾಲ ನೀಡಲು ಮುಂದಾದ ಖಾಸಗಿ ವಾಣಿಜ್ಯ ಬ್ಯಾಂಕುಗಳು ಸಾಟಿಯಿಲ್ಲದಷ್ಟು ತೊಡಗುವಿಕೆಯ

ಮೇಲಿಂದ ಆಳಯಬಹುದಾಗಿದೆ. 1987 ರ ಹೊತ್ತಿಗೆ, ಅತಿಶಯ ಋಣ ಭಾರದ ದೇಶಗಳ ಸಾಲದ ಬಹುತೇಕ ಮುಕ್ಕಾಲು ಭಾಗವನ್ನು ವಾಣಿಜ್ಯ ಬ್ಯಾಂಕುಗಳೇ ನೀಡಿದ್ದವು. ಈ ಪ್ರಮಾಣದ ಹೂಡಿಕೆಯು ಅಂತಾರಾಷ್ಟ್ರೀಯ ಸಾಲ ನೀಡಿಕೆಯ ಚರಿತ್ರೆಯಲ್ಲಿಯೇ ಪ್ರಚಲಿತ ದುರಂತಕ್ಕೆ ವಿಶಿಷ್ಟತೆ ತಂದಿದೆ. ದ್ವಿತೀಯ ಮಹಾಯುದ್ಧ ಪೂರ್ವದಲ್ಲಿ ಸಾರ್ವಭೌಮ ಸರಕಾರಗಳಿಗೆ ನೀಡುವ ದೊಡ್ಡ ಪ್ರಮಾಣದ ಸಾಲಗಳ ನೀಡಿಕೆಯು ಲಂಡನ್ನಿನ ಲಾಯ್ಡ ಬ್ಯಾಂಕ ಇಲ್ಲವೆ ಹೌಸ್ ಆಫ್ ರಾಥಚೈಲ್ಡ್ ಸ್‌ಗಳಂಥ ವ್ಯಾಪಾರೀ ಬ್ಯಾಂಕುಗಳ ವಿಶೇಷಾಧಿಕಾರವಾಗಿತ್ತು. ಈ ಬ್ಯಾಂಕುಗಳು ಠೇವು ಸ್ವೀಕರಿಸುತ್ತಿರಲಿಲ್ಲ. ಆದರೆ ಕೇವಲ ಸಾಲ ನೀಡುತ್ತಿದ್ದವು. ಆದ್ದರಿಂದ ಸಾಲಗಳು ಹದಗೆಟ್ಟರೆ, ಕೇವಲ ಕೆಲ ಪೇಚು ಎದುರಿಸಲು ಮುಂದಾದ ವೃತ್ತಿ ಪರರಿಗೆ ಮಾತ್ರ ಹಾನಿ ತಟ್ಟುತ್ತಿತ್ತು. ಪ್ರಚಲಿತ ಪರಿಸ್ಥಿತಿಯಲ್ಲಿ, ತೃತೀಯ ಜಗತ್ತಿನ ಸಾಲಗಳ ವಿಷಯದಲ್ಲಿ ಘಟಿಸಿದ ಹಾನಿಯು ವಾಣಿಜ್ಯ ಬ್ಯಾಂಕುಗಳ ಇಡೀ ಅಂತಾರಾಷ್ಟ್ರೀಯ ಜಾಲವನ್ನೂ ಮತ್ತು ಅವುಗಳ ನೂರಾರು, ಸಾವಿರಾರು ಠೇವುದಾರರ ಆರ್ಥಿಕ ಒಳಿತನ್ನೂ ಕೆಡಿಸಿ ಹಾಳು ಮಾಡಬಲ್ಲದು.

ಸಾಲ ದುರಂತದ ಗಾತ್ರ ಹಾಗೂ ಒತ್ತಡಗಳು ಅನೇಕ ಸಮಸ್ಯೆಗಳನ್ನು ಹುಟ್ಟಿಸುತ್ತವೆ. ಈ ದುರಂತವು ಅಸ್ತಿತ್ವದಲ್ಲಿ ಏಕೆ ಬಂದಿತು? ವಾಣಿಜ್ಯ ಬ್ಯಾಂಕುಗಳು ತಾವೆಂದೂ ಈ ಮುನ್ನ ಅನ್ವೇಷಿಸದ ಅಭಿವೃದ್ಧಿ ಹಣಕಾಸು ನೆರವಿನ ಕ್ಷೇತ್ರದಲ್ಲಿ ಇಷ್ಟು ಆಳವಾದ ಸಾಹಸಕ್ಕಿಳಿದುದು ಏಕೆ? ಕಡಿಮೆ ಅಭಿವೃದ್ಧಿ ದೇಶಗಳ ಸರಕಾರಗಳು ತಾವೇ ಅತಿಶಯವೆಂದು ಗುರುತಿಸಿದ ಮಟ್ಟದಲ್ಲಿ ಸ್ವೇಚ್ಛೆಯಿಂದ ಸಾಲ ಪಡೆದುದೇಕೆ? ಈ ದುರಂತವು ಇನ್ನೂ ಹೆಚ್ಚು ಆಳಕ್ಕಿಳಿಯುತ್ತಿರುವುದೇಕೆ ? ಇನ್ನು ಅಂತಿಮವಾಗಿ, ಈ ದುರಂತವನ್ನು ಪರಿಹರಿಸಲು ಸದ್ಯೋ ಭವಿಷ್ಯತ್ತಿನಲ್ಲಿ ಯಾವ ಉಪಾಯಗಳನ್ನು ಕೈಕೊಳ್ಳಬೇಕು? ಇಲ್ಲವೆ ಈಗಾಗಲೇ ಗುಟುಕು ಜೀವ ಹಿಡಿದು ಬದುಕುತ್ತಿರುವ ಸಾಲಗಾರರನ್ನು ಬಾಧಿಸುವ ಅಪಾಯಗಳನ್ನು ಕನಿಷ್ಠ ಪ್ರಮಾಣಕ್ಕಿಳಿಸುವ ಯಾವ ಉಪಾಯ ಕೈಕೊಳ್ಳಬೇಕು?

ಸಾಲ ದುರಂತದ ವಿಕಾಸ :

ತೃತೀಯ ಜಗತ್ತಿನ ಸಾಲದ ದುರಂತವು 1970 ರ ದಶಕದ್ದಾದರೂ, ಅದರ ಹುಟ್ಟನ್ನು 1959 ರಷ್ಟು ಹಿಂದಿನಿಂದ ಗುರುತಿಸಬಹುದಾಗಿದೆ. ಆಗ ಅನಿವಾಸಿಗಳ ಡಾಲರ ಠೇವುಗಳ ಪೇಟೆಯು ಮೊತ್ತಮೊದಲು ಲಂಡನ್ನಿನಲ್ಲಿ ಸ್ಥಾಪಿತವಾಯಿತು. ಹತ್ತು ನಿಯಂತ್ರಣಗಳಿಂದ ಅವು ಹೆಚ್ಚು ಮುಕ್ತವಾದುದರಿಂದ ಈ ಠೇವುಗಳು ವಿಶೇಷವಾಗಿ ಬ್ಯಾಂಕುಗಳಿಗೆ ಆಕರ್ಷಕವೆನಿಸಿದವು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಂಯುಕ್ತ ಸಂಸ್ಥಾನಗಳ ಬ್ಯಾಂಕುಗಳು ತಮ್ಮ ಲಂಡನ್ನಿನ ಶಾಖೆಗಳ ಡಾಲರ ಠೇವು ಖಾತೆಯನ್ನು ಸ್ವದೇಶೀಯ ಶಾಖೆಗಳಲ್ಲಿಗಿಂತ ಕಡಿಮೆ ಲಾಭಾಂಶದ ಮೇಲೆ ನಿರ್ವಹಿಸಬಲ್ಲವಾಗಿದ್ದವು. ಅನಿವಾಸಿ ಠೇವುಗಳ ಮೇಲೆ ಠೇವುದಾರರಿಗೆ ಅತ್ಯಂತ ಆಕರ್ಷಕ ಅನುಕೂಲಗಳನ್ನು ಒದಗಿಸುವಲ್ಲಿ ಬ್ಯಾಂಕುಗಳು ಒಂದರೊಡನೊಂದು ಸ್ಪರ್ಧಿಸುತ್ತಿದ್ದುದೇನೂ ಅಚ್ಚರಿಯ ಮಾತಲ್ಲ. 1960 ರ ದಶಕದ ಮಧ್ಯ ಕಾಲಕ್ಕೆ ಪೇಟೆಯು ಲಂಡನ್ನಿನಿಂದ ಐರೋಪ್ಯ ನಗರಗಳಿಗೂ ವಿಸ್ತರಿಸಿತು. ಮತ್ತು ಈ ಪ್ರಕ್ರಿಯೆಯಲ್ಲಿ

ಯುರೋ–ಪೇಟೆ ಎಂಬ ಹೆಸರೂ ಬಂದಿತು. 1970 ರ ಪ್ರಾರಂಭದ ಹೊತ್ತಿಗೆ ಯುರೋ ಪ್ರತ್ಯಯವು ತನ್ನ, ಭೌಗೋಳಿಕ ಅರ್ಥ ಕಳೆದುಕೊಂಡಿತು. ಈ ಪೇಟೆಯು ವಿಶ್ವವ್ಯಾಪಿಯಾಗಿ ಹರಡಿತು. ಆದರೂ ಸಹ, ಲಂಡನ್ 400 ವಿದೇಶಿ ಬ್ಯಾಂಕುಗಳ ಶಾಖೆಗಳನ್ನು ಹೊಂದಿ ದೂರ ತೀರದ ಬೃಹತ್ತಮ ಪೇಟೆಯಾಗಿ ಉಳಿಯಿತು.

ಯುರೋ–ಪೇಟೆ ಠೇವುಗಳು ಸ್ವದೇಶಗಳಲ್ಲಿ ತಮ್ಮ ತಮ್ಮ ಗಳಿಕೆಗಳ ಮೇಲೆ ಹೇರಿದ ವಿದೇಶಿ ವಿನಿಮಯ ನಿಯಂತ್ರಣಗಳನ್ನು ತಪ್ಪಿಸುವುದನ್ನೇ ಹುಡುಕುತ್ತಿರುವ ರಫ್ತುಗಾರರ ಆಶ್ರಯವೆನಿಸಿವೆ. ಈ ಹಂತವನ್ನು ಈಗ ತಲುಪಲಾಗಿದೆ. ಈ ನಾಟಕವು ಔಪಚಾರಿಕವಾಗಿ 1973–74 ರಲ್ಲಿ ಆರಂಭವಾಯಿತು. ಈಗ ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯು ಕಚ್ಚಾ ತೈಲದ ದರವನ್ನು ಒಮ್ಮೆಲೇ ನಾಲ್ಕುಪಟ್ಟು ಏರಿಸಿತು. ತತ್‌ಕ್ಷಣದ ಪರಿಣಾಮವೇನಾಯಿತು? ಇತರ ಜಗತ್ತಿನಿಂದ ಸೌದಿ ಅರೇಬಿಯಾ ಮತ್ತು ಕುವೈತಗಳಂಥ ದೇಶಗಳಿಗೆ ಆದಾಯದ ಹಸ್ತಾಂತರವಾಯಿತು. ಅವು ಹೀಗೆ ಅರ್ಜಿಸಿದ ಹೊಸ ಸಂಪತ್ತಿನ ಅಲ್ಪಾಂಶವನ್ನು ಮಾತ್ರ ಸ್ವದೇಶದಲ್ಲಿ ವ್ಯಯಿಸಬಲ್ಲವಾಗಿದ್ದವು. ಈ ತೈಲ – ಸಿರಿವಂತ ದೇಶಗಳಿಗೆ ತಮ್ಮ ಗಗನಚುಂಬಿ ಗಳಿಕೆಯನ್ನು ಸಂಚಯಿಸಿಡಲು ಅನುಕೂಲ ಸಂಗ್ರಹಾಲಯ ಬೇಕಾಯಿತು. ಇದಕ್ಕೆ ತೀರ ಸ್ಪಷ್ಟವಾದ ಆಯ್ಕೆಯೇ ಯುರೋಪೇಟೆ.

ಒಮ್ಮಿಂದೊಮ್ಮೆಲೇ ಯುರೋ–ಪೇಟೆಯಲ್ಲಿ ಪೆಟ್ರೋ–ಡಾಲರುಗಳ ಹೊಳೆ ಹರಿಯಿತು. ವಿನಿಯೋಗಿಸದ ಹಣ ಆಶ್ಚರ್ಯದಾಯಕ ವೇಗದಲ್ಲಿ ವರ್ಧಿಸಿತು. ಇತ್ತ ಬ್ಯಾಂಕ ಅಧಿಕಾರಿಗಳು ಈ ಹಣಕ್ಕೋಸುಗ ಸಾಲಗಾರರನ್ನು ಹುಡುಕುವ ಹೆಚ್ಚು ಹೆಚ್ಚು ಒತ್ತಡಕ್ಕೊಳಗಾದರು. ಅವರು ತೃತೀಯ ಜಗತ್ತನ್ನು ಬೆಂಬತ್ತಿದರು. ಅದು ಅವರ ಪಾಲಿಗೆ ದೈವದತ್ತ ಅವಕಾಶವೆಂಬಂತೆ ಕಂಡುಬಂದಿತು.

ಕಡಿಮೆ ಅಭಿವೃದ್ಧ ದೇಶಗಳಾದರೋ, ಸುಪರಿಚಿತ ಕುಳಗಳಾಗಿರಲಿಲ್ಲ. ದ್ವಿತೀಯ ಜಾಗತಿಕ ಮಹಾಯುದ್ಧಾನಂತರ ವ್ಯಾಪಾರೀ ಬ್ಯಾಂಕುಗಳು ಇಳಿಮುಖವಾದಾಗಲೂ ಸಹ, ವಾಣಿಜ್ಯ ಬ್ಯಾಂಕುಗಳು ಈ ದೇಶಗಳಲ್ಲಿ ಕೇವಲ ನಾಮಮಾತ್ರ ಪಾತ್ರವನ್ನಾಡಿದವು. ಅಂದರೆ ರಫ್ತು ಮತ್ತು ಆಮದುಗಳಿಗಾಗಿ ಅಲ್ಪಕಾಲೀನ ಬಂಡವಾಳ ಒದಗಿಸಿದವು. ಮತ್ತು ಅಪರೂಪಕ್ಕೆ ಸ್ಥಳೀಯ ಉದ್ದಿಮೆಗಳಿಗೆ ದುಡಿಯುವ ಬಂಡವಾಳ ನೀಡಿದವು. ವಾಣಿಜ್ಯ ಬ್ಯಾಂಕುಗಳು ಹೆಚ್ಚಾಗಿ ಅಭಿವೃದ್ಧಿ ಯೋಜನೆಗಳಿಂದ ದೂರ ಉಳಿದವು. ಈ ಕಾರ್ಯವನ್ನು ಅಂತಾರಾಷ್ಟ್ರೀಯ ಎಚೆನ್ಸಿಗಳಿಗೆ ಅಂದರೆ ಜಾಗತಿಕ ಬ್ಯಾಂಕ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಗಳಿಗೆ ಬಿಟ್ಟು ಕೊಡಲಾಯಿತು. ಹೀಗೆ ಕಡಿಮೆ ಅಭಿವೃದ್ಧ ದೇಶಗಳ 1961 ರಲ್ಲಿದ್ದ ವಿದೇಶಿ ಸಾಲಗಳ ಶೇ. 27ರಷ್ಟನ್ನು ಮಾತ್ರ ಖಾಸಗಿ ಬ್ಯಾಂಕುಗಳು ಒದಗಿಸಿದವು.

ಆದರೆ, 1974 ನೇ ವರ್ಷವು 1961 ಕ್ಕಿಂತ ತೀರ ಭಿನ್ನ. ಈ ಬ್ಯಾಂಕಗಳು ತಮ್ಮ ಪೆಟ್ರೋ ಡಾಲರುಗಳ ದೊಡ್ಡ ಹಾಗೂ ಹೆಚ್ಚುತ್ತಿರುವ ಹಣದ ಮೊತ್ತವನ್ನು ಕೂಡಲೇ ವಿನಿಯೋಗಿಸಬೇಕಿತ್ತು. ಆದ್ದರಿಂದ ಅವು ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆಯಲ್ಲಿ ಹೊಸ

ಕ್ಷೇತ್ರಗಳನ್ನು ಗುರುತಿಸಿದವು. ಇನ್ನುಳಿದ, ಹುಡುಕಿ ತಗೆಯದ, ಹೊಸ ಮೇರೆ ಎಂದರೆ ಅಭಿವೃದ್ಧಿ ಹಣಕಾಸು. ತಮ್ಮ ಎಚ್ಚರಿಕೆಯನ್ನು ಬದಿಗಿರಿಸಿ, ಅವು ಕಡಿಮೆ ಅಭಿವೃದ್ಧ ದೇಶಗಳಿಗೆ ದೊಡ್ಡ ಪ್ರಮಾಣದ ಸಾಲ ಪಡೆಯಲು ಆಮಿಷ ತೋರತೊಡಗಿದವು.

ಏಕಕಾಲಕ್ಕೆ ಮನರಂಜಕವೂ ಮತ್ತು ಭಯಾನಕವೂ ಆದ ಒಂದು ಲೇಖದಲ್ಲಿ ಶ್ರೀ ಎಸ್.ಸಿ. ಗ್ವಿನ್ನೆ (3) ಅವರು ವಾಣಿಜ್ಯ ಬ್ಯಾಂಕ ಚರಿತ್ರೆಯಲ್ಲಿ ಈ ವಿಲಕ್ಷಣ ಯುಗದ ಬಣ್ಣನೆ ನೀಡಿದ್ದಾರೆ. ಪ್ರತಿ ಪ್ರಕರಣದ ಸಾಕಷ್ಟು ವಿಶ್ಲೇಷಣೆಯನ್ನು ಮಾಡಲಾರದ, ಬ್ಯಾಂಕುಗಳು ಮನಸ್ಸಿಗೆ ಬಂದ ಹಾದಿ ಹಿಡಿದವು. ಇದರನ್ವಯ ನ್ಯೂಯಾರ್ಕ ಕಚೇರಿಯ ಹಿರಿಯ ಬ್ಯಾಂಕರುಗಳು ಆಯಾ ದೇಶದ ಅರ್ಥವ್ಯವಸ್ಥೆಯ ಸ್ಥೂಲ ಸಮೀಕ್ಷೆಯ ಮೇಲೆಯೇ ಅದಕ್ಕೆ ನೀಡಬಹುದಾದ ಸಾಲ ಮಿತಿಯನ್ನು ನಿರ್ಧರಿಸಿದರು. ಪೇಟೆ ಅಧಿಕಾರಿಗಳನ್ನು ಆನಂತರ ಆ ದೇಶಗಳಿಗೆ ಪೂರ್ವನಿಗದಿತ ಮಿತಿಯಲ್ಲಿ ಪ್ರಯತ್ನಿಸಿ ಸಾಲ ಬಡುಗಡೆ ಮಾಡಲು ಕಳಿಸಿದರು. ಈ ಅಧಿಕಾರಿಗಳು ಸಾಮಾನ್ಯವಾಗಿ ಬುದ್ಧಿವಂತರು; ಆದರೆ ಇಪ್ಪತ್ತು – ಇಪ್ಪತ್ತೈದು ವರ್ಷ ವಯಸ್ಸಿನ ತೀರ ಅನನುಭವಿಕ ಸಾಲ ನೀಡುವವರಷ್ಟೇ. ಇವರು ಸಂಚಾರಿ ಧೂಳು ಒರೆಸುವವರಂತೆ, ನಿಷೇಧಿತ ಸಾಲದ ಪಾಲನ್ನು ತುಂಬುತ್ತ, ತಿರುಗಾಡಿ ಆರ್ಥಿಕ ಸರಕನ್ನು ಮಾರುತ್ತ, ಹೊಲಸು ಜೀವನ ನಡೆಸುತ್ತ ಪ್ರಪಂಚ ಸುತ್ತುತ್ತಿದ್ದರು.

ಬ್ಯಾಂಕಿಂಗನಲ್ಲಿಯ ಅತಿ ಮುಖ್ಯ ನಿಯಮವೆಂದರೆ ಸಾಲಗಾರನು ತನ್ನ ಸಾಲ ಕ್ಕೋಸುಗ ಸಾಕಷ್ಟು ಸಹಾಯಕ ಆಸ್ತಿ ಹೊಂದಿದ್ದಾನೆಯೇ ಎಂಬುದು. ಕಡಿಮೆ ಅಭಿವೃದ್ಧಿ ದೇಶಗಳ ಕಾರ್ಯಾಚರಣೆಯಲ್ಲಿ ಈ ನಿಯಮವನ್ನು ಉಪೇಕ್ಷಿಸಬಹುದೆಂದು ಪೇಟೆ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಒಂದು ವೇಳೆ, ಯಾವುದೋ ಒಂದು ಸಾಲಗಾರ ಎಜೆನ್ಸಿಗೆ ಪತ್ರು ಇಲ್ಲದಿದ್ದರೆ, ಮತ್ತು ಬ್ಯಾಂಕಿನ ದೇಶದ ಸಾಲ ನೀಡಿಕೆಯ ಪಾಲು ಇನ್ನೂ ಭರತಿಯಾಗಿರ ದಿದ್ದರೆ, ಸಾಲ ನೀಡುವ ಅಧಿಕಾರಿಗಳಿಗೆ ಹೇಗಾದರೂ ಮಾಡಿ ಸರಕಾರದಿಂದಾಗಲಿ ಇಲ್ಲವ ಕೇಂದ್ರೀಯ ಬ್ಯಾಂಕಿನಿಂದಾಗಲಿ ಭರವಸೆ ಪತ್ರ ಪಡೆಯುವಂತೆ ತಿಳಿಸುತ್ತಿದ್ದರು. ಸಾಲ ನೀಡಿಕೆಗ ಈ ಭರವಸೆ ಪತ್ರದ ಸಮರ್ಥನೆ ಸಾಕಾಗಿತ್ತು. ಈ ಸಾಲಗಳ ಮೂಲವು ಯುರೋ–ಪೇಟೆಯ ಠೇವುಗಳೇ ಆಗಿದ್ದ ಕಾರಣ, ಅವುಗಳನ್ನು ಪಾಶ್ಚಾತ್ಯ ದೇಶಗಳಲ್ಲಿಯ ನಿಯಂತ್ರಣಾಧಿಕಾರಿಗಳ ಪರೀಕ್ಷೆಗೆ ಒಳಪಡಿಸಲೇ ಇಲ್ಲ.

ಯುರೋ ಪೇಟೆಯ ಮಾರ್ದವತೆಯು ಪೆಟ್ರೋ ಡಾಲರುಗಳು ಒಮ್ಮೆಲೇ ಹರಿದು ಬರುವ ಹಾಗೂ ಆ ಹಣವನ್ನು ಕಾರ್ಯದಲ್ಲಿ ವಿನಿಯೋಗಿಸುವ ಅಗತ್ಯಗಳಿಂದೊಡಗೂಡಿ, ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಸಾಲ ಪೂರೈಕೆಯ ಅಪೂರ್ವ ಸಂಧಿ ಒದಗಿ ಬಂತು. ವಿನ್‌ಸ್ಟೋನ್ ಚರ್ಚಿಲರು ಹೇಳಿದಂತೆ, ಬ್ಯಾಂಕರುಗಳು ಚಾಕಚಕ್ಯತೆ ಕಳೆದುಕೊಂಡು ಅಡ್ಡದಿಡ್ಡಿ ಕೆಲಸ ಮಾಡುವವರಾದರು.

ಏನೇ ಇರಲಿ, ಸಾಲದ ವ್ಯವಹಾರ ಕುದುರಿಸಲು ಎರಡು ಪಕ್ಷಗಳಂತೂ ಬೇಕು. ತೃತೀಯ ಜಗತ್ತಿನ ಸಾಲವು ಇಷ್ಟೊಂದು ಎತ್ತರಕ್ಕೆ ಹೇಗೆ ಏರಿತೆಂಬುದನ್ನು ಕಂಡುಕೊಳ್ಳಬೇಕಾದರೆ,

ಬ್ಯಾಂಕುಗಳಿಂದ ಸಾಲಗಾರ ರಾಷ್ಟ್ರಗಳು ದೊಡ್ಡ ಮೊತ್ತವನ್ನು ಹೇಗೆ ಸ್ವೀಕರಿಸಿದವು ಎಂಬುದನ್ನು ಸಹ ಸ್ಪಷ್ಟಪಡಿಸಬೇಕಾಗುವುದು. ಎಲ್ಲ ಸಾಲಗಳ ವಿಷಯದಲ್ಲಿ ಮರುಪಾವತಿಯ ಸಮಸ್ಯೆ ಗಳಿರುವವು. ಒಂದುವೇಳೆ ಸಾಲವನ್ನು ಉತ್ಪಾದಕತೆಯನ್ನು ಅನುಲಕ್ಷಿಸಿ ನೀಡಿದರೆ, ಅದರ ಮರುಪಾವತಿಯು ಸಹ ಹೆಚ್ಚುವರಿ ಉತ್ಪಾದನೆಯ ಮೂಲ್ಯದಿಂದ ಬರಬಲ್ಲದು. ಅಂದ ಮೇಲೆ, ಉತ್ಪಾದಕ ಸಾಲಗಳು ಎಷ್ಟೇ ಬೃಹತ್ತಾಗಿರಲಿ, ಯಾವುದೇ ಸಾಲ ಬಾಕಿ ಸಮಸ್ಯೆಗಳಿಗೆ ಹುಟ್ಟು ಹಾಕದು. ಯಾವಾಗ ಸಾಲವನ್ನು ಅನುತ್ಪಾದಕ ರೀತಿಯಲ್ಲಿ ವಿನಿಯೋಗಿಸುವರೋ ಆಗ ಸಾಲಗಾರನು ತೊಂದರೆಯಲ್ಲಿ ಸಿಲುಕುತ್ತಾನೆ. ಏಕೆಂದರೆ, ಅವನಿಗೀಗ ಆದಾಯವೆಂದು ತೋರಿಸಲು ಏನೂ ಉಳಿದಿರುವುದಿಲ್ಲ. ಆದರೆ ಸಾಲ ಮರುಪಾವತಿಯನ್ನು ಮಾಡಲೇ ಬೇಕಾಗುತ್ತದೆ. ಆದ್ದರಿಂದ ಪ್ರಚಲಿತ ಸಾಲ ದುರಂತವನ್ನು ಸ್ಪಷ್ಟೀಕರಿಸಲು, ಕಡಿಮೆ ಅಭಿವೃದ್ಧಿ ದೇಶಗಳು ಸಾಲ ತಂದ ಹಣವನ್ನು ಹೇಗೆ ಹಾಳು ಮಾಡಿರುವವೆಂಬುದರ ಬಗೆಗೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು.

ಕೆಲವು ಮಟ್ಟಿಗಂತೂ ಸಾಲ ತಂದ ಹಣದ ಅಪವ್ಯಯವು ಕಡಿಮೆ ಅಭಿವೃದ್ಧ ದೇಶಗಳ ನಿಯಂತ್ರಣಕ್ಕೆ ಮೀರಿದ ವಿಷಯವಾಗಿತ್ತು. ನೀಡಬಹುದಾದ ಸಾಲವನ್ನು ಪಡೆಯುವವರೇ ಇಲ್ಲದ ಸ್ಥಿತಿಗೆ ನೂಕಿದ ಆ ತೈಲ ದರಗಳ ಏರಿಕೆಯು ಆ ಕೂಡಲೇ ತೈಲವನ್ನು ಆಮದು ಮಾಡಿಕೊಳ್ಳುವ ದೇಶಗಳ ಪೆಟ್ರೋಲಿಯಂ ವೆಚ್ಚವನ್ನು ಒಮ್ಮೆಲೇ ನಾಲ್ಕು ಪಟ್ಟು ಹೆಚ್ಚಿಸಿದವು. ಅರ್ಥ ವ್ಯವಸ್ಥೆ ನಡೆಯಲು ಪೆಟ್ರೋಲಿಯಂ ತುಂಬಾ ಪ್ರಾಣಪ್ರಾಯ ಸಂಪನ್ಮೂಲ ವಾಗಿದೆ. ಈಗಾಗಲೇ ತುಂಬಾ ಬಡವಾದ ಕಡಿಮೆ ಅಭಿವೃದ್ಧ ದೇಶಗಳು ಸಾಲ ಪಡೆಯುವ ಮೂಲಕ ಹೆಚ್ಚುವರಿ ವೆಚ್ಚವನ್ನು ಭರಿಸಿಕೊಳ್ಳಬೇಕಾಯಿತು. 1979 ರಲ್ಲಿ ಎರಡನೆಯ ಬಾರಿ ತೈಲದ ದರವೇರಿ ಆ ದೇಶಗಳು ಕಂಪಿಸಿದವು. 1974 ಮತ್ತು 1982 ರ ಮಧ್ಯೆ ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘದಲ್ಲಿರದ ಕಡಿಮೆ ಅಭಿವೃದ್ಧ ದೇಶಗಳು 345 ಬಿಲಿಯನ್ (ಲಕ್ಷ ಕೋಟಿ) ಡಾಲರುಗಳ ಮೌಲ್ಯದ ಪೆಟ್ರೋಲಿಯಮ್‌ನ್ನ ಅಂದರೆ ಕಡಿಮೆ ಅಭಿವೃದ್ಧ ದೇಶಗಳ ಸಾಲ ಬಾಕಿಯ ಮೂರರಲ್ಲೊಂದು ಪಾಲಿನಷ್ಟು ಆಮದು ಮಾಡಿವೆಯೆಂದು ವಿಲಿಯಂ ಕ್ಲೈನ್ ಅಂದಾಜಿಸಿದ್ದಾನೆ (1).

ತೈಲದ ಪ್ರಮುಖ ರಫ್ತುಗಾರ ದೇಶಗಳಾದ ಮೆಕ್ಸಿಕೋ, ವೆನಝುವೆಲಾ ಮತ್ತು ಇಂಡೋನೇಶಿಯಾಗಳು ಜಗತ್ತಿನ ಅತಿ ದೊಡ್ಡ ಸಾಲಗಾರ ದೇಶಗಳಾಗಿರುವುದೇಕೆಂಬುದನ್ನು ವಿವರಿಸುವಲ್ಲಿ ಇದು ಅಯಶಸ್ವಿಯಾಗಿದೆಯೆಂಬುದಂತೂ ಸುಸ್ಪಷ್ಟ. ವಿಪರ್ಯಾಸವೆಂಬಂತೆ, ಅವುಗಳ ವಿಷಯದಲ್ಲಿಯೂ ಸಹ ತೈಲವೇ ಅಪರಾಧಿ ಸ್ಥಾನದಲ್ಲಿದೆ. ಪೆಟ್ರೋಲಿಯಮ್ ದರವು ಗಗನಕ್ಕೇರಿದಾಗ, ವಾಣಿಜ್ಯ ಬ್ಯಾಂಕುಗಳು ತೈಲ – ಸಿರಿಯ ಕಡಿಮೆ ಅಭಿವೃದ್ಧ ದೇಶಗಳಿಗೆ ಹಣ ನೀಡಲು ಹೊಂದಿದ ಪೆಟ್ರೋಲಿಯೋಸ್ ಮೆಕ್ಸಿಕೋನೋಸ್ ಒಂದೇ 20 ಲಕ್ಷ ಕೋಟಿ ಡಾಲರುಗಳನ್ನು ತನ್ನ ಕಾರ್ಯಾಚರಣೆಯ ವಿಸ್ತರಣೆಗೋಸುಗ ಸಾಲ ರೂಪದಲ್ಲಿ ಪಡೆಯಿತು. ಮುಂದೆ ತೈಲ ಪೇಟೆ ಕುಸಿದಾಗ ತೈಲ ಸಿರಿಯ ಕಡಿಮೆ ಅಭಿವೃದ್ಧ ದೇಶಗಳ ಮೇಲೆ ಬೆನ್ನುಮೂಳೆ ಮುರಿಯುವ ಋಣಭಾರ ಬಿದ್ದಿತು.

ಹೀಗೆ, ಕಡಿಮೆ ಅಭಿವೃದ್ಧ ದೇಶಗಳಿಗಾಗಿ 1970 ರ ತ್ಜಲ ದರ ಏರಿಕೆಯು ಇಬ್ಬದಿಯೂ ಹರಿತವಾದ ಚೂರಿಯಾಗಿ ಪರಿಣಮಿಸಿದೆ. ಒಂದೆಡೆ ಆಮದುಗಾರರನ್ನು ಪ್ರತ್ಯಕ್ಷವಾಗಿ, ಇನ್ನೊಂದೆಡೆ ರಫ್ತುಗಾರರನ್ನು ಪರೋಕ್ಷವಾಗಿ ಘಾಸಿಗೊಳಿಸುತ್ತಿದೆ. ಆದರೂ ಸಹ, ಅವುಗಳ ದುಸ್ಥಿತಿಯ ಪೂರ್ಣ ಹೊಣೆಯನ್ನು ಬಾಹ್ಯ ಚಟುವಟಿಕೆಗಳ ಮೇಲೆ ಹೊರಿಸುವಂತಿಲ್ಲ. ಅನೇಕ ವಿಧದಲ್ಲಿ ಕಡಿಮೆ ಅಭಿವೃದ್ಧ ದೇಶಗಳು ತಾವೇ ಸ್ವತಃ ತಮ್ಮ ಋಣಭಾರಕ್ಕೆ ಹೊಣೆಗಾರವಾಗಿವೆ.

ಅತ್ಯಂತ ಮಹತ್ವದ ಅಪರಾಧವೆಂದರೆ ಅಧಿಕಾರಶಾಹೀ ಭ್ರಷ್ಟಾಚಾರವೆನ್ನಹುದು. ಕಾರಕೂನರ ಬೆಲ್ಲರೆ ಹಣ ದೋಚುವಿಕೆಯಿಂದ ಮೊದಲು ಮಾಡಿ, ಮಾರ್ಕೋಸಿಸ್ ಮತ್ತು ಸೋಮೋಝಾಸ್‌ದ ಭಾರೀ ಕಳವಿನವರೆಗೆ ಈ ಭ್ರಷ್ಟಾಚಾರ ಹಬ್ಬಿದೆ. ಭಾರಿ ಲಂಚದ ಕ್ಷೇತ್ರವೆಂದರೆ ಬಂಡವಾಳ ರೂಪದ ಉಪಕರಣ ಹಾಗೂ ತಾಂತ್ರಿಕತೆಗಳನ್ನು ಆಮದು ಮಾಡಿಕೊಳ್ಳುವದು.

ಬಹುತೇಕ ಕಡಿಮೆ ಅಭಿವೃದ್ಧ ದೇಶಗಳಿಗೆ ಆಪ್ರಿಯ ಸತ್ಯವೆಂದರೆ, ಅವುಗಳ ಅಭಿವೃದ್ಧಿಯು ಆಮದು ಮಾಡಿಕೊಂಡ ಬಂಡವಾಳವನ್ನೇ ಆಧರಿಸಿರುವ ಸಂಗತಿ. ಕೇವಲ ಕೆಲವೇ ಕಡಿಮೆ ಅಭಿವೃದ್ಧ ದೇಶಗಳು ತಾಂತ್ರಿಕ ಪಕ್ವತೆಯನ್ನು ಅಥವಾ ತಮ್ಮ ಆಧುನಿಕ ಬಂಡವಾಳೋಪಕರಣಗಳ ಅಗತ್ಯಗಳನ್ನು ಪೂರೈಸಿಕೊಳ್ಳುವ ಔದ್ಯಮಿಕ ಸಾಮರ್ಥ್ಯವನ್ನು ಹೊಂದಿವೆ. ಆಗೀಗ ನಡೆಯುವ ಅಂತರ್ ಸರಕಾರಿ ಹಸ್ತಾಂತರವನ್ನು ಹೊರತುಪಡಿಸಿ ಈ ಉಪಕರಣಗಳ ಬಹ್ವಂಶವನ್ನು ತಯಾರಕರಿಂದ ಪಡೆಯಬೇಕು. ಇಲ್ಲವೆ ಅಭಿವೃದ್ಧಿಪರ ಏಚೆನ್ಸಿಗಳಿಂದಾಗಲಿ ಇಲ್ಲವೆ 1970 ರ ದಶಕದಲ್ಲಿ ಮಾಡಿದಂತೆ, ವಾಣಿಜ್ಯ ಬ್ಯಾಂಕುಗಳಿಂದ ಎತ್ತಿದ ಸಾಲಗಳಿಂದಾಗಲಿ ಪಡೆಯಬೇಕು.

ರೂಢಿಯ ಪ್ರಕಾರ, ಈ ವ್ಯವಹಾರಗಳನ್ನು ಲೀಲಾವಿನ ಮೂಲಕ ನಿರ್ಧರಿಸಲಾಗುತ್ತಿದೆ. ಸರಕಾರಕ್ಕೆ ಅತ್ಯುತ್ತಮ ವ್ಯವಹಾರ ನೀಡುವ ಕಂಪನಿಯು ಯಂತ್ರ ಪೂರೈಕೆಯ ಒಪ್ಪಂದವನ್ನು ಗಿಟ್ಟಿಸುತ್ತದೆ. ಈಗ, ನೀಡದ ಹಣಕ್ಕೆ ತಕ್ಕ ಮೌಲ್ಯದ ಅತ್ಯುತ್ತಮ ಉಪಕರಣ ನೀಡುವ ಕೊಡುಗೆಯೇ ಅತ್ತುತ್ತಮ ವ್ಯವಹಾರ. ಈ ಪ್ರಕ್ರಿಯೆಯನ್ನು ನಿರ್ವಹಿಸುವ ಅಧಿಕಾರಿಗಳಿಗೆ ಈ ಪದವು ಬೇರೆ ಆಯಾಮವನ್ನೇ ಹೊಂದಿದೆ. ವ್ಯವಹಾರದ ಗುಣವು ಅದರ ಬಾಲಾಗಸಿಯಂತ ಬರುವ ಲಂಚ ರುಸುವತ್ತುಗಳನ್ನು ಅವಲಂಬಿಸಿದೆ. ಲೀಲಾವು ವ್ಯವಸ್ಥೆಯನ್ನು ಹೇಗೆ ಹೊಂದಿಸುವ ರೆಂಬುದನ್ನು ಕಾಣಲು ಈ ಉದಾಹರಣೆ ನೋಡಿರಿ. ಇದೇನೂ ಸಂಪೂರ್ಣ ಊಹೆಯಲ್ಲ. ಒಂದು ಕಡಿಮೆ ಅಭಿವೃದ್ಧ ದೇಶವು ಉಷ್ಣತಾ ಶಕ್ತಿಜನಕ ಸ್ಥಾವರ ಸ್ಥಾಪನೆಗಾಗಿ ದರಪಟ್ಟಿಯನ್ನು ಆಹ್ವಾನಿಸುತ್ತದೆ. 'ಅ' ಸಂಸ್ಥೆಯು ಭದ್ರ, ಉನ್ನತ ಗುಣಮಟ್ಟದ 1 ಕೋಟಿ ಡಾಲರುಗಳ ಪ್ರಸ್ತಾವದೊಂದಿಗೆ ಮುಂದಾಗುತ್ತದೆ. ಅದರ ಪ್ರತಿಸ್ಪರ್ಧಿ 'ಬ' ಸಂಸ್ಥೆಯು ಸ್ವಲ್ಪ ಅದಕ್ಷ, ಮತ್ತು ಚಾಲತಿಯಲ್ಲಿಲ್ಲದ ಹಳೆ ಉಪಕರಣ ಹೊಂದಿದ್ದು ಅದನ್ನು 1.5 ಕೋಟಿ ಡಾಲರಿಗೆ ಮಾರಬಯಸುತ್ತದೆ. ಈ ಒಪ್ಪಂದ ಕುದುರಿಸಲು 'ಬ' ಸಂಸ್ಥೆಯು 0.2 ಕೋಟಿ ಡಾಲರನ್ನು ಲಂಚವೆಂದು ಹಾಗೂ ಮೇಲು ಹಣವೆಂದು ಖರ್ಚು ಮಾಡುತ್ತದೆ. ಈ 0.2 ಕೋಟಿ ಡಾಲರ ಎಲ್ಲಿಂದ ಬರುತ್ತದೆ? ತೀರ ಸರಳ. ಅದನ್ನು ನೇರವಾಗಿ ದರಪಟ್ಟಿಯಲ್ಲಿಯೇ ಸೇರಿಸಲಾಗುತ್ತದೆ.

ದರಪಟ್ಟಿಯು ಮಂಜೂರಾಗುತ್ತದೆ. ಸರಕಾರವು 1.7 ಕೋಟಿ ಡಾಲರ ಸಾಲವನ್ನು, ಆ ಕಂಪನಿಗೆ ಕೊಡಲೆಂದು, ತೆಗೆಯುತ್ತದೆ. ಇನ್ನು ಆ ಕಂಪನಿಯು 0.2 ಕೋಟಿ ಡಾಲರುಗಳನ್ನು ಮರಳಿ ಸ್ಥಳೀಯ ಅಧಿಕಾರಶಾಹಿಗೆ ಲಂಚ ರೂಪದಲ್ಲಿ ಹಿಂತಿರುಗಿಸುತ್ತದೆ. ಬ್ಯಾಂಕಿಗೆ ತನ್ನ ದುಡಿಮೆಗಾಣದ ಹಣಕ್ಕೊಬ್ಬ ಸಾಲಗಾರ ಸಿಕ್ಕಂತಾಯಿತು. ಕಂಪನಿಗೆ ತನ್ನ ಅದಕ್ಷ ಉಪಕರಣವನ್ನು ಹೊರಹಾಕಿದಂತಾಯಿತು. ಇನ್ನು ಅಧಿಕಾರ ಶಾಹಿಯು 0.2 ಕೋಟಿ ಡಾಲರುಗಳನ್ನು ಸರಕಾರದಿಂದ ಲಪಟಾಯಿಸಿದಂತಾಯಿತು. ಇದರಲ್ಲಿ ಸೋತವರೆಂದರೆ ಕೇವಲ ದೇಶ ಮಾತ್ರ. ಅದರ ಮೇಲೀಗ 0.7 ಕೋಟಿ ಡಾಲರುಗಳ ನಿರರ್ಥಕ ಋಣಭಾರ ಬಿದ್ದಿತು. ಸತ್ಯಾಂಶವೆಂದರೆ, ದೇಶದ ವಾಸ್ತವ ಹಾನಿಯು ಈ ಮೊತ್ತಕ್ಕಿಂತ ಹೆಚ್ಚಾಗುತ್ತದೆ. ಏಕೆಂದರೆ, ಉಪಕರಣದ ಅದಕ್ಷತೆಗಳು. ಇಡೀ ಸಾಲದ ವ್ಯವಹಾರವನ್ನು ಅನುತ್ಪಾದಕವಾಗಿಸಬಹುದು. ಉದಾಹರಣೆಯೆಂದರೆ, ಬ್ರಾಝಿಲ್ ದೇಶದ 114 ಲಕ್ಷ ಕೋಟಿ ಡಾಲರಿನ ವಿದೇಶಿ ಸಾಲದ ಮೂರರಲ್ಲೊಂದು ಪಾಲು ಅದರ ಅಣುಸ್ಥಾವರಕ್ಕಾಗಿ ವ್ಯಯವಾಯಿತು. ಆದರೆ, ಅದು ಕೆಲಸ ಮಾಡಲೇ ಇಲ್ಲ.

ಈ ರೀತಿಯ ಹಣ ದೋಚುವ ಪ್ರಸಂಗಗಳೆಲ್ಲ ಒಟ್ಟು ಸೇರಿ ಕಡಿಮೆ ಅಭಿವೃದ್ಧ ದೇಶಗಳ ಮೇಲೆ ಅನುತ್ಪಾದಕ ಭಾರಿ ಸಾಲದ ಹೊರೆ ಹೇರಿವೆ. ಆದರೆ ತೃತೀಯ ಜಗತ್ತಿನ ಮಹಾ ಮಹಾ ದರೋಡೆಖೋರ ದೊರೆಗಳು ನಡೆಸುವ ಹಣ ದೋಚುವಿಕೆಯೊಂದಿಗೆ ಹೋಲಿಸಿದರೆ, ಇವುಗಳ ಪ್ರಭಾವ ಮ್ಲಾನವಾಗುತ್ತದೆ. 1986 ರ ವರೆಗೆ ಫಿಲಿಪ್ಪೈನ್ಸ್ ದೊರೆಯಾಗಿದ್ದ ಫರ್ಡಿನ್ಯಾಂಡ ಮಾರ್ಕೋಸ್, ಅಂಧವರಲ್ಲಿ ಒಡೆದು ಕಾಣುವಂಧವನು. ಅವನು ಮತ್ತು ಅವನ ಪತ್ನಿ ಇಮೆರ್ಡಾ ಸೇರಿ ಫಿಲಿಪ್ಪೈನ್ಸ್‌ದ ವಿದೇಶಿ ಸಾಲದ ಶೇ.15 ರಷ್ಟು ಹಣವನ್ನು ಲಪಟಾಯಿಸಿದ್ದಾರೆಂದು ಆರೋಪಿಸಲಾಗಿದೆ. ಈ ಸಾಲದ ಮೊತ್ತವು, ಪ್ರಚಲಿತ 25 ಲಕ್ಷ ಕೋಟಿ ಡಾಲರುಗಳಷ್ಟಿದೆ. ಈ ಯಾದಿ ಹೀಗೆಯೇ ಮುಂದುವರಿಯುತ್ತದೆ. ಅದರಲ್ಲಿ ನಿಕಾರಗುವಾದ ಸೋಲೋಝಾನೂ ಸೇರುತ್ತಾನೆ. 1972 ರಲ್ಲಿ ಮನಗುಆದಲ್ಲಿ ಸಂಭವಿಸಿದ ಭೂಕಂಪಾನಂತರ ಆ ದೇಶಕ್ಕೆ ನೀಡಿದ ಪುನರ್ರಚನಾ ಸಾಲದ ಇಡೀ ಮೊತ್ತವನ್ನೇ ಬಹುಶಃ ಅವನು ಲಪಟಾಯಿಸಿದ್ದಾನೆ. ಅವನು ಸರಕಾರಿ ಖಜಾನೆಯಲ್ಲಿ ಬಿಟ್ಟು ಹೋದ ಹಣ ಕೇವಲ 0.3 ಲಕ್ಷ ಕೋಟಿ ಡಾಲರುಗಳು. ಆದರೆ ಆ ದೇಶ ನೀಗಬೇಕಾದ ವಿದೇಶಿಸಾಲದ ಭಾರ 4 ಲಕ್ಷ ಕೋಟಿ ಡಾಲರು. ಈ ಅಂಶ ಈಗ ಸ್ಪಷ್ಟವಾಗಿರಳು ಸಾಕು. ಇಂದು ಆಫ್ರಿಕಾ ಖಂಡದ ಶೇಕಡಾ 60 ರಷ್ಟು ಭಾಗವು ಸ್ವೈನ್ಯಾಡಳಿತಕ್ಕೆ ಒಳಪಟ್ಟಿದೆ. ಇದೇ ರೀತಿ, ಲ್ಯಾಟಿನ್ ಅಮೇರಿಕಾ ಖಂಡದಲ್ಲಿ ನಿಯಮಿತವಾಗಿ ಸ್ವೈನ್ಯಾಡಳಿತ ಮೂತಿ ಹಾಕುತ್ತದೆ. ಆ ಆಡಳಿತಗಳು ತಮ್ಮ ದೇಶಗಳ ಹೆಸರಿನಲ್ಲಿ ವಿದೇಶ ಸಾಲ ಸಂಚಯಿಸುವಲ್ಲಿ ದೊಡ್ಡ ಪಾತ್ರ ವಹಿಸಿವೆ. ಆ ಆಡಳಿತಗಳು ತಮ್ಮ ಸ್ವಂತದ ತ್ರಿಜೂರಿಗಳಿಗೆ ಹಣ ಸೇರಿಸುತ್ತ ಮುಂದುವರಿದಿವೆ. ಇತ್ತ ಆ ದೇಶಗಳ ಪ್ರಜೆಗಳ ಮೇಲೆ ಸಾಲದ ಅಸಲು ಮತ್ತು ಬಡ್ಡಿ ತೀರಿಸುವ ಭಾರ ಬಿದ್ದಿದೆ.

ರಾಜಕಾರಣಿಗಳೂ ಹಾಗೂ ಅಧಿಕಾರಶಾಹಿಯೂ ಕಾಯ್ದೆ ವಿರೋಧವಾಗಿ ಲಪಟಾಯಿಸಿದ ಹಣವನ್ನು ಸುರಕ್ಷಿತತೆಗಾಗಿ ದೇಶದ ಹೊರಗೆ ಇಡುವುದುಂಟು ಮತ್ತು ಅನೇಕ ವೇಳೆ, ಯಾವ

ಯುರೋಪೇಟೆಯಿಂದ ಅದು ಸಾಲದ ರೂಪದಲ್ಲಿ ಹೊರಬಿದ್ದಿತ್ತೋ, ಅದೇ ಪೇಟೆಯ ಜಾಲದಲ್ಲಿ ಮರಳಿ ಬಂದು ಸೇರುತ್ತದೆ. ಈ ರೀತಿ ಒಂದು ಆಶ್ಚರ್ಯಕಾರಿ ಪುನರಾವರ್ತನೆಯ ಯಂತ್ರವು ಅಸ್ತಿತ್ವಕ್ಕೆ ಬಂದಿದೆ. ಇದರಲ್ಲಿ ಬ್ಯಾಂಕುಗಳು ನೀಡಿದ ಸಾಲ ಮೊತ್ತದ ದೊಡ್ಡ ಪಾಲು ವಾಸ್ತವವಾಗಿ ಆ ಕೂಡಲೇ ಹಿಂತಿರುಗಿತು. ಆದರೆ, ಸಾಲಗಾರ ರಾಷ್ಟ್ರಗಳಲ್ಲಿ ಭ್ರಷ್ಟ ಅಧಿಕಾರ ಶಾಹಿಯು ಹಣ ಹಸ್ತಾಂತರಿಸಿ ಇರಿಸುವ ಮೂಲಕವೇ ಹೀಗಾಯಿತು. ಬಂಡವಾಳದ ಹಾರಿಕೆ ಎಂದು ಕರೆಯುವ ಈ ಘಟನೆಯು ಲ್ಯಾಟಿನ್ ಅಮೇರಿಕಾದಲ್ಲಿ ಅತ್ಯಂತ ತೀವ್ರಗೊಂಡಿತು. ಇಲ್ಲಿ ಹತ್ತು ಅತಿ ದೊಡ್ಡ ಸಾಲಗಾರ ರಾಷ್ಟ್ರಗಳು 1983 ಮತ್ತು 1985 ರ ಅವಧಿಯಲ್ಲಿ ಇಂಥ ಪುನರಾವರ್ತನೆಯ ಮೂಲಕ ತಮ್ಮ ದೇಶಕ್ಕೆ ಬರುವ ಬಂಡವಾಳದ ಬಹುಶಃ ಶೇ. 70 ರಷ್ಟನ್ನು ಕಳೆದುಕೊಂಡವೆಂದು ಅಂದಾಜಿಸಲಾಗಿದೆ. ಈ ಬಂಡವಾಳ ಹಾರಿಕೆಯ ವ್ಯತಿರೇಕವನ್ನು ಮೆಕ್ಸಿಕೋದ ಅನುಭವದಿಂದ ಉತ್ತಮ ರೀತಿಯಲ್ಲಿ ನಿದರ್ಶಿಸಬಹುದು. ಈ ಎರಡು ವರುಷಾವಧಿಯಲ್ಲಿ ಅವುಗಳ ಹೊಸ ಸಾಲಗಳ ಮೊತ್ತವು 9 ಲಕ್ಷ ಕೋಟಿ ಡಾಲರುಗಳಷ್ಟಿತ್ತು. ಮತ್ತು ಅದರ ಬಂಡವಾಳದ ಹಾರಿಕೆಯು ಅಂದಾಜು 16 ಕೋಟಿ ಡಾಲರಿನಷ್ಟಿತ್ತು. ಬಂಡವಾಳ ಹಾರಿಕೆಯಿಂದಾಗಿ ಅದೇ ಹಣವನ್ನು ಹಲವಾರು ಬಾರಿ ಪುನರಪಿ ಸಾಲ ನೀಡಲು ಬ್ಯಾಂಕುಗಳಿಗೆ ಅನುಕೂಲವಾಯಿತು. ಪ್ರತಿಯೊಂದು ಸಲ ಹೊಸ ಪುಸ್ತಕೀಯ ಆಸ್ತಿ ಉಂಟಾಯಿತು. ಅದರ ಮೇಲೆ ಮತ್ತೆ ಬಡ್ಡಿ ಕೇಳಬಹುದಾಗಿತ್ತು. 1970 ರ ದಶಕದಲ್ಲಿ ತೃತೀಯ ಜಗತ್ತಿನ ಲಷ್ಕರೀಕರಣದಲ್ಲಿ ಅದ ನಾಟಕೀಯ ಹೆಚ್ಚಳವು ಅನುತ್ಪಾದಕ ಸಾಲ ಪುಷ್ಕವಾಗುವುದಕ್ಕೆ ಕಾರಣವಾಯಿತು. ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆಗೆ ಸೇರದ ಇತರ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಚಲಿತ ವಿದೇಶಿ ಸಾಲದ ಶೇ. 20 ರಷ್ಟನ್ನು ನೇರವಾಗಿ ಯುದ್ಧ ಸಾಮಗ್ರಿಗಳ ಖರೀದಿಗಾಗಿ ವ್ಯಯಿಸಲಾಗಿದೆ ಎಂಬುದನ್ನು ಸ್ಟಾಕಹೋಮ್ ಅಂತಾರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆಯು ಹೊರಡಿಸಿದ 1985 ರ ವಾರ್ಷಿಕ ಸಂಚಿಕೆಯಲ್ಲಿ ತೋರಿಸಲಾಗಿದೆ. 1972 ಮತ್ತು 1982 ರ ಮಧ್ಯೆ ಲ್ಯಾಟೀನ್ ಅಮೇರಿಕಾದ ಯುದ್ಧ ಸಾಮಗ್ರಿಗಳ ವಾರ್ಷಿಕ ಆಮದು, ಶೇ. 13 ರಷ್ಟು ಹೆಚ್ಚಿದೆ. ಅದೇ ಕಾಲಕ್ಕೆ ಆಫ್ರಿಕಾದ ಆಂಕೆಯು ವಾರ್ಷಿಕ ಶೇ. 18.5 ರಷ್ಟು ಹೆಚ್ಚಿದೆ. ಈ ಲಷ್ಕರೀಕರಣದ ದಾರುಣತೆಯೆಂದರೆ, ಯಾವ ದೇಶಗಳು ತಾಳಿಕೊಳ್ಳಲು ತೀರ ಅಶಕ್ತವಾಗಿವೆಯೋ ಅಲ್ಲಿಯೇ ಇದು ಅತ್ಯಂತ ಒಡೆದು ಕಾಣುವಂತಿದೆ. ಲಷ್ಕರೀ ವೆಚ್ಚಗಳು ಬಹುತೇಕ ಇಡಿಯಾಗಿ ಅನುತ್ಪಾದಕಗಳೆಂಬುದನ್ನು ಬೇರೆ ಹೇಳಬೇಕಿಲ್ಲ.

ಕಡಿಮೆ ಅಭಿವೃದ್ಧ ದೇಶಗಳಲ್ಲಿಯ ಇಂಥ ದುಂದು ವೆಚ್ಚವು 1970 ರ ದಶಕದ ತಕ್ಷಣದ ಹುಟ್ಟುವಳಿಯೇನಲ್ಲವೆಂಬುದನ್ನು ಗಮನಿಸಬೇಕಾದುದು ಮಹತ್ವಪೂರ್ಣ. ಕಾರ್ಯಕ್ರಮ ಹಮ್ಮಿಕೊಂಡು ತಪ್ಪುತಪ್ಪಾಗಿ ಅನುಷ್ಠಾನ ಮಾಡಿದ ಕಾರಣ ಭಾರತದಲ್ಲಿ ಸಮಾಜವಾದದಂತೆ ಇತರ ಕಡಿಮೆ ಅಭಿವೃದ್ಧ ದೇಶಗಳಲ್ಲೂ ವಿಷಮ ಸ್ಥಿತಿ ಹುಟ್ಟಿಕೊಂಡಿದೆ. ಈ ದೃಷ್ಟಿಯಲ್ಲಿ ತೃತೀಯ ಜಗತ್ತಿನ ಸಾಲವು ಸ್ಫೋಟಕ ಸ್ಥಿತಿ ತಲುಪಿದೆ. ಇದೆಲ್ಲವೂ ಘಟಿಸುವುದಕ್ಕೆ ಸಾಲ ನೀಡಬಹುದಾದ ಹಣದ ಅಪೂರ್ವ ಮಹಾಪೂರವೇ ಕಾರಣ. ಇದರಿಂದ ಬ್ಯಾಂಕುಗಳು ತಮ್ಮ ರೂಢಿಯ ಎಚ್ಚರವನ್ನು ಕಳಚಿದವು ಮತ್ತು ಪೇಚಿದ್ದರೂ ಸಾಲ ನೀಡಿದವು.

ದುರಂತದ ಬೆಳವಣಿಗೆ :

1974 ರಿಂದ 1979 ರ ವರೆಗಿನ ಐದು ವರ್ಷಗಳು ಅಂತಾರಾಷ್ಟ್ರೀಯ ಬ್ಯಾಂಕಿನ ಸಾಲ ನೀಡಿಕೆಯ ದೃಷ್ಟಿಯಲ್ಲಿ ಉಬ್ಬರದ ಕಾಲ ಆಗಿತ್ತು. ತೈಲ ದರವು ಉಚ್ಚ ಮಟ್ಟದಲ್ಲಿತ್ತು. ಶೀಘ್ರವಾಗಿ ವಿಸ್ತಾರಗೊಳ್ಳುತ್ತಿದ್ದ ಯುರೋಪೇಟೆಯಲ್ಲಿ ಪೆಟ್ರೋ ಡಾಲರುಗಳ ಕುದಿ ಏರಿತ್ತು. ಈ ರೇಪುಗಳು ಜಮಾಯಿಸುತ್ತಿದ್ದ ಹಾಗೆಯೇ ಅವುಗಳನ್ನು ಬ್ಯಾಂಕ್ ಅಧಿಕಾರಿಗಳು ವಿಶ್ವದ ಮೂಲೆ ಮೂಲೆಯಲ್ಲಿರುವ ಅಭಿವೃದ್ಧಶೀಲ ರಾಷ್ಟ್ರಗಳಿಗೆ ರವಾನಿಸುತ್ತಿದ್ದರು. ಇದರಲ್ಲಿ ಬಹಳಷ್ಟು ಹಣವು ಅಲ್ಪಾವಧಿಯಲ್ಲಿಯೇ ಹಿಂತಿರುಗಿಬರುತ್ತಿತ್ತು. ಇದು ಬ್ಯಾಂಕುಗಳಿಗೆ ಸರಿ ಹೊಂದಿಕೆಯಾಯಿತು. ಏಕೆಂದರೆ, ಒಂದೇ ಸಾಲದ ರಕಮಿಗೆ ಈಗ ಅವರಿಗೆ ದುಪ್ಪಟ್ಟು ಹಣ ಹಿಂತಿರುಗುತ್ತಿತ್ತು. ಮೊದಲು ರೇವು ರೂಪದಲ್ಲಿ, ನಂತರ ಬಡ್ಡಿ ರೂಪದಲ್ಲಿ ಇನ್ನು ಸಾಲಗಾರ ದೇಶಗಳಿಗೂ ಸಹ ಸಮಂಜಸ, ಉಚ್ಚ ರಫ್ತು ಬೇಟೆಗಳ ಅನುಕೂಲವಿತ್ತು. ಇದರಿಂದ ಪೆಟ್ರೋಲಿಯಂ ರಫ್ತು ದೇಶಗಳ ಸಂಘದಲ್ಲಿರದ ದೇಶಗಳೂ ಸಹ, ತಮ್ಮ ವ್ಯಾಪಾರಿ ಕೊರತೆಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಅನುವು ದೊರೆಯಿತು.

1978 ರಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ಹರಿದು ಬರುವ ನಿಕ್ಕಿ ಅಧಿಕೃತ ಹಣದ ಮೊತ್ತವು (ಅಂದರೆ ಬಂಡವಾಳ ಹಾರಿಕೆಯನ್ನು ಬಿಟ್ಟು) 31.6 ಲಕ್ಷ ಕೋಟಿ ಡಾಲರುಗಳ ತುತ್ತ ತುದಿಗೇರಿತು. ಆದರೆ, ಅಷ್ಟರಲ್ಲಿ ತೊಂದರೆಯು ಮೇಲೇರಿ ಕಾಣಿಸಲಾರಂಭಿಸಿತು. ಈ ದೇಶಗಳ ಸಾಲ ಒಟ್ಟು ರಾಷ್ಟ್ರೀಯ ಉತ್ಪನ್ನಗಳ ಸರಾಸರಿ ಪ್ರಮಾಣವು ಬಹುತೇಕ ಶೇ. 28 ರಷ್ಟಿತ್ತು. ಈ ಪ್ರಮಾಣವು ದಶಕದ ಆರಂಭದಲ್ಲಿದ್ದುದಕ್ಕಿಂತ ಶೇ. 10 ರಷ್ಟು ಹೆಚ್ಚಿತ್ತು. ಇದು ಮುಂಬರುವ ಘಟನೆಗಳಿಗೆ ಸ್ಪಷ್ಟ ಎಚ್ಚರಿಕೆಯಂತಿತ್ತು. ಮುಂದಿನ ಎರಡು ವರ್ಷಗಳಲ್ಲಿ ಒಳ ಬರುವ ಬಂಡವಾಳದ ನಿಕ್ಕಿ ಮೊತ್ತದಲ್ಲಿ ಇಳಿತಾಯವಾದರೂ ಸಹ, ಕಡಿಮ ಅಭಿವೃದ್ಧ ದೇಶಗಳ ಒಟ್ಟು ಸಾಲವು ಹೆಚ್ಚಿತು. ಸಾಲದ ಬಲೆಯು ಅವುಗಳನ್ನು ಆವರಿಸತೊಡಗಿತು.

1980 ರಲ್ಲಿ ಘಟಿಸಿದ ಎರಡನೆಯ ತೈಲ ದರದ ಏರಿಕೆಯು ಸಾಲ ದುರಂತವನ್ನು ತ್ವರಿತಗೊಳಿಸಿತು. ಪೆಟ್ರೋಲಿಯಂ ದರಗಳ ಈ ಅನಿರೀಕ್ಷಿತ ಏರಿಕೆಯು ಪಾಶ್ಚಾತ್ಯ ಅರ್ಥ ವ್ಯವಸ್ಥೆಗಳಲ್ಲಿ ಒಮ್ಮೆಲೇ ಹಿನ್ನಡೆಯಾಗುವಂತೆ ಮಾಡಿತು. ಅವುಗಳ ವಿದೇಶಿ ಪೇಟೆಗಳು ಕುಂಠಿತವಾದವು. ಅಭಿವೃದ್ಧಿಶೀಲ ದೇಶಗಳ ರಫ್ತು ದರಗಳು ಮೇಲಕ್ಕೆ ಪುಟಿದೆದ್ದವು. ಇದು ದುಬಾರಿ ಎಣ್ಣೆಗೆ ಸಂಬಂಧಿಸಿದಂತೆ ಕೂಡಲೇ ಅವುಗಳ ವ್ಯಾಪಾರೀ ಕೊರತೆಗಳನ್ನು ದ್ವಿಗುಣಗೊಳಿಸಿತು. (1978 ರಲ್ಲಿ ಇದ್ದ 45 ಲಕ್ಷ ಕೋಟಿ ಡಾಲರುಗಳಿಂದ 1981 ರಲ್ಲಿ 90 ಲಕ್ಷ ಕೋಟಿ ಡಾಲರಿಗೆ ಏರಿತು.)

ಈಗ ಬ್ಯಾಂಕುಗಳು ಎಚ್ಚರಗೊಂಡವು. ಕಡಿಮೆ ಅಭಿವೃದ್ಧ ದೇಶಗಳ ಋಣಭಾರವು ನಿರ್ಲಕ್ಷಿಸಲಾರದ ಮಟ್ಟ ತಲುಪಿದೆ, ಸಾಲಗಾರರು ಆರಂಭಿಸಿದ ದರದನ್ವಯ (ಫ್ಲೋಟಿಂಗ ರೇಟ್) ಹಣವನ್ನು ಸಾಲವಾಗಿ ಪಡೆದಿದ್ದರು. ಆದ್ದರಿಂದ, ತೈಲ ಪ್ರೇರಿತ ಹಣದುಬ್ಬರದ ಪರಿಣಾಮವಾಗಿ ಬಡ್ಡಿದರಗಳ ಏರಿಕೆಯು ಅವುಗಳ ಭಾರವನ್ನು ಇನ್ನಷ್ಟು ಉಲ್ಬಣಗೊಳಿಸಿತು.

ಇತ್ತ ಲ್ಯಾಟಿನ್ ಅಮೇರಿಕೆಯು ಬೇರೊಂದು ಸಮಸ್ಯೆಯನ್ನು ಎದುರಿಸಿತು. ಅದರ ಸಾಲದ ಬಹುತೇಕ ಶೇಕಡಾ 40 ರಷ್ಟು ಪಾಲನ್ನು ಹನ್ನೆರಡು ತಿಂಗಳುಗಳೊಳಗೇ ತೀರಿಸಬೇಕಿತ್ತು. ಇನ್ನು ಶೇ. 70 ರಷ್ಟನ್ನು ಮೂರು ವರ್ಷಗಳಲ್ಲಿ ತೀರಿಸಬೇಕಿತ್ತು. ಹೀಗೆ ಸಾಲಗಾರರು ಧೃತಿಗೆಟ್ಟು ಹೊಸ ಬಂಡವಾಳ ಕೂಡಿಸಲು ಉದ್ಯುಕ್ತರಾದಾಗ ಬ್ಯಾಂಕಿನವರು ಸಾಲದ ಪೇಚಿನ ಬಗೆಗೆ ಎಚ್ಚತ್ತು, ತಮ್ಮ ಮನಸ್ಸನ್ನು ಬದಲಿಸಿದರು. ಇನ್ನು ಮುಂದಿನದು ಅನಿವಾರ್ಯವಷ್ಟೇ. 1982 ರಲ್ಲಿ ತೀವ್ರ ವಿದೇಶಿ ವಿನಿಮಯ ಕೊರತೆಯನ್ನು ಎದುರಿಸುತ್ತಿದ್ದ ಮೆಕ್ಸಿಕೋ ದೇಶವು ತನ್ನ ವಿದೇಶ ಸಾಲದ ಮೇಲಿನ ಮುಂಬರುವ ಬಡ್ಡಿ ಮರುಪಾವತಿ ಮಾಡಲು ತಾನು ಅಸಮರ್ಥವಾಗಿದೆಯೆಂದು ಸಾರಿದಾಗ, ಸಾಲ ದುರಂತವು ಔಪಚಾರಿಕವಾಗಿ ಸ್ಫೋಟಗೊಂಡಿತು. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ಉಳಿದ ಅಭಿವೃದ್ಧಿಶೀಲ ದೇಶಗಳು ಸಹ ಮೆಕ್ಸಿಕೋದ ದುಸ್ಥಿತಿಯ ಹಾದಿ ಹಿಡಿದವು.

ಪಾಶ್ಚಿಮಾತ್ಯ ಹಣಕಾಸಿನ ಸಂಸ್ಥೆಗಳ ಆರಂಭದ ಪ್ರತಿಕ್ರಿಯೆಯು ಶೀಘ್ರ ಮತ್ತು ನಿರ್ಣಾಯಕವಿತ್ತು. ವ್ಯವಸ್ಥೆಯ ಅಸ್ತಿತ್ವವೇ ಅಪಾಯದಲ್ಲಿ ಇರುವಾಗ ಸಾಲ ನೀಡಿದ ಬ್ಯಾಂಕುಗಳು, ತಾವು ನೀಡಿದ ಸಂಕಟಗ್ರಸ್ತ ಸಾಲ ಮೊತ್ತವು ಕಾಗದದ ಮೇಲಿನ ಹಾನಿಗಳನ್ನು ಬಹಳ ಹೊಂದದಂತೆ ಭರವಸೆ ಪಡೆಯುವುದಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದವು. ಅಂತಾರಾಷ್ಟ್ರೀಯ ಹಣಕಾಸು ನಿಧಿ, ಜಾಗತಿಕ ಬ್ಯಾಂಕ್ ಹಾಗೂ ಅಂತಾರಾಷ್ಟ್ರೀಯ ಹೊಂದಾಣಿಕೆ ಬ್ಯಾಂಕು ಈ ಮೂರರ ಧುರೀಣತ್ವದ ಮುಖಾಂತರ, ಸಾಲಗಾರ ರಾಷ್ಟ್ರಗಳಿಗೆ ಪಾರುಗಾಣಲು ಹಣಕಾಸನ್ನು ಒದಗಿಸುವ ವ್ಯವಸ್ಥೆ ಮಾಡಲಾಯಿತು. ಮತ್ತು ಈ ಎಲ್ಲ ಪ್ರಕರಣಗಳಲ್ಲಿ, ಸಾಲಗಾರರ ಮುದ್ದತು ಮೀರಿದ ಸಾಲಗಳ ಕರಾರುಗಳನ್ನು ಕೂಡಲೇ ಸಾಲ ಮರುಪಾವತಿ ಮಾಡುವ ಭಾರವನ್ನು ಹಗುರುಗೊಳಿಸುವಂತೆ ಪುನರ್ರಚಿಸಲಾಯಿತು.

ಈ ಉಪಾಯಗಳು ಅವುಗಳ ಉದ್ದೇಶವನ್ನು ಸಫಲಗೊಳಿಸಿದವೇನೋ ನಿಜ. ಹಣಕಾಸು ಕರಗಿ ಹೋಗುವುದನ್ನು ತಪ್ಪಿಸಲಾಯಿತು. ಮತ್ತು ಬ್ಯಾಂಕುಗಳು ಹಾನಿಯ ಲೆಕ್ಕಹಾಕುತ್ತ ಕುಳಿತುಕೊಳ್ಳುವುದಕ್ಕೆ ತಾತ್ಪೂರ್ತಿಕ ವಿರಾಮ ನೀಡಿದವು. ಆದರೂ ಸಹ, ಸಾಲಗಾರ ದೇಶಗಳಲ್ಲಿ ಲಂಗುಲಗಾಮಿಲ್ಲದ ಆರ್ಥಿಕ ಕ್ಷೋಭೆಯನ್ನು ಶಮನಗೊಳಿಸುವಲ್ಲಿ ಅವು ಅಲ್ಪ ಪ್ರಯತ್ನ ಮಾಡಿದವು. ಅಲ್ಲಿ ಜೀವನ ಮಟ್ಟಗಳು ಎರಡು ವರ್ಷಾವಧಿಯಲ್ಲಿ ಕೆಳಕ್ಕಿಳಿದವು. ಮತ್ತು ಇನ್ನೂ ಅದರಿಂದ ಗುಣ ಹೊಂದಿಲ್ಲ. ಈ ದೇಶಗಳ ಹೆಸರೆತ್ತಿದರೆ ಸಾಕು, ಬೆಚ್ಚಿ ಬೀಳುವ ಬ್ಯಾಂಕಿನವರು ಹೊಸ ಹೊಸ ಸಾಲ ನೀಡಲು ನಿರಾಕರಿಸಿದರು. ಇದರ ಪರಿಣಾಮವಾಗಿ ಸಾಲಗಾರ ದೇಶಗಳಿಗೆ ಬರುವ ನಿಕ್ಕಿ ವಿದೇಶಿ ಬಂಡವಾಳವು ವಾಸ್ತವದಲ್ಲಿ ಋಣಾತ್ಮಕವಾಯಿತು. ವಿದೇಶಿ ಪತ್ತಿನ ಪೇಟೆಯೊಂದಿಗಿನ ತಮ್ಮ ಜೋಡಣೆಯಿಂದ ಅವುಗಳ ಹಣ ಬಸಿದುಹೋಯಿತೇ ಹೊರತು ಅದರಿಂದ ಅವುಗಳು ಶ್ರೀಮಂತವಾಗಲಿಲ್ಲ.

ಸಾಲ ಪರಿಹಾರ ಯೋಜನೆಗಳು :

ಹೊಸ ಸಾಲಗಳಿಗಾಗಿ ತಮ್ಮ ಧೃತಿಗೆಟ್ಟ ಹುಡುಕಾಟದಲ್ಲಿ ಅನೇಕ ಸಾಲಗಾರರು ಅಂತಾರಾಷ್ಟ್ರೀಯ ಹಣಕಾಸು ನಿಧಿಯತ್ತ ಹೊರಳಿದರು. ಇದೊಂದು ಪ್ರೀತ್ಯಾದರ ವಿಹೀನ

ಆಶ್ರಯವಾಯಿತು. ಕಡಿಮೆ ಅಭಿವೃದ್ಧ ದೇಶಗಳು ಅಂತಾರಾಷ್ಟ್ರೀಯ ಆಕ್ರಮಣಕಾರೀ ಹಣಕಾಸು ನಿಧಿ ಸಹಾಯ ಕೋರಿದಾಗ, ಈ ಸಹಾಯಕ್ಕೆ ತಕ್ಕ ಬೆಲೆ ತೆತ್ತಬೇಕೆಂಬುದನ್ನು ಅವರು ಕಂಡುಕೊಂಡರು. ಮೊದಲು ಆ ದೇಶವು ಆಕ್ರಮಣಕಾರೀ ರಫ್ತು ಪ್ರೋತ್ಸಾಹಕ ಧೋರಣೆಯನ್ನು ಅಳವಡಿಸಿ ಕೊಳ್ಳಬೇಕು. ಇದರ ಯಶಸ್ಸು ಆ ದೇಶವು ಹುಟ್ಟುಹಾಕುವ ವ್ಯಾಪಾರೀ ಹೆಚ್ಚುವರಿಯ ಪ್ರಮಾಣವನ್ನವಲಂಬಿಸಿರುತ್ತದೆ. ಎರಡನೆಯದಾಗಿ, ಸರಕಾರಿ ವೆಚ್ಚವನ್ನು ತಗ್ಗಿಸುವ ಸಲುವಾಗಿ ವ್ಯರ್ಥ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಬಿಡಬೇಕಾಗುತ್ತದೆ. ಬೇರೆಡೆಗೆ ಮುಖದಿರುಹಲು ಅವಕಾಶವೇ ಇಲ್ಲದಿರುವಾಗ, ಬಹುತೇಕ ರಾಷ್ಟ್ರಗಳು ಈ ಬೇಡಿಕೆಗಳಿಗೆ ತಲೆಬಾಗಿದವು. ಈ ಬೇಡಿಕೆಗಳು, ಈಗಾಗಲೇ ಬಳಲುತ್ತಿರುವ ಸಾಲಗಾರ ರಾಷ್ಟ್ರಗಳನ್ನು ಎಷ್ಟು ಘಾಸಿಗೊಳಿಸಿವೆ ಎಂಬುದನ್ನು ಶ್ರೀ ಸೂಸನ್ ಚಾರ್ಜರು ಜಮೇಕಾದಲ್ಲಿ ಖನಾಯಿತೆಂಬ ಬಗ್ಗೆ ಬಣ್ಣಿಸಿದುದನ್ನು ತಿಳಿದು ಅಂದಾಜಿಸಬಹುದು.

"ಸಾರ್ವಜನಿಕ ರಂಗವೊಂದರಿಂದಲೇ 6200 ಹುದ್ದೆಗಳನ್ನು ಕಡಿಮೆ ಮಾಡ ಲಾಯಿತು. ಇದರಲ್ಲಿ 1500 ನ್ನು ಆರೋಗ್ಯ ಮಂತ್ರಾಲಯದ ಮುಂಗಡ ಪತ್ರದಿಂದ ಕಡಿಮೆ ಮಾಡಲಾಯಿತು. ಸಾರ್ವಜನಿಕ ಬಂಡವಾಳ ಹೂಡಿಕೆಗಳು ಶೇ. 30 ರಷ್ಟು ಇಳಿಮುಖವಾದವು. ಆಹಾರದ ಸಹಾಯಧನ ಮಾಯವಾಯಿತು. ಕನಿಷ್ಠ ವೇತನವನ್ನು ಪ್ರತಿವಾರ 8.95 ಡಾಲರಿಗೆ ಇಳಿಸಿದ್ದರಿಂದ ನೈಜ ಆದಾಯವೂ ಇಳಿಯಿತು. 1984 ರ ವರ್ಷವು ಜಮೇಕಾಕ್ಕೆ ಜಯಪ್ರದ ವರ್ಷವೆಂದು ಜಾಗತಿಕ ಬ್ಯಾಂಕು ಕರೆಯುವುದನ್ನು ಅನೇಕರು ಅರ್ವೇಲಿಯನ್ ಖಾಯೆಯೆಂದು ಕರೆಯಬಹುದು. "ಗುರಿಗಳನ್ನು (ಐ.ಎಂ.ಎಫ್) ಸಾಧಿಸುವ ಆಹ್ವಾನಕ್ಕೆ ಅರ್ಥ ವ್ಯವಸ್ಥೆಯ ಪ್ರತಿಸ್ಪಂದನವನ್ನು ತಾರತಮ್ಯ ಪದಗಳಲ್ಲಿ ಬಣ್ಣಿಸಬಹುದಾಗಿದೆ" ಎಂದು ಸರಕಾರವೇ ಸ್ವತಃ ಡೋಲು ಬಾರಿಸಿತು. ಸಂತೋಷಿಸುವುದೇಕೆ? ಏಕೆಂದರೆ, ಸಂದಾಯ ಬಾಕಿಯು 28.9 ಕೋಟಿ ಡಾಲರಿನಿಂದ 22.5 ಕೋಟಿ ಡಾಲರಿಗೆ ಬದಲಾಗಿತ್ತು" (2, ಪು. 175–6).

ಕಡಿಮೆ ಅಭಿವೃದ್ಧ ದೇಶಗಳಲ್ಲಿರುವ ಸ್ಪರ್ಧಾತ್ಮಕ ಪರಿಸ್ಥಿತಿಯ ಅಭಾವವೇ ಈ ಎಲ್ಲ ಸಮಸ್ಯೆಗಳು ಟಿಸಿಲೊಡೆಯುವುದಕ್ಕೆ ಮೂಲವೆಂದು ಪಶ್ಚಿಮ ದೇಶಗಳಲ್ಲಿ ಪ್ರಚಲಿತ ವಿರುವ ಪ್ರಬಲ ದೃಷ್ಟಿಕೋನ. ಸಾರ್ವಜನಿಕ ರಂಗ, ಸರಕಾರಿ ದರ ನಿಯಂತ್ರಣಗಳು, ಆಹಾರ ಸಹಾಯ ಧನ, ಮತ್ತು ಸಂರಕ್ಷಣಾತ್ಮಕ ವ್ಯಾಪಾರೀ ಧೋರಣೆಗಳತ್ತ ಈ ದೃಷ್ಟಿಕೋನದ ಪ್ರತಿಪಾದಕರು ಬೆರಳೆತ್ತಿ ತೋರಿಸುತ್ತಿದ್ದಾರೆ. ಮತ್ತು ಈ ಸಂರಚನಾತ್ಮಕ ಸಮಸ್ಯೆಗಳಿಂದ ಪೋಷಣೆ ಪಡೆದ ಉತ್ಪಾದಕತೆಯ ಅದಕ್ಷತೆಯಿಂದಾಗಿ ಅರ್ಥವ್ಯವಸ್ಥೆಯು ವಿಸ್ತರಿಸುವಲ್ಲಿ ಅಯಶಸ್ವಿಯಾಗಿದೆ. ಆದರೇನು? ಸಂರಚನಾತ್ಮಕ ಸುಧಾರಣೆಯ ದೀರ್ಘಾವಧಿ ಪ್ರಕ್ರಿಯೆಯಷ್ಟೇ. ಇನ್ನು ಸಾಲಗಾರರ ಅನೇಕ ಸಮಸ್ಯೆಗಳಾದರೋ ಸದ್ಯದವು. ಸಾಲಗಾರರು ಸಂರಚನಾತ್ಮಕ ಸುಧಾರಣೆಗಳನ್ನು ಕಾರ್ಯಗತಗೊಳಿಸಿದರೆ ಮತ್ತು ತತ್ಕಾಲಕ್ಕೆ ಸಾಲ ನೀಡುವ ಸಂಸ್ಥೆಗಳು ಕಡಿಮೆ ಬಡ್ಡಿ ದರದನ್ವಯ ಅಲ್ಪಕಾಲೀನ ಸಾಲವನ್ನು ನೀಡಿದರೆ ಮಾತ್ರ ದುರಂತವನ್ನು ಪರಿಹರಿಸಬಹುದಾಗಿದೆ. ಒಮ್ಮೆ ಈ ದೇಶಗಳು ಸುಧಾರಿಸಿಕೊಂಡರೆ, ಅವು ತಮ್ಮೆಲ್ಲ

ಋಣಭಾರವನ್ನು ಪೂರ್ಣ ತೀರಿಸಬಹುದು. ಸ್ವಾಭಾವಿಕವಾಗಿ, ಈ ಹೊಣೆಗೆಟ್ಟ ಸಮಾಜಗಳು ತಮಗೆ ಕೊಡಮಾಡಿದ ಸವಲತ್ತುಗಳನ್ನು ದುರುಪಯೋಗಿಸಬಾರದೆಂದು ಖಚಿತಪಡಿಸಿಕೊಳ್ಳಲು ಈ ದೇಶಗಳಿಗೆ ಹೊಸ ಸಾಲ ನೀಡಿಕೆಯು ಸಂರಚನಾತ್ಮಕ ಪರಿವರ್ತನೆಯನ್ನ ಅವು ಗಯ್ದು ಪ್ರಗತಿಯನ್ನೇ ಅವಲಂಬಿಸಿದೆ.

1985 ರಲ್ಲಿ ಸಂಯುಕ್ತ ಸಂಸ್ಥಾನಗಳ ಹಣಕಾಸಿನ ಕಾರ್ಯದರ್ಶಿ ಜೇಮ್ಸ ಬೇಕರರು ಸೂಚಿಸಿದ, ತುಂಬಾ ಪ್ರಚಾರ ಪಡೆದ ಯೋಜನೆಯಲ್ಲಿ ಈ ಹಾದಿಯನ್ನು ಚೆನ್ನಾಗಿ, ಸಾರವತ್ತಾಗಿ ನೀಡಲಾಗಿದೆ. ಬೇಕರನ ಅಭಿಪ್ರಾಯದ ಮೇರೆಗೆ, 29 ಲಕ್ಷ ಕೋಟಿ ಡಾಲರ ಹಣವನ್ನು ಮೂರು ವರ್ಷಾವಧಿಯಲ್ಲಿ 15 ಪಾತ್ರಿ ದೇಶಗಳಿಗೆ ನೀಡುವದಾಗಿತ್ತು. ಇದರ ಪೈಕಿ ವಾಣಿಜ್ಯ ಬ್ಯಾಂಕುಗಳು 20 ಲಕ್ಷ ಕೋಟಿ ಡಾಲರುಗಳನ್ನೂ ಮತ್ತು ಜಾಗತಿಕ ಬ್ಯಾಂಕು ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿಗಳು ಬಾಕಿ 9 ಲಕ್ಷ ಕೋಟಿ ಡಾಲರಗಳನ್ನೂ ಕೊಡಲಿದ್ದವು. ಸಾಲದೆ, ಕಡುಬಡವ ಸಾಲಗಾರ ದೇಶಗಳಿಗೆ ಅಂದರೆ ತಲಾ 550 ಡಾಲರಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ, ದೇಶಗಳಿಗಾಗಿ ಅಂತಾ ರಾಷ್ಟ್ರೀಯ ಹಣಕಾಸು ನಿಧಿಯು ಶೇ. 27 ಲಕ್ಷ ಕೋಟಿ ಡಾಲರುಗಳ ಪ್ರತ್ಯೇಕ ವಿಶ್ವಸ್ಥ ನಿಧಿಯನ್ನು ಸ್ಥಾಪಿಸುವುದಿತ್ತು.

ಇದಕ್ಕೆ ಪ್ರತಿಯಾಗಿ, ಪಾತ್ರಿ ದೇಶಗಳು ಕಟ್ಟುನಿಟ್ಟಿನ ಕರಾರು–ಪಟ್ಟಿಗೆ ಬದ್ಧವಾಗಬೇಕಿತ್ತು. ವ್ಯಾಪಾರಿ ಉದಾರೀಕರಣ, ರಫ್ತು ಸಾಮರ್ಥ್ಯದ ಹೆಚ್ಚಳ, ಸಾರ್ವಜನಿಕ ರಂಗದ ಕಂಪನಿಗಳ ಖಾಸಗೀಕರಣ, ಮತ್ತು ದರ ನಿಯಂತ್ರಣದ ನಿವಾರಣೆಗಳೇ ಕರಾರುಪಟ್ಟಿಯ ವಿಷಯಗಳು. ಕಾಲಕ್ರಮೇಣ, ಬಂಡವಾಳವಾದದ ಈ ಪ್ರಬಲ ಗುಟುಕು, ಈ ಮುಕ್ತ ಅರ್ಥವ್ಯವಸ್ಥೆಗಳಿಗೆ ಆರೋಗ್ಯ ಮತ್ತು ಹುಮ್ಮಸ್ಸು ತರುವುದೆಂದು ಬೇಕರ ಆಶ್ವಾಸನೆ ನೀಡಿದನು. ಸುಧಾರಣೆಗಳು ಅಲ್ಪಕಾಲದಲ್ಲಿ ಸ್ವಲ್ಪ ನೋವುಂಟು ಮಾಡುತ್ತವೆಯೆಂಬುದಂತೂ ಸ್ಪಷ್ಟ ಕೆಲಸಗಾರರನ್ನು ಕಿತ್ತು ಹಾಕಲಾಗುವುದು. ಸರಕಾರೀ ವರ್ಗಾವಣೆಯ ಫಲಾನುಭವಿಗಳ ಬಳಕೆಯ ಮಟ್ಟ ಇಳಿಯುವುದು. ಮತ್ತು ವಿದೇಶೀ ಸ್ಪರ್ಧೆಯಿಂದ ಸ್ಥಳೀಯ ವ್ಯವಹಾರ ಸಂಸ್ಥೆಗಳು ಜಾಗ ಬಿಡಬೇಕಾಗಬಹುದು. ಆದರೂ ಸಹ ಈ ದೇಶಗಳು ಸುಧಾರಿಸಿಕೊಳ್ಳಬೇಕಾದರೆ ಈ ಸಂಗತಿಗಳು ಅನಿವಾರ್ಯವಾಗಿವೆಯೆಂದು ಬೇಕರನ ಅಭಿಮತ.

ಈ ಪ್ರಸ್ತಾವ ಕುರಿತು ಸಂಭಾವ್ಯ ಪಾತ್ರಿಗಳು ವೈಯಕ್ತಿಕವಾಗಿ ನಿರುತ್ಸಾಹಿಗಳಾಗಿದ್ದರು. ಪ್ರಾರಂಭದಲ್ಲಿ ಯೋಜನಾನುಸಾರ ಬರಬಹುದಾದ ಹಣ ಸಾಕಷ್ಟಿರಲಿಲ್ಲ, ಮೆಕ್ಸಿಕೋದ ವಾರ್ಷಿಕ ಬಡ್ಡಿಯು ಮರುಪಾವತಿಯ (12 ಲಕ್ಷಕೋಟಿ ಡಾಲರು) ಯೋಜನೆಯಡಿ ಪಾಲ್ಗೊಳ್ಳುವ ಎಲ್ಲ ದೇಶಗಳಿಗೆ ಸಿಗಬಹುದಾದ ಹಣಕ್ಕಿಂತ ಹೆಚ್ಚಾಗಿತ್ತು. ಮೇಲಾಗಿ, ಬೇಕರನು ತನ್ನ ವ್ಯಾಸಂಗದಲ್ಲಿ ನಿರಾಸಕ್ತಿಯಿಂದ ಬಣ್ಣಿಸಿದ ಪರಿವರ್ತನೆಯ ವೆಚ್ಚವು, ನಿಜವಾಗಿ, ಆದೇಶಗಳು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ , ರುಲ್ಲನಿಸುವಂತಿತ್ತು. ಬೇಕರ ಯೋಜನೆಯು ಚಲ್ಲುವ ತುಣುಕುಗಳಿಗಾಗಿ ಈ ಕೇಡುಗಳನ್ನು ಮೈಮೇಲೆ ಹಾಕಿಕೊಳ್ಳಲು ಆ ದೇಶಗಳು ಸಿದ್ಧವಿರಲಿಲ್ಲ.

ವಾಣಿಜ್ಯ ಬ್ಯಾಂಕುಗಳು 20 ಲಕ್ಷ ಕೋಟಿ ಡಾಲರುಗಳನ್ನು, ಹೊಸದಾಗಿ ತೊಡಗಿಸಲು ಭಾರಿ ಮುಜುಗರಪಟ್ಟವು. ಆದರೆ ಖಾಸಗಿಯಾಗಿ ಈ ಹಣವು, ಸಾಲ ಬಾಕಿಯ ಮೇಲಿನ

ಬಡ್ಡಿಯ ಪಾವತಿ ರೂಪದಲ್ಲಿ ತಮಗೇ ಮರಳುವುದೆಂದು ಖಾಸಗಿಯಾಗಿ ತಿಳಿದೇ ಇತ್ತು. ಇನ್ನು ಸಂರಚನಾತ್ಮಕ ಸುಧಾರಣೆಯು ವಾಸ್ತವವಾಗಿ ಕಾರ್ಯ ರೂಪಕ್ಕಿಳಿದಿದ್ದರೆ, ಅವು ತಮ್ಮ ಸಾಲದ ಹಣವನ್ನು ಪೂರ್ಣ ಮರಳಿ ಪಡೆಯಬಹುದಾಗಿತ್ತು. ಈ ಚಿತ್ರಣವು ಅವರ ನಿರೀಕ್ಷೆಗೆ ಮೀರಿ ಉತ್ತಮತರವಾಗಿತ್ತು. ಸಂಯುಕ್ತ ಸಂಸ್ಥಾನದಲ್ಲಿ ಉದಿಸಿದ ದ್ವಿತೀಯ ಪೇಟೆಯಲ್ಲಿ ಈ ಸಾಲವು ಡಾಲರಿನ ಕೇವಲ 40 ಶತಾಂಶವಿತ್ತು.

ಬೇಕರ ಯೋಜನೆಗೆ ಅಷ್ಟಕ್ಕಷ್ಟೇ ಪ್ರತಿ–ಸ್ಪಂದನ ಬಂದುದನ್ನು ನೋಡಿ, ಪರಿಣತರು ಪರ್ಯಾಯ ಮಾರ್ಗೋಪಾಯಗಳನ್ನು ಸೂಚಿಸಿದರು. ಇವೆಲ್ಲವೂ 'ಜಾಗತಿಕ ಸಾಲ ಎಜೆನ್ಸಿ' ಸ್ಥಾಪನೆಯನ್ನೇ ಗುರಿಯಾಗಿಸಿಕೊಂಡಿದ್ದವು. ಈ ಎಜೆನ್ಸಿಗಳು ಕಡಿಮೆ ಅಭಿವೃದ್ಧಿ ದೇಶಗಳ ಸಾಲವನ್ನು ಕಡಿಮೆ ಮಾಡಿದ ದರಕ್ಕೆ ವಾಣಿಜ್ಯ ಬ್ಯಾಂಕುಗಳಿಂದ ಕೊಳ್ಳುವ ಮತ್ತು ಆ ಬಳಿಕ, ಈ ಕಡಿಮೆ ಮಾಡಿದ ಮೊತ್ತದೊಂದಿಗೆ ಸಾಲಗಾರ ದೇಶಗಳಿಗೇ ಮರಳಿಸಬೇಕೆಂದು ಸೂಚಿಸಲಾಯಿತು. ಈ ಎಜೆನ್ಸಿಯು ತನ್ನ ಸ್ವಂತ ಬಾಂಡುಗಳನ್ನು ಜಾರಿಗೊಳಿಸುತ್ತದೆ, ಮತ್ತು ಅವುಗಳನ್ನು ಬ್ಯಾಂಕುಗಳಿಗೆ, ಕಡಿಮೆ ಅಭಿವೃದ್ಧ ದೇಶಗಳಿಗೆ ನೀಡಿದ, ಡಿಸ್ಕೌಂಟ ಆದ ಸಾಲದ ಮೊತ್ತಕ್ಕೆ, ಮಾರಾಟ ಮಾಡುತ್ತದೆ ಎಂಬುದು ಈ ಪ್ರಸ್ತಾವದಿಂದ ಸೂಚ್ಯವಾಗುತ್ತಿದೆ. ಎಜೆನ್ಸಿಯು ಕಡಿಮೆ ಅಭಿವೃದ್ಧ ದೇಶದಿಂದ. ತನ್ನ ಬಾಕಿಯನ್ನು ಸಂಗ್ರಹಿಸುತ್ತಿದೆ ನಿಜ, ಆದರೆ ಹಾಗೆ ಮಾಡುವಾಗ ಅಧಿಕಾಧಿಕ ಸವಲತ್ತು ನೀಡುತ್ತದೆ. ಅದು ಬ್ಯಾಂಕುಗಳಿಗೆ ತಾನು ಕೊಡಬೇಕಾದ ಬಾಕಿಯನ್ನು ನೀಡುತ್ತದೆಯನೋ ನಿಜ. ಬ್ಯಾಂಕುಗಳು ಸಹ, ಇಂಥ ವಿನಿಮಯಕ್ಕೆ – ಅದು ಕಡಿಮೆ ಮಾಡಿದ ಮೊತ್ತಕ್ಕೆ – ತಮ್ಮ ಸಮ್ಮತಿ ನೀಡಬೇಕಾಗುತ್ತದೆ. ಏಕೆಂದರೆ, ಪ್ರತಿಫಲವಾಗಿ, ಅವು ತಮ್ಮ ಹಾನಿ–ಸಂಭಾವ್ಯತೆಯನ್ನು ಸಂಪೂರ್ಣ ನಿವಾರಿಸಿಕೊಳ್ಳುತ್ತವೆ.

ಈ ಎಲ್ಲ ಪ್ರಸ್ತಾವಗಳಲ್ಲಿ ಅಡಕವಾಗಿರುವ ಸಮಸ್ಯೆಯೆಂದರೆ, ಈ ದುರಂತದಲ್ಲಿ ಒಳಗೊಂಡ ಯಾವುದೇ ಸಂಸ್ಥೆಯು ಜಾಗತಿಕ ಸಾಲ ಎಜೆನ್ಸಿಯನ್ನು ಸ್ಥಾಪಿಸಲು ಬೇಕಾದ ಬಂಡವಾಳವನ್ನು ನೀಡಲು ಒಪ್ಪುತ್ತಿರಲಿಲ್ಲ. (ಇಲ್ಲವೆ ಕೆಲ ಪ್ರಕರಣಗಳಲ್ಲಿರುವಂತೆ ಹಾಗೆ ಮಾಡುವುದು ಸಾಧ್ಯವಿರಲಿಲ್ಲ.) ವಾಣಿಜ್ಯ ಬ್ಯಾಂಕುಗಳಿಂದಲೂ ಏನನ್ನೂ ನಿರೀಕ್ಷಿಸುವಂತಿರಲಿಲ್ಲ. ದುರಂತ ನಿವಾರಣೆಗೆ ತಗಲುವ ಯಾವುದೇ ವೆಚ್ಚ ಭರಿಸುವಲ್ಲಿ ಅವು ಮೊದಲಿನಿಂದಲೂ ವಿವೇಚನಾ ರಹಿತ ನಿಲುಮೆ ತಾಳಿದ್ದವು. ಆದರೂ ಸಹ, ಕೆಲವು ಸಾಲ ನೀಡುವ ದೇಶಗಳ ಸರಕಾರಗಳು ಪಾಲ್ಗೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆ ತೀರ ಅತಿಯಾಯಿತೇನೋ?.

ಈ ಪ್ರಸ್ತಾವಗಳು ಅಯಶಸ್ವಿಯಾದರೂ ಸಹ, ಅವು ದುರಂತ ಪರಿಹಾರದ ಪ್ರಯತ್ನಗಳಿಗೆ ಅಮೂಲ್ಯ ಕಾಣಿಕೆ ನೀಡಿವೆ. ದುರಂತವು ಆರಂಭಿಸಿದ ಲಾಗಾಯ್ತು ಪ್ರಪ್ರಥಮವಾಗಿ ಅವು ಸ್ಪಷ್ಟಪಡಿಸಿದುದೇನೆಂದರೆ, ಅಂತಿಮ ಪರಿಹಾರದಲ್ಲಿ ಸಾಲಗಾರ ದೇಶಗಳಿಗೆ ಭಾಗಶಃ ಋಣ ವಿಮೋಚನೆ ದೊರೆಯಬಹುದೆಂಬುದು. ಬೇಕರ ಯೋಜನೆಯು ವಾಣಿಜ್ಯ ಬ್ಯಾಂಕುಗಳಿಗೆ ಅವುಗಳ ಪೂರ್ಣ ಬಾಕಿ ಮರುಪಾವತಿ ಮಾಡಿಸಬೇಕೆಂಬ ಆಸಕ್ತಿ ಹೊಂದಿತ್ತು. ಅದಕ್ಕೆ ವ್ಯತಿರಿಕ್ತವಾಗಿ ಈ ಪ್ರಸ್ತಾವಗಳಲ್ಲಿ ಬ್ಯಾಂಕುಗಳು ತಮ್ಮ ಬಾಕಿ ಹಣದ ಮುಖ ಬೆಲೆಯಲ್ಲಿ ಸ್ವಲ್ಪು ಕಡಿಮೆ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದೆಂಬ

ಸಲಹೆಯಿತ್ತು. 1986 ರಲ್ಲಿ ನ್ಯೂಜರ್ಸಿಯ ಸಿನೇಟರ ಬಿಲ್ ಬ್ರಾಡ್ಲೇ ಸಲ್ಲಿಸಿದ ಪ್ರಸ್ತಾವದಲ್ಲಿ ಈ ಕಲ್ಪನೆಗೆ ಮೂರ್ತ ಸ್ವರೂಪ ಬಂದಿತು. ಈ ಯೋಜನೆಯು ತೃತೀಯ ಜಗತ್ತಿನ ಎಲ್ಲ ಸಾಲಗಾರರಿಗೆ ಭಾಗಶಃ ಋಣ ಪರಿಹಾರ ಒದಗಿಸುತ್ತದೆ. ಬ್ಯಾಂಕುಗಳು ಮಾತ್ರ ಈ ಯೋಜನೆಯನ್ನು ಕೂಡಲೇ ತಿರಸ್ಕರಿಸಿದವು. ತಮಗೆ ಸಾಲ ಕೊಟ್ಟವರು ಸ್ವಯಂ ಸ್ಫೂರ್ತಿಯಿಂದ ಸಾಲ ಪರಿಹಾರವನ್ನು ಕೊಡಮಾಡಬೇಕೆಂದು ಸಾಲಗಾರ ರಾಷ್ಟ್ರಗಳೇಕೆ ಹಾದಿ ಕಾಯಬೇಕು ? ಅವುಗಳ ಋಣಭಾರವು ತಮ್ಮ ತಮ್ಮ ಜನರಿಗೆ ತೀವ್ರ ಸಂಕಷ್ಟವನ್ನು ಉಂಟು ಮಾಡಿರುವುದರಿಂದ ಅವುಗಳೇಕೆ ತಮ್ಮ ಸಾಲದ ಹೊಣೆಯನ್ನು ಅಲ್ಲಗಳೆಯಬಾರದು? ಸಾರ್ವಭೌಮ ಸರಕಾರಗಳು ಸಾಲ ಮರುಪಾವತಿಸಲು ನಿರಾಕರಿಸುವುದು ಅಂತಾರಾಷ್ಟ್ರೀಯ ಕೊಡುಕೊಳ್ಳುವಿಕೆಯಲ್ಲಿ ತೀರ ಹೊಸತು. 1940 ರ ದಶಕದಲ್ಲಿ ಸಂಭವಿಸಿದ ಅಮೇರಿಕೆಯ ದುರಂತ ಮತ್ತು 1930 ರ ದಶಕದಲ್ಲಿ ಸಂಭವಿಸಿದ ಲ್ಯಾಟೀನ್ ಅಮೇರಿಕೆಯ ದುರಂತಗಳು ಇಂಥ ನಿರಾಕರಣೆಯಲ್ಲಿ ಪರಿಸಮಾಪ್ತಿಗೊಂಡವು. ಅಂದಮೇಲೆ, 1980 ರ ದಶಕದ, ಕಡಿಮೆ ಅಭಿವೃದ್ಧ ದೇಶಗಳ ದುರಂತದಲ್ಲೇಕೆ ಅಂಥ ನಿರಾಕರಣೆ ಬೇಡ?

ಈ ದುರಂತ ಮತ್ತು ಅದರ ಮುಂಚಿನ ದುರಂತಗಳಲ್ಲಿ ಅಂತರವಿದೆ. ಆ ಅಂತರವೆಂದರೆ, ಸಾಲ ಕೊಟ್ಟವರ ಪಕ್ಷದಲ್ಲಿರುವ ಸಜ್ಜುಗೊಂಡ ಶಕ್ತಿಗಳು ಈ ಹಿಂದೆ, ಸಾಲ ಕೊಟ್ಟವರು, ಸಾಮಾನ್ಯವಾಗಿ ಚಿಕ್ಕ ಸಂಖ್ಯೆಯ ದೊಡ್ಡ ವ್ಯಾಪಾರಿ ಸಂಸ್ಥೆಗಳು. ಅವುಗಳಿಗೆ ಸಮೂಹ ರೂಪದಲ್ಲಿ ಸಹ ಹೆಚ್ಚಿನ ವ್ಯವಹಾರ ಕುದುರಿಸುವ ಶಕ್ತಿ ಇರಲಿಲ್ಲ. 1930 ನೇ ದಶಕದ ಲ್ಯಾಟಿನ್ ಅಮೇರಿಕೆ ಸರಕಾರಗಳು ಏಕಪಕ್ಷೀಯವಾಗಿ ಸಾಲ ನಿರಾಕರಣೆಯನ್ನು ಘೋಷಿಸ ಬಲ್ಲವಾಗಿದ್ದವು. ವ್ಯಾಪಾರಸ್ಥರ ಬ್ಯಾಂಕುಗಳು ತಮಗೆ ತೀವ್ರ ಆತಂಕ ಒಡ್ಡಲಾರವೆಂಬ ಅರಿವು ಅವುಗಳಿಗಿತ್ತು. ಕೆಲವು ಕಾಲ ಯಾವದೇ ಅಂತಾರಾಷ್ಟ್ರೀಯ ಪತ್ತಿನ ಪೇಟೆಗೆ ಪ್ರವೇಶಿಸುವ ಅಧಿಕಾರವನ್ನು ಅವು ಕಳೆದುಕೊಂಡವೇನೋ ನಿಜ. ಆದರೆ, ಈ ಪೇಟೆಗಳು ಅದನ್ನು ಹೆಚ್ಚು ಕಾಲ ನೆನಪಿಟ್ಟುಕೊಳ್ಳಲಿಲ್ಲ. 1930 ರ ದಶಕದಲ್ಲಿ ಸಾಲ ಮರುಪಾವತಿಸಲು ನಿರಾಕರಿಸಿದ್ದ ಬಹುತೇಕ ರಾಷ್ಟ್ರಗಳು ಕಳೆದುಕೊಂಡಿದ್ದ ಪತ್ತು ಒಂದು ದಶಕದೊಳಗೇ ಮರುಕಳಿಸಿದುದನ್ನು ಕಂಡುಕೊಂಡವು.

ಪ್ರಸ್ತುತ ದುರಂತದಲ್ಲಿ, ಸಾಲಕೊಟ್ಟವರ ತರಗತಿಯಲ್ಲಿ ಬೃಹತ್ ಜಾಗತಿಕ ಬ್ಯಾಂಕ ವ್ಯವಹಾರ ಜಾಲದಲ್ಲಿ ಪರಸ್ಪರ ಬೆರತ ದೊಡ್ಡ ಸಂಖ್ಯೆಯ ವಾಣಿಜ್ಯ ಬ್ಯಾಂಕುಗಳು ಸೇರಿವೆ. ಅವುಗಳ ಸಂಕಲಿತ ಸಾಮೂಹಿಕ ಶಕ್ತಿ ಅಗಾಧ. 1983 ರಲ್ಲಿ ಸಂಯುಕ್ತ ಸಂಸ್ಥಾನಗಳ ವಾಣಿಜ್ಯ ಮಹಾಮಂಡಳದ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಮಾತಾಡುತ್ತ ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿ ಮಿ. ಆರ್.ಬಿ. ಮೆಕ್ನಮಾರ್ ಅವರು, ಸಾಲ ತೀರಿಸಲು ನಿರಾಕರಿಸಿದ ಸಂದರ್ಭದಲ್ಲಿ ಬ್ಯಾಂಕುಗಳಿಗ ಇರುವ ಆಯ್ಕೆಯ ರೂಪರೇಷೆಗಳನ್ನು ತಿಳಿಸಿದ್ದಾರೆ.

"ತನ್ನ ಸಾಲವನ್ನು ನಿರಾಕರಿಸುವ ದೇಶದ ವಿದೇಶಿ ಆಸ್ತಿಗಳನ್ನು ವಿಶ್ವಾದ್ಯಂತ ಸಾಲ ಕೊಟ್ಟ ದೇಶಗಳು ಮುಟ್ಟುಗೋಲು ಹಾಕುವವು; ಅದರ ರಫ್ತು ಮಾಲನ್ನು, ಅವು ಯಾವುದೇ

ಬಂದರದಲ್ಲಿ ಇಳಿದರೂ, ಜಪ್ತಿ ಮಾಡಲಾಗುವುದು. ಮತ್ತು ಅವುಗಳಿಗೆ ತೀರ ಆಗತ್ಯದ ಯಂತ್ರಗಳ ಹಾಗೂ ಬಿಡಿ ಭಾಗಗಳ ಪೂರೈಕೆ ಮೂಲವನ್ನು ಪೂರ್ಣ ಕಡಿದೊಗೆಯಲಾಗುವುದು. ಅನೇಕ ರಾಷ್ಟ್ರಗಳಲ್ಲಂತೂ ಆಹಾರದ ರಫ್ತನ್ನು ಸಹ ಮೊಟಕುಗೊಳಿಸಲಾಗುವದು. ಇದೇನು ಪ್ರಿಯವಾದ ಚಿತ್ರಣವಲ್ಲ" (4).

ಸಾಲಗಾರ ರಾಷ್ಟ್ರಗಳನ್ನು ಹಾದಿಗೆ ತರಲು ಸಂಯುಕ್ತ ಸಂಸ್ಥಾನಗಳ ಹಣಕಾಸು ಇಲಾಖೆಯು, ಕೆಲವು ವಸ್ತುಗಳ ಯಾದಿ ಸಿದ್ಧಪಡಿಸಿದೆ. ಸಾಲ ತೀರುವಳಿಯಲ್ಲಿ ತಪ್ಪಿದ ಸಾಲಗಾರ ರಾಷ್ಟ್ರಗಳಲ್ಲಿ, ಈ ವಸ್ತುಗಳ ಅಭಾವ ತಲೆದೋರುವಂತೆ ಮಾಡಲಾಗುವುದು. ಇಂಥ ಒಂದು ವಸ್ತುವೆಂದರೆ ಮಧುಮೇಹಕ್ಕಾಗಿ ಇನ್ಸುಲಿನ್. ಇದು ವರೆಗೆ, ಇಂಥ ಬೆದರಿಕೆಗಳು ಸಾಲಗಾರರನ್ನು ಕಟ್ಟಬಾಕೆದಾರರಾಗದಂತೆ ಮನವೊಲಿಸಿವೆ.

ಭಾರತದ ವಿದೇಶಿ ಸಾಲ :

ಭಾರತದ ಪ್ರಚಲಿತ ವಿದೇಶಿ ಸಾಲವು 45 ಲಕ್ಷ ಕೋಟಿ ಡಾಲರುಗಳಷ್ಟಿದೆ. ಹೀಗಾಗಿ ಅಭಿವೃದ್ಧಿಶೀಲ ದೇಶಗಳ ಪೈಕಿ ಅತಿದೊಡ್ಡ ಸಾಲಗಾರರಲ್ಲಿ ಭಾರತವು ನಾಲ್ಕನೆಯ ಸ್ಥಾನದಲ್ಲಿದೆ. ಆದರೂ ಸಹ, ಈ ಮೊದಲೇ ವಿವರಿಸಿದಂತೆ, ಅದು ಸಾಲಗ್ರಸ್ತ ಎಂದು ಪರಿಗಣಿತವಾಗಿಲ್ಲ. ಏಕೆಂದರೆ, ಇದುವರೆಗೆ ಅದು ತನ್ನ ಸಾಲ ಮರುಪಾವತಿ ನಿರ್ವಹಣೆಯನ್ನು ತನ್ನ ಅಳವಿನೊಳಗೇ ಇರಿಸಿಕೊಂಡು ಬಂದಿದೆ. ಒಂದು ರಾಷ್ಟ್ರದ ಸಾಲ ತೀರುವಳಿ ಸಾಮರ್ಥ್ಯವು, ಅದರ ವಿದೇಶಿ ವಿನಿಮಯ ಗಳಿಕೆಯಿಂದ ಸಾಲದ ಮೇಲಿನ ಬಡ್ಡಿ ಮರುಪಾವತಿ ಮಾಡುವ ಸಾಮರ್ಥ್ಯದಿಂದ ನಿರ್ಧಾರಿತವಾಗುತ್ತದೆ. ಈ ಸಾಮರ್ಥ್ಯದ ಸಾಮಾನ್ಯ ಸೂಚಿಯೆಂದರೆ, ಬಾಹ್ಯ ದೇಶಗಳಿಗೆ ಪಾವತಿಸುವ ಬಡ್ಡಿ ಮತ್ತು ರಫ್ತು ಗಳಿಕೆಗಳ ಪ್ರಮಾಣ. ಈ ಪ್ರಮಾಣ ಚಿಕ್ಕದಿದ್ದಷ್ಟೂ ಉತ್ತಮ, ಭಾರಿ ಋಣಭಾರದ ದೇಶಗಳೆಂದು ಜಾಗತಿಕ ಬ್ಯಾಂಕು ಗುರುತಿಸಿದ 17 ದೇಶಗಳಲ್ಲಿ ಈ ಪ್ರಮಾಣವು ಸರಾಸರಿ ಶೇ. 24 ರಷ್ಟಿದೆ. ಭಾರತದಲ್ಲಿ ಈ ಪ್ರಮಾಣವು ಶೇ. 10 ರಷ್ಟಿದೆ. ಭಾರತದ ವಿದೇಶಿ ಸಾಲದ ಪೈಕಿ, ಶೇ. 12 ಕ್ಕಿಂತ ಕಡಿಮೆ ಮೊತ್ತವು ಖಾಸಗಿ ಮೂಲದಿಂದ ಬರುತ್ತಿದೆ. ಇನ್ನುಳಿದ ಸಾಲವು ಇತರ ಸರಕಾರಗಳಿಂದಾಗಲಿ ಇಲ್ಲವೆ ಅತ್ಯಲ್ಪ ಬಡ್ಡಿ ದರದಂತೆ ಅಂತಾರಾಷ್ಟ್ರೀಯ ಸಾಲ ನೀಡುವ ಏಜೆನ್ಸಿಗಳಿಂದಾಗಲಿ ಬಂದಿದೆ.

ಆದರೂ ಸಹ, ಭಾರತವು ತನ್ನ ವಿದೇಶಿ ಸಾಲದ ಬಗ್ಗೆ ಉತ್ಸಾಹಿಯಾಗಿರಕೂಡದು. ಇದುವರೆಗೆ ರಫ್ತು ಗಳಿಕೆಗಳು ಬಡ್ಡಿಯ ಮರುಪಾವತಿ ಮಾಡಲು ಸಾಲವಷ್ಟಿದ್ದರೂ ಸಹ, ಸರಕಾರದ ಸಾಲ ತೀರುವಳಿ ಸಾಮರ್ಥ್ಯವು ನಿಜವಾಗಿ ತಲೆನೋವಾಗಿರುವ ಅದರ ಆಂತರಿಕ ಸಾಲದ ಕಾರಣ ಹೆಚ್ಚು ಹೆಚ್ಚಾಗಿ ಭೀಕರವಾಗುತ್ತಿದೆ. ಸತ್ಯಾಂಶವೆಂದರೆ, ಆಂತರಿಕ ರಂಗದಲ್ಲಿ ಭಾರತೀಯ ಸರಕಾರವು ಈಗಾಗಲೇ ಸಾಲ–ಜಾಲದ ಹಿಡಿತದಲ್ಲಿ ಸಿಕ್ಕುಬಿದ್ದಿದೆ. ಈ ಸಂದರ್ಭದಲ್ಲಿ ಅದು ತನ್ನ ಸಾಲಗಳನ್ನು ಮಾಡಬೇಕು. ಈ ಜಾಲದಲ್ಲಿ ತೀರ ಆಳವಾಗಿ ಸಿಕ್ಕಿ ಬೀಳುವ ಮುನ್ನವೇ ಸರಕಾವು ಜಾಲವನ್ನು ಹರಿದು ಹೊರಬರಬೇಕೆಂಬುದಂತೂ ಸುಸ್ಪಷ್ಟ. ಆದಾಗ್ಯೂ ಒಂದು ವೇಳೆ, ಅದು ಹೆಚ್ಚು ಹೆಚ್ಚು ನಾಣ್ಯಗಳನ್ನು ಪೂರೈಸುವ ಮೂಲಕ ಜಾಲ

ಮುಕ್ತವಾಗಲು ಯತ್ನಿಸಿದರೆ, ಅದರ ಪರಿಣಾಮವಾದ ಹಣದುಬ್ಬರವು ಅದರ ರಫ್ತು ನಿರ್ವಹಣೆಯನ್ನು ಬಾಧಿಸುತ್ತದೆ. ಮತ್ತು ಸರಕಾರದ ವಿದೇಶಿ ಸಾಲ ತೀರುವಳಿ ಸಾಮರ್ಥ್ಯವನ್ನು ಕೆಡಿಸುತ್ತದೆ.

ಪ್ರಯುತೀಯ ಪರಿಹಾರ :

ತೃತೀಯ ಜಗತ್ತಿನ ಸಾಲ ದುರಂತಕ್ಕೆ ಮೂರು ಪಾತ್ರಗಾರರು ಜವಾಬ್ದಾರರಾಗಿದ್ದಾರೆ. ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆ, ಬ್ಯಾಂಕುಗಳು ಮತ್ತು ಕಡಿಮೆ ಅಭಿವೃದ್ಧ ದೇಶಗಳ ಮುಖಂಡರು. ಈ ಮೂರು ಪಾತ್ರಿಗಳ ಲೋಭ ನಿಮಿತ್ತ ದುರಂತ ಘಟಿಸಿದೆ. ಆದರೂ ಸಹ, ಋಣಭಾರವೆಲ್ಲವೂ ಇದುವರೆಗೆ ಬಹುತೇಕ ಇಡಿಯಾಗಿ ಕಡಿಮೆ ಅಭಿವೃದ್ಧ ದೇಶಗಳ ಮೇಲೆಯೇ ಬಿದ್ದಿದೆ. ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆಯು ಅಪರಾಧಿಗಳಲ್ಲಿ ಒಂದಾಗಿದ್ದರೂ ಸಹ, ತೈಲೋತ್ಪಾದಕರ ಸಂಘವು ಭಾರದ ಭಾಗವನ್ನು ಹೊರಬೇಕೆಂದು ಇಂದಿನ ವರೆಗೆ ಯಾರೂ ಸೂಚಿಸಿಲ್ಲ. ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯು ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆಯಿಂದ ಲಾಭ ಗಿಟ್ಟಿಸಿರುವುದಂತೂ ನಿಜ. ಹೀಗಿರದಿದ್ದರೆ, ಕಡಿಮೆ ಅಭಿವೃದ್ಧ ದೇಶಗಳಿಂದ ತೈಲ ಬೇಡಿಕೆಯು ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿತ್ತು. ಆದರಿಂದ ತೈಲ ದರದ ಕುಸಿತವು ಹೆಚ್ಚು ಬೇಗ ಆಗುತ್ತಿತ್ತು. ಸಾಲ ದುರಂತ ಹುಟ್ಟಿಸುವಲ್ಲಿ ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯು ಕೇವಲ ಅಪರಾಧಿಯಷ್ಟೇ ಅಲ್ಲ; ಆದರೆ ಫಲಾನುಭವಿಯೂ ಆಗಿದೆ. ಸೌದಿ ಅರೇಬಿಯಾ, ಕುವೈತ, ಸಂಯುಕ್ತ ಅರಬ ಎಮಿರೇಟ್ಸ, ಇರಾಕ, ಇರಾನ್ ಇತ್ಯಾದಿ ಶ್ರೀಮಂತ ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯ ಸದಸ್ಯರು ಕಡಿಮೆ ಅಭಿವೃದ್ಧ ದೇಶಗಳ ಸಾಲಭಾರದ ಕನಿಷ್ಠ ಮೂರರಲ್ಲೊಂದು ಪಾಲನ್ನಾದರೂ ವಹಿಸಬೇಕು.

ವಾಣಿಜ್ಯ ಬ್ಯಾಂಕುಗಳು ಸಹ ಒಟ್ಟು ಸಾಲದ ಮೂರರಲ್ಲೊಂದು ಪಾಲನ್ನು ವಹಿಸಿಕೊಳ್ಳಬೇಕು. ತಮ್ಮ ವಿಚಾರಗಟ್ಟ ಸಾಲ ನೀಡಿಕೆಯಲ್ಲಿ ಮಾತ್ರವಲ್ಲ, ಆದರೆ ಸಾಲ ನೀಡಿಕೆಯ ಕಾಲಕ್ಕೆ ಅತಿ ಬೃಹತ್ ಪ್ರಮಾಣದ ಆರಂಭ ಶುಲ್ಕವನ್ನು ತಮ್ಮ ಜೇಬಿಗಿಳಿಸಿ ಕೊಂಡಿವೆ, ಎಂಬುದಕ್ಕಾಗಿ ಸಹ.

ಇನ್ನು ಕೊನೆಯದಾಗಿ, ಸಾಲದ ಒಂದು ಮೂರಾಂಶವು ಕಡಿಮೆ ಅಭಿವೃದ್ಧ ದೇಶಗಳ ಪಾಲಿಗೇ ಇರತಕ್ಕದ್ದು. ಅಂತೂ ಅವುಗಳ ಮುಖಂಡರು ಸಾಲ ತಂದ ಹಣವನ್ನು ಬೇಕಾಬಿಟ್ಟಿಯಾಗಿ ವ್ಯಯಿಸಿದ್ದಾರೆ. ಇನ್ನು ಕೆಲವರಂತೂ ಬಡತನಗ್ರಸ್ತ ಜನರನ್ನು ಬಲಿಗೊಟ್ಟು ತಮ್ಮ ಸ್ವಂತದ ತ್ರಿಜೂರಿ ತುಂಬಿಕೊಂಡು ಸಿರಿವಂತರಾಗಿದ್ದಾರೆ. ಹೀಗೆ ಕಡಿಮೆ ಅಭಿವೃದ್ಧ ದೇಶಗಳು ತಮ್ಮ ಮೌಢ್ಯಕ್ಕೆ ತಾವೇ ಹೊಣೆಗಾರವಾಗಿವೆ. ಆದರೆ ವಿದೇಶಿ ಸಾಲ ಬಾಕಿಯ ಮೂರರಲ್ಲೊಂದು ಪಾಲಿಗಿಂತ ಹೆಚ್ಚೆಗೇನಲ್ಲ.

ಕಡಿಮೆ ಅಭಿವೃದ್ಧ ದೇಶಗಳ ಹಾಗೂ ವಾಣಿಜ್ಯ ಬಾಂಕುಗಳ ನಡುವೆ ಇರುವ ಸಾಲ ದುರಂತದ ಪರಿಹಾರದ ಗುರಿ ಹೊಂದಿದ ಯಾವುದೇ ಯೋಜನೆಯು ಇಂಥ ವಿಶಾಲ

ರೂಪರೇಷೆ ಹೊಂದಿರಬೇಕು. ಅಂತಾರಾಷ್ಟ್ರೀಯ ಹಣಕಾಸಿನ ನಿಧಿ ಮತ್ತು ಜಾಗತಿಕ ಬ್ಯಾಂಕುಗಳಂಥ ಅಭಿವೃದ್ಧಿಪರ ಎಜೆನ್ಸಿಗಳಿಗೆ ಸಲ್ಲಬೇಕಾದ ಸಾಲ ತೀರುವಳಿಯು ಬೇರೆ ವಿಷಯ. ಅದೇನೂ ದುರಂತದ ಕಾರಣವಾಗಿಲ್ಲ.

ದುರಂತವು 1982 ರಲ್ಲಿ ಮೊತ್ತಮೊದಲು ಘಟಿಸಿದಾಗ, ಕಡಿಮೆ ಅಭಿವೃದ್ಧ ದೇಶಗಳ (ಕಅದೇ) ಒಟ್ಟು ಸಾಲವು 557 ಲಕ್ಷ ಕೋಟಿ ಡಾಲರಿನಷ್ಟಿತ್ತು, ಎಂದು ಜಾಗತಿಕ ಬ್ಯಾಂಕಿನ ಅಂಕಿ ಸಂಖ್ಯೆಗಳಿಂದ ತಿಳಿಯುತ್ತದೆ. ಇದರಲ್ಲಿ ಶೇ. 60 ರಷ್ಟು ಅರ್ಥಾತ್ 334 ಲಕ್ಷ ಕೋಟಿ ಡಾಲರುಗಳನ್ನು ಸಾಲ ಕೊಟ್ಟ ಖಾಸಗಿ ರಂಗಕ್ಕೆ ಕೊಡಬೇಕಾಗಿದೆ. ಅಂದಿನಿಂದ ಬ್ಯಾಂಕುಗಳು ಕ.ಅ.ದೇ ಗಳಿಗೆ ಸಾಲ ನೀಡಿಕೆಯನ್ನು ನಿಲ್ಲಿಸಿವೆ. ಅವು ನಿಜವಾಗಿ ತೃತೀಯ ಜಗತ್ತಿನ ತಮ್ಮ ಸಾಲಗಳ ಕರಾರುಗಳನ್ನು ಪುನರ್ರಚಿಸಿವೆ. ಸಾಲ ತೀರುವಳಿ ಅವಧಿಯನ್ನು ವಿಸ್ತರಿಸಿವೆ. ಮತ್ತು ಬಡ್ಡಿಯ ಬಾಕಿಯನ್ನೂ ಭಾಗಶಃ ತೀರಿಸಲು ಹೊಸ ಸಾಲ ನೀಡಿವೆ. ಆದರೆ ದೀರ್ಘಾವಧಿ ತಳಹದಿಯ ಮೇಲೆ ಅತಿ ವಿರಳ ಪ್ರಸಂಗದಲ್ಲಿ ಹೊಸ ಹಣವನ್ನು ಒದಗಿಸಿವೆ. ಕ.ಅ.ದೇ. ರಫ್ತುಗಳಿಗಾಗಿ ಅಲ್ಪಾವಧಿ ಹಣ ನೀಡಿಕೆಯನ್ನೇನೋ ಅವು 1982 ರಿಂದ ಚೂರು ಚಾರು ಅಡ್ಡಿ ಆತಂಕಗಳೊಂದಿಗೆ ಮುಂದುವರಿಸಿವೆ.

ಈ ಮುನ್ನ ತಿಳಿಸಿದಂತೆ, ಕಅದೇಗಳು 1982 ರಲ್ಲಿ ಬ್ಯಾಂಕುಗಳಿಗೆ 334 ಲಕ್ಷ ಕೋಟಿ ಡಾಲರು ಕೊಡಬೇಕಿತ್ತು. ಇದುವೇ ಅಳತೆಯ ಮೂಲ ವರ್ಷ. ಏಕೆಂದರೆ, ಅನಂತರ ಹೊಸ ದೀರ್ಘಾವಧಿ ಸಾಲ ನೀಡಿಕೆಯು ಎಲ್ಲ ವಾಸ್ತವಿಕ ವ್ಯವಹಾರ ದೃಷ್ಟಿಯಿಂದ ನಿಂತುಹೋಯಿತು. ತಮ್ಮ ಸಾಲ ತೀರಿಸಲು ಯಾವುದೊಂದು ಸಮಸ್ಯಾತ್ಮಕ ಕ.ಅ.ದೇಶಕ್ಕೆ ಬ್ಯಾಂಕುಗಳು ನೀಡಿದ ಹಣವು ಬರೀ ಕಾಗದದ ಮೇಲಿನ ವ್ಯವಹಾರವಷ್ಟೇ. ಅದನ್ನು ಹೊಸ ಹಣವೆಂದು ಪರಿಗಣಿಸಬೇಕಿಲ್ಲ. ಕ.ಅ.ದೇ. ಸಾಲದ ಹೊಣೆಯು ಒಟ್ಟು ಸಾಲದ ಮೂರರಲ್ಲೊಂದು ಪಾಲು ಆಗಿರುವುದರಿಂದ ಅವು ನೀಡಬೇಕಾದ ಸಾಲದ ಮೊತ್ತವು 334 ಲಕ್ಷ ಕೋಟಿ ಡಾಲರುಗಳ ಒಂದು ಮೂರಾಂಶ ಅಂದರೆ 111 ಲಕ್ಷ ಕೋಟಿ (ಮಿಲಿಯನ್) ಡಾಲರಗಳಷ್ಟಾಗುತ್ತದೆ. 1982 ರಲ್ಲಿ ಅಮೇರಿಕೆ ಯಲ್ಲಿ ಪ್ರಚಲಿತವಿದ್ದ ಬಡ್ಡಿ ದರವು ಅತಿ ಹೆಚ್ಚೆಂದರೆ 15% ಇತ್ತು. ಅದು 1987 ರ ಹೊತ್ತಿಗೆ 8.2% ಗೆ ಇಳಿಯಿತು. ಕ.ಅ.ದೇ. ಗಳು ನೀಡಬೇಕಾದ ಸರಾಸರಿ ಚಕ್ರಬಡ್ಡಿ ದರವು 10% ಎಂದು ಗ್ರಹಿಸಿದರೆ, 1982 ರಿಂದ 1987 ರ ನಡುವೆ ಅವುಗಳ ಸಾಲದ ಮೊತ್ತವು 110 ಬಿಲಿಯನ್ (ಲಕ್ಷಕೋಟಿ) ಡಾಲರಗಳಿಂದ 178 ಬಿಲಿಯನ್ ಡಾಲರಗಳಾಗುತ್ತದೆ.

ವಿಶ್ವ ಬ್ಯಾಂಕಿನ ಅಂಕಿ–ಅಂಶಗಳ ಪ್ರಕಾರ, 1982 ರಿಂದ 1987 ರ ನಡುವೆ ಕ.ಅ.ದೇ.ಗಳು ಒಟ್ಟು 635 ಬಿಲಿಯನ್ (ಲಕ್ಷಕೋಟಿ) ಡಾಲರುಗಳನ್ನು ತಮ್ಮ ಸಾಲಗಾರರಿಗೆ ಪಾವತಿಸಿವೆ. ಇದರ 90% ರಷ್ಟು ಹಣ ಬ್ಯಾಂಕುಗಳಿಗೆ ಸಂದಾಯವಾಯಿತು. ಈ ಮೊತ್ತದಲ್ಲಿ 363 ಬಿಲಿಯನ್ ಡಾಲರುಗಳನ್ನು ಮುಂದೂಡಿದ ಬಡ್ಡಿ ಮತ್ತು ಅಸಲು ಎಂದು ಪರಿಗಣಿಸಲಾಯಿತು. ಅಂದರೆ ಕ.ಅ.ದೇ.ಗಳು ನಿವ್ವಳ (572–363) 209 ಬಿಲಿಯನ್ ಡಾಲರುಗಳನ್ನು ಖಾಸಗಿ ಬ್ಯಾಂಕುಗಳಿಗೆ ಐದು ವರ್ಷಗಳಲ್ಲಿ ಪಾವತಿಸಿದವು. 10% ಚಕ್ರಬಡ್ಡಿಯಂತೆ

ಈ ಅವಧಿಯಲ್ಲಿ ಕ.ಅ.ದೇ. ಗಳು ನೀಡಬೇಕಾದ ಸಾಲದ ಮೊತ್ತವು ಕೇವಲ 178 ಬಿಲಿಯನ್ (ಲಕ್ಷಕೋಟಿ) ಡಾಲರು. ಅರ್ಥಾತ್ ಕ.ಅ.ದೇ. ಗಳು 1987 ರ ಹೊತ್ತಿಗೆ, ತಮ್ಮ ಸಾಲದ ಮೊತ್ತಕ್ಕಿಂತಲೂ ಹೆಚ್ಚು ಮರುಪಾವತಿ ಮಾಡಿವೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಕ.ಅ.ದೇ.ಗಳ ಸಾಲ ಮರುಪಾವತಿ ಹೊಣೆಯು ಮೂರರಲ್ಲೊಂದು ಪಾಲು ಎಂದು ಗ್ರಹಿಸಿದರೆ, ಅವು ತಮ್ಮ ಖಾಸಗಿ ಧನಕೋರಿಗೆ ಚಿಕ್ಕಾಸು ಕೂಡ ಕೊಡಬೇಕಿಲ್ಲ.

ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯನ್ನು ಬದಿಗಿರಿಸಿದರೂ ಸಹ, ಬ್ಯಾಂಕುಗಳು ಹಾಗೂ ಅ.ಅ.ದೇ.ಗಳು ಸಾಲ ದುರಂತದ ಸಮಾನ ಹೊಣೆ ಹೊರುವುದಾದರೆ, ಆಗ ಕ.ಅ.ದೇ. ಗಳು 1982 ರಲ್ಲಿ ಕೊಡಬೇಕಾದ ಸಾಲ ಬಾಕಿ 167 ಲಕ್ಷ ಕೋಟಿ ಡಾಲರು ಮಾತ್ರ. ಶೇ. 10 ರ ಚಕ್ರಬಡ್ಡಿಯಂತೆ ಇದು 1987 ರ ಹೊತ್ತಿಗೆ 269 ಲಕ್ಷ ಕೋಟಿ ಡಾಲರಾಗುತ್ತದೆ. ಹೀಗಾಗಿ ಕೇವಲ 60 ಲಕ್ಷ ಕೋಟಿ ಡಾಲರ್ ಬಾಕಿ ಉಳಿಯುತ್ತದೆ. ಕ.ಅ.ದೇ. ಗಳು 1988 ರಲ್ಲಿ 90 ಲಕ್ಷ ಕೋಟಿ ಡಾಲರುಗಳನ್ನು ಸಾಲ ಮರುಪಾವತಿ ರೂಪದಲ್ಲಿ ತೀರಿಸಿರುವದರಿಂದ, ಈಗ ಸಾಲವನ್ನು ಪೂರ್ಣ ತೀರಿಸಬೇಕಾಗುವದಕ್ಕಿಂತ ಹೆಚ್ಚು ಹಣ ಕೊಟ್ಟಂತಾಗಿದೆ.

ಈ ನಿರ್ಣಯವು ದೋಷರಹಿತವಿದೆ. ಸಾಲ ಕೊಡುವವರ ಹಾಗೂ ಪಡೆಯುವವರ ಜವಾಬ್ದಾರಿಯಲ್ಲಿ ಸಮನಾಗಿ ಪಾಲ್ಗೊಳ್ಳುವ, ದೀರ್ಘ ಕಾಲದಿಂದ ಮಾನ್ಯವಾದ ತತ್ವಾನುಸಾರ, ತೃತೀಯ ಜಗತ್ತು ಇಂದಿನ ವೇಳೆಗಂತೂ ಏನನ್ನೂ ಕೊಡಬೇಕಾಗಿಲ್ಲ. ತೃತೀಯ ಜಗತ್ತಿನ ಸಾಲವೆನ್ನುವುದು ಅಪಾರ್ಥವಾಗಿದೆ. ಪ್ರಬಲ ವಾಣಿಜ್ಯ ಬ್ಯಾಂಕುಗಳು 1970 ರ ದಶಕದಲ್ಲಿ ಮಾಡಿದ ವಿಚಾರಹೀನ ವ್ಯವಹಾರದ ಹೊಣೆ ಹಾರಿಸಿಕೊಳ್ಳುತ್ತಿರುವುದರಿಂದ ಅದು ಆಸ್ತಿತ್ವ ಪಡೆದಿದೆಯಷ್ಟೇ.

ಕಅದೇ ಋಣವಿಮೋಚಕ ಸಂಘ :

ಕಅದೇಗಳು 1982 ರ ಹೊತ್ತಿಗೆ ಹಲವಾರು ಕೋಟಿ ಡಾಲರುಗಳನ್ನು ಪಾವತಿಸಿದ್ದರೂ ಸಹ ವಾಣಿಜ್ಯ ಬ್ಯಾಂಕುಗಳು ಜಾಗತಿಕ ಬ್ಯಾಂಕಿನ ಅಂಕಿ ಸಂಖ್ಯೆಗಳ ಸಮರ್ಥನೆಯ ಮೇಲಿಂದ ಕಅದೇಗಳಿಂದ 1988 ರಲ್ಲಿ 700 ಲಕ್ಷ ಕೋಟಿ ಡಾಲರುಗಳನ್ನು ಕೇಳುತ್ತಿವೆ. ಈ ಮೊತ್ತವು 1982 ರ ಮೊತ್ತದ ದುಪ್ಪಟ್ಟು . ಈ ಅಂಕಿಗಳು ಬ್ಯಾಂಕಿನವರ ಊಹೆಯ ಭ್ರಾಂತಿಯಷ್ಟೇ. 1984 ರಿಂದ ಕಅದೇಗಳಿಂದ ಬಂಡವಾಳವು ನಿಕ್ಕಿಯಾಗಿ ಹೊರಗೆ ಸಾಗಿರುವುದು ಎಲ್ಲ ಲೆಕ್ಕಾಚಾರಗಳಿಂದ ಸಿದ್ಧಪಟ್ಟಿರುವುದರಿಂದ ಕಾಗದದ ಮೇಲಾದರೂ ಸಾಲವೇಕೆ ಏರುತ್ತಿರಬೇಕು?

ಕಅದೇಗಳನ್ನು ಒಂದು ಗುಂಪಿನಂತೆ ಪರಿಗಣಿಸಿದಾಗ, ವಾಣಿಜ್ಯ ಬ್ಯಾಂಕುಗಳಿಗೆ ಕೊಡಬೇಕಾದುದೇನೂ ಉಳಿಯದು. ಇನ್ನು, ಅವು ತಮ್ಮ ಅಭಿಪ್ರಾಯವನ್ನು ಒತ್ತಿ ಹೇಳಲು ಒಂದು ಋಣವಿಮೋಚಕ ಸಂಘವನ್ನು ರಚಿಸಿಕೊಳ್ಳಬೇಕು. ಅವು ತಮ್ಮೆಲ್ಲ ಬಾಕಿ ಪಾವತಿಸುವುದನ್ನು

ನಿಲ್ಲಿಸಬೇಕು ಮತ್ತು ತಮ್ಮ ಪ್ರಕರಣವನ್ನು ಜಾಗತಿಕ ನ್ಯಾಯಾಲಯಕ್ಕೆ ಒಯ್ಯಬೇಕು. ತಮ್ಮ ಸರಕಾರಗಳ ಬೆಂಬಲ ಪಡೆಯುವ ಬ್ಯಾಂಕುಗಳು ಈ ಕ್ರಮವನ್ನು ಸಾಲ ಮುಳುಗಿಸುವಿಕೆ ಎಂದು ಕರೆಯಬಹುದು ಮತ್ತು ಕಅದೇಗಳ ಮೇಲೆ ದಂಡ ವಿಧಿಸಬಹುದು. ಆ ಕಾರಣದಿಂದಾಗಿಯೇ, ಕಅದೇಗಳನ್ನೊಳಗೊಂಡ ಋಣ ವಿಮೋಚಕ ಸಂಘವು ಈ ಉದ್ದೇಶಕ್ಕಾಗಿ ಬೇಕೇಬೇಕು. ಇದರಿಂದ ಕಅದೇಗಳ ವ್ಯಾಪಾರವು ಕದಡುತ್ತದೆ. ಏಕೆಂದರೆ ಸಾಲಗ್ರಸ್ತ ಕಅದೇಗಳು ತಮ್ಮ ರಫ್ತು ವ್ಯಾಪಾರಕ್ಕಾಗಿ ಬೇಕಾದ ಅಲ್ಪಕಾಲೀನ ಹಣಕಾಸಿನ ನೆರವಿಗೆ ಎರವಾಗುತ್ತವೆ.

ಸಾಲಗಾರರಿಗಾಗಿ ವ್ಯಾಪಾರಿ ಏಜೆನ್ಸಿ :

ಈ ಸಮಸ್ಯೆಯನ್ನು ಬಿಡಿಸಲು ಕಅದೇಗಳು ಪರಸ್ಪರರ ಮಧ್ಯೆ ಮತ್ತು ತಮ್ಮೊಂದಿಗೆ ವ್ಯಾಪಾರ ಮಾಡಲಿಚ್ಛಿಸುವ ದೇಶಗಳೊಂದಿಗೆ ಸರಕು ವಿನಿಮಯದ ಒಪ್ಪಂದಗಳನ್ನು ಮಾಡಿಕೊಳ್ಳಬೇಕು. ಇದಲ್ಲದೆ, ಅವು ಒಂದು ವ್ಯಾಪಾರಿ ಏಜೆನ್ಸಿಯನ್ನು ಸ್ಥಾಪಿಸಿಕೊಳ್ಳಬೇಕು. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ವ್ಯಾಪಾರಿ ವ್ಯವಹಾರಗಳಿಗೋಸ್ಕರ, ಹೊಂದಾಣಿಕೆ ಮಾಡುವ ಕೇಂದ್ರವಾಗಬೇಕು. ಕಅದೇಗಳ ಹೆಚ್ಚುವರಿ ರಫ್ತನ್ನು ಮತ್ತಿತರ ದೇಶಗಳ ಆಮದು ಬೇಡಿಕೆಗಳೊಂದಿಗೆ ಸರಿದೂಗಿಸುವುದೇ ಅವುಗಳ ಕಾರ್ಯ. ಈ ಕಾರ್ಯವು ಸರಕುಗಳಿಗೆ ಪ್ರತಿ ಸರಕುಗಳ ವಿನಿಮಯದ ಆಧಾರದಿಂದ ನಡೆಯತಕ್ಕದ್ದು. ವಿನಿಮಯದ ಕರಾರುಗಳನ್ನು ಅಭಿವೃದ್ಧ ದೇಶಗಳ ಮಧ್ಯೆ ನಡೆಯುವ ವ್ಯಾಪಾರದಲ್ಲಿ ನಿಗದಿಪಡಿಸಿದ ಅಂತಂರಾಷ್ಟ್ರೀಯ ದರಗಳಿಂದ ನಿರ್ಧರಿಸಬಹುದಾಗಿದೆ.

ಅಂತಾರಾಷ್ಟ್ರೀಯ ಏಜೆನ್ಸಿಗಳಿಂದ ಬರುವ ಅಭಿವೃದ್ಧಿ ನೆರವಿನಿಂದ ಸಹ, ಕಅದೇಗಳನ್ನು ದೂರವಿರಿಸಬಹುದಾಗಿದೆ. ಅವು ಪ್ರಯುತೀಯ ಯೋಜನೆಯನ್ನು ಅಳವಡಿಸಿಕೊಂಡರೆ, ಇದರಿಂದೇನೂ ಬಾಧಕವಿಲ್ಲ. ಏಕೆಂದರೆ, ಪ್ರಯುತ ಸ್ಥಳೀಯ ಕಚ್ಚಾ ಮಾಲು ಮತ್ತು ಶ್ರಮ ಆಧರಿಸಿಯೇ ಸ್ವಾವಲಂಬನ ತತ್ವದ ಮೇಲೆ ಸಮೃದ್ಧಿಯನ್ನು ಉಂಟು ಮಾಡುವ ಗುರಿ ಹೊಂದಿದೆ. ಪ್ರಯುತ ಕಂಡುಕೊಂಡ ಸಹಕಾರಿ ಉದ್ದಿಮೆಯು 1950 ರ ದಶಕ ಲಾಗಾಯ್ತು ಕಅದೇಗಳು ಅನುಸರಿಸುತ್ತ ಬಂದ ಬಂಡವಾಳವಾದಿ ಮತ್ತು ಮಾರ್ಕ್ಸವಾದಿ ಅಭಿವೃದ್ಧಿ ಮಾದರಿಗಳಿಗಿಂತ ಹೆಚ್ಚು ದಕ್ಷವಾಗಿದೆ. ಕಅದೇಗಳು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು. ಇನ್ನು ಪ್ರಯುತ ಅವುಗಳ ಘನವಾದ ಸಾಹಸದಲ್ಲಿ ಅವುಗಳಿಗೆ ನೆರವು ನೀಡುತ್ತದೆ.

ಇಂದಿನ ತನಕ, ತಮ್ಮ ಸ್ವಂತದ ಸಂಘವನ್ನೇ ರಚಿಸಿಕೊಂಡಿರುವ ಬ್ಯಾಂಕುಗಳಿಂದ ಬಂದ ದಂಡದ ಭೀತಿಯು ಅತಿ ಹೆಚ್ಚು ಪರಿಣಾಮಕಾರಿಯಾಗಿತ್ತು. ಸಾಲಗಾರ ರಾಷ್ಟ್ರಗಳೂ ಸಹ ತಥಾಕಥಿತ ಸಾಲದ ಕಟ್ಟಬಾಕಿ ಉಳಿಸುವದಕ್ಕೆ ವಿರೋಧವಾಗಿ ಇತರ ಸಾಲಗಾರ ದೇಶಗಳಿಗೆ ಸಲಹೆ ನೀಡಿದವು. ಆದರೆ ಕಅದೇಗಳು ತಮ್ಮ ಸ್ವಂತ ಸಾಮೂಹಿಕ ಬಲವನ್ನು ಅರಿಯಲಿಲ್ಲ. ಒಂದು ವೇಳೆ, ಯಾವುದೇ ಒಂದು ದೇಶವು ಕಟ್ಟಬಾಕಿ ಉಳಿಸಿದರೆ, ಅದರ ಮೇಲೆ ಮೆಕ್ನಾಮಾರ್ ಸವಿವರ ಹಾಕಿದ ರೂಪರೇಷೆಗಳ ಚೌಕಟ್ಟಿನಲ್ಲಿ ಧನಕೋ ದೇಶಗಳು ದಂಡಗಳನ್ನು ಒತ್ತಾಯಪೂರ್ವಕ ಹೇರುವ ಸಂಭವವಿದೆ. ಆದರೆ ಎಲ್ಲ ನಲವತ್ತು ಸಾಲಗಾರ

ದೇಶಗಳು ಒಂದೇ ಬಾರಿಗೆ ಕಟ್ಟಬಾಕಿ ಉಳಿಸಿದರೆ ಮುಂದೇನು ? ಆಗ ಬ್ಯಾಂಕುಗಳು ತಮ್ಮ ಸ್ವಂತ ದೇಶಗಳನ್ನು ಕ್ಷೋಭೆಗೀಡು ಮಾಡದೆ, ಈ ದಂಡಗಳನ್ನು ತತ್ಕಾಲವೇ ಹೇರಲಾರವು. ನಿಜವಾಗಿ ನೋಡಿದರೆ, ಸಾಲಗಾರ ರಾಷ್ಟ್ರಗಳಲ್ಲಿರುವ ಒಡಕೇ ಬೇರಾವ ಕಾರ್ಯಸಾಧು ಪರ್ಯಾಯಗಾಣದೇ, ವಾಣಿಜ್ಯ ಬ್ಯಾಂಕುಗಳ ಮತ್ತು ಅಂತಾರಾಷ್ಟ್ರೀಯ ಏಜೆನ್ಸಿಗಳ ಕುಚೇಷ್ಟೆಗಳಿಗೆ ಮಣಿಯುವಂತೆ ಮಾಡಿದೆ. ಪ್ರಸುತ ಪರ್ಯಾಯವನ್ನು ಒದಗಿಸುತ್ತದೆ. ಹೊಸ ವ್ಯವಸ್ಥೆಯಿಂದ ಸನ್ನದ್ಧವಾಗಿ, ಕಡಿಮೆ ಅಭಿವೃದ್ಧ ದೇಶಗಳ ಸಂಘಟನೆಯು ಲೋಭಿ ಧನಕೋರ ಕುಚೇಷ್ಟೆಯ ಮೇಲೆ ಜಯ ಸಾಧಿಸುವದು.

ಆಧಾರ ಗ್ರಂಥಗಳು

1. ಕ್ಲೈನ್ ಡಬ್ಲ್ಯೂ. ಆರ್. "ಇಂಟರನ್ಯಾಶನಲ್ ಡೆಟ್ ಆ್ಯಂಡ್ ದಿ ಸ್ಟ್ಯಾಬಿಲಿಟಿ ಆಫ್ ದಿ ವರ್ಲ್ಡ್ ಇಕಾನಮಿ'' ಇನ್‌ಸ್ಟಿಟ್ಯೂಟ್ ಫಾರ ಇಂಟರ್ ನ್ಯಾಶನಲ್ ಇಕಾನಾಮಿಕ್ಸ್, ವಾಶಿಂಗ್ಟನ್ ಡಿ.ಸಿ. – 1983.
2. ಜಾರ್ಜ ಸೂಸನ್ : ಎ ಫೇಟ ವರ್ಸ ದ್ಯಾನ ಡೆಟ್, ಗ್ರೋವ್ ಪ್ರೆಸ್, ನ್ಯೂಯಾರ್ಕ– 1988.
3. ಗ್ಲೈನ್ ಎಸ್.ಸಿ. 'ಎಡ್ವೆಂಚರ್ಸ್ ಇನ್ ದಿ ಲೋನ ಟ್ರೇಡ್, ಹಾರ್ಪರ್ಸ, ಸಪ್ಟೆಂಬರ, 1983.
4. ಮೆಕ್ ನಾಮಾರ್ ಆರ್.ಟಿ. "ಟ್ರೇಜರಿ ನ್ಯೂಜ್'' ಯುಎಸ್, ಡಿಪಾರ್ಟಮೆಂಟ ಆಫ್ ದಿ ಟ್ರೇಜರಿ, ಅಕ್ಟೋಬರ್, 2. 1983.

●○●

ಅಧ್ಯಾಯ – 8

ಐತಿಹಾಸಿಕ ದರ್ಶನ

ಸಮಾಜ ಹಾಗೂ ಅದರ ಸಂಘಟನೆಗಳನ್ನು ಕುರಿತು ಶ್ರೀ ಸರಕಾರ ತಾಳಿರುವ ದೃಷ್ಟಿಯು ಅಂಶತಃ ಅವರ ಇತಿಹಾಸ ಜ್ಞಾನದಿಂದ ಉದಿಸಿದೆ. ಇನ್ನಿತರ ವಿಷಯಗಳಂತೆ, ಇತಿಹಾಸ ಕುರಿತ ಅವರ ದೃಷ್ಟಿಯು ಹೊಸ ಬಗೆಯದು ಮತ್ತು ಮೌಲಿಕವಾದುದು. ಹೆಚ್ಚಾಗಿ ಮಾರ್ಕ್ಸ್, ಟೊಯ್ನಬೀ ಮತ್ತು ಸ್ಪೆಂಗ್ಲರ್‌ರಂತೆಯೇ ಶ್ರೀ ಸರಕಾರ ಹಿಂದಿನ ಘಟನೆಗಳ ಹಿಂದೆ ಒಂದು ಮಾದರಿಯನ್ನು ಕಂಡು ಹಿಡಿಯುತ್ತಾರೆ. ಆದರೆ ಸಮಾಜ ಚಕ್ರವೆಂದು ಕರೆಯಲ್ಪಡುವ ಅವರ ಈ ಕಲ್ಪನೆಯು ಅದೇ ರೀತಿಯ ಎಲ್ಲ ಕಲ್ಪನೆಗಳಿಗಿಂತಲೂ ಅಧಿಕ ವ್ಯಾಪ್ತಿ ಹೊಂದಿದೆ. ಒಮ್ಮೆ ಜನಪ್ರಿಯವಾಗಿದ್ದ, ಐತಿಹಾಸಿಕ ನಿರ್ಣಾಯಕತ್ವದ, ಭಾವಜಡತೆಗಳತ್ತ ಈ ಹಿಂದೆ ಟೀಕಾಕಾರರು ಎಸೆದ ಚೂಪಾದ ಬಾಣಗಳಗೆಲ್ಲ ಅದು ಉತ್ತರ ನೀಡುತ್ತದೆ.

ನಾನು ಈ ವಿಷಯವನ್ನು ಇನ್ನೊಂದು ಪುಸ್ತಕದಲ್ಲಿ (1) ಸವಿವರ ಪರಿಶೀಲಿಸಿದ್ದೇನೆ. ಇಲ್ಲಿ ಕೇವಲ ಸಂಕ್ಷಿಪ್ತ ರೂಪರೇಷೆಯನ್ನು ನೀಡುವೆ. ಮತ್ತು ಮಾನವನ ಭೂತಕಾಲ ಕುರಿತ ಶ್ರೀ ಸರಕಾರರ ಪರೀಕ್ಷೆಯು ಎಷ್ಟು ಉಜ್ವಲವೂ ಹಾಗೂ ಭವಿಷ್ಯ ಸೂಚಿಯೂ ಆಗಿದೆಯೆಂಬುದನ್ನು ಓದುಗರ ನಿರ್ಣಯಕ್ಕೇ ಬಿಡುತ್ತೇನೆ. ಸಮಾಜ ಚಕ್ರಗಳ ನಿಯಮವು ತಪ್ಪದೆ ಸಕಲ ನಾಗರಿಕತೆಗಳಲ್ಲಿ ಕಾರ್ಯಾನ್ವಯಿಸಿದೆ. ಭವಿಷ್ಯದಲ್ಲಿಯೂ ಹಾಗೆಯೇ ಮುಂದುವರಿಯುವದು, ಎಂದು ಶ್ರೀ ಸರಕಾರರ ವಾದ.

ಮಾನವ ಮನೋಧರ್ಮ :

ನವೀನ ಮತ್ತು ಆಳ ಸಂದೇಶ ನೀಡುವ ಪ್ರತಿಯೋರ್ವ ಲೇಖಕನು ತನ್ನ ಸ್ವಂತದ ಶಬ್ದಗಳನ್ನು, ಗ್ರಹಿಕೆಗಳನ್ನು ಮತ್ತು ವ್ಯಾಖ್ಯೆಗಳನ್ನು ಸೇರಿಸುತ್ತಾನೆ. ಈ ವಿಷಯದಲ್ಲಿ ಶ್ರೀ ಸರಕಾರರೂ ಅಪವಾದವೇನಲ್ಲ. ಈಗಾಗಲೇ ಪರಿಚಿತವಾದ ವಿಚಾರ ಸಂಗ್ರಹದಿಂದ ಏನನ್ನಾದರೂ ಎತ್ತಿಕೊಂಡಾಗಲೂ ಸಹ, ಅದರಲ್ಲೂ ವಿಶೇಷವಾಗಿ ಮಾರ್ಕ್ಸ್ ಮತ್ತು ಟೊಯ್ನಬೀ ಅವರ ವಿಚಾರ ಸಂಗ್ರಹದಿಂದ ಎತ್ತಿಕೊಂಡಾಗಲೂ ಸಹ, ಶ್ರೀ ಸರಕಾರರ ಅಭಿವ್ಯಕ್ತಿಯು ಹೊಸ ಒಳನೋಟವನ್ನೇ ಹೊರ ಹೊಮ್ಮಿಸುತ್ತದೆ.

ಶ್ರೀ ಸರಕಾರರ ವಿಚಾರವೂ ಸರಳ. ಆದರೂ ಆಳ ಗ್ರಹಣ ಶಕ್ತಿಯನ್ನಾಧರಿಸಿದೆ. ಸಮಾಜವು ಮೂಲತಃ ನಾಲ್ಕು ಪ್ರಕಾರದ ಜನರಿಂದ ಕೂಡಿದೆ. ಪ್ರತಿಯೊಂದು ಪ್ರಕಾರದವರು ವಿಭಿನ್ನ ಮನೋಭೂಮಿಕೆಯವರು ಎಂಬ ತಥ್ಯದೊಂದಿಗೆ ಆ ವಿಚಾರದ ಆರಂಭ. ಹಲವರು ಸ್ವಭಾವತಃ ಯೋಧರು, ಹಲವರು ಬುದ್ದಿಜೀವಿಗಳು, ಹಲವರು ಬಂಡವಾಳವಾದಿಗಳು ಮತ್ತೆ ಹಲವರು ಶ್ರಮ ಜೀವಿಗಳು. ಈ ರೀತಿ ಜನ ಸಮೂದಾಯದಲ್ಲಿ ನಾಲ್ಕು ವಿಶಾಲ ವರ್ಗಗಳಿವೆ. ಹೀಗೆ ಶ್ರೀ ಸರಕಾರರು ಮಾರ್ಕ್ಸ್ ಮತ್ತಿತರ ಸಮಾಜವಾದಿಗಳಿಂದ ತೀರ ಭಿನ್ನ. ಇತರರು ಸಮಾಜ

ವರ್ಗಗಳನ್ನು ಆದಾಯ ಮತ್ತು ಸಂಪತ್ತುಗಳನ್ನು ಆಧಾರದಿಂದ ಆರ್ಥಿಕ ಭೂಮಿಕೆಯ ಮೇಲಿಂದ ವ್ಯಾಖ್ಯಾನಿಸುತ್ತಾರೆ. ಶ್ರೀ ಸರಕಾರ ಆರ್ಥಿಕ ದೃಷ್ಟಿಯನ್ನು ಕಡೆಗಣಿಸುತ್ತಾರೆಂದೇನೂ ಅಲ್ಲ; ಆದರೆ ಅವರ ಮೇರೆಗೆ ಸಮಷ್ಟಿ ಸಮಾಜವನ್ನು ಬಣ್ಣಿಸುವ ನಾಲ್ಕು ದೃಷ್ಟಿಗಳಲ್ಲಿ ಆರ್ಥಿಕ ದೃಷ್ಟಿಯೂ ಒಂದು; ಅಷ್ಟೇ. ಅದರ ಪ್ರಕಾರ, ವರ್ಗ ವಿಭಾಗಗಳು ಇವೆ. ಮತ್ತು ಅವು ನಾಗರೀಕತೆಯ ಹುಟ್ಟಿನೊಂದಿಗೇ ಮಾನವ ಸ್ವಭಾವದಲ್ಲಿಯ ಆಂತರಿಕ ವಿಭಿನ್ನತೆಗಳಿಂದಾಗಿ ಅಸ್ತಿತ್ವ ಪಡೆದಿವೆ. ಬಹುತೇಕ ಜನರು ಸಾಮಾನ್ಯ ಗುರಿಗಳನ್ನು ಹೊಂದಿರುವಾಗ, ಈ ಗುರಿ ಸಾಧನೆಯ ಅವರ ವಿಧಾನಗಳು ಅವರವರ ಮಾನಸಿಕ ಸ್ಥಿತಿಗೆ ಅನುಸರಿಸಿ ವಿಭಿನ್ನವಾಗಿರುತ್ತವೆ ಎಂಬುದೇ ಮೂಲಭೂತ ವಿಚಾರ.

ಮೇಲೆ ಪ್ರಸ್ತಾಪಿಸಿದ ನಾಲ್ಕು ಪ್ರಕಾರದ ಜನರಷ್ಟೇ ಇಡೀ ಸಮಾಜವಲ್ಲ ಎಂಬುದಂತೂ ಸ್ಪಷ್ಟ, ಅವರಲ್ಲಿ ಹಲವಾರು ಶ್ರೇಣಿಗಳಿವೆ. ಉದಾಹರಣೆಗೆ ಶ್ರಮಜೀವಿಗಳಲ್ಲಿ, ಹಲವರು ಉನ್ನತ ಕುಶಲ ಕರ್ಮಿಗಳಿರಬಹುದು. ಬೇರೆ ಹಲವರು ಅಲ್ಪ ಕುಶಲ ಕರ್ಮಿಗಳಿರ ಬಹುದು. ಅದೇ ರೀತಿ, ಭೂತ ಕಾಲದ ಅನೇಕ ಸಮಾಜಗಳಲ್ಲಿ ಬಂಡವಾಳವಾದಿಗಳ ಅಸ್ತಿತ್ವವೇ ಇರಲಿಲ್ಲ. ದೇಶ, ಕಾಲಗಳಿಗೆ ಅತೀತವಾದ ಸ್ವತಂತ್ರ ವ್ಯಾಖ್ಯಾನ ನೀಡಲೋಸುಗ ಶ್ರೀ ಸರಕಾರರು ಮಾನವ ಸ್ವಭಾವದಾಳಕ್ಕೆ ಹೋಗುತ್ತಾರೆ. ಮತ್ತು ಮೂಲಭೂತ ಅಂಶಗಳೊಂದಿಗೆ ಅಂದರೆ, ಮನೋಧರ್ಮಗಳೊಂದಿಗೆ ಆರಂಭಿಸುತ್ತಾರೆ. ಈ ಮನೋಧರ್ಮವನ್ನು ಅವರು ನಾಲ್ಕು ಸ್ಪಷ್ಟ ಶ್ರೇಣಿಗಳಲ್ಲಿ ವರ್ಗೀಕರಿಸುತ್ತಾರೆ. ಆದರಿಂದಾಗಿಯೇ ಪ್ರತಿಯೊಂದು ಸಮಾಜವು ಮೂಲತಃ ಕೇವಲ ನಾಲ್ಕು ಪ್ರಕಾರದ ಜನರಿಂದ ಕೂಡಿರುತ್ತದೆ. ಜನರನ್ನು ಅವರು ಶ್ರಮಜೀವಿ (ಶೂದ್ರ), ಯೋಧ (ಕ್ಷತ್ರೀಯ), ಬುದ್ಧಿಜೀವಿ (ವಿಪ್ರ) ಹಾಗೂ ಸಂಚಯ ವೃತ್ತಿಯವರು (ವೈಶ್ಯ) ಎಂದು ವರ್ಗೀಕರಿಸುತ್ತಾರೆ. ಹಿಂದು ನಾಗರೀಕತೆಯ ಪಂಡಿತನಿಗೆ ಈ ವರ್ಗಗಳು, ಭಾರತದಲ್ಲಿ ಇನ್ನೂ ಉಳಿದಿರುವಂತೆ, ಜಾತಿ ವ್ಯವಸ್ಥೆಗೆ ಸಂಬಂಧಿಸಿದಂತೆ ತೋರಬಹುದು. ಇಲ್ಲವೆ ಪ್ರಾಚೀನ ಕಾಲದಲ್ಲಿ ಇದ್ದಂತೆ ಗುಣಕರ್ಮಗಳಿಗೆ ಸಂಬಂಧಿಸಿದಂತೆ ತೋರಬಹುದು.

ಆದರೆ ಶ್ರೀ ಸರಕಾರರ ದೃಷ್ಟಿಯಲ್ಲಿ ಅವುಗಳ ಅರ್ಥವೂ ಸಂಪೂರ್ಣ ಬೇರೆ; ಅವುಗಳ ಮಹತ್ವವೂ ಬೇರೆ. ಅವುಗಳು ಕೇವಲ ಮನಸ್ಸಿನ ನಾಲ್ಕು ಪ್ರಕಾರಗಳಷ್ಟೇ. ಪ್ರತಿಯೊಂದು ಅವರವರ ಕರ್ಮ, ಚಿಂತನೆ ಮತ್ತು ಜೀವನ ಕುರಿತ ದೃಷ್ಟಿಕೋನಗಳ ಅಭಿವ್ಯಕ್ತಿಯ ಹೊರತು ಬೇರೇನಲ್ಲ. ಇನ್ನು ಆಯ್ಕೆಯ ಸ್ವಾತಂತ್ರ್ಯವಿದ್ದರೆ, ಮಾನಸಿಕ ರಚನೆಯು ಒಬ್ಬನ ವೃತ್ತಿಯಲ್ಲಿ ಪ್ರತಿಫಲಿಸುತ್ತದೆ. ಆದ್ದರಿಂದ ಸಮಾಜದ ವಿಶೇಷಾಧಿಕಾರ ಸಂಪನ್ನ ವರ್ಗಗಳ ವಿಷಯದಲ್ಲಿ ಈ ವರ್ಗಗಳು ಇಂಥ ಆಯ್ಕೆ ಮಾಡಲು ಸಾಮಾನ್ಯವಾಗಿ ಮುಕ್ತವಿರುತ್ತವೆ. ಆದ್ದರಿಂದ ಅವರು ಕೈಕೊಂಡ ವೃತ್ತಿಯು ಅವರವರ ಮನೋಭಾವದ ಅಳತೆಗೋಲಾಗಿರುತ್ತದೆ.

ಶೂದ್ರ –ಮಾನಸವಂದರೆ, ಸುತ್ತುವರಿದ ಪರಿಸರದಿಂದ ಪೂರ್ಣ ಪ್ರಭಾವಿತವಾದ ಮಾನಸವಾಗಿದೆ. ಅದು ಇನ್ನಿತರ ಪ್ರಕಾರಗಳಷ್ಟು ಬುದ್ಧಿಪರವಲ್ಲ, ಯಾರ ಕೃತಿ ಹಾಗೂ ನಡೆಗಳು ಇಂಥ ಮಾನಸಿಕತೆಯನ್ನು ಹೊರಹೊಮ್ಮಿಸುವವೋ, ಅವರನ್ನು ಸಾಮಾನ್ಯವಾಗಿ

ಶೂದ್ರರೆಂದು ಕರೆಯುತ್ತಾರೆ. ಶೂದ್ರ ಮಾನಸವು ಸಾಮಾನ್ಯವಾಗಿ ಸೂಕ್ಷ್ಮವಾದುದನ್ನಾಗಲಿ ಇಲ್ಲವೆ ಬೌದ್ಧಿಕವಾದುದನ್ನಾಗಲಿ ಮಾಡುವಲ್ಲಿ ಅಯಶಸ್ವಿಯಾಗುತ್ತದೆ. ಏಕೆಂದರೆ, ಅದು ಲೌಕಿಕ ವಿಚಾರಗಳ ಆಂಕೆಯಲ್ಲಿರುತ್ತದೆ. ಇವು ಲೌಕಿಕ ಜಡತರಂಗಗಳಿಗೆ ಸಮಾಂತರ ವಾಗಿ ಪ್ರವಹಿಸುತ್ತವೆ. ಈ ವಿಶ್ವದ ಪ್ರತಿಯೊಂದು ಸತ್ತೆಯು ಕೆಲವು ತರಂಗಗಳನ್ನು ಮತ್ತು ಸ್ಪಂದನಗಳನ್ನು ತೋರುವುದೆಂದು ಶ್ರೀ ಸರಕಾರ ನಂಬುತ್ತಾರೆ.

ಈ ತರಂಗಗಳು ಬರಿಗಣ್ಣಿಗೆ ಗೋಚರಿಸುವುದಿಲ್ಲ. ಶೂದ್ರನ ತರಂಗಗಳು ಜಡ ವಸ್ತುವಿನ ತರಂಗಗಳಿಗೆ ಸಾದೃಶ್ಯವಾಗಿವೆ. ಆದ್ದರಿಂದ ಶೂದ್ರನು (ಶ್ರಮಜೀವಿಯು) ಪ್ರಾಪಂಚಿಕ ಶಕ್ತಿಗಳನ್ನು ಅಥವಾ ತಾನಿರುವ ಭೌತಿಕ ಪರಿಸರವನ್ನು ನಿಗ್ರಹಿಸಲಾರನು. ಕುಶಲರಲ್ಲದ ಕಾರ್ಮಿಕರು, ರೈತರು, ಗುಲಾಮರು ಸಾಮಾನ್ಯವಾಗಿ ಈ ವರ್ಗಕ್ಕೆ ಸೇರುತ್ತಾರೆ. ಇಲ್ಲವೆ ಈ ಹಿಂದೆ ಸೇರಿದ್ದರು. ಈ ಎಲ್ಲ ವೃತ್ತಿಗಳಲ್ಲಿ ಅಪವಾದಗಳನ್ನು ವಿವೇಚಿಸಿ ತಿಳಿಯಬಹುದು. ಕೆಲ ರೈತರಾಗಲಿ ಇಲ್ಲವೆ ಕೃಷಿ ಕೂಲಿಕಾರರಾಗಲಿ ತೀವ್ರ ಬುದ್ಧಿವಂತರಾಗಿರಬಹುದು. ಇಲ್ಲವೆ ಸ್ವಂತ ಇಚ್ಛೆಯಿಂದಲ್ಲದ ಸಾಮಾಜಿಕ ಒತ್ತಡದಡಿ ಕಠಿಣ ಪರಿಶ್ರಮ ಮಾಡುವ ಇತರ ಶಾರೀರಿಕ ಶ್ರಮಜೀವಿಗಳೂ ಇರಬಹುದು. ಇಂಥ ಜನರೇನೂ ಶ್ರಮಜೀವಿಗಳಲ್ಲವೆಂಬುದು ಸ್ಪಷ್ಟ, ಅದೇ ರೀತಿ ಹಿಂದಿನ ಕಾಲದಲ್ಲಿ ಸಕಲ ಸಮಾಜಗಳಲ್ಲಿ ಗುಲಾಮಗಿರಿಯು ಸಾಮಾನ್ಯ ವ್ಯವಸ್ಥೆಯಾಗಿತ್ತು. ಮತ್ತು ಗುಲಾಮರನ್ನು ಗೀಳು ದೈಹಿಕ ಕೆಲಸ ಮಾಡುವಂತೆ ಒತ್ತಾಯಿಸುತ್ತಿದ್ದರು. ಆದರೆ ಗುಲಾಮರು ಶೂದ್ರರೆಂದೇನೂ ಅದರ ಅರ್ಥ ಅಲ್ಲ. ಶೂದ್ರರೆಂದರೆ ತಮ್ಮ ಸ್ವಂತ ಆಯ್ಕೆಯಿಂದ ಶಾರೀರಕ ಕೆಲಸ ಮಾಡುವವರು. ಇಲ್ಲವೆ ತಾಂತ್ರಿಕ ಕೆಲಸ ಮಾಡುವವರು. ತಾಂತ್ರಿಕ ಕೌಶಲ್ಯವನ್ನು ಸಂಪಾದಿಸಲು ಅಸಮರ್ಥರಾದವರು. ಶೂದ್ರರು ದೈಹಿಕ ಶಕ್ತಿಯನ್ನು ಹೊಂದಿದ್ದರೂ ಸಹ, ಮಾರಾಟ ಮಾಡಬಲ್ಲ ಕುಶಲತೆಯನ್ನು ಹೊಂದಿರುವದಿಲ್ಲ. ಅಲ್ಲದೆ ಅವರು ಅನ್ಯರಿಂದ ಯಾವಾಗಲೂ ಶೋಷಿಸಲ್ಪಡುತ್ತಾರೆ. ಈ ಶೋಷಣೆಯನ್ನು ನಿಲ್ಲಿಸಬೇಕೆಂದು ಶ್ರೀ ಸರಕಾರ ಹೇಳುತ್ತಾರೆ.

ಜಡವನ್ನು ಗೆಲ್ಲುವ ಸ್ಫೂರ್ತಿಯಿಂದ ಕಲಕುವ ಮನವು ಕ್ಷಾತ್ರ ಮನ. "ಜಡವನ್ನು ತನ್ನ ವಶವರ್ತಿ ಮಾಡಿಕೊಳ್ಳುವುದೇ ಕ್ಷತ್ರಿಯನ ಅಭ್ಯಾಸ" (2 ಪುಟ 14) ಎಂದು ಹೇಳುತ್ತಾರೆ ಶ್ರೀ ಸರಕಾರ. ಹೀಗೆ ಕ್ಷತ್ರಿಯನೆಂದರೆ, ಸಾಹಸಪ್ರಿಯನು; ಧೈರ್ಯವಂತನು, ಮತ್ತು ಉನ್ನತೋದ್ದೇಶವುಳ್ಳವನು. ಹೊಸ ಹಾದಿಗಳನ್ನು ಹುಡುಕುವ ಸಹಜ ಕುತೂಹಲ ಅವನದು; ಮತ್ತು ತನ್ನ ಸಹಜಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಲ ಹಾಗೂ ಕೌಶಲ್ಯಗಳನ್ನು ಅನ್ವಯಿಸುತ್ತಾನೆ. ಕ್ಷಾತ್ರ ಬುದ್ಧಿಯು ಶೂದ್ರ ಬುದ್ಧಿಗಿಂತ ಅಧಿಕ ಸೂಕ್ಷ್ಮ (ಅಧಿಕ ಬುದ್ಧಿವಂತ) ವಾಗಿರುವುದರಿಂದ ಕ್ಷತ್ರಿಯನು ಶೂದ್ರನಿಂದ ಸಾಕಷ್ಟು ಕೆಲಸ ಮಾಡಿಸುತ್ತಾನೆ. ಕಾಲದ ಮೂರು ವಿಭಾಗಗಳಾದ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳಲ್ಲಿ ಶೂದ್ರನು ಕೇವಲ ವರ್ತಮಾನದಲ್ಲಿ ಮಾತ್ರ ಇರುತ್ತಾನೆ. ಆದರೆ ಕ್ಷಾತ್ರ ಮನವು ಭೂತ ಮತ್ತು ವರ್ತಮಾನಗಳೆರಡರಲ್ಲಿಯೂ ಇರುತ್ತದೆ. ಕ್ಷತ್ರಿಯನು ಕೇವಲ ಬದುಕುವದಕ್ಕಾಗಿಯೇ ಬದುಕುದಿಲ್ಲ; ಅವನು ಘನತೆ ಮತ್ತು ಸ್ವಾಭಿಮಾನ ದಿಂದ ಮಾತ್ರ ಬದುಕಲಿಚ್ಛೆಸುತ್ತಾನೆ. ಅತ್ಯಂತ ಗುಣಸಂಪನ್ನರಾದವರು ತಮ್ಮ ಕಾರ್ಯವು

ಇತಿಹಾಸದ ಪುಟಗಳಲ್ಲಿ ಬರಲಿ ಎಂದು ಬಯಸುತ್ತಾರೆ. ಹೀಗೆ ತಮ್ಮ ವೀರ ಕಾರ್ಯಗಳ ಮೂಲಕ ಅಳಿಯದ ಕೀರ್ತಿ ಪಡೆಯಬಯಸುತ್ತಾರೆ. ಸಾಮಾನ್ಯವಾಗಿ ಕ್ಷಾತ್ರ ವರ್ಗದಲ್ಲಿ, ಸೈನ್ಯಾಧಿಕಾರಿಗಳು, ಕುಶಲ–ಕರ್ಮಿಗಳು, ಸಾಹಸಿಗರು, ವೃತ್ತಿಪರ ಆಟಗಾರರು, ಮತ್ತಿತ್ಯಾದಿ ಜನರು ಸೇರುತ್ತಾರೆ. ಸಮಸ್ಯೆಗಳನ್ನು ನೇರ ಹೋರಾಟ ಮೂಲಕ ಇಲ್ಲವೆ ಶಾರೀರಿಕ ಬಲದ ಮೂಲಕ ಪರಿಹರಿಸಲು ಹೆಣಗುವ ಯಾವನೇ ಇರಲಿ ಅವನು ಕ್ಷತ್ರಿಯ ವರ್ಗಕ್ಕೆ ಸೇರುತ್ತಾನೆ.

ವಿಪ್ರ ಮಾನಸವು ಕ್ಷತ್ರಿಯ ಮಾನಸಕ್ಕಿಂತ ಹೆಚ್ಚು ಮಾನಸಿಕ ಕಾರ್ಯಗಳತ್ತ ಪ್ರವೃತ್ತವಾಗಿರುತ್ತದೆ. ಕ್ಷತ್ರಿಯನಂತೆ ವಿಪ್ರನೂ ಸಹ ಜಡವನ್ನು ಗೆಲ್ಲಲು ಬಯಸುತ್ತಾನೆ. ಅವನೂ ಸಹ ಪರಿಸರವು ತನಗೆ ಅನಕೂಲಿಸುವಂತೆ ಮಾಡಿಕೊಳ್ಳಲು ಹೆಣಗುತ್ತಾನೆ. ಆದರೆ, ತನ್ನ ಬಂಟಗುಣ ಹಾಗೂ ಶಾರೀರಿಕ ಕೌಶಲಗಳಿಂದ ಜಡಶಕ್ತಿಗಳೊಂದಿಗೆ ಗುದಮುರಿಗೆ ಗಿಳಿಯುವ ಕ್ಷತ್ರಿಯನಿಗೆ ವ್ಯತಿರಿಕ್ತವಾಗಿ ವಿಪ್ರನು ಬಾಳಿನ ಸೌಲಭ್ಯಗಳನ್ನು ಸಂಪಾದಿಸಲು ತನ್ನ ಪರಿಣತಿಯನ್ನು ಬಳಸುತ್ತಾನೆ. ವಿಪ್ರ ಮಾನಸವು ಕ್ಷಾತ್ರ ಮಾನಸಕ್ಕಿಂತ ಸೂಕ್ಷ್ಮ. ಆದ್ದರಿಂದ, ಸಾಮಾಜಿಕ ಸಂಬಂಧಗಳಲ್ಲಿ ಹಾಗೂ ರಾಜಕಾರಣದಲ್ಲಿ, ಅನುಷಂಗಿಕವಾಗಿ ಕ್ಷತ್ರಿಯನಿಗಿಂತ ವಿಪ್ರನ ಕೈ ಮೇಲಾಗುತ್ತದೆ. ಹೀಗೆ ಮಹತ್ವಾಕಾಂಕ್ಷಿಗಳಾದ ವಿಪ್ರರಲ್ಲಿ ಪೌರುಷ ಹಾಗೂ ನಿರ್ಭೀತಿಗಳ ಅಭಾವವಿದ್ದರೂ ಸಹ ಅವರು ಕ್ಷಾತ್ರ ಮಾನಸವನ್ನೂ ಮತ್ತು ತನ್ಮೂಲಕ ಶೂದ್ರ ಮಾನಸವನ್ನೂ ನಿಯಂತ್ರಿಸುತ್ತ ಸಮಾಜದಲ್ಲಿ ಮೇಲುಗೈ ಪಡೆಯಲು ಹೆಣಗುತ್ತಾರೆ. ಶ್ರೀ ಸರಕಾರರ ಶಬ್ದಗಳಲ್ಲಿಯೇ ಹೇಳುವುದಾದರೆ, ಕ್ಷತ್ರಿಯನು ನೇರ ಹೋರಾಟ ಮೂಲಕ ಜಡವನ್ನೂ ತನ್ನ ವಶವರ್ತಿಯಾಗಿಸಿಕೊಳ್ಳಲು ಬಯಸುತ್ತಾನೆ. ಇತ್ತ ವಿಪ್ರನು ಜಡವನ್ನು ಗೆದ್ದ ಕ್ಷತ್ರಿಯನನ್ನೇ ತನ್ನ ಬುದ್ಧಿ ಚಾತುರ್ಯದ ಮಸೆದಾಟದ ಮೂಲಕ ತನಗಧೀನ ಮಾಡಿಕೊಳ್ಳ ಬಯಸುತ್ತಾನೆ. ಹೀಗೆ ಕ್ಷತ್ರಿಯನ ನಡೆವಳಿಯು ಸೀದಾ ಮತ್ತು ಸರಳ. ತಿಳಿಯಲು ತೊಂದರೆದಾಯಕವಲ್ಲ, ಆದರೆ,ವಿಪ್ರರು ಸಾಮಾನ್ಯವಾಗಿ ದುಂಡುಸುತ್ತು ಹಾಕಿ ಸಮಸ್ಯೆಯನ್ನು ತಲುಪುವರು. ಅವರು ಸಿದ್ಧಾಂತಗಳನ್ನು, ಪೂಜಾ ಪದ್ಧತಿಗಳನ್ನು ಮತ್ತು ಭಾವ ಜಡತೆಗಳನ್ನು ಹುಟ್ಟು ಹಾಕಿ, ಕ್ಷತ್ರಿಯರನ್ನು ಸಂದಿಗ್ಧತೆಗೀಡು ಮಾಡುತ್ತಾರೆ. ಮತ್ತು ಅವರು ಬೌದ್ಧಿಕ ದಾರಿದ್ರ್ಯದ ಲಾಭ ಪಡೆಯುತ್ತಾರೆ.

ಪುರೋಹಿತರು, ಬರಹಗಾರರು, ಕವಿಗಳು, ವಿಜ್ಞಾನಿಗಳು, ವಕೀಲರು, ವೈದ್ಯರು, ಶಿಕ್ಷಕರು ಮತ್ತು ಈ ಪ್ರಕಾರದ ಇತರ ಜನರು ಈ ವರ್ಗಕ್ಕೆ ಸೇರುತ್ತಾರೆ. ಬಹುತೇಕ ವಿಪ್ರರು ರಾಜಕಾರಣದಿಂದ ದೂರ ಉಳಿಯುತ್ತಾರೆ. ಮತ್ತು ತಮ್ಮ ಬೌದ್ಧಿಕ ಸಾಮರ್ಥ್ಯದಿಂದ ಬಾಳುತ್ತಾರೆ. ಆದರೆ ಉನ್ನತ ಸಾಮಾಜಿಕ ಮಟ್ಟವನ್ನೂ ಮತ್ತು ರಾಜಕೀಯ ಶಕ್ತಿಯನ್ನೂ ಬಯಸುವವರು ಕ್ಷಾತ್ರಮನದ ಮೇಲೇರಿ ಅವುಗಳನ್ನು ಸಂಪಾದಿಸುತ್ತಾರೆ. ಹೀಗೆ, ಪಂಡಿತರು ಆಳುವಾಗಲೆಲ್ಲ, ಅವರು ಕ್ಷತ್ರಿಯರನ್ನು ಗೆದ್ದುಕೊಂಡೇ ಆಳುತ್ತಾರೆ. ಏಕೆಂದರೆ, ಕ್ಷತ್ರಿಯರು ಮಾತ್ರ ಸಮಾಜದಲ್ಲಿ ಸುವ್ಯವಸ್ಥೆ ಕಾಪಾಡಲು ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಸಕ್ಷಮವಾಗಿರುತ್ತಾರೆ.

ಇನ್ನು ಕೊನೆಯದಾಗಿ, ನಾವು ವೈಶ್ಯ ಮಾನಸಕ್ಕೆ ಬರುತ್ತೇವೆ. ಬಹುತೇಕ ಜನರು ಜಡವಸ್ತುಗಳಿಂದ ಸುಖಭೋಗ ಬಯಸುತ್ತಾರೆ. ಆದರೆ, ವೈಶ್ಯ ಮಾನಸರಿಗೆ ತಮ್ಮ ಸಂಚಯದತ್ತ

ಒಲವಿರುತ್ತದೆ. ಶ್ರೀ ಸರಕಾರರ ಮೇರೆಗೆ ನಿಜವಾಗಿ ವೈಶ್ಯರು "ಜಡವಸ್ತುಗಳಿಂದ ಸುಖ ಭೋಗಕ್ಕಿಂತಲೂ ಹೆಚ್ಚಾಗಿ ಅವುಗಳನ್ನು ಹೊಂದುವುದರತ್ತ ವಾಲುತ್ತಾರೆ. ಅವುಗಳನ್ನು ಕುರಿತು ವಿಚಾರಿಸುವಲ್ಲಿ ಶಾಂತಿ ಪಡೆಯುತ್ತಾರೆ. ಇಲ್ಲವೆ ಅವುಗಳನ್ನು ನೋಡಿ ನೋಡಿ ಕಣ್ಣಿಗೆ ಹಬ್ಬ ತಂದುಕೊಳ್ಳುತ್ತಾರೆ. (2 ಪುಟ 101) ಕಾಲದ ಮೂರು ಅವಧಿಗಳಲ್ಲಿ ವೈಶ್ಯನು ನಿರಂತರ ಭವಿಷ್ಯದ ಚಿಂತೆಯಲ್ಲಿಯೇ ನಿರತನಾಗಿರುತ್ತಾನೆ. ಮತ್ತು ದುರ್ದಿನಗಳಿಗೋಸುಗ ಸಂಪತ್ತಿನ ಸಂಚಯ ಮಾಡಲು ತಡಕಾಡುತ್ತಾನೆ. ಕಾಲಚಕ್ರದಲ್ಲಿ ಒಂದು ಸಮಯಕ್ಕೆ ಸಮೃದ್ಧ ವೈಶ್ಯನು ಇನ್ನಿತರ ಮೂರು ವರ್ಗಗಳ ಸೇವೆಗಳನ್ನು ಐಶ್ವರ್ಯ ಮೂಲಕ ಖರೀದಿಸಿ ಅವರ ಮೇಲೆ ಪ್ರಭುತ್ವ ನಡೆಸುತ್ತಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಂಪತ್ತಿನ ಸಂಚಯವನ್ನೇ ಸನ್ನೆಕೋಲು ಮಾಡಿಕೊಂಡು ವೈಶ್ಯನು ಕೇವಲ ಜೀವನ ಸೌಕರ್ಯಗಳನ್ನು ಮತ್ತು ಭವಿಷ್ಯದ ಭದ್ರತೆಗಳನ್ನಷ್ಟೇ ಅರಸುವುದಲ್ಲದೆ, ಸಮಾಜದಲ್ಲಿ ಪ್ರತಿಷ್ಠೆಯನ್ನು ಮತ್ತು ಪ್ರಭುತ್ವವನ್ನು ಹುಡುಕಾಡುತ್ತಾನೆ. ಬಡ್ಡಿ ವ್ಯವಹಾರ ಮಾಡುವವರು, ವ್ಯಾಪಾರಸ್ಥರು, ಇನಾಮದಾರರು ಮತ್ತು ಬಂಡವಾಳ ವಾದಿಗಳು ಈ ವರ್ಗಕ್ಕೆ ಸೇರುತ್ತಾರೆ. ಎಲ್ಲ ವೈಶ್ಯರು ರಾಜಕೀಯದಲ್ಲಿ ಆಸಕ್ತಿ ಹೊಂದಿರುವುದಿಲ್ಲವೆಂಬುದಂತೂ ಸ್ಪಷ್ಟ ಆದರೆ ವಿಪ್ರರನ್ನು ಬಾಡಿಗೆಗೆ ತೆಗೆದುಕೊಂಡು, ಸಮಾಜದಲ್ಲಿ ಮೇಲೇರುವವರು ಸಾಮಾನ್ಯವಾಗಿ ರಾಜಕೀಯದಲ್ಲಿ ಮೂತಿ ಹಾಕುತ್ತಾರೆ. ಆದರೂ, ಸಹ ಈ ಮುನ್ನ ಕ್ಷತ್ರಿಯರು ವಿಪ್ರರಿಗಾಗಿ ಹಾಗೂ ಶೂದ್ರರು ಕ್ಷತ್ರಿಯರಿಗಾಗಿ ಕೆಲಸ ಮಾಡುತ್ತಿದ್ದರು. ಹೀಗೆ ಕಾಲಚಕ್ರದ ಒಂದು ಸಮಯದಲ್ಲಿ ವೈಶ್ಯೇತರ ವರ್ಗಗಳೆಲ್ಲ ಧನಿಕರಿಗೆ ಅಂದರೆ ಸಂಚಯ ಮಾನಸವೇ ತುಂಬಿ ತುಳುಕುವವರಿಗೆ ಶರಣಾಗುತ್ತಾರೆ.

ಒಂದು ಸರಳ ನಿದರ್ಶನ ಮೂಲಕ ಈ ನಾಲ್ಕು ಮಾನಸ ಪ್ರಕಾರಗಳನ್ನು ತಿಳಿಸಬಯಸುವೆ. ಒಂದು ಸಮಸ್ಯೆ ಉದ್ಭವಿಸಿದರೆ, ಶೂದ್ರನು ಅದನ್ನು ನಿರ್ಲಕ್ಷಿಸಿಬಿಡುತ್ತಾನೆ. ಇಲ್ಲವೆ ಅದರ ಪರಿಹಾರವನ್ನು ಸಾಧ್ಯವಾದಷ್ಟು ದೀರ್ಘಕಾಲ ಮುಂದಕ್ಕೆ ತಳ್ಳಲು ಯತ್ನಿಸುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ, ಕ್ಷತ್ರಿಯನು ಕೂಡಲೇ ಸಮಸ್ಯೆಯನ್ನು ಎದುರಿಸುತ್ತಾನೆ. ತನ್ನ ಶಾರೀರಿಕ ಬಲ ಬಳಸುತ್ತಾನೆ. ಮತ್ತು ಸಮಸ್ಯೆ ಪರಿಹಾರ ಕಾಣುವ ವರೆಗೆ ವಿರಮಿಸುವುದಿಲ್ಲ. ಇನ್ನು ವಿಪ್ರನು ತನ್ನ ಬುದ್ಧಿಯನ್ನು ಬಳಸುತ್ತಾನೆ. ಆದರೆ ಅದರಿಂದ ಕೆಲಸವಾಗದಿದ್ದರೆ, ಕ್ಷತ್ರಿಯರಿಂದ ನೆರವನ್ನಾದರೂ ಕೋರುತ್ತಾನೆ. ಇಲ್ಲವೆ ಮನವೊಲಿಸುವ ವಾದ ಸರಣಿಯಿಂದ ಅವರನ್ನು ತನ್ನೆಡೆಗೆ ಕರೆದೊಯ್ಯುತ್ತಾನೆ. ಕೊನೆಯದಾಗಿ ವೈಶ್ಯನು ವಿಪ್ರರನ್ನು, ಕ್ಷತ್ರಿಯರನ್ನು ಮತ್ತು ಶೂದ್ರರನ್ನು ಹಣ ಸುರುವಿ ವಶಪಡಿಸಿಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾನೆ. ಈ ನಿದರ್ಶನವು ಎಲ್ಲ ಪ್ರಕರಣಗಳನ್ನು ಒಳಗೊಂಡಿಲ್ಲ. ಆದರೆ, ಸಾಮಾನ್ಯರು, ಗಂಡಸರು ಮತ್ತು ಹೆಂಗಸರು, ಬಾಳು ಸಾಗಿಸುವಲ್ಲಿ ತಾಳಿದ ವಿಭಿನ್ನ ಮನೋವೃತ್ತಿಗಳ ಕಲ್ಪನೆ ನೀಡುತ್ತದೆ.

ಆಫ್ರಿಕಾ, ಏಶಿಯಾ, ಯುರೋಪ ಇಲ್ಲವೆ ಬೇರೆ ಎಲ್ಲಿಯೇ ಇರಲಿ, ನಾಗರಿಕತೆಯು ಅಭಿವೃದ್ಧಿ ಹೊಂದದಲ್ಲೆಲ್ಲ, ಚರಿತ್ರೆಯನ್ನು ಕಾಳಜಿಪೂರ್ವಕ ಅಧ್ಯಯನ ಮಾಡಿದರೆ ಸಮಾಜ ದೇಹವು ಚತುರ್ಮುಖಿಯಾಗಿ ವಿಭಾಗವಾಗಿದೆಯೆಂಬುದು ತಿಳಿಯುತ್ತದೆ. ಚಾತುರ್ವರ್ಣೀಯ ಸಾಮಾಜಿಕ ವ್ಯವಸ್ಥೆ ಎಂದು ಶ್ರೀ ಸರಕಾರ ಇದನ್ನು ಕರೆದಿದ್ದಾರೆ. ಅವರು ವಿವರಿಸಿದ ಮನು

ಶ್ರೇಣಿಗಳು ಪಕ್ವ ಸಮಾಜದ ಪೂರ್ಣ ವಲಯವನ್ನು ಒಳಗೊಳ್ಳುವಷ್ಟು ವಿಸ್ತೃತವಾಗಿವೆ. ಹೀಗೆ, ನಾವು ಪಕ್ವವಾಗಿದೆಯೆಂದು ತಿಳಿಯುವ ಸಮಾಜವು ನಾಲ್ಕು ವಿಭಾಗಗಳಿಂದ ಕೂಡಿದೆ. ಪ್ರತಿಯೊಂದು ವಿಭಾಗವು ಒಂದು ಪ್ರಕಾರದ ಮನಸ್ಸಿನ ಪ್ರಾಬಲ್ಯವು ಪ್ರತಿಫಲಿಸುವ ಜನರಿಂದ ಕೂಡಿದೆ. ಸಾಮಾನ್ಯವಾಗಿ ವೈಯಕ್ತಿಕ ನಡವಳಿಯು ಎರಡು ಇಲ್ಲವೆ ಎಲ್ಲ ನಾಲ್ಕೂ ಮನೋವೃತ್ತಿಗಳನ್ನು ತೋರಿಸುತ್ತದೆ. ಆದರೆ, ಬಹುಮಟ್ಟಿಗೆ, ಮತ್ತು ವಿಶೇಷವಾಗಿ ಬಲಾತ್ಕಾರಕ್ಕೊಳಗಾದಾಗ ಕೇವಲ ಒಂದೇ ಮಾನಸಿಕತೆಯು ತನ್ನ ನೈಜ ಬಣ್ಣದಲ್ಲಿ ಅಭಿವ್ಯಕ್ತವಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಅಲ್ಪಸ್ವಲ್ಪ ಸಂಚಯ ವೃತ್ತಿಯು ಸಹಜವಾಗಿಯೇ ಇರುತ್ತದೆ. ಆದರೆ ಕೇವಲ ಕೆಲವೇ ಜನರು ಮಾತ್ರ ಸತತ ಹಣಪಿಪಾಸುಗಳಾಗಿರುವರು. ಮತ್ತು ಅದನ್ನೇ ಜೀವನದ ಸಾರಸರ್ವಸ್ವವನ್ನಾಗಿಸಿಕೊಂಡಿರುತ್ತಾರೆ. ನಾವೆಲ್ಲರೂ ಸುಖಕರ ಜೀವನಮಟ್ಟ ಹಾಗೂ ಸಾಮಾಜಿಕ ಪ್ರತಿಷ್ಠೆಗಳ ಬೆನ್ನು ಹತ್ತಿದ್ದೇವೆ. ಆದರೆ, ನಮ್ಮಲ್ಲಿ ಕೆಲವರು ಶಾರೀರಿಕ ಶಕ್ತಿ ಹಾಗೂ ಕೌಶಲಗಳಿಂದ ಅವುಗಳನ್ನು ಸಂಪಾದಿಸಬಯಸುತ್ತಾರೆ. ಬೇರೆ ಹಲವರು ಬೌದ್ಧಿಕ ಕಾರ್ಯ ಹಾಗೂ ಮೇಲ್ಮೈಯ ಮೂಲಕ, ಇನ್ನೂ ಕೆಲವರು ಬಿಟ್ಟುಬಿಡದೆ ಹಣ ಉಳಿಸಿ ಇಲ್ಲವೆ ಕೈಯಲ್ಲಿರುವ ಹಣದಿಂದ ಇನ್ನಷ್ಟು ಹಣ ಮಾಡಿ, ಅವುಗಳನ್ನು ಸಂಪಾದಿಸಬಯಸುತ್ತಾರೆ. ಈ ಕ್ರಮಾನುಸಾರ, ನಾವು ಕ್ಷತ್ರಿಯರೂ ಆಹುದು; ವಿಪ್ರ ಮತ್ತು ವೈಶ್ಯರೂ ಸರಿ. ನಮ್ಮಲ್ಲಿ ಮಹತ್ವಾಕಾಂಕ್ಷೆ ಇಲ್ಲವೆ ಉತ್ಸಾಹವು ಅತ್ಯಲ್ಪವಿರುವವರು, ಮೂಲ ಶಿಕ್ಷಣದ ಅಭಾವವಿದ್ದವರು ಮತ್ತು ಆಯಾ ಕಾಲಕ್ಕೆ ತಕ್ಕ ಕೌಶಲದ ಅಭಾವವಿದ್ದವರು ಶೂದ್ರರೇ ಸರಿ.

ನಾಲ್ಕು ವಿಭಿನ್ನ ಸಮೂಹಗಳಲ್ಲಿ ಶ್ರೀ ಸರಕಾರ ಮಾಡಿರುವ ಸಮಾಜದ ವಿಭಜನೆಯು ಸಾಕಷ್ಟು ಮಣಹವುಳ್ಳದ್ದು. ಒಂದು ವೇಳೆ, ಓರ್ವ ವ್ಯಕ್ತಿಯ ಮಾನಸಿಕ ಗುಣಧರ್ಮಗಳು ಕಾಲಾನುಕ್ರಮೇಣ ಪರಿವರ್ತಿಸಿದರೆ ಈ ಸಮೂಹಗಳಲ್ಲಿ ಸಾಮಾಜಿಕ ಗಮನಾಗಮನಗಳಾಗ ಬಹುದು. ನಿಸ್ಸೀಮ ಪ್ರಯತ್ನದ ಮೂಲಕ ಇಲ್ಲವೆ ಇತರರೊಂದಿಗಿನ ಸುದೀರ್ಘ ಸಂಪರ್ಕ ಮೂಲಕ ಓರ್ವ ವ್ಯಕ್ತಿಯು ಇನ್ನೊಂದು ವರ್ಗದ ವಲಯಕ್ಕೆ ಹೋಗಬಹುದು. ಉದಾಹರಣೆಗೆ, ಕ್ಷತ್ರಿಯನ ಪ್ರಭಾವದಿಂದ ಶೂದ್ರನೊಬ್ಬನು ಪ್ರಾಮಾಣಿಕ ಕ್ಷತ್ರಿಯನಾಗಬಹುದು ಅಥವಾ ಉತ್ಸಾಹಪೂರ್ಣ ಶಿಕ್ಷಣ ಮೂಲಕ ಅವನಾಗಲಿ ಅವಳಾಗಲಿ ವಿಪ್ರರಾಗಬಹುದು ಇತ್ಯಾದಿ. ಅದೇರೀತಿ, ವಿದ್ವಾನನ ಬುದ್ಧಿಯು, ಹಣದ ಸಂಪರ್ಕದಿಂದ ವೈಶ್ಯ ಬುದ್ಧಿಗೆ ತಿರುಗಬಹುದು ಇಲ್ಲವೆ ವೈಶ್ಯನೊಬ್ಬನು ಶೂದ್ರನಾಗಲೂಬಹುದು. ಹೀಗೆ ಶ್ರೀ ಸರಕಾರರ ವಿಚಾರಾನುಸಾರ, ಸಮಾಜದಲ್ಲಿಯ ವರ್ಗ ಭೇದಗಳು ಮಾನವ ಸ್ವಭಾವ ಜನ್ಯವಾಗಿದೆ. ಅವು ಆನುವಂಶಿಕವಾಗಿರಬಹುದು. ಇಲ್ಲವೆ ಆಗದಿರಬಹುದು.

ಸಮಾಜ ಚಕ್ರ ಸಿದ್ಧಾಂತ :

ಸಮಾಜದಲ್ಲಿಯ ಜನರ ನಾಲ್ಕು ಪ್ರಕಾರಗಳನ್ನು ತಿಳಿಸಿದ ನಂತರ, ನಾನೀಗ ಶ್ರೀ ಸರಕಾರರ ಸಾಮಾಜಿಕ ಚಕ್ರ ಸಿದ್ಧಾಂತವನ್ನು ತಿಳಿಸಬಲ್ಲವನಾಗಿರುವೆ. ತಮ್ಮ ಚಾತುರ್ವರ್ಣೀಯ ಸಾಮಾಜಿಕ ವ್ಯವಸ್ಥೆಗನುಸರಿಸಿ, ಸಮಾಜವು ಕಾಲಾನುಕ್ರಮದಲ್ಲಿ ನಾಲ್ಕು ಸುಸ್ಪಷ್ಟ ಯುಗಗಳೆಂದು

ವಿಕಾಸ ಹೊಂದುತ್ತದೆಯೆಂದು ಶ್ರೀ ಸರಕಾರ ಪ್ರತಿಪಾದಿಸುತ್ತಾರೆ. ಕೆಲವೊಮ್ಮೆ ಕ್ಷತ್ರಿಯರು, ಕೆಲವೊಮ್ಮೆ ವಿಪ್ರರು ಮತ್ತೆ ಕೆಲವೊಮ್ಮೆ ವೈಶ್ಯರು ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಮೇಲೆ ಪ್ರಭುತ್ವ ಸಾಧಿಸುತ್ತಾರೆ. ಶೂದ್ರರೆಂದೂ ಆಡಳಿತೆಯ ಲಗಾಮು ಹಿಡಿಯರು. ಆದರೆ ಕೆಲವೊಮ್ಮೆ ಆಳುವ ವರ್ಗವು ಎಷ್ಟೊಂದು ಸ್ವಾರ್ಥಪರರೂ ಮತ್ತು ಮಲೆತ ಬುದ್ಧಿಯವರೂ ಆಗಿರುವರೆಂದರೆ, ಕೆಲ ಕಾಲ ಸಮಾಜವು ಶೂದ್ರ ಯುಗದ ಅವ್ಯವಸ್ಥೆಯ ಮುಖಾಂತರ ಜಡವಾಗುತ್ತದೆ. ಹೀಗೆ ಯಾವುದೊಂದು ಸಮುದಾಯವೂ ಸಹ ನಿರಂತರವಾಗಿ ಸಾಮಾಜಿಕ ಪ್ರಭುತ್ವವನ್ನು ಮತ್ತು ಅಧಿಕಾರವನ್ನು ಹೊಂದಲಾರರು. ಇದಲ್ಲದೆ, ಸಮಾಜದ ಗತಿಯು ಒಂದು ಯುಗದಿಂದ ಇನ್ನೊಂದಕ್ಕೆ ಸಾಗುವಾಗ ಸುಸ್ಪಷ್ಟ ವಿನ್ಯಾಸವನ್ನು ಅನುಸರಿಸುತ್ತದೆಯೆಂಬುದು ಹೆಚ್ಚು ಕುತೂಹಲಕರವೂ ಮತ್ತು ಕ್ಲಿಷ್ಟಕರವೂ ಆಗಿದೆ. ಪ್ರಾಚೀನವಿರಲಿ, ಆಧುನಿಕವಿರಲಿ, ಪೌರ್ವಾತ್ಯವಿರಲಿ ಇಲ್ಲವೆ ಪಾಶ್ಚಿಮಾತ್ಯವಿರಲಿ, ಪ್ರತಿಯೊಂದು ನಾಗರಿಕತೆಯ ವಿಕಾಸದಲ್ಲಿ ನಿರ್ದಿಷ್ಟವಾಗಿ, "ಶೂದ್ರ ಯುಗವೂ, ನಂತರ ಕ್ಷತ್ರಿಯ ಯುಗವೂ, ಕ್ಷತ್ರಿಯ ಯುಗಾನಂತರ ವಿಪ್ರಯುಗವೂ ಮತ್ತುವಿಪ್ರ ಯುಗಾನಂತರ ಕ್ರಾಂತಿಯಲ್ಲಿ ವೈಶ್ಯ ಯುಗವೂ ಬರುತ್ತವೆ. ಮತ್ತು ಕೊನೆಗೆ ಸಮಾಜ ಚಕ್ರವು ಸಾಮಾಜಿಕ ಪರಿಸಮಾಪ್ತಿ ಹೊಂದುತ್ತದೆ. ಇಂಥ ಸಾಮಾಜಿಕ ವಿಕಾಸವು ಎಂದೂ ತಪ್ಪದ ನಿಸರ್ಗ ನಿಯಮವಾಗಿದೆ" (2, ಪುಟ 40).

ಇದು ಶ್ರೀ ಸರಕಾರರ ಸಮಾಜ ಚಕ್ರದ ನಿಯಮ. ಇಲ್ಲಿ 'ವಿಕಾಸ' ಪದದತ್ತ ಲಕ್ಷ್ಯ ಕೊಡಿರಿ. ಈ ನಿಸರ್ಗ ನಿಯಮವು 'ನಿಶ್ಚಿತ'. ಏಕೆಂದರೆ, ಇದು ವಿಕಾಸಾತ್ಮಕ ತತ್ತ್ವವನ್ನಾಧರಿಸಿದೆ. ಪ್ರಾಣಿ ಜೀವನದಿಂದ ಮಾನವ ವಿಕಾಸವು ನಿರ್ವಿವಾದವಾಗಿರುವಂತೆಯೇ, ವಿಕಾಸದ ಏಣಿಗುಂಟ ಮಾನವನ ಮುನ್ನಡೆಯನ್ನು ನಿರೋಧಿಸುವದು ಅಶಕ್ಯವಿರುವಂತೆಯೇ, ಈ ಸಮಾಜ ಚಕ್ರ ಗತಿಯೂ ಸಹ ಅನಿವಾರ್ಯ ನೈಸರ್ಗಿಕ ಘಟನೆಯಾಗಿದೆ. ಇದರಿಂದಾಗಿ ಸಾಮಾಜಿಕ ಮುಂದಾಳುತನವು ಸಮಾಜದ ಒಂದು ವರ್ಗದಿಂದ ಇನ್ನೊಂದಕ್ಕೆ, ಒಂದು ಪ್ರಕಾರದ ಸಮಷ್ಟಿ ಮಾನಸದಿಂದ ಇನ್ನೊಂದಕ್ಕೆ ಸ್ಥಾನಾಂತರಗೊಳ್ಳುತ್ತದೆ. ಹೀಗೆ, ಸಮಾಜದಲ್ಲಿಯ ತೋರಿಕೆಯ ಅಡ್ಡಾದಿಡ್ಡಿ ಪರಿವರ್ತನೆಯ ಅಡಿಗೆ ಅದೃಶ್ಯವಾದ, ಆದರೆ ತಪ್ಪದ, ನಿಸರ್ಗ ನಿಯಮದ ಕೆಲವು ಟಾಪವಿಸುತ್ತದೆ. ಮಾನವ ವಿಕಾಸದೊಂದಿಗೇ ಸಾಮಾಜಿಕ ವಿಕಾಸವೂ ಹೆಜ್ಜೆಯನ್ನು ಹಾಕುತ್ತದೆ. ಶ್ರೀ ಸರಕಾರರು ಇಂಥ ದಾರ್ಶನಿಕ ಪದಗಳಲ್ಲಿ ತಮ್ಮ ಸಂದೇಶ ಬೀರುತ್ತಾರೆ. ಅವರ ದೃಷ್ಟಿಯಲ್ಲಿ ಸಮಾಜವು ಒಂದು ಗತಿಶೀಲ ಸತ್ತೆ. ಮತ್ತು ಸತತ ಪರಿವರ್ತನೆಯು ಅದರ ಸಾರ. ಕ್ಷತ್ರಿಯ ಯುಗದಿಂದ ನಾಗರಿಕತೆಯು ಉದಿಸುತ್ತದೆ. ಇನ್ನು ಸಾಕಷ್ಟು ಏರಿಳಿತಗಳ ನಂತರ ವಿಪ್ರ, ವೈಶ್ಯ, ಶೂದ್ರ ಯುಗಗಳನ್ನು ಹಾಯ್ದು, ಅದು ಕ್ಷತ್ರಿಯ ಯುಗಕ್ಕೆ ಮರಳುತ್ತದೆ. ಮತ್ತೊಮ್ಮೆ ಅದೇ ಹಳೆಯ ಟಂದೋಬದ್ದಗತಿಗನುಸರಿಸಿ, ತನ್ನ ವಿಕಾಸಾತ್ಮಕ ಮುನ್ನಡೆಯನ್ನು ಪುನರಾರಂಭಿಸುತ್ತದೆ. ಸಂಕ್ಷೇಪವಾಗಿ, ಇದುವೇ ಶ್ರೀ ಸರಕಾರರ ಸಮಾಜ ಚಕ್ರ.

ಸಮಾಜವೇಕೆ ಈ ಪರಿವರ್ತನೆಗಳ ಮೂಲಕ ಸಾಗಬೇಕು? ಅದೇಕೆ ಚಕ್ರ ಗತಿಯಲ್ಲಿ ಸಾಗಬೇಕು? ಸರಳ ರೇಖೆಗುಂಟ ಏಕೆ ಸಾಗಕೂಡದು? ಪ್ರತಿಯೊಂದು ಲೌಕಿಕ ಸತ್ತೆಯೂ ಗತಿಶೀಲವಿದೆ. ಅದು ಒಂಟಿಯಾಗಿರಲಿ ಇಲ್ಲವೆ ಸಮಾಜದಂತೆ ಸಾಮೂಹಿಕವಿರಲಿ,

ಸ್ಪಂದಾತ್ಮಕವಿರುತ್ತದೆ. ಅರ್ಥಾತ್ ಹೃದಯಮಿಡಿತದಂತೆ. ಅದರ ಗತಿಧರ್ಮವು ಆಕುಂಚನ ಹಾಗೂ ಪ್ರಸರಣಗಳ ಕ್ರಮದಲ್ಲಿ ಪ್ರವಹಿಸುವದೇ ಆಗಿದೆ. ಪ್ರತಿಯೊಂದು ಗತಿ ತರಂಗದ ಏರಿಕೆಯ ಸ್ವರೂಪವು ಅದರ ಪ್ರಗತಿಪರ ಅವಸ್ಥೆಯ ಅಭಿವ್ಯಕ್ತಿಯಷ್ಟೇ ಸರಿ. ಇದರ ಸಮಾಪ್ತಿಯ ನಂತರ ಅದು ತನ್ನ ಹಿಂದಿನ ಸ್ಥಿತಿಗೆ ಅಂದರೆ, ಕೆಳ ಹಂತಕ್ಕೆ ಮರಳುತ್ತದೆ. ಪ್ರತಿಯೊಂದು ಸಾಪೇಕ್ಷ ಗತಿಯೇಕೆ ಸ್ಪಂದಾತ್ಮಕವಿರುತ್ತದೆ? ಕಾರಣವಿಷ್ಟೇ. ಅದರ ಸ್ಫೂರ್ತಿಯ ಮೂಲವು ಅದರ ನಿಶ್ಚಲ ಸ್ಥಿತಿಯೇ ಆಗಿದೆ. ಇದನ್ನು ಶ್ರೀ ಸರಕಾರ ಅವರು ಜಡಾವಸ್ಥೆಯನ್ನದೆ ಸಮತೋಲನಾವಸ್ಥೆ ಅಥವಾ ಭಾರಸಾಮ್ಯಾವಸ್ಥೆ ಎಂದು ವ್ಯಾಖ್ಯಾನಿಸಿದ್ದಾರೆ. ನಿಶ್ಚಲತ್ವದಿಂದಲೇ ಪ್ರತಿಯೊಂದು ಕ್ರಿಯೆಯು ಚಿಮ್ಮುತ್ತದೆ. ಮತ್ತು ಮರಳಿ ನಿಶ್ಚಲತ್ವಕ್ಕೇನೇ ಪ್ರತಿಯೊಂದು ಕ್ರಿಯೆಯು ಮರಳುತ್ತಿದೆ. ಈಗ ಒಂದು ವಸ್ತುವಿನ ಸಮತೋಲನವು ಬಾಹ್ಯ ಶಕ್ತಿಯಿಂದ ಕದಡಿತೆಂದು ತಿಳಿಯಿರಿ. ಆಗ ಸಮತೋಲಾವಸ್ಥೆಯಿಂದ ಅದರ ಸರಿಯುವಿಕೆಯು ಮತ್ತು ಆ ಸತ್ತೆಯ ತತ್ಸಂಬಂಧಿ ಕ್ಷೋಭೆಯು ಅದರ ಪ್ರಸರಣಾ ಹಂತವನ್ನು ಒಳಗೊಳ್ಳುತ್ತದೆ. ಒಂದು ವೇಳೆ, ಆ ಹಂತದಲ್ಲಿ ಸ್ವಲ್ಪ ಪ್ರಾಣಶಕ್ತಿ ಉಳಿದಿದ್ದರೆ, ಅಲ್ಲಿ ಅದರ ಆಕುಂಚನ ಹಂತದ ಆರಂಭವಾಗುತ್ತದೆ. ಪುನಃ ಮರಳುವ ಗತಿಯೇ ಅದರ ಗುರುತು. ಈ ಪ್ರಕ್ರಿಯೆಯಲ್ಲಿ ರೂಪಗೊಂಡ ಸತ್ತೆಯು ಆಗ ಸಮತೋಲಾವಸ್ಥೆಯತ್ತ ಅಥವಾ ಸ್ಥಿರಾವಸ್ಥೆಯತ್ತ ಮರಳುತ್ತದೆ. ಅದರ ಸಮತೋಲನಾವಸ್ಥೆಯನ್ನವಲಂಬಿಸಿ, ಅದು ಮುಂಚೆಗಿಂತಲೂ ಅತಿ ಹೆಚ್ಚು ಉತ್ಸಾಹದಿಂದ ಆಕುಂಚನ ಹಂತದ ಅವಧಿಯಲ್ಲಿ ವಿಕಾಸ ಹೊಂದುತ್ತದೆ. ಆದಾಗ್ಯೂ, ಭಾರಸಾಮ್ಯವಿರದ ಅಥವಾ ಪ್ರಸರಣಾ ಹಂತದಲ್ಲಿ ಯಾವುದೇ ಮರು–ಗತಿಯು ಘಟಿಸದಿದ್ದರೆ, ಆ ಸತ್ತೆಯು ಸಾವನ್ನಪ್ಪುತ್ತದೆ. ಹೀಗೆ ಸಕಲ ಸಾಪೇಕ್ಷ ಗತಿಗಳೂ ಸ್ಪಂದಾತ್ಮಕವಾಗಿವೆ. ಅವು ಪೂರ್ಣ ಚಕ್ರಗತಿಯ ನಂತರ ಇಲ್ಲವೆ ಆ ಮುನ್ನ ನಶಿಸಬಹುದು. ಇಲ್ಲವೆ ಸಹಜ ಬಲವನ್ನವಲಂಬಿಸಿ, ಕೊನೆಯಲ್ಲಿ ಚಕ್ರಗತಿ ಪಥದ ಗುಂಟ ಚಲಿಸಬಹುದು. ಆದರೆ ಪ್ರಸರಣ ಮತ್ತು ಆಕುಂಚನ ಗತಿಗಳ ಅನುಕ್ರಮ ಪ್ರವಾಹಗಳಿಂದ ಈ ಚಲನೆಯನ್ನು ಗುರುತಿಸ ಬಹುದಾಗಿದೆ. ಯಾವುದೇ ಸತ್ತೆಯ ನಿರಾತಂಕ, ನಿರ್ದೇಶನ ರಹಿತ ಪ್ರವಾಹವು ಅಸಾಧ್ಯ.

ನಾಗರಿಕತೆಯೂ ಸಹ ಒಂದು ಸಾಪೇಕ್ಷ ಗತಿಯೇ ಆಗಿದೆ. ಪ್ರತಿಯೊಂದು ಕ್ರಿಯೆಯಂತ ಅದೂ ಸಹ ಕೆಲವೊಂದು ವೇಗ ಹೊಂದಿರುತ್ತದೆ. ಇದರಗುಂಟ ಸಮಾಜವು ಆದಿ ಕಾಲದ ಸಮುದಾಯಕ್ಕಿಂತ ಅತಿ ಹೆಚ್ಚು ತೀವ್ರಗತಿಯಲ್ಲಿ ವಿಕಾಸಗೊಳ್ಳುತ್ತದೆ. ಟಾಯ್ನಬಿ ಪ್ರಕಾರ, (3) ಕಾಡು ಜನಾಂಗವೆಂದರೆ, ಜೀವನದ ಆಹ್ವಾನಗಳಿಗೆ ಸಾಕಷ್ಟು ಪ್ರತಿಸ್ಪಂದಿಸದಿರುವ ಜನಸಮುದಾಯ. ಸಾಪೇಕ್ಷಗತಿಗಳಾಗಿರುವದರಿಂದ ನಾಗರಿಕತೆಗಳೂ ಸಹ, ಶ್ರೀ ಸರಕಾರರ ಸಾಮಾಜಿಕ ಯುಗಗಳು ಪ್ರತಿನಿಧಿಸುವ ಚಕ್ರದ ಪರಿವರ್ತನೆಗಳ ಘಟನಾವಳಿಗೆ ಒಳಪಟ್ಟಿವೆ.

ಇನ್ನು ಶೂದ್ರ ಯುಗವಾವುದು? ಸಂಪೂರ್ಣ ಮಾರ್ಗದರ್ಶನ ಮತ್ತು ಪ್ರಾಧಿಕಾರದ ಅಭಾವದಿಂದ ಬಳಲುವ ಸಮಾಜವೇ ಶೂದ್ರ ಸಮಾಜ. ಅಲ್ಲಿ ತಥಾಕಥಿತ ಮುಖಂಡರು ಎಷ್ಟು ಸ್ವಾರ್ಥಿಗಳಾಗಿರುವರೆಂದರೆ, ಅವರ ಹೆಜ್ಜೆಯಲ್ಲಿ ಹೆಜ್ಜೆ ಇಡುವ ಬಹುಜನರು ಶೂದ್ರ ಮಾನಸವನ್ನು ಅಭಿವ್ಯಕ್ತಿಸುತ್ತಾರೆ. ಈ ಮಾನಸವು ಸಹಜ ಸ್ವಭಾವ ಹಾಗೂ ಕೇವಲ ಸ್ವಾರ್ಥ

ಪರತೆಗಳ ಅಂಕೆಗೊಳಪಟ್ಟಿರುತ್ತದೆ. ಶೂದ ಯುಗವು, ಆ ಬಳಿಕ ಸಾಮಾಜಿಕ ವ್ಯವಸ್ಥೆಯ ಅಭಾವದಿಂದಾಗಿ ಬಂಡಾಯದ ಬೀಡಾಗುತ್ತದೆ. ಅಲ್ಲಿ ಕೌಟುಂಬಿಕ ಸಂಬಂಧಗಳು ಬಂಧನಕಾರಿಯಾಗವು. ಜನತೆ ಉನ್ನತ ಮೌಲ್ಯಗಳನ್ನು ಪುರಸ್ಕರಿಸುತ್ತಾರೆ. ಅದೇ ರೀತಿ, ಜೀವನದ ನಯ ನಾಜೂಕುಗಳತ್ತ ಕೂಡ ಧಾರ್ಮಿಕ ನಡೆಯೆಂಬುದೇನಾದರೂ ಇದ್ದರೆ, ಅಜ್ಞಾತದ ಭೀತಿ – ಜನ್ಯವಷ್ಟೇ. ನೈತಿಕತೆಯು ಅತ್ಯಂತ ಸಡಿಲು. ಅಪರಾಧದ ಅಟ್ಟಹಾಸ ಮತ್ತು ಸಮಾಜದ ಗರ್ಭದಾಳ ಪರ್ಯಂತ ಭೌತಿಕವಾದವು ಒಳ ಸೇರಿರುತ್ತನೆ. ಶೂದ್ರ ವೃತ್ತಿಯ ಜನರು ಎಲ್ಲೆಡೆ, ಎಲ್ಲ ನಾಗರಿಕತೆಗಳಲ್ಲಿ ಇರುತ್ತಾರೆ. ಆದರೆ ಸಮಾಜವು ಸಕಲ ಉದ್ದೇಶಗಳಿಂದ ವಂಚಿತವಾದಾಗ, ಮತ್ತು ಜನಸಾಮಾನ್ಯರ ದಮನವು ಗರಿಷ್ಠ . ಮಿತಿ ಮುಟ್ಟಿದಾಗ, ಶೂದ್ರ ಯುಗಾರಂಭವಾಗುತ್ತದೆ. ಶೂದ್ರ ಯುಗದಲ್ಲಿ ರಾಜ್ಯ ಇಲ್ಲವೆ ಸರಕಾರವು ಅಸ್ತಿತ್ವದಲ್ಲಿರಬಹುದು. ಆದರೆ ಅದರ ಪ್ರಭುತ್ವಕ್ಕೆ ಗೌರವ ಸಿಗದು. ಅದೇನೇ ಇರಲಿ, ಶೂದ್ರರು, ಎಷ್ಟೇ ಬಹು ಸಂಖ್ಯಾತರಿರಲಿ, ಸರಕಾರವನ್ನು ನಿಯಂತ್ರಿಸರು. ವೈಶ್ಯರ ಪ್ರಬಲ ಗುಂಪಿನ ಆತ್ಮವಂಚನೆಯ ಕಾರಣವೇ ಶೂದ್ರ ಯುಗಾರಂಭವಾಗುವದೆಂಬುದು ತುಂಬಾ ಮಹತ್ವದ ಅಂಶವಾಗಿದೆ. ಇತ್ತ ಜಮ್ಮ ಕ್ರಿಯೆಗಳಿಂದ ಇತರರಿಗೆ ಆಗುವ ಬಾಧೆಯ ಪರಿವೆಯೇ ವೈಶ್ಯರಿಗಿರುವುದಿಲ್ಲ. ಈ ಕಾರಣದಿಂದ ಶೂದ್ರ ಯುಗವನ್ನು ವೈಶ್ಯ ಮತ್ತು ಶೂದ್ರಯುಗವೆಂದು ಕರೆಯುವುದು ಲೇಸು.

ರಾಜಕೀಯ ಮತ್ತು ಸಾಮಾಜಿಕ ಸಂರಚನೆಯ ದೃಷ್ಟಿಯಿಂದ ಕ್ಷಾತ್ರ ಯುಗವು ಶೂದ್ರ ಯುಗಕ್ಕಿಂತ ತೀರ ವಿರುದ್ಧ. ಇಲ್ಲಿ, ಈ ಮೇಲೆ ತಿಳಿಸಿದಂತೆ, ಶೂದ್ರರೇ ಬಹುಸಂಖ್ಯೆಯಲ್ಲಿರುತ್ತಾರೆ. ಅದರ ಸರಕಾರವೇನಾದರೂ ಇದ್ದರೆ, ಅದನ್ನು ಬೇರೆ ಬೇರೆ ಜನಗುಂಪುಗಳು ನಿಯಂತ್ರಿಸುತ್ತವೆ. ಕ್ಷಾತ್ರ ಯುಗದಲ್ಲಿ ಕ್ಷಾತ್ರ ಮನಸ್ಕ ವ್ಯಕ್ತಿಗಳು, ಬಹುಸಂಖ್ಯಾಕರಾಗಿರದಿದ್ದರೂ ಸಹ, ಸಮಾಜ ಹಾಗೂ ಸರಕಾರಗಳ ಮೇಲೆ ಪ್ರಭುತ್ವ ನಡೆಸುತ್ತಾರೆ. ಅಲ್ಲಿ ರಾಜಕೀಯ ಅಧಿಕಾರವು ಅತ್ಯಂತ ಬಂಧನಕಾರಿ; ಶಾರೀರಿಕ ಬಲದ ಮೂಲಕ ಸಾಮಾಜಿಕ ಪ್ರತಿಷ್ಠೆ; ಅದ್ಭುತ ಕಾರ್ಯಗಳನ್ನು ಎಲ್ಲರೂ ಅಪೇಕ್ಷಿಸುತ್ತಾರೆ. ಜಡವಸ್ತುಗಳ ಮೇಲೆ ವಿಜಯ ಸಂಪಾದಿಸುವುದಕ್ಕಾಗಿ ಕ್ಷತ್ರಿಯನ ಸಾಮಾನ್ಯ ಇಚ್ಛೆಯನ್ನು ಜನತೆಯ ಧಾರ್ಮಿಕ ನಡೆಯು ಪ್ರತಿಫಲಿಸುತ್ತದೆ, ಇತ್ಯಾದಿ; ಕ್ಷತ್ರಿಯ ಯುಗದಲ್ಲಿ ವಿಪ್ರರು ಮತ್ತು ವೈಶ್ಯರು ಸ್ವಲ್ಪ ಗೌರವಕ್ಕೆ ಪಾತ್ರರಾಗುವರು. ಆದರೇನು? ಆಳ್ವಿಕೆಯಲ್ಲಿ ಅವರ ಮಾತು ನಡೆಯದು. ಆದರೆ ಶೂದ್ರರೂ ಕ್ಷತ್ರಿಯನಿಗಾಗಿ ಶಾರೀರಿಕ ಪರಿಶ್ರಮ ಮಾಡುವರು. ಮತ್ತು ಈ ಅವಧಿಯ ಮುಕ್ತಾಯದ ಹಂತದಲ್ಲಿ ಇನ್ನುಳಿದ ಪ್ರತಿಯುಗದಲ್ಲಿಯಂತೆಯೇ ಅವರನ್ನು ನಿರ್ದಯವಾಗಿ ಶೋಷಿಸಲಾಗುತ್ತಿದೆ. ಆದರೂ ಸಹ, ಕ್ಷತ್ರಿಯ ಯುಗಾರಂಭದಲ್ಲಿ, ಆಳುವವರು ಅವರ ಕಾಣಿಕೆಯನ್ನು ಗೌರವಿಸುತ್ತಾರೆ. ಮತ್ತು ಅವರನ್ನು ಕಾಳಜಿ ಮತ್ತು ಅನುಕಂಪಗಳಿಂದ ನಡೆಸಿಕೊಳ್ಳುತ್ತಾರೆ.

ಪುರೋಹಿತರ ಮತ್ತು ಪಂಡಿತ ಜನರ ಉದಯವೇ ವಿಪ್ರ ಯುಗದ ಗುರುತು. ಆದರೆ ಇಲ್ಲಿ ಸಹ, ಆಳುವ ವರ್ಗವು ಬಹುಸಂಖ್ಯಾಕವಾಗಿರಬೇಕಿಲ್ಲ. ಜೀವನದ ವಿವಿಧ ಮುಖಗಳೊಂದಿಗೆ ವ್ಯವಹರಿಸುವ ಕೆಲವು ಹೊಸ ಸಿದ್ಧಾಂತಗಳು ಆಗ ಮೂಡಿಬರುತ್ತವೆ. ಬಹುತೇಕ

ವಿಪ್ರರು ಮುಖ್ಯವಾಗಿ ತಮ್ಮ ಲೌಕಿಕ ವೃತ್ತಿಗಳನ್ನೇ ಬೆಂಬತ್ತುವಲ್ಲಿ ಆಸಕ್ತರಿದ್ದರೂ ಸಹ, ತಮ್ಮ ಕಳಕಳಿಯ ಅಭೀಪ್ಸೆಯಿಂದ ಮಾನಸಾತೀತ ಸೌಂದರ್ಯ ಅನುಭವವನ್ನು ಸಂಪಾದಿಸಲು ಶಕ್ತರಾಗುವರು. ಕೇವಲ ಪ್ರೀತಿಗಾಗಿಯೇ ದೇವರನ್ನು ಪ್ರೀತಿಸಲು, ಪ್ರಾರ್ಥನೆಯ ಆದರ್ಶವು ಅವರ ಮೂಲಕ ಜನಿಸಿತು. ಕ್ಷತ್ರಿಯ ಯುಗಾರಂಭದಲ್ಲಿ ಪ್ರಬಲ, ಕಲ್ಯಾಣಮಯಿ, ಧುರೀಣತ್ವವು ಸ್ವಾರ್ಥರಹಿತ ವಿಪ್ರರಿಂದ ಹಾಗೂ ಕೆಲವು ವಿರಳ ಪ್ರಬುದ್ಧ ಜೀವಿಗಳಿಂದ, ಹೊರ ಹೊಮ್ಮುತ್ತದೆ. ಆದರೂ ಸಹ ಮಂಚಕ ವಿಪ್ರರು, ಎಲ್ಲ ನ್ಯೂನತೆ ನಿರ್ಬಲತೆಗಳನ್ನು ಸ್ವತಃ ರೂಢಿಸಿಕೊಂಡ ಸಜ್ಜನ ಸಂತರ ಹೆಸರು ಮುಂದಿರಿಸಿಕೊಂಡು, ಕ್ಷತ್ರಿಯರನ್ನು ಮತ್ತು ಶೂದ್ರರನ್ನು ಶೋಷಿಸುತ್ತಾರೆ. ವಿಪ್ರಯುಗಾಂತ್ಯಕ್ಕೆ ಈ ಶೋಷಣೆಯು ಚಿತ್ರಹಿಂಸೆಯಾಗಿರುತ್ತದೆ.

ವೈಶ್ಯ ಯುಗವು ವಿಪ್ರಯುಗಾಂತ್ಯದ ಚರಮಾವಸ್ಥೆಯೊಂದಿಗೆ ನಿಕಟ ಹೋಲಿಕೆ ಹೊಂದಿದೆ. ಈ ಮೇಲೆ ತಿಳಿಸಿದಂತೆ ಅಲ್ಲಿ ಕ್ಷತ್ರಿಯರು ಹಾಗೂ ಶೂದ್ರರು ಅತಿಯಾಗಿ ಶೋಷಣೆಗೀಡಾಗುತ್ತಾರೆ. ಆದರೆ, ವಿಪ್ರರು ರಾಜಕೀಯದ ತಂತಿಯನ್ನೇನೂ ಏರಿರುವುದಿಲ್ಲ. ಪ್ರತಿಯಾಗಿ ಅವರು ಸಮೃದ್ಧ ಸಿರಿವಂತರಿಗಾಗಿ ಕೆಲಸ ಮಾಡುತ್ತಾರೆ. ಈ ಯುಗದಲ್ಲಿಯೇ ವಸ್ತುಗಳ ನೈಜ ಮೌಲ್ಯವು ಶಬ್ದಶಃ ಶೂನ್ಯಕ್ಕಿಳಿಯುತ್ತದೆ. ಪ್ರತಿಯೊಂದನ್ನು ರೂಪಾಯಿ ಪೈಸೆಗಳ ದೃಷ್ಟಿಯಿಂದ ಮೌಲ್ಯಾಂಕನ ಮಾಡುತ್ತಾರೆ. ಮಾನವ ಮೌಲ್ಯಗಳ ಹಿನ್ನಡೆ ಆರಂಭಿಸುತ್ತದೆ. ಕಲೆ, ಸಂಗೀತ, ಧರ್ಮ, ಆಟಗಳು, ಹೀಗೆ ಪ್ರತಿಯೊಂದು ವ್ಯಾಪಾರೀಕರಣ ಗೊಳ್ಳುವದುಂಟು. ಅಪರಾಧವು ವಿಜೃಂಭಿಸುತ್ತದೆ; ಕುಟುಂಬ ಸಂಬಂಧಗಳು ಮತ್ತೆ ಸಡಿಲುಗೊಳ್ಳುತ್ತವೆ. ಮತ್ತು ಕೊನೆಗೆ ವೈಶ್ಯಯುಗವು ಸಾವಕಾಶವಾಗಿ ಶೂದ್ರಯುಗದ ಅರಾಜಕತೆಯತ್ತ ಮುಂದಾಗುತ್ತದೆ. ವೈಶ್ಯ ಯುಗಾಂತ್ಯಕ್ಕೆ ಎಲ್ಲ ವೈಶ್ಯೇತರ ವರ್ಗಗಳನ್ನು ಮಿತಿಮೀರಿದ ದುರಾಸೆಯ ವೈಶ್ಯರು ನಿರ್ದಯವಾಗಿ ಶೋಷಿಸುತ್ತಾರೆ.ಆಗ ಸಮಾಜವು, ಅತ್ಯಲ್ಪ ಅವಧಿಯದೇ ಆಗಿರಲೊಲ್ಲದೇಕೆ, ವಿಪ್ರ ಮತ್ತು ಶೂದ್ರ ಯುಗದ ಒಂದು ಅವಧಿಯನ್ನು ದಾಟುತ್ತದೆ. ಮುಂದೆ ಸಾಮಾಜಿಕ ಕ್ರಾಂತಿಯಾಗುವದಷ್ಟೇ. ಇದಾದ ನಂತರ, ಅದು ಇನ್ನೊಂದು ಕ್ಷಾತ್ರ ಯುಗದತ್ತ ಮುನ್ನಡೆಯುತ್ತದೆ. ಮುಂದೆ ಇದೇ ರೀತಿ ಪುನರುಕ್ತಿಯಾಗುತ್ತದೆ.

ವೈಶ್ಯ ಯುಗವನ್ನು ಹೊರತುಪಡಿಸಿ ಉಳಿದೆಲ್ಲ ಯುಗಗಳಲ್ಲಿ ಸರಕಾರಗಳ ಹಸ್ತಾಂತರವು ಸಾಮಾಜಿಕ ವಿಕಾಸ ಇಲ್ಲವೆ ಕ್ರಾಂತಿ ಮೂಲಕ ಆಗುತ್ತದೆ. ಆದರೆ, ವೈಶ್ಯ ಯುಗದಲ್ಲಿ ಸಾಮಾಜಿಕ ಕ್ರಾಂತಿಯು ನಿಶ್ಚಯವಾಗಿಯೂ ಘಟಿಸುತ್ತದೆ. ಕ್ಷತ್ರಿಯ, ವಿಪ್ರ ಹಾಗೂ ವೈಶ್ಯರ ಕೇಂದ್ರ ಗಡ್ಡಗುಂಟ ನಡೆಯುವ ಸಾಮಾಜಿಕ ಪ್ರಭುತ್ವದ ಈ ತಿರುಗುವಿಕೆಯು ಕೊನೆಯಲ್ಲಿ ಶೂದ್ರ ಕ್ರಾಂತಿಯಲ್ಲಿ ಪರ್ಯವಸಾನ ಹೊಂದುತ್ತದೆ. ಇದುವೇ ಶ್ರೀ ಸರಕಾರರ ಸಮಾಜ ಚಕ್ರದ ನಿಯಮ. ಅವರ ದೃಷ್ಟಿಯಲ್ಲಿ ಇಂದು ಅನೇಕ ರಾಷ್ಟ್ರಗಳು ಕ್ಷಾತ್ರ ಯುಗದ ಮರಣೋನ್ಮುಖಾವಸ್ಥೆಯಲ್ಲಿವೆ. ಕೆಲವೆಡೆ ವಿಪ್ರಯುಗದ ಪ್ರತಿಷ್ಠಾಪನೆ ನಡೆದಿದೆ; ಇನ್ನು ಅನೇಕ ಪ್ರಜಾಸತ್ತಾತ್ಮಕ ದೇಶಗಳಲ್ಲಿ ವೈಶ್ಯಯುಗವು ಅಸ್ತಿತ್ವದಲ್ಲಿದೆ.

ಭಾರತೀಯ ಆರ್ಯ ಮತ್ತು ಪಾಶ್ಚಾತ್ಯ ನಾಗರಿಕತೆಗಳಿಂದ ನಿದರ್ಶನಗಳು:

ನಾವೀಗ ಸುವಿಖ್ಯಾತ ನಾಗರಿಕತೆಗಳ ಅನುವಂಶಿಕ ಕಥಾನಕಗಳನ್ನು ಒಳಹೊಕ್ಕು ನೋಡೋಣ. ಮತ್ತು ಅವು ಸಮಾಜ ಚಕ್ರ ನಿಯಮಾನುಸಾರ ವಿಕಾಸಗೊಂಡಿವೆಯೋ ಹೇಗಂಬುದನ್ನು ಅರಿಯೋಣ.

ಭಾರತೀಯ ಆರ್ಯ ಸಮಾಜದ ವಿಷಯದಲ್ಲಿ ಶ್ರೀ ಕೆ.ಎಂ. ಮುನ್ಶಿ, ಶ್ರೀ ಆರ್.ಸಿ. ಮಜುಮದಾರ ಮತ್ತಿತರ ಅಧುನಿಕ ಇತಿಹಾಸಕಾರರು ಒಪ್ಪಿರುವ ಸಂಗತಿಯೇನೆಂದರೆ, ಈ ನಾಗರಿಕತೆಯ ಆಸ್ತಿವಾರವನ್ನು ಕ್ರಿ.ಶ. ಪೂರ್ವ 1500 ವರ್ಷದ ಹೊತ್ತಿಗೆ ಮಧ್ಯ ಏಶಿಯಾದಿಂದ ಬಂದ ಆರ್ಯರು ಹಾಕಿದರು. ಪ್ರಾಚೀನ ಆರ್ಯರನ್ನು ಕುರಿತು ನಮಗೆ ತಿಳಿದಿರುವ ಬಹುತೇಕ ವಿಷಯಗಳನ್ನು ವೇದಗಳಲ್ಲಿ ಸಂಗ್ರಹಿಸಲಾಗಿದೆ. ಈ ವೇದಗಳು ನಾಲ್ಕು. ಇವುಗಳಲ್ಲಿ ಋಗ್ವೇದವೇ ತೀರ ಹಳೆಯದು. ಋಗ್ವೇದವು ಬಣ್ಣಿಸಿದ ಸಮಾಜವೂ ಶ್ರೀ ಸರಕಾರರ ಕ್ಷತ್ರಿಯ ಯುಗದೊಂದಿಗೆ ಹೋಲುತ್ತದೆ. ಋಗ್ವೇದದ ಅವಧಿಯು ಕ್ರಿ.ಶ.ಪೂರ್ವ 1500 ರಿಂದ ಕ್ರಿ.ಪೂ. 1200 ರ ವರೆಗೆ ಇದೆ. ಇಲ್ಲವೆ ಕ್ರಿ.ಶ. ಪೂರ್ವ 1000 ದ ವರೆಗೂ ಇರಬಹುದು. (ಭಾರತದ ಪ್ರಥಮ ಕ್ಷತ್ರಿಯ ಯುಗದ ಅವಧಿಯು ವಾದಗ್ರಸ್ತ ಆಗಿರುವದೇನೋ ನಿಜ. ಆರ್ಯರು ಕ್ರಿ.ಪೂ. 6000 ದಷ್ಟು ಮೊದಲೇ ಭಾರತಕ್ಕೆ ಬಂದು ನೆಲೆಸಿರಬಹುದೆಂದೂ ಕೆಲವರು ಸೂಚಿಸುತ್ತಾರೆ. ಏನೇ ಇರಲಿ, ಭಾರತದಲ್ಲಿ ನಾಗರಿಕತೆಯ ನಸುಕು ಮೂಡುವ ಕಾಲಕ್ಕೆ ಕ್ಷತ್ರಿಯರು ಅಧಿಕಾರಿ ಸಂಪನ್ನರಾಗಿದ್ದರು).

ಋಗ್ವೇದಿಯ ಅವಧಿಯ ನಂತರ ಬ್ರಾಹ್ಮಣ್ಯ ಯುಗವೆಂದು ಕರೆಯುವ ಅವಧಿಯು ಕಂಡುಬಂದಿತು. ಬ್ರಾಹ್ಮಣ ಇಲ್ಲವೆ ಪುರೋಹಿತರ ಮೇಲ್ಮೆಯು ಇತರ ವರ್ಗಗಳ ಮೇಲೆ ಇದ್ದುದರಿಂದ ಈ ಯುಗವನ್ನು ಆ ಹೆಸರಿನಿಂದ ಕರೆಯಲಾಗಿದೆ. ಹೀಗೆ ಇದು ಆನಂತರದ ವಿಪ್ರಯುಗ. ಇದು ಮುಂದೆ ಕ್ರಿಸ್ತಪೂರ್ವ 600 ರ ವರೆಗೆ ಉಳಿಯಿತು. ಭಾರತದ ಜಾತಿ ಪದ್ಧತಿಯನ್ನು ಈ ಬ್ರಾಹ್ಮಣರೇ ಹುಟ್ಟು ಹಾಕಿದರು. ಹೀಗೆ ಅವರು ಸಮಾಜದ ಮೇಲೆ ತಮ್ಮ ಹಿಡಿತವನ್ನು ಖಾಯಂಗೊಳಿಸಲು ಬಯಸಿದರು. ಇದಾದ ನಂತರ ಇತಿಹಾಸಕಾರರು ಬೌದ್ಧಕಾಲ ಎಂದು ಕರೆಯುವ ಕಾಲವು ಬಂದಿತು. ಈ ಅವಧಿಯಲ್ಲಿ ಕ್ಷತ್ರಿಯ ಹಾಗೂ ಶೂದ್ರ ಇವರ ಮೇಲೆ ವೈಶ್ಯರ ಪ್ರಭುತ್ವ ಬಂದಿತು. ಇದುವೇ ಭಾರತೀಯ ಆರ್ಯ ಸಮಾಜದ ವೈಶ್ಯ ಯುಗ. ಇದು ಕ್ರಿ.ಪೂ. 324 ರ ವರೆಗೆ ಇದ್ದಿತು.

ವೈಶ್ಯ ಯುಗವು ಹಿಂದೆಂದೂ ಇರದಷ್ಟು ಶೂದ್ರರ ಶೋಷಣೆಯನ್ನು ಉಂಟು ಮಾಡಿತು; ಮತ್ತು ಕ್ಷತ್ರಿಯನಾದ ಚಂದ್ರಗುಪ್ತ ಮೌರ್ಯನು ಮತ್ತು ಚಾಣಕ್ಯ ಪುರೋಹಿತನು ತಮ್ಮ ಸಂಪನ್ಮೂಲಗಳನ್ನು ಸಂಪತ್ತಿನ ಆಳ್ವಿಕೆಯನ್ನು ಕಿತ್ತೊಗೆಯಲು ಒಗ್ಗೂಡಿಸಿದರು. ಕ್ರಿಸ್ತಪೂರ್ವ 324 ರಲ್ಲಿ ಚಂದ್ರಗುಪ್ತ ಮೌರ್ಯನು ಆಗಿನ ದೊರೆ ಧನನಂದನನ್ನು ಸಿಂಹಾಸನದಿಂದ ಉರುಳಿಸಿದ್ದು ಭಾರತೀಯ ದಾಖಲಿತ ಇತಿಹಾಸದಲ್ಲಿ ಗುರುತಿಸಲ್ಪಟ್ಟ ಪ್ರಥಮ ಶೂದ್ರ ಕ್ರಾಂತಿ.

ಈ ಶೂದ್ರ ಕ್ರಾಂತಿಯ ನಂತರ ಇನ್ನೊಂದು ಮೌರ್ಯ ಯುಗವೆಂದು ಕರೆಯಲಾಗುವ ಕ್ಷತ್ರಿಯ ಅವಧಿಯು ಆರಂಭವಾಯಿತು. ಮೌರ್ಯರ ಪತನವಾದ ಮೇಲೆ, ಬ್ರಾಹ್ಮಣರು ಬಂಗರು. ಹೀಗೆ ಪರಿವರ್ತನೆಯು ಇನ್ನೊಂದು ವಿಪ್ರ ಯುಗದಲ್ಲಿ ಪರ್ಯವಸನಗೊಂಡಿತು. ಆ ಬಳಿಕ ಭಾರತದಲ್ಲಿ ಇನ್ನೊಂದು ವೈಶ್ಯ ಯುಗಾರಂಭವಾಯಿತು. ಅದರೊಂದಿಗೇ ಮೂರನೆಯ ಶತಕದಲ್ಲಿ ಚಿಕ್ಕ, ವಿಕೇಂದ್ರಿತ ರಾಜ್ಯಗಳಲ್ಲಿ ಭಾರತದ ವಿಘಟನೆಯೂ ನಡೆಯಿತು. ದ್ವಿತೀಯ ಶೂದ್ರ ಕ್ರಾಂತಿಯನ್ನು ಹಮ್ಮಿದ ಕೀರ್ತಿಯು ಸಮುದ್ರಗುಪ್ತನೆಂಬ ಇನ್ನೋರ್ವ ಕ್ಷತ್ರಿಯನಿಗೆ ಸಲ್ಲತಕ್ಕದ್ದು. ಇದರ ಬೆನ್ನ ಹಿಂದೆಯೇ, ಭಾರತೀಯ ಆರ್ಯ ಸಮಾಜದಲ್ಲಿ ಮೂರನೆಯ ಬಾರಿಗೆ ಕ್ಷತ್ರಿಯ ಯುಗವು ಮೈದೋರಿತು. ಸ್ವಾಯತ್ತಾಧಿಕಾರದ ಹೊಸ ಅವಧಿಯು ಎಂಟನೆಯ ಶತಮಾನ ಪರ್ಯಂತ ಏಳು ಬೀಳುಗಳೊಂದಿಗೆ ಉಳಿಯಿತು. ಆಗ ಪ್ರಧಾನ ಮಂತ್ರಿಗಳು ಮತ್ತು ಪುರೋಹಿತರು ಪುನಃ ಭಾರತದ ಬಹು ಭಾಗಗಳನ್ನು ಕೈವಶ ಮಾಡಿಕೊಡರು. ಈ ವಿಪ್ರ ಯುಗಾನಂತರದ ಭಾರತದಲ್ಲಿ ಜಮೀನುದಾರಿಕೆಯು ಕಾಣಿಸಿಕೊಂಡಿತು. ಇಲ್ಲಿ ದೊಡ್ಡ ದೊಡ್ಡ ಜಮೀನುದಾರರು ತನ್ನಿಮಿತ್ತ ಧನಿಕರು ಅಧಿಕಾರಕ್ಕೇರಿದರು. ಇದು ಇನ್ನೊಂದರು ವೈಶ್ಯ ಮತ್ತು ಶೂದ್ರ ಯುಗದಲ್ಲಿ ಪರ್ಯವಸಾನ ಹೊಂದಿತು.

ಈ ಸಮಯಗಳಲ್ಲಿ ಭಾರತವು ದುರ್ಬಲವಾಗಿತ್ತು, ವಿಭಜಿತವಾಗಿತ್ತು. ಮುಸ್ಲಿಮರಿಂದ ವ್ಯವಸ್ಥಿತ ದಾಳಿಗಳು ಶುರುವಾದವು. 1192 ರಲ್ಲಿ ಮಹಮ್ಮದ ಘೋರಿಯು ಪೃಥ್ವಿರಾಜ ಚವ್ಹಾಣನನ್ನು ಸೋಲಿಸಿದನು. ಮತ್ತು ಅನಂತರದ ಮುಸ್ಲಿಂ ವಿಜಯಗಳಿಗೆ ಬುನಾದಿ ಹಾಕಿದನು. ಹೊಸ ಶೂದ್ರ ಯುಗವು ಕ್ರೌರ್ಯದ ಆಳ್ವಿಕೆಯೊಂದಿಗೆ ಬೆಸೆದಿದೆ. ಈ ಕಾಲಕ್ಕೆ ಉತ್ತರ ಭಾರತದ ಬಹು ಭಾಗವನ್ನು ಇಲ್ತುಮುಶ್, ಬಲಬನ್ ಮತ್ತಿತರರು ಆಳಿದರು. ಇದರಿಂದ ಊದ್ಭೂತವಾದ ಗೊಂದಲವನ್ನು ಅಂತಿಮವಾಗಿ ಅಲ್ಲಾಉದ್ದೀನ್ ಖಿಲ್ಜಿ ಕೊನೆಗೊಳಿಸಿದನು. ಅವನು 1256 ರಲ್ಲಿ ಅಧಿಕಾರಕ್ಕೇರಿದನು. ಮತ್ತು ಇಡೀ ಭಾರತವನ್ನು ತನ್ನ ಕೇಂದ್ರೀಕೃತ ಆಳ್ವಿಕೆಯಡಿ ಬೇಗನೇ ಒಂದುಗೂಡಿಸಿದನು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವನ ಕ್ಷಾತ್ರ ತೇಜಸ್ಸು ಭಾರತದ ಇತಿಹಾಸದಲ್ಲಿ ಇನ್ನೊಂದು ಶೂದ್ರ ಕ್ರಾಂತಿಯನ್ನು ಉಂಟು ಮಾಡಿತು. ಮತ್ತು ಮುಸ್ಲಿಂ ಕ್ಷತ್ರಿಯ ಯುಗವೆಂದು ಕರೆಯಬಹುದಾದ ಯುಗಾರಂಭಕ್ಕೆ ನಾಂದಿ ಹಾಡಿತು.

ಮುಸ್ಲಿಂ ಕ್ಷತ್ರಿಯ ಯುಗವು ಮಹಾತ್ಮ ಅಕ್ಬರನ ಆಳ್ವಿಕೆಯ ಪರ್ಯಂತ ಉಳಿಯಿತು. ಆ ಬಳಿಕ ಇನ್ನೊಂದು ಮೊಘಲ ಮರಾಠ ವಿಪ್ರ ಯುಗವೆಂದು ಹೆಸರಿಸಬಹುದಾದ ವಿಪ್ರ ಯುಗದ ಆರಂಭವಾಯಿತು. ಈ ಅವಧಿಯ ಪೂರ್ವ ಭಾಗದಲ್ಲಿ ಮುಸ್ಲಿಮ ಪುರೋಹಿತರಾದ ಉಲೇಮಾರು ಔರಂಗಜೇಬನ ಆಳ್ವಿಕೆಯಲ್ಲಿ ಅಧಿಕಾರದ ತುತ್ತ ತುದಿಯೇರಿದರು. ಆದರೆ ದ್ವಿತೀಯ ಭಾಗದಲ್ಲಿ ಈ ತುತ್ತ ತುದಿಯನ್ನು ಮರಾಠಾ ರಾಜರನ್ನು ನಿಯಂತ್ರಿಸುತ್ತಿದ್ದ ಬ್ರಾಹ್ಮಣ ಪೇಶ್ವೆಯರು ಏರಿದರು.

ಭಾರತದಲ್ಲಿ ಮರಾಠಾ ಪ್ರಭುತ್ವವು ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ 18 ನೇ ಶತಾಬ್ದಿಯ ಅಂತ್ಯದ ವರೆಗೆ ಉಳಿಯಿತು. ಆಗ ಬ್ರಿಟಿಷರು 1804 ರಲ್ಲಿ ಪೇಶ್ವೆಯವರನ್ನು

ಸೆದೆಬಡಿದರು. ಆಗ ಇನ್ನೊಂದು ವೈಶ್ಯ ಯುಗ ಆರಂಭಿಸಿತು. ಈ ಅವಧಿಯಲ್ಲಿ ಹಳ್ಳಿಯ ಲೇವಾದೇವಿಯವನು ಅಂದರೆ ಬನಿಯಾ, ಜಮೀನುದಾರರು, ಮತ್ತು ಬಂಡವಾಳವಾದಿಗಳು ಪ್ರಾಮುಖ್ಯತೆ ಪಡೆದರು. ಇಂದು ಭಾರತವು ವೈಶ್ಯ ಮತ್ತು ಶೂದ್ರ ಯುಗದ ಮೂಲಕ ಸಾಗಿದೆ. ಇದರಲ್ಲಿ ವೈಶ್ಯನು ಆಳುತ್ತಾನೆ ಮತ್ತು ಆಳುವವನ ಜಡವಾದವು ಜನಸಾಮಾನ್ಯರನ್ನು ಬಾಧಿಸುತ್ತದೆ. ಹೀಗಾಗಿ ದೊಂಬಿಯು ಪರಿಣಮಿಸುತ್ತದೆ. ಪ್ರಚಲಿತ ವ್ಯವಸ್ಥೆಯನ್ನು ಇನ್ನೊಂದು ಶೂದ್ರ ಕ್ರಾಂತಿಯ ಮೂಲಕ ಕಿತ್ತು ಹಾಕುವ ತನಕ ಈ ದೊಂಬಿಯು ಮುಂದುವರಿಯುವುದು, ಇದು ದೂರದ ಮಾತೇನಲ್ಲ ನನ್ನ ಲೆಕ್ಕದ ಮೇರೆಗೆ, ಹೊಸ ಶೂದ್ರ ಕ್ರಾಂತಿಯು ಮುಂದಿನ ದಶಕದೊಳಗೆ ಘಟಿಸುತ್ತದೆ. ಇನ್ನು ಆದು ಹೆಚ್ಚೆಂದರೆ ಕ್ರಿ.ಪೂ. 2000 ದ ವರ್ಷವನ್ನು ದಾಟದು. (1, ಪು 216) ಹಸಿದ ರಾಜಕಾರಣಿಗಳ ಪ್ರಚಲಿತ ಅಧಿಕಾರ – ಪಿಪಾಸೆಯು ಮುಂಬರುವ ಕ್ರಾಂತಿಯ ಸುಸ್ಪಷ್ಟ ಸೂಚನೆಯಾಗಿದೆ. ಇದರ ಅರ್ಥವೆಂದರೆ ಚಿಂತನದಲ್ಲಿ ಪರಿವರ್ತನೆಯೇ ಹೊರತು ರಕ್ತದ ಕಾಲುವೆ ಹರಿಸುವುದೆಂದೇನೂ ಅಲ್ಲ.

ಭಾರತೀಯ ಸಮಾಜವು ವಿಕಸಿಸಿದ ರೀತಿಯಿದು. ಈಗ ನಾವು ಪಶ್ಚಿಮವು ಹೇಗೆ ವಿಕಸಿಸಿತೆಂಬುದನ್ನು ನೋಡುವಾ:

ಪ್ರಥಮ ಶತಾಬ್ದಿಯಷ್ಟು ಹಿಂದೆ ನಡೆದರೆ, ರೋಮ ಸಾಮ್ರಾಜ್ಯವು ಕ್ಷತ್ರಿಯ ಯುಗದೊಂದಿಗೆ ಯುರೋಪದಲ್ಲಿಯ ಮಧ್ಯ ಯುಗಗಳು ವಿಪ್ರ ಯುಗಗೊಂದಿಗೆ, ಅನಂತರದ ಮಧ್ಯ ಯುಗಗಳು ಅರ್ಥಾತ್ ಸರದಾರಿಕೆಗಳು ವೈಶ್ಯ ಯುಗದೊಂದಿಗೆ, ರೈತ ಬಂಡಾಯಗಳ ಅವಧಿಯು ಶೂದ್ರಯುಗದೊಂದಿಗೆ ಮೇಳವಿಸುವದನ್ನು ನಾವು ಕಾಣಬಹುದು. ಕೊನೆಗೆ ಈ ಪರಿವರ್ತನೆಯು ಶೂದ್ರ ಕ್ರಾಂತಿಯಲ್ಲಿ ಪರ್ಯವಸಾನಗೊಂಡಿತು. ಈ ಕ್ರಾಂತಿಯನ್ನು ಫ್ರಾನ್ಸಿನಲ್ಲಿ 11 ನೇ ಲೂಯಿಯೂ, ಸ್ಪೇನಿನಲ್ಲಿ ಇಸಬೆಲ್ಲಾ ಮತ್ತು ಫರ್ಡಿನ್ಯಾಂಡರೂ, ಇಂಗ್ಲಂಡಿನಲ್ಲಿ 7 ನೇ ಹೆನ್ರಿಯೂ ಬರಮಾಡಿದರು. ಕ್ರೈಸ್ತ ಜನನಾನಂತರದ ಸುಮಾರು ಹದಿನಾಲ್ಕು ನೂರು ವರ್ಷಗಳ ಪೂರ್ಣಾವಧಿಯ ವಿಕಾಸವು ಸಮಾಜ ಚಕ್ರದ ಒಂದು ಪೂರ್ಣ ಸುತ್ತನ್ನು ಮುಕ್ತಾಯಗೊಳಿಸುತ್ತದೆ. ಇನ್ನೊಂದು ಚಕ್ರಗತಿಯು ಕೇಂದ್ರೀಕೃತ ರಾಷ್ಟ್ರೀಯ ಚಕ್ರಧಿಪತ್ಯಗಳ ಕ್ಷತ್ರಿಯ ಯುಗದಿಂದ ಆರಂಭಿಸಿತು. ಇದಾದ ನಂತರ ಪ್ರಧಾನ ಮಂತ್ರಿಗಳ ಪ್ರಭಾವ ಬೀರುವ ವಿಪ್ರ ಯುಗವೂ ಆ ಬಳಿಕ ಸಮೃದ್ಧ ಬಂಡವಾಳವಾದಿಗಳ ಪ್ರಭುತ್ವವಿದ್ದ ವೈಶ್ಯಯುಗವೂ ಒಂದಾದ ಬಳಿಕ ಇನ್ನೊಂದು ಬಂದವು. ಇಂದು ಪಾಶ್ಚಿಮಾತ್ಯ ದೇಶಗಳು ವೈಶ್ಯ – ಮತ್ತು ಶೂದ್ರ ಯುಗದಲ್ಲಿ ಚಲಿಸುತ್ತವೆ. ಮತ್ತು ಅವು ಶೂದ್ರ ಕ್ರಾಂತಿಯ ನೀರ್ಗಲ್ಲಿನತ್ತ ಸಾವಕಾಶ ಹೆಜ್ಜೆ ಇಡುತ್ತಿವೆ. ಈ ಶೂದ್ರ ಕ್ರಾಂತಿ ಕ್ರಿ. ಶ. 2000 ವರ್ಷದೊಳಗೆ ಘಟಿಸುವದಂತೂ ನಿಶ್ಚಿತ.

ನಾನು ಇದು ವರೆಗೆ ಪ್ರಾಚೀನ ಆದರೆ ಪರಸ್ಪರ ತೀರ ಭಿನ್ನವಾಗಿರುವ ಎರಡು ನಾಗರಿಕತೆಗಳಲ್ಲಿ ಸಮಾಜ ಚಕ್ರ ನಿಯಮದ ಸಿಂಧುತ್ವವನ್ನು ತೋರಿಸಿದ್ದೇನೆ. ವಾಚಕರು ಇತರ ಸಮಾಜಗಳನ್ನು ಈ ರೀತಿ ಪರೀಕ್ಷಿಸಬೇಕು. ಅಂದರೆ ಅವರೆಲ್ಲರೂ ಆ ನಾಗರಿಕತೆಗಳು ಒಂದೇ ಬಗೆಯ ವಿನ್ಯಾಸಕ್ಕನುಗುಣವಾಗಿ ವಿಕಾಸಗೊಂಡಿರುವುದನ್ನು ಕಂಡುಕೊಳ್ಳುವರು. ಇದರಲ್ಲಿಯೇ

ಶ್ರೀ ಸರಕಾರರ ಸಂದೇಶದ ವಿಶ್ವಾತ್ಮಕತೆಯು ಅಡಗಿದೆ. ಇಲ್ಲಿಯೇ ಅದರ ಸಾಮಾನ್ಯತೆ ಮತ್ತು ವಿಸ್ತಾರ, ಅದರ ಉಜ್ವಲತೆ ಮತ್ತು ದಾರ್ಶನಿಕತೆಗಳು ಅಡಗಿರುತ್ತವೆ.

ಮಾನವ ಶೋಷಣೆ :

ಮಾನವನ ಭೂತಕಾಲದ ವಂಶಾನುಚರಿತ್ರೆಯನ್ನು ಒಂದೇ ಶಬ್ದದಲ್ಲಿ ಬಣ್ಣಿಸುವ ಅಗತ್ಯವೆನಿಸಿದರೆ, 'ಶೋಷಣೆ' ಶಬ್ದವು ಉಳಿದೆಲ್ಲವುಗಳಿಗಿಂತ ಚೆನ್ನಾಗಿ ಅದನ್ನು ಬಣ್ಣಿಸುತ್ತದೆ. ಈ ಶೋಷಣೆಯು ತುಸು ಹೆಚ್ಚು ಕಡಿಮೆ ಅದೇ ಬಗೆಯ ವಿನ್ಯಾಸವನ್ನು ಅನುಸರಿಸುತ್ತದೆ. ಪ್ರತಿಯೊಂದು ಯುಗಾಂತ್ಯಕ್ಕೆ, ಆಳುವ ವರ್ಗವು ಜನಸಾಮಾನ್ಯರ ದಮನ ಮಾಡುತ್ತದೆ. ಅದು ತನ್ನ ಸನಿಹದ ಉತ್ತರಾಧಿಕಾರಿಯಾಗುವ ವರ್ಗದಿಂದ ವಿರೋಧಿಸಲ್ಪಡುತ್ತದೆ. ಮತ್ತು ಹೊಸ ಯುಗದಲ್ಲಿ ವಿರೋಧಿಗಳು ಅಧಿಕಾರಕ್ಕೆ ಬಂದರೆ, ಜನತೆಗೆ ತಾತ್ಕಾಲಿಕ ವಿರಾಮ ದೊರಕುತ್ತದೆ. ಆದರೂ ಸಹ ಅನತಿ ದೀರ್ಘ ಕಾಲದಲ್ಲಿ, ಹೊಸ ಆಳುವ ವರ್ಗವು ದಮನದ ಯಂತ್ರವಾಗುತ್ತದೆ. ಮತ್ತು ಒಂದು ವರ್ಗವು ಸರಕಾರದ ಲಗಾಮನ್ನು ಹಿಡಿದುಕೊಳ್ಳುವ ವರೆಗೆ ಇದು ಮುಂದುವರಿಯುತ್ತದೆ. ಹೀಗಯೇ ಒಂದಾದ ಮೇಲೊಂದು, ಹೀಗೆ ಒಂದುವರ್ಗದ ನಂತರ ಇನ್ನೊಂದು, ಎಲ್ಲ ನಾಗರಿಕತೆಗಳಲ್ಲಿ ಅಧಿಕಾರ ಗದ್ದುಗೆ ಏರುತ್ತದೆ. ಮತ್ತು ಮನೋಧರ್ಮಕ್ಕನುಸಾರವಾಗಿ ಇನ್ನಿತರ ಮೂರನ್ನು ಶೋಷಿಸಿದವು. ಕ್ಷತ್ರಿಯರು ಮೇಲುಗೈ ಸಾಧಿಸಿದಾಗ, ಅವರು ಪರಸ್ಪರರೊಂದಿಗೆ ನಿರಂತರ ಹೋರಾಡಿ ತಮ್ಮ ಸಾಮ್ರಾಜ್ಯಗಳನ್ನು ವಿಸ್ತರಿಸಿದರು. ಮತ್ತು ಈ ಪ್ರಕ್ರಿಯೆಯಲ್ಲಿ, ಶೂದ್ರರನ್ನು ಒತ್ತಾಯಿಸಿ ತಮ್ಮ ಸೇನೆಗೆ ಭರತಿ ಮಾಡಿಸಿದರು. ಹೀಗೆ ಶೂದ್ರರು ಅವರ ಮಹತ್ವಾಕಾಂಕ್ಷೆಯ ಬಲಿಪಶುವಾದರು.

ವಿಪ್ರರು ಮೇಲುಗೈಯನ್ನು ಸಾಧಿಸಿದಾಗ, ಅವರು ಸಮಾಜವನ್ನು ಶೋಷಣೆಗೊಳಪಡಿಸಿದರು. ಅವರು ಅಲೌಕಿಕ ಭಾವಜಡತೆಗಳನ್ನು ರೂಪಿಸಿ ಕ್ಷತ್ರಿಯರನ್ನು ಮತ್ತು ತನ್ಮೂಲಕ ಶೂದ್ರರನ್ನು ಸಹ ಕಟ್ಟಿ ಹಾಕಿದರು. ಅವರು ಸ್ತ್ರೀಯರ ದಮನಕ್ಕೆ ಕೈಹಾಕಿದರು. ಅವರನ್ನು ದುಷ್ಪೇರಕೆ, ಅಂತರಿಕ ಕೇಡಿ ಮತ್ತು ಆತ್ಮವರ್ಜಿತೆ ಎಂದು ಜರಿದರು. ದೇವಾಲಯಗಳಲ್ಲಿ ಆರಂಭಗೊಂಡ ವ್ಯಭಿಚಾರಕ್ಕೆ ಈ ವಿಪ್ರರೇ ಹೊಣೆಗಾರರು. ವೈಶ್ಯರು ಅಧಿಕಾರಕ್ಕೆ ಬಂದಾಗ ಅವರು ಜನಮಂದೆಯ ಮೇಲೆ ಆರ್ಥಿಕ ದಮನಕ್ಕಿಳಿದರು. ಸಮಾಜದ ಬಹುತೇಕ ಆದಾಯ ಮತ್ತು ಸಂಪತ್ತು ಅವರ ತ್ರಿಜೂರಿಗಳಲ್ಲಿಯೇ ಕೇಂದ್ರೀಕೃತವಾಯಿತು. ತತ್ಪರಿಣಾಮವಾಗಿ ಅವರ ಆಳ್ವಿಕೆಯಲ್ಲಿ ವೇಶ್ಯಾವೃತ್ತಿ ಮತ್ತು ಅಪರಾಧಗಳು ಮುಗಿಲು ಮುಟ್ಟಿದವು.

ಇದೀಗ ಬಣ್ಣಿಸಿದ ಮಾನವ ಶೋಷಣೆಯ ವಿನ್ಯಾಸವು ಚಾಚೂ ತಪ್ಪದೆ, ಸಕಲ ನಾಗರಿಕತೆಗಳಲ್ಲಿ ಪುನರುಕ್ತಿ ಪಡೆದಿದೆ. ಈಗ ಇರುವ ಪ್ರಶ್ನೆ ಇದು. ಈ ಯುಗಾಂತರ ವಿನ್ಯಾಸವನ್ನು ಮುರಿತು ಹಾಕಲು ನಾವು ಏನನ್ನಾದರೂ ಮಾಡಬಲ್ಲೆವೇನು? ಸಮಾಜದ ಚಕ್ರದ ನಿತ್ಯ ನಿಯಮವು ಅನುಲ್ಲಂಘನೀಯವಿರುವಾಗ ಮಾನವತೆಯು ಏಳುಬೀಳುಗಳ ತೊಳಲಾಟದ ಕ್ಷಣಿಕ ಕಲ್ಯಾಣ ಮತ್ತು ಮುಂದಿನ ಸುದೀರ್ಘ ಚಿತ್ರ ಹಿಂಸೆಯ ದುರ್ಗತಿಯನ್ನು

ಭೋಗಿಸುವುದು ಶತಸ್ಸಿದ್ಧವೇನು? ಈ ಮುಂಚೆನಂತೆ ಕ್ಷತ್ರಿಯ, ವಿಪ್ರ ಮತ್ತು ವೈಶ್ಯರ ತ್ರಿವರ್ಗಗಳಿಂದ ಕ್ರಮೇಣ ಮುಂದುವರಿಯುವ ದಮನದ ಗಾಲಿಯ ಬುಡದಲ್ಲಿ ಹಿಪ್ಪೆ ಹಿಂಡಿಯಾಗುವುದೂ ಮತ್ತು ದದ್ದುಳಿತಕ್ಕೆ ಬಲಿಯಾಗುವುದೂ ನಮ್ಮ ಅನಿವಾರ್ಯ ಹಣೆಬರಹವೇನು? ನನ್ನ ನಿಶ್ಚಿತ ಉತ್ತರವೆಂದರೆ "ಇಲ್ಲ; ಇಲ್ಲ" ಎನ್ನುವುದು. ಸಮಾಜ ಚಕ್ರ ನಿಯಮವು ಅನುಲ್ಲಂಘನೀಯವೆಂಬುದು ನಿಜ. ಆದರೆ, ಒಂದು ಬಾರಿ, ನಾವು ಚರಿತ್ರಾತ್ಮಕ ಘಟನೆಗಳ ವಿನ್ಯಾಸಗಳನ್ನು ಅರಿತರೆ, ಚಿತ್ರ ಹಿಂಸೆಯು ಕನಿಷ್ಠವಿರುವ ರೀತಿಯಲ್ಲಿ ನಾವು ಈ ವಿನ್ಯಾಸಕ್ಕನುಗುಣವಾದ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ರೂಪಿಸಬಲ್ಲೆವು. ನಮಗೀಗ ಬೇಕಾಗಿರುವುದೆಂದರೆ, ಸಮಾಜ ಚಕ್ರಗತಿಯನ್ನು ನಿಯಂತ್ರಿಸುವ ಕಲ್ಯಾಣಮಯ ಜನರ ಕೇಂದ್ರೀಯ ಸಂಸ್ಥೆಯನ್ನು ಸ್ಥಾಪಿಸುವ ಅವಕಾಶವುಳ್ಳ ಸಂವಿಧಾನ. ಇನ್ನಿತರ ಸತ್ತೆಗಳಂತೆಯೇ ಸಮಾಜವೂ ಸಹ ಏಳುಬೀಳುಗಳಿಗೆ ಒಳಪಡುತ್ತದೆ. ಇದು ಉಲ್ಲಂಘಿಸಲಾಗದ ನಿಸರ್ಗ ನಿಯಮ. ನಾವೀಗ ಮಾಡಲೇಬೇಕಾದ ಮತ್ತು ಮಾಡಬಲ್ಲ ಕಾರ್ಯವೆಂದರೆ, ಪ್ರಾಮಾಣಿಕ ಮತ್ತು ಹೊಣೆಗಾರ ಮುಂದಾಳ್ತನವನ್ನು ಆಯ್ಕೆ ಮಾಡುವ ಮೂಲಕ ನಿಮ್ನಮುಖೀ ಅವಧಿಯನ್ನು ಕಡಿಮೆ ಮಾಡುವದಷ್ಟೇ. ಇಂದಿನ ಕರಾಳ ಜಡವಾದದ ಜಗತ್ತಿನಲ್ಲಿ ಇದು ಪ್ರಉತ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ.

ಆಧಾರ ಗ್ರಂಥಗಳು

1. ಬಶ್ರಾ ಆರ್. ಎನ್. ' ದಿ. ಡೌನಫಾಲ್ ಆಫ್ ಕೆಪಿಟಾಲಿಜಂ ಆ್ಯಂಡ ಕಮ್ಯುನಿಜಂ : ಎ ನ್ಯೂ ಸ್ಟಡಿ ಆಫ್ ಹಿಸ್ಟರಿ, ಮ್ಯಾಕ್ಮಿಲನ್ ಕಂಪನಿ, ಲಂಡನ್ ಮತ್ತು ದಿಲ್ಲಿ, – 1978.
2. ಸರಕಾರ ಪಿ. ಆರ್ : ಹ್ಯೂಮನ್ ಸೊಸೈಟಿ
ಪಾರ್ಟ–2, ಆನಂದ ಮಾರ್ಗ ಪ್ರೆಸ್, ಕಲಕತ್ತ –1967 (1988 ಹೊಸ ಮುದ್ರಣ)
3. ಟಾಯ್ನಬಿ ಎ. ಜಿ : ಎ ಸ್ಟಡಿ ಆಫ್ ಹಿಸ್ಟರಿ, ಸಂಪುಟ – 1,
ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್ – 1948.

●○●

ಅಧ್ಯಾಯ – 9

ಭಾರತದ ಭಾವೀ ವೈಭವ

"ಶ್ರಮಜೀವಿಗಳ ಉತ್ಥಾನವು ಮೊತ್ತಮೊದಲು ರಶಿಯಾದಲ್ಲಿ, ಅನಂತರ ಚೀನಾದಲ್ಲಿ ಆಗುತ್ತಿದೆ. ಆನಂತರ ಭಾರತವು ಎದ್ದೇಳುತ್ತದೆ. ಮತ್ತು ಭಾವೀ ಜಗತ್ತನ್ನು ರೂಪಿಸುವಲ್ಲಿ ಪ್ರಾಣಪ್ರಾಯ ಪಾತ್ರವಾಡುತ್ತದೆ." (1,ಪು. 126) ಎಂದು ಶ್ರೀ ಸರಕಾರರ ಸಮಾಜ ಚಕ್ರ ನಿಯಮವನ್ನೇ ನೆನಪಿಸುವಂಥ ಮಾತನ್ನು ಸ್ವಾಮಿ ವಿವೇಕಾನಂದರು 1896 ರಷ್ಟು ಹಿಂದೆಯೇ ತಮ್ಮದೊಂದು ಭಾಷಣದ ಮೂಲಕ ಭವಿಷ್ಯವನ್ನು ನುಡಿದಿದ್ದಾರೆ. ಸ್ವಾಮೀಜಿಯ ಎರಡು ಭವಿಷ್ಯ ವಾಣಿಗಳಂತೂ ನಿಜವಾಗಿವೆ. ಇನ್ನು ಮೂರನೆಯದು ಸಹ ಸದ್ಯೋಭವಿಷ್ಯದಲ್ಲಿ ನಿಜವಾಗುವುದೆಂದು ನಾನು ನಮ್ರತೆಯಿಂದ ನಿವೇದಿಸಬಯಸುವೆ. ಇದು ಸಮಾಜ ಚಕ್ರದ ಸೂತ್ರವಾಗಿದೆ.

ಶೂದ್ರ ಕ್ರಾಂತಿಯು ರಶಿಯಾದಲ್ಲಿ 1917 ರಲ್ಲಿ ಆಯಿತು. ಚೀನಾದಲ್ಲಿ 1949 ರಲ್ಲಿ ಆಯಿತು. ಭಾರತದ ಉದಯವು ಇನ್ನೂ ಆಗಿಲ್ಲ. ಆದರೆ ಆ ಉದಾತ್ತ ಅರುಣೋದಯವು ಪೂರ್ವ ದಿಗಂತದಲ್ಲಿ ಮೂಡಹತ್ತಿದೆ. ನಾನಿದನ್ನು ಈಗಾಗಲೇ ಭಾರತೀಯ ಸುದ್ದಿ ಮಾಧ್ಯಮಕ್ಕೆ ಬಿತ್ತರಿಸಿದ್ದೇನೆ. ಮತ್ತೆ ಭಾರತವು ಮುಂದಿನ ಶತಮಾನದ ಆರಂಭದ ಕಾಲಕ್ಕೆ ಜಾಗತಿಕ ಶಕ್ತಿಯಾಗುವುದೆಂದು ನಾನೀಗ ಇನ್ನೊಮ್ಮೆ ಹೇಳಬಯಸುವೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಇಂದಿನಿಂದ (1988) ಎರಡು ದಶಕಗಳೊಳಗೆ ಭಾರತವು ಜಗದ್ವ್ಯಾಪಿ ಪ್ರಭಾವ ಬೀರುತ್ತದೆ. ಮತ್ತು ಜಾಗತಿಕ ಸುವರ್ಣ ಯುಗಾರಂಭಕ್ಕೆ ನಾಂದಿ ಹಾಡುತ್ತದೆ.

ಅನೇಕರಿಗೆ ಈ ಮಾತುಗಳು ಆಗದ ಹೋಗದ ದೂರದ ಮಾತೆನ್ನಿಸಬಹುದು. ಒಂದೆಡೆ, ಇಂದಿನ ಭಾರತವು ಸ್ಫೋಟಕ ಜನಸಂಖ್ಯೆ ಮತ್ತು ಬಡತನದ ಜಂಜಾಟದಲ್ಲಿ ಸಿಲುಕಿದೆ. ಇನ್ನೊಂದೆಡೆ, ಹೆಚ್ಚುತ್ತಿರುವ ಒಡಕು, ಅನೈತಿಕತೆ, ಮೂಲೆ ಮೂಲೆಯಲ್ಲಿಯ ಭ್ರಷ್ಟಾಚಾರ, ಸರ್ವವ್ಯಾಪಿ ನಿರಕ್ಷರತೆ ಮತ್ತು ಅನ್ನಾಭಾವ ಹಾಗೂ ರಾಜಕೀಯದ ಅಶಾಂತಿ ಮತ್ತು ಅಪರಾಧಗಳ ರಭಸಕ್ಕೀಡಾಗಿ ತತ್ತರಿಸುತ್ತಿದೆ. ಇನ್ನು, ಕೇವಲ ಒಂದು ದಶಕ ದೂರದಲ್ಲಿರುವ ಮುಂದಿನ ಶತಮಾನದಲ್ಲಿ ಜಗತ್ತನ್ನೇ ಮುನ್ನಡೆಸಬಲ್ಲ ಭಾರತವು ಊಹೆಗೂ ನಿಲುಕದ ಮಾತು.

ಆದರೆ, ಅದು ಆಗಿಯೇ ತೀರುವುದೆಂದು ನಾನು ಭವಿಷ್ಯ ನುಡಿಯುತ್ತೇನೆ. ನಾನು, ಶ್ರೀ ಸರಕಾರರ ಸಾಮಾಜಿಕ, ಆರ್ಥಿಕ ವಿಶ್ಲೇಷಣೆಯನ್ನಾಧರಿಸಿ ನುಡಿದ ಈ ಮುಂಚಿನ ಹದಿನೈದು ಭವಿಷ್ಯವಾಣಿಗಳಲ್ಲಿ ಹದಿನೈದೂ ಸರಿಯೆಂದು ಸಿದ್ಧವಾಗಿವೆ. ಇವುಗಳಲ್ಲಿ ಇರಾಣದ ಶಹಾರ ಪತನ ಹಾಗೂ 1987 ರ ಸಟ್ಟಾ ಪೇಟೆಯ ಕುಸಿತಗಳೂ ಸೇರಿವೆ. 1990 ರ ಮಹಾ ಕುಸಿತದ ಬೂದಿಯಿಂದ ಗಾದ ಮಾತಿನ ಫೋನಿಕ್ಸ್ ಪಕ್ಷಿಯಂತೆ, ಭಾರತವೂ ಉದಿಸುತ್ತದೆ.

ಭೀಕರ ಆರ್ಥಿಕ ಮುಗ್ಗಟ್ಟು :

ಇತಿಹಾಸದಲ್ಲಿ ಘಟಿಸುವ ಎಲ್ಲ ಕುಸಿತಗಳಂತೆಯೇ, ಮುಂಬರುವ ಮಹಾ ಕುಸಿತವೂ ಸಹ ಪ್ರಥಮತಃ ಒಂದು ಅಂಶದ ನಿಮಿತ್ತ ಉಂಟಾಗುವುದು. ಅರವತ್ತು ವರುಷಗಳ ಒಂದೊಂದು ಸುತ್ತಿನಲ್ಲಿ, ಅನುವಂಶಿಕತೆಯ ಮೂಲಕ ಸಂಪತ್ತಿನ ವಿತರಣೆಯಲ್ಲಿನ ವಿಷಮತೆಯು ಅತಿರೇಕವಾದಾಗ, ಸಿರಿವಂತರು ಶೇರುಪೇಟೆಗಳ ಸಾಹಸದಲ್ಲಿ ಹೆಚ್ಚು ಹೆಚ್ಚು ಊಹಾತ್ಮಕ ಹೂಡಿಕೆಗಳಿಯುತ್ತಾರೆ. ಉತ್ಪಾದನ –ಹೂಡಿಕೆಗಳಂತಲ್ಲದ ಈ ಕ್ರೂರ ಊರೆಯು ಜನತೆಗಾಗಿ ಹುದ್ದೆಗಳನ್ನಾಗಲಿ ಇಲ್ಲವೆ ಸಮೃದ್ಧಿಯನ್ನಾಗಲಿ ಒದಗಿಸದೆ, ಕೇವಲ ಅಲ್ಪ ಜನರಿಗೆ ತಾತ್ಕಾಲಿಕ ಲಾಭ ದೊರಕಿಸುತ್ತದೆ ಅಷ್ಟೇ. ಇದರ ಪರಿಣಾಮವಾಗಿ ಶೇರುಪೇಟೆಯಲ್ಲಿ ಕಾವೇರುತ್ತದೆ. ಮತ್ತು ಊಹಾತ್ಮಕ ಗುಳ್ಳೆಯು ಉಬ್ಬಿ ಉಬ್ಬಿ ಅನುಪಂಗಿಕವಾಗಿ ಒಡೆಯುತ್ತದೆ. ಇದರ ಪರಿಣಾಮವಾಗಿ ಅರ್ಥವ್ಯವಸ್ಥೆಯು ದೈತ್ಯ ಪ್ರಮಾಣದಲ್ಲಿ ಕುಸಿದುಬೀಳುತ್ತದೆ.

ಅಮೇರಿಕೆಯಲ್ಲಿ ನಡೆಯುತ್ತಿರುವುದು ಥೇಟ ಇದೇ. 1981 ಮತ್ತು 1986 ರಲ್ಲಿಯ ಕರದ ಕಡಿತಗಳು ಅಭೂತಪೂರ್ವ ವೇಗದಲ್ಲಿ ಸಂಪತ್ತಿನ ವಿಷಮತೆ ಏರಲು ಕಾರಣೀಭೂತವಾದವು. ಕೆಲವೇ ವರ್ಷಗಳಲ್ಲಿ, ಈ ವಿಷಮತೆಯು 1929 ರ ಮಹಾ ಕುಸಿತಕ್ಕಿಂತ ತುಸು ಮೊದಲು ಮುಟ್ಟಿದ ಶಿಖರವನ್ನು ಸಹ ಮೀರುವುದು. ಸಂಯುಕ್ತ ಸಂಸ್ಥಾನದ ಕೋಟ್ಯಧೀಶ್ವರರ ಸಂಖ್ಯೆಯು 1985 ರಿಂದ 1987 ರ ಅವಧಿಯಲ್ಲಿ ಮೂರುಪಟ್ಟು ಬೆಳೆಯಿತು. ಅಂದರೆ 14 ರಿಂದ 49 ಕ್ಕೆ ಕೇವಲ ಎರಡೇ ವರ್ಷಗಳಲ್ಲಿ ಏರಿತು. ಹೀಗೆ ಈ ಕೋಟ್ಯಧೀಶ್ವರರು ಬಡವರನ್ನು ವಂಚಿಸಿ ರಾಷ್ಟ್ರೀಯ ಸಂಪತ್ತಿನ ಅಧಿಕಾಧಿಕ ಪಾಲನ್ನು ಬಾಚಿಕೊಂಡರು. ಕೇವಲ ಶೇ. 1 ರಷ್ಟಿರುವ ಅಮೇರಿಕೆಯ ಸಿರಿವಂತರಿಂದು ರಾಷ್ಟ್ರೀಯ ಸಂಪತ್ತಿನ ಶೇ. 36 ರಷ್ಟು ಸಂಪತ್ತಿನ ಒಡೆಯರಾಗಿದ್ದಾರೆ. ಇವು ಅರಿಷ್ಟ ಸೂಚಕ ಅಂಕಿಗಳು. ಮುಂಬರುವ ಕೆಟ್ಟ ಕಾಲ ಕುರಿತು ಮುನ್ಸೂಚನೆ ನೀಡುತ್ತಿವೆ. ಯಾವುದೇ ಪರಿಹಾರಾತ್ಮಕ ಉಪಾಯಗಳನ್ನು ಕೈಕೊಳ್ಳದಿದ್ದರೆ, 1989 ರ ವರ್ಷವೂ ಸಹ 1929 ರಂತಾಗುತ್ತದೆ. ಶೇರ ಪೇಟೆಯು ಇನ್ನೂ ಕುಸಿತಕ್ಕೀಡಾಗುತ್ತದೆ. ಆದಾದ ನಂತರ ವ್ಯವಹಾರ ಚಟುವಟಿಕೆಯಲ್ಲು ಪಾತಾಳಕ್ಕಿಳಿಯುವುದು, ನಿರುದ್ಯೋಗದ ಪ್ರಮಾಣದಲ್ಲಿ ತೀವ್ರ ಹೆಚ್ಚಳವಾಗುವುದು. ಇನ್ನೇನು? 1990 ರ ಅಭೂತಪೂರ್ವ ಮಹಾ ದುರಂತವೇ ಗತಿ.

ಭಾರತದಲ್ಲಿ ಆರ್ಥಿಕ ಮುಗ್ಗಟ್ಟು :

ಅದು ಭಾರತವನ್ನು ಹೇಗೆ ಬಾಧಿಸುತ್ತದೆ? ಭಾರತವು ಸ್ವಾವಲಂಬನೆಯ ಅರ್ಥ ನೀತಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಸಹ, ಅದು ಅಂತಾರಾಷ್ಟ್ರೀಯ ಆರ್ಥಿಕ ಪ್ರವಾಹದಿಂದ ಪ್ರತ್ಯೇಕಿಸಲ್ಪಟ್ಟಿಲ್ಲ. ಭಾರತವೂ ಸಹ– ಪಶ್ಚಿಮದಷ್ಟು ತೀವ್ರವಾಗಿ ಅಲ್ಲವಾದರೂ ಕೂಡ – ಮುಂಬರುವ ಆರ್ಥಿಕ ದುರಂತದಿಂದ ಕಠೋರವಾಗಿ ಬಾಧಿಸಲ್ಪಡುತ್ತದೆ.

ಭಾರತವು ಇತರ ಜಗತ್ತಿನೊಂದಿಗೆ ತ್ರಿವಿಧ ಸಂಬಂಧ ಹೊಂದಿದೆ. ಮೊದಲನೆಯದಾಗಿ, ದೇಶವು ಪ್ರಾಥಮಿಕ ಹಾಗೂ ಸಿದ್ಧ ಸರಕುಗಳನ್ನು ಪಶ್ಚಿಮ ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. ಉದಾ : ಜ್ಯೂಟ್,ಚಹ, ಮಂಗನೀಜ ಚರ್ಮ, ಕಬ್ಬಿಣದ ಅದಿರು, ಜವಳಿ ಬಟ್ಟೆ ವಜ್ರಗಳು ಮತ್ತು ಲಘು ಇಂಜಿನಿಯರಿಂಗ ಉತ್ಪಾದನೆಗಳು. ಪಾಶ್ಚಾತ್ಯ ಅರ್ಥವ್ಯವಸ್ಥೆಗಳು ಕುಸಿತಕ್ಕೊಳಗಾದಾಗ, ಈ ರಫ್ತುಗಳಲ್ಲಿ ತೀವ್ರ ಇಳಿತಾಯವಾಗುತ್ತದೆ. ಹೀಗಾಗಿ, ವಿದೇಶಿ ವಿನಿಮಯದ ಕೊರತೆ ಉಂಟಾಗುತ್ತದೆ. ಇತ್ತ ನಿರುದ್ಯೋಗವೂ ಹೆಚ್ಚುತ್ತದೆ. ಎರಡನೆಯದಾಗಿ, ಭಾರತವು ಗಣನೀಯ ಪ್ರಮಾಣದಲ್ಲಿ ವಿದೇಶೀ ನೆರವು ಪಡೆಯುತ್ತದೆ. ಕುಸಿತದ ಕಾಲಕ್ಕೆ ಈ ನೆರವಿನಲ್ಲಿ ಭಾರಿ ಕಡಿತ ಉಂಟಾಗುತ್ತದೆ. ಮೂರನೆಯದಾಗಿ, ವಿದೇಶಗಳಲ್ಲಿ, ವಿಶೇಷವಾಗಿ ಸಂಯುಕ್ತ ಸಂಸ್ಥಾನಗಳಲ್ಲಿ, ಕೆನಡಾ ಮತ್ತು ಇಂಗ್ಲಂಡ್‌ಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರು ಸ್ವದೇಶಕ್ಕೆ ವಿದೇಶಿ ವಿನಿಮಯದ ದೊಡ್ಡ ಮೊತ್ತವನ್ನು ಕಳಿಸುತ್ತಿದ್ದಾರೆ. ಇನ್ನು ಕುಸಿತದ ಅವಧಿಯಲ್ಲಿ ಅವರಲ್ಲಿ ಅನೇಕರು ನಿರುದ್ಯೋಗಿಗಳ ಉಬ್ಬಿದ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತಾರೆ. ಹೀಗಾಗಿ ಅವರು ಕಳಿಸುವ ಹಣದ ಮೊತ್ತವು ಕುಸಿಯುತ್ತದೆ. ಈ ಮೂರು ತೊಂದರೆಗಳು ಈಗಲೂ ಸಹ, ಅಷ್ಟೇನೂ ಪ್ರಬಲವಲ್ಲದ ಭಾರತೀಯ ಅರ್ಥ ವ್ಯವಸ್ಥೆಯನ್ನು ಹೆಚ್ಚಾಗಿ ಘಾತಿಸುತ್ತವೆ. ರಾಷ್ಟ್ರೀಯ ಸಾಲವು ಎತ್ತರದಲ್ಲಿದೆ. ಇನ್ನೂ ಏರುತ್ತಲೇ ಇದೆ. ನಿರುದ್ಯೋಗವು ವ್ಯಾಪಿಸುತ್ತಿದೆ; ಮುಗಡ ಪತ್ರದ ಕೊರತೆ ಹಾಗೂ ಹಣದುಬ್ಬರದ ಒತ್ತಡಗಳು ಹೆಚ್ಚುತ್ತಿವೆ. ಮತ್ತು ಪಶ್ಚಿಮದಲ್ಲಿರುವಂತೆ ಭಾರತದಲ್ಲಿಯೂ ಸಹ ಸಂಪತ್ತಿನ ವಿತರಣೆಯು ಭಯಂಕರ ವಿಷಮವಾಗಿದೆ. ಗ್ರಾಮೀಣ ಭಾರತದಲ್ಲಿ 1990 ರ ಮಹಾಕುಸಿತವು ಅಷ್ಟೊಂದು ತೀವ್ರಬಾಧೆ ಒಡ್ಡದಿದ್ದರೂ ಸಹ ನಗರ ಪ್ರದೇಶಗಳಲ್ಲಿ ಕಟು ಆಘಾತವು ಅನುಭವಕ್ಕೆ ಬಾರದೇ ಇರದು. ಇನ್ನು ದೇಶವಿಡೀ ಸಾಮಾಜಿಕ ಮತ್ತು ರಾಜಕೀಯ ಅಶಾಂತಿ ಹರಡುತ್ತದೆ ಹಾಗೂ ಅಪರಾಧಗಳು ತಾಂಡವ ನಡೆಸುತ್ತವೆ.

ಪಶ್ಚಿಮದಲ್ಲಾದ ಮಹಾಕುಸಿತದ ಶಾಕ್ ತರಂಗಗಳು ಭಾರತದ ತೀರ ತಲುಪಲು ಒಂದು ವರುಷ ಹಿಡಿಯಬಹುದು. 1991ರಿಂದ ಇಡೀ ಪ್ರಪಂಚವು ಸಾಮಾಜಿಕ ಮತ್ತು ಆರ್ಥಿಕ ಕ್ಷೋಭೆಯ ಪೀಡೆಗಳೊಳಗಾಗುತ್ತದೆ. ಆದರೆ ಭಾರತೀಯ ಅರ್ಥವ್ಯವಸ್ಥೆಯು ಬಹುತೇಕ ಸ್ವಾವಲಂಬಿಯಾಗಿರುವದರಿಂದ ಮತ್ತು ಪ್ರಳಯದ ಉಗಮ ಸ್ಥಾನವು ಭಾರತವೇ ಆಗಿರುವದರಿಂದ ಭಾರತವು ಪ್ರಪಂಚದ ಉಳಿದ ಭಾಗಗಳಿಗಿಂತಲೂ ಹೆಚ್ಚು ಶೀಘ್ರವಾಗಿ ದುರಂತದಿಂದ ಹೊರಬರುತ್ತದೆ. ಆದರೆ ಇತರ ಪ್ರಪಂಚವು ಏಳು ಸುದೀರ್ಘ ವರ್ಷ ಪರ್ಯಂತ ತೊಳಲಾಡಬಹುದು.

ಪ್ರಳಯ ಮೂಲಕ ಪ್ರಗತಿಯ ಸ್ಫೋಟ :

ಮುಂಬರುವ ದುರಂತವು ಮುಸುಕಿನಲ್ಲಿಯ ವರದಂತಿದೆ. ಏಕೆಂದರೆ, ಅದು ಸ್ವಾತಂತ್ರ್ಯ ನಂತರ ಅನುಸರಿಸಿದ ಎಲ್ಲ ಆರ್ಥಿಕ ಧೋರಣೆಗಳ ಪುನರ್ ಮೂಲ್ಯಾಂಕನ ಮಾಡಲು ಒತ್ತಾಯಿಸುವುದು. ಆರ್ಥಿಕ ಯೋಜನೆಯಲ್ಲಿ ತೀವ್ರ ಬದಲಾವಣೆಯಾಗಬೇಕೆಂಬ

ವ್ಯಾಪಕ ಅರಿವನ್ನು ಘನೀಕರಿಸುತ್ತದೆ. ಸಂಕ್ಷೇಪಿಸಿ ಹೇಳುವುದಾದರೆ ಏಕಮೇವ ಪರ್ಯಾಯವೆಂದು ಬೆಳೆಯಲು ಆಗ ಪ್ರಳಯಕ್ಕೆ ಫಲವತ್ತಾದ ಭೂಮಿ ದೊರೆಯುತ್ತದೆ. ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವು ಮುಖ್ಯವಾಗಿ ರಾಜಕೀಯವಾಗಿತ್ತು. ಅದು ವಿದೇಶಿ ಆಳ್ವಿಕೆಯ ವಿರುದ್ಧವಿತ್ತು. ಅದೇ ಕಾಲಕ್ಕೆ ಅದು ಸಂಪತ್ತಿನ ವಿಷಮ ಹಂಚಿಕೆಯ ವಿರುದ್ಧದ ಆರ್ಥಿಕ ಹೋರಾಟವಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಈ ಆರ್ಥಿಕ ವಿಷಮತೆಯೇ ನಾವಿಂದು ನಮ್ಮ ಸುತ್ತಮುತ್ತ ಕಾಣುತ್ತಿರುವ ವ್ಯಾಪಕ ಬಡತನಕ್ಕೆ ಕಾರಣೀಭೂತವಾಗಿದೆ.

ಈ ಆರ್ಥಿಕ ಮತ್ತು ಸಾಮಾಜಿಕ ಗೊಂದಲವು ಮುಂದಿನ ಕೆಲವು ವರ್ಷ ಪರ್ಯಂತ ಬೆಳೆಯಬಹುದು. ಆದರೆ ಅದರ ಮೂಲಕ ಹೊಸ ಧುರೀಣತ್ವವು ಉದಿಸುತ್ತದೆ. ಟಾಯ್ನಬೀ ಹೇಳುವಂತೆ ಚೈತನ್ಯದಾಯಕ ನೂತನ ವಿಚಾರಗಳನ್ನು ಹೊಂದಿದ ಜನಾದರಣೀಯ ಮುಖಂಡರ ಒಂದು 'ಸೃಜನಾತ್ಮಕ ಅಲ್ಪಸಂಖ್ಯಾತ' ವರ್ಗವು ಉದಿಸುತ್ತದೆ. ಆಗ ಭಾರತದ ಮಾನವೀಯ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಮಹಾ ಸರೋವರವನ್ನು ಪ್ರಗತಿಪರವಾಗಿ ಬಳಸಬಹುದು ಮತ್ತು ವಿವೇಚನಾ ಸಮ್ಮತವಾಗಿ ವಿತರಿಸಬಹುದು. ಆಗ ಮಾತ್ರ ಸಂಪತ್ತಿನ ಅತಿಶಯ ಕೇಂದ್ರೀಕರಣವನ್ನು ನಿವಾರಿಸಲಾಗುವುದು. ಮತ್ತು ದೇಶವು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಸ್ಫೋಟವನ್ನು ಭೋಗಿಸುವುದು.

ಸಾಮಾನ್ಯವಾಗಿ ಜನರು ಭಾರತದ ಬಡತನದ ಬವಣೆ ಕುರಿತು ದುಃಖಿಸುತ್ತಾರೆ. ಆದರೆ ಅದರ ವಿಶಾಲ ಸಂಪತ್ತಿನ ಬಗ್ಗೆ– ಕಬ್ಬಿಣ, ಕಲ್ಲಿದ್ದಲು, ಮಂಗನೀಜ, ಸುಣ್ಣದ ಕಲ್ಲು, ಥೋರಿಯಂ ಮತ್ತು ಯುರೇನಿಯಂಗಳ ಹೇರಳ ಮೊತ್ತದ ಬಗ್ಗೆ ನಿರ್ಲಕ್ಷಿಸುತ್ತಾರೆ. ಇದಲ್ಲದೆ, ಸಂಯುಕ್ತ ಸ್ಥಾನಕ್ಕೆ ಮಾತ್ರ ಎರಡನೆಯ ಸ್ಥಾನದಲ್ಲಿರುವ ದೊಡ್ಡ ಸಾಗುವಳಿ ಭೂಮಿ ಇಲ್ಲಿ ಇದೆ ಮತ್ತು 70 ಕೋಟಿಯಷ್ಟಿರುವ ಅದರ ಜನಸಂಖ್ಯೆಯು ಜಗತ್ತಿನ ಮಹಾ ಜನಕೋಟಿಗಳಲ್ಲಿ ಸಹ ದ್ವಿತೀಯ ಸ್ಥಾನದಲ್ಲಿದೆ. ಇದನ್ನೆಲ್ಲ ಅವರು ನಿರ್ಲಕ್ಷಿಸಿದ್ದಾರೆ. ಭಾರತದ ಬೃಹತ್ತಾದ, ಬಳಸಿಕೊಳ್ಳದ ಮಾನವೀಯ ಬುದ್ಧಿಸಾಗರ, ಭಾರತೀಯ ಮೂಲದ ವಿಜ್ಞಾನಿಗಳು, ಅರ್ಥ ಶಾಸ್ತ್ರಜ್ಞರು, ಇತಿಹಾಸಕಾರರು ಮತ್ತು ವೈದ್ಯರು ಅನೇಕ ಅನ್ಯ ದೇಶಗಳಲ್ಲಿ ಖ್ಯಾತರಾಗಿದ್ದಾರೆ. ಅವರು ಅನ್ಯ ಜನಾಂಗದವರಾದ ಚೀನೀಯರು, ಜಪಾನೀಯರು, ಕೋರಿಯನ್ನರು, ಐರೋಪ್ಯರು, ಅಷ್ಟೇ ಏಕೆ, ಅಮೇರಿಕನ್ನರನ್ನು ಸಹ ಸ್ಪರ್ಧೆಯಲ್ಲಿ ಮೀರಬಲ್ಲವರಾಗಿದ್ದಾರೆ. ವಿದೇಶಗಳಲ್ಲಿ ವಾಸಿಸುವ ಭಾರತೀಯರು ಕಲಿಸುತ್ತಾರೆ; ರೋಗಿಗಳ ಚಿಕಿತ್ಸೆ ಮಾಡುತ್ತಾರೆ. ಅನೇಕ ಅನ್ಯ ದೇಶಗಳಲ್ಲಿಯ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಅವರು ಅದನ್ನು ತಮ್ಮ ಸ್ವಂತ ನಾಡಿನಲ್ಲಿ ಮಾಡಲಾರರೆ? ನಿಶ್ಚಯವಾಗಿಯೂ ಅದಕ್ಕೆ ಅವರು ತುಂಬಾ ಶಕ್ತರು. ಭಾರತದ ಬೌದ್ಧಿಕ ಸಂಪನ್ಮೂಲದ ಕೇವಲ ಒಂದಂಶ ಮಾತ್ರ ವಿದೇಶಗಳಲ್ಲಿ ಕಾರ್ಯ ನಿರತವಾಗಿದೆಯಷ್ಟೇ, ಎಂಬುದನ್ನು ನೆನಪಿಡಿ.

ಬಡ ಜನರ ಹಿಂಡನ್ನೇ ಹೊಂದಿದ್ದರೂ ಭಾರತವು ಸಿರಿವಂತ ದೇಶ. ಏಕೆಂದರೆ, ಅದು ಮಾನವ ಸಂಪನ್ಮೂಲವು ಸೇರಿದಂತೆ, ತನ್ನ ಸಂಪನ್ಮೂಲಗಳನ್ನು ಉತ್ಪಾದಕ ರೀತಿಯಲ್ಲಿ ಬಳಸಿಕೊಂಡಿಲ್ಲವಷ್ಟೇ. ಒಂದುವೇಳೆ, ಭಾರತದ ಸ್ಥಳೀಯ ಉದ್ದಿಮೆದಾರರ ಪ್ರತಿಭೆ ಹಾಗೂ

ಕೌಶಲಪೂರ್ಣ ಬುದ್ದಿಗಳನ್ನು ಉಪಯೋಗಿಸಿದರೆ, ಸಾಮಾನ್ಯರಿಗೆ ಸರಿಯಾಗಿ ಶಿಕ್ಷಣ ನೀಡಿದರೆ, ಮತ್ತು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಪೂರ್ಣ ತೊಡಗಿಸಿದರೆ, ಭಾರತದಲ್ಲಿ ಆರ್ಥಿಕ ತೆರೆ ಏಳುವುದು. ಈ ತರೆಯು ಭಾರತವನ್ನು ಮುಂಬರುವ ಕುಸಿತದಿಂದ ಹೊರತರುತ್ತದೆ. ಮತ್ತು ಉಳಿದ ಪ್ರಪಂಚವು ಅಸೂಯೆಪಡುವಂತೆ ಮಾಡುತ್ತದೆ.

ಸಹಕಾರಿ ಸಂಸ್ಥೆಯನ್ನಾಧರಿಸಿ ವಿಕೇಂದ್ರೀಕೃತ ಅರ್ಥವ್ಯವಸ್ಥೆ :

ಭಾರತದ ಮಾನವೀಯ ಸಾಮರ್ಥ್ಯವನ್ನು ಪೂರ್ಣ ಹರಿಬಿಡಲು ಪ್ರಉತದ ಆರ್ಥಿಕ ಸುಧಾರಣೆಗಳು ಫಲವತ್ತಾದ ಭೂಮಿಯನ್ನು ತಯಾರಿಸುತ್ತವೆ. ಪ್ರಉತ, ಮುಕ್ತ ಉದ್ಯಮದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸಿಫಾರಸು ಮಾಡುತ್ತದೆ. ಅದರಲ್ಲಿ ತೊಡಗಿದ ಪ್ರತಿ ಯೊಬ್ಬನಿಗೂ ಪಾಲು ಇರುತ್ತದೆ. ಇದು ಸಹಕಾರ ತತ್ವಾಧಾರಿತ ವಿಕೇಂದ್ರೀಕೃತ ಅರ್ಥವ್ಯವಸ್ಥೆ. ಇಲ್ಲಿ ಕೆಲಸಗಾರರು ತಮ್ಮ ಹಣೆಬರಹವನ್ನು ತಾವೇ ಬರೆಯಬಲ್ಲರು. ಉದ್ದಿಮೆ ಹಾಗೂ ಕೃಷಿಗಳನ್ನು ಸಿಬ್ಬಂದಿ ವರ್ಗದ ಪ್ರತಿನಿಧಿಗಳೇ ನಿರ್ವಹಿಸಿದಾಗ, ಆಡಳಿತ ಹಾಗೂ ಒಕ್ಕೂಟಗಳ ಮಧ್ಯೆ ಕುಪ್ಪರಿಸಿ ಬೀಳುವಂಥ ಯಾವುದೇ ಘರ್ಷಣೆಗಳಿರುವುದಿಲ್ಲ. ಏಕೆಂದರೆ, ವ್ಯವಸ್ಥೆಯು ತಮಗೋಸುಗ ಇದೆಯೆಂದು ಕೆಲಸಗಾರರು ಕಂಡುಕೊಂಡಾಗ, ಅವರು ಸಹಕರಿಸುತ್ತಾರೆ. ಹೀಗಾಗಿ, ಶ್ರಮಜೀವಿಗಳ ಆಶಾಂತಿಯು ಶಮನಗೊಳ್ಳುತ್ತದೆ.

ಪ್ರಉತದ ಮೇರಗೆ ಪ್ರತಿಯೋರ್ವನು ತನ್ನ ಕನಿಷ್ಠ ಅವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳುವಷ್ಟು ಖರೀದಿ ಶಕ್ತಿಯನ್ನು ಹೊಂದಿರುವ ಕುರಿತು ಮೊದಲು ನಿಶ್ಚಯಪಡಿಸಿ ಕೊಳ್ಳಬೇಕು. ಇನ್ನು ಪ್ರತಿಯೋರ್ವನಿಗೆ ಇವುಗಳ ಭರವಸೆ ದೊರೆತಾಗ, ಕುಶಲ ಕರ್ಮಿಗಳಿಗೆ ಅವರವರ ಉತ್ಪಾದಕತೆಗೆ ತಕ್ಕಂತೆ ಬೋನಸ್ ಕೊಡಬಹುದು. ಪ್ರೋತ್ಸಾಹಕಗಳ ಮೂಲಕ ಬಹುಮಾನ್ವಿತರಾದಾಗ ಜನರು ಅಧಿಕ ಪರಿಶ್ರಮವನ್ನು ಗೆಯ್ಯುತ್ತಾರೆ. ಅದಾಯದ ನ್ಯಾಯಬದ್ಧವಾದ ವಿತರಣೆಯೊಂದಿಗೆ ಅಪರಾಧ ಮತ್ತಿತರ ಸಾಮಾಜಿಕ ಸಮಸ್ಯೆಗಳು ಕಡಿಮೆಯಾಗುತ್ತವೆ.

ಭಾರತೀಯ ಅರ್ಥವ್ಯವಸ್ಥೆಗೆ ಅಡ್ಡಗಾಲು ಹಾಕುತ್ತಿರುವ ತೊಡಕಿನ ನಿಯಮ ನಿಬಂಧನೆಗಳನ್ನು ನಿವಾರಿಸಲೇಬೇಕು. ತಲೆಭಾರವಾದ ಅಧಿಕಾರಶಾಹಿಯ ನಿರಂಕುಶತೆಯನ್ನು ಕತ್ತರಿಸಿ ಸ್ವಯಂಸ್ಫೂರ್ತಿಯಿಂದ ಹೆಚ್ಚು ಮುಕ್ತ ರೀತಿಯಲ್ಲಿ ಕಾರ್ಯ ಮಾಡುವ ಅವಕಾಶವನ್ನು ಜನತೆಗೆ ಕಲ್ಪಿಸಬೇಕು. ದೊಡ್ಡ ದೊಡ್ಡ ಏಕಸ್ವಾಮ್ಯಗಳನ್ನು ಒಡೆದು, ಚಿಕ್ಕ ಚಿಕ್ಕ ಘಟಕಗಳನ್ನು ಅಸ್ತಿತ್ವಕ್ಕೆ ತಂದು, ಸ್ಪರ್ಧೆಯನ್ನು ಏರ್ಪಡಿಸಬೇಕು. ಈ ಪ್ರಉತೀಯ ಸುಧಾರಣೆಗಳನ್ನು ಜಾರಿಗೊಳಿಸಿದಾಗ ಮತ್ತು ಸಂಪತ್ತಿನ ಅತಿಶಯ ಕೇಂದ್ರೀಕರಣವನ್ನು ನಿವಾರಿಸಿದಾಗ, ಅದು ಮಲ್ಪಟ್ಟ ಜನತೆಯ ಶಕ್ತಿಯ ಕಟ್ಟು ಹರಿದು ಚಿಮ್ಮುತ್ತದೆ. 1992 ರ ನಂತರ ಭಾರತೀಯ ಅರ್ಥ ವ್ಯವಸ್ಥೆಯು ರಾಕೆಟ್ ವೇಗದಲ್ಲಿ ಎರಡಂಕಿಯ ಬೆಳವಣಿಗೆಯ ಊರ್ಧ್ವ ವಾತಾವರಣದಲ್ಲಿ ನೆಗೆಯುವುದು.

ಪರಂಪರೆಗೆ ಅಪಾರ ಬೇಡಿಕೆ :

1990 ರ ದಶಕದಲ್ಲಿ ಬೆಳವಣಿಗೆಯಲ್ಲಿ ಲೋಲಾಡುವ ಭಾರತ ಮತ್ತು ಆರ್ಥಿಕ ಗೊಂದಲಗಳ ಮಧ್ಯೆ ತತ್ತರಿಸುತ್ತಿರುವ ಅನ್ಯ ಜಗತ್ತಿನ ಮಧ್ಯೆ ಭಾರಿ ವ್ಯತ್ಯಾಸವು ತೋರಿ ಬರುವುದು. ಅನ್ಯ ದೇಶಗಳು ಕುತೂಹಲದಿಂದ ಭಾರತದ ಹೆಜ್ಜೆಯಲ್ಲಿ ಹೆಜ್ಜೆ ಹಾಕ ತೊಡಗುತ್ತವೆ. ಆ ಕಾಲಕ್ಕೆ ಪ್ರಪಂಚವೇ ಭಾರತದ ಹೊಸ ವ್ಯವಸ್ಥೆಯನ್ನು ಅನುಕರಿಸುವುದಷ್ಟೇ ಅಲ್ಲ, ಆದರೆ ನಾಡಿನ ಪ್ರಾಚೀನ ಅಧ್ಯಾತ್ಮಿಕ ಬಳುವಳಿಯು ಸಹ ಪ್ರಾಮುಖ್ಯತೆ ಪಡೆಯುತ್ತದೆ.

ನಮ್ಮೆಲ್ಲರ ಮೇಲೆ ಪ್ರಭಾವ ಬೀರುವ ಏಕೈಕ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ನಾವಿಂದು ಬಾಳುತ್ತಿದ್ದೇವೆ, ಎಂಬ ಪ್ರಜ್ಞೆ ಈಗ ಹೆಚ್ಚುತ್ತಿದೆ. ಸಂಯುಕ್ತ ಸಂಸ್ಥಾನದ ಶೇರ ಪೇಟೆಯು ದಿನಾಂಕ 19 ಆಕ್ಟೋಬರ 1987 ರಂದು ಕುಸಿದಾಗ, ಅದರ ಪ್ರತಿಧ್ವನಿ ಪ್ರಪಂಚದ ಸುತ್ತ, ಸಿಡ್ನೀಯಿಂದ ಟೋಕಿಯೋದ ವರೆಗೆ, ಪ್ಯಾರಿಸಿನಿಂದ ಹಾಂಗಕಾಂಗ್ ವರೆಗೆ ಕೇಳಿಬಂತು. 1990ರ ದಶಕದಲ್ಲಿ ಆಳಕ್ಕಿಳಿಯುತ್ತಿರುವ ಗೊಂದಲದಲ್ಲಿ, ಹಿಂದೆಂದೂ ಇರದಂಥ ಹೊಸ ಅರಿವು ಮೂಡುತ್ತದೆ. ಇದರನ್ವಯ, ಜಗದ್ವ್ಯಾಪಿ ದುರಂತವನ್ನು ಕೊನೆಗೊಳಿಸಲು ಜಾಗತಿಕ ಸಹಕಾರವೊಂದೇ ತಾರಕ ಎಂಬುದು ಮನದಟ್ಟಾಗುತ್ತದೆ. ಆಗ ಭಾರತದ ವಿಶ್ವಾತ್ಮಕ ಜಾಣ್ಮೆಯು ನಮ್ಮ ಉಪಗ್ರಹವನ್ನು ಒಂದುಗೂಡಿಸುವಲ್ಲಿ ದೊಡ್ಡ ಪಾತ್ರವಾಡುವುದು. ಭಾರತದ ಅಧ್ಯಾತ್ಮಿಕ ಬಳುವಳಿಯು ಪ್ರಾಪಂಚಿಕ ಲೋಭದಿಂದಾದ ಗಾಯಗಳನ್ನು ಗುಣಪಡಿಸುತ್ತದೆ. 1990 ನೇ ದಶಕದಲ್ಲಿ ಭಾರತವು ಪ್ರಪಂಚಾದ್ಯಂತ ನೈತಿಕ ಮುಖಂಡತ್ವ ವಹಿಸುತ್ತದೆ. ಮತ್ತು ಸ್ವಾಮಿ ವಿವೇಕಾನಂದರ ತೃತೀಯ ಭವಿಷ್ಯವಾಣಿಯು ಸಹ ನಿಜವಾಗಿ ಪರಿಣಮಿಸುತ್ತದೆ.

ಹೀಗೆ ಭಾರತದೆದುರು ಉಜ್ವಲ ಭವಿತವ್ಯವಿದೆ. ಅದು ನಿಜವಾಗಿಯೂ ಇಂದು ಮರಣಾಂತಿಕ ಸಂಕಷ್ಟವನ್ನು ಭೋಗಿಸುತ್ತಿದೆ. ರಾತ್ರಿಯು ಸುದೀರ್ಘ ಮತ್ತು ಕರಾಳ. ಈ ಪ್ರಾಚೀನ ಭೂಮಿ, ಸಾವಿರ ವರುಷ ಪರ್ಯಂತ, ಕಷ್ಟ-ತಾಪತ್ರಯಗಳ ಯಾತನೆಯನ್ನು ಆಗೀಗ ಅನುಭವಿಸಿದೆ. ಆದರೆ ಇಂದು ದೇಶವು ನಿಮ್ನಮುಖೀ ಚಕ್ರದ ತಳದ ಬಿಂದುವಿನಲ್ಲಿದೆ. ಭಾರತವು ತನ್ನ ಸುದೀರ್ಘ ಚರಿತ್ರೆಯಲ್ಲಿ ಗೊಂದಲವನ್ನೆದುರಿಸುತ್ತಿರುವುದು ಇದೇ ಮೊದಲನೇ ಸಲವಲ್ಲ. ಮೂರನೆಯ ಶತಾಬ್ದಿಯ ಅಂತ್ಯಕ್ಕೆ ಬೌದ್ಧ ಕಾಲದಲ್ಲಿ, ಮತ್ತೊಮ್ಮೆ 11ನೇ ಶತಾಬ್ದಿಯಲ್ಲಿ, ಭಾರತವು ವೈಶ್ಯ ಲೋಭದಿಂದಾಗಿ ಹರಿದು ಹಂಚಿಹೋಗಿತ್ತು. ಈಗಿನಂತೆಯೇ ಆಗ ಕೂಡ, ಸಂಪತ್ತಿನ ವಿಷಮತೆಯು ನಾಡನ್ನು ಪೀಡಿಸಿತ್ತು. ಆದರೆ ಇಂಥ ದುರಂತದ ಸಂದರ್ಭದಲ್ಲಿ ಪ್ರಖ್ಯಾತ ಮುಖಂಡರು ನೋವಿನಲ್ಲಿರುವ ಮಾನವತೆಯ ಬಾಳನ್ನು ಬೆಳಗಲು ಮೂಡಿಬಂದರು. ರಾತ್ರಿಯು ಕರಾಳತಮವಾದ ನಂತರ ಸೂರ್ಯೋದಯವಾಗುತ್ತದೆ. ಸುರಂಗ ಮಾರ್ಗದ ಆಚೆ ಕಡೆಯ ಬೆಳಕು ಇದೀಗ ಇಲ್ಲಿ ಬರತೊಡಗಿದೆ.

ಬನ್ನಿ; ನನ್ನ ಸೋದರಿಯರೇ, ಮತ್ತು ಸೋದರರೇ, ಬನ್ನಿ; ನಿರಾಶರಾಗದಿರಿ. ಕಾಲ ಕಳೆಯಲು ನಿಮಗೆ ಸಮಯವಿಲ್ಲ. ನಮ್ಮ ಲೋಭಕಲಂಕಿತ ಪ್ರಪಂಚದಲ್ಲಿ, ಹೊಸ ಯುಗದಲ್ಲಿ ಕಾಲಿರಿಸಲು ಅನುಷ್ಠಾನಪರ ಅಧ್ಯಾತ್ಮಿಕತೆಯ ಪಥಚಲನೆಯಲ್ಲಿ ಪಾಲ್ಗೊಳ್ಳಿ. ನೀವು ಒಂದು

ನೂತನ ವಿಶ್ವಾತ್ಮಕ ತತ್ವಜ್ಞಾನದ ಹರಿಕಾರರಾಗುವಿರಿ. ಬೆಂದು ಬಳಲಿದ ಭಾರತದ ಭೂಮಿಯಿಂದ ಮತ್ತು ಅನ್ಯ ಜಗತ್ತಿನಿಂದ ಬಡತನ ಹಾಗೂ ಸಂಕಷ್ಟವನ್ನು ತಡೆದು, ಬಾಳ ಸಂಜೀವಿನಿ ನೀಡುವ ಬುಗ್ಗೆಯು ನಿಮ್ಮಿಂದಲೇ ಚಿಮ್ಮಿ ಬರಲಿದೆ. ತಮ್ಮ ಅಮೇರಿಕೆಯ ಪ್ರವಾಸ ಕಾಲಕ್ಕೆ ಮೊತ್ತಮೊದಲು ಸ್ವಾಮಿ ವಿವೇಕಾನಂದರು ಹೊತ್ತಿಸಿದ ಆಧ್ಯಾತ್ಮಿಕ ಜ್ಯೋತಿಯು ಈ ಪ್ರಉತ ಪುಷ್ಪದ ಅರಳುವಿಕೆಯಲ್ಲಿ ಪ್ರಜ್ವಲಿಸಿ ಉರಿಯುತ್ತಿದೆ. ಆಹ್ವಾನವು ಅದಮ್ಯ; ಆತಂಕಗಳು ವಿಸ್ತೃತ. ಅವುಗಳನ್ನು ಲಕ್ಕಿಸದಿರಿ. ಏಳಿ ಎದ್ದೇಳಿ; ಭಗವದ್ಗೀತೆಯ ಸ್ಫೂರ್ತಿ ಗ್ರಹಿಸುವ ಈ ಅಮರಗಾನವನ್ನು ನನ್ನ ಜೊತೆಗೆ ನೀವೂ ಹಾಡಿ.

ಹಿರಿದು ಗುರಿಯಿ, ಹಿರಿದು ವಿಘ್ನವು.
ಹಿರಿದು ವಿಘ್ನವು, ಹಿರಿದು ಸಾಧನ.
ಹಳಿಯದಿರು ಸೋಲುಗಳ
ವಿಘ್ನಗಳ ಕಾರಣಕ್ಕಾಗಿ
ಹಳಿಯುತಿರು; ನಿರಂತರ
ಯತ್ನಗಳ ಅಭಾವಕ್ಕಾಗಿ.

ಆಧಾರ ಗ್ರಂಥ

1. ಮಜುಮದಾರ ಆರ್. ಸಿ : ವಿವೇಕಾನಂದ ಸೆಂಟೆನರಿ ಮೆಮೋರಿಯಲ್ ವಾಲ್ಯೂಮ್, ಅದ್ವೈತ ಆಶ್ರಮ, ಕಲಕತ್ತೆ – 1963.

●○●